ಮಿಶನರಿಗಳ ದ್ವಿಭಾಷಿಕ ನಿಘಂಟುಗಳು
ತೌಲನಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪಿಎಚ್. ಡಿ ನಿಬಂಧ

ಸಂಶೋಧಕ
ಎಸ್. ಎಸ್. ಅಂಗಡಿ

ಮಾರ್ಗದರ್ಶಕರು
ಡಾ. ಕೆ. ವಿ. ನಾರಾಯಣ

೧೯೯೯
ಕನ್ನಡ ಭಾಷಾಭಿವೃದ್ಧಿ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಿಶನರಿಗಳ ದ್ವಿಭಾಷಿಕ ನಿಘಂಟುಗಳು
ತೌಲನಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪಿಎಚ್. ಡಿ ನಿಬಂಧ

ಸಂಶೋಧಕ
ಎಸ್. ಎಸ್. ಅಂಗಡಿ

ಮಾರ್ಗದರ್ಶಕರು
ಡಾ. ಕೆ. ವಿ. ನಾರಾಯಣ

೧೯೯೯
ಕನ್ನಡ ಭಾಷಾಭಿವೃದ್ಧಿ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ದೃಢೀಕರಣ ಪತ್ರ

ಎಸ್. ಎಸ್. ಅಂಗಡಿ ಅವರು 'ಮಿಶನರಿಗಳ ದ್ವಿಭಾಷಿಕ ನಿಘಂಟುಗಳು ತೌಲನಿಕ ಅಧ್ಯಯನ' ಎಂಬ ಶೀರ್ಷಿಕೆಯ ಈ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್. ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಹಾಗೂ ಅದರ ಯಾವುದೇ ಭಾಗವನ್ನು ಈ ಹಿಂದೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೧೫-೨-೧೯೯೯

ಸ್ಥಳ : ವಿದ್ಯಾರಣ್ಯ

ಡಾ. ಕೆ. ವಿ. ನಾರಾಯಣ
ಪ್ರಾಧ್ಯಾಪಕರು, ಮುಖ್ಯಸ್ಥರು ಮತ್ತು
ಮಾರ್ಗದರ್ಶಕರು ಕನ್ನಡ ಭಾಷಾಭಿವೃದ್ಧಿ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಭ್ಯರ್ಥಿಯ ಘೋಷಣಾಪತ್ರ

'ವಿಜಯನಗರ ತ್ರಿಭಾಷಿಕ ನಿಘಂಟುಗಳು ತೌಲನಿಕ ಅಧ್ಯಯನ' ಎಂಬ ನಿಬಂಧವನ್ನು ಪಿಎಚ್. ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಡಾ. ಕೆ. ವಿ. ನಾರಾಯಣ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಹಿಂದೆ ಯಾವುದೇ ಪದವಿಗಾಗಲಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಲಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ೧೫-೨-೧೯೯೯
ಸ್ಥಳ : ವಿದ್ಯಾರಣ್ಯ

ಎಸ್. ಎಸ್. ಅಂಗಡಿ
ಕನ್ನಡ ಭಾಷಾಭಿವೃದ್ಧಿ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ನನಗೆ ಸಂಶೋಧನೆ ಮಾಡಲು ಅನುವು ಮಾಡಿಕೊಟ್ಟ ಅಂದಿನ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಅವರಿಗೆ, ಇಂದಿನ ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಹಾಗೂ ಕುಲಸಚಿವರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ಹೃತ್ಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇಂತಹ ಒಂದು ವಿಷಯ ಯೋಜಿತ ಕ್ರಮದಲ್ಲಿ ಅನುಕ್ರಮಗೊಳ್ಳಲು ಸೂಕ್ತ ಮಾರ್ಗದರ್ಶನ ಮಾಡಿದ ಪ್ರಾಧ್ಯಾಪಕರಾದ ಡಾ. ಕೆ. ವಿ. ನಾರಾಯಣ ಅವರಿಗೆ ತುಂಬ ಋಣಿಯಾಗಿದ್ದೇನೆ.

ನನ್ನ ಬರೆಹಗಳಿಗೆ ಸ್ಫೂರ್ತಿ ಪ್ರೇರಣೆಯಾಗಿರುವ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ವಿಲ್ಯಂ ಮಾಡ್ತ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ನನಗೆ ಪ್ರಿಯವಾದ ವಿಷಯವಾಗಿದೆ.

ಅಧ್ಯಯನದ ಹಾದಿಯಲ್ಲಿ ಎದ್ದ ಹಲವಾರು ಸಮಸ್ಯೆಗಳಿಗೆ ಅನುನಯನದಿಂದ ಪರಿಹಾರ ಹೇಳಿದ ಕನ್ನಡ ಭಾಷಾಭಿವೃದ್ಧಿ ವಿಭಾಗದ ಸಹೋದ್ಯೋಗಿ ಮಿತ್ರರಿಗೆ, ಆಡಳಿತಾಂಗದಿಂದ ಸಹಾಯ ಸಹಕಾರ ನೀಡಿದ ಅಧ್ಯಯನಾಂಗದ ನಿರ್ದೇಶಕರಾದ ಶ್ರೀ ಬಾಲಸುಬ್ರಹ್ಮಣ್ಯ ಅವರಿಗೆ, ಅಂದವಾಗಿ ಅಕ್ಷರ ಸಂಯೋಜನೆ ಮಾಡಿದ 'ಯಾಜಿ ಗ್ರಾಫಿಕ್ಸ್'ನ ಶ್ರೀಮತಿ ಸವಿತಾ ಯಾಜಿ ಹಾಗೂ ಗಣೇಶ ಯಾಜಿ ಇವರೆಲ್ಲರು ನನ್ನಲ್ಲಿ ತೋರುವ ನಿರ್ವಾಜ್ಯವಾದ ಪ್ರೀತಿ ನನ್ನನ್ನು ಮೂಕನನ್ನಾಗಿಸಿದೆ. ಈ ಎಲ್ಲರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ದಿನಾಂಕ : ೧೫-೨-೧೯೯೯
ಸ್ಥಳ : ವಿದ್ಯಾರಣ್ಯ

ಎಸ್. ಎಸ್. ಅಂಗಡಿ
ಕನ್ನಡ ಭಾಷಾಭಿವೃದ್ಧಿ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ-೧ ಪೀಠಿಕೆ

ಅಧ್ಯಾಯ-೨ ಮಿಶನರಿಗಳು

ಅಧ್ಯಾಯ-೩ ಮಿಶನರಿಗಳ ನಿಘಂಟು ರಚನಾ ಕಾರ್ಯ

ಅಧ್ಯಾಯ-೪ ಮಿಶನರಿಗಳ ನಿಘಂಟು ರಚನಾ ವಿನ್ಯಾಸ (ಭಾಗ-೧)

ಅಧ್ಯಾಯ- ೧ ಪೀಠಿಕೆ

೧.೦೧ ನಿಘಂಟುವಿನ (ಕೋಶದ) ಅರ್ಥ ಮತ್ತು ಸ್ವರೂಪ

ಭಾಷಾಧ್ಯಯನಕ್ಕೆ ಕೋಶಗಳು ಪ್ರಮುಖ ಆಕರ ಸಂಪತ್ತು. ಪದಗಳ ಅರ್ಥಗಳನ್ನು ತಿಳಿದುಕೊಳ್ಳಲು, ಸ್ಪಷ್ಟ ಪಡಿಸಿಕೊಳ್ಳಲು ಕೋಶಗಳು ರಚಿತವಾದವು. ನಿಘಂಟು ಅಥವಾ ಕೋಶ ಎಂದರೆ ಶಬ್ದಗಳ ಒಂದು ಸಂಗ್ರಹ. ಅದನ್ನು ಪ್ರಾಚೀನ ಸಂಸ್ಕೃತ ಕೋಶಕಾರರು ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. "ವೇದಿನೀ ಕೋಶವು 'ಕೋಶಃ ಶಬ್ದಾದಿ ಸಂಗ್ರಹೇ' ಎಂದು ಕಲ್ಪದ್ರು ಕೋಶವು 'ನಿಘಂಟುಃ ನಾಮಸಂಗ್ರಹಃ' ಎಂದೂ ವೇದಿನೀಕಾರ 'ಕೋಶಃ ಶಬ್ದಪರ್ಯಾಯ ಜ್ಞಾಪಕೇ ಗ್ರಂಥೇ' ಎಂದೂ ಸಾಯಣರು 'ಏಕಾರ್ಥ ವಾಚೂಂ ಪರ್ಯಾಯ ಶಬ್ದನಾಂ ಸಂಘಃ ಯತ್ರ ಪ್ರಾಯೇಣ ಉಪದಿಶ್ಯತೇ ತತ್ರ ನಿಂಘಟು ಶಬ್ದ ಪ್ರಸಿದ್ಧಃ"[೧] ಎಂದು ಅಥೈಸಿದ್ದಾರೆ. 'ಒಂದು ಭಾಷೆಯಲ್ಲಿಯ ಎಲ್ಲ ಶಬ್ದಗಳ ಅರ್ಥ, ಅವುಗಳ ವ್ಯಾಕರಣ ಅನುಶಾಸನಕಾರ್ಯ, ವ್ಯುತ್ಪತ್ತಿ, ವಾಕ್ಯ ರಚನೆಯ ಪ್ರಭೇದಗಳು, ಉಚ್ಚಾರಣೆ, ಪ್ರಚಲಿತ ಸಂದರ್ಭೋಚಿತ ಅರ್ಥ, ಸಮಾನಾರ್ಥ, ವ್ಯತಿರಿಕ್ತಾರ್ಥ, ಪೂರ್ವ ಗ್ರಂಥಗಳಲ್ಲಿ ಉಪಯೋಗವಾಗಿರುವ ಅರ್ಥ ಚಿತ್ರಣ ಇವುಗಳನ್ನು ತಿಳಿಸುವ ಅಕಾರಾದಿ ಪದಗಳನ್ನೊಳಗೊಂಡ ಕೃತಿಗೆ ನಿಘಂಟು ಎಂದು ಹೆಸರು.[೨] ಒಂದು ಭಾಷಾ ಸಮುದಾಯದಿಂದ ಆರಿಸಿಕೊಂಡ ಭಾಷಿಕ ರೂಪಗಳನ್ನು ವ್ಯವಸ್ಥಿತವಾಗಿ ಸಂಯೋಜಿಸಿಕೊಳ್ಳುವುದೇ ನಿಘಂಟು.[೩] ಒಂದು ಭಾಷೆಯಲ್ಲಿರುವ ಪದ, ಪ್ರತ್ಯಯ, ಉಪಸರ್ಗ ಮುಂತಾದ ಭಾಷಾ ಘಟಕಗಳಿಗೆ ಅರ್ಥಗಳನ್ನು ನಿರೂಪಿಸುವ ಕೃತಿ ನಿಘಂಟು ಎನಿಸುತ್ತದೆ. ಅವುಗಳ ಆಯ್ಕೆ, ಜೋಡಣೆ, ಅರ್ಥ ನಿರೂಪಣೆಗೆ ಬಳಸಿರುವ ತಂತ್ರಗಳು-ಅವುಗಳ ಜೊತೆಗೆ ಪದಗಳ ಉಚ್ಚಾರ, ವ್ಯಾಕರಣಾಂಶ, ವ್ಯುತ್ಪತ್ತಿ, ವಾಕ್ಯದಲ್ಲಿ ಅವುಗಳ ಪ್ರಯೋಗ ಇತ್ಯಾದಿ ಹೆಚ್ಚುವರಿ ಮಾಹಿತಿಗಳು ಒಂದು ನಿಘಂಟಿನಲ್ಲಿ ಮುಖ್ಯವೆನಿಸುತ್ತವೆ. ಎಲ್ಲಾ ಭಾಷಾ ಘಟಕಗಳನ್ನು ಸಮಗ್ರವಾಗಿ, ಅಕಾರಾದಿಯಾಗಿ ಜೋಡಿಸಿ ಪರ್ಯಾಯ ಪದಗಳಿಂದ ಇಲ್ಲವೆ ನಿರುಪಣಾ ವಾಕ್ಯಗಳಿಂದ ಅವುಗಳ ಅರ್ಥಗಳನ್ನು ನಿರೂಪಿಸಿರುವುದು ಇಂದಿನ ನಿಘಂಟುಗಳ ಸಾಮಾನ್ಯ ಲಕ್ಷಣ.[೪]

The Encyclopaedia Britannica defines a dictionary as a book of listing words, of a language with their meaning in the same or another language usually in a alphabetical order, after with data regarding pronumciation, origin and usage[೫] A dictionary is a book dealing with the individual words of a language [or certainspecificed clásses of them] so'as to setforth their orthography, pronunciation, signification and use, their synonyms and History, or at least some of these facts; words are arranged alphabetically etc---- By extension; it is a book of information or reference on any

subject or branch of Knowledge,the items of which are arranged in alphabetical order[೬] 'The lexicon is an inventory of the free forms of a language arranged systematically and againset each form are shown their functional load of meaning in each distinct meaningfull situation[೭].

ಒಟ್ಟಾರೆಯಾಗಿ ನಿಘಂಟು ಎಂದರೆ ಭಾಷೆಯ ಎಲ್ಲ ಶಬ್ದಗಳನ್ನು ವ್ಯವಸ್ಥಿತವಾಗಿ ಪಟ್ಟಿಮಾಡಿ, ಆ ಶಬ್ದಗಳ ಅರ್ಥಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ಅವುಗಳಿಗೆ ಸರಿಹೊಂದುವ ಪ್ರಾಚೀನ ಹಾಗೂ ನವೀನ ಪ್ರಯೋಗಗಳನ್ನು ಉಲ್ಲೇಖಿಸಿ, ಆ ಶಬ್ದದ ವ್ಯಾಕರಣ ವಿವರಗಳನ್ನು ಸೇರಿಸಿ, ಪದಗಳನ್ನು ಅಕಾರಾದಿಯಾಗಿ ಜೋಡಿಸಿರುವ ಪುಸ್ತಕ. ಅದರಲ್ಲಿಯ ಮುಖ್ಯೋಲ್ಲೇಖ ಮಾನವ ಜೀವನದ ಯಾವ ಕ್ಷೇತ್ರಕ್ಕೆ ಸಂಬಂಧಿಸಿದೆ ಎಂಬುದನ್ನೂ ಇತರ ವಿವರಗಳನ್ನು ಆ ಶಬ್ದದ ಅಡಿಯಲ್ಲಿ ನೀಡಿರುತ್ತದೆ. ಸ್ಥೂಲವಾಗಿ ನಿಘಂಟು ಎಂದರೆ ಇಷ್ಟನ್ನು ಹೇಳಬಹುದು. ಇವರ ಜೊತೆಗೆ ಆ ಶಬ್ದಗಳ ಕಾಗುಣಿತ, ಉಚ್ಚಾರಣೆ, ಅವುಗಳ ಸಮಾನಾರ್ಥ ಮತ್ತು ವಿರುದ್ಧಾರ್ಥಕ ಶಬ್ದಗಳು ಅವುಗಳ ವ್ಯುತ್ಪತ್ತಿ, ಜ್ಞಾತಿ ಶಬ್ದಗಳು ಮತ್ತು ಅವುಗಳ ಚರಿತ್ರ ಇತ್ಯಾದಿಗಳನ್ನು ಸೇರಿಸಿರುತ್ತಾರೆ. ಅರ್ಥವತ್ತಾದ ಸ್ವತಂತ್ರ ಭಾಷಾ ಘಟಕಗಳು ನಿಘಂಟಿನಲ್ಲಿರುತ್ತವೆ.

ನಿಘಂಟು ಮತ್ತು ಕೋಶಗಳ ಬಗೆಗೆ ಪ್ರೊ.ಜಿ. ವೆಂಕಟಸುಬ್ಬಯ್ಯ ಅವರು ಅಭಿಪ್ರಾಯಪಡುವಂತೆ 'ನಿಘಂಟು-ಕೋಶ; ಈ ಎರಡೂ ಶಬ್ದಗಳಿಗೂ ಒಂದೇ ಅರ್ಥ. ಆದರೆ ನಿಘಂಟು ಎಂಬುದು ವೇದಗಳಲ್ಲಿರುವ ಶಬ್ದಗಳಿಗೆ ಅರ್ಥ ಹೇಳುವ ಮೊದಲ ಪ್ರಯತ್ನಕ್ಕೆ ಇಟ್ಟ ಹೆಸರು. ನಿಘಂಟು ಶಬ್ದಕ್ಕೆ 'ಯಸ್ಮಾದರ್ಥಾನ್ನಿಘಂಟಯತಿ ತಸ್ಮಾ ನಿಘಂಟುಃ' ಎಂದು ವ್ಯಾಡಿ ಎಂಬ ನಿಘಂಟುಕಾರ ವಿವರಿಸುತ್ತಾನೆ. ಅರ್ಥವನ್ನು ನಿರ್ಧಾರವಾಗಿ ತಿಳಿಸುವುದರಿಂದ ಅವಕ್ಕೆ ನಿಘಂಟು ಎಂದು ಹೆಸರು. ಎಂದು ಆ ವ್ಯಾಖ್ಯಾನಕ್ಕೆ ಅರ್ಥ. ಮೊದಲು ವೇದಗಳಲ್ಲಿರುವ ನಿಗೂಢಾರ್ಥದ ಪಟ್ಟಿಗೆ ಮೊದಲು ನಿಘಂಟು ಎಂಬ ಹೆಸರು ಅನ್ವಯವಾಯಿತು. ಇತರ ಶಬ್ದಗಳ ಪಟ್ಟಿಗಳಿಗೆ ಅರ್ಥ ಹೇಳುವ ರಚನೆಗಳಿಗೆ ಕೋಶ ಎಂದು ಹೆಸರು ಬಂತು. ಸಂಸ್ಕೃತದಲ್ಲಿ ಕೋಶ – ಕೋಷ ಎಂಬ ಎರಡು ರೂಪಗಳೂ ಇವೆ. ಎರಡು ಸರಿಯಾದುವೇ. ಕೋಶ ಶಬ್ದವು ಕುಕ್ಷಿ ಅಥವಾ ಕೋಷ್ಠ ಎಂಬುದರಿಂದ ಬಂದಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕೋಶಕ್ಕೆ ಮೊದಲ ಅರ್ಥ ಬೊಕ್ಕಸ, ಖಜಾನೆ ಎಂದು. ಬಳಿಕ ಶಬ್ದಗಳ ಬೊಕ್ಕಸವಾದ ನಿಘಂಟಿಗೂ ಕೋಶ ಎಂಬುದು ಪ್ರಯೋಗವಾಗುತ್ತ ಬಂತು. ನಿಘಂಟಿಗೆ ನಿಘಂಟುಕ ಎಂಬ ಪರ್ಯಾಯ ರೂಪವೂ ಇದೆ. ಕನ್ನಡದಲ್ಲಿ ಬಂಡಾರ, ಭಂಡಾರ ಎಂಬ ಶಬ್ದಗಳಿವೆ. ಶಬ್ದ ಭಂಡಾರ ಎಂದು ಕರೆಯಬಹುದು. ಈ ಭಂಡಾರ ಎಂಬುದು ಸಂಸ್ಕೃತದ ಭಂಡಾಗಾರ ಎಂಬುದರಿಂದ ಬಂದುದು. ಭಂಡಾರ ಎಂಬುದಕ್ಕೆ ಕೋಶ ಎಂದೇ ಅರ್ಥ.[೮] ಡಾ. ವಿಲ್ಕಂ ಮಾಡ್ತ ಮತ್ತು ಆರ್. ವೈ. ಕುಲಕರ್ಣಿ ಅವರು ನಿಘಂಟು ಮತ್ತು ಕೋಶಗಳ ಸಾಮ್ಯ ವೈಷಮ್ಯತೆಗಳ ಬಗೆಗೆ

ಕೆಲವು ಅಂಶಗಳನ್ನು ಗುರುತಿಸಿದ್ದಾರೆ. 'ನಿಘಂಟುಗಳಲ್ಲಿ ನಾಮಪದ ಮತ್ತು ಕ್ರಿಯಾಪದಗಳ ವಿವರಣೆಯಿದ್ದು, ಕೋಶಗಳಲ್ಲಿ ನಾಮಪದಗಳು ಮತ್ತು ಅವ್ಯಯಗಳು ಸೇರಿಕೊಂಡವು. ನಿಘಂಟುಗಳು ವೇದಗಳಲ್ಲಿಯ ಕಠಿಣ ಶಬ್ದಗಳ ಅರ್ಥ ವಿವರಣೆಗೆಂದೇ ಹುಟ್ಟಿಕೊಂಡವುಗಳಾದರೆ ಕೋಶಗಳು ಮುಖ್ಯವಾಗಿ ಕವಿಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಜನಿಸಿದವು.[೯] ನಿಘಂಟು ಮತ್ತು ಕೋಶಗಳನ್ನು ಈಗ ಒಂದೇ ಅರ್ಥದಲ್ಲಿ ಬಳಸುತ್ತೇವೆ. ಅವುಗಳಿಗೆ ಪರ್ಯಾಯವಾಗಿ ನಾಮಮಾಲಾ, ಶಬ್ದಾರ್ಣವ, ಶಬ್ದಮಾಲಾ, ಶಬ್ದಾವಳಿ, ಅಭಿಧಾನ ಕೋಶ, ಅಭಿಧಾನ ಮಾಲೆ, ಕಲ್ಪತರು ಇತ್ಯಾದಿಯಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತೇವೆ. ನಿಘಂಟುಗಳಿಗೆ ಬರೆದ ಭಾಷ್ಯವೇ ನಿರುಕ್ತ.

ಭಾಷಾಜ್ಞಾನಕ್ಕೆ ನಿಘಂಟು ಕೂಡ ಒಂದು ಮುಖ್ಯ ಸಾಧನ. ಒಂದು ಜ್ಞಾನಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಶಬ್ದಗಳನ್ನು ಒಂದೆಡೆ ಒದುಗಿಸಿಕೊಡುವುದು. ಯಾವುದೆ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಒಂದು ಶಿಷ್ಟ ಪದವನ್ನು ನಿರ್ದೇಶಿಸುವುದರ ಮೂಲಕ ಭಾಷಾ ಏಕರೂಪತೆಯನ್ನು ಕಾಪಾಡಿಕೊಳ್ಳುವುದು. 'ಮಾನವನ ಜ್ಞಾನ ವಿಕಾಸಕ್ಕೆ ಕಾವ್ಯ, ಶಾಸ್ತ್ರ, ಪುರಾಣಾದಿಗಳು ಎಷ್ಟು ಅವಶ್ಯಕವೋ ನಿಘಂಟು ಅಷ್ಟೇ ಅವಶ್ಯಕ. ಆದುದರಿಂದಲೇ ನಮ್ಮ ಪ್ರಾಚೀನರು ನಿಘಂಟನ್ನು ಒಂದು ಶಾಸ್ತ್ರವನ್ನಾಗಿ ಪರಿಗಣಿಸಿ ಅದಕ್ಕೆ ವಿಶೇಷ ಮಾನ್ಯತೆಯನ್ನು ಕೊಟ್ಟಿದ್ದರು. ಪ್ರಾಚೀನ ನಿಘಂಟುಗಳೆಲ್ಲಾ ಬಹುಮಟ್ಟಿಗೆ ಛಂದೋಬದ್ಧವಾಗಿ ಪದ್ಯ ರೂಪದಲ್ಲಿರುವುದರಿಂದ ಕಂಠಪಾಠ ಮಾಡಲು ಸುಲಭವಾಗುತ್ತಿತ್ತು. ಪ್ರಾಚೀನ ಕಾಲದಿಂದಲೂ ಜನ ನಿಘಂಟಿನ ಪ್ರಯೋಜನವನ್ನು ಕಂಡುಕೊಂಡಿದ್ದರು. ಆದುದರಿಂದಲೇ ಇದು ಜೀವಂತ ಶಾಸ್ತ್ರವಾಗಿ ಇಂದಿಗೂ ಉಳಿದು ಕೊಂಡುಬಂದಿದೆ. ಮಾನವನ ಜ್ಞಾನ ಪರಿಪೂರ್ಣತೆಗೆ ಉಳಿದ ಎಲ್ಲಾ ಗ್ರಂಥಗಳಿಗಿಂತಲೂ ನಿಘಂಟು ಬಹುಮುಖ್ಯವಾದುದು. ಆದುದರಿಂದಲೇ 'ಕೋಶಓದು; ದೇಶನೋಡು' ಎಂಬಗಾದೆ ಇಂದಿಗೂ ಮನೆಮಾತಾಗಿದೆ.[೧೦]

ನಿಘಂಟುಗಳಿಂದ ಆಗುವ ಪ್ರಯೋಜನಗಳು ಅಪಾರ. ಭಾಷೆಯ ವಿಚಾರದಲ್ಲಿ ಸ್ವಂತ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು, ಉಪಭಾಷೆಗಳ ವೈಶಿಷ್ಟ್ಯತೆಗಳನ್ನು ಅರಿತುಕೊಳ್ಳಲು, ಧರ್ಮ, ಸಮಾಜ, ಕಲೆ, ಕೃಷಿ ಮುಂತಾದ ಸಂದರ್ಭದಲ್ಲಿ ಬರುವ ಪದಗಳನ್ನು ಕಲೆಹಾಕಿ ಕೋಶಗಳನ್ನು ರಚಿಸುವುದರಿಂದ ಒಂದು ಸಮುದಾಯದ ಸಾಂಸ್ಕೃತಿಕ ವೈಶಿಷ್ಟ್ಯತೆಗಳನ್ನು ಗುರುತಿಸಲು ಸಹಾಯಕವಾಗುತ್ತದೆ. ಅನ್ಯಭಾಷೆಗಳನ್ನು ಸುಲಭವಾಗಿ ಕಲಿಯಲು, ಭಾಷೆ -ಭಾಷೆಗಳ ತೌಲನಿಕ ಅಧ್ಯಯನಕ್ಕೆ, ಒಂದು ಭಾಷೆಯಲ್ಲಿರುವ ಸಮಾನಾರ್ಥಕ ಪದಗಳನ್ನು, ಪದಗಳಲ್ಲಿರುವ ಅನೇಕಾರ್ಥಕಗಳನ್ನು, ವಿಶೇಷಾರ್ಥಕಗಳನ್ನು ತಿಳಿದುಕೊಳ್ಳಲು ನಿಘಂಟುಗಳು ನೆರವಾಗುತ್ತವೆ. ವೈಜ್ಞಾನಿಕತೆ ಹೆಚ್ಚುತಿರುವ ಇಂದಿನ ಕಾಲದಲ್ಲಿ ನಿಘಂಟುಶಾಸ್ತ್ರ ಎಂದಿಗಿಂತಲೂ ಹೆಚ್ಚು ಅವಶ್ಯಕತೆಯನ್ನು ಪಡೆದಿದೆ. ಒಂದು ಭಾಷೆಯ ಸರ್ವಾಂಗೀಣವಾದ ಅಭಿವೃದ್ಧಿಯ ದಿಶೆಯಲ್ಲಿ ಕೋಶಗಳು ಅತ್ಯಂತ ಮಹತ್ವದ ಹಾಗೂ ನಿರ್ಣಾಯಕ ಆಕರ ಸಾಮಗ್ರಿಗಳಾಗುತ್ತವೆ.

೧.೦೨ ನಿಘಂಟು ರಚನೆ

ಆಧುನಿಕ ಕಾಲದಲ್ಲಿ ನಿಘಂಟು ರಚನೆ ಕೇವಲ ಶಬ್ದಗಳ ನಿರ್ವಚನಕ್ಕೆ ಮಾತ್ರ ಸೀಮಿತವಾಗಿಲ್ಲ. ಭಾಷೆಯ ಇತಿಹಾಸ, ಶಬ್ದಗಳ ರೂಪ, ಆಕೃತಿ, ಉಚ್ಚಾರಗಳ ಬದಲಾವಣೆಗಳು ಮೊದಲಾದವುಗಳನ್ನು ಗಂಭೀರವಾಗಿ ಪರಿಗಣಿಸಿ ಕೋಶದಲ್ಲಿ ನಮೂದಿಸಬೇಕಾಗುತ್ತದೆ. ನಿಘಂಟುಗಳನ್ನು ರಚಿಸುವಾಗ ನಿಘಂಟಿಮದ ಅರ್ಥ, ವೈವಿಧ್ಯತೆ ಮತ್ತು ಅವುಗಳ ಸಂಯೋಜನೆಯನ್ನು ಕುರಿತು ವಿವೇಚನೆ ಮಾಡಬೇಕಾಗುತ್ತದೆ.[೧೧] ವೈಜ್ಞಾನಿಕವಾಗಿ ನಿಘಂಟು ರಚನೆ ಮಾಡುವಲ್ಲಿ ಡಾ. ವಿಲ್ಯಂ ಮಾಡ್ತ ಅವರು ಮೂರು ಮುಖ್ಯ ವಿಧಾನಗಳನ್ನು ಸೂಚಿಸಿದ್ದಾರೆ.[೧೨]

ಅ. ಕ್ಷೇತ್ರ ಕಾರ್ಯ

ಆ. ನಿಘಂಟಿಮಗಳ ಆಯ್ಕೆ

ಇ. ನಿಘಂಟಿಮಗಳ ರಚನೆ

ನಿಘಂಟು ರಚನೆಗೆ ಕೈಹಾಕುವ ಮೊದಲು ನಿಘಂಟುಕಾರ ಆರಂಭದಲ್ಲಿಯೇ ಎರಡು ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಒಂದು ಭಾಷಾ ಸ್ವರೂಪದ ಬಗೆಗಾದರೆ, ಇನ್ನೊಂದು ನಿಘಂಟಿನ ಸ್ವರೂಪದ ಬಗೆಗೆ. ಯಾವ ಭಾಷೆಗೆ ನಾವು ನಿಘಂಟು ರಚಿಸುತ್ತೇವೆಯೋ ಆ ಭಾಷೆಯ ಪೂರ್ಣ ಜ್ಞಾನ ಬೇಕೆ ಬೇಕು. ಆ ಭಾಷೆಯ ಉಪಭಾಷೆಗಳು ಮತ್ತು ಅವುಗಳ ಪರಸ್ಪರ ಸಂಬಂಧವನ್ನು ಕುರಿತು ಆತನಿಗೆ ಸರಿಯಾದ ಜ್ಞಾನ ಬೇಕಾಗುತ್ತದೆ. ಆಡು ಮಾತಿಗೂ ಸಾಹಿತ್ಯ ಭಾಷೆಗೂ ಇರುವ ಅನ್ಯೋನ್ಯ ಸಂಬಂಧ ಆತ ತಿಳಿದುಕೊಳ್ಳಬೇಕು. ಸಾಹಿತ್ಯ ಭಾಷೆಯಲ್ಲಿ ಅನೇಕ ಪ್ರಾಚೀನ ರೂಪಗಳಿವೆಯೆ? ಅದರಲ್ಲಿ ಉಪಭಾಷೆ ಪದಗಳು ಬಳಕೆಯಾಗುತ್ತವೆಯೆ? ಇದ್ದರೆ ಎಷ್ಟು ಪ್ರಮಾಣದಲ್ಲಿ? ಕಾಲಿಕ ಉಪಭಾಷೆಗಳಲ್ಲಿ ಬಹಳಷ್ಟು ವ್ಯತ್ಯಾಸಗಳನ್ನು ನಾವು ಕಾಣುತ್ತೇವೆಯೇ? ಇವೇ ಮೊದಲಾದ ಪ್ರಶ್ನೆಗಳನ್ನು ನಿಘಂಟುಕಾರ ನಿಘಂಟು ರಚನೆಯ ಆರಂಭದಲ್ಲಿಯೇ ಕೇಳಿಕೊಳ್ಳಬೇಕಾಗುತ್ತದೆ. ಎರಡನೆಯದಾಗಿ, ತಾನು ರಚಿಸಬೇಕಾದ ನಿಘಂಟಿನ ಸ್ವರೂಪ ಹೇಗಿರಬೇಕೆಂಬುದನ್ನು ನಿಘಂಟುಕಾರ ಮೊದಲೇ ನಿರ್ಧರಿಸಬೇಕಾಗುತ್ತದೆ. ನಿಘಂಟುಗಳ ಸ್ವರೂಪ, ಅವುಗಳ ಅರ್ಥಗಳನ್ನು ಸೂಚಿಸುವ ರೀತಿ, ಉಪಭಾಷಾ ನಿಘಂಟಿಮಗಳು, ಪ್ರಾಚೀನ ರೂಪಗಳು, ಇತ್ಯಾದಿಗಳ ಸೇರ್ಪಡೆ ನಿಘಂಟಿನ ಗುರಿ, ಪ್ರಭೇದ ಮತ್ತು ಗಾತ್ರವನ್ನು ಅನುಸರಿಸಿತ್ತದೆ.[೧೩] ಈ ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೋಶಕಾರ ಕೋಶ ರಚನೆಗೆ ತೊಡಗಬೇಕಾಗುತ್ತದೆ.

ಅ. ಕ್ಷೇತ್ರಕಾರ್ಯ : ನಿಘಂಟು ರಚನೆಯನ್ನು ಗಮನದಲ್ಲಿಟ್ಟುಕೊಂಡು ನಿಘಂಟುಕಾರ ಕ್ಷೇತ್ರಕಾರ್ಯವನ್ನು ಮಾಡಬೇಕು.[೧೪] ಕೋಶಕ್ಕೆ ಅವಶ್ಯಕವಾದ ಸಾಮುಗ್ರಿಗಳು ಸಮಗ್ರವಾಗಿ ಹಾಗೂ ಸಮರ್ಪಕವಾಗಿ ದೊರೆಯುುವತನಕ ಕ್ಷೇತ್ರಕಾರ್ಯ ಮುುಂದುವರಿಸಬೇಕು. ಕ್ಷೇತ್ರದಲ್ಲಿ ಭಾಷಾಸಮುದಾಯಕ್ಕೆ

ಸಂಬಂಧಿಸಿದಂತೆ ಮೂಲ ಆಕರಗಳಿಂದ ಸಾಮಗ್ರಿಗಳನ್ನು ಸಂಗ್ರಹಿಸಬೇಕಾಗುತ್ತದೆ. ನಿಘಂಟು ರಚನೆಯಲ್ಲಿ ಮೂಲಸಾಮಗ್ರಿಗಳಿಗೆ (ನಿಘಂಟಿಮಗಳು) ಪ್ರಥಮ ಸ್ಥಾನವಿದೆ. ನಿಘಂಟಿಮಗಳು ಮೂಲ ಆಕರಗಳಲ್ಲಿ ದೊರೆಯುತ್ತವೆ. ಕ್ಷೇತ್ರದಲ್ಲಿ ಸಿಗುವ ಮೂಲ ಆಕರಗಳೆಂದರೆ :-

ಸಂಗ್ರಹಾಲಯಗಳು

- ದಾಖಲೆ ಸಂಗ್ರಹಾಲಯಗಳು
- ವಸ್ತು ಸಂಗ್ರಹಾಲಯಗಳು

ಇತರ ವಸ್ತುಗಳು

- ಗ್ರಂಥಾಲಯಗಳು
- ಚಲನಚಿತ್ರಗಳು
- ವಿಡಿಯೋ ಕ್ಯಾಸೆಟುಗಳು
- ಸ್ಥಳೀಯ ಸಣ್ಣಪತ್ರಿಕೆಗಳು


ಈ ಮೂಲಕ ಆಕರಗಳಲ್ಲಿ ಒಂದು ಪ್ರದೇಶಕ್ಕೆ ಸಂಬಂಧಪಟ್ಟ ಆರ್ಥಿಕ, ಆಡಳಿತಾತ್ಮಕ, ಶೈಕ್ಷಣಿಕ, ಸಾಮಾಜಿಕ, ಸಾಹಿತ್ಯಿಕ, ರಾಜಕೀಯ ಮುಂತಾದ ಕ್ಷೇತ್ರಕ್ಕೆ ಸಂಬಂಧಿಸಿದ ಅಮೂಲ್ಯ ಮಾಹಿತಿಗಳು ದೊರೆಯುತ್ತವೆ. ಕ್ಷೇತ್ರಕಾರ್ಯ ಪ್ರಾರಂಭವಾದಾಗ ಕೋಶಕಾರ ಮೇಲಿನ ಮೂಲ ಆಕರಗಳು ಇರುವಲ್ಲಿಗೆ ಹೋಗಿ ನಿಘಂಟಿಮಗಳನ್ನು ಸಂಗ್ರಹಿಸಬೇಕು. ನಿಘಂಟಿಮಗಳನ್ನು ಸಂಗ್ರಹಿಸುವ ಸಂದರ್ಭಗಳಲ್ಲಿ ಕೋಶಕಾರ ಸಹನೆ ಮತ್ತು ಶಿಸ್ತಿನಿಂದ ವರ್ತಿಸಬೇಕು. ಕೋಶಕಾರ ನಿಘಂಟು ವಿಜ್ಞಾನದ ಮೂಲತತ್ವಗಳನ್ನು, ಕ್ಷೇತ್ರ ಕಾರ್ಯದ ವಿಧಾನಗಳನ್ನು ಅರಿತವನಾಗಿರಬೇಕು. ವಿಶೇಷವಾಗಿ ಧ್ವನಿರಚನಾಶಾಸ್ತ್ರದ ಧ್ವನ್ಯುತ್ಪಾದನಾ ಧ್ವನಿಶಾಸ್ತ್ರದಲ್ಲಿ ತರಬೇತಿ ಹೊಂದಿರಬೇಕು. ನಿಘಂಟಿಮಗಳನ್ನು ಸಂಗ್ರಹಿಸುವಾಗ, ವಿಶ್ಲೇಷಿಸುವಾಗ ಕೋಶಕಾರನಿಗೆ ಧ್ವನಿಮಾ, ಆಕೃತಿಮಾ, ವಾಕ್ಯರಚನೆ, ಶಬ್ದಕೋಶದ ನಿಯಮಗಳ, ಧ್ವನ್ಯಾಲೇಖ, ಧ್ವನಿಮಾಲೇಖ ಮುಂತಾದವುಗಳಲ್ಲಿ ಪರಿಣತಿ ಮತ್ತು ಪ್ರಭುತ್ವ ಹೊಂದಿರಬೇಕಲ್ಲದೆ ಅವುಗಳನ್ನು ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುತ್ತಾ ಹೋಗಬೇಕಾಗುತ್ತದೆ. ಭಾಷಾ ಸಮುದಾಯದ ಔಪಚಾರಿಕ -ಅನೌಪಚಾರಿಕ ಸಂದರ್ಭದಲ್ಲಿ ಭಾಷಾ ಬಳಕೆಯ ರೀತಿಯನ್ನು ತಿಳಿದವನಾಗಿರಬೇಕು.

ನಿಘಂಟುಕಾರರಿಗೆ ಆರಿಸಿದ ಭಾಷೆ ಮಾತೃ ಭಾಷೆಯಾಗಿದ್ದರೆ ಆತ ಮಾತುಗನಾಗಿ ಆ ಭಾಷೆಯ ಒಂದು ಉಪಭಾಷೆಯನ್ನು ಮಾತನಾಡುತ್ತಾನೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕಾರಣ, ನಿಘಂಟು ರಚಿಸುವ ಸಂದರ್ಭದಲ್ಲಿ ಬೇರೆ ಪ್ರದೇಶಗಳ, ಸಾಮಾಜಿಕ ಸ್ತರಗಳ ಜನರನ್ನು ಆತ ಸಂಪರ್ಕಿಸಿ ವ್ಯಾಪಕವಾದ

ಸಾಮಗ್ರಿಯನ್ನು ಕಲೆಹಾಕಬೇಕು. ಸ್ವಭಾಷೆಯ ಕೋಶವನ್ನು ಸಿದ್ಧಪಡಿಸುವ ಕೋಶಕಾರ ನಿಘಂಟಿಮಗಳನ್ನು ಕಲೆಹಾಕುವ ಸಂದರ್ಭದಲ್ಲಿ ಅಧಿಕ ವ್ಯತ್ಯಾಸ, ಅಪೂರ್ಣ ವ್ಯತ್ಯಾಸಗಳಾಗದಂತೆ ಜಾಗರೂಕತೆವಹಿಸಬೇಕು.

ನಿಘಂಟು ರಚನೆಯ ಭಾಷೆ ನಿಘಂಟುಕಾರನ ಮಾತೃ ಭಾಷೆಗಿಂತ ಭಿನ್ನವಾಗಿದ್ದರೆ ನಿಘಂಟಿಮಗಳನ್ನು ಕಲೆ ಹಾಕುವ ಸಂದರ್ಭದಲ್ಲಿ ಆತ ನಿರೂಪಕರ ಸಹಾಯಪಡೆಯಬೇಕು[೧೫]. ಭಾಷಾ ಸಾಮಗ್ರಿಗಳನ್ನು ಸಂಗ್ರಹಿಸುವಾಗ, ತಪಾಸಿಸುವಾಗ ನಿರೂಪಕರು ಮಹತ್ವದ ಪಾತ್ರ ವಹಿಸುತ್ತಾರೆ. ಭಾಷಾ ಸಾಮಗ್ರಿಗಳನ್ನು ಆಲೇಖಿಸುವಾಗ, ವಿಶ್ಲೇಷಿಸುವಾಗ ಉಚ್ಚಾರಣೆಯಿಂದ, ಕೇಳುವಿಕೆಯಿಂದ, ಅವಿಭಾಜಕಗಳಿಂದಾಗಿ ಅನೇಕ ದೋಷಗಳು ಉಂಟಾಗುತ್ತವೆ. ಅವುಗಳನ್ನು ನಿವಾರಿಸಲು, ಸಂಶಯಗಳನ್ನು, ಗೊಂದಲಗಳನ್ನು ಪರಿಹರಿಸಲು ನಿರೂಪಕರು ಅತಿ ಅವಶ್ಯ. ನಿರೂಪಕರಿಗೆ ಆ ಭಾಷೆ ಮಾತೃ ಭಾಷೆಯಾಗಿರಬೇಕು. ಅವರು ಒಳ್ಳೆಯ ಸ್ವಭಾವದವರು, ನಂಬಿಗಸ್ತರು, ಚುರುಕು ಸ್ವಭಾವದವರು ಮತ್ತು ಮಧ್ಯಮ ವಯಸ್ಸಿನವರೂ ಆಗಿರಬೇಕು. ಸಾಧ್ಯವಾದಲ್ಲಿ ಅವರು ಅಕ್ಷರಸ್ಥರೂ, ವಿದ್ಯಾವಂತರೂ ಆಗಿದ್ದು ತಮ್ಮ ಭಾಷೆಯ ಬಗೆಗೆ ಶುಷ್ಕ ಅಭಿಮಾನಕ್ಕಿಂತ ಹೆಚ್ಚು ಪಾಂಡಿತ್ಯ ಉಳ್ಳವರಾಗಿದ್ದರೆ ಬಹು ಉತ್ತಮ. ತಮ್ಮ ಭಾಷಾಜ್ಞಾನವನ್ನು ಅಭಿವ್ಯಕ್ತಪಡಿಸುವ ಸಾಮರ್ಥ್ಯ ಅವರಲ್ಲಿರಬೇಕು. ನಿರೂಪಕರ ಸಂಖ್ಯಾ ನಿರ್ಣಯ ನಿಘಂಟಿನ ಸ್ವರೂಪ ಹಾಗೂ ಗಾತ್ರವನ್ನು ಅವಲಂಭಿಸಿರುತ್ತದೆ. ಭಾಷಾ ನಿರೂಪಕರನ್ನು ಆರಿಸುವಾಗ ಅವರು ಬೇರೆ ಬೇರೆ ಸಮುದಾಯಗಳ ಯೋಗ್ಯ ಪ್ರತಿನಿಧಿಗಳಾಗಿರಬೇಕು. ಆಯ್ಕೆ ಮಾಡಿಕೊಂಡ ನಿರೂಪಕರಿಗೆ ಧ್ವನಿಶಾಸ್ತ್ರಕ್ಕೆ ಸಂಬಂಧಿಸಿದಂತೆ ಸೂಕ್ತ ತರಬೇತಿ ನೀಡಬೇಕಾಗುತ್ತದೆ.

ಭಾಷಾ ಸಮುದಾಯದಲ್ಲಿ ಸೂಕ್ತ ನಿರೂಪಕರು ಕೆಲವೊಮ್ಮೆ ಸಿಗದೇ ಇದ್ದಾಗ ಕೋಶಕಾರ ವಿವರಣಾಕರ್ತರನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ (ಅಂತಹ ಸಂದರ್ಭಗಳು ಬಹಳ ಕಡಿಮೆ). ಅವರ ಮುಖ್ಯ ಕಾರ್ಯವೆಂದರೆ ಕೋಶಕಾರ ಮತ್ತು ಭಾಷಾ ಸಮುದಾಯದ ನಡುವೆ ಸಂಪರ್ಕವನ್ನುಂಟು ಮಾಡುವುದು, ಮಧ್ಯಸ್ಥಿಕೆ ವಹಿಸುವುದು. ವಿವರಣಾಕರ್ತರು ಸಮುದಾಯದ ಭಾಷೆ ಮತ್ತು ಕೋಶಕಾರ ಭಾಷೆ ಎರಡರಲ್ಲೂ ಪ್ರಭುತ್ವ ಹೊಂದಿರಬೇಕಾಗುತ್ತದೆ. ಕೋಶಕಾರ ತನ್ನ ಅಧ್ಯಯನದ ಉದ್ದೇಶ, ಸ್ವರೂಪವನ್ನು ವಿವರಣಾಕರ್ತರಿಗೆ ತಿಳಿಸಿಕೊಡಬೇಕು. ಅವರಿಗೂ ಸೂಕ್ತ ತರಬೇತಿ ಕೊಡಬೇಕಾಗುತ್ತದೆ.



ನಿರೂಪಕರ ಜೊತೆ ವಿವಿಧ ಜ್ಞಾನ ಕ್ಷೇತ್ರಗಳಿಂದ ಸೂಕ್ತ ಪರಿಣಿತರನ್ನು ಆರಿಸಿಕೊಂಡು ಅವರ ಸಲಹೆ ಮಾರ್ಗದರ್ಶನ ಪಡೆಯಬೇಕು. ನಿರೂಪಕರು ಸಂಗ್ರಹಿಸಿದ ಮಾಹಿತಿಯನ್ನು ಈ ಪರಿಣಿತರು

ಪರಾಮರ್ಶಿಸಬೇಕು. ಸಮಸ್ಯೆಗಳು ಮತ್ತು ಶಂಕೆಗಳು ಮೂಡಿದಾಗ ಪರಿಣಿತರಿಂದ ಪರಿಹಾರ ದೊರಕಿಸಿಕೊಳ್ಳಬೇಕು. ಇಂಥ ಸಂದರ್ಭಗಳಲ್ಲಿ ಪ್ರಚಲಿತವಾಗಿರುವ ಇತರ ನಿಘಂಟುಗಳ ಸಹಾಯವನ್ನೂ ಪಡೆಯಬೇಕು. ಹಾಗೆ ಹಲವು ಬಗೆಯ ಸಹಾಯ ಸಹಕಾರಗಳನ್ನು ಪಡೆಯುವುದನ್ನು ನಿಘಂಟುಕಾರ ಮರೆಯಬಾರದು. ನಿರೂಪಕರಿಂದ ಉದ್ದೇಶಿತ ಸಾಮಗ್ರಿಗಳನ್ನು ಹೊರತೆಗೆಯುವುದು ಸುಲಭದ ಕೆಲಸವಲ್ಲ. ಸಾಮಗ್ರಿಗಳು ಸಮಂಜಸತೆ ಮತ್ತು ವಿಶ್ವಸನೀಯತೆಯಿಂದ ಕೂಡಿರಬೇಕಾದರೆ ಹಾಗೂ ಕ್ಷೇತ್ರಕಾರ್ಯ ಯಶಸ್ವಿಯಾಗಲು, ಪರಿಣಾಮಕಾರಿಯಾಗಲು ಕ್ಷೇತ್ರಕರ್ತ ಪ್ರಶ್ನಾವಳಿ, ಸಂದರ್ಶನ, ವೀಕ್ಷಣೆ, ತಪಶೀಲುಪಟ್ಟಿ, ತಾಳೆಪಟ್ಟಿ, ಸಮಾಜೋಮಾಪನ ಪಟ್ಟಿ ಮುಂತಾದ ಸಾಧನ -ತಂತ್ರಗಳನ್ನು ಸಂದರ್ಭೋಚಿತವಾಗಿ ಬಳಸಬೇಕು. ಅವುಗಳನ್ನು ಬಳಸುವ ವಿಧಾನವನ್ನು ಚೆನ್ನಾಗಿ ಅರಿತವನಾಗಿರಬೇಕು. ಅವುಗಳನ್ನು ಬಳಸಿಕೊಂಡು ಸೃಜನಸಾಹಿತ್ಯ ಹಾಗೂ ಪ್ರಾಯೋಜ್ಯ ಸಾಹಿತ್ಯವಾದ ಕಾನೂನು, ವಾಣಿಜ್ಯ, ಆಡಳಿತ, ವೃತ್ತಿ ಮೊದಲಾದವುಗಳಿಗೆ ಸಂಬಂಧಿಸಿದ ಸಾಹಿತ್ಯದಿಂದಲೂ ದತ್ತ ಸಂಗ್ರಹ ಮಾಡಬೇಕು. ಪ್ರಚಲಿತ ಆಗು-ಹೋಗುಗಳನ್ನು ತಿಳಿದುಕೊಳ್ಳಲು ವರ್ತಮಾನ ಪತ್ರಿಕೆ, ನಿಯತಕಾಲಿಕೆಗಳಿಂದಲೂ ಸಾಮಗ್ರಿ ಸಂಗ್ರಹವಾಗಬೇಕು. ನಿಘಂಟುರಚನೆಯಲ್ಲಿ ನಿಘಂಟಿಮಗಳನ್ನು ಪಡೆಯುವಾಗ ಭಾಷಾಕ್ಷೇತ್ರ ಪ್ರಮುಖ ಪಾತ್ರ ವಹಿಸುತ್ತದೆ.

ಆ. ನಿಘಂಟಿಮಗಳ ಆಯ್ಕೆ; ನಿಘಂಟಿನ ಉದ್ದೇಶ ಮತ್ತು ವ್ಯಾಪ್ತಿಗೆ ಅನುಗುಣವಾಗಿ ಉತ್ತಮವಾದ ನಿಘಂಟಿಮಗಳನ್ನು ಸಂಗ್ರಹಿಸುವುದೇ ಕ್ಷೇತ್ರ ಕಾರ್ಯದ ಮುಖ್ಯ ಉದ್ದೇಶವಾಗಿದೆ. ಉತ್ತಮವಾದ ನಿಘಂಟಿಮಗಳ ಮೇಲೆಯೇ ಕೋಶಕಾರರ ಕೋಶದ ರಚನೆ ನಿಂತಿರುತ್ತದೆ. ಕೋಶ ರಚನೆಯಲ್ಲಿ ನಿಘಂಟಿಮಗಳ ಆಯ್ಕೆ ಯಾವ ರೀತಿಯಾಗಿರಬೇಕೆಂಬುದರ ಬಗೆಗೆ ತುಳು ನಿಘಂಟು ಯೋಜನೆಯ ಪ್ರಧಾನ ಸಂಪಾದಕರಾದ ಡಾ. ಯು. ಪಿ. ಉಪಾಧ್ಯಾಯ ಅವರು ತುಂಬ ಸಮರ್ಪಕವಾದ ಮಾತುಗಳನ್ನಾಡಿದ್ದಾರೆ. "ಕೋಶಕ್ಕೆ ಬೇಕಾದ ಸಾಮಗ್ರಿಗಳನ್ನು ಕೇವಲ ಲಿಖಿತ ಗ್ರಂಥಗಳ ಮೂಲದಿಂದ ಮಾತ್ರವಲ್ಲದೆ ಬಹುವಿಧವಾದ ಸಾಮಾಜಿಕ ಹಾಗೂ ಪ್ರಾದೇಶಿಕ ಆಡುನುಡಿಗಳಿಂದಲೂ ಸಂಗ್ರಹಿಸಬೇಕು. ತುಂಬ ಘನವಾದ ಆಲಂಕಾರಿಕ ಉದ್ಗ್ರಂಥಗಳಿಂದ ಹಿಡಿದು ಗದ್ದೆಗಳಲ್ಲಿ ಕೆಲಸ ಮಾಡುವ ಹೆಣ್ಣಾಳುಗಳ ಅತ್ಯಂತ ಲಘುವಾದ ವಿನೋದಾತ್ಮಕ ಹಾಡುಗಳವರೆಗೆ ದಾರ್ಶನಿಕರ ಉಚ್ಚ ಮಟ್ಟದ ಸುಸಂಸ್ಕೃತ ಜ್ಞಾನೋಪದೇಶದಿಂದ ಹಿಡಿದು ಮಕ್ಕಳ ಸರಸ ಸ್ನಿಗ್ಧ ತೊದಲು ನುಡಿಗಳವರೆಗೆ ಎಲ್ಲ ರೀತಿಯ ರಚನಾ ಶೈಲಿಗಳನ್ನು ಕೋಶಕಾರರು ಸೆರೆ ಹಿಡಿಯಬೇಕು. ಔಪಚಾರಿಕ ಪ್ರಯೋಗಗಳೊಂದಿಗೆ ಭಿನ್ನ ಭಿನ್ನ ಸಾಮಾಜಿಕ, ಆರ್ಥಿಕ ಸ್ತರಗಳಲ್ಲಿರುವ ಜನರ ಮಾತುಗಳನ್ನೂ ಆ ಪ್ರದೇಶದ, ಪಂಗಡ, ಜನಪದ ಆಚರಣೆಯ ಸಂದರ್ಭ ಮುಂತಾದವುಗಳನ್ನು ಸ್ಪಷ್ಟವಾಗಿ ಸೂಚಿಸಬಲ್ಲ ಸಂಕೇತಗಳೊಂದಿಗೆ ಬರೆದಿಟ್ಟುಕೊಳ್ಳಬೇಕು. ಸಾಧಿತ ಪದಗಳನ್ನು, ಸಮಸ್ತ ಪದಗಳನ್ನು ಕೂಡುನುಡಿಗಳನ್ನು, ಸಮರ್ಪಕ ಉದಾಹರಣೆ, ನಿದರ್ಶನ, ಸಾಂಸ್ಕೃತಿಕ ಟಿಪ್ಪಣಿ, ವಿವರಣೆಗಳೊಂದಿಗೆ ದಾಖಲಿಸಿಕೊಳ್ಳಬೇಕು.

ಅಂತಾರಾಷ್ಟ್ರೀಯ ಉಪಯೋಗಕ್ಕೆ ಅನುಕೂಲವಾಗುವಂತೆ ದೇಶೀಯ ಲಿಪಿಯೊಂದಿಗೆ ರೋಮನ್ ಲಿಪಿಯನ್ನೂ ಬಳಸಬೇಕು. ಪದಗಳಿಗೆ ಅರ್ಥವನ್ನು ದೇಶೀಯ ಭಾಷೆಯಲ್ಲೂ ಅಂತಾರಾಷ್ಟ್ರೀಯ ಭಾಷೆಯಲ್ಲಿಯೂ ಕೊಡಬೇಕು. ಈ ರೀತಿಯಾಗಿ ರಚಿಸಿದ ಕೋಶವೇ ಸಂಪೂರ್ಣ ಹಾಗೂ ಸರ್ವ ಸಂಗ್ರಾಹಕವಾಗಬಲ್ಲದು." [೧೬]

ನಿಘಂಟುಗಳ ಗಾತ್ರ, ಸ್ವರೂಪ ಹಾಗೂ ವೈವಿಧ್ಯತೆಯನ್ನು ಗಮನಿಸಿ ನಿಘಂಟಿಮಗಳ ಆಯ್ಕೆ ಮಾಡಬೇಕಾಗುತ್ತದೆ. ಪ್ರಾಚೀನ ಸಾಹಿತ್ಯ ಗ್ರಂಥಗಳನ್ನು ಆಧರಿಸಿ ರಚಿತಗೊಳ್ಳುವ ನಿಘಂಟುಗಳಲ್ಲಿ ಸಾಮಾನ್ಯ ನಿಘಂಟುಗಳ ಜೊತೆಗೆ ಕ್ವಚಿತ್ತಾಗಿ ಕಂಡುಬರುವ ಪ್ರಯೋಗಗಳು, ಪುರಾತನ ರೂಪಗಳು, ಲುಪ್ತರೂಪಗಳು ಇತ್ಯಾದಿಗಳಿಗೆ ಸ್ಥಾನಸಿಗುತ್ತದೆ. ಸಾಮಾನ್ಯವಾಗಿ ನಿಘಂಟುಗಳಲ್ಲಿ ದೈನಂದಿನ ವ್ಯವಹಾರದಲ್ಲಿ ಬರುವ ಗಾದೆ, ಒಗಟು, ನುಡಿಗಟ್ಟುಗಳ ಸಂಗ್ರಹ, ಆ ಭಾಷೆಯ ಬಗೆಗೆ ಈವರೆಗೆ ಬಂದಂತಹ ಪ್ರಕಟಿತ ಪುಸ್ತಕಗಳಿಂದ ಶಬ್ದಗಳ ಹಾಗೂ ಉದ್ದರಣೆಗಳ ಸಂಗ್ರಹಣೆ ಬೇಸಾಯ, ತೋಟಗಾರಿಕೆ, ಮೀನುಗಾರಿಕೆ, ಬೇಟೆ, ಗಾಣ, ಕುಂಬಾರಿಕೆ, ಬಡಿಗ, ಕಂಬಾರಿಕೆ, ಬುಟ್ಟಿ ಮಾಡುವಿಕೆ ಮುಂತಾದ ವಿವಿಧ ವೃತ್ತಿ ಕಸುಬುಗಳು ನಡೆಯುವ ಸ್ಥಳದಲ್ಲಿ ಮಾಹಿತಿದಾರರನ್ನು ಸಂದರ್ಶಿಸಿ ಮಾಡಿಕೊಂಡ ದಾಖಲಾತಿ. ಮದುವೆ, ಮೈನೆರೆಯುವುದು, ಅಂತ್ಯ ಕ್ರಿಯೆ ಮುಂತಾದ ಸಾಮಾಜಿಕ ಧಾರ್ಮಿಕ ಆಚರಣೆಗಳನ್ನು ಹಬ್ಬ ಹರಿದಿನಗಳ ಆಚರಣೆಗಳನ್ನೂ ಆಯಾ ಸ್ಥಳದಲ್ಲಿಯೇ ವೀಕ್ಷಣೆ ಮಾಡಿದ ಪದ ಸಂಗ್ರಹ. ಹಂತಿ. ಕೋಲುಪದ, ಒನಕೆ ಹಾಡು, ಬೀಸುವ, ಕುಟ್ಟುವ ಹಾಡುಗಳಿಗೆ ಸಂಬಂಧಪಟ್ಟ ವಿವಿಧ ಸಂಪ್ರದಾಯಗಳ, ಆಚರಣೆಗಳ, ಜನಪದರ ನಂಬಿಕೆ, ವಿಧಿನಿಷೇಧಗಳು, ಬಾಲ ಭಾಷೆ, ವಿನೋದಗಳು, ಬೈಗಳುಗಳು, ಸಂಬೋಧನೆಗಳು, ಕುಲನಾಮಗಳು, ವ್ಯಕ್ತಿನಾಮಗಳು, ಸ್ಥಳನಾಮ ಘಟಕಗಳು ಗಿಡ, ಮರ, ಪ್ರಾಣಿಗಳಿಗೆ ಸಂಬಂಧಿಸಿದ ಶಬ್ದಗಳು ಮುಂತಾದವುಗಳ ಬಗೆಗೆ ಶಬ್ದಗಳ ಹಾಗೂ ವಿವರಣೆಗಳ ಸಂಗ್ರಹ. ನಿಘಂಟಿನಲ್ಲಿ ಸೇರಿಸಬಹುದಾದ ಎಲ್ಲ ರೂಪಗಳೂ ನಿಘಂಟಿಮಗಳೇ ಆಗಿವೆ.

ನಿಘಂಟಿಮಗಳು ಸ್ವಾಭಾವಿಕ ಅಂಶಗಳನ್ನು ಒಳಗೊಂಡಿರಬೇಕು. ಅಂದರೆ ನಿರೂಪಕರು ಹೇಳಿದ ಹಾಗೆ, ಉಚ್ಚರಿಸಿದ ಹಾಗೆ ನಿಘಂಟಿಮಗಳು ಇರಬೇಕಾಗುತ್ತದೆ. ನಿಘಂಟಿಮಗಳು ಒಂದು ಭಾಷೆಯ ಬೇರೆ ಬೇರೆ ಉಪಭಾಷೆ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿರಬೇಕು. 'ಸಮುದಾಯದಲ್ಲಿ ಭಾಷಾ ಬಳಕೆಯ ಔಪಚಾರಿಕ, ಅನೌಪಚಾರಿಕ ಸನ್ನಿವೇಶಗಳ ವಿವಿಧ ಸಂದರ್ಭಗಳಲ್ಲಿಯ ನಿಘಂಟಿಮಗಳನ್ನು ಸಂಗ್ರಹಿಸುವುದು ಬಹಳ ಮುಖ್ಯವಾದುದು'.[೧೭] ಆ ಸಂದರ್ಭದಲ್ಲಿ ಭಾಷಿಕರ ವಯಸ್ಸು ಮತ್ತು ಲಿಂಗ, ಆವೇಶದ ಸನ್ನಿವೇಶಗಳಲ್ಲಿಯ ಭಾಷೆ, ವೇಗೋಚ್ಚಾರಣೆಯ ಸಂದರ್ಭ ಮುಂತಾದವುಗಳನ್ನು ಕೋಶಕಾರ ಗಮನದಲ್ಲಿಟ್ಟುಕೊಳ್ಳಬೇಕು. ಕೋಶಕಾರ ಸಮುದಾಯದ ಭಾಷಾ ಬಳಕೆಯ ಯಾವ ಸಂದರ್ಭವನ್ನು ಬಿಡಬಾರದು. ನಿಘಂಟನ್ನು ರಚಿಸುವಾಗ ಅವು ಒಂದಿಲ್ಲ ಒಂದು ರೀತಿಯಲ್ಲಿ ಕೋಶಕಾರನಿಗೆ ನೆರವಾಗುತ್ತವೆ.

೩. ನಿಘಂಟಿಮಗಳ ರಚನೆ ; ಕ್ಷೇತ್ರಕಾರ್ಯದಿಂದ ನಿಘಂಟಿಮಗಳನ್ನು ಸಂಗ್ರಹಿಸಿದ ನಂತರ ಅವುಗಳನ್ನು ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ಸಂಯೋಜಿಸಬೇಕಾಗುತ್ತದೆ. ಈ ಕ್ರಿಯೆ ಮೂರು ರೀತಿಯಾಗಿ ನಡೆಯುತ್ತದೆ.

- ಆಲೇಖಿಸುವುದು ಮತ್ತು ಪ್ರಧಾನ ಪದ ಗುರುತಿಸುವುದು
- ನಿಘಂಟಿಮಗಳ ಅರ್ಥ ಮತ್ತು ವೈವಿಧ್ಯತೆಯನ್ನು ಗುರುತಿಸುವುದು
- ನಿಘಂಟಿಮದ ವಿವರಣೆ ಕೊಡುವುದು

ಆಲೇಖಿಸುವುದು ಮತ್ತು ಪ್ರಧಾನ ಪದ ಗುರುತಿಸುವುದು

ನಿರೂಪಕರು ಉಚ್ಚರಿಸಿದ ಹಾಗೆ ನಿಘಂಟಿಮಗಳನ್ನು ಅಂತಾರಾಷ್ಟ್ರೀಯ ಧ್ವನಿಪಟ್ಟಿಯ ಸಂಕೇತಗಳ ಸಹಾಯದಿಂದ ಆಲೇಖಿಸಿಕೊಳ್ಳಬೇಕು. ನಿಘಂಟಿಮಗಳನ್ನು ಮೊದಲು ನೋಟ್‌ಬುಕ್‌ದಲ್ಲಿ ಪೆನ್ಸಿಲ್ (ಸೀಸ)ದ ಸಹಾಯದಿಂದ ಬರೆದಿಟ್ಟುಕೊಳ್ಳುವುದು ಉತ್ತಮ. ನಂತರ ಒಂದೊಂದು ದತ್ತಾಂಶದ ಬಗ್ಗೆ ಪ್ರತ್ಯೇಕವಾಗಿ ಕಾರ್ಡ್(ಪಟ್ಟಿ)ಗಳಲ್ಲಿ ಬರೆಯುತ್ತಾ ಹೋಗಬೇಕು.

ಅ. ನಂ	ಧ್ವನ್ಯಾಲೇಖ	ಧ್ವನಿಮಾಲೇಖ
1	[Mɔni]	/ Mani /
ಅ. ನಂ	ಧ್ವನ್ಯಾಲೇಖ	ಧ್ವನಿಮಾಲೇಖ
2	[Pʰin]	/ Pin /

ಸಾಂಪ್ರದಾಯಿಕ ಲಿಪಿಯಿಂದ ಬೇರ್ಪಡಿಸಿ ತೋರಿಸಲು ಧ್ವನ್ಯಾಲೇಖಕ್ಕೆ [ ] ಈ ರೀತಿ, ಧ್ವನಿಮಾಲೇಖಕ್ಕೆ / / ಈ ರೀತಿಯ ಗೆರೆಗಳನ್ನು ಉಪಯೋಗಿಸಬೇಕು. ಆ ಪಟ್ಟಿಗಳ ಹಿಂದೆ ಆ ಪದಗಳು ಎಷ್ಟುಸಾರಿ ಬಂದಿವೆ, ಎಂಬುದನ್ನು ರೋಮನ್ ಸಂಖ್ಯೆಯಲ್ಲಿ ಬರೆಯಬೇಕು. ಪಟ್ಟಿಗಳು ಸಾಮಾನ್ಯವಾಗಿ 5.5x3.5 ಅಥವಾ 4x6 ಅಳತೆಯುಲ್ಲಿರಬೇಕು. ಆ ಪಟ್ಟಿಯ ಹಿಂದೆ ದಾಖಲಿಸಿದ ಪದ/ವಾಕ್ಯ ಯಾವ ಆಕರದಿಂದ ತೆಗೆದುಕೊಂಡಿದ್ದೇವೆ ಎಂಬುದನ್ನು ಗುರುತಿಸಿಕೊಳ್ಳಬೇಕು.

ಶಬ್ದ	ಅರ್ಥ
ಆಕರ	ವಿಶೇಷಾಂಶ
ಪ್ರಯೋಗ	ಆವೃತ್ತಿ
(ಗ್ರಂಥ/ಆಡುನುಡಿ)	

ಈ ಅಂಶಗಳ ಹಿನ್ನೆಲೆಯಲ್ಲಿ ನಿಘಂಟಿಮಗಳ ಸ್ವರೂಪವನ್ನು ಗುರುತಿಸಬೇಕು. ನಿಘಂಟು ಸಿದ್ಧತೆಯಲ್ಲಿ ಪ್ರಧಾನ ಪದವನ್ನು ಕಲೆಹಾಕುವುದು ಬಹು ಮುಖ್ಯವಾದುದು. ಅದು ನಿಘಂಟಿಮದ ರೂಪ ವರ್ಗವನ್ನು ಸೂಚಿಸುತ್ತದೆಯಲ್ಲದೆ ಅದರ ಕೆಳಗೆ ಬರುವ ಇತರ ಮಾಹಿತಿಗಳಿಗೆ ಅದು ಆಧಾರವಾಗಿ ನಿಲ್ಲುತ್ತದೆ. ಪ್ರಧಾನ ಪದದ ನಂತರ ಅದರ ವ್ಯಾಕರಣ ಮಾಹಿತಿಯನ್ನು ನೀಡಬೇಕು. ಒಂದು ಭಾಷಾ ಸಮುದಾಯದಲ್ಲಿ ಹೆಚ್ಚು ಬಳಕೆಯಾಗುವ, ಹೆಚ್ಚು ಜನರು ಉಪಯೋಗಿಸುವ ರೂಪಗಳು ಪ್ರಧಾನಪದಗಳಾಗುತ್ತವೆ.[೧೮] ಪ್ರಧಾನ ಪದಗಳಲ್ಲಿರುವ ನಾಮಪದ, ಕ್ರಿಯಾಪದ, ವಿಶೇಷಣಗಳು ಮುಂತಾದ ವ್ಯಾಕರಣ ವರ್ಗಗಳಿಗೆ ಸಂಬಂಧಪಟ್ಟಂತೆ ಬಣ್ಣದ ಕಾರ್ಡುಗಳನ್ನು ಉಪಯೋಗಿಸುವುದು ಒಳ್ಳೆಯದು. ಮುಂದೆ ಕೋಶಕಾರನಿಗೆ ನಿಘಂಟಿಮಗಳನ್ನು ವರ್ಗೀಕರಿಸಲಿಕ್ಕೆ, ಸಂಯೋಜಿಸಲಿಕ್ಕೆ ಅನುಕೂಲವಾಗುತ್ತದೆ.

ನಿಘಂಟಿಮಗಳ ಅರ್ಥ ವೈವಿಧ್ಯತೆಯನ್ನು ಗುರುತಿಸುವುದು

ಇದು ನಿಘಂಟು ರಚನೆಯಲ್ಲಿ ಮುಖ್ಯವಾದ ಹಂತ. ಶಬ್ದಾರ್ಥವನ್ನು ತಿಳಿಸುವ ಕೆಲವು ಬೇರೆ ಬೇರೆ ಮಾರ್ಗಗಳಿವೆ.

೧. ವಿವರಿಸುವುದು ಮತ್ತು ಸೂತ್ರಪ್ರಾಯವಾಗಿ ನಿರೂಪಿಸುವುದು.

೨. ನಿಘಂಟಿನಲ್ಲಿರುವ ಇತರ ಶಬ್ದಗಳನ್ನು ಸಮಾನಾರ್ಥಕವಾಗಿ ಸೂಚಿಸುವುದು

೩. ಅರ್ಥ ಸ್ಪಷ್ಟತೆಗೆ ದೃಷ್ಟಾಂತಗಳನ್ನು ನೀಡುವುದು.

ಶಬ್ದಾರ್ಥ ಓದುಗರಿಗೆ ಸಂಪೂರ್ಣವಾಗಿ ತಿಳಿಯುವಂತಿರಬೇಕು.[೧೯] ಅರ್ಥ ನಿರ್ಧಾರ ವೆಂದರೆ ಆ ಶಬ್ದಕ್ಕೆ ಕವಿಗಳು, ವಿದ್ವಾಂಸರು ಹಾಗೂ ಜನತೆ ಮುಂತಾದವರು ಒಂದು ಶಬ್ದಕ್ಕೆ ಏನು ಅರ್ಥವಿದೆಯೆಂದು ತಿಳಿದು ಅರ್ಥವನ್ನು ಉಪಯೋಗಿಸಿದ್ದಾರೆಯೋ ಅದನ್ನು ನಿರ್ಧಾರವಾಗಿ ಹೇಳುವುದು ಎಂದು ಅರ್ಥ. ಇದರ ಅರ್ಥ ಹೀಗಿರಬೇಕು ಎಂದು ತೀರ್ಮಾನ ಮಾಡುವುದಲ್ಲ. ಸಮಾಜ ಸಂಸ್ಕೃತಿಕ ಸಂಬಂಧಿಸಿದ ಶಬ್ದಗಳು ಬಂದರೆ ಉದಾ-ಮೈಲಿಗೆ, ಸೂತಕ, ಸೀಮಂತ, ನೈವೇದ್ಯ, ಇವುಗಳ ವಿವರಣೆಯನ್ನು ಬಳಕೆ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ಕೊಡಬೇಕಾಗುತ್ತದೆ.

ಸಾಮಾಜಿಕ ಪರಿಸರಕ್ಕೆ ಅನುಗುಣವಾಗಿ ನಿಘಂಟಿಮಗಳು ಅರ್ಥ ವ್ಯತ್ಯಾಸ ಹೊಂದುತ್ತವೆ. ಒಂದು ಭಾಷೆಯಲ್ಲಿ ನಿಘಂಟಿಮಗಳನ್ನು ಬಳಸುವಾಗ ಅದಕ್ಕೆ ಬಾಹ್ಯ ಜಗತ್ತಿನಲ್ಲಿರುವ ವಸ್ತುಗಳೊಂದಿಗೆ ಸಂಬಂಧವಿರುತ್ತದೆ. ಅದು ನಿಘಂಟಿನ ನಿರ್ದೇಶಕಾರ್ಥ. ಒಂದು ವಸ್ತು ಇನ್ನೊಂದು ವಸ್ತುವಿಗಿಂತ ಭಿನ್ನವೆಂದು ತೋರಿಸುವ ಲಕ್ಷಣಗಳಿರುತ್ತವೆ. ಉದಾ 'ಹುಡುಗ' ಎಂದು ಹೇಳುವಲ್ಲಿ ಅದು ಹುಡಿಗಿಗಿಂತ ಭಿನ್ನವೆಂಬ ಅಂಶ ಇರುತ್ತದೆ, ನಿಘಂಟಿನಲ್ಲಿ ವಾಚ್ಯಾರ್ಥಕ್ಕಿಂತ ವಿಶೇಷಾರ್ಥವಿದ್ದರೆ ಅದು ಸೂಚ್ಯಾರ್ಥ. ಉದಾ-ಸಾಯು,

ದೈವಾಧೀನನಾಗು, ಕೈಲಾಸವಾಸಿಯಾಗು, ಲಿಂಗೈಕ್ಯನಾಗು, ವೈಕುಂಠವಾಸಿ ಎಂಬ ರೂಪಗಳ ವಾಚ್ಯಾರ್ಥ ಒಂದೇ ಆದರೂ ಜೊತೆಗೆ ವಿಶೇಷ ಅರ್ಥಗಳೂ ಅವುಗಳಿಗಿವೆ. ನಿರ್ದೇಶಕಾರ್ಥಗಳಿಗಿಂತ ಈ ಸೂಚ್ಯಾರ್ಥಗಳು ಕಾಲ, ಪ್ರದೇಶ ಹಾಗೂ ಸಾಮಾಜಿಕ ಗುಂಪುಗಳನ್ನವಲಂಬಿಸಿ ಬದಲಾಗುತ್ತವೆ. ನಿಘಂಟಿಮಗಳ ಬಳಕೆಯನ್ನವಲಂಬಿಸಿ ಅದರ ಅರ್ಥ ವ್ಯಾಪ್ತಿ ಇರುತ್ತದೆ. ಕನ್ನಡದಲ್ಲಿ 'ಕಾಣಿಕೆ' ಹಾಗೂ 'ಪ್ರಸಾದ' ಇವುಗಳಿಗೆ ನಿರ್ದೇಶಕಾರ್ಥ ಒಂದೇ ಆದರೂ 'ಪ್ರಸಾದ' ಎಂಬ ರೂಪ ದೇವರ ಸಂದರ್ಭದಲ್ಲಿ, 'ಕಾಣಿಕೆ'ಎಂಬ ರೂಪ ಇತರ ಸಂದರ್ಭದಲ್ಲಿ ಬಳಕೆಯಾಗುತ್ತದೆ.

ಭಾಷೆಗಳಲ್ಲಿ ಮೂಲಭೂತವೆನಿಸಿದ ಶಬ್ದಗಳಿಗೂ ಅರ್ಥವನ್ನು ವಿವರಿಸುವುದು ಸುಲಭದ ಕೆಲಸವಲ್ಲ. ಅಂತಹ ಪದಗಳಿಗೂ ಪ್ರಾದೇಶಿಕ ನುಡಿಗಳಲ್ಲಿ ಗಣನೀಯವಾದ ಅರ್ಥ ಭೇದಗಳಿರುತ್ತವೆ. ಉದಾ-'ತಲೆ' ಎನ್ನುವ ಅರ್ಥವನ್ನು ಸೂಚಿಸುವ ಕನ್ನಡ ಶಬ್ದ ಕೆಲವು ಸೀಮಿತ ಸಂದರ್ಭಗಳಲ್ಲಿ ಮಾತ್ರ ತಲೆ ಎಂಬರ್ಥದಲ್ಲಿ ಪ್ರಯೋಗವಾಗುತ್ತದೆ. ಇತರ ಹೆಚ್ಚಿನ ಸಂದರ್ಭಗಳಲ್ಲಿ ಕೂದಲು, ತಲೆಮಾರು, ಬುದ್ಧಿಶಕ್ತಿ, ತುದಿ, ವ್ಯಕ್ತಿ, ಗಮನ ಮುಂತಾದ ಅರ್ಥಗಳನ್ನು ಸೂಚಿಸುತ್ತದೆ. ಇಂತಹ ಹಲವಾರು ಶಬ್ದಗಳಿಗೆ ಅರ್ಥ ಭೇದಗಳಿವೆ. ಒಂದು ಪದಕ್ಕೆ ಒಂದು ಪ್ರದೇಶದಲ್ಲಿ ಒಂದು ರೀತಿಯ ಅರ್ಥಗಳಿದ್ದರೆ, ಇನ್ನೊಂದು ಪ್ರದೇಶದಲ್ಲಿ ಅದೇ ಪದಕ್ಕೆ ಇನ್ನೊಂದು ರೀತಿಯ ಅರ್ಥಗಳಿರುವುದೂ ಸಾಧ್ಯವಿದೆ. ಉದಾ-ಕನ್ನಡದಲ್ಲಿ ತಿಂಡಿ ಎಂಬ ಪದಕ್ಕೆ ತಿನಿಸು, ಉಪಹಾರ ಎನ್ನುವ ಅರ್ಥ ಒಂದು ಪ್ರದೇಶದಲ್ಲಿದ್ದರೆ ಇನ್ನೊಂದು ಪ್ರದೇಶದಲ್ಲಿಬೆದೆ, ತುರಿಸು ಎನ್ನುವ ಅರ್ಥವಿದೆ. ಪ್ರದೇಶ ಭೇದದಿಂದ ಅರ್ಥ ವ್ಯತ್ಯಾಸವಾಗುವುದು. ಪ್ರಾದೇಶಿಕ ಉಪಭಾಷೆಗಳ ಪರಿವೀಕ್ಷಣೆ ಇಂತಹ ಸಂದರ್ಭಗಳಲ್ಲಿ ಕೋಶಕಾರನಿಗೆ ಬಹಳ ಮುಖ್ಯ. ಕೋಶಕಾರ ಒಂದು ಪದಕ್ಕಿರುವ ಗೌಣಾರ್ಥ, ಸಾದೃಶ್ಯಾರ್ಥ, ಸಂದರ್ಭಾರ್ಥ, ಸೂಚ್ಯಾರ್ಥ, ಅಲಂಕಾರಿಕಾರ್ಥ, ನಿಂದ್ಯಾರ್ಥ, ಸಾಂಕೇತಿಕಾರ್ಥಗಳಲ್ಲಿ ಯಾವುದನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಉಪಭಾಷಾ ಸಾಮಗ್ರಿಗಳಲ್ಲಿ ಕೋಶಕಾರರಿಗೆ ಸಾಧಿತ ಪದಗಳು, ನುಡಿಗಟ್ಟುಗಳು ಸಿಕ್ಕುತ್ತವೆ. ಅವುಗಳಲ್ಲಿ ಸಂಸ್ಕೃತಿ, ಸಮಾಜ, ವೃತ್ತಿಗಳಿಗೆ ಸಂಬಂಧಿಸಿದ ಅರ್ಥ ವಿಶೇಷಗಳು ಅಭಿವ್ಯಕ್ತಗೊಳ್ಳುತ್ತವೆ. ಉದಾ; ಕನ್ನಡದ ಅಕ್ಕಿ ಇದಕ್ಕೆ ಸಂಬಂಧಿಸಿದಂತೆ ಉಡಿಯಕ್ಕಿ, ಹಿಟ್ಟಕ್ಕಿ ಮುಂತಾದ ಪದಪುಂಜಗಳು ಬೇರೆ ಬೇರೆ ಸಾಂಸ್ಕೃತಿಕ ಸಂದರ್ಭಗಳಲ್ಲಿ ದೊರೆಯುತ್ತವೆ. ಕೋಶಕಾರ ಅವುಗಳನ್ನು ಗಮನಿಸಬೇಕಾಗುತ್ತದೆ.

ಭಾಷೆಯಲ್ಲಿ ಹಲವಾರು ಪದಸಮುಚ್ಚಯಗಳಿರುತ್ತವೆ. ಹಸಿಗಡಿಗೆ, ಅಡಕಲುಗಡಿಗೆ ಇವು ಸಮಾಸಗಳಲ್ಲ ಒಂದೇ ರೀತಿಯಲ್ಲಿ ಬರಬಹುದಾದ ಸಾಮಾನ್ಯ ಪದಪುಂಜಗಳೂ ಅಲ್ಲ. ಇಂತಹ ಸಮುಚ್ಚಯಗಳು ನಿಘಂಟಿಮಗಳ ನಿಗದಿತ ಸಂಯೋಜನೆಯಿಂದ ಉಂಟಾಗುತ್ತವೆ. ಇವುಗಳನ್ನು ನಿಘಂಟಿನಲ್ಲಿ ಸೂಚಿಸಬೇಕು. ನುಡಿಗಟ್ಟುಗಳು ಒಂದು ಬಗೆಯ ನಿಘಂಟಿಮಗಳ ಸಂಯೋಜನೆಯೇ ಸರಿ. ನುಡಿಗಟ್ಟಿನ ಘಟಕಗಳ

ಅರ್ಥಗಳಿಗಿಂತ ನುಡಿಗಟ್ಟಿನ ಅರ್ಥ ಭಿನ್ನವಾಗಿರುತ್ತದೆ. ಉದಾ-ಕಾಲಿಗೆ ಬುದ್ಧಿ ಹೇಳು- ಪಲಾಯನ ಮಾಡು, ಕಿವಿಕಚ್ಚು-ಚಾಡಿಹೇಳು ಮುಂತಾದವು. ಇದೇ ರೀತಿಯಲ್ಲಿ ಬೃಹತ್ ನಿಘಂಟುಗಳ ಉದ್ಧರಣೆಗಳನ್ನು, ಸೂಕ್ತಿಗಳನ್ನು, ಗಾದೆಗಳನ್ನು ನಿಘಂಟಿಮಗಳೆಂದು ಪರಿಗಣಿಸಬಹುದು.

ನಿಘಂಟಿಮದ ವ್ಯಾಖ್ಯೆಯನ್ನು ಓದುವಾಗ ಅದು ಸಾಮಾನ್ಯ ಭಾಷಿಕನಿಗೆ ಸುಲಭವಾಗಿ ಅರ್ಥವಾಗುವಂತಿರಬೇಕು. ಉದಾ-ಆನೆ: 'ಮೊರದಂತೆ ದೊಡ್ಡದಾದ ಕಿವಿಗಳಿರುವ, ಕಂಬದಂತೆ ಕಾಲುಗಳಿರುವ ಪ್ರಾಣಿಗಳಲ್ಲೆಲ್ಲ ದೊಡ್ಡದಾದ ಪ್ರಾಣಿ' ಎಂದು ಹೇಳಬೇಕೇ ವಿನಃ 'ದೊಡ್ಡ ಪ್ರಾಣಿ' ಎಂಬ ವ್ಯಾಖ್ಯೆಯನ್ನು ಕೊಡುವುದು ಅಲ್ಲ. 'ಕಹಿ' ಎನ್ನುವ ಶಬ್ದಕ್ಕೆ ಎಷ್ಟು ವಿವರಣೆ ಕೊಟ್ಟರೂ 'ಬೇವಿನ ಎಲೆಯನ್ನಾಗಲಿ, ಕಾಯನ್ನಾಗಲಿ ಬಾಯಲ್ಲಿ ಅಗಿದಾಗ ನಾಲಗೆಗೆ ಕಂಡುಬರುವ ಒಂದು ರುಚಿ' ಎಂದು ಹೇಳಿದಷ್ಟು ಅರ್ಥ ಸ್ಪಷ್ಟವಾಗುವುದಿಲ್ಲ. ನಿಘಂಟುಕಾರರು ಇಂಥ ಉಪಾಯಗಳನ್ನೆಲ್ಲ ಉಪಯೋಗಿಸಬೇಕಾಗುತ್ತದೆ.

ನಿಘಂಟುಗಳಲ್ಲಿ ನಿಘಂಟಿಮಗಳ ಸಮನಾರ್ಥಕ ರೂಪಗಳನ್ನು ಕೊಡುವುದು ತುಂಬ ಅವಶ್ಯಕ.[೨೦] ಅವುಗಳನ್ನು ನಿಘಂಟಿಮಾತ್ಮಕ ವ್ಯಾಖ್ಯೆಯನ್ನು ಕೊಟ್ಟ ಬಳಿಕ ಕೊಡಬಹುದು. ಉದಾ; ಹೊಲ-ವ್ಯವಸಾಯಕ್ಕೆ ಬಳಸುವ, ಮಣ್ಣಿನಿಂದ ಕೂಡಿದ ಪ್ರದೇಶ. ಗದ್ದೆ; ಭೂಮಿ; ನೆಲ. ಈ ರೀತಿ ಸಮಾನಾರ್ಥಕ ರೂಪಗಳನ್ನು ಕೊಡುವುದರಿಂದ ನಿಘಂಟಿಮದ ಅರ್ಥವ್ಯಾಪ್ತಿ ಸ್ಫುಟಗೊಳ್ಳುತ್ತದೆಯಲ್ಲದೇ ನಿಘಂಟು ಬಳಸುವವರಿಗೆ ತಮಗೆ ಬೇಕಾದ ಅರ್ಥವನ್ನು ಆರಿಸಿಕೊಳ್ಳುವುದು ಸುಲಭ ಸಾಧ್ಯವಾಗುತ್ತದೆ. ಸಮಾನಾರ್ಥಕ ರೂಪಗಳಂತೆ ಅನೇಕಾರ್ಥ ರೂಪಗಳನ್ನು ನಿಘಂಟುಗಳಲ್ಲಿ ಕೊಡಬೇಕು.[೨೧] ಅನೇಕಾರ್ಥಗಳಲ್ಲಿ ಅರ್ಥ ಭಿನ್ನತೆ ಇರುವುದರಿಂದ ಭಿನ್ನ ನಿಘಂಟಿಮಗಳೆಂದು ಪರಿಗಣಿಸಲಾಗುತ್ತದೆ. ಉದಾ ;

ಕಲೆ ; ಲಲಿತವಿದ್ಯೆ

ಕಲೆ ; ಗುರುತು

ಅಲೆ ; ತಿರುಗಾಡು

ಅಲೆ ; ತೆರೆ, ತರಂಗ

ಕೋಶಕಾರ ಆಯಾ ಶಬ್ದಗಳ ಮೂಲವನ್ನು, ಬೇರೆ ಬೇರೆ ಸಂದರ್ಭದಲ್ಲಿ ಅದು ಕೊಡುವ ಅರ್ಥ ಛಾಯೆಯನ್ನು ಗಮನಿಸಿ ಬೇರೆ ಬೇರೆಯಾಗಿ ನಿರೂಪಿಸಬೇಕು.

ನಿಘಂಟಿಮದ ವಿವರಣೆ ಕೊಡುವುದು :

'ನಿಘಂಟಿಮದ ವಿವರಣೆ ಅದರ ಅರ್ಥದಷ್ಟೇ ಪ್ರಮುಖ ಪಾತ್ರ ವಹಿಸುತ್ತದೆ. ಸೂಚಿಸಲಾದ ನಿಘಂಟಿಮದ ಸ್ವರೂಪವೇನು? ಅದು ಭಾವನಾತ್ಮಕವೇ ಆಡುಮಾತಿಗೆ ಸೇರಿದ್ದೇ, ಪ್ರಾದೇಶಿಕ ರೂಪವೇ, ಪ್ರಾಚೀನ

ರೂಪವೇ, ಪಾರಿಭಾಷಿಕ ಪದವೇ ಈ ಮೊದಲಾದ ವಿವರಗಳನ್ನು ನಿಘಂಟಿಮದ ಜೊತೆಯಲ್ಲಿಯೇ ನಮೂದಿಸಬೇಕು.[೨೨] ಅವನ್ನು ಹೆಚ್ಚಾಗಿ ಸಂಕ್ಷಿಪ್ತ ರೂಪದಲ್ಲಿ ಸೂಚಿಸುತ್ತಾರೆ.

ಉದಾ -

ಗ್ರಾಂ. (= ಗ್ರಾಂಥಿಕ)

ಆ.ಮಾ. (= ಆಡುಮಾತು)

ಗ್ರಾ. (=ಗ್ರಾಮ್ಯ)

ಪ್ರಾ.ರೂ. (= ಪ್ರಾಚೀನ ರೂಪ)

ಸ. ಶಾ. (= ಸಸ್ಯಶಾಸ್ತ್ರ)

ಪ್ರಾ. ಶಾ. (=ಪ್ರಾಣಿಶಾಸ್ತ್ರ)

ವಿದ್ವಾಂಸರು ಒಪ್ಪಿಕೊಂಡ ರೂಪಗಳನ್ನೇ ಈ ವಿವರ ಕೊಡಲು ಬಳಸಬೇಕೇ ವಿನಃ ಮನಸ್ಸಿಗೆ ಬಂದಂತೆ ಅವುಗಳನ್ನು ಬದಲಾಯಿಸಿಕೊಳ್ಳಬಾರದು. ಸಾಧಿತ ರೂಪಗಳನ್ನು ನಿಘಂಟಿಮಗಳನ್ನಾಗಿ ಆರಿಸಿಕೊಳ್ಳಬಹುದು. ಆದರೆ ಆಗ ಅವುಗಳ ಮೂಲ ರೂಪಗಳನ್ನು ಅಲ್ಲಿಯೇ ಸೂಚಿಸಬೇಕು. ಹುಡುಗು (<ಹುಡಿಗಿ) ಇತ್ಯಾದಿ. ನಿಘಂಟಿನಲ್ಲಿ ನಿಘಂಟಿಮಗಳ ಪ್ರಯೋಗಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವುದು ಬಹುಮುಖ್ಯ. 'ಒಂದು ನಿಘಂಟಿಗೆಂದು ಗ್ರಂಥಗಳಿಂದ, ಶಾಸನಗಳಿಂದ, ಆಡುನುಡಿಗಳಿಂದ ಸಾವಿರಾರು ನಿಘಂಟಿಮಗಳನ್ನು ಸಂಗ್ರಹಿಸಿರುತ್ತಾರೆ. ಅವುಗಳು ಅಕಾರಾದಿಯಾಗಿ ಜೋಡಣೆಗೊಂಡಾಗ ಒಂದೊಂದು ಶಬ್ದಕ್ಕೆ ನೂರಾರು ಪಟ್ಟಿಕೆಗಳು ದೊರಕಬಹುದು. ಪರ್ಯಾಯರೂಪಗಳ ಪಟ್ಟಿಕೆಗಳನ್ನು ಒಟ್ಟು ಸೇರಿಸಿದರೆ ಅವು ಇನ್ನೂ ಹೆಚ್ಚಬಹುದು. ನಿಘಂಟಿನಲ್ಲಿ ಅವುಗಳೆಲ್ಲವನ್ನೂ ಉಲ್ಲೇಖಮಾಡುವುದು ಅಸಾಧ್ಯದ ಕೆಲಸ. ಆದರೆ ಎಲ್ಲ ಪಟ್ಟಿಕೆಗಳ ಪ್ರಯೋಜನವನ್ನು ನಾವು ಪಡೆಯುತ್ತೇವೆ. ಆದುದರಿಂದ ಒಂದು ಶಬ್ದಕ್ಕೆ ಎಷ್ಟು ಅರ್ಥಗಳಿವೆ ಎಂಬುದನ್ನು ಮೊದಲು ನಿರ್ಧರಿಸಿ ಅವುಗಳನ್ನು ತಾರ್ಕಿಕವಾದ ಕ್ರಮದಲ್ಲಿ ಅಳವಡಿಸಬೇಕು. ಪ್ರತಿಯೊಂದು ಪರ್ಯಾಯ ರೂಪಕ್ಕೂ ಇರುವ ಪಟ್ಟಿಕೆಗಳನ್ನು ಆ ಬಳಿಕ ಕಾಲಕ್ರಮದಲ್ಲಿ ಜೋಡಿಸಬೇಕು. ನಂತರ ಒಂದೊಂದು ಶತಮಾನಕ್ಕೆ ಒಂದರಂತೆ ಪ್ರಯೋಗಗಳನ್ನು ಆರಿಸಬೇಕು. ಪ್ರತಿಯೊಂದು ಪರ್ಯಾಯ ರೂಪಕ್ಕೂ ಶತಮಾನಗಳ ಅನುಸಾರವಾಗಿ ಪಟ್ಟಿಕೆಗಳನ್ನು ಜೋಡಿಸಬೇಕು. ಪಟ್ಟಿಕೆಗಳನ್ನು ಜೋಡಿಸುವಾಗ ಕೋಶಕಾರ ಗಣಕಯಂತ್ರವನ್ನು ಬಳಸಿದರೆ ಸಮಯ ಉಳಿತಾಯವಾಗುವುದಲ್ಲದೆ ಕೆಲಸವು ಅಚ್ಚುಕಟ್ಟಾಗುತ್ತದೆ.

ನಿಘಂಟಿಮಗಳನ್ನು ಕೊಡುವಾಗ ಅನುಸರಿಸಬೇಕಾದ ಸೂತ್ರಗಳ ಬಗೆಗೆ ತುಳು ನಿಘಂಟು ಯೋಜನೆಯ ಪ್ರಧಾನ ಸಂಪಾದಕರು ತುಂಬ ಮೌಲಿಕ ವಿಚಾರಗಳನ್ನು ಹೇಳಿದ್ದಾರೆ[೨೩]. ಅವು ಇಂತಿವೆ.

೧. ಶಬ್ದವನ್ನು ಮೊದಲು ಕನ್ನಡ ಲಿಪಿಯಲ್ಲಿಯೂ, ಆಮೇಲೆ ಅಂತಾರಾಷ್ಟ್ರೀಯ ಧ್ವನಿ ಲಿಪಿಯ ಆಧಾರದ ಮೇಲೆ ಅಳವಡಿಸಿಕೊಂಡು ರೋಮನ್ ಲಿಪಿಯಲ್ಲಿಯೂ ಕೊಡುವುದು.

೨. ಶಬ್ದದ ಕೊನೆಯಲ್ಲಿ ಆ ಶಬ್ದ ಯಾವ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳಲ್ಲಿ ಅಥವಾ ಜನಪದ ಸಾಹಿತ್ಯದಲ್ಲಿ ಕಂಡುಬರುತ್ತದೆ, ಯಾವ ಲಿಪಿ ಮೂಲದಲ್ಲಿ ಕಂಡುಬರುತ್ತದೆ ಎಂದು ಸಂಕೇತಾಕ್ಷರದ ಮೂಲಕ ತಿಳಿಸುವುದು.

೩. ಆ ಶಬ್ದಕ್ಕೆ ಸಂವಾದಿಯಾಗಿ ಇತರ ಆಡುನುಡಿಗಳಲ್ಲಿ ಕಂಡುಬರುವ ಪದಗಳನ್ನು ಉಲ್ಲೇಖಿಸುವುದು.

೪. ಅಂತಾರಾಷ್ಟ್ರೀಯ ಲಿಪಿಸಂಕೇತದಲ್ಲಿ (ಪರಿಷ್ಕೃತ ರೋಮನ್ ಲಿಪಿಯಲ್ಲಿ) ನಿಘಂಟು ರಚನೆಮಾಡುವ ಭಾಷೆಯ ಧ್ವನಿಮಾಗಳನ್ನು ಮಾತ್ರ ಸೂಚಿಸುವ ಸಂಕೇತಗಳನ್ನು ಬಳಸಿಕೊಳ್ಳುವುದು.

೫. ಬೇರೆ ಬೇರೆ ಆಡುನುಡಿಗಳಲ್ಲಿ ಬಳಕೆಯಲ್ಲಿರುವ ಬೇರೆ ಬೇರೆ ರೂಪಗಳೆಲ್ಲವನ್ನು ಅಕಾರಾದಿ ಪಟ್ಟಿಯಲ್ಲಿ ಸೇರಿಸುವುದು. ಆದರೆ ಒಂದು ಕಡೆಮಾತ್ರ ಆ ಶಬ್ದದ ಅರ್ಥ ಮತ್ತು ಅದರ ವಿವಿಧ ಪ್ರಯೋಗಗಳನ್ನು ತೋರಿಸಿ ಬೇರೆ ಕಡೆ ವಿಸ್ತಾರವಾಗಿ ವಿವರಿಸಿದ ಉಲ್ಲೇಖಗಳನ್ನು 'ನೋಡಿ' ಎಂದು ಸೂಚಿಸುವುದು.

೬. ಸಾಮಾನ್ಯವಾಗಿ ಮೂಲ ತುಳುವಿಗೆ ಸಮೀಪವೆಂದು ಕಂಡುಬಂದ ರೂಪವನ್ನು ಅಕಾರಾದಿಯಲ್ಲಿ ಕೊಡುವಾಗ ಅದರ ಅರ್ಥ ವಿವರಣೆಗಳನ್ನು ಕೊಟ್ಟು ಮೂಲರೂಪ ಬೇರೆ ಬೇರೆ ಆಡುನುಡಿಗಳಲ್ಲಿ ಬೇರೆ ಬೇರೆ ರೀತಿ ವ್ಯತ್ಯಾಸಗೊಂಡಾಗ ಹೆಚ್ಚಿನ ಪ್ರದೇಶದಲ್ಲಿ ಬಳಕೆಯಲ್ಲಿರುವ ಸಾಮಾನ್ಯ ತುಳು ಪ್ರಭೇದದ ಶಬ್ದವನ್ನು ಕೊಡುವಾಗ ಅರ್ಥ ವಿವರಣೆ ಕೊಟ್ಟು ಇತರ ಕಡೆಗಳಲ್ಲಿ ಉಲ್ಲೇಖಕ್ಕೆ ಸೂಚನೆ ಕೊಡುವುದು. ವಿಶಿಷ್ಟ ಗಾದೆ, ಪ್ರಯೋಗ, ಉಕ್ತಿಗಳನ್ನು ಕೊಡುವಾಗಲೂ ಸಾಮಾನ್ಯ ಪ್ರಭೇದವನ್ನೇ ಬಳಸಿಕೊಳ್ಳುವುದು.

೭. ವಿವಿಧ ಪ್ರಭೇದಗಳಲ್ಲಿ ಕಂಡುಬರುವ ರೂಪಗಳನ್ನು ಸೂಚಿಸಿದ ಮೇಲೆ ಆ ಶಬ್ದದ ವ್ಯಾಕರಣ ಸಂಜ್ಞೆಯನ್ನು n, Va, Vn, Adj.ಮುಂತಾದ ಸಂಕೇತಗಳಿಂದ ಸೂಚಿಸುವುದು. ಮೂಲಧಾತು ಪ್ರತ್ಯಯಗಳೊಂದಿಗೆ ಸೇರಿದಾಗ ರೂಪ ಭೇದ ಹೊಂದಿದ್ದರೆ ಅದನ್ನೂ ಸೂಚಿಸುವುದು.

೮. ಶಬ್ದದ ವಿವಿಧ ಅರ್ಥ ಪ್ರಕಾರಗಳನ್ನು ೧.೨.೩ ಮುಂತಾದ ಸಂಖ್ಯೆಗಳೊಂದಿಗೆ ಕನ್ನಡ ಮತ್ತು ಇಂಗ್ಲ ಭಾಷೆಯಲ್ಲಿ ನಿರೂಪಿಸುವುದು.

೯. ಆ ಮೂಲಪದದಿಂದ ಸಾಧಿತವಾದ ಶಬ್ದಗಳನ್ನು ಸಮಸ್ತ ಪದಗಳನ್ನು ಉಲ್ಲೇಖಿಸಿ ಕನ್ನಡ ಮತ್ತು ಇಂಗ್ಲ ಭಾಷೆಯಲ್ಲಿ ಅವುಗಳ ಅರ್ಥವನ್ನು ವಿವರಿಸುವುದು ಮತ್ತು ಆ ಪದದ ಪ್ರಯೋಗ ವೈಶಿಷ್ಟ್ಯಗಳನ್ನು ಸೂಚಿಸುವಂತಹ ವಾಕ್ಯಾಂಶಗಳನ್ನು ಅವುಗಳ ಅರ್ಥಗಳನ್ನೂ ಲಿಖಿತ ಸಾಹಿತ್ಯದಿಂದ ತೆಗೆದ ಉದ್ಧರಣೆಗಳನ್ನೂ ಕೊಡುವುದು.

೧೦. ಆ ಪದವನ್ನು ಬಳಸಿಕೊಂಡು ಉಪಯೋಗಿಸುವ ಗಾದೆಮಾತುಗಳನ್ನು ವಿಶಿಷ್ಟ ಹೇಳಿಕೆಗಳನ್ನು ಉಲ್ಲೇಖಿಸುವುದು. ಅವುಗಳ ಅರ್ಥ ಕೊಡುವಾಗ ಕನ್ನಡದಲ್ಲಿ ತುಳುರೂಪಗಳ ಸರಳಾನುವಾದವನ್ನು ಕೊಡುವುದು.

೧೧. ತೌಲನಿಕ ಅಧ್ಯಯನಕ್ಕೆ ಸಹಾಯಕವಾಗುವಂತೆ ಇತರ ದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಜ್ಞಾತಿ ಪದಗಳನ್ನು ಕೊಡುವುದು.

೧೨. ಶಬ್ದವು ಸಂಸ್ಕೃತ, ಅರಾಬಿಕ್, ಆಂಗ್ಲ ಇತ್ಯಾದಿ ಭಾಷೆಗಳಿಂದ ಎರವಲು ಪಡೆದಿದ್ದಾದರೆ ಅದರ ಮೂಲ ಭಾಷೆಯನ್ನು ಸೂಚಿಸಿ ಮೂಲರೂಪವನ್ನು ಉಲ್ಲೇಖಿಸುವುದು.

೧೩. ಸಮಸ್ತ ಪದಗಳು ಸ್ವತಂತ್ರ ಶಬ್ದಗಳಾಗಿ ಬಂದಾಗ ಪ್ರತ್ಯೇಕವಾಗಿ ಉಲ್ಲೇಖ ಮಾಡುವುದು.

೧೪. ಪಾಡ್ದನಗಳಲ್ಲಿ (ಜನಪದ ಸಾಹಿತ್ಯ) ಕಂಡುಬರುವ ವಿಶಿಷ್ಟ ಪದಗಳನ್ನು ವಿವರಿಸುವಾಗ ಅವುಗಳ ಉಪಯೋಗಗಳನ್ನು ಮೂಲ ಪಾಡ್ದನಗಳಿಂದ ಉದ್ಧರಿಸಿ ಕೊಡುವುದು.

೧೫. ವ್ಯಾಕರಣ ಪ್ರತ್ಯಯಗಳನ್ನು ಪ್ರತ್ಯೇಕವಾಗಿ ಉಲ್ಲೇಖಿಸುವುದು.

೧೬. ಎರಡು ಶಬ್ದಗಳ ರೂಪ ಒಂದೇ ಆಗಿದ್ದರೂ ಅರ್ಥ ಬೇರೆ ಬೇರೆಯಾಗಿದ್ದರೆ ಅವುಗಳನ್ನು ಪ್ರತ್ಯೇಕವಾಗಿ ಉಲ್ಲೇಖಿಸುವುದು.

೧೭. ತುಂಬಿಲ, ಕೋಲ ಮುಂತಾದ ವಿಶಿಷ್ಟ ಧಾರ್ಮಿಕ ಕರ್ಮಗಳ ಅರ್ಥ ಕೊಡುವಾಗ ಆ ಕ್ರಿಯೆಗಳ ಸಂಕ್ಷಿಪ್ತ ವಿವರಣೆ ನೀಡುವುದು.

೧೮. ತುಳುನಾಡಿನ ಅಥವಾ ನಿಘಂಟನ್ನು ರಚನೆ ಮಾಡುವ ಪ್ರದೇಶದ ವಿಶಿಷ್ಟ ವ್ಯಕ್ತಿನಾಮಗಳನ್ನೂ, ಕುಟುಂಬನಾಮಗಳನ್ನು, ಹಬ್ಬ ಹರಿದಿನಗಳ ಹೆಸರುಗಳನ್ನು ಉಲ್ಲೇಖಿಸುವುದು.

೧೯. ಸ್ಥಳನಾಮಗಳನ್ನು ಸೂಚಿಸುವ ಘಟಕಗಳನ್ನು ಮಾತ್ರ ಕೊಟ್ಟು ಆ ಘಟಕಗಳಿಂದ ಪ್ರಾರಂಭವಾಗುವ ಅಥವಾ ಕೊನೆಗೊಳ್ಳುವ ಸ್ಥಳನಾಮಗಳನ್ನು ಉದಾಹರಣೆಗಾಗಿ ಕೊಡುವುದು.

ಪದಗಳನ್ನು ಸಂಗ್ರಹಿಸಿದ ನಂತರ ಪಟ್ಟಿಗಿಳಿಸುವ ಹಾಗೂ ಅವುಗಳನ್ನು ವಿಷಯುಗಳಿಗನುಸಾರವಾಗಿ ವರ್ಗೀಕರಣ ಮಾಡುವ ಕಾರ್ಯ ನಡೆಯಬೇಕು. ಪ್ರತಿಯೊಂದು ಶಬ್ದದ ಪ್ರಾದೇಶಿಕ ಹಾಗೂ ಸಾಮಾಜಿಕ ಪ್ರಭೇದಗಳ ರೂಪಗಳನ್ನು ಒಂದೆಡೆ ಕಲೆಹಾಕಿ ಒಂದು ನಿಶ್ಚಿತ ಸರಣಿಯಲ್ಲಿ ಅವುಗಳನ್ನು ಬರೆದಿಡಬೇಕು.

ಒಂದು ಭಾಷೆಯ ಸ್ವರೂಪ, ಬೆಳವಣಿಗೆ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ಅವಲಂಬಿಸಿ ಆ ಭಾಷೆಯ ನಿಘಂಟು ರಚನೆಯ ಯೋಜನೆಯನ್ನು ರೂಪಿಸಿಕೊಳ್ಳಬೇಕು. ಅದಕ್ಕೆ ಸಂಪಾದಕ ಮಂಡಳಿ ಇರಬೇಕು. ಪ್ರಧಾನ ಸಂಪಾದಕರು, ಸಲಹಾ ಸಮಿತಿ ಇರಬೇಕು. ತಿಂಗಳಿಗೊಮ್ಮೆ ಯಾದರು ಅವರು ಒಂದೆಡೆ

ಸಭೆಸೇರಿ ನಿಘಂಟಿಮಗಳ ರೂಪ, ಅರ್ಥ ಹಾಗೂ ಇತರ ವಿಷಯಗಳ ಬಗೆಗೆ ಚರ್ಚಿಸಬೇಕು. ಪೂರ್ವ ಸಿದ್ಧತೆಯ ಮಾಡಿ ಸಂಪಾದಕ ಮಂಡಳಿ ಮುಕ್ತವಾಗಿ ಚರ್ಚಿಸಿದಾಗ ಕೋಶದಲ್ಲಿ ನುಸುಳಬಹುದಾದ ದೋಷಗಳು ನಿವಾರಣೆಯಾಗುತ್ತವೆ. ಕರಡು ಪ್ರತಿ ತಿದ್ದುವಲ್ಲಿ ವಿಶೇಷ ನಿಗಾವಹಿಸಬೇಕು. ನಿರೂಪಕರು, ಸಂಪಾದಕ ಮಂಡಳಿ ಎಲ್ಲರೂ ಏಕಾಗ್ರತೆಯಿಂದ ದುಡಿದಾಗ ಸಿಗುವ ಆನಂದವೇ ನಿಘಂಟುಕಾರನಿಗೆ ದೊರಕುವ ಪ್ರಯೋಜನ.

ನಿಘಂಟನ್ನು ರಚಿಸುವ ಕೋಶಕಾರರಿಗೆ ಕೆಲವು ಅರ್ಹತೆಗಳು ಇರಬೇಕಾಗುತ್ತವೆ. ಮುಖ್ಯವಾಗಿ ಕೋಶಕಾರನಿಗೆ ಕೋಶ ರಚಿಸುವ ಭಾಷೆಯ ಮೇಲೆ ಪ್ರಭುತ್ವ, ಸ್ಥೂಲ ಪರಿಚಯ ಇರಬೇಕು. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವ ಸಾಮರ್ಥ್ಯ ಇರಬೇಕು. ನಿಘಂಟುಕಾರನು ಉತ್ತಮ ನಿಘಂಟಿಗೂ ಸಾಮಾನ್ಯ ನಿಘಂಟುಗಳಿಗೂ ಇರುವ ವ್ಯತ್ಯಾಸವನ್ನು ಕೂಡಲೇ ಗುರುತಿಸುವವನಾಗಿರಬೇಕು. ನಿಘಂಟುಶಾಸ್ತ್ರದ ಮೂಲತತ್ವಗಳನ್ನು ಆತ ಚೆನ್ನಾಗಿ ಕರಗತಮಾಡಿಕೊಂಡಿರಬೇಕು. ನಿಘಂಟಿಮಗಳ ಸ್ಖಾಲಿತ್ಯಗಳನ್ನು ಸರಿಪಡಿಸಲಿಕ್ಕೆ ಕೋಶಕಾರನಿಗೆ ಗ್ರಂಥ ಸಂಪಾದನೆಯ ಶಾಸ್ತ್ರ, ಭಾಷಾ ಶಾಸ್ತ್ರದಲ್ಲಿ ಪ್ರಾವೀಣ್ಯತೆ ಪಡೆದಿರಬೇಕು. ನಿಘಂಟು ಶಾಸ್ತ್ರದ ತತ್ವಗಳನ್ನು ಪ್ರಾಯೋಗಿಕ ರೂಪಕ್ಕೆ ತರುವುದೇ ನಿಘಂಟು ರಚನೆಯಾಗಿರುವುದರಿಂದ ನಿಘಂಟು ಶಾಸ್ತ್ರದಲ್ಲಿ ಅದುವೇ ಬಹುಮುಖ್ಯವಾಗಿದೆ.

೧.೦೩ ನಿಘಂಟುಗಳ ವರ್ಗೀಕರಣ

ನಿಘಂಟುಗಳ ವರ್ಗೀಕರಣ ನಿಘಂಟು ಶಾಸ್ತ್ರದಲ್ಲಿ ಮಹತ್ವದ ಅಂಶವಾಗಿದೆ. ನಿಘಂಟುಗಳನ್ನು ವರ್ಗೀಕರಿಸುವಾಗ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

೧. ಉಲ್ಲೇಖಿಕಗಳ ನಿಬಿಡತೆ ಪದಗಳ ಪಟ್ಟಿ ಸಾಮಾನ್ಯವೇ, ನಿರ್ಬಂಧಿತವೇ, ನಿರ್ದಿಷ್ಟವೇ? ಅವು ಪ್ರಾದೇಶಿಕ ಅಥವಾ ಸಾಮಾಜಿಕ ಉಪಭಾಷಾ ಪ್ರಭೇದಗಳನ್ನು ಒಳಗೊಂಡಿದೆಯೆ? ಗ್ರಾಮೋಕ್ತಿ, ವ್ಯಂಗ್ಯಪದ ಮತ್ತು ಈಗ ಅಪ್ರಚಲಿತವಿರುವ ಪ್ರಾಚೀನರೂಪಗಳನ್ನು ಒಳಗೊಂಡಿವೆಯೆ?

೨. ಎಷ್ಟು ಭಾಷೆಗಳನ್ನು ಒಳಗೊಂಡಿದೆ. ಏಕಭಾಷೆ, ದ್ವಿಭಾಷೆ, ಬಹುಭಾಷೆ.

೩. ನಿಘಂಟಿಮಗಳ ಜೋಡಣೆ – ಅಕಾರಾದಿ, ಅರ್ಥವನ್ನವಲಂಬಿಸಿ, ಸಾಂದರ್ಭಿಕ

೪. ಕೋಶವನ್ನು ಉಪಯೋಗಿಸುವವರ ನಿರೀಕ್ಷೆ – ಸಾಮಾನ್ಯ ಓದುಗರಿಗೆ ಬೇಕಾದ ಮಾಹಿತಿಯನ್ನು ಕೊಡುವುದು, ಕೆಲವು ವಿಶೇಷ ಅಂಶಗಳನ್ನು ತಿಳಿಯಲು, ಶಬ್ದನಿಷ್ಪತ್ತಿಯನ್ನು ಹುಡುಕಲು

ಮೇಲಿನ ಅಂಶಗಳನ್ನು ಲಕ್ಷಿಸಿ ನಿಘಂಟುಗಳನ್ನು ವರ್ಗೀಕರಿಸಲಾಗಿದೆ. ಭಾರತೀಯ ಭಾಷೆಗಳಲ್ಲಿಯ ನಿಘಂಟುಗಳನ್ನು ಮೂರು ರೀತಿಯ ವಿಧಾನಗಳ ಮೂಲಕ ವರ್ಗೀಕರಿಸಲಾಗಿದೆ.

೧. ಭಾಷೆಗಳ ಸಂಖ್ಯೆಗಳನ್ನಾಧರಿಸಿ : ಅ) ಏಕಭಾಷಿಕ

ಆ) ದ್ವಿಭಾಷಿಕ

ಇ) ಬಹುಭಾಷಿಕ

೨. ಭಾಷೆಗಳ ಸ್ಥಾನಮಾನವನ್ನಾಧರಿಸಿ : ಅ) ಶಿಷ್ಟ/ಸಾಹಿತ್ಯಿಕ ಭಾಷೆ

ಆ) ಸಾಹಿತ್ಯಿಕ ಅಲ್ಲದ / ಉಪಭಾಷೆ

ಇ) ಪರಿಶಿಷ್ಟ ಜನಾಂಗದ ಭಾಷೆ

೩. ಭಾಷೆಯ ಕಾಲಘಟವನ್ನಾಧರಿಸಿ : ಅ) ಐತಿಹಾಸಿಕ

ಆ) ಸಮಕಾಲೀನ

ಈ ರೀತಿಯ ವರ್ಗೀಕರಣದಿಂದ ನಿಘಂಟಿಮಗಳ ಆಂತರಿಕ ಸಂಬಂಧಕ್ಕೆ ಹೆಚ್ಚಿನ ಮಾನ್ಯತೆ ದೊರೆತಂತಾಗುತ್ತದೆ. ನಿಘಂಟು ವರ್ಗೀಕರಣದ ತತ್ವಗಳನ್ನಾಧರಿಸಿ ನಿಘಂಟು ಶಾಸ್ತ್ರಜ್ಞರು ನಿಘಂಟುಗಳನ್ನು ಬೇರೆ ಬೇರೆ ರೀತಿಯಾಗಿ ವರ್ಗೀಕರಿಸಿದ್ದಾರೆ. ಎಲ್. ಜುಗುತ್ಸಾ ಅವರು ಈ ಕೆಳಗಿನಂತೆ ವಿಂಗಡಿಸಿದ್ದಾರೆ.[೨೪]

- ವಿಶ್ವಕೋಶಮಾದರಿಯ ನಿಘಂಟುಗಳು
- ಭಾಷಿಕ ನಿಘಂಟುಗಳು
- ಏಕಕಾಲಿಕ ನಿಘಂಟುಗಳು
- ಬಹುಕಾಲಿಕ ನಿಘಂಟುಗಳು
  (ಐತಿಹಾಸಿಕ/ವ್ಯುತ್ಪತ್ತಿ)
- ನಿರ್ಬಂಧಿತ ನಿಘಂಟುಗಳು
- ಸಾಮಾನ್ಯ ನಿಘಂಟುಗಳು
  (ಸಾಹಿತ್ಯಿಕ/ಸಾಹಿತ್ಯಿಕ ಅಲ್ಲದ)
- ಏಕಭಾಷಿಕ ಮತ್ತು ದ್ವಿಭಾಷಿಕ ನಿಘಂಟುಗಳು

ಆರ್. ಎ. ಸಿಂಗ ಅವರು ನಿಘಂಟುಗಳನ್ನು ಐದು ಮುಖ್ಯ ಗುಂಪುಗಳಲ್ಲಿ ವಿಂಗಡಿಸಿದ್ದಾರೆ.[೨೫]

ಗುಂಪು – ಅ :

- ಉಪಭಾಷಾ ಕೋಶಗಳು
- ಪಾರಿಭಾಷಿಕ ಕೋಶಗಳು

- ವೃತ್ತಿ, ಕಲೆ, ಕ್ರಾಫ್ಟ್ ಸಂಬಂಧಿಸಿದ ಕೋಶಗಳು
- ವ್ಯಂಗ್ಯಪದಗಳು & ಗ್ರಾಮ್ಯೋಕ್ತಿ ಕೋಶಗಳು

ಗುಂಪು – ಆ :

- ಕಾಗುಣಿತ ಅಥವಾ ಸಾಂಪ್ರದಾಯಿಕ ನಿಘಂಟುಗಳು
- ಉಚ್ಚಾರಣಾತ್ಮಕ ನಿಘಂಟುಗಳು
- ಪದರಚನೆಯ ನಿಘಂಟುಗಳು
- ಏಕಾರ್ಥ ನಿಘಂಟುಗಳು
- ಅನೇಕಾರ್ಥ ನಿಘಂಟುಗಳು
- ವ್ಯಾಕರಣಾತ್ಮಕ ನಿಘಂಟುಗಳು
- ಹಿನ್ನಿಘಂಟುಗಳು
- ಸಂಕ್ಷೇಪಗಳ ನಿಘಂಟುಗಳು

ಗುಂಪು – ಇ : ನಿಘಂಟಿಮಗಳ ಅರ್ಥವನ್ನವಲಂಬಿಸಿ ನಾಲ್ಕು ರೀತಿಯಾಗಿ ವಿಂಗಡಿಸಿದ್ದಾರೆ.

- ಸಮಾನಾರ್ಥಕ ಕೋಶಗಳು
- ವಿರುದ್ಧಾರ್ಥಕ ಕೋಶಗಳು
- ವಿಚಾರಾತ್ಮಕ ಸೈದ್ಧಾಂತಿಕ ಕೋಶಗಳು
- ಆವೃತ್ತಿ ಪದ ಕೋಶಗಳು

ಗುಂಪು – ಈ :

- ವ್ಯಾವಹಾರಿಕ ನಿಘಂಟುಗಳು
- ಬಳಕೆಯ ಮಾತುಗಳನ್ನಾಧರಿಸಿದ ನಿಘಂಟುಗಳು

ಗುಂಪು – ಉ :

- ಪದಪುಂಜಗಳ ನಿಘಂಟುಗಳು
- ಗಾದೆ ಮತ್ತು ನುಡಿಗಟ್ಟು ನಿಘಂಟುಗಳು
- ಹೊಸ ಪದಗಳ (ಆಧುನಿಕ) ನಿಘಂಟುಗಳು
- ಸ್ವೀಕರಣ ಪದಗಳ ನಿಘಂಟುಗಳು

ಕೆ. ನಾರಾಯಣರು ನಿಘಂಟುಗಳನ್ನು ಐದು ರೀತಿಯಾಗಿ ವಿಂಗಡಿಸಿದ್ದಾರೆ.[21]

- ವ್ಯುತ್ಪತ್ತಿ ನಿಘಂಟು (ತುಲನಾತ್ಮಕ ನಿಘಂಟು)
- ಐತಿಹಾಸಿಕ ನಿಘಂಟು
- ಸಾಮಾನ್ಯ ನಿಘಂಟು
  - ಅ) ಏಕಭಾಷಿಕ ನಿಘಂಟು
  - ಆ) ಬಹು ಭಾಷಿಕ ನಿಘಂಟು
- ವಿಶಿಷ್ಟೋದ್ದೇಶ ನಿಘಂಟು : ಇದರಲ್ಲಿ
  - ಉಚ್ಚಾರಣಾ ನಿಘಂಟು
  - ತಾಂತ್ರಿಕ ನಿಘಂಟು
  - ವೃತ್ತಿಪದ ನಿಘಂಟು
  - ಗ್ರಾಂಥಿಕ ನಿಘಂಟು

ವಿಲ್ಯಂ ಮಾಡ್ತರವರು ನಿಘಂಟುಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಿದ್ದಾರೆ.[22]

- ಬಹುಕಾಲಿಕ ;
  - ಅ) ಐತಿಹಾಸಿಕ
  - ಆ) ವ್ಯುತ್ಪತ್ತಿಕ
- ಏಕ ಕಾಲಿಕ ;
  - ಅ) ಸಾಮಾನ್ಯ
  - ಆ) ನಿರ್ಬಂಧಿತ

ನಿಘಂಟು ಶಾಸ್ತ್ರಜ್ಞರು ಮತ್ತು ಭಾಷಾವಿಜ್ಞಾನಿಗಳು ನಿಘಂಟುಗಳನ್ನು ಬೇರೆ ಬೇರೆ ತತ್ವ ಸಿದ್ಧಾಂತಗಳ ಹಿನ್ನೆಲೆಯಲ್ಲಿ (ಮೇಲಿನಂತೆ) ವರ್ಗೀಕರಿಸಿದ್ದಾರೆ. ಅವರ ವರ್ಗೀಕರಣವನ್ನು ಅನುಲಕ್ಷಿಸಿ ಕೋಶಗಳನ್ನು ಈ ಕೆಳಗಿನಂತೆ ವಿಂಗಡಿಸಿ, ವಿವರಿಸಬಹುದು.

೧. ಸಾಮಾನ್ಯ ನಿಘಂಟು ;

- ಅ) ಏಕ ಭಾಷಿಕ
- ಆ) ದ್ವಿಭಾಷಿಕ
- ಇ) ಬಹುಭಾಷಿಕ

೨. ಐತಿಹಾಸಿಕ ನಿಘಂಟು

೩. ವ್ಯುತ್ಪತ್ತಿ ನಿಘಂಟು

೪. ವಿಶಿಷ್ಟೋದ್ದೇಶ ನಿಘಂಟು

ಅ) ವಿಶ್ವ ಕೋಶಗಳು

ಆ) ವೃತ್ತಿಪದ ಕೋಶಗಳು

ಇ) ಪಾರಿಭಾಷಿಕ ಪದ ಕೋಶಗಳು

ಈ) ಗ್ರಾಂಥಿಕ ಪದ ಕೋಶಗಳು

ಉ) ಉಚ್ಚಾರಣಾತ್ಮಕ ಪದ ಕೋಶಗಳು

ಊ) ಇತರ ಬಗೆಯ ವಿಶಿಷ್ಟ ಕೋಶಗಳು

೧. ಸಾಮಾನ್ಯ ನಿಘಂಟು ; ಯಾವುದೇ ಒಂದು ಸೀಮಿತ ವಲಯಕ್ಕೆ ನಿರ್ಬಂಧಗೊಳಿಸದೆ ಸಾಮಾನ್ಯವಾಗಿ ಬಳಸುವ ಪ್ರಮಾಣ ಭಾಷೆಯ ನಿಘಂಟುಗಳು ಸಾಮಾನ್ಯ ನಿಘಂಟುಗಳಾಗಿವೆ. ಅವು ರಚನಾ ದೃಷ್ಟಿಯಿಂದ ವಿವರಣಾತ್ಮಕವಾಗಿರುತ್ತವೆ. ಈ ಬಗೆಯ ನಿಘಂಟುಗಳಲ್ಲಿ ಒಂದು ಭಾಷೆಯ ಶಬ್ದ ಅದರ ಪರ್ಯಾಯ ರೂಪಗಳು, ಅರ್ಥವಿವರಣೆ, ವ್ಯುತ್ಪತ್ತಿ, ವ್ಯಾಕರಣಾಂಶಗಳು ಎಂಬ ಅಂಶಗಳಿಂದ ಗುರುತಿಸಲ್ಪಡುತ್ತವೆ. ದಿನನಿತ್ಯದ ಉಪಯೋಗಕ್ಕೆ ಸಾಮಾನ್ಯ ನಿಘಂಟುಗಳ ಅಗತ್ಯವಿದ್ದೇ ಇದೆ. ಇವುಗಳಲ್ಲಿ ಮೂರು ಬಗೆ

ಅ) ಏಕಭಾಷಿಕ

ಆ) ದ್ವಿಭಾಷಿಕ

ಇ) ಬಹುಭಾಷಿಕ

ಅ) ಏಕ ಭಾಷಿಕ ನಿಘಂಟು ; ಏಕ ಭಾಷಿಕ ನಿಘಂಟು ಇದರ ಹೆಸರೇ ಹೇಳುವಂತೆ ಯಾವುದಾದರೊಂದು ಭಾಷೆಯ ನಿಘಂಟಿಮಗಳಿಗೆ ಅದೇ ಭಾಷೆಯಲ್ಲಿಯೇ ಅರ್ಥ ವಿವರಣೆಯನ್ನು ಕೊಡಲಾಗುತ್ತದೆ. ಒಂದು ಭಾಷೆಯ ನಿಘಂಟಿಮಗಳ ವಿವರ ಇಲ್ಲಿ ಸಿಗುತ್ತದೆ. ಏಕ ಭಾಷಿಕ ನಿಘಂಟುಗಳಲ್ಲಿ ಮುಖ್ಯವಾಗಿ ಮೂರು ಪ್ರಕಾರಗಳು. ಒಂದು ಕಾವ್ಯ ಮಾಧ್ಯಮದಲ್ಲಿ ರಚಿತವಾದದ್ದು ಉದಾ-ರನ್ನಕಂದ, ಶಬ್ದಮಂಜರಿ, ಎರಡು ಗದ್ಯದಲ್ಲಿ ರಚಿತ ವಾದದ್ದು ಉದಾ-ಕರ್ಣಾಟಕ ಶಬ್ದಸಾರಂ, ಸಿರಿಗನ್ನಡ ಅರ್ಥಕೋಶ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು. ಮೂರು ಸಚಿತ್ರ ನಿಘಂಟು ಉದಾ-ಸಚಿತ್ರ ಕನ್ನಡ-ಕನ್ನಡ ಕಸ್ತೂರಿಕೋಶ. ಏಕಭಾಷಾ ನಿಘಂಟು ಆ ಭಾಷೆಯನ್ನು ಬಲ್ಲವರ ಉಪಯೋಗಕ್ಕಾಗಿ ನಿರ್ಮಿತವಾಗಿರುತ್ತದೆ. ಪ್ರತಿಯೊಬ್ಬ

ವ್ಯಕ್ತಿಯೂ ಭಾಷೆಯಲ್ಲಿರುವ ಎಲ್ಲ ಪದಗಳನ್ನು ಉಪಯೋಗಿಸುವುದಿಲ್ಲ. ನಿತ್ಯೋಪಯೋಗಿ ಪದಗಳು ಮಿತವಾಗಿರುತ್ತವೆ. ಕೆಲವು ಸಮಯ ಆತನಿಗೆ ಕೆಲವು ಪದಗಳ ಅರ್ಥ ಗೊತ್ತಿದ್ದರೂ ಅವನ್ನು ಉಪಯೋಗಿಸುವುದಿಲ್ಲ. ಕೆಲವು ಪದಗಳನ್ನು ಕೆಲವು ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಲು ಗೊತ್ತಿರುತ್ತದೆ. ಆದರೆ ಪದಗಳ ಬೇರೆ ಬೇರೆ ರೀತಿಯ ಪ್ರಯೋಗ ತಿಳಿದಿರುವುದಿಲ್ಲ. ಮತ್ತೆ ಕೆಲವು ವೇಳೆ ಗ್ರಂಥಗಳಲ್ಲಿ ಪ್ರಯೋಗವಾಗಿರುವ ಸಂದರ್ಭೋಚಿತ ಅರ್ಥವನ್ನು ತಿಳಿಯಬೇಕಾಗಿರುತ್ತದೆ. ತನ್ನದೇ ಭಾಷೆಯ ಉಪಭಾಷೆಗಳಲ್ಲಿ ಶಬ್ದಗಳ ಅರ್ಥವನ್ನು ತಿಳಿಯಬೇಕಾಗಿರುತ್ತದೆ. ಭಾಷಾ ಶುದ್ಧತೆಯನ್ನು ಕಾಪಾಡಬೇಕಾಗುತ್ತದೆ. ಅಲ್ಲದೆ ಈ ನಿಘಂಟುಗಳು ಆ ಭಾಷೆಯನ್ನು ಎರಡನೆಯ ಭಾಷೆಯಾಗಿ ಕಲಿತವನ ಉಪಯೋಗಕ್ಕೂ ಬೇಕಾಗುತ್ತದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಏಕಭಾಷಾ ನಿಘಂಟನ್ನು ತಯಾರಿಸಬೇಕಾಗುತ್ತದೆ.

ಏಕಭಾಷಾ ನಿಘಂಟಿನ ಮತ್ತೊಂದು ಅಂಗ ಪ್ರಾದೇಶಿಕ ಅಥವಾ ಉಪಭಾಷಾ ನಿಘಂಟು. ಭಾಷೆಯಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆಗಳನ್ನು ಕಾಣುತ್ತೇವೆ. ಈ ರೀತಿಯ ನಿಘಂಟುಗಳು ಎರಡು ರೀತಿಯಿಂದ ಎರಡು ದೃಷ್ಟಿಯಿಂದ ತಯಾರಾಗಬಹುದು. ಒಂದು ಪ್ರಾದೇಶಿಕ ಭಾಷೆಯನ್ನು ಗಮನದಲ್ಲಿಟ್ಟುಕೊಂಡು ತಯಾರಾಗಬಹುದು ಅಥವಾ ಬೇರೆ ಬೇರೆ ಪ್ರಾದೇಶಿಕ ಉಪ ಭಾಷೆಗಳನ್ನು ಗಮನದಲ್ಲಿಟ್ಟುಕೊಂಡು ತಯಾರಾಗಬಹುದು. ಒಂದು ಪ್ರದೇಶ ಅಥವಾ ಜನಾಂಗದ ಆಡುನುಡಿಯ ವೈಶಿಷ್ಟ್ಯತೆಯನ್ನು ಅರಿಯಲು ಇವು ತುಂಬ ನೆರವಾಗುತ್ತವೆ.

ಆ) ದ್ವಿಭಾಷಿಕ ನಿಘಂಟು ; ಒಂದು ಭಾಷೆಯ ಶಬ್ದಗಳಿಗೆ ಇನ್ನೊಂದು ಭಾಷೆಯಲ್ಲಿ ಅರ್ಥ ವಿವರಣೆಯನ್ನು ನೀಡುತ್ತವೆ. ಈ ತರದ ನಿಘಂಟಿನ ಮುಖ್ಯಉದ್ದೇಶ ಒಂದು ಭಾಷೆಯ ಪದಗಳಿಗೆ ಇನ್ನೊಂದು ಭಾಷೆಯ ಪದಗಳನ್ನು ಸೂಚಿಸುವುದು. ಈ ರೀತಿಯ ನಿಘಂಟುಗಳನ್ನು ತಯಾರುಮಾಡಬೇಕಾದರೆ ಅನೇಕ ವಿಷಯಗಳನ್ನು ಗಮನದಲ್ಲಿಡಬೇಕಾಗುತ್ತದೆ. ಅವುಗಳನ್ನು ಕೆ. ನಾರಾಯಣರು ಈ ಕೆಳಗಿನಂತೆ ಸೂಚಿಸಿದ್ದಾರೆ.[೨೮]

i) ಅದು ಮೂಲ ಭಾಷೆ ಮತ್ತು ಉದ್ದಿಷ್ಟ ಭಾಷೆಯ ಪದಗಳಿಗೆ ಸಮಾನತೆಯನ್ನು ಕಲ್ಪಿಸಿಕೊಟ್ಟಿರಬೇಕು.

ii) ಮೂಲಭಾಷೆಯ ಪದ, ನುಡಿಗಟ್ಟು, ವಾಗಾಡಂಬರ ವಿಶೇಷ ರೀತಿಯ ಪ್ರಯೋಗಗಳನ್ನು ಹೊಂದಿರಬೇಕು.

iii) ಮೂಲಭಾಷೆಯ ಪದಗಳ ಸಾಧಿತರೂಪ, ಅರ್ಥ ಛಾಯೆಗಳನ್ನು ವಿವರಿಸುತ್ತಿರಬೇಕು.

iv) ಪದಗಳ ಎಲ್ಲ ಮಟ್ಟದ ಪ್ರಯೋಗಗಳನ್ನು ಅಂದರೆ ಕೀಳು, ಮೇಲರಿಮೆಗಳನ್ನು ಸಂದರ್ಭೋಚಿತ ಪ್ರಯೋಗಗಳನ್ನು, ನಿಷಿದ್ಧ ಪದಗಳನ್ನೂ ಹೊಂದಿರಬೇಕು.

v) ಶ್ರೇಷ್ಠ ವ್ಯಕ್ತಿಗಳ, ಸ್ಥಳಗಳ, ಪ್ರಸಿದ್ಧ ಗ್ರಂಥಗಳ, ವಿವಿಧ ಗ್ರಂಥಗಳಲ್ಲಿ ಬರುವ ಪಾತ್ರಗಳ ವಿವರಗಳನ್ನು ತಿಳಿಸುತ್ತಿರಬೇಕು.

vi) ವ್ಯಾವಹಾರಿಕ ಮತ್ತು ತಾಂತ್ರಿಕ ವಿಶಿಷ್ಟ ಪದಗಳನ್ನೊಳಗೊಂಡಿರಬೇಕು.

vii) ಪದಗಳ ಪರ್ಯಾಯ ಪ್ರಯೋಗಗಳನ್ನು ಪ್ರಚಲಿತ ಪ್ರಯೋಗಗಳನ್ನು ತಿಳಿಸುತ್ತಿರಬೇಕು.

viii) ಭಾಷೆಯನ್ನು ಆಡುವವರು ಮಾತನಾಡುವಾಗ ಉಚ್ಚರಿಸುತ್ತಿರುವ ರೀತಿಯಲ್ಲಿರಬೇಕು.

ix) ಅವಶ್ಯಕತೆ ಇದ್ದಲ್ಲಿ ಚಿತ್ರಗಳಿಂದ ಕೂಡಿದ್ದರೆ ಹೆಚ್ಚು ಉಪಯುಕ್ತವಾಗಬಲ್ಲದು.

ಒಂದು ದ್ವಿಭಾಷಾ ನಿಘಂಟು ಪರಿಪೂರ್ಣವಾಗಿರಬೇಕಾದರೆ ಮೇಲೆ ಹೇಳಿದ ಎಲ್ಲ ಅಂಶಗಳನ್ನೊಳಗೊಂಡಿರಬೇಕು. ಕನ್ನಡದಲ್ಲಿ ಎರಡನೆಯ ನಾಗವರ್ಮನ ಅಭಿದಾನ ವಸ್ತುಕೋಶ ಮೊದಲನೆಯ ದ್ವಿಭಾಷಿಕ ಕೋಶವಾಗಿದೆ.

ಆರ್. ಎ. ಸಿಂಗ್ ರವರು ಹೇಳಿರುವಂತೆ ಅವುಗಳ ಮುಖ್ಯ ಉದ್ದೇಶ "Biliongual dictionary, the aim of which is to make a foregin speaker understand the language words of one language are explained or defined in another language"[೨೫] ದ್ವಿಭಾಷಿಕ ನಿಘಂಟುಗಳನ್ನು ರಚಿಸುವಾಗ ನಿಘಂಟು ರಚನೆಯಲ್ಲಿ ಅನುಸರಿಸ ಬಹುವಾದ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ (ಕ್ಷೇತ್ರಕಾರ್ಯ, ನಿಘಂಟಿಮಗಳ ಆಯ್ಕೆ, ನಿಘಂಟಿಮಗಳ ರಚನೆ). ಈ ನಿಘಂಟುಗಳನ್ನು ಸಿದ್ಧಪಡಿಸುವಾಗ ಕಾಲ ಮತ್ತು ಹಣ ಬಹಳ ಬೇಕಾಗುತ್ತದೆ. ಭಾರತೀಯ ಕೋಶಕಾರರಿಗೆ ದ್ವಿಭಾಷಿಕ ನಿಘಂಟುಗಳನ್ನು ರಚಿಸುವುದು ಸಮಸ್ಯೆಯಾಗಿದೆ. ಅದೆಂದರೆ ಮುಖ್ಯ ಉಲ್ಲೇಖಗಳನ್ನು ಯಾವ ರೀತಿಯಾಗಿ ತೆಗೆದುಕೊಳ್ಳಬೇಕು, ಪದಗಳ ವೈದೃಶ್ಯಾತ್ಮಕ ಲಕ್ಷಣಗಳನ್ನು ಗುರುತಿಸುವುದು, ನುಡಿಗಟ್ಟು ಮತ್ತು ಪದಪುಂಜಗಳನ್ನು ಹೇಗೆ ಸೇರಿಸಬೇಕು. ಅನುಭವಿಕ ಕೋಶಕಾರರು ಈ ಸಮಸ್ಯೆಗಳನ್ನು ನಿವಾರಿಸುತ್ತಾರೆ. ಎರಡು ಭಾಷೆಯ ಪರಸ್ಪರ ವಿಚಾರ ವಿನಿಮಯ, ಜ್ಞಾನಾರ್ಜನೆಗೆ ಈ ಕೋಶಗಳು ತುಂಬ ಸಹಕಾರಿಯಾಗಿವೆ.

೯) ಬಹುಭಾಷಿಕ ನಿಘಂಟುಗಳು ; ಎರಡು ಭಾಷೆಗಳಿಗಿಂತ ಹೆಚ್ಚು ಭಾಷೆಗಳನ್ನು ಉಪಯೋಗಿಸಿಕೊಂಡು ರಚಿಸುವ ನಿಘಂಟುಗಳನ್ನು ಬಹುಭಾಷಾ ನಿಘಂಟುಗಳೆಂದು ಕರೆಯುತ್ತಾರೆ. ದ್ವಿಭಾಷಿಕ ನಿಘಂಟುಗಳನ್ನು ತಯಾರಿಸುವಾಗ ಗಮನದಲ್ಲಿಡಬೇಕಾದ ಅಂಶಗಳನ್ನು ಇಲ್ಲಿಯೂ ಗಮನಿಸಬೇಕಾಗುತ್ತದೆ. ಕನ್ನಡದಲ್ಲಿ ಬಹುಭಾಷಾ ನಿಘಂಟುಗಳು ಬಹಳ ಕಡಿಮೆ. ಉದಾ-ಎಲ್.ಎಸ್.ಚಿಟಗುಪ್ಪಿಯವರ ಹಿಂದಿ-ಕನ್ನಡ -ಇಂಗ್ಲಿಷ್ ಶಬ್ದಕೋಶ ಮತ್ತು ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದವರು ಸಿದ್ಧಪಡಿಸಿದ ತುಳು-ಕನ್ನಡ-ಇಂಗ್ಲಿಷ್ ನಿಘಂಟು ಸಂಪುಟಗಳು (ಆರು ಸಂಪುಟಗಳು). ದ್ವಿಭಾಷಾ ಮತ್ತು ಬಹುಭಾಷಾ

ನಿಘಂಟುಗಳನ್ನು ತಯಾರಿಸುವುದು ಸ್ವಲ್ಪ ಕಠಿಣಕಾರ್ಯವಾಗಿದೆ. ಈ ನಿಘಂಟುಗಳು ಆಯಾಕಾಲದ ಭಾಷಿಕ ಸ್ವರೂಪವನ್ನು ಪ್ರತಿನಿಧಿಸುತ್ತವೆ.

೨. ಐತಿಹಾಸಿಕ ನಿಘಂಟು; ಐತಿಹಾಸಿಕ ನಿಘಂಟು ಒಂದು ಭಾಷೆಯಲ್ಲಿಯ ಪದಗಳ ರೂಪ ಮತ್ತು ಅರ್ಥಗಳು ಕಾಲಾನುಕ್ರಮದಲ್ಲಿ ತೋರಿಸುವ ಬದಲಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲ್ಪಟ್ಟಿರುತ್ತವೆ (ಐತಿಹಾಸಿಕ ಮಾಹಿತಿಗಳನ್ನು ಕೊಡುತ್ತವೆ). ಐತಿಹಾಸಿಕ ನಿಘಂಟು ಪದದ ಅರ್ಥ, ಅರ್ಥದ ಬದಲಾವಣೆ (ಸಂಕೋಚ, ವಿಸ್ತರಣೆ) ಇವುಗಳೆಡೆಗೆ ಆದ್ಯ ಗಮನವನ್ನು ಕೊಡುತ್ತದೆ. ಮತ್ತು ಪದವು ಪ್ರಯೋಗಿಸಲ್ಪಟ್ಟ ಕಾಲವನ್ನು ಪದಗಳ ಆಗಮನ ನಿರ್ಗಮನಗಳನ್ನು ಸೂಚಿಸುತ್ತದೆ. ಪದಗಳ ಆಗಮನಕಾಲವನ್ನು ಖಚಿತವಾಗಿ ಸೂಚಿಸಿದರೆ ನಿರ್ಗಮನ ಕಾಲವನ್ನು ಸೂಚಿಸುವುದು ಕಷ್ಟ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ಐತಿಹಾಸಿಕ ನಿಘಂಟಿನಿಂದ ಶಬ್ದಗಳ ಐತಿಹಾಸಿಕ ಚರ್ಚೆಗೆ ಉದಾಹರಣೆಯಾಗಿ ಒಂದನ್ನು ಉಲ್ಲೇಖಿಸಬಹುದು.

ಉದಾ-ಒಡಂಬು-ಒಡಂಬಿ, ಒಡಮು (ನಾ) ಶರೀರ; ದೇಹ; ತೋರದ ತೋಳ್ಗಳ್ಗರ್ ಭಂಗಾರದ ಕಂಭದ ವೊಲಪ್ಪೊಡಂಬುಳ್ಳವರ್ (ಸೌನಂದ, ೧-೧೬). ಒಡಂಬಿ; 'ಒಡಂಬಿ = ಶರೀರಂ' (ಶಮದ ಪದ್ಯ ೨೩) ಪಿವಿಧ ಪದಂ ಸ್ವರಂ ಪರಿಜುಬಣ್ಣ ಮೊಡಂಬಿಯು ದೇಸಿಯುಂಗ ಕೊಪ್ಪುವ ಚಲನಂ (ಸಂಸ ಪು. ೬-೮): ಒಡಂಬಿಯಲ್ಲಿರುವ ಒಂದೊಂದು ಮೂಳೆಯನ್ನು ಮುರಿಮುರಿದು (ಮಂತ್ರ ಶ ೬೦-೧೮) ಒಡಮು: ಒಡಮೆ ಶಾಶ್ವತ ಮತ್ತದು (ಸೌಇವಿ ೧೯೪೨, ಹಾನಗಲ್ ೨೧೪-೩೨; ೯೪೩) ಒಡಲ್ ಪರಾ (ದೇ ॥ ತಮಿ, ಮಲ ಉಡಮ್ಬು)

ಹೀಗೆ ಐತಿಹಾಸಿಕದ ನಿಘಂಟುಗಳು ನಿಘಂಟಿಮಗಳ ರಾಚನಿ ಹಾಗೂ ಅರ್ಥಾತ್ಮಕ ಬದಲಾವಣೆಯನ್ನು ಕಾಲಾನುಕ್ರಮವಾಗಿ ಸೂಚಿಸುತ್ತವೆ.

೩. ವ್ಯುತ್ಪತ್ತಿಕ ನಿಘಂಟು; ಇವು ನಿಘಂಟಿಮಗಳ ವ್ಯುತ್ಪತ್ತಿಗೆ ಪ್ರಾಧ್ಯಾನತೆ ಕೊಡುತ್ತವೆ. ವ್ಯುತ್ಪತ್ತಿ ನಿಘಂಟುಗಳು ಭಾಷೆಯಲ್ಲಿ ಈಗ ಬಳಕೆಯಲ್ಲಿರುವ ಮತ್ತು ಒಂದು ಕಾಲಕ್ಕೆ ಬಳಕೆಯಲ್ಲಿದ್ದು ಈಗ ಬಳಕೆಯಿಂದ ತಪ್ಪಿಹೋದ ನಿಘಂಟಿಮಗಳ ಸಹಾಯದಿಂದ ಭಾಷೆಯ ನಿಘಂಟಿಮಗಳ ರೂಪವನ್ನು ಪುನಾರಚಿಸುತ್ತದೆ. ಸುಲಭದಲ್ಲಿ ಹೇಳುವುದಾದರೆ ಇದು ಭಾಷೆಯಲ್ಲಿಯ ಪದಗಳ ಪೂರ್ವ ಇತಿಹಾಸವನ್ನು ತಿಳಿಸುತ್ತದ್ದೆ ಎನ್ನಬಹುದು. ವ್ಯುತ್ಪತ್ತಿ ನಿಘಂಟುಗಳಲ್ಲಿ ನಿಘಂಟಿಮಗಳ ಅರ್ಥದ ಜೊತೆಗೆ ಅವುಗಳ ರೂಪ ಬದಲಾವಣೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುತ್ತದೆ.

ವ್ಯುತ್ಪತ್ತಿ ನಿಘಂಟು ಒಂದು ಭಾಷೆಯ ಉಪಭಾಷೆಗಳನ್ನು ಹಾಗೂ ಗ್ರಾಂಥಿಕ ಆಧಾರಗಳನ್ನು ಬಳಸಿಕೊಂಡು ಅದೇ ಭಾಷೆಯ ನಿಘಂಟಿಮಗಳ ವ್ಯುತ್ಪತ್ತಿಯನ್ನು ಹೇಳಬಹುದು. ಅಥವಾ ಒಂದೇ ಭಾಷಾ

ಕುಟುಂಬದ ಭಾಷೆಗಳನ್ನು ಆಧಾರವಾಗಿಟ್ಟುಕೊಂಡು ರಚಿತವಾಗಿರಬಹುದು. ಈ ರೀತಿಯ ನಿಘಂಟು ರಚಿಸುವಾಗ ಅದು ತುಲನಾತ್ಮಕ ನಿಘಂಟು ಆಗುತ್ತದೆ. ವ್ಯುತ್ಪತ್ತಿ ನಿಘಂಟಿನಲ್ಲಿ ಬೇರೆ ಭಾಷಾ ಕುಟುಂಬದಿಂದ ಎರವಲು ಪಡೆದ ನಿಘಂಟಿಮುಗನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಆರ್. ಎಲ್. ಟರ್ನರ್ ಅವರ A, Comparative Dictionary of the Indo-Aryan language (1962) ಟಿ. ಬರೊ ಮತ್ತು ಎಂ. ಬಿ. ಎಮಿನೊ ಇವರ A, Drividian Etymological Dictionary(1961)ವ್ಯುತ್ಪತ್ತಿ ನಿಘಂಟುಗಳಿಗೆ ಉತ್ತಮ ಉದಾಹರಣೆಗಳು, D.E.D ಯಿಂದ ಒಂದು ನಿದರ್ಶನ ತೆಗೆದುಕೊಳ್ಳಬಹುದು.

Ta. Kori sheep, Ma-Kori a small kind of sheep Ko-Koryar (or,goat) To – Kury Sheep Ka – Kuri, Kori sheep, ram; Kuri tana, a sheepish, foolish disposition kod – kori sheep. Tu – Kuri id. Te – gore gorre id (B also several species of wild animals Viz jungle sheep, aspecies of antelope); gorriya (B) goriya a sheep Kol. – (Kin se) gorre id, (Cf; 1485 Kol, goria) Konda gorya goat, Kuwi (F) gori;(s) gorriia ಒಂದು ಭಾಷೆಯ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಕಂಡುಬರುವ ನಿಘಂಟಿಮುಗಳ ವೈವಿಧ್ಯತೆಗಳನ್ನು ವ್ಯುತ್ಪತ್ತಿ ನಿಘಂಟಿನಲ್ಲಿ ಗುರುತಿಸುತ್ತೇವೆ.

೪. ವಿಶಿಷ್ಟೋದ್ದೇಶ ನಿಘಂಟು; ವಿಶಿಷ್ಟೋದ್ದೇಶ ನಿಘಂಟುಗಳು ತಮ್ಮ ತಮ್ಮ ಕ್ಷೇತ್ರಗಳಿಗೆ ಸೀಮಿತವಾಗಿರುವ ನಿಘಂಟುಗಳು ಅವು ಇಂತಿವೆ.

ಅ) ವಿಶ್ವಕೋಶಗಳು; ವಿಶ್ವಕೋಶಗಳ ವ್ಯಾಪ್ತಿ ವಿಶಾಲವಾದುದು. ಒಂದೊಂದು ವಿಷಯ, ಘಟನೆ, ವ್ಯಕ್ತಿಗೆ ಸಂಬಂಧಿಸಿದಂತೆ ಸ್ಥೂಲವಾದ ವಿವರಣೆ ಇಲ್ಲಿರುತ್ತದೆ. ವಿಶ್ವಕೋಶಗಳನ್ನು ರಚಿಸುವಾಗ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

- ಸ್ಥಳದ ಮತ್ತು ವ್ಯಕ್ತಿಯ ಹೆಸರುಗಳು ಹಾಗೂ ಆ ಸ್ಥಳದ ಮಹತ್ವ ವ್ಯಕ್ತಿಗಳ ಕಾರ್ಯಸಾಧನೆ.
- ಮಾನವ ಜ್ಞಾನದ ಎಲ್ಲ ಶಾಖೆಗಳು
- ಐತಿಹಾಸಿಕ ಘಟನೆಗಳ ವ್ಯಾಪಕ ಜ್ಞಾನ
- ಭೌಗೋಳಿಕ ಮತ್ತು ಸಾಂಸ್ಕೃತಿಕ ಅಂಶಗಳು

ಕರ್ನಾಟಕದಲ್ಲಿ ಅನೇಕ ವಿಶ್ವಕೋಶಗಳ ಬಂದಿವೆ. ಉದಾ- ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಷಯ ವಿಶ್ವಕೋಶಗಳು, ಕನ್ನಡ ವಿಶ್ವವಿದ್ಯಾಲಯದ ವೈದ್ಯ ವಿಶ್ವಕೋಶ, ಜಾನಪದ ಕಲೆಗಳ ವಿಶ್ವಕೋಶಗಳು ನಾ ಪಕವಾದ ಮಾಹಿತಿಗಳನ್ನೊಳಗೊಂಡು ಆಕರಗ್ರಂಥಗಳಾಗಿವೆ.

ಆ) ವೃತ್ತಿಪದ ಕೋಶಗಳು: ವೃತ್ತಿಪದ ಕೋಶಗಳು ನಿರ್ದಿಷ್ಟ ವೃತ್ತಿ ಸಂಬಂಧಿಸಿರುತ್ತವೆ. ವೃತ್ತಿಪದಗಳ ಸಂಗ್ರಹ ಮತ್ತು ವಿಶ್ಲೇಷಣಾಕಾರ್ಯ ಸಾಮಾಜಿಕ ಭಾಷಾಧ್ಯಯನದ ದೃಷ್ಟಿಯಿಂದ ತುಂಬ ಉಪಯುಕ್ತವಾದುದು.ಆಧುನಿಕ ವಿಜ್ಞಾನ ತಂತ್ರಜ್ಞಾನದ ಪ್ರಭಾವದಿಂದ ವಂಶ ಪರಂಪರಾಗತವಾಗಿ ಬಂದಿರುವ ಜಾನಪದ ಕೈಕಸುಬುಗಳಾದ ಕುಂಬಾರಿಕೆ, ಕಂಬಾರಿಕೆ, ಬಡಿಗತನ ಚಿಮ್ಮಾರಿಕೆ ಮುಂತಾದ ವೃತ್ತಿಗಳಿಗೆ ಸಂಬಂಧಿಸಿದ ಪದಸಂಪತ್ತನ್ನು ರಕ್ಷಿಸಿ ಆವೃತ್ತಿ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ತಿಳಿದುಕೊಳ್ಳಲು ವೃತ್ತಿಪದಗಳು ಮಹತ್ವದ ಪಾತ್ರವಹಿಸುತ್ತವೆ. ಜಾನಪದ ಕೈಕಸುಬುಗಳಲ್ಲಿ ಉಪಯೋಗಿಸುವ ಪದಗಳು ಹೆಚ್ಚಾಗಿ ಅಚ್ಚ ಕನ್ನಡ ಪದಗಳಾಗಿರುವುದರಿಂದ ಅಂತಹುಗಳನ್ನು ಸಂಗ್ರಹಿಸಿ ಅವುಗಳಿಗೆ ಅರ್ಥ ಕೊಡುವುದು ಅಗತ್ಯವಿದೆ. ಅವು ಕನ್ನಡ ಶಬ್ದಕೋಶಕ್ಕೆ ಉತ್ತಮ ಕೊಡುಗೆಗಳಾಗುತ್ತವೆ ಎಂಬುದರ ಬಗೆಗೆ ಅನುಮಾನಗಳಿಲ್ಲ. ಒಂದು ವೃತ್ತಿಯನ್ನು ಅವಲಂಬಿಸಿದ ಜನ ತಮ್ಮದೇ ಆದ ಸಮಾಜ ಮತ್ತು ಸಾಂಸ್ಕೃತಿಕ ಚೌಕಟ್ಟನ್ನು ಹೊಂದಿರುತ್ತಾರೆ. ತಮ್ಮ ವೃತ್ತಿಯಲ್ಲಿ ವಿಶಿಷ್ಟ ಪದ ಪ್ರಯೋಗಗಳನ್ನು, ನುಡಿಗಟ್ಟುಗಳನ್ನು ಬಳಸುತ್ತಿರುತ್ತಾರೆ. ಅವುಗಳನ್ನು ಸಂಗ್ರಹಿಸಿ ಅಭ್ಯಸಿಸುವುದರಿಂದ ಆ ಸಮುದಾಯದ ಭಾಷಾ ಪ್ರಯೋಗ ಹಾಗೂ ವೃತ್ತಿ ಸಮುದಾಯದ ಜನಾಂಗಿಕ ಅಧ್ಯಯನಕ್ಕೂ ತುಂಬ ಸಹಕಾರಿಯಾಗುತ್ತದೆ. ವಿವಿಧ ವೃತ್ತಿಪದಗಳ ಸಂಗ್ರಹ ಮತ್ತು ವಿಶ್ಲೇಷಣೆಯ ಕಾರ್ಯ ತೆಲುಗು ಭಾಷೆಯಲ್ಲಿ ನಡೆದಿದೆ. ಕನ್ನಡದಲ್ಲಿ ವೃತ್ತಿ ಪರಿಭಾಷಾ ಕ್ಷೇತ್ರಕಾರ್ಯ ನಡೆದು ವಿವಿಧ ವೃತ್ತಿ ಪದಕೋಶಗಳು ಸಿದ್ಧವಾಗಬೇಕಾಗಿವೆ. ಇತ್ತೀಚೆಗೆ ಈ ಕೆಲಸವೂ ನಡೆಯುತ್ತಿದೆ.

ಇ) ಪಾರಿಭಾಷಿಕ ಪದಕೋಶಗಳು; ಭಾಷೆಯ ಪಾರಿಭಾಷಿಕ ಪದಗಳಿಗೆ ಇವು ಅನ್ವಯಿಸುತ್ತವೆ. ನಿರ್ದಿಷ್ಟ ಉದ್ದೇಶಗಳಿಗಾಗಿ ಇವು ಸಿದ್ಧವಾಗುತ್ತವೆ. ನಿರ್ದಿಷ್ಟ ವಿಷಯಕ್ಕೆ ನಿರ್ದಿಷ್ಟ ಅರ್ಥವನ್ನು ಹೊಂದಿರುತ್ತವೆ. ಒಂದು ಭಾಷೆಯಲ್ಲಿ ಬೇರೆ ಬೇರೆ ವಿಷಯಗಳನ್ನಾಯ್ದುಕೊಂಡು ಇವು ಸಿದ್ಧವಾಗಿರುತ್ತವೆ. ಉದಾ-ಭಾಷೆ, ಕಲೆ, ಸಾಹಿತ್ಯ, ಧರ್ಮ, ಚರಿತ್ರೆ ಇವುಗಳಲ್ಲಿ ಬರುವ ಪಾರಿಭಾಷಿಕ ಕೋಶಗಳನ್ನು ತಯಾರಿಸುವುದು. ಈ ತೆರನಾದ ಕೋಶಗಳು ಕನ್ನಡದಲ್ಲಿ ಸಾಕಷ್ಟು ತಯಾರಾಗಿವೆ.

ಈ) ಗ್ರಾಂಥಿಕ ಪದಕೋಶಗಳು; ಒಂದು ಗ್ರಂಥದಲ್ಲಿ ಬರುವ ವಿಶಿಷ್ಟ ಪದಗಳಿಗೆ ಅರ್ಥವನ್ನು ಈ ಕೋಶಗಳು ಒಳಗೊಂಡಿರುತ್ತವೆ. ಗ್ರಂಥದಲ್ಲಿಯ ವಿಶಿಷ್ಟಪದ, ಅದು ಬರುವ ಸಂದರ್ಭ ಪಡೆದುಕೊಳ್ಳುವ ಅರ್ಥ ಛಾಯೆ ಇತ್ಯಾದಿ ಅಂಶಗಳು ಈ ಕೋಶಗಳಲ್ಲಿ ಗುರುತಿಸಲ್ಪಡುತ್ತವೆ.

ಉ) ಉಚ್ಚಾರಣಾತ್ಮಕ ಕೋಶಗಳು; ಭಾಷೆಯ ಪ್ರತಿಯೊಂದು ಪದವೂ ತನ್ನದೇ ಉಚ್ಚಾರಣೆಯನ್ನು ಹೊಂದಿರುತ್ತದೆ. ಮಾತೃಭಾಷೆ ಮತ್ತು ಅನ್ಯಭಾಷೆಗಳನ್ನು ನಿರ್ದೇಶಿಸಿದ ರೀತಿಯಲ್ಲಿ ಉಚ್ಚಾರಣೆ ಮಾಡಲು ಸಹಾಯಕವಾಗಿ ಮಾಡುವಂತಹ ನಿಘಂಟುಗಳು ಉಚ್ಚಾರಣಾತ್ಮಕ ನಿಘಂಟುಗಳಾಗಿವೆ.ಇವು ಪದದ

ಸ್ವರಾಘಾತ, ತೀವ್ರತೆ, ಕಾಲಾವಧಿ, ವಿರಾಮ ಮುಂತಾದ ಅವಿಭಾಜಕ ಧ್ವನಿವಾದ ಅಂಶಗಳನ್ನು ಸಮರ್ಪಕವಾಗಿ ಕೊಟ್ಟಿರುತ್ತವೆ. Daniel jones ನ English Pronouncing Dictionary ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

ಊ) ಇತರ ಬಗೆಯ ವಿಶಿಷ್ಟಕೋಶಗಳು: ಪದಗಳ ಕಾಗುಣಿತ ಹಾಗೂ ಅವುಗಳ ಧ್ವನ್ಯಾತ್ಮಕ ಬದಲಾವಣೆಗಳನ್ನು ಅನುಲಕ್ಷಿಸಿ ಸಿದ್ಧವಾದ ಕಾಗುಣಿತ ನಿಘಂಟುಗಳು. ಪದಗಳ ಪೂರ್ವ ಪ್ರತ್ಯಯ, ಅಂತ್ಯಪ್ರತ್ಯಯ, ಧಾತು-ಪ್ರಾತಿಪದಿಕ ಇವುಗಳನ್ನು ಅನುಲಕ್ಷಿಸಿ ಸಿದ್ಧವಾದ ಪದರಚನೆಯ ನಿಘಂಟುಗಳು. ಪದಗಳ ವ್ಯಾಕರಣ ವರ್ಗಗಳನ್ನು, ಪದಗಳ ಸ್ವರೂಪವನ್ನು ತಿಳಿಸುವ ವ್ಯಾಕರಣಾತ್ಮಕ ನಿಘಂಟುಗಳು. ಅಕಾರಾದಿಯ ಕೊನೆಯ ಶಬ್ದಗಳನ್ನಾಧರಿಸಿ ಪದಗಳನ್ನು ಸಂಕಲಿಸುವ ಹಿನ್ನಿಘಂಟುಗಳು. ಒಂದು ನಿರ್ದಿಷ್ಟ ಭಾಷೆಯಲ್ಲಿಯ ಬಳಕೆಯಾದ ಸಂಕ್ಷೆಪ್ತಗಳನ್ನು ವ್ಯವಸ್ಥಿತವಾಗಿ ಪಟ್ಟಿಮಾಡಿದರೆ ಅದು ಸಂಕ್ಷೆಪ್ತ ನಿಘಂಟು. ನಿರ್ದಿಷ್ಟ ಜನವರ್ಗದಲ್ಲಿ ಬಳಕೆಯಾಗುವ ವ್ಯಂಗ್ಯ ಪದಗಳಿಗೆ, ಗ್ರಾಮೋಕ್ತಿಗಳಿಗೆ ಅರ್ಥ ಕೊಡುವ ವ್ಯಂಗ್ಯ ಮತ್ತು ಗ್ರಾಮೋಕ್ತಿ ನಿಘಂಟು. ಇವು ಹೊಸ ಅರ್ಥಗಳನ್ನೊಳಗೊಂಡಿರುತ್ತವೆ. ಇದೇ ರೀತಿ ಗಾದೆ, ಒಗಟು, ಸಮಾನಾರ್ಥಕ, ವಿರುದಾರ್ಥ, ಪತ್ರಿಕಾ ನಿಘಂಟು ಇವೆಲ್ಲವೂ ವಿಶಿಷ್ಟೋದ್ದೇಶ ಕೋಶಗಳಾಗಿವೆ.

ನಿಘಂಟುಗಳು ಸಾಹಿತ್ಯಿಕವಾಗಿ, ಭಾಷಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿಯೂ ಬೆಳೆದು ಬಂದಿವೆ. ಅವು ಒಂದು ಪ್ರದೇಶದ ಅಥವಾ ಸಮುದಾಯದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ನಿಘಂಟುಗಳ ರಚನಾತ್ಮಕ ಅಂಶಗಳನ್ನಾಧರಿಸಿ ಮೇಲಿನಂತೆ ವರ್ಗ, ಉಪವರ್ಗಗಳಲ್ಲಿ ವರ್ಗೀಕರಿಸಿ ಅಭ್ಯಸಿಸಬಹುದಾಗಿದೆ.

೧.೦೪ ನಿಘಂಟುಶಾಸ್ತ್ರ ಮತ್ತು ಭಾಷಾಶಾಸ್ತ್ರ

ಕೋಶಗಳನ್ನು ವೈಜ್ಞಾನಿಕವಾಗಿ ತಯಾರಿಸಿಕೊಳ್ಳುವ ವಿಧಾನ ಕೋಶವಿಜ್ಞಾನವೆಂದೂ, ಭಾಷೆಯ ವೈಜ್ಞಾನಿಕ ಅಧ್ಯಯನ ಭಾಷಾ ಶಾಸ್ತ್ರವೆಂದು ಸ್ಥೂಲವಾಗಿ ಹೇಳಬಹುದು. ನಿಘಂಟುಶಾಸ್ತ್ರ ಮತ್ತು ಭಾಷಾಶಾಸ್ತ್ರಗಳಿಗೆ ನಿಕಟವಾದ ಸಂಬಂಧವಿದೆಯಾದರೂ ಅವೆರಡರಲ್ಲಿ ಕೆಲವು ಸೂಕ್ಷ್ಮ ವ್ಯತ್ಯಾಸಗಳೂ ಇವೆ. ನಿಘಂಟುಶಾಸ್ತ್ರವು ಪದಗಳ ವಿವೇಚನೆ ಹಾಗೂ ಅವುಗಳ ವೈಜ್ಞಾನಿಕ ಅಧ್ಯಯನಕ್ಕೆ ಒತ್ತು ಕೊಡಲಾಗಿದೆ. ಭಾಷಾಶಾಸ್ತ್ರವು ಒಂದು ಭಾಷೆಯ ರಚನೆ ಹಾಗೂ ಬೇರೆ ಬೇರೆ ಸಾಮಾಜಿಕ ಸಂದರ್ಭದಲ್ಲಿ ಭಾಷಾಬಳಕೆಯ ರೀತಿ ಮುಂತಾದ ಅಂಶಗಳಿಗೆ ಒತ್ತು ಕೊಡಲಾಗುವುದು. ಒಂದು ಭಾಷೆ ಅಥವಾ ಉಪಭಾಷೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವಾಗ ಎರಡೂ ಪ್ರಮುಖ ಪಾತ್ರವಹಿಸುತ್ತವೆ. ನಿಘಂಟುಶಾಸ್ತ್ರವು ಅನ್ವಯಿಕ ಭಾಷಾಶಾಸ್ತ್ರದ ಶಾಖೆಯಾಗಿದೆ.

ನಿಘಂಟಿಗೆ ಸಂಬಂಧಪಟ್ಟಂತೆ ಎರಡು ಮುಖ್ಯ ವಿಭಾಗಗಳನ್ನು ಗುರುತಿಸಲಾಗಿದೆ. ನಿಘಂಟುಶಾಸ್ತ್ರ, ನಿಘಂಟುರಚನೆ ಇವುಗಳಲ್ಲಿ ಮೊದಲನೆಯದು ನಿಘಂಟುಗಳಿಗೆ ಸಂಬಂಧಿಸಿದ ಮೂಲತತ್ವಗಳನ್ನು

ವೈಜ್ಞಾನಿಕವಾಗಿ ನಿರೂಪಿಸಲಾಗುತ್ತದೆ. ಎರಡನೆಯದು ನಿಘಂಟು ರಚನೆಯ ಕ್ರಮವನ್ನು ವಿವರಿಸಲಾಗುತ್ತದೆ. ನಿಘಂಟುಶಾಸ್ತ್ರ ಎಲ್ಲ ಭಾಷೆಗಳಿಗೆ ಸಂಬಂಧಪಟ್ಟಿದ್ದು, ನಿಘಂಟು ರಚನೆ ಒಂದು ನಿರ್ದಿಷ್ಟ ಭಾಷೆಗೆ ಮಾತ್ರ ಸಂಬಂಧಪಟ್ಟಿದ್ದಾಗಿರುತ್ತದೆ.[೬೦] ಒಂದು ಭಾಷೆಯನ್ನು ಆಡುವ ಜನರು ವಾಸಿಸುವ ಪ್ರದೇಶದಲ್ಲಿ ಮೈತಳೆಯುವ ಸಾಮಾಜಿಕ, ರಾಜಕೀಯ, ಮತ್ತು ಮತೀಯ ಬೆಳವಣಿಗೆಗಳಿಂದ ಅನೇಕ ಹೊಸ ಶಬ್ದಗಳು ಸೃಷ್ಟಿಯಾಗುತ್ತಿವೆ. ವಿಜ್ಞಾನದ ಪ್ರಗತಿ, ಕೈಗಾರಿಕೆಗಳ ಪ್ರಭಾವ, ಯಂತ್ರ-ತಂತ್ರಗಳ ವ್ಯಾಪಕವಾದ ಉಪಯೋಗ ಇವುಗಳಿಂದಲೂ ಶಬ್ದ ಜಾಲ ಬೆಳೆಯುತ್ತದೆ. ಅವೆಲ್ಲ ನಿಘಂಟು ಶಾಸ್ತ್ರದ ಕಕ್ಷೆಯಲ್ಲಿ ಬರುತ್ತವೆ. ಒಂದು ಭಾಷೆಯಲ್ಲಿರುವ ಶಬ್ದ ಸಮೂಹವೆಲ್ಲ ಆ ಭಾಷೆಯ ಶಬ್ದ ವ್ಯವಸ್ಥೆಗೆ ಒಳಗಾದದ್ದು. ಪ್ರತಿಯೊಂದು ಶಬ್ದಕ್ಕೂ ಒಂದು ಅರ್ಥವಿದೆ, ಉಚ್ಚಾರಣೆಯಿದೆ, ಚರಿತ್ರೆಯಿದೆ ನಿಘಂಟುಶಾಸ್ತ್ರವು ಶಬ್ದದ ಎಲ್ಲ ಮುಖಗಳನ್ನು ಅಭ್ಯಸಿಸುತ್ತದೆ. ನಿಘಂಟುಶಾಸ್ತ್ರ ಮತ್ತು ನಿಘಂಟುರಚನೆ ಇವೆರಡು ಭಾಷೆಯ ಅಧ್ಯಯನದಲ್ಲಿ ತುಂಬ ನೆರವಾಗುತ್ತವೆ.[೬೧]

ನಿಘಂಟುರಚನೆಗೆ ಭಾಷಾಶಾಸ್ತ್ರವು ತುಂಬ ಸಹಾಯಕವಾಗಿದೆ. ಶಬ್ದಗಳನ್ನು ಆಯ್ಕೆಯಿಂದ ಹಿಡಿದು ಅವುಗಳ ಅರ್ಥನಿರ್ಣಯ, ಅರ್ಥಗಳ ಅನುಕ್ರಮ, ಜ್ಞಾತಿಶಬ್ದಗಳ ಉಲ್ಲೇಖ ಮತ್ತು ಅರ್ಥ ನಿರೂಪಣೆಯ ಮಾರ್ಗ ಇತ್ಯಾದಿಗಳಲ್ಲೆಲ್ಲ ಭಾಷಾಶಾಸ್ತ್ರದ ವಿವಿಧ ಜ್ಞಾನಶಾಖೆಗಳು ಕೋಶಕಾರನಿಗೆ ನೆರವು ನೀಡುತ್ತವೆ. ಉದಾ-ಒಂದು ಸಮುದಾಯದ ಭಾಷೆಯನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ನಿಘಂಟಿಮಗಳನ್ನು ಆಯ್ಕೆಮಾಡುವಾಗ ಕ್ಷೇತ್ರ ಭಾಷಾಶಾಸ್ತ್ರವು ಪದಗಳ ವ್ಯುತ್ಪತ್ತಿಗೆ ತೊಡಗುವಾಗ ಐತಿಹಾಸಿಕ ಭಾಷಾಶಾಸ್ತ್ರವು ಭಾಷಾಸಮುದಾಯದಲ್ಲಿಯ ನುಡಿಗಟ್ಟು, ಗಾದೆ, ಒಗಟುಗಳನ್ನು ಶೋಧಿಸಿ ಅವುಗಳ ಸಾಂಸ್ಕೃತಿಕ ಮಹತ್ವವನ್ನು ಹೇಳುವಾಗ ಸಾಮಾಜಿಕ ಭಾಷಾಶಾಸ್ತ್ರವು ಕೋಶಕಾರನಿಗೆ ನೆರವಾಗುತ್ತವೆ. ಅದರಂತೆ ಒಂದು ಸಮುದಾಯದ ಭಾಷೆಯ ಅಧ್ಯಯನಕ್ಕೆ ನಿಘಂಟುಗಳು ಭಾಷಾಶಾಸ್ತ್ರಜ್ಞರಿಗೆ ನೆರವಾಗುತ್ತವೆ. ಸಮುದಾಯದ ಭಾಷೆಯ ಅನೇಕ ಪದಗಳನ್ನು ಪದಪುಂಜಗಳನ್ನು ಭಾಷಾ ಸಂಶೋಧಕನಿಗೆ ಕೊಡುತ್ತವೆ.

'ನಿಘಂಟನ್ನು ತಯಾರಿಸುವಲ್ಲಿ ಭಾಷಾಶಾಸ್ತ್ರದ ಜ್ಞಾನ ಅನಿವಾರ್ಯವೆನಿಸುತ್ತದೆ. ಏಕೆಂದರೆ ಭಾಷಾಶಾಸ್ತ್ರಜ್ಞ ಭಾಷೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತಾನೆ. ಆತ ಭಾಷೆಯ ಧ್ವನಿಗಳ ವೈಜ್ಞಾನಿಕ ಅಭ್ಯಾಸದಿಂದ ಪದಗಳ ಸ್ವರಾಘಾತ, ಸನ್ನಿಕರ್ಷ ಇವುಗಳನ್ನು ಸರಿಯಾಗಿ ನಿಗದಿಪಡಿಸಬಲ್ಲ ಉಪಭಾಷೆಗಳನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಬಲ್ಲ. ಭಾಷೆಯ ಧ್ವನಿಮಾ, ಆಕೃತಿಮಾ ಇವುಗಳ ಪುನಾರಚನೆ ಭಾಷಾಶಾಸ್ತ್ರದ ಒಂದು ಅಂಗವಾಗಿರುವುದರಿಂದ ವ್ಯುತ್ಪತ್ತಿ ನಿಘಂಟನ್ನು ವೈಜ್ಞಾನಿಕವಾಗಿ ಭಾಷಾವಿಜ್ಞಾನಿ ನಿರ್ದೇಶಿಸಬಲ್ಲ. ವ್ಯಾಕರಣದ ವಿವರಗಳನ್ನು ಮತ್ತು ವಾಕ್ಯರಚನೆಯ ವೈಶಿಷ್ಟ್ಯವನ್ನು ತಿಳಿಸಬಲ್ಲ. ನಿಘಂಟಿನ ತಯಾರಿಕೆಯಲ್ಲಿ ಈ ಎಲ್ಲ ದೃಷ್ಟಿಯಿಂದ ಭಾಷಾಶಾಸ್ತ್ರದ ಅನಿವಾರ್ಯತೆ ಕಂಡುಬರುತ್ತದೆ.[೬೨]

ಸಾಮಾಜಿಕ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಒಂದು ಸಮುದಾಯದ ಭಾಷೆಯನ್ನು ವಿಶ್ಲೇಷಿಸುವಾಗ ಒಂದು ಶಬ್ದಕ್ಕೆ ಒಂದು ಅರ್ಥ ಬಂದರೆ ಆ ಅರ್ಥವೂ ಸರ್ವಕಾಲಕ್ಕೂ ಒಂದೇ ಆಗಿರುವುದಿಲ್ಲ. ಸಂದರ್ಭಾನುಸಾರವಾಗಿ ಶಬ್ದದ ಅರ್ಥಗಳಲ್ಲಿ ವ್ಯತ್ಯಾಸಗಳುಂಟಾಗುತ್ತವೆ. ಆದುದರಿಂದ ಪ್ರತಿಯೊಂದು ಶಬ್ದ ವ್ಯುತ್ಪತ್ತಿ ಅದು ಬದಲಾವಣೆ ಹೊಂದಿದ ಬೇರೆ ಬೇರೆ ರೂಪಗಳು ಸಧ್ಯದಲ್ಲಿ ಅದು ಹೊಂದಿರುವ ರೂಪ, ಮಿಕ್ಕ ಶಬ್ದಗಳ ಜೊತೆಯಲ್ಲಿ ಹೋಲಿಸಿದರೆ ಕಂಡುಬರುವ ಸಾಮ್ಯ ವೈಷಮ್ಯಗಳು ಮುಂತಾದವುಗಳನ್ನೆಲ್ಲ ಅಭ್ಯಾಸ ಮಾಡಬೇಕಾಗುತ್ತದೆ. ಕೆಲವು ವೇಳೆ ಒಂದೊಂದು ಶಬ್ದ ಬಿಡಿಯಾಗಿ ಪ್ರಯೋಗಗಳಲ್ಲಿ ದೊರೆಯದೆ ಹೋಗಬಹುದು ಆಗ ಆ ಸಮುದಾಯದಲ್ಲಿ ಕಂಡುಬರುವ ಗಾದೆ, ಒಗಟು, ನುಡಿಗಟ್ಟುಗಳಲ್ಲಿ ಅದರ ಸುಳಿವು ಕಾಣಬರುತ್ತದೆಯೆ ಎಂಬುದನ್ನು ಪರಿಶೀಲಿಸ ಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ನಿಘಂಟು ಮತ್ತು ಭಾಷಾಶಾಸ್ತ್ರದ ಜ್ಞಾನ ಅವಶ್ಯವಾಗಿ ಬೇಕಾಗುತ್ತದೆ. ಕೋಶಕಾರರು ಭಾಷೆಯ ಪದಗಳನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಂಡರೆ ಭಾಷಾಶಾಸ್ತ್ರಜ್ಞರು ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಭಾಷೆಯಲ್ಲಿಯ ಶಬ್ದ ಪ್ರಯೋಗಗಳನ್ನು, ಪ್ರಾದೇಶಿಕ ವೈಶಿಷ್ಟ್ಯತೆಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿ ನಿಘಂಟಿನ ವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ. ಭಾಷೆಯ ಅಧ್ಯಯನಕ್ಕೆ ನಿಘಂಟುಗಳು, ನಿಘಂಟು ರಚನೆಗೆ ಭಾಷಾಶಾಸ್ತ್ರದ ಸ್ಪಷ್ಟ ತಿಳುವಳಿಕೆ ಅಗತ್ಯ ಅವೆರಡು ಒಂದನ್ನೊಂದು ನಿಯಂತ್ರಿಸಿವೆ.

೧.೦೫ ಪ್ರಸ್ತುತ ಅಧ್ಯಯನದ ಉದ್ದೇಶ ಮತ್ತು ವಿಧಾನ

ಪ್ರಸ್ತುತ ನಿಬಂಧದಲ್ಲಿ ಮಿಶನರಿಗಳ ದ್ವಿಭಾಷಿಕ ನಿಘಂಟುಗಳ ಬಗೆಗೆ ತೌಲನಿಕ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಅಧ್ಯಯನಕ್ಕೆ ಹಿನ್ನೆಲೆಯಾಗಿ ನಿಘಂಟುವಿನ (ಕೋಶದ) ಅರ್ಥ ಮತ್ತು ಸ್ವರೂಪ, ನಿಘಂಟುಗಳ ರಚನೆ, ನಿಘಂಟುಗಳ ವರ್ಗೀಕರಣ, ನಿಘಂಟುಶಾಸ್ತ್ರ ಮತ್ತು ಭಾಷಾಶಾಸ್ತ್ರಗಳ ಸಂಬಂಧ ಇವುಗಳ ಬಗೆಗೆ ಸ್ಥೂಲವಾದ ವಿವರಣೆ ಕೊಡಲಾಗಿದೆ. ಕನ್ನಡದಲ್ಲಿ ಈ ಕುರಿತಾದ ಬರೆಹಗಳು ಹೆಚ್ಚಾಗಿಲ್ಲದಿರುವುದರಿಂದ ಈ ವಿಷಯಗಳ ಬಗ್ಗೆ ಕೊಟ್ಟಿರುವ ವಿವರಗಳು ನಿಷ್ಪ್ರಯೋಜಕವಾಗಲಾರವು-ಎಂದು ಭಾವಿಸಿದ್ದೇನೆ. ಈ ವಿವರಗಳು ಪ್ರಸ್ತುತ ನಿಬಂಧಕ್ಕೆ ಅಗತ್ಯವಾದ ತಾತ್ವಿಕ ಹಿನ್ನಲೆಯನ್ನು ರೂಪಿಸುತ್ತವೆ ಎಂದು ಹೇಳಬಹುದು. ಎರಡನೆಯ ಅಧ್ಯಾಯದಲ್ಲಿ 'ಮಿಶನರಿ' ಎಂಬ ಪದದ ಅರ್ಥ ಮತ್ತು ಸ್ವರೂಪ, ಕರ್ನಾಟಕಕ್ಕೆ ಮಿಶನರಿಗಳ ಆಗಮನ, ಮಿಶನರಿಗಳ ಸಾಹಿತ್ಯರಚನೆ (ಧಾರ್ಮಿಕ ಮತ್ತು ಲೌಕಿಕ), ಕರ್ನಾಟಕದಲ್ಲಿ ಮಿಶನರಿಗಳ ಬಗೆಗೆ ನಡೆದಿರುವ ಕೆಲಸ ಇವುಗಳ ಬಗ್ಗೆ ಒಂದು ಪಕ್ಷಿ ನೋಟವಾಗಿದೆ. ಈ ಎರಡು ಅಧ್ಯಾಯಗಳನ್ನೂ ಈ ನಿಬಂಧದ ಪೀಠಿಕಾಭಾಗವೆಂದು ಪರಿಗಣಿಸಬಹುದು. ಉಳಿದ ಮೂರು ಅಧ್ಯಾಯಗಳು ನಿಬಂಧದ ವಿವರಣಾತ್ಮಕ ಭಾಗವಾಗಿದೆ.

ಯಾವುದೇ ನಿಘಂಟಿನ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕಾದರೆ ಆ ನಿಘಂಟು ರಚನೆಯ ಹಿನ್ನೆಲೆ, ಆ

ಕಾಲದ ಭಾಷಿಕ ಸಂರಚನೆ, ಆಯಾ ಕೋಶಕಾರರ ದೃಷ್ಟಿಕೋನಗಳನ್ನು ಅಧ್ಯಯನ ಮಾಡುವುದು ಅಗತ್ಯವಾಗುತ್ತದೆ. ಮೂರನೆಯ ಅಧ್ಯಾಯದಲ್ಲಿ ಈ ಕಾರ್ಯವನ್ನು ಮಾಡಲಾಗಿದೆ. ಮಿಶನರಿಗಳ ಇಂಗ್ಲಿಶ್-ಕನ್ನಡ ಹಾಗೂ ಕನ್ನಡ-ಇಂಗ್ಲಿಶ್ ದ್ವಿಭಾಷಿಕ ಕೋಶಗಳ ಬಗೆಗಿನ ಸ್ಥೂಲವಾದ ವಿವರಣೆಯನ್ನು ಕೊಡಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮಿಶನರಿ ಕೋಶಕಾರರು ಕೋಶಗಳನ್ನು ಸಿದ್ಧಪಡಿಸುವಾಗ ನಿಘಂಟಿಮಗಳ ಸಂಗ್ರಹ ಮತ್ತು ಸಂಯೋಜನೆ, ಪ್ರದಾನ ಉಲ್ಲೇಖಿಗಳು, ಉಪ ಉಲ್ಲೇಖಿಗಳು ಅವುಗಳ ಆಯ್ಕೆ, ಅರ್ಥ ವಿವರಣೆ, ಕೋಶಗಳಲ್ಲಿ ಅಡಕವಾಗಿರುವ ಸಮಾನಾರ್ಥಕ, ನಾನಾರ್ಥ, ನಿಷೇಧಾರ್ಥಕ, ಪರ್ಯಾಯಪದಗಳು ಹಾಗೂ ಪದರಚನೆಯಲ್ಲಾಗುವ ವ್ಯತ್ಯಾಸಗಳು ಪದಗಳ ಕಾಗುಣಿತ ಮತ್ತು ಉಚ್ಚಾರಣೆ, ಪದಗಳ ವ್ಯಾಕರಣ ವರ್ಗಗಳು, ಕೋಶಕಾರರು ಬಳಸಿದ ಸಂಕ್ಷೇಪಗಳು ಮತ್ತು ಸಂಕೇತಗಳು ಈ ಎಲ್ಲ ಅಂಶಗಳನ್ನು ಒಳಗೊಂಡಿದೆ. ಐದನೆಯ ಅಧ್ಯಾಯವು ಕೋಶಕಾರರು ತಮ್ಮ ಕೋಶಗಳಲ್ಲಿ ಪ್ರಾಚೀನ ಕಾವ್ಯದ ಉದ್ಧರಣೆಗಳನ್ನು, ಗಾದೆ, ನುಡಿಗಟ್ಟು, ಸ್ಥಳನಾಮ, ವ್ಯಕ್ತಿನಾಮ ಹಾಗೂ ಅನುಕರಣವಾಚಕಗಳು ವೃತ್ತಿಪದಗಳನ್ನು, ಸಂಸ್ಕೃತಿ ವಿಶಿಷ್ಟ ಪದಗಳನ್ನು ಯಾವ ರೀತಿಯಾಗಿ ಬಳಸಿದ್ದಾರೆ ಎಂಬುದರ ಬಗ್ಗೆ ವಿವರಗಳನ್ನು ಒಳಗೊಂಡಿದೆ. ಈ ಅಧ್ಯಾಯವು ಮಿಶನರಿ ಕೋಶಗಳು ಧರ್ಮ, ಸಮಾಜ, ಸಂಸ್ಕೃತಿ, ಕಲೆ ಮತ್ತು ಸಾಹಿತ್ಯ ಮುಂತಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿವರಗಳನ್ನು ಯಾವ ರೀತಿಯಾಗಿ ಸಮೀಕರಣಗೊಂಡಿವೆ ಎಂಬುದರ ವಿವರಗಳನ್ನೊಳಗೊಂಡಿದೆ. ಅಧ್ಯಾಯ ಆರರಲ್ಲಿ ಮಿಶನರಿ ಕೋಶಗಳಲ್ಲಿಯ ಪರಸ್ಪರ ಹೋಲಿಕೆ ಮತ್ತು ವ್ಯತ್ಯಾಸಗಳು, ಇತಿ ಮಿತಿಗಳು, ಕನ್ನಡ ನಿಘಂಟು ರಚನೆಗೆ ಮಿಶನರಿ ಕೋಶಕಾರರ ಕೊಡುಗೆ ಇತ್ಯಾದಿ ಅಂಶಗಳನ್ನೊಳಗೊಂಡ ಮಿಶನರಿ ನಿಘಂಟುಗಳ ಮೌಲ್ಯಮಾಪನ ಮಾಡಲಾಗಿದೆ. ಅಧ್ಯಾಯ ಏಳರಲ್ಲಿ ಅನುಬಂಧಕ್ಕೆ ಮೀಸಲಾಗಿದ್ದು ಪ್ರಾಚೀನ, ಅರ್ವಾಚೀನ ನಿಘಂಟುಗಳ ಹಾಗೂ ಕನ್ನಡದಲ್ಲಿ ನಿಘಂಟುಸಾಹಿತ್ಯದ ಅಧ್ಯಯನದ ಬಗೆಗೆ ಸ್ಥೂಲಸಮೀಕ್ಷೆ ಮಾಡಿಕೊಡಲಾಗಿದೆ.

ಪ್ರಾಚೀನ ನಿಘಂಟುಗಳು ಹಾಗೂ ಮಿಶನರಿ ನಿಘಂಟುಗಳು ಭಾಷೆಯನ್ನು ನೋಡುವ ದೃಷ್ಟಿಕೋನ ಬೇರೆಯಾಗಿದೆ. ಪ್ರಾಚೀನರು (ಹೆಚ್ಚಾಗಿ) ನಾಮಪದಗಳಿಗೆ ಒತ್ತುಕೊಟ್ಟು ಅರ್ಥೈಸಿದರು. ಅವು ಕೇವಲ ಪದಕೋಶಗಳು. ಮಿಶನರಿಗಳು ನಾಮಪದ, ಕ್ರಿಯಾಪದ, ವಿಶೇಷಣ, ಅವ್ಯಯ ಮುಂತಾದ ವ್ಯಾಕರಣ ವರ್ಗಗಳಿಗೂ ಅನೇಕ ಸಂಸ್ಕೃತಿ ವಿಶಿಷ್ಟ ಪದಗಳಿಗೂ ಅರ್ಥಕೊಟ್ಟರು. ಪ್ರಾಚೀನರು ಕೇವಲ ಸಾಹಿತ್ಯಿಕ ಕೃತಿಗಳಿಂದ ಶಬ್ದಗಳನ್ನು ಸಂಗ್ರಹಿಸಿದರೆ ಮಿಶನರಿಗಳು ಸಾಹಿತ್ಯಿಕ ಕೃತಿಗಳಲ್ಲದೆ ಕ್ಷೇತ್ರಕಾರ್ಯದ ಮೂಲಕ ಉಪಭಾಷಾ ಪದಗಳನ್ನು ಸಂಗ್ರಹಿಸಿ ಅರ್ಥಕೊಟ್ಟರು. 'ವೈಜ್ಞಾನಿಕ ನಿಘಂಟು' ಎಂಬ ಪರಿಕಲ್ಪನೆ ಮಿಶನರಿ ಕೋಶಗಳಿಂದ ಆರಂಭವಾಯಿತೆನ್ನಬಹುದು.

ಯಾವುದೇ ನಿಘಂಟಿನ ಸಂಶೋಧನೆಯಲ್ಲಿ ಮೂರು ಕ್ರಮಗಳನ್ನು ಅನುಸರಿಸಬಹುದು: (೧)ವರ್ಣನಾತ್ಮಕ

ಅಧ್ಯಯನ:(೨) ಸಾಂಸ್ಕೃತಿಕ ಅಧ್ಯಯನ: (೩) ತೌಲನಿಕ ಅಧ್ಯಯನ ಮೊದಲನೆಯ ಬಗೆಯ ಅಧ್ಯಯನ ಒಂದು ನಿಘಂಟನ್ನು ಮಾತ್ರ ವಿಶ್ಲೇಷಿಸುವಾಗ ಸಾಧ್ಯವಾಗುತ್ತದೆ. ಆದರೆ ಒಂದೇ ಕಾಲಘಟ್ಟದಲ್ಲಿ ಬರುವ ಹಾಗೂ ಒಂದೇ ಗುಂಪಿಗೆ ಸೇರಿರುವ ಒಂದಕ್ಕಿಂತ ಹೆಚ್ಚು ನಿಘಂಟುಗಳನ್ನು ವಿಶ್ಲೇಷಿಸುವಾಗ ಸಾಮಾನ್ಯವಾಗಿ ಸಾಂಸ್ಕೃತಿಕ ಹಾಗೂ ತೌಲನಿಕ ಅಧ್ಯಯನ ಕ್ರಮವನ್ನೇ ಅನುಸರಿಸ ಬೇಕಾಗುವುದು ಅನಿವಾರ್ಯವಾಗುತ್ತದೆ. ಒಂದಕ್ಕಿಂತ ಹೆಚ್ಚು ನಿಘಂಟುಗಳನ್ನು ಈ ರೀತಿಯ ಅಧ್ಯಯನ ಕ್ರಮಗಳನ್ನನುಸರಿಸಿದರೆ ನಿಘಂಟುಗಳ ಅಧ್ಯಯನಕ್ಕೆ ಸಮಗ್ರತೆ ಪ್ರಾಪ್ತವಾಗುತ್ತದೆ.

ಏಳು ಮಿಶನರಿಗಳು ಹತ್ತು ಕನ್ನಡ -ಇಂಗ್ಲಿಶ್, ಇಂಗ್ಲಿಶ್-ಕನ್ನಡ ದ್ವಿಭಾಷಿಕ ನಿಘಂಟುಗಳನ್ನು ರಚಿಸಿದ್ದಾರೆ. ಈ ಕಾರಣದಿಂದಾಗಿ ವರ್ಣನಾತ್ಮಕ ಅಧ್ಯಯನಕ್ಕಿಂತ ಈ ನಿಘಂಟುಗಳ ಅಧ್ಯಯನಕ್ಕೆ ತೌಲನಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಹೆಚ್ಚು ಅನುಕೂಲಕರವಾಗಿದೆ. ಮಿಶನರಿಗಳ ಕಾರ್ಯ ಕ್ಷೇತ್ರಗಳಾಗಿದ್ದ ಮಂಗಳೂರು ಮತ್ತು ಧಾರವಾಡದಲ್ಲಿಯ ಬಾಸೆಲ್ ಮಿಶನ್ ಸಂಸ್ಥೆಗಳಿಗೆ ಭೇಟಿ ಕೊಟ್ಟು, ನಿಬಂಧಕ್ಕೆಬೇಕಾದ ವಿಷಯಗಳನ್ನು ಕ್ಷೇತ್ರಕಾರ್ಯ ವಿಧಾನದಿಂದ ಸಂಗ್ರಹಿಸಲಾಗಿದೆ. ಅದಕ್ಕೆ ಈಗಿನ ಕ್ರೈಸ್ತ ಪಾದ್ರಿಗಳ ಜೊತೆಗ ಹಾಗೂ ನಿಘಂಟುಶಾಸ್ತ್ರ ಪರಿಣಿತರಾದವರೊಡನೆ ಸಂಭಾಷಣೆ, ಚರ್ಚೆ ನಡೆಸಲಾಗಿದೆ. ಮಿಶನರಿಗಳ ನಿಘಂಟುಗಳಿಗೆ ಕನ್ನಡ ವಿದ್ವಾಂಸರು ಯಾವ ರೀತಿಯಾಗಿ ಪ್ರತಿಕ್ರಿಯಿಸಿದ್ದಾರೆ ಎಂಬುದರ ಬಗೆಗೆ ಚರ್ಚಿಸಲಾಗಿದೆ. ಕೋಶಗಳನ್ನು ರಚಿಸುವಾಗ ಮಿಶನರಿಗಳಿಗೆ ಯಾವ ಬಗೆಯಾದ ಭಾಷಿಕವಾದ, ಸಾಮಾಜಿಕವಾದ ತೊಡಕುಗಳು ಉಂಟಾದವು. ನಿಘಂಟು ರಚನೆಗೆ ಅವರಿಗುಂಟಾದ ಸಾಮಾಜಿಕ ಒತ್ತಡ ಇತ್ಯಾದಿ ಅಂಶಗಳ ಬಗ್ಗೆಯೂ ಚರ್ಚಿಸಲಾಗಿದೆ. ಇದರಿಂದಾಗಿ ಈ ನಿಬಂಧದಲ್ಲಿ ಸಾಂಸ್ಕೃತಿಕ ಅಧ್ಯಯನ ಕ್ರಮವನ್ನು ಅಳವಡಿಸಿಕೊಳ್ಳಲು ಸಾಧ್ಯವಾಗಿದೆ.

ಮಿಶನರಿ ಕೋಶಗಳ ಸ್ವರೂಪವನ್ನು ಅವುಗಳಲ್ಲಿರುವ ಸಾಂಸ್ಕೃತಿಕ ಅಂಶಗಳನ್ನು ಹಾಗೂ ಆಧುನಿಕ ಕೋಶಗಳ ಮೇಲೆ ಮಿಶನರಿ ಕೋಶಗಳ ಪ್ರಭಾವ ಯಾವ ರೀತಿಯದು ಎಂಬ ಅಂಶಗಳನ್ನು ಗುರುತಿಸುವುದು ಈ ನಿಬಂಧದ ಉದ್ದೇಶ. ಕನ್ನಡದಲ್ಲಿ ಅನೇಕ ಬಗೆಯ ನಿಘಂಟುಗಳು ರಚಿತವಾಗಿವೆ. ಆದರೆ ಯಾವುದೇ ಒಂದು ನಿಘಂಟನ್ನು ಅಥವಾ ನಿಘಂಟುಗಳನ್ನು ಕುರಿತು ಸಾಂಸ್ಕೃತಿಕ ಅಂಶಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಪೂರ್ಣ ಪ್ರಮಾಣದ ಅಧ್ಯಯನಗಳು ಈವರೆಗೆ ನಡೆದಿಲ್ಲ. ಈ ನಿಬಂಧ ಈ ದಿಕ್ಕಿನಲ್ಲಿ ಮೊದಲ ಪ್ರಯತ್ನವಾಗಿದೆ. ಈ ಅಧ್ಯಯನ ನಿಘಂಟುಶಾಸ್ತ್ರಕ್ಕೆ ಮಾತ್ರಸೀಮಿತವಾಗದೆ ಭಾಷಾಶಾಸ್ತ್ರ ಕ್ಷೇತ್ರಕ್ಕೂ ಸೇರುವಂತಹುದಾಗಿದೆ. ಹೀಗಾಗಿ ಈ ಅಧ್ಯಯನ ಎರಡು ಅಧ್ಯಯನ ವಿಷಯಗಳ ವ್ಯಾಪ್ತಿಯಲ್ಲಿ ಬರುತ್ತದೆ.

ಅಡಿಟಿಪ್ಪಣಿ

೧. ಟಿ. ವಿ. ವೆಂಕಟಾಚಲಶಾಸ್ತ್ರೀ ೧೯೮೮ 'ಸಂಸ್ಕೃತ ಮತ್ತು ಕನ್ನಡ ನಿಘಂಟು ಸಾಹಿತ್ಯ' ಪ್ರಬುದ್ಧ ಕರ್ಣಾಟಕ ಸಂ-೭೦, ಸಂಚಿಕೆ-೧ ಪುಟ- ೧

೨. ಕೆ. ನಾರಾಯಣ - ೧೯೭೬ 'ಕನ್ನಡ ಭಾಷೆಯಲ್ಲಿ ನಿಘಂಟು' ಸಾಹಿತ್ಯ ಜೀವಿ (ಜಿ. ವೆಂಕಟಸುಬ್ಬಯ್ಯ ಅಭಿನಂಧನ ಗ್ರಂಥ) ಪು-೨೪೭

೩. L. ZGUSTA 1971- MANUAL LEXICORAPHY, 1971 PP. 197

೪. ಡಾ. ಬಿ.ವಿ. ಮಹೀದಾಸ ೧೯೯೫- 'ಕನ್ನಡದಲ್ಲಿ ನಿಘಂಟುಗಳು'

ಸಾರ್ಥಕ (ಎಂ. ಮರಿಯಪ್ಪಭಟ್ ಸ್ಮರಣ ಗ್ರಂಥ) (ಸಂ) ಡಾ. ಕೃಷ್ಣಭಟ್ ಅರ್ತಿಕಜೆ ಪುಟ- ೫೧೨.

೫. Maheshwar neog 1998- Lexicography in Assamese Lexicography in India (Ed) B.G. Misro C.I.I.L - PP.-13

೬. Kamini Kumar Ray 1980- A Survey of Bengali Dictionaries Lexicography in India (ed) B.G. Misro C.I.I.L. Mysore- PP-13

೭. S.M. Katre 1965- Lexicography Annamalainagar Annamalai University PP-5

೮. ಪ್ರೊ.ಜಿ. ವೆಂಕಟಸುಬ್ಬಯ್ಯ ಅವರು 'ನಿಘಂಟು-ಕೋಶ' ಅರ್ಥ ವ್ಯತ್ಯಾಸದ ಬಗೆಗೆ ನಾನು ಕೇಳಿದ ಪ್ರಶ್ನೆಗೆ ದಿನಾಂಕ ೭.೧೨.೧೯೯೭ರ ಪ್ರಜಾವಾಣಿ ದಿನ ಪತ್ರಿಕೆಯ 'ಇಗೋ ಕನ್ನಡ' ಭಾಗದಲ್ಲಿ ವಿವರಿಸಿದರು.

೯. ಡಾ. ವಿಲ್ಯಂಮಾಡ್ತ ಮತ್ತು ಆರ್.ವೈ. 'ಕುಲಕರ್ಣಿ ೧೯೯೪- ನಿಘಂಟು ರಚನಾ ವಿಜ್ಞಾನ ಪುಟ- ೩೭

೧೦. ಎಸ್. ಬಸವಾರಾಧ್ಯ - ಹಳಗನ್ನಡ ನಿಘಂಟು ಪೀಠಿಕೆ ಪುಟ-ii

೧೧. ಶಬ್ದಕೋಶದಲ್ಲಿ ಬರುವ ಶಬ್ದವನ್ನು ಭಾಷಾಶಾಸ್ತ್ರದಲ್ಲಿ 'ನಿಘಂಟಿಮ' (Lexeme) ಎಂದು ಕರೆಯುತ್ತಾರೆ. ಸಾಮಾನ್ಯ ಭಾಷೆಯಲ್ಲಿ ಅದನ್ನು ಶಬ್ದ/ಪದವೆಂದು ಕರೆಯುತ್ತಾರೆ. ನಿಘಂಟಿಮಗಳನ್ನು ಕುರಿತು ಸೈದ್ಧಾಂತಿಕ ವಿವೇಚನೆಯೇ ನಿಘಂಟು ವಿಜ್ಞಾನವಾಗಿದೆ.

- ವಿಲ್ಯಂಮಾಡ್ತ ಮತ್ತು ಆರ್. ವೈ. ಕುಲಕರ್ಣಿ ೧೯೯೪ ನಿಘಂಟು ರಚನಾ ವಿಜ್ಞಾನ ಪುಟ-೧

೧೨. ಡಾ. ವಿಲ್ಯಂ ಮಾಡ್ತ ಮತ್ತು ಕುಲಕರ್ಣಿ - ಪೂರ್ವೋಕ್ತ ಪುಟ -೨೨

೧೩. ಡಾ. ವಿಲ್ಯಂ ಮಾಡ್ತ ಮತ್ತು ಕುಲಕರ್ಣಿ ಪೂರ್ವೋಕ್ತ ಪುಟ-೨೧-೨೨

೧೪. ಭಾಷಾ ಸಂಶೋಧಕ ನೇರವಾಗಿ ಭಾಷಾ ಕ್ಷೇತ್ರಕ್ಕೆ ಹೋಗಿ, ನಿರೂಪಕರನ್ನು ಆರಿಸಿಕೊಂಡು ಅವರ ನೆರವಿನಿಂದ ಭಾಷಾ ಸಾಮಗ್ರಿಗಳನ್ನು ಪ್ರತ್ಯಕ್ಷವಾಗಿ ಸಂಗ್ರಹಿಸುವ ವೈಜ್ಞಾನಿಕ ಕ್ರಮವೇ ಭಾಷಾ ಕ್ಷೇತ್ರಕಾರ್ಯ.

- ಎಸ್.ಎಸ್. ಅಂಗಡಿ. ಭಾಷಾ ಕ್ಷೇತ್ರಕಾರ್ಯ ಪುಟ-೨. ೧೯೯೫

೧೫. ಭಾಷಾ ಸಮುದಾಯದಲ್ಲಿ ಕ್ಷೇತ್ರ ಕರ್ತನಿಗೆ ಭಾಷಾ ಸಾಮಗ್ರಿಗಳನ್ನು ಒದಗಿಸುವ ವ್ಯಕ್ತಿಗೆ ನಿರೂಪಕರೆಂದು ಕರೆಯುತ್ತಾರೆ. ಕ್ಷೇತ್ರಕಾರ್ಯದಲ್ಲಿ ನಿರೂಪಕರು ಪ್ರಮುಖ ಪಾತ್ರವಹಿಸುತ್ತಾರೆ. ಕ್ಷೇತ್ರಾಧ್ಯಯನದಲ್ಲಿ ಕ್ಷೇತ್ರಕರ್ತ ಬಾಹ್ಯವಾಗಿ ಕೆಲಸ ಮಾಡಿದರೆ ನಿರೂಪಕ ಸಮುದಾಯದ ಒಳಗಿದ್ದು ಕ್ಷೇತ್ರಕರ್ತನಿಗೆ ಸಹಾಯಮಾಡುತ್ತಾನೆ.

- ಎಸ್. ಎಸ್. ಅಂಗಡಿ ಪೂರ್ವೋಕ್ತ ಪು-೧೨

೧೬. ಡಾ. ಯು. ಪಿ. ಉಪಾಧ್ಯಾಯ ೧೯೯೭ - ತುಳು ನಿಘಂಟು ಯೋಜನೆ ಮತ್ತು ನಿರ್ವಹಣೆ ರಾಷ್ಟ್ರಕವಿ ಗೋವಿಂದಪೈ ಸಂಶೋಧನಕೇಂದ್ರ, ಉಡುಪಿ ಪುಟ -೨೩

೧೭. L. ZGUSTA 1971- Ibid. P.P. -25

೧೮. Ram Adhar Singh 1991- An Introduction to lexicography P.P - III C I I L Mysore

೧೯. ಪ್ರೊ. ಜಿ. ವೆಂಕಟಸುಬ್ಬಯ್ಯ ೧೯೯೩ ನಿಘಂಟುಶಾಸ್ತ್ರ ಪರಿಚಯ ಪುಟ- ೩೪

೨೦. ಧ್ವನಿಮಾತ್ಮಕವಾಗಿ ಭಿನ್ನರೂಪಗಳುವುಳ್ಳ ನಿಘಂಟಿಮಗಳಿಗೆ ಏಕಾರ್ಥವಿದ್ದರೆ ಅವುಗಳನ್ನು ಸಮಾನಾರ್ಥಕಗಳೆನ್ನುತ್ತಾರೆ

೨೧. ಧ್ವನಿಮಾತ್ಮಕವಾಗಿ ಏಕರೂಪವುಳ್ಳ ನಿಘಂಟಿಮಕ್ಕೆ ಯಾವುದೇ ಸಂಬಂಧವಿಲ್ಲದ ಅನೇಕಾರ್ಥಗಳಿದ್ದರೆ ಅದಕ್ಕೆ ಸಮರೂಪತೆ ಎನ್ನುತ್ತಾರೆ. (ಸಮಾನಾರ್ಥಕ, ಸಮರೂಪತೆಯ ರೂಪಗಳ ಸ್ವರೂಪದ ಬಗೆಗೆ ಈ ನಿಬಂಧದ ನಾಲ್ಕನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.)

೨೨. ಡಾ. ವಿಲ್ಯಂ ಮಾಡ್ತ, ಆರ್.ವೈ, ಕುಲಕರ್ಣಿ - ಪೂರ್ವೋಕ್ತ ಪುಟ -೨೮

೨೩. ಡಾ. ಯು.ಪಿ. ಉಪಾಧ್ಯಾಯ; ಪೂರ್ವೋಕ್ತ ಪುಟ-೨೭, ೨೮

೨೪. L. ZGUSTA 1971- Ibid PP-197.

೨೫. R.A. Singh 1991- Ibid PP-19-23

೨೬. ಕೆ. ನಾರಾಯಣ ೧೯೭೬- 'ಕನ್ನಡ ಭಾಷೆಯಲ್ಲಿ ನಿಘಂಟು' ಸಾಹಿತ್ಯ ಜೀವಿ (ಪ್ರೊ. ಜಿ. ವೆಂಕಟಸುಬ್ಬಯ್ಯ ಅಭಿನಂದನ ಗ್ರಂಥ) (ಸಂ) ಎಲ್. ಎಸ್. ಶೇಷಗಿರಿರಾವ್

೨೭. ಡಾ. ವಿಲ್ಯಂ ಮಾಡ್ತ ಮತ್ತು ಕುಲಕರ್ಣಿ - ಪೂರ್ವೋಕ್ತ ಪುಟ-೧೬

೨೮. ಕೆ. ನಾರಾಯಣ ೧೯೭೬- ಕನ್ನಡ ಭಾಷೆಯಲ್ಲಿ ನಿಘಂಟು ಸಾಹಿತ್ಯ ಜೀವಿ ೧೯೭೬ (ಸಂ) ಎಲ್. ಎಸ್. ಶೇಷಗಿರಿರಾವ್

೨೯. R.A. Singh 1991 - Ibid PP-27

೩೦. ಪ್ರೊ. ಜಿ. ವೆಂಕಟಸುಬ್ಬಯ್ಯ - ಪೂರ್ವೋಕ್ತ ಪುಟ-೫

೩೧. 'Lexicology is the Science of the study of word whereas lexicography is the writing of the word in some concrete form i.e. in the form of dictionary as we shall see later lexicology and lexicography are very closely related rather the latter is directly dependent on the former and may be called applied lexicology.

- An Introduction to lexicography R.A. singh C I I L 1991.

೩೨. ಕೆ. ನಾರಾಯಣ ಪೂರ್ವೋಕ್ತ ಪುಟ -೨೫೪

ಅಧ್ಯಾಯ- ೨ ಮಿಶನರಿಗಳು

೨.೦೧ 'ಮಿಶನರಿ' ಎಂಬ ಪದದ ಅರ್ಥ ಮತ್ತು ಸ್ವರೂಪ

೨.೦೨ ಮಿಶನರಿಗಳ ಆಗಮನ

೨.೦೩ ಮಿಶನರಿಗಳ ಸಾಹಿತ್ಯ ರಚನೆ; ಧಾರ್ಮಿಕ ಮತ್ತು ಲೌಕಿಕ

೨.೦೪ ಮಿಶನರಿಗಳ ಬಗೆಗೆ ಈವರೆಗೆ ನಡೆದಿರುವ ಅಧ್ಯಯನ

ಮಿಶನರಿಗಳು

೨.೦೧ 'ಮಿಶನ್' ಮತ್ತು 'ಮಿಶನರಿ' ಎಂಬ ಪದಗಳ ಅರ್ಥ ಮತ್ತು ಸ್ವರೂಪ

'ಮಿಶನ್' (Mission) ಎಂದರೆ ಮತಾಂತರಗೊಳಿಸುವ ಕಾರ್ಯಕ್ಕಾಗಿ ಧಾರ್ಮಿಕ ಉಪದೇಶಕರನ್ನು ಕಳಿಸಿದ ತಂಡ. ' Mission ಈ ರೂಪ ಲ್ಯಾಟಿನ್ mitto (I send) ಧಾತುವಿನಿಂದ missum, ಅದರಿಂದ missio ಅದರಿಂದ ಇಂಗ್ಲಿಷ್ mission ಪದ ಬಂದಿದೆ'[1] ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಅಭಿಪ್ರಾಯ ಪಡುವಂತೆ 'ಮಿಶನ್' ಎಂದರೆ ಕ್ರಿಶ್ಚಿಯನ್ ಚರ್ಚುಗಳು ಬೇರೆ ದೇಶಗಳಿಗೆ ಬೈಬಲ್ಲಿನ ಪ್ರಚಾರಕ್ಕೂ ಕ್ರೈಸ್ತಮತ ಪ್ರಚಾರಕ್ಕೂ ಮತಾಂತರಗೊಳಿಸುವುದಕ್ಕೂ ಕಳುಹಿಸಿದ ವ್ಯಕ್ತಿಗಳ ಗುಂಪು ಎಂದರ್ಥ. ಈ ಪದ ಹೆಚ್ಚಾಗಿ ಕ್ರೈಸ್ತ ಮತ ಪ್ರಚಾರ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. 'ಮಿಶನ್' ಶಬ್ದದಿಂದ 'ಮಿಶನರಿ' ಎಂಬುದು ಬೆಳೆದು ಬಂದಿದೆ. ಮಿಶನ್ನಿನ ಕೆಲಸಕ್ಕಾಗಿ ಕಳುಹಿಸಿದ ವ್ಯಕ್ತಿ ಎಂದರ್ಥ.[2] " ಕ್ರೈಸ್ತ ಧರ್ಮದ ಪ್ರಚಾರವನ್ನೇ ಪ್ರಧಾನ ಉದ್ದೇಶವನ್ನಾಗಿ ಇಟ್ಟುಕೊಂಡು ಕ್ರೈಸ್ತೇತರರ ನಡುವೆ ಕೆಲಸ ಮಾಡುವವನೇ ಮಿಶನರಿ" ಎಂದು ಡಾ. ಎಡ್ವರ್ಡ್ ಮೊರೋನ ಅವರು ಅಭಿಪ್ರಾಯಪಟ್ಟಿದ್ದಾರೆ.[3] ಯೇಸು ಕ್ರಿಸ್ತರ ಶುಭ ವರ್ತಮಾನದ ಪ್ರಸಾರಣೆಯಲ್ಲಿ ಕಂಕಣ ಬದ್ಧರಾಗಿ ಹಲವಾರು ಕಡೆಗಳಲ್ಲಿ ಧರ್ಮ ಪ್ರಸಾರಣೆ ಮಾಡಿದರು. ಹೀಗೆ ಧರ್ಮ ಪ್ರಸಾರಣೆಗೆ ಹೋದವರನ್ನು ಮಿಶನರಿಗಳು ಎಂದು ಕರೆಯುತ್ತಾರೆ." ಎಂದು ಜಯವಂತ ಎಮ್ ಜೋಗುಳ ಅವರು ಅಭಿಪ್ರಾಯಪಡುತ್ತಾರೆ[4]. ಮಿಶನರಿಗಳು ಯಾರು ಎಂಬುದನ್ನು ವಿವರಿಸುತ್ತಾ ಡಾ. ವರದರಾಜ ಹುಯಿಲಗೋಳ ಅವರು ತುಸು ಭಾವುಕರಾಗಿ ಹೀಗೆ ಬಣ್ಣಿಸಿದ್ದಾರೆ. "ಹೋಗಿರಿ ಪ್ರಪಂಚದ ತುಂಬಾ ಹೋಗಿರಿ, ಏಸುವಿನ ದಿವ್ಯ ವಚನಗಳನ್ನು ಎಲ್ಲೆಡೆಗೂ ಸಾರಿರಿ. ಅದೆಂಥ ಅದ್ಭುತ ಶಕ್ತಿ ಈ ವಾಕ್ಯಗಳಲ್ಲಿ? ಹಲವಾರು ವ್ಯಕ್ತಿಗಳ ಅಂತರಾಳವನ್ನೇ ಈ ವಾಕ್ಯಗಳು ಕಲಕಿದವು. ಅವರ ಅಂತರಾಳದಲ್ಲಿ ಅವು ನೆಲೆಯೂರಿದವು. ವ್ಯಕ್ತಿಗಳು ಶಕ್ತಿಗಳಾದರು. ಕ್ರೈಸ್ತಮತ ಪ್ರಚಾರದ ಪಂಜವನ್ನು ಹಿಡಿದುಕೊಂಡು ಎಲ್ಲೆಡೆಗೂ ಸಾಗಿದರು ಅವರೇ ಆ ಮಿಶನರಿಗಳು''[5] ಮಿಶನರಿ ಎಂದರೆ ಸ್ಥೂಲವಾಗಿ ಕ್ರೈಸ್ತ ಧರ್ಮ ಪ್ರಚಾರಕ ಎಂದು ಕರೆಯಬಹುದಾಗಿದೆ. ಅವರ ಕೆಲಸ ಬೈಬಲಿನ ತತ್ವಗಳನ್ನು ಪ್ರಚಾರಮಾಡಿ, ಶಾಲೆಗಳು, ಆಸ್ಪತ್ರೆಗಳು ಮುಂತಾದವುಗಳನ್ನು ಸ್ಥಾಪನೆಮಾಡಿ ತನ್ಮೂಲಕ ಜನರನ್ನು ಕ್ರೈಸ್ತಮತಕ್ಕೆ ಸೇರಿಸುವುದು. ಕ್ರೈಸ್ತ ಮತೀಯ ಗ್ರಂಥಗಳಲ್ಲಿ ಈ ವಿಚಾರವು ಸ್ಪಷ್ಟವಾಗಿ ನಿರೂಪಿತವಾಗಿದೆ.

ಯೇಸುವಿನ ಸುವಾರ್ತೆಯನ್ನು ಸಾರಲು ಪ್ರಪಂಚದಾದ್ಯಂತ ಕ್ರೈಸ್ತ ಸಭೆಗಳು ಉದಯವಾದವು. ೧೮ನೆಯ ಶತಮಾನದ ಕೊನೆಯ ಮತ್ತು ೧೯ನೆಯ ಶತಮಾನದ ಮೊದಲಿನ ಎರಡು ದಶಕಗಳ ಸಮಯದಲ್ಲಿ ಸುವಾರ್ತೆಯ ಸೇವೆಯಲ್ಲಿ ಆಸಕ್ತಿ ಬೆಳೆದು ಹಲವಾರು ಮಿಶನರಿ ಸಂಘಗಳು ಅಸ್ತಿತ್ವಕ್ಕೆ ಬಂದವು. ಕ್ರೈಸ್ತ ಮಿಶನರಿಗಳಲ್ಲಿ 'ಪ್ರಾಟೆಸ್ಟಂಟ್' ಮತ್ತು 'ಕಥೋಲಿಕ್' ಎಂಬ ಮತಗಳಿವೆ. ಆಯಾ ಮತಗಳಿಗೆ ಸಂಬಂಧಿಸಿದ

ಮಿಶನರಿಗಳನ್ನು ಪ್ರಾಟೆಸ್ಟಂಟ್ ಮಿಶನರಿಗಳು, ಕಥೋಲಿಕ್ ಮಿಶನರಿಗಳೆಂದು ಕರೆಯುತ್ತಾರೆ. ಪ್ರಾಟೆಸ್ಟಂಟ್ ಮಿಶನರಿಗಳು ಪ್ರಮುಖವಾಗಿ ಲಂಡನ್, ವೆಸ್ಲೆಯನ್ ಮೆಥಾಡಿಸ್ಟರ್, ಬಾಸೆಲ್ ಸಂಸ್ಥೆಗಳಲ್ಲಿ ತರಬೇತಿ ಹೊಂದಿರುವುದರಿಂದ ಕ್ರಮವಾಗಿ ಲಂಡನ್ ಮಿಶನ್, ವೆಸ್ಲೆಯನ್ ಮಿಶನ್, ಮೆಥಾಡಿಸ್ಟರ್ ಮಿಶನ್, ಬಾಸೆಲ್ ಮಿಶನ್ ಎಂದು ಕರೆಯಲಾಗುತ್ತದೆ.[೬] ಒಟ್ಟಾರೆಯಾಗಿ ಯೇಸುಕ್ರಿಸ್ತನ ಮತ್ತು ಅವನ ಉತ್ತರಾಧಿಕಾರಿಯಾದ ಧರ್ಮ ಸಭೆಯ ನಿರ್ದೇಶನಕ್ಕೆ ಒಳಪಟ್ಟು ಕ್ರೈಸ್ತ ಧರ್ಮವನ್ನು ಪ್ರಚಾರಮಾಡುವುದು 'ಮಿಶನ್' ಎಂದೂ ಪ್ರಚಾರ ಮಾಡುವವನು 'ಮಿಶನರಿ' ಎಂದೂ ಈ ನಿಬಂಧದ ಉದ್ದಕ್ಕೂ ಬಳಸಲಾಗಿದೆ.

೨.೦೨ ಮಿಶನರಿಗಳ ಆಗಮನ

ಆಧುನಿಕ ಭಾರತವು ಹಲವಾರು ಐತಿಹಾಸಿಕ ವಿದ್ಯಮಾನಗಳಿಂದ ರೂಪುಗೊಂಡಿದೆ. ವರ್ತಕರಾಗಿ ಭಾರತಕ್ಕೆ ಆಗಮಿಸಿದ ಯುರೋಪಿಯನ್ನರ, ಧರ್ಮ ಪ್ರಚಾರಕ್ಕಾಗಿ ಆಗಮಿಸಿದ ಮಿಶನರಿಗಳ ಸಂಪರ್ಕ ಪಡೆದು ವೈಚಾರಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಮಹತ್ವದ ಬದಲಾವಣೆಗಳನ್ನು ಕಂಡಿತು. ಇದರಿಂದ ನಾಡಿನ ಸಾಂಸ್ಕೃತಿಕ ವಲಯದಲ್ಲಿ ಮೂಲಭೂತ ಪರಿವರ್ತನೆಗಳು ಉಂಟಾದವು.

ಭಾರತಕ್ಕೆ ಆಗಮಿಸಿದ ಐರೋಪ್ಯರಲ್ಲಿ ಪೋರ್ಚುಗೀಸರು ಮೊದಲಿಗರು. (ನಂತರ ಡಚ್ಚರು, ಇಂಗ್ಲೀಷರು ಮತ್ತು ಫ್ರೆಂಚರು ಕ್ರಮವಾಗಿ ಜಲಮಾರ್ಗದ ಮೂಲಕ ಭಾರತಕ್ಕೆ ಆಗಮಿಸಿದರು). ಭಾರತದಲ್ಲಿನ ಪ್ರದೇಶಗಳನ್ನು ಗೆದ್ದುಕೊಂಡು ಅವುಗಳನ್ನು ತಾವೇ ನೇರವಾಗಿ ಆಳಬೇಕೆಂಬ ವಿಚಾರ ಧಾರೆಯನ್ನು ಕಾರ್ಯರೂಪಕ್ಕಿಳಿಸುವಲ್ಲಿ ಪೋರ್ಚುಗೀಸರೇ ಮೊದಲಿಗರು. ಅರಬ್ಬೀ ಸಮುದ್ರ, ಪರ್ಶಿಯನ್ ಕೊಲ್ಲಿ ಹಾಗೂ ಕೆಂಪು ಸಮುದ್ರದ ವಿಶಾಲ ಪ್ರದೇಶದಲ್ಲಿ ಪ್ರಬಲವರ್ತಕರಾಗಿದ್ದ ಅರಬ್ಬರ ಉತ್ಕರ್ಷವನ್ನು ಉಚ್ಚಾಟಿಸಿ, ಪೂರ್ವದ ಸಮುದ್ರಗಳಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸುವ ಮೂಲಕ ಪೌರ್ವಾತ್ಯ ವಾಣಿಜ್ಯದ ಏಕಸ್ವಾಮ್ಯವನ್ನು ಹೊಂದುವುದು, ಪೂರ್ವದಲ್ಲಿ ಪೋರ್ಚುಗೀಸ್ ವಸಾಹತು ಸಾಮ್ರಾಜ್ಯವನ್ನು ನಿರ್ಮಿಸುವುದು ಮತ್ತು ಕ್ರೈಸ್ತ ಧರ್ಮವನ್ನು ಪ್ರಸಾರಗೊಳಿಸುವುದು ಇವು ಪೋರ್ಚುಗೀಸರ ಪ್ರಧಾನ ಮಹತ್ವಾಕಾಂಕ್ಷೆಗಳಾಗಿದ್ದವು. ನಮ್ಮ ನಾಡಿಗೆ ಪಾಶ್ಚಾತ್ಯ ಮಿಶನರಿಗಳ ಸಂಪರ್ಕ ಬಂದುದು ಗೋವೆಯ ಮೂಲಕ : ೧೭ನೆಯ ಶತಮಾನದ ಆರಂಭಕಾಲದಿಂದ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಥೋಲಿಕ್ ಪಾದ್ರಿಗಳು ಆಗೀಗ ಬಂದು ಹೋಗುತ್ತಿದ್ದರಲ್ಲದೆ, ಶಾಶ್ವತವಾದ ಮಿಶನ್ ಕೇಂದ್ರವನ್ನು ತೆರೆದಿರಲಿಲ್ಲ. ಅದರಂತೆ ತಮಿಳುನಾಡಿನ ಮಿಶನರಿಗಳೂ ಮೈಸೂರು ಸಂಸ್ಥಾನದಲ್ಲಿ ಹೋಗಿ ಹಿಂದಿರುಗುವ ಕ್ರಮವನ್ನಿಟ್ಟು ಕೊಂಡಿದ್ದರು. ಗೋವೆಯಲ್ಲಿದ್ದ ಒಬ್ಬ ಮಿಶನರಿಯು ಕ್ರಿ. ಶ ೧೬೪೮ರಲ್ಲಿ ಮೈಸೂರು ನಗರಕ್ಕೆ ಬಂದು ಕಂಠೀರವನರಸರಾಜರ ಉದಾರ ಅನುಮತಿಯಿಂದ ಅಲ್ಲಿ ನೆಲೆಯೂರಿದನು. ಆಗಿನಿಂದ ನಾಡಿನಾದ್ಯಂತ ನಿರಂತರವಾಗಿ ಮತಾಂತರ ಕಾರ್ಯ ನಡೆದು ಬ್ರಿಟಿಷರು ರಾಜ್ಯವಾಳತೊಡಗಿದ ೧೮೦೦ನೆಯ

ವರ್ಷದಷ್ಟೊತ್ತಿಗೆ, ನಾಡಿನಲ್ಲಿ ಸಹಸ್ರಾರು ಕ್ರಿಶ್ಚಿಯನ್ನರು ಕಾಣಿಸಿಕೊಂಡರು"[೬] ಇವರೆಲ್ಲ ಕಥೋಲಿಕ್ ಪಂಗಡಕ್ಕೆ ಸೇರಿದವರು. ಕ್ರಿ. ಶ ೧೮೧೦ರಲ್ಲಿ ಮೊದಲ ಬಾರಿಗೆ ಪ್ರೊಟೆಸ್ಟಂಟ್ ಮಿಶನರಿಯೊಬ್ಬನ ಆಗಮನವಾಯಿತು. ಮುಂದೆ ಪ್ರೊಟೆಸ್ಟಂಟ್‌ರಿಂದಲೂ ಮತಾಂತರ ಕಾರ್ಯವು ನಡೆದುಕೊಂಡು ಬಂದಿತು.

ಮಿಶನರಿಗಳ ಮುಖ್ಯ ಉದ್ದೇಶ ಧರ್ಮ ಪ್ರಸಾರಣೆ. ಅದನ್ನು ಸಾಧಿಸುವಲ್ಲಿ ಅವರು ಕೈಕೊಂಡ ವಿಧಾನಗಳನ್ನು ಡಾ. ವರದರಾಜ ಹುಯಿಲಗೋಳ ಅವರು ಈ ರೀತಿಯಾಗಿ ನಿರೂಪಿಸಿದ್ದಾರೆ.

೧. ಮುದ್ರಣಾಲಯಗಳನ್ನು ಸ್ಥಾಪಿಸುವುದು. ಇವರಿಂದ ಕ್ರೈಸ್ತ ಸಾಹಿತ್ಯವನ್ನು ಪ್ರಕಟಿಸುವುದು ಹಾಗೂ ಅವುಗಳನ್ನು ಕನ್ನಡದಲ್ಲಿ ಹಂಚುವುದು.

೨. ಶಾಲೆ ಮತ್ತು ಕಾಲೇಜುಗಳನ್ನು ಹಾಗೂ ದವಾಖಾನೆಗಳನ್ನು ಸ್ಥಾಪಿಸುವುದು. ಇವು ಕ್ರೈಸ್ತ ಮತ ಪ್ರಚಾರವನ್ನು ತೀವ್ರಗೊಳಿಸಲು ಅನುಕೂಲವಾಗುತ್ತಿದ್ದವು.

೩. ಭಾರತೀಯ ಭಾಷೆಗಳನ್ನು ಕಲಿಯುವುದು. ಕನ್ನಡ ಭಾಷೆಯ ಮುಖಾಂತರವೇ ಮತ ಪ್ರಚಾರ ಮಾಡುವುದು. ಇದಕ್ಕಾಗಿ ಕನ್ನಡ ಭಾಷೆಯ ವ್ಯಾಕರಣ, ಶಬ್ದಕೋಶಗಳನ್ನು ಪ್ರಕಟಿಸುವುದು.[೭]

ಮತಾಂತರದ ತಮ್ಮ ಉದ್ದೇಶವನ್ನು ಈಡೇರಿಸಲಿಕ್ಕೆ ಮಿಶನರಿಗಳು ಒಂದು ಕೈಯಲ್ಲಿ ಬೈಬಲ್, ಅದರ ಬೆನ್ನಿಗೆ ಮುದ್ರಣಯಂತ್ರ ಇವುಗಳನ್ನು ಹಿಡಿದುಕೊಂಡು ಸ್ವಮತ ಪ್ರಸಾರಕಾರ್ಯದಲ್ಲಿ ತೊಡಗಿದರು. ಆನಿಮಿತ್ತದಿಂದ ಸಮಾಜಸೇವೆ, ಶಿಕ್ಷಣ, ಸಾಹಿತ್ಯ ಕ್ಷೇತ್ರಗಳಲ್ಲಿ ನೇರವಾಗಿ ಪ್ರವೇಶಿಸಿದರು.

ಮತ ಪ್ರಸಾರಕ್ಕೆಂದು ನಮ್ಮಲ್ಲಿಗೆ ಬಂದಿದ್ದ ಮಿಶನರಿಗಳೆಲ್ಲ ವಿವಿಧ ಸಂಸ್ಥೆಗಳಿಗೆ ಸೇರಿದವರು. ಸೊಸೈಟಿ ಆಫ್ ಜೀಸಸ್ (ಜೆ. ಎಸ್) ಕಥೋಲಿಕರಿಗೆ ಸಂಬಂಧಪಟ್ಟಿದ್ದರೆ 'ಲಂಡನ್ ಮಿಶನ್' 'ವೆಸ್ಲೆಯನ್ ಮಿಶನ್' ಹಾಗೂ ಜರ್ಮನ್ ಇವ್ಯಾಂಜೆಲಿಕಲ್ (ಬಾಸೆಲ್) ಮಿಶನ್. ಇವು ಪ್ರೊಟೆಸ್ಟಂಟರ ಸಂಸ್ಥೆಗಳು. 'ಕ್ರೈಸ್ತ ಧರ್ಮದಲ್ಲಿ ಕಥೋಲಿಕರು, ಸಿಬ್ಮಾಟಿಕರು ಮತ್ತು ಪ್ರಾಟೆಸ್ಟಂಟರು ಎಂಬ ಮೂರು ಮತ ವಿಭಾಗಗಳಿವೆ.[೮] ಭಾರತದ ಇತರ ಕಡೆಗಳಲ್ಲಿ ಕಂಡುಬರುವ ಡೇನಿಶ್, ಫ್ರೆಂಚ್ ಹಾಗೂ ಅಮೇರಿಕನ್ ಬ್ಯಾಪ್ಟಿಸ್ಟ್ ಮುಂತಾದ ಸಂಸ್ಥೆಗಳವರು ೧೯ನೆಯ ಶತಮಾನಾಂತ್ಯದವರೆಗೆ ನಮ್ಮಲ್ಲಿ ಬರಲಿಲ್ಲ. ಆಮೇಲೆ ಬಂದರಾದರೂ ಎದ್ದು ಕಾಣುವಂತೆ ಸಾಹಿತ್ಯ, ಸಾಮಾಜಿಕ ರಂಗದಲ್ಲಿ ಕಾಲಿರಿಸಿದವರಲ್ಲ.

ಆರಂಭದಲ್ಲಿ ಬ್ರಿಟಿಷ್ 'ಈಸ್ಟ್ ಇಂಡಿಯಾ ಕಂಪನಿ'ಯು ಮಿಶನರಿಗಳು ಭಾರತಕ್ಕೆ ಬರುವುದನ್ನು ವಿರೋಧಿಸಿತ್ತು. ಮಿಶನರಿಗಳು ಬಂದು ಇತರ ಧರ್ಮಗಳ ಮೇಲೆ ತಮ್ಮ ಪ್ರಭಾವ ಬೀರಲು ಪ್ರಯತ್ನಿಸಿದಾಗ ತಮ್ಮ ವ್ಯಾಪಾರಕ್ಕೆ ತೊಂದರೆಯಾಗುತ್ತದೆಂಬ ಭಯ ಕಂಪನಿಯ ಡೈರೆಕ್ಟರರಿಗಿತ್ತು. ಹಲವಾರು ವರ್ಷ ಈ ವಿಷಯವು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಟ್ಟಿತು.

ಇಂಗ್ಲೆಂಡಿನಿಂದ ಮಿಶನರಿಗಳು ಭಾರತಕ್ಕೆ ಬಂದಾಗ ಅವರಲ್ಲಿ ಕೆಲವರು ಕಠಿಣವಾದ ಪರಿಸ್ಥಿತಿಯನ್ನು ಎದುರಿಸಬೇಕಾಗಿದ್ದರೂ ಕೆಲವು ಕಡೆಗಳಲ್ಲಿ ಅಧಿಕಾರಿಗಳು ಮಿಶನರಿಗಳಿಗೆ ಸಹಾನುಭೂತಿಯಿಂದ ಸಹಾಯಮಾಡಿದ ಉದಾಹರಣೆಗಳು ಇವೆ. ಹಲವರ ಪ್ರಯತ್ನದಿಂದಾಗಿ ೧೮೧೩ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಚಾರ್ಟ್‌ದಲ್ಲಿ ಬದಲಾವಣೆಯಾಯಿತು.

" The charter of 1813 contained the provision that sufficient facilities should be offered by law, to persons desirous of going to and remaining in India, for the purpose of accomplishing those benevolent designs, i. e the introduction among the inhabitants of India of useful knowledge and religious and moral Improvement. This ment that in future missionaries were to be allowed to live and work in British India unhindered provided that they respected the authority of the local government and that the principle of religious freedom for all were maintained it is therefore from 1813 that the great expansion of protestant mission in India dates [೧೦]

ಇದರಿಂದಾಗಿ ಈಗಾಗಲೇ ಬಂದಿದ್ದ ಮಿಶನರಿ ಸೊಸೈಟಿಯ ಮಿಶನರಿಗಳು ತಮ್ಮ ಸೇವಾರಂಗವನ್ನು ವಿಸ್ತರಿಸಿದರು. ಬ್ರಿಟಿಷರಲ್ಲದ ಬೇರೆ ದೇಶಗಳ ಮಿಶನರಿ ಸಂಸ್ಥೆಗಳು ಭಾರತದಲ್ಲಿ ಪ್ರವೇಶಿಸುವ ಬಗೆಗೆ ಇದ್ದ ನಿರ್ಬಂಧವು ತೆಗೆದು ಹಾಕಲ್ಪಟ್ಟ ಮೇಲೆ ಅಮೇರಿಕಾದಿಂದಲೂ ಇತರ ಯುರೋಪ್ ರಾಷ್ಟ್ರಗಳಿಂದಲೂ ಮಿಶನರಿ ಸಂಘಗಳ ಮಿಶನರಿಗಳು ಭಾರತವನ್ನು ಪ್ರವೇಶಿಸಿ ತಮ್ಮ ಸೇವೆ ಪ್ರಾರಂಭಿಸಿದರು. ಭಾರತದಲ್ಲಿ ಮಿಶನರಿ ಸೇವೆ ಮಾಡಲು ಬಂದ ಸಂಘಗಳು ಇಂತಿವೆ.

ಬ್ಯಾಪ್ಟಿಸ್ಟ್ ಮಿಶನರಿ ಸೊಸೈಟಿ (ಇಂಗ್ಲಂಡ್)	೧೭೯೩
ಲಂಡನ್ ಮಿಶನರಿ ಸೊಸೈಟಿ (ಇಂಗ್ಲಂಡ್)	೧೭೯೮
ಚರ್ಚ್ ಆಫ್ ಇಂಗ್ಲಂಡ್ ಮಿಶನರಿ ಸೊಸೈಟಿ	೧೮೧೪
ಗೊಸ್ಪೆಲ್ ಪ್ರೊಪಗೇಶನ್ ಮಿಶನರಿ ಸೊಸೈಟಿ (ಇಂಗ್ಲಂಡ್)	೧೮೧೭
ವೆಸ್ಲಿಯನ್ ಮಿಶನರಿ ಸೊಸೈಟಿ (ಇಂಗ್ಲಂಡ್)	೧೮೧೭
ಜನರಲ್ ಬ್ಯಾಪ್ಟಿಸ್ಟ್ ಮಿಶನರಿ ಸೊಸೈಟಿ (ಇಂಗ್ಲಂಡ್)	೧೮೨೨
ಚರ್ಚ್ ಆಫ್ ಸ್ಕ್ಯಾಟಲಂಡ್	೧೮೨೮

ಫ್ರೀ ಚರ್ಚ್ ಆಫ್ ಸ್ಕೊಟಲಂಡ್ ೧೮೨೮

ಅಮೇರಿಕನ್ ಪ್ರೆಸ್ಬಿಟೇರಿಯನ್ ಮಿಶನ್ ೧೮೩೪

ಬಾಸೆಲ್ ಮಿಶನ್ ೧೮೩೪

ಈ ಮಿಶನರಿ ಸಂಘಗಳು ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಸ್ಥಾಪನೆಯಾದವು[೧೧]. ೧೮೮೧ ರ ಸುಮಾರಿಗೆ ೩೭ ಮಿಶನರಿ ಸೊಸೈಟಿಗಳು ಭಾರತದಲ್ಲಿ ಸೇವೆ ಸಲ್ಲಿಸುತ್ತಿದ್ದವು. ಆಗ ಸುಮಾರು ೬೫೮ ವಿದೇಶಿಯ ಮಿಶನರಿಗಳು ಭಾರತದಲ್ಲಿದ್ದರು[೧೨]

ಕರ್ನಾಟಕಕ್ಕೆ ಬಂದ ಮಿಶನರಿಗಳು ಲಂಡನ್, ವೆಸ್ಲಿಯನ್ ಮತ್ತು ಬಾಸೆಲ್ ಸಂಸ್ಥೆಗಳಿಂದ ಬಂದವರು. ಅವರು ದಕ್ಷಿಣಕನ್ನಡ ಪ್ರದೇಶದ ಮಂಗಳೂರು, ಮಡಿಕೇರಿ, ಉಡುಪಿ, ಮೂಲ್ಕಿ, ಕಾರ್ಕಳ, ಕಾಸರಗೋಡ ಪ್ರದೇಶದಲ್ಲಿ ಮಂಗಳೂರನ್ನು ಕೇಂದ್ರವಾಗಿಟ್ಟುಕೊಂಡರು. ಕೆಲವರು ಉತ್ತರ ಕರ್ನಾಟಕದ (ಆಗ ದಕ್ಷಿಣ ಮಹಾರಾಷ್ಟ್ರವೆಂದು ಕರೆಯಲ್ಪಟ್ಟ) ಗದಗ, ಬೆಟಗೇರಿ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಬಳ್ಳಾರಿ, ವಿಜಾಪುರ ಪ್ರದೇಶಗಳಲ್ಲಿ ಹುಬ್ಬಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಕೆಲಸ ಆರಂಭಿಸಿದರು. ಮಿಶನರಿಗಳಿಗೆ ನಮ್ಮ ನಾಡು, ನುಡಿ, ಜನ ಎಲ್ಲ ಹೊಸದು ಕನ್ನಡ ಭಾಷೆ, ನಾಡಿನ ಸ್ಥಿತಿಗತಿಯನ್ನು ತಿಳಿದುಕೊಳ್ಳುವುದರಲ್ಲಿ ನಾವು ಈಗ ನೆನೆಯಲಾರದಷ್ಟು ಕಷ್ಟಪಟ್ಟರು. "ಮಿಶನರಿ ಜನರ ನಿತ್ಯದ ಬದುಕು ಎಳ್ಳಷ್ಟು ಬಿಡುವಿಲ್ಲದುದು. ಪ್ರವಚನ, ಉಪದೇಶ ಮುಂತಾದ ಧಾರ್ಮಿಕ ಕಾರ್ಯಗಳಲ್ಲದೆ ಶಾಲೆ, ಮುದ್ರಣಾಲಯ, ಸಾರ್ವಜನಿಕ ಮತ್ತು ಸರಕಾರಿ ಸಂಪರ್ಕ ಇವು ಅವರ ದೈನಂದಿನ ಸಮಯವನ್ನು ಬೇಡುತ್ತಿದ್ದುವು. ಅವರ ಬದುಕಿನ ಇನ್ನೊಂದು ವೈಶಿಷ್ಟ್ಯವೆಂದರೆ ತಿರುಗಾಟ, ತಮ್ಮ ಕೇಂದ್ರ ಸ್ಥಳದಿಂದ ತುಂಬ ದೂರದವರೆಗೆ ಬಿಸಿಲಿನ ಬೇಗೆ, ಆಹಾರ ನೀರುಗಳ ಅಸಮರ್ಪಕತೆ ಇವುಗಳನ್ನು ಲೆಕ್ಕಿಸದೇ ಪ್ರವಾಸದಲ್ಲಿರುತ್ತಿದ್ದರು. ದೇಶೀಯ ವಿದ್ವಾಂಸರು ಮುಕ್ತ ಮನಸ್ಸಿನಿಂದ ಇವರಿಗೆ ನೆರವಾಗುತ್ತಿರಲಿಲ್ಲ. ಪರಿಸ್ಥಿತಿ ಹೀಗೆ ತೊಡಕಿನದಾಗಿತ್ತು. ಅವೆಲ್ಲವುಗಳನ್ನು ಸಹನೆಯಿಂದ ಪರಿಹರಿಸಿಕೊಳ್ಳುತ್ತಿದ್ದರು. ಮಿಶನರಿಗಳ ಕುಶಾಗ್ರ ಮತಿತ್ವ, ಕಷ್ಟಸಹಿಷ್ಣತೆ, ತ್ಯಾಗದ ಮನೋವೃತ್ತಿ, ಹಿಡಿದ ಕೆಲಸವನ್ನು ಉತ್ಕೃಟವಾದ ರೀತಿಯಲ್ಲಿ ಕೊನೆಗಾಣಿಸಬೇಕೆನ್ನುವ ಶ್ರದ್ಧೆ ಮತ್ತು ಛಲ ಇವುಗಳೇ ಅವರ ಯಶಸ್ಸಿಗೆ ಕಾರಣವಾಗಿವೆ"[೧೩] ಮಿಶನರಿಗಳು ನಮ್ಮ ನಾಡಿಗೆ ಬಂದಾಗ ಎದುರಿಸಬೇಕಾದ ಪರಿಸ್ಥಿತಿ ಹೇಗಿತ್ತೆಂದು ಡಾ. ಶ್ರೀನಿವಾಸ ಹಾವನೂರವರು ವಾಸ್ತವದ ಅಂಶಗಳನ್ನು ಸೊಗಸಾಗಿ ಹೇಳಿದ್ದಾರೆ. ಮಿಶನರಿಗಳು ಕನ್ನಡಿಗರೊಂದಿಗೆ ಬೆರೆತುಕೊಳ್ಳಲು, ಕನ್ನಡ ನಾಡು- ನುಡಿಯ ಅಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಾಹಿತ್ಯ ರಚನೆಗೆ ಉತ್ಸುಕರಾದರು.

೨.೦೩ ಮಿಶನರಿಗಳ ಸಾಹಿತ್ಯ ರಚನೆ (ಲೌಕಿಕ ಮತ್ತು ಧಾರ್ಮಿಕ)

ಮಿಶನರಿಗಳ ಆಗಮನದ ಮುಖ್ಯ ಉದ್ದೇಶ ಕ್ರೈಸ್ತ ಮತ ಪ್ರಸಾರ ಹಾಗೂ ಮತಾಂತರ. ಇದನ್ನು

ಸಾಧಿಸುವುದು ಸುಲಭವಾಗಿರಲಿಲ್ಲ. ಆದ್ದರಿಂದ ಜನರ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವ ಉದ್ದೇಶದಿಂದ ಬೇರೆ ಮಾರ್ಗಗಳನ್ನು ಅನುಸರಿಸಬೇಕೆಂದು ಅವರಿಗೆ ಮನವರಿಕೆಯಾಯಿತು. ಸಾಮಾನ್ಯ ಜನತೆಗೆ ಶಿಕ್ಷಣವನ್ನು ಕೊಟ್ಟಿದ್ದಾದರೆ, ಕ್ರೈಸ್ತ ವಿಚಾರಗಳನ್ನು ಅವರಿಗೆ ಮನದಟ್ಟಾಗುವಂತೆ ಹೇಳಬಹುದೆಂದು, ಅಲ್ಲದೆ ದೇಶೀಯ ಭಾಷೆಯಲ್ಲಿ ಲೌಕಿಕ ಹಾಗೂ ಧಾರ್ಮಿಕ ಗ್ರಂಥಗಳನ್ನು ರಚಿಸುವುದರ ಮೂಲಕ ತಮ್ಮ ಕಾರ್ಯವನ್ನು ಹೆಚ್ಚು ಸುಗಮಗೊಳಿಸಬಹುದೆಂದೂ ಅವರಿಗೆ ತೋಚಿತು. ತಮ್ಮ ಕಾರ್ಯ ಸಾಧನೆಗಾಗಿ ಅವರು ಸಾಹಿತ್ಯ ರಚನೆ, ಆಧುನಿಕ ಶಿಕ್ಷಣ ಕ್ರಮ, ಸಮಾಜಸೇವೆಗಳಿಗೆ ಹೆಚ್ಚು ಗಮನವಿತ್ತರು. ಮತ ಪ್ರಸಾರಕ್ಕೆ ಅಗತ್ಯವಿದ್ದ ಇನ್ನೊಂದು ಸಾಮಗ್ರಿಯೆಂದರೆ ಬೈಬಲ್ ಹಾಗೂ ಇತರ ಧಾರ್ಮಿಕ ಗ್ರಂಥಗಳ ಅನುವಾದ. ಈ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ ಕೈಕೊಂಡರು. ಹೀಗೆ ಪಠ್ಯ ಪುಸ್ತಕಗಳು ಹಾಗೂ ಮತೀಯ ಗ್ರಂಥಗಳೇ ಮಿಶನರಿಗಳ ಸಾಹಿತ್ಯ ಸಂಪತ್ತಿನಲ್ಲಿ ಪ್ರಮುಖವಾಗಿವೆ. ಇವುಗಳ ಸಾವಿರಾರು ಪ್ರತಿಗಳನ್ನು ಮುದ್ರಿಸಲು ಮುದ್ರಾಯಂತ್ರಗಳು ನಮ್ಮ ದೇಶದಲ್ಲಿ ಇರಲಿಲ್ಲ ಆದ್ದರಿಂದ ಅವನ್ನೂ ತಂದರು. ಪಾಶ್ಚಾತ್ಯ ರೀತಿಯ ಶಿಕ್ಷಣ ಹಾಗೂ ಮತ ಪ್ರಸಾರ ಇವುಗಳಿಗೆ ಮುದ್ರಣವು ಬೆನ್ನೆಲುಬಾಗಿ ನಿಂತಿತು. ಇಂತು " ನಮ್ಮ ನಾಡಿಗೆ ಬಂದೊಡನೆ ಸ್ವಂತಃ ಕನ್ನಡವನ್ನು ಕಲಿಯುವುದು ; ಬೈಬಲ್ ಮತ್ತಿತರ ಮತೀಯ ಕೃತಿಗಳ ಅನುವಾದ : ಸಮಾಜಸೇವೆ; ಕನ್ನಡ ಕೋಶ, ವ್ಯಾಕರಣಗಳ, ಅದರಂತೆ ಪಠ್ಯಪುಸ್ತಕಗಳ ರಚನೆ ; ಇವುಗಳ ಪ್ರಕಟನೆ, ವಿತರಣೆ; ಜೊತೆಗೆ ತಮ್ಮ ತಮ್ಮ ಆಸಕ್ತಿ-ಹವ್ಯಾಸದ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳ ರಚನೆ ಈ ವ್ಯವಸ್ಥಿತ ಚೌಕಟ್ಟಿನಲ್ಲಿ ಮಿಶನರಿ ಜನರ ವಾಙ್ಮಯ ಕಾರ್ಯವು ಸಾಗಿ ಬಂದಿತು; ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರು ಪ್ರಮುಖ ಪಾತ್ರವನ್ನು ವಹಿಸುವಂತಾಯಿತು"[೧೪] ಕನ್ನಡನಾಡಿಗೆ ಬಂದ ಲಂಡನ್ ಮಿಶನ್, ವೆಸ್ಲೆಯನ್ (ಮೆಥಾಡಿಸ್ಟ್) ಮಿಶನ್ ಹಾಗೂ ಬಾಸೆಲ್ ಮಿಶನ್ ಈ ಮೂರು ಪ್ರೊಟೆಸ್ಟಂಟ್ ಸಂಸ್ಥೆಯವರು ನಮ್ಮ ನಾಡಿನಲ್ಲಿ ಶೈಕ್ಷಣಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಅವರ ಕಾರ್ಯವೈಖರಿಯನ್ನು ಕಂಡು ಕಥೋಲಿಕರು ಮುಂದೆ ಬರಬೇಕಾಯಿತು. ಈ ಒಂದೊಂದು ಸಂಸ್ಥೆಯ ಮಿಶನರಿಗಳ ಸಾಹಿತ್ಯ ಚಟುವಟಿಕೆಗಳನ್ನು ಸಂಕ್ಷೇಪವಾಗಿ ಪರಿಶೀಲಿಸೋಣ[೧೫]

ಲಂಡನ್ ಮಿಶನ್-ಇಂಗ್ಲಂಡಿನಲ್ಲಿ ೧೭೯೫ ರಲ್ಲಿ 'ಲಂಡನ್ ಮಿಶನ್' ಸೊಸೈಟಿಯೂ ಪ್ರಾರಂಭಿಸಲ್ಪಟ್ಟಿತು. ಲಂಡನ್ ಮಿಶನ್‌ದಲ್ಲಿ ತರಬೇತಿ ಹೊಂದಿದ ಹ್ಯಾಂಡ್ಸ್, ರೀವ್, ರೀಡ್, ಬೆಯ್ನಸ್ ಮತ್ತು ಕ್ಯಾಂಬೆಲ್, ಬಿ. ಎಚ್. ರೈಸ್ ಇವರು ಕನ್ನಡನಾಡಿಗೆ ಬಂದರು.

ಜಾನ್‌ಹ್ಯಾಂಡ್ಸ್ (೧೭೮೦-೧೮೬೦): ಈ ಮಿಶನರಿ ಬಳ್ಳಾರಿಗೆ ಬಂದ ಮರುವರ್ಷವೆ ಕನ್ನಡವನ್ನು ಕಲಿಯಲಾರಂಭಿಸಿದನು. ಇವನೇ ಆದ್ಯ (ಪ್ರೊಟೆಸ್ಟಂಟ್) ಮಿಶನರಿ. ಕನ್ನಡವನ್ನು ತಕ್ಕಮಟ್ಟಿಗೆ ಕಲಿತನಲ್ಲದೆ ತನ್ನ ವಾಸ್ತವ್ಯದ ಕಾಲಾವಧಿಯಲ್ಲಿ ಇತರ ಕಾರ್ಯಗಳ ಮಧ್ಯೆ ಬಿಡುವು ಮಾಡಿಕೊಂಡು ಸಮಗ್ರ ಬೈಬಲಿನ

ಬಹುಭಾಗವನ್ನು ಕನ್ನಡಕ್ಕೆ ಅನುವಾದಿಸಿದುದು ಅವನ ಹಿರಿಯ ಸಾಹಸವೆನ್ನಬೇಕು. ಹ್ಯಾಂಡ್ಸ್ ಹಲವಾರು ಮತ ಪುಸ್ತಿಕೆಗಳನ್ನು ಅನುವಾದಿಸಿ 'ಹೊಸ ಒಡಂಬಡಿಕೆ' (ಬೈಬಲ್) ಸಹಿತವಾಗಿ ಮದ್ರಾಸದಲ್ಲಿ ಮುದ್ರಿಸಿಕೊಂಡು ಬಂದನು (೧೮೨೦). ಮುಂದೆ ಬಳ್ಳಾರಿಯಲ್ಲಿಯೇ ಮುದ್ರಾಯಂತ್ರವನ್ನು ಸ್ಥಾಪಿಸಿ ಮುದ್ರಣದ ಆಸ್ತಿ ಭಾರ ಹಾಕಿದನು. ಲಂಡನ್ ಮಿಶನ್ ವತಿಯಿಂದ ಇನ್ನು ಹಲವರು ಬಂದಾಗ ಅವರಿಗೆ ಮಾರ್ಗದರ್ಶಕನಾಗಿದ್ದನು.

ವಿಲಿಯಂ ರೀವ್(೧೮೧೬-೧೮೩೪): ಭಾಷಾಗ್ರಹಣದ ವಿಷಯದಲ್ಲಿ ಹ್ಯಾಂಡ್ಸ್ ಬಲ್ಲಿದನಲ್ಲವಾದ್ದರಿಂದ, ಅವನಿಗೆ ನೆರವಾಗಲೆಂದೇ ರೀವ್‌ನನ್ನು ಲಂಡನ್ನಿನಿಂದ ಕಳಿಸಲಾಯಿತು. ಕ್ರೈಸ್ತಮತೀಯ ಗ್ರಂಥಗಳ ಅನುವಾದಕ್ಕೆ ಮೊದಲಿಗೆ ಅಗತ್ಯವಾದದ್ದು 'ಇಂಗ್ಲಿಶ್-ಕನ್ನಡ ಶಬ್ದಕೋಶ' ರೀವ್ ಆ ಕೆಲಸಕ್ಕೆ ಉದ್ಯುಕ್ತನಾದನು. ಬಳಕೆಯ ಹಾಗೂ ಸಾಮಾನ್ಯ ಇಂಗ್ಲಿಶ್ ಪದಗಳಿಗೆ ಕನ್ನಡ ಸಮಾನಾರ್ಥಕಗಳನ್ನು ಕೇಳಿ ತಿಳಿದುಕೊಳ್ಳುವುದಲ್ಲದೆ , ಹಲವಾರು ಹಳಗನ್ನಡದ ತಾಡೋಲೆಗಳನ್ನು ಪರಿಶೀಲಿಸಿ ಅನೇಕ ಶಬ್ದಗಳನ್ನು ಆಯ್ದುಕೊಂಡನು. ಐದಾರು ವರ್ಷಗಳ ಈ ಬಗೆಯ ಪರಿಶ್ರಮದಿಂದಾಗಿ ಇಂಗ್ಲಿಶ್-ಕನ್ನಡ ಶಬ್ದಕೋಶದ ಹಸ್ತಪ್ರತಿಯು ಸಿದ್ಧವಾಯಿತು. ಇಂಥದೊಂದು ಕೋಶವು ಬ್ರಿಟಿಷ್ ಆಡಳಿತಗಾರರಿಗೂ ಬೇಕಾದದ್ದೇ. ಮದ್ರಾಸದ ಆಗಿನ ಗವರ್ನರನಾಗಿದ್ದ ಥಾಮಸ್ ಮನ್ರೋನ ಪ್ರೋತ್ಸಾಹದಿಂದಾಗಿ ಕಂಪನಿ ಸರಕಾರವು ಈ ಕೋಶದ ಮುದ್ರಣವನ್ನು ಕೈಕೊಂಡಿತು (೧೮೧೭) ರೀವ್ ಆಮೇಲೆ ಕನ್ನಡ-ಇಂಗ್ಲಿಶ್ ಕೋಶವನ್ನು ಸಿದ್ಧಪಡಿಸಿದಾಗಲೂ ಕಂಪನಿ ಸರಕಾರವೇ ಅದನ್ನು ಪ್ರಕಟಿಸಿತು. (೧೮೨೫) ಹೊಸಗನ್ನಡ ಕಾಲದ ಆದ್ಯ ಮುದ್ರಿತ ಶಬ್ದಕೋಶಗಳಿವು. ಕೋಶ ರಚನೆಯಲ್ಲದೇ ರೀವ್ ಬೈಬಲಿನ ಅನೇಕ ಪರ್ವಗಳನ್ನು ಅನುವಾದಿಸಿದ್ದಾನೆ : ಹ್ಯಾಂಡ್ಸನ ಅನುವಾದವನ್ನು ತಿದ್ದಿದ್ದಾನೆ. (ರೀವ್‌ನ ಕೋಶದ್ವಯಗಳ ಬಗೆಗೆ ಈ ನಿಬಂಧದ ಮುಂದಿನ ಅಧ್ಯಾಯಗಳಲ್ಲಿ ವಿವರವಾಗಿ ಪರಿಶೀಲಿಸಲಾಗಿದೆ).

ಜಾನ್‌ರೀಡ್ (೧೮೩೧-೧೮೪೧) : ಹ್ಯಾಂಡ್ಸನ ಅನಂತರ ಬಳ್ಳಾರಿಯ ಮಿಶನ್ ಕೇಂದ್ರದ ಸೂತ್ರಗಳನ್ನು ವಹಿಸಿದ ರೀಡ್ ತೆಲುಗು, ಕನ್ನಡ ಎರಡೂ ಭಾಷೆಗಳಲ್ಲಿ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಅನುವಾದಿಸಿದ್ದಾನೆ. ಅವನ ಕೃತಿಗಳಲ್ಲಿ 'ಇಂಗ್ಲಿಶ್ ಭಾಷೆಯನ್ನು ಕಲಿಯುವುದಕ್ಕೆ ಸಹಾಯವು' ಎಂಬ ಪುಸ್ತಕವನ್ನು ಹೆಸರಿಸಬೇಕು (೧೮೩೬). ಇಂಗ್ಲಿಶ್ ಭಾಷೆ, ಸಾಹಿತ್ಯವನ್ನು ಕಲಿಯಲಿಚ್ಛಿಸುವವರಿಗೆ ಇದು ತುಂಬ ನೆರವಾಗುತ್ತದೆ. ಅವನ ಉದ್ದೇಶವು ಅದೇ ಆಗಿತ್ತು. ಇದರಲ್ಲಿ ವಾಚನ, ವ್ಯಾಕರಣ, ಗಣಿತ, ಜ್ಯೋತಿಷ, ಭೂಗೋಲ ಮುಂತಾದ ವಿಷಯಗಳ ಮೇಲಿನ ಪಾಠಗಳಿವೆ. ಪಾಠದ ಸುರುವಿಗೆ ಕೆಲವು ಇಂಗ್ಲಿಶ್ ಶಬ್ದಗಳು ಹಾಗೂ ಅವುಗಳ ಕನ್ನಡ ಅರ್ಥವನ್ನು ಕೊಟ್ಟು, ಅನಂತರ ಮೇಲಣ ವಿಷಯಗಳಿಗೆ ಸಂಬಂಧಿಸಿದ ವಾಕ್ಯ ಸಮುದಾಯವನ್ನು ಭಾಷಾಂತರದೊಂದಿಗೆ ಕೊಡಲಾಗಿದೆ. ಆದರೆ ಉದಾಹರಣೆಗಳನ್ನು ಕೊಡುವಲ್ಲಿ ಈ ಪುಸ್ತಕದುದ್ದಕ್ಕೂ ಕ್ರೈಸ್ತ ಮತ ಪ್ರಸಾರದೃಷ್ಟಿ ಎದ್ದು ಕಾಣುತ್ತದೆ.

ಜೆಮ್ಸನ್ ಮತ್ತು ಕ್ಯಾಂಬೆಲ್ : ಲಂಡನ್ ಮಿಶನ್ನಿನ ಇವರಿಬ್ಬರಲ್ಲಿ ಡಬ್ಲ್ಯೂ ಜೆಮ್ಸನ್ (೧೮೨೭-೧೮೭೦) ಬೆಳಗಾವಿಯಲ್ಲಿ ವಾಸವಾಗಿದ್ದು, ಉತ್ತರ ಕರ್ನಾಟಕದ ಶೈಕ್ಷಣಿಕ ರಂಗದಲ್ಲಿ ಬಹುವಾಗಿ ಪರಿಶ್ರಮಿಸಿದನು. ಮುಂಬಯಿ ವಿಶ್ವವಿದ್ಯಾಲಯ ಸ್ಥಾಪನೆಯಾದಂದಿನಿಂದ (೧೮೫೭) ೧೩ ವರ್ಷಗಳವರೆಗೆ ಕನ್ನಡ ವಿಷಯದ ಪರೀಕ್ಷಕನಾಗಿದ್ದನು. ಜೆಮ್ಸನ್ ಬರೆದದ್ದು ಕಡಿಮೆ. ಆದರೆ 'ಪಿಲ್ ಗ್ರಿಮ್ಸ್ ಪ್ರೋಗ್ರೆಸ್' ನ ಪ್ರಥಮ ಅನುವಾದಕನೀತ. ಕ್ಯಾಲಿನ ಕ್ಯಾಂಬೆಲ್ (೧೮೩೫-೧೮೭೫) ಮೈಸೂರು ನಗರದಲ್ಲಿ ಮಿಶನ್ ಕೇಂದ್ರವನ್ನು ಸ್ಥಾಪಿಸಿದ ಪ್ರಾಥಮಿಕ ಶಿಕ್ಷಣದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿ 'ಕನ್ನಡ ವ್ಯಾಕರಣಸಾರ'ವನ್ನು ಬರೆದನು. ಇದುವೆ ಕನ್ನಡದ ಮೊದಲ ಬಾಲ ವ್ಯಾಕರಣ.

ಬಿ. ಎಚ್. ರೈಸ್ (೧೮೩೭-೧೮೮೭) : ಲಂಡನ್ ಮಿಶನ್ ಸಂಸ್ಥೆಯವರಲ್ಲೆಲ್ಲ ಇವನದೇ ದೊಡ್ಡ ಹೆಸರು. ಅವನ ಕಾಲಕ್ಕೆ ಶೈಕ್ಷಣಿಕ ಪುಸ್ತಕಗಳು ಇರಲಿಲ್ಲವೆಂದರೂ ಸರಿಯೇ. ಆದ ಕಾರಣ ಶಿಕ್ಷಣದ ವಿವಿಧ ಹಂತಗಳಿಗೆ ಬೇಕಾದ ವಿಷಯಗಳ ಮೇಲಿನ ಪುಸ್ತಕಗಳನ್ನು ರಚಿಸಿದ್ದನಲ್ಲದೆ, ಅವುಗಳ ಪ್ರಸಾರಕ್ಕೂ ಮನಸ್ಸುಗೊಟ್ಟನು. ಇವುಗಳ ರಚನೆಯಲ್ಲಿ ತಮಿಳು ಪಠ್ಯಗಳ ನೆರವನ್ನು ಧಾರಾಳವಾಗಿ ಪಡೆದಿದ್ದಾನೆ. ಅವನ ಕಾಲಕ್ಕಿದ್ದ ಹೆಚ್ಚಿನ ಮತೀಯ ಪುಸ್ತಕಗಳು ತಮಿಳಿನಿಂದ ಅನುವಾದಗೊಂಡಿದ್ದುವು.

ಯೂರೋಪಿಯನ್ ಭಾಷೆಗಳಿಂದ ನೇರವಾಗಿ ಅನುವಾದಗೊಂಡ ಮತೀಯ ಪುಸ್ತಕಗಳ ಸಾರ್ಥಕ್ಯವನ್ನು ಪ್ರಶ್ನಿಸಿದವರಲ್ಲಿ ಇವನೇ ಮೊದಲಿಗನು. ದೇಶ ಭಾಷೆಯಲ್ಲಿಯ ಮತ ಪುಸ್ತಕಗಳು ದೇಶೀಯರ ವಿಚಾರ ಪ್ರವೃತ್ತಿಗೆ ಅನುಗುಣವಾಗಿರಬೇಕು. ಅಂದರೆ ಮಾತ್ರ ಜನರ ಮನಸ್ಸನ್ನು ಪರಿವರ್ತಿಸಲು ಅವು ಸಮರ್ಥವಾಗಬಲ್ಲುವು -ಎಂಬುದು ಅವನ ನಿಲುಮೆಯಾಗಿದ್ದಿತು. ಇತರ ಪ್ರೊಟೆಸ್ಟಂಟ್ ಮಿಶನರಿಗಳ ಮುಂದೆ ಅವನು ಮಂಡಿಸಿದ ಇಂಥ ವಿಚಾರಗಳು ಅವನ ಪ್ರಗತಿಪರ ದೃಷ್ಟಿಗೆ ನಿದರ್ಶಕವಾಗಿವೆಯಲ್ಲದೆ, ಆಗಿನ ಕಾಲದ ಮಿಶನರಿ ಸಾಹಿತ್ಯದ ಸ್ವರೂಪವನ್ನು ತೋರಿಸಿಕೊಡುವಂತಿದೆ.

ರೈಸನ ಬೈಬಲಿನ ಪ್ರಮುಖ ಬೋಧನೆಗಳನ್ನೊಳಗೊಂಡ 'ವೇದಸಂಗ್ರಹ'ವು ದೇಶೀಯ ವಾಚಕರ ಬಲವನ್ನು ಗಮನಿಸಿಯೇ ರಚಿತವಾಗಿತ್ತು (೧೮೪೪). ದಾಸರ ಹಾಡುಗಳ ಮಾದರಿಯಲ್ಲಿ ರಚಿಸಲಾದ ಅವನ ಸ್ವತಂತ್ರ ಕೃತಿಗಳು 'ಕನ್ನಡ ಸಂಗೀತಗಳು' ಎಂಬ ಪುಸ್ತಕದಲ್ಲಿ ಸೇರ್ಪಡೆಯಾಗಿವೆ. ರೈಸನು ಇತರ ಪ್ರೊಟೆಸ್ಟಂಟ್ ಸಂಸ್ಥೆಗಳ ಮಿಶನರಿಗಳೊಡನೆ ಆತ್ಮೀಯ ಸಂಬಂಧವನ್ನಿರಿಸಿಕೊಂಡು ಅವರ ವಾಙ್ಮಯ ಕಾರ್ಯದಲ್ಲಿ ವಿಶೇಷವಾಗಿ ಸಹಕರಿಸಿದನು. ಬೈಬಲಿನ ಪರಿಷ್ಕೃತ ಅನುವಾದ ಕಾರ್ಯದಲ್ಲಿ ಇವನ ಪಾತ್ರ ಹಿರಿದಾದುದು. 'ಅರುಣೋದಯ' ಎಂಬ ಹೆಸರಿನ ಕನ್ನಡ-ಆಂಗ್ಲ ಪತ್ರಿಕೆಯನ್ನು ಆರಂಭಿಸಿ (೧೮೬೨) ಆರೇಳು ವರ್ಷಗಳವರೆಗ ಅದನ್ನು ಉನ್ನತ ಮಟ್ಟದ ಪತ್ರಿಕೆಯನ್ನಾಗಿ ನಡೆಸಿಕೊಂಡುಬಂದನು. ಈ ಸಚಿತ್ರ ಪತ್ರಿಕೆಯಲ್ಲಿ ಧಾರ್ಮಿಕ ವಿಚಾರಗಳು-ಎಂದರೆ ಸ್ವಮತ ಪ್ರಶಂಸೆ, ಕ್ರೈಸ್ತರ ಜ್ಞಾನಾರ್ಜನೆ ಮತ್ತು ಅವರ ಧಾರ್ಮಿಕ ಸ್ಥಿರತೆ ಇವನ್ನು

ಗಮನದಲ್ಲಿರಿಸಿಕೊಂಡು ಪ್ರಪಂಚದ ಪರಿಜ್ಞಾನ, ವಿಜ್ಞಾನ, ಕತೆಗಳು, ಜಾಣ್ಣುಡಿಗಳು ಹಾಗೂ ಎಳೆಯರಿಗೆ ಉಪದೇಶ ಇವುಗಳನ್ನು ಪ್ರತಿಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದನು. ಮಿಶನರಿ ಕಾರ್ಯದಲ್ಲಿ ದೀರ್ಘಕಾಲೀನ ಸೇವೆಯನ್ನು ಸಲ್ಲಿಸಿದ ರೈಸನನ್ನು ಎರಡು ಬಾರಿ ಸಾರ್ವಜನಿಕವಾಗಿ ಸತ್ಕರಿಸಲಾಯಿತು (೧೮೭೯. ೧೮೮೭) ಅವನ ಮಕ್ಕಳಲ್ಲಿ ಲೂಯಿರೈಸ್, (ಶಾಸನ ಪಿತಾಮಹ) ಹಾಗೂ ಎಡ್ವರ್ಡ್ ಪಿ. ರೈಸ್ (ಇಂಗ್ಲಿಶ್‌ನಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದವ) ಇವರೂ ಕನ್ನಡ ವಾಙ್ಮಯ ಕಾರ್ಯವನ್ನು ಕೈಗೊಂಡವರಾಗಿದ್ದಾರೆ.

ವೆಸ್ಲೆಯನ್ ಮೆಥಾಡಿಸ್ಟರು : ವೆಸ್ಲೆಯನ್ ಮಿಶನ್‌ವು ೧೮೧೩ ರಲ್ಲಿ ಇಂಗ್ಲೆಂಡದಲ್ಲಿ ಸ್ಥಾಪನೆಯಾಯಿತು. ಕನ್ನಡನಾಡಿನಲ್ಲಿ ಈ ಸಂಸ್ಥೆಯವರು ಕಾರ್ಯ ಪ್ರವೃತ್ತರಾದ ೧೮೩೩ನೆಯ ವರ್ಷದಿಂದ ೧೯೧೩ ರವರೆಗಿನ ಅವಧಿಯಲ್ಲಿ ಪ್ರಸಿದ್ಧಿ ಪಡೆದವರೆಂದರೆ, ಥಾಮಸ್ ಹಾಡ್ಸನ್, ಜಾನ್ ಗ್ಯಾರೆಟ್, ಡ್ಯಾನಿಯಲ್ ಸ್ಯಾಂಡರ್ಸನ್, ಜಾನ್ ಸ್ಟೀವನ್‌ಸನ್, ಹಾಗೂ ಹೆನ್ರಿಹೇಗ್. ಈ ಸಂಸ್ಥೆಗೆ ಸೇರಿದ ಮಿಶನರಿಗಳು ಶಿಕ್ಷಣ ಮತ್ತು ಮುದ್ರಣ ಕ್ಷೇತ್ರಗಳಲ್ಲಿ ಕೆಲಸ ಮಾಡಿದಷ್ಟು ಸಾಹಿತ್ಯ ರಂಗದಲ್ಲಿ ಶ್ರಮಿಸಲಿಲ್ಲ. ಇತರ ಸಂಸ್ಥೆಗಳವರಿಗೆ ಹೋಲಿಸಿದಾಗ ಇದು ಒಡೆದು ತೋರುವುದು. ಆದರೆ ಅವರು ಪ್ರಕಟಿಸಿದ ಗ್ರಂಥಗಳಲ್ಲಿ ಹೆಚ್ಚಿನವು ಮೇಲ್ಮಟ್ಟದವಾಗಿದೆ.

ಥಾಮಸ್ ಹಾಡ್ಸನ್ (೧೮೩೩-೧೮೭೮) : ಬೆಂಗಳೂರು, ಮೈಸೂರುಗಳಲ್ಲಿ ಇಂಗ್ಲಿಶ್ ಶಾಲೆಗಳನ್ನು ನಡೆಸಿದ್ದರ ಮೂಲಕ ಜನಾದರಣೀಯನಾಗಿದ್ದನು. ಅಂದಿನ ಮಿಶನರಿಗಳ ಹಾಗೂ ಅಧಿಕಾರಿಗಳ ಉಪಯೋಗಾರ್ಥವಾಗಿ ಜಾನ್ ಮೆಕ್ಕೆರೆಲ್ ವಿರಚಿತ `Grammar of the Carnatical Language' ಎಂಬ ಇಂಗ್ಲಿಶ್ ಮಾಧ್ಯಮದ ವ್ಯಾಕರಣಮಾತ್ರ ಇದ್ದಿತು. ಇದು ಕನ್ನಡ ವ್ಯಾಕರಣದ ಎಲ್ಲ ಅಂಗಗಳನ್ನು ಒಳಗೊಂಡಿದ್ದರೂ ನಿರೂಪಣೆಯು ವ್ಯವಸ್ಥಿತವಾಗಿರಲಿಲ್ಲ. ಹೊಸಗನ್ನಡವನ್ನು ಅಭ್ಯಾಸ ಮಾಡುವವರಿಗೆ ಅನಗತ್ಯವಾಗಿ ಅನೇಕ ವಿವರಗಳಿದ್ದವು. ಹಾಡ್ಸನ್ ಅದನ್ನು ಅದ್ಯಾವತ್ತಾಗಿ ನವೀಕರಿಸಿ, 'Elementary Grammar of the Kannada Language' ಎಂಬುದನ್ನು ರಚಿಸಿದನು. ಸಂಕ್ಷಿಪ್ತತೆ, ಶಾಸ್ತ್ರೀಯ ವಿಷಯ ವಿಭಜನೆ ಇದರ ವೈಶಿಷ್ಟ್ಯಗಳಾಗಿವೆ. ಇದರಿಂದ ವಿದೇಶಿಯರ ಕನ್ನಡ ಅಭ್ಯಾಸವು ಹೆಚ್ಚು ಸುಕರವಾಯಿತು.

ಜಾನ್ ಗ್ಯಾರೆಟ್ (೧೮೪೦-೧೮೭೦) : ಬೆಂಗಳೂರಿನಲ್ಲಿ ಸ್ಥಾಪಿತವಾದ ವೆಸ್ಲೆಯನ್ ಅಚ್ಚುಕೂಟದ 'ಮ್ಯಾನೇಜರ್' ಆಗಿ ಕೆಲಸ ಮಾಡಿದರೂ ಗ್ಯಾರೆಟ್‌ನ ಒಲವು ಶೈಕ್ಷಣಿಕ ಕೆಲಸದ ಕಡೆಗಿದ್ದಿತು. ಪತ್ರಗಳು ಮತ್ತು ಪ್ರಾಚೀನ ಕೃತಿ ಸಂಪಾದನೆ ಈ ಎರಡು ಕ್ಷೇತ್ರಗಳಲ್ಲಿ ಗ್ಯಾರೆಟ್ ತುಂಬ ಶ್ರಮವಹಿಸಿ ಕೆಲಸ ಮಾಡಿದ್ದಾನೆ. ಇಂಗ್ಲಿಶ್ ಕಲಿಯುವ ಮಕ್ಕಳ ಅಭ್ಯಾಸಕ್ಕೆಂದು ಅವನು ಕೈಕೊಂಡ ಮೊತ್ತ ಮೊದಲಿನ ಕಾರ್ಯವೆಂದರೆ ರೀವ್‌ನ ಇಂಗ್ಲಿಶ್ ಮತ್ತು ಕನ್ನಡಕೋಶಗಳ ಪರಿಷ್ಕರಣ. ಬೆಂಗಳೂರು ಸ್ಕೂಲ್ ಬುಕ್ ಸೊಸೈಟಿಯ ನಿರ್ಣಯದ ಮೇರೆಗೆ ಸಾರ್ವತ್ರಿಕವಾಗಿ ಉಪಯೋಗವಾಗುವಂತಹ ಇಂಗ್ಲಿಶ್-ಕನ್ನಡ

ನಿಘಂಟನ್ನು ತಯಾರಿಸಲು ಕೆಲವು ಮಿಶನರಿಗಳು ನಿಯುಕ್ತರಾದರು (೧೮೪೦). ಎರಡು ವರ್ಷಗಳಾದರೂ ಕೆಲಸದಲ್ಲಿ ಪ್ರಗತಿ ಕಂಡುಬರದಿದ್ದಾಗ ಗ್ಯಾರೆಟ್‌ನು ಇತರರು ಅರ್ಧಕ್ಕೆ ನಿಲ್ಲಿಸಿದ್ದ ಭಾಗವನ್ನೆಲ್ಲ ಪೂರ್ತಿಗೊಳಿಸಿದನು. ಮರುವರ್ಷವೆ ಗ್ಯಾರೆಟ್ 'ಕನ್ನಡ-ಇಂಗ್ಲಿಶ್ ಕೋಶ'ವನ್ನು ಹೊರತಂದನು. ಈ ಕೃತಿಯು ರೀವ್‌ನ ನಿಘಂಟನ್ನು ಆಧರಿಸಿದೆ. ಈ ಕೋಶಗಳ ವಿಸ್ತಾರವಾದ ಪರಿಶೀಲನೆಯನ್ನು ಈ ನಿಬಂಧದ ಮುಂದಿನ ಅಧ್ಯಾಯಗಳಲ್ಲಿ ಮಾಡಲಾಗಿದೆ. ಬ್ರಿಟಿಶ್ ಅಧಿಕಾರಿಗಳಿಗೂ ಮಿಶನರಿ ಜನರಿಗೂ ಶಬ್ದಮಣಿದರ್ಪಣವು ಒಂದು ಅವಶ್ಯಕ ಗ್ರಂಥವಾಗಿ ತೋರಿದ್ದರಿಂದ, ಅವರು ಅದರ ಪ್ರತಿಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದರು. ಅದರ ಮಹತ್ವವನ್ನು ಗಮನಿಸಿ ಗ್ಯಾರೆಟ್ ೧೮೬೮ರಲ್ಲಿ ಅದನ್ನು ಹೊರತಂದನು. ಇದುವೆ ಶಬ್ದಮಣಿದರ್ಪಣದ ಮೊದಲ ಆವೃತ್ತಿ.

ಗ್ಯಾರೆಟ್‌ರ ಇನ್ನೊಂದು ಮಹತ್ವದ ಕೃತಿಯೆಂದರೆ 'ಬಹುಭಾಷಾ ಭಗವದ್ಗೀತೆ' ಇದರ ಹೊಳಹು ಅವನದೇ ಆಗಿದ್ದಿತಲ್ಲದೆ ಕನ್ನಡಾನುವಾದವನ್ನು ತಾನೇ ಸಿದ್ಧಪಡಿಸಿದನು. ಭಗವದ್ಗೀತೆಯನ್ನು ಕುರಿತು ಅದುವರೆಗ ಇದ್ದ ಸಾಧನೆಗಳನ್ನು ಬಳಸಿಕೊಂಡು ಮುನ್ನುಡಿ, ವಿಮರ್ಶೆ ಮುಂತಾದವುಗಳನ್ನು ಸೇರಿಸಿದನು. ಅವನ ಇನ್ನೊಂದು ಕೃತಿ -' Classical Dictionary of India' ಸುಪ್ರಸಿದ್ಧ 'ಪುರಾಣನಾಮ ಚೂಡಾಮಣಿ' ಯ ಮಾದರಿಯಲ್ಲಿಯ ಈ ಹಿಂದೂ ನಾಮಕೋಶಕ್ಕೆ ಅವನ ಹಳಗನ್ನಡ ಕಾವ್ಯಗಳ ವ್ಯಾಸಂಗವು ಪ್ರೇರಣೆಯಿತ್ತಿತಲ್ಲದೆ, ಪೌರಾಣಿಕ ಹೆಸರುಗಳ ಪ್ರಾಥಮಿಕ ಮಾಹಿತಿಯನ್ನು ಕನ್ನಡ ಕಾವ್ಯಗಳಿಂದಲೇ ಆಯ್ದುಕೊಂಡನು. ಇವೆರಡೂ ಕೃತಿಗಳೂ ಅವನಿಗೆ ಅಖಿಲಭಾರತ ಮನ್ನಣೆಯನ್ನು ತಂದುಕೊಟ್ಟವು.

ಡ್ಯಾನಿಯಲ್ ಸ್ಯಾಂಡರ್ಸನ್ (೧೮೪೦-೧೮೭೦) : ಕನ್ನಡ ಭಾಷೆ, ಸಾಹಿತ್ಯಗಳನ್ನು ಆಳವಾಗಿ ಅಭ್ಯಾಸಮಾಡಿದ ಮಿಶನರಿಗಳಲ್ಲಿ ಇವನಿಗೆ ವಿಶೇಷ ಪ್ರಾಶಸ್ತ್ಯಸಲ್ಲಬೇಕು. ರೀವ್‌ನ ಪೂರ್ವೋಕ್ತ 'ಕನ್ನಡ-ಇಂಗ್ಲಿಶ್' ಕೋಶದ ಪರಿಷ್ಕೃತ ಆವೃತ್ತಿಯನ್ನು ಸಿದ್ಧಪಡಿಸಿದ್ದಾನೆ, ಜೈಮಿನಿ ಭಾರತದ ಮೊದಲಿನ ಆರು ಸಂಧಿಗಳನ್ನು ಇಂಗ್ಲಿಶ್ ಅನುವಾದದೊಡನೆ ಪ್ರಕಟಿಸಿದ್ದಾನೆ. ವಿದೇಶಿಯರಿಗೆ ಕನ್ನಡ ಭಾಷೆಯ ಪರಿಚಯವನ್ನು ಹಂತ ಹಂತವಾಗಿ ಮಾಡಿಕೊಡುವ ಉದ್ದೇಶದಿಂದ ಸ್ಯಾಂಡರ್ಸನ ನಾಲ್ಕು 'ಕಥಾಸಂಗ್ರಹಗಳ ಹೊಳವನ್ನು ಹಾಕಿಕೊಂಡಿದ್ದನು. ಅವುಗಳಲ್ಲಿ ಮೊದಲಿನದು ಮಾತ್ರ ಹೊರಬಂದಿತು. ತಿಳಿಯಾದ, ಸುಲಭ ಗದ್ಯದಲ್ಲಿರುವ ಈ ಗ್ರಂಥ ಬಹುಕಾಲದವರೆಗೆ ಯುರೋಪಿಯನ್ನರಿಗೆ ಕನ್ನಡ ಪರೀಕ್ಷೆಗೆ ಪಠ್ಯವಾಗಿದ್ದಿತು. ಜೊತೆಗೆ ದೇಶೀಯರಿಗೂ ಪ್ರಿಯವಾದ ಕಥನ ಪುಸ್ತಕವಾಗಿ ಬಾಳಿತು.

ಜೆ. ಸ್ಟೀವೆನ್ಸನ್ (೧೮೫೦-೧೮೮೦) : ಸ್ಟೀವೆನ್ಸನ್ನನ ಗ್ರಂಥ ರಚನೆ ಪಠ್ಯಪುಸ್ತಕಗಳಿಂದ ಮೊದಲಾಯಿತು. ಕೆಂಪು ನಾರಾಯಣನ 'ಮುದ್ರಾ ಮಂಜೂಷ'ವನ್ನು ಸಂಪಾದಿಸಿ ಪ್ರಕಟಿಸಿದನು. ಮೂಲ ಲೇಖಕನ ಆಶಯವನ್ನು ಕಡೆಗಣಿಸಿ ಅನೇಕ ಭಾಗಗಳನ್ನು ಬಿಟ್ಟುಕೊಡುವಲ್ಲಿ ಸ್ಟೀವೆನ್ಸನ್ ಪ್ರಮಾಣ ಮೀರಿ ಸ್ವಾತಂತ್ರ್ಯವನ್ನು ವಹಿಸಿದ್ದಾನೆ.

ಹೆನ್ರಿಹೇಗ್ (೧೮೭೦-೧೯೧೦) : ಬೈಬಲಿನ ದ್ವಿತೀಯ ಪರಿಷ್ಕರಣ ಸಮಿತಿಯಲ್ಲಿದ್ದುಕೊಂಡು ಇಂದು ಪ್ರಚಲಿತವಿರುವ ಬೈಬಲಿನ ಅಧಿಕೃತ ಆವೃತ್ತಿಯಲ್ಲಿ ಹೇಗ್ ಮುಖ್ಯ ಪಾತ್ರವನ್ನು ವಹಿಸಿದ್ದನು. ಹೇಗನ ಮಹತ್ವದ ಗ್ರಂಥೋದ್ಯಮವೆಂದು 'Pice papers on Indian Reforms' ಈ ಮಾಲಿಕೆಯನ್ನು ಹೆಸರಿಸಬಹುದು. ಪ್ರಚಲಿತ ವಿಷಯಗಳ ಮೇಲೆ ಉಪಯುಕ್ತ ಚಿಕ್ಕ ಪುಸ್ತಿಕೆಗಳಿವು. ಈ ಮಾಲಿಕೆಯಲ್ಲಿ ಸು. ೫೦ ಕೃತಿಗಳನ್ನು ಪ್ರಕಟಿಸಿದ್ದಾನೆ. 'ವೃತ್ತಾಂತ ಪತ್ರಿಕೆ' ಎಂಬ ಪ್ರಸಿದ್ಧ ನಿಯತಕಾಲಿಕವನ್ನು ಹೇಗ್ ಅನೇಕ ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾನೆ.

ಬಾಸೆಲ್ ಮಿಶನ್ : ಸ್ವಿಂಜರಲ್ಯಾಂಡದ ಬಾಸೆಲ್ ಪಟ್ಟಣದಲ್ಲಿ ೧೮೧೫ ರಲ್ಲಿ 'ಇವ್ಯಾಂಜಲಿಕಲ್ ಮಿಶನರಿ ಸೊಸೈಟಿ ಆಫ್ ಬಾಸೆಲ್' ಎಂಬ ಸಂಘ ಸ್ಥಾಪಿತವಾಯಿತು. ಬಾಸೆಲ್‌ದಲ್ಲಿ ಕಾಲೇಜನ್ನು ಸ್ಥಾಪಿಸಿ ಕ್ರೈಸ್ತಧರ್ಮ ಪ್ರಚಾರ ಮಾಡಲಿಕ್ಕೆ ಮಿಶನರಿಗಳಿಗೆ ಅಲ್ಲಿ ತರಬೇತಿ ನೀಡಲಾಗುತ್ತಿತ್ತು. ಆ ಕಾಲೇಜಿನಲ್ಲಿ ತರಬೇತಿ ಹೊಂದಿದ ಮಿಶನರಿಗಳು ಜಗತ್ತಿನಾದ್ಯಂತ ತಮ್ಮ ಧರ್ಮ ಪ್ರಚಾರ ಕಾರ್ಯಕ್ಕಾಗಿ ಕಂಕಣ ಬದ್ಧರಾದರು. ಬೇರೆ-ಬೇರೆ ದೇಶಗಳಲ್ಲಿರುವ ಕ್ರೈಸ್ತರನ್ನು ಒಂದು ವಿಧವಾದ ಐಕ್ಯದಲ್ಲಿ ತರುವುದು ಇವರ ಉದ್ದೇಶವಾಗಿತ್ತು[೧೬] ಕ್ರೈಸ್ತ ಮತ ಪ್ರಚಾರ ಹಾಗೂ ಮತಾಂತರಕ್ಕಾಗಿ ಬಾಸೆಲ್ ಮಿಶನ್ ಸಂಸ್ಥೆಯ ಹಲವಾರು ಸೇವಾಧುರೀಣರು ಸಲ್ಲಿಸಿದ ಸೇವೆ ಅಪಾರ ಹಾಗೂ ಮರೆಯಲಾಗದಂತಹುದು. ಇಲ್ಲಿಗೆ ಬಂದ ೫೦ ಮಿಶನರಿಗಳಲ್ಲಿ ೭ ಜನರು ಔದ್ಯೋಗಿಕ ಕ್ಷೇತ್ರದಲ್ಲೂ ೧೦ ಜನರು ಮುದ್ರಣ ಇಲಾಖೆಯಲ್ಲಿಯೂ ೧೮ ಜನರು ಮತ ಪ್ರಚಾರ ವರ್ಗದಲ್ಲೂ ೧೦ ಜನರು ಶಿಕ್ಷಣ ಇಲಾಖೆಗೂ ಇನ್ನುಳಿದ ೫ ಜನರು ಸಾಹಿತ್ಯ, ಗ್ರಂಥೋದ್ಯಮದಲ್ಲಿ ತೊಡಗಿದ್ದರು[೧೭]. ನಾಡಿನಲ್ಲಿ ಬಾಸೆಲ್ ಮಿಶನರಿಗಳು ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದರು. ಕ್ರಿ. ಶ ೧೮೩೪ ರಲ್ಲಿ ಬಾಸೆಲ್ ಮಿಶನ್ ಮಂಗಳೂರನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಸೇವಾ ಕಾರ್ಯವನ್ನು ಪ್ರಾರಂಭಿಸಿತು. ಸ್ಯಾಮ್ಯುಯಲ್ ಹೆಬಿಕ್ ಕರ್ನಾಟಕದಲ್ಲಿ ಈ ಸಂಸ್ಥೆಯ ಸಂಸ್ಥಾಪಕ[೧೮] ಹೊಸಗನ್ನಡ ಸಾಹಿತ್ಯರಂಗದಲ್ಲಿ ಕಾರ್ಯನಿರತರಾದ ಮಿಶನರಿ ಸಂಸ್ಥೆಗಳಲ್ಲಿ ಬಾಸೆಲ್ ಮಿಶನ್‌ದವರ ಕಾರ್ಯವು ಗುಣ-ಗಾತ್ರಗಳೆರಡರಲ್ಲೂ ಅದ್ವಿತೀಯವಾದುದು. ಇತರ ಪ್ರೊಟೆಸ್ಟಂಟ್ ಮಿಶನ್ ಸಂಸ್ಥೆಗಳಂತೆ ಇವರೂ ಗ್ರಂಥೋದ್ಯಮ ಮತ್ತು ವಿದ್ಯಾಸಂಸ್ಥೆಗಳ ಸ್ಥಾಪನೆಗೆ ವಿಶೇಷ ಪ್ರಾಶಸ್ತ್ಯವನ್ನಿತ್ತಿದ್ದಾರೆ. ಕೆಲವು ಪ್ರಾಚೀನ ಕೃತಿಗಳನ್ನು ಶಾಸ್ತ್ರೀಯ ರೀತಿಯಲ್ಲಿ ಸಂಪಾದಿಸಿ ಪ್ರಕಟಿಸಿದರು. ಪ್ರಚಲಿತ ವಿಷಯಗಳನ್ನು ಅದರಂತೆ ವೈಜ್ಞಾನಿಕ ವಿಚಾರಗಳನ್ನೊಳಗೊಂಡ ಪುಸ್ತಕಗಳನ್ನು ಹೊರತಂದರು. ಈ ದಿಶೆಯಲ್ಲಿ ಬಾಸೆಲ್ ಮಿಶನ್‌ದವರು ಮೊದಲಿಗರಲ್ಲದೆ, ಪ್ರಮುಖರೂ ಆಗಿದ್ದರು. ಇಂತವರಲ್ಲಿ ಎದ್ದು ಕಾಣುವ ಹೆಸರುಗಳೆಂದರೆ ಮೊಗ್ಲಿಂಗ್, ಜಿ. ವೈಗಲ್, ವುರ್ತ್, ಕಿಟೆಲ್ ಜೀಗ್ಲರ್‌ರು ಪ್ರಮುಖರಾಗಿದ್ದಾರೆ.

ಹರ್ಮನ್ ಮೊಗ್ಲಿಂಗ್ (೧೮೩೬-೧೮೬೦) : ಕನ್ನಡ ನಾಡಿನಲ್ಲಿ ಕೆಲಸ ಮಾಡಿದ ಬಾಸೆಲ್ ಮಿಶನರಿಗಳಲ್ಲಿ ಮೊಗ್ಲಿಂಗ್‌ನದು ತುಂಬ ದೊಡ್ಡ ಹೆಸರು. ಕನ್ನಡ ನಾಡಿನಲ್ಲಿ ನೆಲೆಸಿದ್ದ ಎರಡು ದಶಕಗಳಲ್ಲಿ ಅವನು

ಒಂದೆಡೆನಿಲ್ಲದೆ ಸುತ್ತಾಡಿದನಾದರೂ, ಮಂಗಳೂರು, ಧಾರವಾಡ, ಹುಬ್ಬಳ್ಳಿ ಹಾಗೂ ಮಡಿಕೇರಿ ಇವು ಅವನ ಮುಖ್ಯ ಕಾರ್ಯಕ್ಷೇತ್ರಗಳಾಗಿದ್ದವು. ಧರ್ಮ ಪ್ರಸಾರ, ಸಾಹಿತ್ಯ ಮತ್ತು ಶಿಕ್ಷಣ -ಈ ಮೂರು ರಂಗಗಳಲ್ಲಿ ಅನುಪಮ ಕಾರ್ಯವನ್ನೆಸಗಿದ ಅವನು ಎರಡು ದಶಕಗಳ ಕಾಲ ಬಾಸೆಲ್ ಮಿಶನ್ನಿನ ನೇತಾರನಾಗಿದ್ದನು. ಮೊಗ್ಲಿಂಗ್ ತನ್ನ ವಾಸ್ತವ್ಯದ ಉತ್ತರಾವಧಿಯಲ್ಲಿ ಕೊಡಗಿನಲ್ಲಿದ್ದನಾದ್ದರಿಂದ ಆ ಪ್ರದೇಶದ ಪರಿಚಯವನ್ನು 'Coorg Memories' ಗ್ರಂಥದ ಮೂಲಕ ಮಾಡಿಕೊಟ್ಟಿದ್ದಾನೆ. ಕೊಡವರ ಶಿಕ್ಷಣಕ್ಕಾಗಿ ಪರಿಶ್ರಮಪಟ್ಟಿದ್ದಾನೆ. ಮೊಗ್ಲಿಂಗ್ ಕ್ರೈಸ್ತಮತ ಪ್ರಸಾರಕ್ಕೆ ಅನುಕೂಲವಾಗುವಂತೆ ಹಲವು ಮಹತ್ವಪೂರ್ಣ ಗ್ರಂಥಗಳನ್ನು ರಚಿಸಿದನು. ಅವುಗಳಲ್ಲಿ ಜಾತಿ ವಿಚಾರಣೆ (೧೮೪೫) ಹಾಗೂ ದೇವವಿಚಾರಣೆ (೧೮೫೦) ಇವು ಯಾವುದೇ ಕೃತಿಗಳ ಅನುವಾದಗಳಾಗಿರದೆ ಸ್ವತಂತ್ರವೆಂದು ತೋರುತ್ತವೆ. ಇಲ್ಲಿಯ ಜನಕ್ಕೆ ಪ್ರಪಂಚದ ಪರಿಚಯವನ್ನು ಮಾಡಿಕೊಡುವ ಸ್ಪಷ್ಟ ಉದ್ದೇಶದಿಂದ ಮೊಗ್ಲಿಂಗ್ ೧೮೪೩ ರಲ್ಲಿ ಪಕ್ಷ ಪತ್ರಿಕೆಯೊಂದನ್ನು ಹೊರಡಿಸಿದನು. ಇದುವೇ ಕನ್ನಡದ ಪ್ರಪ್ರಥಮ ಪತ್ರಿಕೆ. 'ಮಂಗಳೂರು ಸಮಾಚಾರ' ಇದರಲ್ಲಿ ಅವನು ಕೊಡಬೇಕೆಂದಿದ್ದ ವಿವಿಧ ಸಮಾಚಾರಗಳೆಂದರೆ -ಊರವರ್ತಮಾನಗಳು ; ಸರಕಾರಿ ನಿರೂಪಗಳು : ಸುಬುದ್ಧಿಯನ್ನು ಹೇಳುವ ಸಾಮತಿಗಳು, ಹಾಡುಗಳು: ಕಥೆಗಳು : ಸರ್ವರಾಜ್ಯ ವರ್ತಮಾನಗಳು. ಪತ್ರಿಕೆಯಲ್ಲಿ ಬಂದ ಊರ ವರ್ತಮಾನಗಳನ್ನು ಓದಿದಾಗ ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನದ ಒಂದು ನಿಟ್ಟಿನ ಚಿತ್ರಣ ಕಣ್ಣಿಗೆ ಕಟ್ಟುತ್ತದೆ. ಈ ಪತ್ರಿಕೆಗೆ ಅಖಿಲ ಕರ್ನಾಟಕ ವ್ಯಾಪ್ತಿ ಬರಲೆಂದು ಪತ್ರಿಕೆಯ ಹೆಸರನ್ನು 'ಕನ್ನಡ ಸಮಾಚಾರ' ವೆಂಬುದಾಗಿ ಬದಲಿಸಿದನು. (೧೮೫೭). ಮೊಗ್ಲಿಂಗ್‌ನ ಇತರ ಕಾರ್ಯ ಭಾರದಿಂದಾಗಿ ಈ ಪತ್ರಿಕೆ ಅಲ್ಪಾಯುಷಿಯಾಗಿ ಬಾಳಿತು.

ಮೊಗ್ಲಿಂಗ್ ಜನತೆಯೊಡನೆ ನಿಕಟ ಸಂಪರ್ಕ ಬಂದುದರ ಫಲವಾಗಿ ಕನ್ನಡ ಗಾದೆ ಮಾತುಗಳನ್ನು ಆಗೀಗ ಸಂಗ್ರಹಿಸುತ್ತಲಿದ್ದ ೧೮೪೭ ರಲ್ಲಿ ಮೂರುಸಾವಿರ ಗಾದೆಗಳ ಸಂಕಲನವೊಂದನ್ನು ಪ್ರಕಟಿಸಿದನು. ಕನ್ನಡ ಲೋಕೋಕ್ತಿಗಳ ಸಾಮಾಜಿಕ ಮಹತ್ವವನ್ನು ಅರಿತವರಲ್ಲಿಯೂ ಪ್ರಥಮನೆನಿಸಿದನು. ಸಾಹಿತ್ಯಿಕ ದೃಷ್ಟಿಯಿಂದ ಮೊಗ್ಲಿಂಗ್ ಸಲ್ಲಿಸಿದ ಸೇವೆಯಂತೂ ಅನುಪಮವಾಗಿದೆ. ಅದು ಆರಂಭವಾದುದು 'ಬಿಬ್ಲಿಯಾಥೆಕಾ ಕರ್ನಾಟಿಕಾ' ದ ಮೂಲಕ. ಆ ಮಾಲಿಕೆಯಲ್ಲಿ ಜೈಮಿನಿಭಾರತ, ತೊರವೆ ರಾಮಾಯಣ, ಕುಮಾರವ್ಯಾಸ ಭಾರತ, ಬಸವ ಪುರಾಣ ಇವನ್ನು ಪ್ರಕಟಿಸಿದ್ದಾನೆ (೧೮೪೮-೧೮೫೮). ಮಹತ್ವಪೂರ್ಣವಾದ ಈ ಕನ್ನಡ ಕಾವ್ಯಗಳನ್ನು ಸಂಪಾದಿಸಿ, ಪ್ರಕಟಿಸಿದನು. ಕನ್ನಡ ನಾಡಿನಲ್ಲಿ ಅವನ ಸಾಧನೆಯನ್ನು ಗಮನಿಸಿ ತಿಬಿಂಜೆನ್ ವಿಶ್ವವಿದ್ಯಾಲಯವು ಅವನಿಗೆ ಗೌರವ ಡಾಕ್ಟರೇಟ್ ಪದವಿಯನ್ನು ದಯಪಾಲಿಸಿತು (೧೮೫೮). ಕನ್ನಡದ ಕೆಲಸಕ್ಕಾಗಿ ದೊರೆತ ಮೊದಲ ಪಿಎಚ್‌ಡಿ ಅದೂ ವಿದೇಶದಲ್ಲಿ! ಮೊಗ್ಲಿಂಗ್‌ನು ಪುರಂದರದಾಸ, ಕನಕದಾಸರ ಕೆಲವು ಪದಗಳನ್ನು ಜರ್ಮನ್ ಭಾಷೆಗೆ ಪರಿವರ್ತಿಸಿ ಸುಪ್ರಸಿದ್ಧ ZDMG ಪತ್ರಿಕೆಯಲ್ಲಿ ಪ್ರಕಟಿಸಿದನು (೧೮೬೪). ಜೈಮಿನಿ ಭಾರತದ ಕೆಲ ಸಂಧಿಗಳ ಅನುವಾದವು ಈ ಪತ್ರಿಕೆಯಲ್ಲಿ ಬಂದಿದೆ. ಕನ್ನಡ ಸಾಹಿತ್ಯದ

ಹಿರಿಮೆಯನ್ನು ಯುರೋಪಿಯನ್ನರ ಗಮನಕ್ಕೆ ತಂದುಕೊಟ್ಟ ಅಗ್ಗಳಿಕೆಯೂ ಮೊಗ್ಲಿಂಗ್‌ನಿಗೆ ಸಲ್ಲಬೇಕು. ಹೀಗೆ ಮೊಗ್ಲಿಂಗ್ ಹೊಸಗನ್ನಡ ಗದ್ಯಮಾರ್ಗದ ಪ್ರವರ್ತಕನಾದನು. ಹಳಗನ್ನಡ ಕೃತಿಗಳನ್ನು ಸಂಪಾದಿಸಿದನಲ್ಲದೆ ಕೆಲವನ್ನು ಜರ್ಮನ್ ಭಾಷೆಗೆ ಅನುವಾದಿಸಿದನು. ಕನ್ನಡ ಲಿಪಿ ಸುಧಾರಣೆಗೆ ಮನಸ್ಸುಗೊಟ್ಟನು. ಹೊಸ ಕನ್ನಡ ಸಾಹಿತ್ಯದ ಅಸ್ತಿಭಾರವನ್ನು ಹಾಕಿದವರಲ್ಲಿ ಮುಖ್ಯನಾದನು.

ಜಿ. ವೈಗಲ್ (೧೮೧೬-೧೮೫೫) : ಗಾಡ್‌ಫ್ರೆ. ವೈಗಲ್ ಮತ್ತು ಮೊಗ್ಲಿಂಗ್ ಜೊತೆಯಾಗಿ ಕೆಲಸ ಮಾಡಿದ್ದಾರೆ. ಬಳ್ಳಾರಿ ಮಿಶನ್ ಕೇಂದ್ರದವರು ಮಾಡಿದ್ದ ಬೈಬಲ್ ಭಾಷಾಂತರವಿದ್ದಿತಷ್ಟೆ. ಅದರಲ್ಲಿಯ ಹೊಸ ಒಡಂಬಡಿಕೆಯ ಭಾಗವನ್ನು ಅವನು ಸಾದ್ಯಂತವಾಗಿ ನವೀಕರಿಸಿದನು. ೧೮೫೪ ರಲ್ಲಿ ಪ್ರಕಟವಾದ ಹೊಸ ಒಡಂಬಡಿಕೆಯ ಆವೃತ್ತಿಯು ವೈಗಲನದೇ ಎನ್ನಬಹುದು. ಅವನ ಇನ್ನೊಂದು ಗಣನೀಯ ಬರೆಹವೆಂದರೆ, ZDMG ಪತ್ರಿಕೆಯಲ್ಲಿ ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಕುರಿತ ಲೇಖನ. ಈ ಲೇಖನದಲ್ಲಿ ಕನ್ನಡ ಭಾಷೆಯ ಯಾವ ವರ್ಗಕ್ಕೆ ಸೇರಿದುದೆಂಬುದರ ವಿವೇಚನೆ ಮಾಡಿ, ಅದರ ವ್ಯಾಕರಣ ವಿಷಯಗಳನ್ನು ಸಂಸ್ಕೃತ, ಪ್ರಾಕೃತ ಹಾಗೂ ದ್ರಾವಿಡ ಭಾಷೆಗಳೊಡನೆ ಹೋಲಿಸುತ್ತಾ ವಿವರಣೆ ಕೊಟ್ಟಿದ್ದಾನೆ. ನಂತರ ಹಲವಾರು ಕವಿ, ಕೃತಿಗಳ ಉಲ್ಲೇಖ ಮಾಡಿದ್ದಾನೆ. ಈ ಲೇಖನದಲ್ಲಿ ಅವನು ಪ್ರಸ್ತಾಪಿಸಿದ ಕೃತಿಗಳೆಂದರೆ ಶಬ್ದಮಣಿದರ್ಪಣ, ಕರ್ನಾಟಕ ಶಬ್ದಮಂಜರಿ, ಛಂದೋಂಬುಧಿ, ಜಗನ್ನಾಥ ವಿಜಯ, ಕುಮಾರವ್ಯಾಸ ಭಾರತ, ತೊರವೆ ರಾಮಾಯಣ, ಬಸವಪುರಾಣ, ಬೇತಾಳ ಪಂಚವಿಂಶತಿ ಹಾಗೂ ಕೆಲವು ಯಕ್ಷಗಾನ ಪ್ರಸಂಗಗಳು. ವೈಗಲ್‌ರ ಈ ಲೇಖನ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕ್ರಮಬದ್ಧವಾಗಿ ಅರ್ಥಮಾಡಿಕೊಳ್ಳಲು ನೆರವಾಯಿತು.

ಡಬ್ಲ್ಯೂ ಜಿ. ವುರ್ತ್ ಹಾಗೂ ಇತರರು : ಕನ್ನಡವನ್ನು ವಿಶೇಷವಾಗಿ ಅಭ್ಯಸಿಸಿದ ಬಾಸೆಲ್ ಮಿಶನರಿಗಳಲ್ಲಿ ವುರ್ತ್‌ನು ಒಬ್ಬ. ಇವನು ತನ್ನ ವಾಸ್ತವ್ಯದ ಹೆಚ್ಚಿನ ಸಮಯವನ್ನು ಧಾರವಾಡ-ಹುಬ್ಬಳ್ಳಿಯಲ್ಲಿ ಕಳೆದನಾದ್ದರಿಂದ ಅವನಿಗೆ ವೀರಶೈವರ ಸಂಪರ್ಕ ಹೆಚ್ಚಾಗಿ ಒದಗಿಬಂದಿತು. ಅದರ ಫಲವಾಗಿ ಬಸವಪುರಾಣ, ಚೆನ್ನಬಸವ ಪುರಾಣಗಳ ಕಥಾಸಾರವನ್ನು ಇಂಗ್ಲಿಶ್‌ನಲ್ಲಿ ಬರೆದು ಪ್ರಕಟಿಸಿದನು. ಇದಕ್ಕಿಂತ ಎದ್ದು ಕಾಣುವ ಅವನ ಕೃತಿಯೆಂದರೆ 'ಪ್ರಾಕ್ಕಾವ್ಯ ಮಾಲಿಕೆ' ಕನ್ನಡ ಸಾಹಿತ್ಯದ ಆರಂಭದಿಂದ ತನ್ನ ಕಾಲದವರೆಗಿನ ಕಾವ್ಯಗಳಿಂದ ಆಯ್ದ ಪದ್ಯ ಭಾಗಗಳನ್ನು ಒಳಗೊಂಡಿದೆ. ವುರ್ತ್‌ನ ಸಮಕಾಲೀನ ಮಿಶನರಿಗಳೆಂದರೆ ಡಬ್ಲ್ಯೂ. ಹಾಕ್, ಜಿ. ಕೀಸ್, ಜೆ. ಹೂಬರ್ ಇವರನ್ನು ನೆನೆಯಬೇಕು. ಹಾಕ್ ಜರ್ಮನ್ ಗೀತಗಳನ್ನು ಕನ್ನಡಕ್ಕೆ ಅನುವಾದಿಸಿದನು. ಕೀಸ್ ಭೂಗೋಳ, ವ್ಯಾಕರಣ ಮೊದಲಾದ ಪಠ್ಯಗಳನ್ನು ಬರೆದನು. ಹೂಬರ್ ಬೈಬಲ್ ವ್ಯಾಖ್ಯಾನದ ಕೆಲ ಭಾಗದ ಅನುವಾದಕನಾಗಿದ್ದಾನೆ.

ಫರ್ಡಿನಾಂಡ್ ಕಿಟೆಲ್ (೧೮೩೨-೧೯೦೩) : ಕನ್ನಡ ನಾಡಿನಲ್ಲಿ ಕೆಲಸ ಮಾಡಿದ ಮಿಶನರಿಗಳಲ್ಲಿ ಕಿಟೆಲ್ ಗಣ್ಯನಾಗಿದ್ದಾನೆ. ಹುಬ್ಬಳ್ಳಿ, ಧಾರವಾಡ, ಕೊಡಗು ಹಾಗೂ ಮಂಗಳೂರು ಇತನ ಕಾರ್ಯಕ್ಷೇತ್ರವಾಗಿದ್ದವು.

ಅವನ ಸಾಹಿತ್ಯ ಕಾರ್ಯವು ಕವಿತಾ ರಚನೆಯಿಂದ ಮೊದಲಾಯಿತು. ಮತ ಪ್ರಚಾರಕ್ಕೆ ಹಾಡುಗಳು ಅತ್ಯಂತ ಪರಿಣಾಮಕಾರಿ ಮಾಧ್ಯಮವೆಂದು ಅವನು ಭಾವಿಸಿದ್ದನು. ಅದರ ಫಲವೇ 'ಕಥಾಮಾಲೆ' ಎಂಬ ಕಾವ್ಯ ರಚನೆ. ಕ್ರಿಸ್ತನ ಜೀವನವನ್ನೊಳಗೊಂಡ ಈ ಕಾವ್ಯದಲ್ಲಿ ೪೭೫ ಪದ್ಯಗಳಿವೆ. (ಭಾಮಿನಿ, ವಾರ್ಧಕ ಷಟ್ಪದಿಗಳು) ಇಷ್ಟೊಂದು ಕನ್ನಡ ಪದ್ಯಗಳನ್ನು ರಚಿಸಿದ ಬೇರಾವ ವಿದೇಶಿ ಮಿಶನರಿ ಇಲ್ಲ. ಅಲ್ಲದೆ ಇದು ಕ್ರೈಸ್ತ ಸಾಹಿತ್ಯದ ಏಕಮೇವ ಖಂಡಕಾವ್ಯ. ಕಿಟೆಲ್‌ನ ಮುಂದಿನ ಸಾಹಿತ್ಯ ಸೇವೆಯು ಪತ್ರಿಕಾ ಪ್ರಕಟನೆ, ಪಠ್ಯ ಪುಸ್ತಕ, ಮತೀಯ ಪುಸ್ತಕಗಳ ರಚನೆ ಹಾಗೂ ಹಳಗನ್ನಡ ಕಾವ್ಯ ಸಂಪಾದನೆ-ಈ ಮೂಲಕ ವ್ಯಕ್ತವಾಗಿದೆ. 'ಇಂಡಿಯ ಮತ್ತು ಅನ್ಯದೇಶದ ವಾರ್ತಿಕ' ಪತ್ರಿಕೆಯನ್ನು ಜೆ. ಮ್ಯಾಕ್ ಎಂಬವನೊಡನೆ ಸಂಪಾದಿಸಿನು. ಅವನ ಅನುವಾದಿತ ಮತೀಯ ಪುಸ್ತಕಗಳಲ್ಲಿ 'ಪರಮಾತ್ಮಜ್ಞಾನ' 'ಕ್ರೈಸ್ತ ಸಭಾ ಚರಿತ್ರೆ' ಮಹತ್ವದವಾಗಿವೆ. ಶಾಲೆಯ ಪುಸ್ತಕಗಳೆಂದು 'ಇಂಗ್ಲೆಂಡದ ಇತಿಹಾಸ' (ಮೂಲ : ಮಾರಿಸ್) ಹಾಗೂ 'ಪಂಚತಂತ್ರ' ಇವನ್ನು ಹೆಸರಿಸಬೇಕು. 'ಕಾವ್ಯ ಮಂಜರಿ' (ಪ್ರಾಥಮಿಕ ಶಾಲಾ ಮಕ್ಕಳಿಗಾಗಿ) 'ಸಂಣ ಕರ್ನಾಟಕ ಕಾವ್ಯಮಾಲೆ' ಹಳೆಗನ್ನಡದ ಸಂಕ್ಷೇಪ ವ್ಯಾಕರಣ ಸೂತ್ರಗಳು ಇವಾದರೂ ಪಠ್ಯಗಳೇ ಆಗಿದ್ದುವು. ಇದರಲ್ಲಿ ಛಂದಸ್ಸು, ಅಲಂಕಾರಗಳ ಪ್ರಸ್ತಾಪವಿದೆ.

ಕಿಟೆಲ್ ಆವೃತ್ತಿಯೆಂದು ಹೆಸರಾಗಿರುವ 'ಶಬ್ದಮಣಿದರ್ಪಣ' ಹಾಗೂ 'ಛಂದೋಂಬುಧಿ' ಗಳನ್ನು ಪ್ರತ್ಯೇಕವಾಗಿ ಉಲ್ಲೇಖಿಸಬೇಕು. ಕಿಟೆಲ್‌ನ ಕನ್ನಡ ಭಾಷೆ, ಶಬ್ದಗಳ ಕುರಿತಾದ ಅಭ್ಯಾಸಕ್ಕೆ 'ಶಬ್ದಮಣಿ ದರ್ಪಣವೇ' ತಾಯಿ ಬೇರು. ಶಾಸ್ತ್ರೀಯ ದೃಷ್ಟಿಯನ್ನಿಟ್ಟುಕೊಂಡು ಆಧುನಿಕ ವಿಧಾನದಿಂದ ಸಂಪಾದಿತವಾದ ಮೊಟ್ಟ ಮೊದಲಿನ ಪ್ರಕಟನೆಯೆಂದರೆ ಇದುವೇ. ವಿವಿಧ ಹಸ್ತ ಪ್ರತಿಗಳ ಕೂಲಂಕಷ ಪರಿಶೀಲನೆ, ಪಾಠಾಂತರಗಳ ಅಡಿಟಿಪ್ಪಣಿ, ಪಠ್ಯಭಾಗದ ಸುಸ್ಪಷ್ಟರೂಪ, ಸವಿವರ ಪೀಠಿಕೆ, ಅನುಬಂಧಗಳು ಈ ಬಗೆಯ ಗ್ರಂಥ ಸಂಪಾದನೆಯ ಮಾರ್ಗವನ್ನು ಕಿಟೆಲ್ ಕನ್ನಡಿಗರಿಗೆ ಪ್ರಪ್ರಥಮವಾಗಿ ತೋರಿಸಿಕೊಟ್ಟಿದ್ದಾನೆ. ೧೮೭೫ರಲ್ಲಿ ಹೊರಬಂದ ಛಂದೋಂಬುಧಿಯ ಸಂಪಾದನವಾದರೂ ಇದೇ ರೀತಿ ನಡೆದಿದೆ. ಈ ಕೃತಿಯ ಇನ್ನೊಂದು ವೈಶಿಷ್ಟ್ಯವೆಂದರೆ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತ ದೀರ್ಘ ಪ್ರಬಂಧ. ಕನ್ನಡ ಸಾಹಿತ್ಯದ ಸಮಷ್ಟಿ ಚಿತ್ರಣವನ್ನು ಇದರಲ್ಲಿ ಕಾಣುತ್ತೇವೆ.

ಶಬ್ದಾರ್ಥ ವಿಹಾರ, ಅರ್ಥನಿಷ್ಪತ್ತಿ ಕಿಟೆಲ್‌ನಿಗೆ ಪ್ರಿಯವಾದ ಅಂಶವಾಗಿದ್ದಿತು. ಇದೇ ವೇಳೆಗೆ (೧೮೭೨) ಕನ್ನಡ, ಇಂಗ್ಲಿಶ್ ಕೋಶವನ್ನು ರಚಿಸಲು ಕಿಟೆಲ್‌ನಿಗೆ ಕರೆ ಬಂದಿತು. ಈ ದಿಶೆಯಲ್ಲಿ ಮುಂದುವರಿಯಲು ಗುಂಡರ್ಟ್ ತಯಾರಿಸಿದ್ದ 'ಮಲಯಾಳಿ ಇಂಗ್ಲಿಶ್ ಕೋಶವು' ಕಿಟೆಲ್‌ನಿಗೆ ಮಾದರಿಯಾಯಿತು. ಕನ್ನಡ ಶಬ್ದಸಂಗ್ರಹ ಕಾರ್ಯದಲ್ಲಿ ಹಲವಾರು ಜನರು ಅವನಿಗೆ ನೆರವಾದರು. ಆದರೆ ಅವುಗಳ ಅರ್ಥನಿರ್ಣಯ, ವ್ಯುತ್ಪತ್ತಿ, ದ್ರಾವಿಡ ಸಮಾನ ಪದಸೂಚನೆ ಮುಂತಾದ ಅಂಶಗಳು ಕಿಟೆಲ್‌ನಿಂದಲೇ ನಿರ್ಣೀತವಾದವು.

ಶಾಸ್ತ್ರಶುದ್ಧವಾಗಿ ರಚಿತವಾದ ನಿಘಂಟಿದು. ಈ ಕೃತಿಗಾಗಿ ತಿಬಿಂಜೆನ್ ವಿಶ್ವವಿದ್ಯಾಲಯವು ಕಿಟೆಲ್‌ನಿಗೆ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು. ಈ ಕೋಶದ ರಚನಾ ವಿಧಾನಗಳ ಬಗೆಗೆ ಈ ನಿಬಂಧದ ಮುಂದಿನ ಅಧ್ಯಾಯಗಳಲ್ಲಿ ಸವಿವರವಾಗಿ ಪರಿಶೀಲಿಸಲಾಗಿದೆ.

ಕೇಶಿರಾಜನ ಶಬ್ದಮಣಿದರ್ಪಣದ ಅಧ್ಯಯನ, ಸಂಪಾದನೆಗಳ ಕಾಲಕ್ಕೆ ಕಿಟೆಲ್ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಟಿಪ್ಪಣಿಗಳನ್ನು ಮಾಡಿಕೊಂಡಿದ್ದನು. ಅದನ್ನು ವಿಸ್ತರಿಸಿ ಇಂಗ್ಲಿಶ್‌ದಲ್ಲಿ 'A Grammar of the Kannada language' ಎಂಬ ಕೃತಿಯನ್ನು ಪ್ರಕಟಿಸಿದನು. ಇದಕ್ಕೂ ಮುಂಚೆ ಹಲವಾರು ಕನ್ನಡ ವ್ಯಾಕರಣ ಗ್ರಂಥಗಳು ಇಂಗ್ಲಿಶ್‌ದಲ್ಲಿ ರಚಿತವಾದರೂ ಇದರ ಸ್ವರೂಪವೇ ಬೇರೆ. ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಪ್ರತಿಯೊಂದು ಅಂಶವನ್ನು ಇಲ್ಲಿ ವಿಸ್ತಾರವಾಗಿ ಪ್ರತಿಪಾದಿಸಲಾಗಿದೆ. ವ್ಯಾಕರಣದ ಎಲ್ಲ ನಿಯಮಗಳನ್ನು ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ-ಈ ಮೂರು ಅವಸ್ಥೆಗಳಲ್ಲಿ ನಿರೂಪಿಸಿದ್ದರಿಂದ ಕನ್ನಡ ಭಾಷೆಯ ಐತಿಹಾಸಿಕ ಹಾಗೂ ತೌಲನಿಕ ಅಭ್ಯಾಸದ ಸುಸ್ಪಷ್ಟ ಪ್ರಯತ್ನವನ್ನು ಇಲ್ಲಿ ಕಾಣುತ್ತೇವೆ. ಕಿಟೆಲನು ಕೋಶ ರಚನೆ, ಹಳಗನ್ನಡ ಗ್ರಂಥಸಂಪಾದನೆ, ವ್ಯಾಕರಣಕ್ಕೆ ಸಂಬಂಧಿಸಿದ ಮೌಲಿಕ ಕೃತಿಗಳನ್ನು ರಚಿಸಿ, ಕನ್ನಡದ ಪುನರುಜ್ಜೀವನ ಕಾರ್ಯದಲ್ಲಿ ಮಹತ್ವಪೂರ್ಣ ಸೇವೆ ಸಲ್ಲಿಸಿದ್ದಾನೆ.

ಜೀಗ್ಲರ್(೧೮೬೧-೧೮೯೫): ಫ್ರೆಡ್ರಿಕ್ ಜೀಗ್ಲರ್ ವೃತ್ತಿ ಜೀವನವೆಲ್ಲ ಶಿಕ್ಷಣ ರಂಗದಲ್ಲಿಯೇ ಕಳೆಯಿತು. ಉತ್ತರ ಕರ್ನಾಟಕದ ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸರಕಾರಿ ವಲಯದಲ್ಲಿಯೂ ಅವನು ಸಾಕಷ್ಟು ಮನ್ನಣೆ ಪಡೆದಿದ್ದನು. ಇಂಗ್ಲಿಶ್, ಕನ್ನಡ, ಭೂಗೋಲ, ಗಣಿತ ಮತ್ತು ಸಸ್ಯಶಾಸ್ತ್ರ-ಇವು ಅವನು ಕಲಿಸುವ ಮೆಚ್ಚಿನ ವಿಷಯಗಳಾಗಿದ್ದುವು. ಅವನ ಪುಸ್ತಕಗಳೆಲ್ಲವೂ ವಿದ್ಯಾರ್ಥಿಗಳಿಗೆಂದೇ ಇದ್ದುವು. ಅವನ 'Practical Key to Kannada language' ಒಂದು ವಿಶಿಷ್ಟ ಕೃತಿ ದಿನ ಬಳಕೆಯ ಒಂದುನೂರು ಶಬ್ದಗಳನ್ನು ತೆಗೆದುಕೊಂಡು, ಭಾಷಾಂತರ, ಲಿಪ್ಯಂತರ ಕೂಡ ಇದೆ. ವ್ಯಾಕರಣದಂತಹ ನಿರಸ ವಿಷಯಗಳನ್ನು ರೋಚಕವಾಗಿಸುವ ಜೀಗ್ಲರ್‌ನ ಜಾಣ್ಮೆ ಗ್ರಂಥದುದ್ದಕ್ಕೂ ಕಂಡುಬರುತ್ತದೆ. ಇವನು ಶಾಲಾ ವಿದ್ಯಾರ್ಥಿಗಳಿಗೆ ಸಹಾಯಕವಾಗುವಂತೆ 'ಇಂಗ್ಲಿಶ್-ಕನ್ನಡ' ನಿಘಂಟನ್ನು ರಚಿಸಿದ್ದಾನೆ. ಇಲ್ಲಿಯ ಶೈಕ್ಷಣಿಕ ಕ್ಷೇತ್ರದ ಬಗ್ಗೆ ಅನೇಕ ಲೇಖನಗಳನ್ನು ಸ್ವದೇಶದ ಪತ್ರಿಕೆಗಳಲ್ಲಿ ಬರೆದದ್ದು, ಜೀಗ್ಲರ್‌ನ ಒಂದು ವಿಶೇಷ ಕಾರ್ಯವೆನ್ನಬಹುದು. ಬಾಸೆಲ್‌ದಿಂದ ಬಂದ ಮಿಶನರಿ ಲೇಖಕರ ಪೈಕಿ ಇವನದೇ ಕೊನೆಯ ದೊಡ್ಡ ಹೆಸರು. ಕನ್ನಡನಾಡಿಗೆ ಬಾಸೆಲ್ ಮಿಶನ್ ಸಲ್ಲಿಸಿದ ಸೇವೆ ಅಪೂರ್ವವಾದದ್ದು.

ಕಥೋಲಿಕರು :

ಕನ್ನಡದಲ್ಲಿ ಗ್ರಂಥರಚನೆ, ಮುದ್ರಣ ಮತ್ತು ಪ್ರಸಾರ ವಿಷಯದಲ್ಲಿ ಪ್ರೊಟೆಸ್ಟಂಟರಿಗಿಂತ ಕಥೋಲಿಕರಿಗೆ ಆಸಕ್ತಿ ಕಡಿಮೆ. ಹೊಸದಾಗಿ ಬಂದು ಮತ ಪ್ರಸಾರ ಮಾಡಬೇಕಾದ ಪ್ರೊಟೆಸ್ಟಂಟರಿಗೆ ಅದು

ಅನಿವಾರ್ಯವಾಗಿತ್ತು. ಆದಾಗಲೇ ನಾಡಿನಲ್ಲಿ ದಶ ಸಹಸ್ರಗಟ್ಟಲೆ ಕಥೋಲಿಕರು ನೆಲೆಗೊಂಡಿದ್ದರಿಂದ ಸಾಹಿತ್ಯ ಚಟುವಟಿಕೆಗಳ ಆಗತ್ಯತೆ ಅವರಿಗೆ ಅಷ್ಟಾಗಿ ಇರಲಿಲ್ಲ. ಆದರೆ ತಮ್ಮ ವಿರೋಧಿ ಪಂಥದವರು ಮುಂದುವರಿದಾಗ ಆ ಕುರಿತು ಅಲಕ್ಷ್ಯ ಮಾಡುವಂತೆಯೂ ಇರಲಿಲ್ಲ. ೧೯ ನೇಯ ಶತಮಾನದ ಮಧ್ಯಕಾಲದಿಂದ ಅವರ ಗ್ರಂಥ ಪ್ರಕಟನ ಕಾರ್ಯವು ಆರಂಭವಾಯಿತು. 'ಕಥೋಲಿಕ್ ಮಿಶನರಿಗಳ ಸಾಹಿತ್ಯ ರಚನೆ ಮೊತ್ತದಲ್ಲಿ ಧಾರ್ಮಿಕ ವಿಷಯದ ಕೃತಿಗಳೇ ಹೆಚ್ಚಿದ್ದರೂ ಧಾರ್ಮಿಕವಲ್ಲದ ಕೃತಿಗಳನ್ನು ರಚಿಸಿದ್ದಾರೆ'

ಎಲ್ ಚಾರ್ಬೊನಾ (೧೮೫೦) : ಮೈಸೂರು ಸಂಸ್ಥಾನದ ಪ್ರಥಮ 'ವಿಕಾರ್ ಎಪಾಸ್ಟಲಿಕ್' ಎಂದು ನೇಮಕನಾದ ಎಲ್. ಚಾರ್ಬೊನಾ 'ಕಥೋಲಿಕ್ ಪ್ರೆಸ್' ಸ್ಥಾಪಿಸಿ ಅನೇಕ ಮತೀಯ ಹಾಗೂ ಶಾಲೆಯ ಪುಸ್ತಕಗಳನ್ನು ಹೊರತಂದನು. ಅವುಗಳಲ್ಲಿ ಹೆಚ್ಚಿನವು ತಮಿಳಿನಿಂದ ಅನುವಾದಿತವಾದುವು. ಚಾರ್ಬೊನಾ ವಿರಚಿತ 'ಜಪದ ಪುಸ್ತಕ'ವು ರೋಮನ್ ಕಥೋಲಿಕರ ಧಾರ್ಮಿಕ ವಿಧಿ ನಿಯಮಗಳ ದೊಡ್ಡ ಹೊತ್ತಿಗೆ. 'ವೇದಮಾರ್ಪಡಿಸುವಿಕೆಯ ಖಂಡನ' ಮತ್ತು 'ಪ್ರೊತೆಸ್ತಾಂತ್' ಎಂಬ ಪ್ರತಿತರ ಮಾರ್ಗ ಇವು ಪ್ರೊಟೆಸ್ಟಂಟರ್ ಕಾರ್ಯಾಚರಣೆಗೆ ವಿರೋಧ ಸ್ವರೂಪದವಾಗಿದೆ. ಕನ್ನಡ ಸಾಹಿತ್ಯಕ್ಕೆ ಚಾರ್ಬೊನಾನ ವಿಶೇಷ ಕೊಡುಗೆಯೆಂದರೆ 'ಕನ್ನಡ-ಲ್ಯಾಟಿನ್', 'ಲ್ಯಾಟಿನ್-ಕನ್ನಡ' ಕೋಶಗಳನ್ನು ರಚಿಸಿದನು. ಕಥೋಲಿಕ್ ಶಾಲೆಗಳಲ್ಲಿ ಲ್ಯಾಟಿನ್ ಅಭ್ಯಾಸವು ಕಡ್ಡಾಯದ ವಿಷಯವಾದದ್ದರಿಂದ ಈ ಕೋಶಗಳ ರಚನೆ ಅವಶ್ಯವೆನಿಸಿತು.

ಜೆ. ಬ್ಯಾರಿಲ್ : ಬೆಂಗಳೂರಿನಲ್ಲಿದ್ದ ಪಾದ್ರಿ 'ಪರಮಾತ್ಮ ಗುರುವಿನ ಕತೆ' ಯನ್ನು ತಮಿಳಿನಿಂದ ಅನುವಾದಿಸಿದ್ದಾನೆ. ಚಿನ್ನಾಮಿಯ ಧಾರ್ಮಿಕ ಕೃತಿಗಳಾದ ಕ್ರೈಸ್ತ ಧರ್ಮದ ಮುಖ್ಯ ಧಾರ್ಮಿಕ ತತ್ವಗಳನ್ನು ಬೋಧಿಸುವ ದೀರ್ಘ ಪ್ರಶ್ನೋತ್ತರಾವಳಿ, ಕ್ರೈಸ್ತಸಂತರ ಜೀವನ ಚರಿತ್ರೆಗಳು ಕ್ರೈಸ್ತ ಧರ್ಮ ಸಮರ್ಥನೆ ಇವು ಧರ್ಮ, ನಡತೆ, ಯೇಸು ಸ್ವಾಮಿಗಳ ಪಾಡು, ದೇವ ಪ್ರಸಾದವನ್ನು ತೆಗೆದುಕೊಳ್ಳುವವರಿಗೆ ತಿಳಿಸುವ ವರ್ತಮಾನಗಳನ್ನು ಒಳಗೊಂಡಿರುತ್ತವೆ. ಶಾರ್ಬೊನೊ 'ಶಿಲುಬೆಯ ಹಾದಿ' ಯನ್ನು ತಮಿಳಿನಿಂದ ಅನುವಾದಿಸಿದ್ದಾರೆ. ಆಂದ್ರೆ ಜೆರ್ಜಿಯರ್‌ರು ಧ್ಯಾನ, ಮುಕ್ತಿ, ಸಾಧನೆ, ಕೀರ್ತನೆಗಳಿಗೆ ಸಂಬಂಧಿಸಿದಂತೆ ೨೧ ಧಾರ್ಮಿಕ ಕೃತಿಗಳನ್ನು ರಚಿಸಿದ್ದಾರೆ. ಎ. ಬೌತೆಲೊನ ಗ್ರಂಥೋದ್ಯಮವೂ ಗಣನೀಯವಾದುದು. ಬೈಬಲಿನ ದೇಶಭಾಷಾನುವಾದಕ್ಕೆ ಕಥೋಲಿಕರು ತತ್ವತಃ ವಿರೋಧಿಗಳು. ಬೌತೆಲೊ 'ವೇದಸಂಗ್ರಹ' ವೆಂಬ ಕೃತಿಯಲ್ಲಿಯು ಅದರ ಸಾರವನ್ನು ಕೂಡ ಮಾಡಿದ್ದಾನೆ. 'ಸತ್ಯೋಪದೇಶ' ವೆಂಬ ಮಾಲಿಕೆಯಲ್ಲಿ ಹಲವು ಪುಸ್ತಿಕೆಗಳನ್ನು ಹೊರತಂದಿದ್ದಾನೆ. ಲ್ಯಾಟಿನ್ ವ್ಯಾಕರಣವನ್ನು ಕನ್ನಡದಲ್ಲಿ ಬರೆದನಲ್ಲದೆ ಕನ್ನಡ ಛಂದಸ್ಸನ್ನು ಕುರಿತು ಲ್ಯಾಟಿನ್‌ನಲ್ಲಿ ಪುಸ್ತಕ ರಚಿಸಿದ್ದಾನೆ. ಬೆಂಗಳೂರಿನ ಕಥೋಲಿಕ್ ಸಂಸ್ಥೆಯ 'ಶ್ಲೋಕ ಸಂಗ್ರಹ' ವನ್ನು ಪ್ರತ್ಯೇಕವಾಗಿ ಹೆಸರಿಸಬೇಕು. ಅದರಲ್ಲಿ ಸಂಸ್ಕೃತದ ನೀತಿಪರ ಶ್ಲೋಕಗಳನ್ನು ಅವಕ್ಕೆ ಸಮಾನವಾದ ಬೈಬಲ್ ವಾಕ್ಯಗಳನ್ನೂ ಅನುವಾದ ಟಿಪ್ಪಣಿಗಳೊಡನೆ ಕೊಡಲಾಗಿದೆ.

ವಿದೇಶಿ ಮಿಶನರಿಗಳ ಸಾಹಿತ್ಯ ಕಾರ್ಯವು ೧೭-೧೮ ನೆಯ ಶತಮಾನಗಳಲ್ಲಿ ತುಸು ಪುಟ್ಟಿಗೆ ಮಾತ್ರ ಕಾಣಿಸಿಕೊಂಡು, ೧೯ನೆಯ ಶತಮಾನದಲ್ಲಿ ಅತ್ಯಂತ ಪ್ರವರ್ಧಮಾನ ಸ್ಥಿತಿಯಲ್ಲಿದ್ದಿತು. ಮಿಶನರಿ ಸಂಸ್ಥೆಗಳ ಮುಖ್ಯ ಉದ್ದೇಶ ಕ್ರೈಸ್ತ ಮತ ಪ್ರಚಾರ ಹಾಗೂ ಮತಾಂತರವಾಗಿದ್ದರೂ ಇಲ್ಲಿಯ ಜನತೆಯ ಮೂಢನಂಬಿಕೆಗಳನ್ನು ಸ್ವಧರ್ಮದಲ್ಲಿಯ ಅಂದ ಶ್ರದ್ಧೆಯನ್ನು ಸಡಿಲಿಸಿ ಕ್ರೈಸ್ತ ಧರ್ಮದಲ್ಲಿ ಆಸ್ಥೆಯನ್ನು ಕುದುರಿಸುವುದಾಗಿತ್ತು. ಅದಕ್ಕೆ ಲೌಕಿಕ ಹಾಗೂ ಧಾರ್ಮಿಕ ಸಾಹಿತ್ಯ ರಚನೆ ಹಾಗೂ ಪಾಶ್ಚಾತ್ಯ ಶಿಕ್ಷಣಕ್ರಮ ಅವರಿಗೆ ಅನಿವಾರ್ಯವಾಗಿತ್ತು. ಮಿಶನರಿಗಳು ಧಾರ್ಮಿಕ ಮಧ್ಯ ಬಿಂದುವಿನಲ್ಲಿ ನಿಂತು ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ಸಮಾಜದ ಎಲ್ಲ ಆಯಾಮಗಳಲ್ಲಿ ಕೆಲಸ ಮಾಡಿದರು. ಅವರ ಸಾಹಿತ್ಯ, ಭಾಷೆ-ಸಾಹಿತ್ಯ-ಧರ್ಮ ಈ ಮೂರು ನೆಲೆಗಳಲ್ಲಿ ವ್ಯಾಪಿಸಿದೆ. ಅವುಗಳ ಫಲಿತವನ್ನು ಗ್ರಂಥ, ಲೇಖನಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಅವರು ಶಿಕ್ಷಣಕ್ಕೆ ವಿಶೇಷ ಮಹತ್ವಕೊಟ್ಟರು. ಅದಕ್ಕೆ ಪಠ್ಯಪುಸ್ತಕ ರಚನೆಗೆ ಅವರು ಶ್ರಮಿಸಬೇಕಾಯಿತು. ಮಿಶನ್‌ದವರು ಬೆಂಗಳೂರು, ಧಾರವಾಡ, ಮಂಗಳೂರುಗಳಲ್ಲಿ ಕಾಲೇಜುಗಳನ್ನು ಸ್ಥಾಪಿಸಿದರು. ಕ್ರೈಸ್ತಮತದ ಪ್ರಸಾರದ ಜೊತೆಗೆ ಲೌಕಿಕ ಶಿಕ್ಷಣವನ್ನು ಕೊಡುತ್ತಿದ್ದರು. ಸ್ತ್ರೀ ಶಿಕ್ಷಣದತ್ತ ವಿಶೇಷ ಆಸಕ್ತಿ ವಹಿಸಿದರು ಎಂಬುದು ಗಮನಿಸಬೇಕಾದ ಸಂಗತಿ. ಶಾಲಾ- ಕಾಲೇಜುಗಳಲ್ಲಿ ಶಿಸ್ತು, ಬೋಧನೆ ಇತ್ಯಾದಿ ಪಠ್ಯ ಚಟುವಟಿಕೆಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನು ಚೆನ್ನಾಗಿ ಕಾಯ್ದುಕೊಂಡರು. ಮಿಶನರಿಗಳು ಶೈಕ್ಷಣಿಕ ಕಾರ್ಯದ ಮೂಲಕ ಕನ್ನಡ ಸಾಹಿತ್ಯದ ವಿಕಾಸಕ್ಕೆ ಮಾರ್ಗ ಸಿದ್ಧಗೊಳಿಸಿತು.

ಮಿಶನರಿಗಳು "ಕಳೆದ ೩೦೦ ವರ್ಷಗಳ ಕಾಲ ನಮ್ಮ ಸಾಹಿತ್ಯ ಸಂಸ್ಕೃತಿಗಳನ್ನೆಲ್ಲಾ ಕಾಲಗರ್ಭದಿಂದಗಿದು ಬಯಲಿಗೆ ತಂದ ಕ್ರೈಸ್ತ ವಿದ್ವಾಂಸರ ತಂಡವೊಂದು ಈ ನಾಡಿನಲ್ಲಿ ಆಧುನಿಕ ಋಷಿಗಳಂತೆ ಕಾಣಿಸಿಕೊಂಡರು. ಕಾವ್ಯ ಶಾಸ್ತ್ರಾದಿ ಗ್ರಂಥಗಳು, ಪ್ರಾಚೀನ ಸಾಹಿತ್ಯ ಸಂಸ್ಕೃತಿಗಳ ಅವಶೇಷಗಳು, ಅಸಂಖ್ಯಾ ಶಿಲಾಶಾಸನಗಳು ಭೂಗರ್ಭದಿಂದ ಬೆಳಕಿಗೆ ತಂದು ಅನ್ವೇಷಿಸಿ, ವ್ಯಾಖ್ಯಾನಿಸಿ ಅಂತೆಯೇ ಉಳಿಸಿ ಮಾಡಿದ ಸಾಹಸಕರವಾದ ಕೆಲಸವು ಅಸಮಾನ್ಯವಾಗಿದೆ. ಇಂದಿನಂತೆ ಪ್ರಯಾಣ ಸೌಕರ್ಯವಿಲ್ಲದಿದ್ದ ಆ ಕಾಲದಲ್ಲಿ ಅವರು ನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ ನಡೆಸಿದ ಜ್ಞಾನೋಪಾಸನೆ, ಅನ್ವೇಷಣೆ ಮತ್ತು ಧರ್ಮ ರಕ್ಷಣೆಯ ಮಹಾಕಾರ್ಯವು ನಮ್ಮ ದೇಶದ ಹಿಂದಾವ ಮಹಾತಪಸ್ವಿಯೂ ಕೈಕೊಂಡಿರದಿದ್ದ ಅಸಾಧಾರಣ ಸಾಹಸವಾಗಿದೆ. ಸೂಕ್ಷ್ಮವಾಗಿ ಹೇಳುವುದಾದರೆ ಮಿಶನರಿಗಳು ಈ ನಾಡಿನ ಆಧುನಿಕ ಜ್ಞಾನವಿಕಾಸಕ್ಕೆ ಕಾರಣರಾಗಿದ್ದಾರೆ"[೨೦] ಕ್ರೈಸ್ತ ಮಿಶನರಿಗಳ ಕನ್ನಡ ಸೇವೆಯ ಬಗೆಗೆ ಐ. ಮಾ. ಮುತ್ತಣ್ಣ ಅವರ ಅಭಿಪ್ರಾಯಗಳು ಸಮಂಜಸವಾಗಿವೆ. ಹೊಸಗನ್ನಡ ಸಾಹಿತ್ಯದ ನಸುಕು ಇನ್ನೂ ಹರಿಯದೇ ಇದ್ದಾಗ ವಿದೇಶೀ ಮಿಶನರಿಗಳು ಬಂದು ತಮಗೆಂದೇ ರಚಿಸಿದ ಭಾಷಾಭ್ಯಾಸದ ಸಾಧನಗಳು, ಆರಂಭಿಸಿದ ಹೊಸ ಸಾಹಿತ್ಯದ ಪ್ರಕಾರಗಳು, ವ್ಯಕ್ತಪಡಿಸಿದ ಅನೇಕಾನೇಕ ಹೊಸ ವಿಚಾರಗಳು ಕನ್ನಡಿಗರ ಸಾಹಿತ್ಯ ಕಾರ್ಯದಲ್ಲಿ ಅತಿಶಯವಾದ ಪ್ರಯೋಜನಕ್ಕೆ ಒದಗಿದವು.

೨.೦೪ ಮಿಶನರಿಗಳ ಬಗೆಗೆ ಈ ವರೆಗೆ ನಡೆದಿರುವ ಅಧ್ಯಯನ

ಕರ್ನಾಟಕದಲ್ಲಿ ಮಿಶನರಿಗಳ ಬಗೆಗೆ ಈ ವರೆಗೆ ನಡೆದಿರುವ ಸಂಶೋಧನೆಯ ಸಮೀಕ್ಷೆಯನ್ನು ಈ ಸಂದರ್ಭದಲ್ಲಿ ಮಾಡಬಹುದು. ಡಾ. ವರದರಾಜ ಹುಯಿಲಗೋಳ ಅವರು ಕನ್ನಡ ನಾಡು-ನುಡಿ- ಶಿಕ್ಷಣ-ಸಾಹಿತ್ಯಕ್ಕೆ ಕ್ರೈಸ್ತ ವಿದ್ವಾಂಸರ ಕೊಡುಗೆಯನ್ನು 'ಕ್ರೈಸ್ತರಿಂದ ಕನ್ನಡಕ್ಕೆ ಕಾಣಿಕೆ ಎಂಬ ಗ್ರಂಥದಲ್ಲಿ' ವಿವರಿಸಿದ್ದಾರೆ[೨೧] ಹೆಬಿಕ್, ಮೊಗ್ಲಿಂಗ್, ಕಿಟೆಲ್ ಮುಂತಾದ ಮಿಶನರಿಗಳು ನಮ್ಮ ನಾಡಿಗೆ ಬಂದಾಗ ದೇಶೀಯ ವಿದ್ವಾಂಸರು ಅವರನ್ನು ಕಂಡಬಗೆ, ಮಿಶನರಿಗಳ ಕಷ್ಟ ಸಹಿಷ್ಣುತೆ, ಧರ್ಮ ಪ್ರಸಾರ, ಸಾಹಿತ್ಯ ಕಾರ್ಯ ಮುಂತಾದ ವಿಷಯಗಳನ್ನು ತಿಳಿಸಿಕೊಟ್ಟಿದ್ದಾರೆ. ಹಲವು ಬಗೆಯ ಆಕರಗಳನ್ನು ಬಳಸಿಕೊಂಡಿರುವ ಈ ಕೃತಿ ಮಿಶನರಿಗಳ ಅಧ್ಯಯನದಲ್ಲಿ ಆಸಕ್ತರಾಗಿರುವವರು ಪರಾಮರ್ಶಿಸಬೇಕಾದ ಗ್ರಂಥವಾಗಿದೆ. ಡಾ. ಹುಯಿಲಗೋಳ ಅವರು ಮಿಶನರಿಗಳ ಬಗೆಗೆ ಎರಡು ಚಿಕ್ಕ ಪುಸ್ತಕಗಳನ್ನು ಮಕ್ಕಳಿಗಾಗಿ ಬರೆದಿದ್ದಾರೆ[೨೨] ಅವುಗಳಲ್ಲಿಯೂ ಕನ್ನಡ ನಾಡು-ನುಡಿಗೆ ವಿದೇಶಿ ವಿದ್ವಾಂಸರು ಸಲ್ಲಿಸಿದ ಸೇವೆಯನ್ನು ಸರಳವಾದ ಶೈಲಿಯಲ್ಲಿ ವಿವರಿಸಿದ್ದಾರೆ. ಜರ್ಮನಿಯ ಕಿಟೆಲ್ ತಮ್ಮ ಧರ್ಮ ಪ್ರಸಾರಕ್ಕಾಗಿ ಭಾರತಕ್ಕೆ ಬಂದನು. ಕನ್ನಡದ ಭಾಷೆ ಹಾಗೂ ಸಾಹಿತ್ಯದ ಅಭ್ಯಾಸಕ್ಕೆ ಅವನ ಕೊಡುಗೆ ಅಪಾರ. ಇಂದಿಗೂ ಅದ್ವಿತೀಯ ಎನಿಸಿದ ಕನ್ನಡ-ಇಂಗ್ಲಿಶ್ ನಿಘಂಟನ್ನು ಸಿದ್ಧಗೊಳಿಸಿದ ಸಾಹಸಿ ವಿದ್ವಾಂಸ[೨೩] ಕಿಟೆಲ್‌ನ ಸಾಹಿತ್ಯಿಕ ಸಾಧನೆಯನ್ನು ಸೊಗಸಾಗಿ ಹೇಳಿದ್ದಾರೆ.

ಐ. ಮಾ. ಮುತ್ತಣ್ಣ ಅವರು 'ಭಾರತ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸ ಸೇವೆ' ಹಾಗೂ '೧೯ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' ಎಂಬ ಕೃತಿಗಳಲ್ಲಿ ಮಿಶನರಿಗಳ ಬಗೆಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾರೆ. ಕ್ರಿ.ಶ ೧೮ನೇ ಶತಮಾನದ ಪೂರ್ವಾರ್ಧ ಮತ್ತು ೨೦ ನೇ ಶತಮಾನದ ಉತ್ತರಾರ್ಧದ ಮಧ್ಯ ೨೦೦ ವರ್ಷಗಳ ಕಾಲದಲ್ಲಿ ಉಂಟಾದ ಅಪೂರ್ವ ರಾಜಕೀಯ ಮತ್ತು ಸಾಂಸ್ಕೃತಿಕ ಉತ್ಕ್ರಾಂತಿಯು ಈ ದೇಶದ ಸಹಸ್ರಾರು ವರ್ಷಗಳ ಇತಿಹಾಸದಲ್ಲಿ ಎಂದೂ ಕಂಡುಬರದಿದ್ದ ವಿಶಿಷ್ಟ ಘಟನೆಯಾಗಿದೆ. ಪಾಶ್ಚಾತ್ಯರ ಬರುವಿಕೆಯು ಈ ದೇಶವನ್ನು ಕಳೆದ ಶತಮಾನದಲ್ಲಿ ಆಧುನಿಕ ಜಗತ್ತಿನ ಹೊಸ್ತಿಲಿಗೆ ತಳ್ಳಿ ಹಾಕಿತು ಎಂಬುದು ನಿರ್ವಿವಾದ ವಿಚಾರವಾಗಿದೆ. ಕ್ರಿ. ಶ ೧೮ನೇ ಶತಮಾನದವರೆಗೂ ನಮ್ಮ ಜನರ ಜ್ಞಾನಪರಿಮಿತಿ, ಜೀವನ ವ್ಯವಹಾರ, ಶುಷ್ಕ ಪರಂಪರೆಗಳೇ ಮೊದಲಾದುದನ್ನು ಪಾಶ್ಚಾತ್ಯ ವಾಙ್ಮಯವು ತಟ್ಟಿ ಹಾಕಿ ದೇಶಕ್ಕೆ ಹೊಸ ವಾತಾವರಣವನ್ನೇ ಕಲ್ಪಿಸಿತು. ಪಾಶ್ಚಾತ್ಯ ವಿದ್ವಾಂಸರು ನೂರಾರು ಸಂಖ್ಯೆಯಲ್ಲಿ ಒಬ್ಬನಿಗಿಂತಲೂ ಒಬ್ಬರು ಮಿಗಿಲಾಗಿ ನಡೆಸಿದ ಸಾಹಿತ್ಯ ಸಾಂಸ್ಕೃತಿಕ ಮತ್ತು ಸಮಾಜಸೇವೆಯನ್ನು ಪ್ರೊ. ಮುತ್ತಣ್ಣ ಅವರು ಸವಿಸ್ತಾರವಾಗಿ ನಿರೂಪಿಸಿದ್ದಾರೆ [೨೪] 'ಭಾರತ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಸೇವೆ' ಎಂಬ ಅವರ ಗ್ರಂಥವು ೩೩ ಅಧ್ಯಾಯಗಳಲ್ಲಿ ಹರಡಿಕೊಂಡಿದೆ.

ಭಾರತಕ್ಕೆ ಅಂತರಾಷ್ಟ್ರೀಯ ಸಂಪರ್ಕ, ಗ್ರೀಕ್‌ರ ಪ್ರಭಾವ, ರಾಜಕೀಯ, ಆಡಳಿತ, ಧರ್ಮ ಪ್ರಸಾರ, ಮುಂತಾದ ಕಾರಣಗಳಿಂದಾಗಿ ಐರೋಪ್ಯರಾದ ಫ್ರೆಂಚ್, ಪೋರ್ಚುಗೀಸ್, ಡಚ್ಚ, ಇಂಗ್ಲಿಶ್‌ರ ಆಗಮನದಿಂದಾಗಿ ಭಾರತೀಯ ಕಲೆ, ಸಾಹಿತ್ಯ, ಕೈಗಾರಿಕೆ ಮುದ್ರಣ ಮುಂತಾದ ವಲಯಗಳಲ್ಲಿ ಉಂಟಾದ ಮಾರ್ಪಾಟುಗಳನ್ನು ಚರ್ಚಿಸಿದ್ದಾರೆ. ಗ್ರಂಥ ರಚನೆಗೆ ಲೇಖಕರು ಅಪೂರ್ವ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ಪ್ರತಿಯೊಬ್ಬ ಯುರೋಪಿಯನ್ ವಿದ್ವಾಂಸನ ಸಾಧನೆಯನ್ನು ತಿಳಿಸುವ ಈ ಗ್ರಂಥ ಆಧುನಿಕ ಭಾರತದ ಚರಿತ್ರೆಯನ್ನು ಅರಿಯಲು ತುಂಬ ನೆರವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಧರ್ಮ ಪ್ರಸಾರ, ಆಡಳಿತ ಮುಂತಾದ ಕಾರಣಗಳಿಂದಾಗಿ ಭಾರತದ ವಿವಿದೆಡೆಯಲ್ಲಿ ಸೇವೆ ಸಲ್ಲಿಸಿದ ವಿದ್ವಾಂಸರ ಸೇವೆಯನ್ನು ಮೇಲಿನ ಗ್ರಂಥದಲ್ಲಿ ತಿಳಿಸಿದ ಮುತ್ತಣ್ಣನವರು ಕನ್ನಡ ನಾಡುನುಡಿಗೆ ಪಾಶ್ಚಾತ್ಯ ವಿದ್ವಾಂಸರ ಸೇವೆಯನ್ನು ಇನ್ನೊಂದು ಗ್ರಂಥದಲ್ಲಿ ನಿರೂಪಿಸಿದ್ದಾರೆ[೨೫] ಕನ್ನಡ ನಾಡಿನ ಪ್ರಾಚೀನತೆ, ಅಂದಿನ ವ್ಯಾಪ್ತಿ, ದೇಶೀಯ ಭಾಷೆಗಳ, ಸಾಹಿತ್ಯದ ಅಭಿವೃದ್ಧಿಗೆ ಪಾಶ್ಚಾತ್ಯರು ತೊಡಗಿಸಿಕೊಂಡಬಗೆ, ಕನ್ನಡ ನುಡಿ, ಲಿಪಿಗಳ ಮೂಲದ ಬಗೆಗೆ ಪರಿಶೋಧನೆ, ಪಾಶ್ಚಾತ್ಯರ ಪ್ರಭಾವದಿಂದಾಗಿ ಗದ್ಯ ಸಾಹಿತ್ಯ ವಿಕಾಸವಾದ ರೀತಿ, ಜನಪದ ಸಾಹಿತ್ಯದ ಕಡೆಗೆ ಒಲವು, ಪಾಶ್ಚಾತ್ಯ ವಿದ್ಯೆಯನ್ನು ಪಡೆದ ಮೊದಲ ಕನ್ನಡಿಗರು, ಸಾಹಿತ್ಯ ಸಂಚಿಕೆಗಳೂ ವೃತ್ತ ಪತ್ರಿಕೆಗಳೂ ಮುದ್ರಣ ಯಂತ್ರ ಮುಂತಾದ ಚಟುವಟಿಕೆಗಳು ವಿಕಾಸವಾದ ಕ್ರಮ, ಕರ್ನಾಟಕದಲ್ಲಿ ವಿವಿಧ ಕ್ರೈಸ್ತ ಮತ ಪ್ರಚಾರ ಸಂಸ್ಥೆಗಳು, ನಾಡಿನ ಉದ್ದಗಲಕ್ಕೂ ಮಿಶನರಿಗಳು ಸ್ಥಾಪಿಸಿದ ವಿದ್ಯಾಪೀಠಗಳು, ಚಿಕಿತ್ಸಾಲಯಗಳು, ಕೈಗಾರಿಕಾ ಕೇಂದ್ರಗಳು ನಂತರದ ಅಧ್ಯಾಯಗಳಲ್ಲಿ ಕನ್ನಡ ನಾಡು-ನುಡಿಗಾಗಿ ಸೇವೆ ಸಲ್ಲಿಸಿದ ಮಿಶನರಿಗಳಾದ ರೀವ್, ಗ್ಯಾರೆಟ್, ಮೊಗ್ಲಿಂಗ್, ಕಿಟೆಲ್, ವೀಗಲ್, ಮೆಕ್ರೆಲ್, ವೂರ್ತ್, ರೈಸ್, ಜೀಗ್ಲರ್, ಫ್ಲೀಟ್, ಸ್ಯಾಂಡರ್‌ಸನ್ ಈ ಮೊದಲಾದ ವಿದ್ವಾಂಸರ ಸಾಹಿತ್ಯಿಕ ಹಾಗೂ ಶೈಕ್ಷಣಿಕ ಚಟುವಟಿಕೆಯನ್ನು ಸೋದಾಹರಣವಾಗಿ ಹೇಳಿದ್ದಾರೆ. ಮೂರು ಅನುಬಂಧಗಳಲ್ಲಿ ದ್ರಾವಿಡ ಭಾಷೆಗಳಲ್ಲಿ ಕನ್ನಡದಸ್ಥಾನ, ಕರ್ನಾಟಕದಲ್ಲಿ ಮೂವರು ಪ್ರಬಲ ಪಾಶ್ಚಾತ್ಯ ಕನ್ನಡಿಗರು, ಬಿ. ಎಲ್. ರೈಸ್‌ರು ಮಾಡಿದ ಕಿಟೆಲ್ ಕೋಶದ ವಿಮರ್ಶೆ ಇವು ಗ್ರಂಥಕ್ಕೆ ಪೂರಕವಾಗಿವೆ. ಇಂಗ್ಲಿಶ್- ಕನ್ನಡದಲ್ಲಿರುವ ವ್ಯಕ್ತಿ ಸೂಚಿ ಗ್ರಂಥದ ಅಧ್ಯಯನಕ್ಕೆ ತುಂಬ ಸಹಾಯಕವಾಗಿದೆ. ಕಾಣಸಿದ ಅಪೂರ್ವ ಮಾಹಿತಿಗಳನ್ನು ಕಲೆಹಾಕಿ, ಅಚ್ಚುಕಟ್ಟಾಗಿ ವಿವರಿಸಿದ್ದಾರೆ. ಗ್ರಂಥರಚನೆಗೆ ಲೇಖಕರು ತುಂಬ ಶ್ರಮಿಸಿದ್ದಾರೆ. ಈ ಹಿಂದೆ ಮಿಶನರಿಗಳನ್ನು ಕುರಿತಾದ ಸಂಕ್ಷಿಪ್ತವಾದ ಮಾಹಿತಿಯನ್ನು ಕೊಡುವ ಬರೆಹಗಳು ಬಂದಿವೆಯಾದರೂ ಶ್ರೀ ಮುತ್ತಣ್ಣರು ಅದನ್ನು ಅಧಿಕೃತ ಅಸ್ತಿಭಾರದ ಮೇಲೆ ನಿಲ್ಲಿಸಲು ಸಮರ್ಥರಾಗಿದ್ದಾರೆ.

ಡಾ. ಶ್ರೀನಿವಾಸ ಹಾವನೂರವರು ಡಾಕ್ಟರೇಟ್ ನಿಬಂಧ ಮಿಶನರಿ ಜನರ ಕಾರ್ಯ ಸಾಧನೆಯನ್ನು ಕುರಿತು ಸಾಕಷ್ಟು ವಿವರಣೆಗಳನ್ನೊಳಗೊಂಡಿದೆ.[೨೬] 'ಹೊಸಗನ್ನಡ ಅರುಣೋದಯ'ದಲ್ಲಿ ಎರಡು ಭಾಗಗಳಿವೆ.

ಮೊದಲನೆಯ ಭಾಗದಲ್ಲಿ (ಪೂರ್ವಾರ್ಧ) ಅರುಣೋದಯದ ಹಿನ್ನೆಲೆ ಆಗ ಒದಗಿಬಂದ ಪಾಶ್ಚಾತ್ಯರ ಸಂಪರ್ಕ ಮಿಶನರಿಗಳ ಆಗಮನ, ಅವರ ಮುದ್ರಣಕಾರ್ಯ, ಗ್ರಂಥೋದ್ಯಮ ಮಿಶನರಿ ಜನರ ಶೈಕ್ಷಣಿಕ ಕಾರ್ಯ, ಮಿಶನ್ ಸಂಸ್ಥೆಗಳಾದ ಕಥೋಲಿಕ್, ಲಂಡನ್, ವೆಸ್ಲೆಯನ್, ಬಾಸೆಲ್ ಮಿಶನ್ ಸಂಸ್ಥೆಗಳ ಸಾಹಿತ್ಯಿಕ ಚಟುವಟಿಕೆಗಳನ್ನು ವಿವರಿಸಿದ್ದಾರೆ. ಎರಡನೆಯ ಭಾಗದಲ್ಲಿ (ಉತ್ತರಾರ್ಧ) ಆ ಕಾಲದ ಸಾಹಿತ್ಯ ಕೃತಿಗಳನ್ನು ಸ್ಥೂಲವಾಗಿ ಸಮೀಕ್ಷಿಸಲಾಗಿದೆ. ಕ್ರೈಸ್ತ ಮಿಶನರಿಗಳು ರಚಿಸಿದ ಇಂಗ್ಲಿಶ್-ಕನ್ನಡ, ಕನ್ನಡ-ಇಂಗ್ಲಿಶ್ ಶಬ್ದಕೋಶ, ವ್ಯಾಕರಣ ಗ್ರಂಥಗಳ ಸಮೀಕ್ಷೆ ಮಾಡಿದ್ದಾರೆ. ನಂತರ ಕ್ರೈಸ್ತ ಗೀತ ಸಾಹಿತ್ಯ, ಬೈಬಲ್ ಅನುವಾದ ಅದರ ಸಂಗ್ರಹ, ವ್ಯಾಖ್ಯೆಗಳ ಬಗೆಗೆ ಚರ್ಚಿಸಿದ್ದಾರೆ. ಹತ್ತೊಂಬತ್ತನೆಯ ಶತಮಾನದ ಕನ್ನಡ ಸಾಹಿತ್ಯ ಚಟುವಟಿಕೆಗಳನ್ನು ಅನೇಕ ಆಕರಗಳ ಮೂಲಕ ಕಲೆ ಹಾಕಿ ವ್ಯವಸ್ಥಿತವಾಗಿ ಕಟ್ಟಿ ಕೊಟ್ಟಿದ್ದಾರೆ. ಹೊಸ ಕನ್ನಡದ ಆರಂಭದಲ್ಲಿಯ ಮಿಶನರಿಗಳು ಕಾಣಿಸಿಕೊಳ್ಳುವುದರಿಂದ ಮಿಶನರಿಗಳ ಸ್ಥೂಲವಾದ ಹಾಗೂ ಖಚಿತವಾದ ವಿವರಗಳನ್ನೊಳಗೊಂಡ ಮಾಹಿತಿಗಳನ್ನು ಹಾವನೂರರು ಕೊಟ್ಟಿದ್ದಾರೆ. ಮೌಲಿಕವಾಗಿ ವಿಚಾರಗಳನ್ನು ವಿವೇಚನೆ ಮಾಡಿದ್ದಾರೆ. ಹೊಸ ಆಧಾರಗಳನ್ನೂ ಕಲೆ ಹಾಕಿ ಕ್ರೈಸ್ತ ಮಿಶನರಿಗಳ ಸಾಹಿತ್ಯಿಕ ಇತಿ ಮಿತಿಗಳನ್ನೂ, ಕೊಡುಗೆಗಳನ್ನೂ ಚರ್ಚಿಸುವ ರೀತಿ ಮೆಚ್ಚತಕ್ಕುದಾಗಿದೆ. ಮಿಶನರಿಗಳನ್ನು ಕುರಿತು ಲೇಖಕರು ಚರ್ಚಿಸುವ ಒಂದೊಂದು ವಿಭಾಗ, ಉಪವಿಭಾಗಗಳೂ ಹೆಚ್ಚಿನ ಸಂಶೋಧನೆ ಮಾಡಬಯಸುವವರಿಗೆ ವಿಶ್ವಾಸಾರ್ಹ ಮಾಹಿತಿಯನ್ನು ಒದಗಿಸಿಕೊಡುತ್ತವೆ. ಡಾ. ಹಾವನೂರವರು ತುಂಬ ಶ್ರಮವಹಿಸಿ ದುರ್ಲಭವಾಗಿರುವ ಮಾಹಿತಿಗಳನ್ನು ಸಂಗ್ರಹಿಸಿ, ಆಕರಗಳನ್ನು ಕಲೆ ಹಾಕಿ, ವ್ಯವಸ್ಥಿತವಾಗಿ ವರ್ಗೀಕರಿಸಿ, ಶಾಸ್ತ್ರೀಯವಾಗಿ ವಿಶ್ಲೇಷಿಸಿ ವಿವರಿಸಿದ ಈ ಕೃತಿ ಕನ್ನಡಕ್ಕೆ ಒಂದು ಬೆಲೆಯುಳ್ಳ ಕಾಣಿಕೆಯಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಸಮಗ್ರ ಸಾಹಿತ್ಯ ಚರಿತ್ರೆಯ ೬ ನೆಯ ಸಂಪುಟದಲ್ಲಿ ಡಾ. ಹಾವನೂರರು 'ಕನ್ನಡ ಸಾಹಿತ್ಯಕ್ಕೆ ಮಿಶನರಿಗಳ ಕೊಡುಗೆ' ಎಂಬ ಶೀರ್ಷಿಕೆಯಲ್ಲಿ ಎರಡು ಲೇಖನಗಳನ್ನು ಬರೆದಿದ್ದಾರೆ[೩೭] ಮಿಶನರಿಗಳ ಆಗಮನ, ಮುದ್ರಣ ಅಭಿಯೋಗ, ಮಿಶನರಿ ಜನರ ಸಾಹಿತ್ಯಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳ ಬಗೆಗೆ ಸಂಕ್ಷಿಪ್ತವಾಗಿಯಾದರೂ ಚೊಕ್ಕಟ್ಟಾಗಿ ಹೇಳಿದ್ದಾರೆ. ಡಾ. ಹಾವನೂರವರು 'ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹಸಿಗತೆ, ಕಂಪ್ಯೂಟರ್ ಇತ್ಯಾದಿ' ಎಂಬ ಗ್ರಂಥದಲ್ಲಿ (೧೯೮೨) ಕಥೋಲಿಕ್ ಮತ್ತು ಪ್ರಾಟೆಸ್ಟಂಟ್ ಮಿಶನರಿಗಳ ಸಾಹಿತ್ಯ ಸೇವೆ ಗೀತ ಸಾಹಿತ್ಯದ ಬಗೆಗೆ ವಿವರಣೆಯಿದೆ. ಕಿಟೆಲ್‌ರ ಕಾರ್ಯ ಸಾಧನೆಯನ್ನು ಪರಿಚಯಿಸುವ ರೆವರೆಂಡ ಎಫ್. ಕಿಟೆಲ್ (೧೯೮೩) ಎಂಬ ಪುಟ್ಟ ಹೊತ್ತಿಗೆಯನ್ನು ರಚಿಸಿದ್ದಾರೆ. ಈ ಗ್ರಂಥಗಳನ್ನು ರಚಿಸುವಾಗ ಅವರ ನಿಬಂಧವೇ ಅವರಿಗೆ ಮೂಲ ಆಕರವಾಗಿದೆ.

ಡಾ. ರಾ. ಯ ಧಾರವಾಡಕರರ 'ಹೊಸಗನ್ನಡ ಸಾಹಿತ್ಯದ ಉದಯ ಕಾಲ' ಎಂಬ ನಿಬಂಧವು ನವೋದಯ ಸಂದರ್ಭದಲ್ಲಿ ಕಂಡುಬರುವ ಉತ್ತರ ಕರ್ನಾಟಕದ ಸಾಹಿತ್ಯಿಕ ಚಟುವಟಿಕೆಗಳನ್ನು ತಿಳಿಸಿಕೊಡುತ್ತದೆ.[೩೮] ಮಿಶನರಿಗಳ ಬಗೆಗೆ ಅನೇಕ ಅಂಶಗಳನ್ನು ಚರ್ಚಿಸಿದ್ದಾರೆ. ಬಾಸೆಲ್ ಮಿಶನ್ ತನ್ನ ವ್ಯಾಪ್ತಿಯನ್ನು

ವಿಸ್ತರಿಸಿಕೊಂಡ ರೀತಿ, ಆಗಿನ ಸಮಕಾಲೀನ ಜನತೆ ಅವರಿಗೆ ಸ್ಪಂದಿಸಿದ ಪರಿ, ಅವರ ಕನ್ನಡ ಸೇವೆ, ಕನ್ನಡದಲ್ಲಿ ಬೆಳೆದು ಬಂದ ಬೈಬಲುಗಳು, ಬಾಸೆಲ್ ಮಿಶನ್ನಿನ ಮಿಶನರಿಗಳಾದ ಹೆಬಿಕ್, ಮೊಗ್ಲಿಂಗ್, ಲೆಷ್ನರ, ಲೆಯರ, ವೈಗಲ್, ಜೀಗ್ಲರ್ ಅವರ ಸಾಧನೆಗಳನ್ನು ವಿವರಿಸಿದ್ದಾರೆ. ಎಂದಿಗೂ ಕಾಣ ಸಿಗದ ಹಲವಾರು ಕಾಗದ, ಪತ್ರವ್ಯವಹಾರ, ಲೇಖನಗಳ ಆಧಾರದೊಂದಿಗೆ ವಿಷಯವನ್ನು ನಿರೂಪಿಸಿದ್ದಾರೆ. ಮಿಶನರಿಗಳ ಸಾಹಿತ್ಯವನ್ನು ಅನುಲಕ್ಷಿಸಿ ಹೊಸಗನ್ನಡ ಸಾಹಿತ್ಯವನ್ನು ಅಭ್ಯಸಿಸುವವರಿಗೆ ಇದೊಂದು ಮಹತ್ವದ ಆಕರಗ್ರಂಥ.

ಧಾರವಾಡದ ಹೆಬಿಕ್ ಮೆಮೋರಿಯಲ್ ಚರ್ಚಿನ ೧೫೦ ವರ್ಷಗಳ (೧೮೩೬ -೧೯೮೬) ಮಹೋತ್ಸವದ ನೆನಪಿನ ಸಂಚಿಕೆಯೊಂದು ಪ್ರಕಟವಾಗಿದೆ [೨೯] ನಾಲ್ಕು ಭಾಗಗಳನ್ನೊಳಗೊಂಡ ಈ ಸಂಚಿಕೆಯಲ್ಲಿ ಕರ್ನಾಟಕದಲ್ಲಿ ಬಾಸೆಲ್ ಮಿಶನ್ನಿನ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಕಾರ್ಯ ಸಾಧನೆಯನ್ನು ತಿಳಿಸಿಕೊಡುತ್ತದೆ. ಪ್ರಥಮಭಾಗದಲ್ಲಿ ಜಯವಂತ ಎಮ್. ಜೋಗುಳರು ಬರೆದ 'ಬಾಸೆಲ್ ಮಿಶನ್ನಿನ ಮುಖಾಂತರ ಕ್ರೈಸ್ತ ಧರ್ಮದ ಬೆಳವಣಿಗೆಯ ಐತಿಹಾಸಿಕ ನೋಟ' ಇದರಲ್ಲಿ ಮಿಶನರಿ ಚಳುವಳಿ, ಬಾಸೆಲ್ ಮಿಶನ್, ಕರ್ನಾಟಕದಲ್ಲಿ ಬಾಸೆಲ್ ಮಿಶನ್ ಬೆಳವಣಿಗೆಯ ಇತಿಹಾಸದ ಬಗೆಗೆ ಸವಿಸ್ತಾರವಾಗಿ ನಿರೂಪಿಸಿದ್ದಾರೆ. ಮಿಶನರಿಗಳು ಧರ್ಮ ಪ್ರಸಾರದ ಮೂಲಕ ಸಾಮಾಜಿಕ ಸೇವೆಗೆ ತೊಡಗಿಸಿಕೊಂಡ ರೀತಿ ತುಂಬ ಪರಿಣಾಮಕಾರಿಯಾಗಿ ಮೂಡಿಬಂದಿದೆ. 'ಕರ್ನಾಟಕದಲ್ಲಿ ಸೇವೆಸಲ್ಲಿಸಿದ ಬಾಸೆಲ್ ಮಿಶನ್ನಿನ ಮಿಶನರಿಗಳು, ಎಂಬ ಎರಡನೆಯ ಭಾಗದಲ್ಲಿ ಹೆಬಿಕ್, ಮೊಗ್ಲಿಂಗ್ ಮೊದಲುಗೊಂಡು ಉರ್ನರ, ಬೊಮ್ಮರವರೆಗಿನ ೨೨ ಜನ ಮಿಶನರಿಗಳ ಸಾಧನೆಗಳನ್ನು ಪರಿಚಯಿಸುವ ಬರೆಹಗಳಿವೆ. ತೃತೀಯ ಭಾಗದಲ್ಲಿ ಉತ್ತರ ಕರ್ನಾಟಕದಲ್ಲಿ ಸೇವೆ ಸಲ್ಲಿಸಿದ ೧೮ ಜನ ಭಾರತೀಯ ಸಭಾ ಸೇವಕರ ಧಾರ್ಮಿಕ ಮತ್ತು ಸಾಮಾಜಿಕ ಸೇವೆಯ ಬಗೆಗಿನ ಬರೆಹಗಳಿವೆ. 'ಉತ್ತರ ಕರ್ನಾಟಕದ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವೆ' ಎಂಬ ನಾಲ್ಕನೆಯ ಭಾಗದಲ್ಲಿ ಬಾಸೆಲ್ ಮಿಶನ್ ಶಿಕ್ಷಣ ಸಂಸ್ಥೆಯ ಅಂಗಸಂಸ್ಥೆಗಳ ಬೆಳವಣಿಗೆ, ಸಾಧನೆ ಹಾಗೂ ಕೆಲವು ಕ್ರಿಶ್ಚಿಯನ್ ಪಂಡಿತರ ಸಾಮಾಜಿಕ ಸೇವೆಯನ್ನು ಪರಿಚಯಿಸುವ ಲೇಖನಗಳಿವೆ. ಈ ಗ್ರಂಥ ಉತ್ತರ ಕರ್ನಾಟಕದಲ್ಲಿ ಬಾಸೆಲ್ ಮಿಶನ್ ಹಾಗೂ ಅದರ ಮಿಶನರಿಗಳ ಕಾರ್ಯ ಸಾಧನೆಯನ್ನು ಸ್ಥೂಲವಾಗಿ ತಿಳಿಸಿಕೊಡುತ್ತದೆ. ಪ್ರತಿಯೊಂದು ಲೇಖನವನ್ನು ಆಯಾ ವಿಷಯಗಳ ಪರಿಣಿತರೇ ಬರೆದಿರುವುದರಿಂದ ತುಂಬ ಮೌಲಿಕವಾಗಿವೆ. ಬಾಸೆಲ್ ಮಿಶನ್ನಿನ ಮಿಶನರಿಗಳ ಅಧ್ಯಯನಕ್ಕೆ ಇದೊಂದು ಮೌಲಿಕ ಗ್ರಂಥವಾಗಿದೆ.

ಡಾ. ಕೆ. ಎಂ. ಮ್ಯಾಥ್ಯು ಅವರ ಪಿಎಚ್‌ಡಿ ನಿಬಂಧ ರೆ. ಎಫ್. ಕಿಟೆಲ್‌ರ ಬದುಕು ಮತ್ತು ಕನ್ನಡ ಕಾರ್ಯಗಳನ್ನು ಸಮಗ್ರವಾಗಿ ವಿವೇಚಿಸಿದೆ [೩೦] ಹನ್ನೊಂದು ಅಧ್ಯಾಯವನ್ನೊಳಗೊಂಡ ಅವರ ನಿಬಂಧದಲ್ಲಿ ಎರಡನೆಯ ಅಧ್ಯಾಯವಾದ 'ಬಾಸೆಲ್ ಮಿಶನ್ ಪರಂಪರೆ' ಯಲ್ಲಿ ಬಾಸೆಲ್ ಮಿಶನ್ನಿನ ಧ್ಯೇಯಧೋರಣೆ, ಕರ್ನಾಟಕದಲ್ಲಿ ಬಾಸೆಲ್ ಮಿಶನ್ ಹಾಗೂ ಅದರ ಶೈಕ್ಷಣಿಕ ಕಾರ್ಯ, ಮಿಶನ್ನಿನ ಗ್ರಂಥೋದ್ಯಮಕಾರ್ಯ, ಕಿಟೆಲ್‌ರ ಜೊತೆಗೆ ಕೆಲಸ ಮಾಡಿದ ಅವರ ಸಹೋದ್ಯೋಗಿಗಳ ಸೇವೆ, ಕಿಟೆಲ್ ಪೂರ್ವಯುಗದ

ಮಿಶನರಿಗಳಾದ ವೆಬಿಕ್, ಮೊಗ್ಲಿಂಗ್, ವೂರ್ತ್ ಇವರ ಕಾರ್ಯಸಾಧನೆಯನ್ನು ಚರ್ಚಿಸಿದ್ದಾರೆ. ನಂತರದ ಅಧ್ಯಾಯಗಳ ಕಿಟೆಲ್‌ರ ಸಾಹಿತ್ಯ ಹಾಗೂ ಕೋಶರಚನೆಗಳಿಗೆ ಸಂಬಂಧಪಟ್ಟಿವೆ. ಕಿಟೆಲ್ ಕೋಶದ ಶತಮಾನೋತ್ಸವದ ಸಂದರ್ಭದಲ್ಲಿ ಈ ಕೃತಿ ಅಚ್ಚಾಗಿರುವುದು ತುಂಬ ಔಚಿತ್ಯ ಪೂರ್ಣವಾಗಿದೆ. ಧಾರವಾಡದ ಕಿಟೆಲ್ ಕಲಾ ಮಹಾವಿದ್ಯಾಲಯದಿಂದ ಕಿಟೆಲ್ ಜೀವನ ಸಾಧನೆ ಕೋಶರಚನೆಗೆ ಸಂಬಂಧಿಸಿದಂತೆ ಕೆಲವು ಮಹತ್ವದ ಗ್ರಂಥಗಳು ಬಂದಿವೆ [೩೦] ಅವುಗಳ ಮುಖ್ಯ ಉದ್ದೇಶ ಕಿಟೆಲ್ ಜೀವನ ಸಾಧನೆಗೆ ಸಂಬಂಧಿಸಿದರೂ ಪ್ರಾಸಂಗಿಕವಾಗಿ ಬಾಸೆಲ್ ಮಿಶನ್ನ ಸಂಸ್ಥೆಯ ಕಾರ್ಯಸಾಧನೆಯ ಬಗಗೆ ಕೆಲ ಅಂಶಗಳು ಸಂಕ್ಷಿಪ್ತವಾಗಿ ಚರ್ಚಿತವಾಗಿವೆ.

ಡಾ. ಎಡ್ವರ್ಡ್ ನೊರೋನ್ ಅವರು ಕ್ರೈಸ್ತ ಮಿಶನರಿಗಳು (ವಿಶೇಷವಾಗಿ ಕಥೋಲಿಕರು) ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕೊಟ್ಟ ಕೊಡುಗೆಯನ್ನು ತುಂಬ ಸಮರ್ಥವಾಗಿ ಹಾಗೂ ಅಧಿಕೃತವಾಗಿ ತಮ್ಮ ಪಿಎಚ್ .ಡಿ ನಿಬಂಧದಲ್ಲಿ ವಿವೇಚಿಸಿದ್ದಾರೆ [೩೨] ತನ್ಮೂಲಕ ಕನ್ನಡ ಭಾಷೆ-ಸಾಹಿತ್ಯಕ್ಕೆ ಸಂದ ಕೊಡುಗೆಯನ್ನು ಗುರುತಿಸಿದ್ದಾರೆ. ಐದು ಅಧ್ಯಾಯವನ್ನೊಳಗೊಂಡ ಈ ಗ್ರಂಥದಲ್ಲಿ ಭಾರತದಲ್ಲಿ ಕ್ರೈಸ್ತ ಧರ್ಮ, ಮಿಶನರಿಗಳ ಆಗಮನ, ಕಥೋಲಿಕ ಮತ್ತು ಪ್ರಾಟೆಸ್ಟಂಟರ ಮತಗಳ ಸಾಮ್ಯ ವೈಷಮ್ಯಗಳು, ಕಥೋಲಿಕರ ಸಾಹಿತ್ಯ ಚರಿತ್ರೆ, ಕಥೋಲಿಕ್ ಬರೆಹಗಾರರು ಹಾಗೂ ಅವರ ಕೃತಿಗಳ ಸಮೀಕ್ಷೆ, ಕೆಥೋಲಿಕ ಸಾಹಿತ್ಯದ ವಿಷಯಾನುಸಾರ ವಿಶ್ಲೇಷಣೆ, ಮೂರು ಪ್ರಾರ್ಥನೆಗಳು, ಬೈಬಲ್ ವಾಙ್ಮಯ, ಚರಿತ್ರೆ ಮತ್ತು ಜೀವನ ಚರಿತ್ರೆಗಳು, ಭಾಷಾಂತರ ಹಾಗೂ ಕಥೋಲಿಕ್ ಸಾಹಿತ್ಯದ ಭಾಷೆ, ಶೈಲಿ, ಛಂದಸ್ಸು, ಧಾರ್ಮಿಕ ಪರಿಭಾಷೆ ಮತ್ತು ಪಾರಿಭಾಷಿಕ ಪದಗಳು ಮುಂತಾದ ವಿಷಯಗಳನ್ನು ಖಚಿತವಾಗಿ ವಿವರಿಸಿದ್ದಾರೆ. ಕೆಥೋಲಿಕರ ಕನ್ನಡ ಬರವಣಿಗೆಗಳನ್ನು ಕುರಿತು ವಿವಿಧ ಮೂಲಗಳಿಂದ ವಿಷಯ ಸಂಗ್ರಹಿಸಿ ವಿಸ್ತಾರವಾದ ಅಧ್ಯಯನ ಕೈಕೊಂಡು ಹೊಸ ವಿಚಾರಗಳನ್ನು ಮುಂದಿಸಿದ್ದಾರೆ.

ಕ್ರೈಸ್ತರ ಗೀತ ಸಾಹಿತ್ಯವನ್ನು ಕುರಿತು ಎಸ್. ಪಿ. ಗೌಡರ ಅವರು ಅಧ್ಯಯನ ಮಾಡಿದ್ದಾರೆ [೩೩] ತಮ್ಮ ಅಧ್ಯಯನವನ್ನು ಎರಡು ಭಾಗಗಳನ್ನಾಗಿ ಮಾಡಿಕೊಂಡಿದ್ದಾರೆ. ಭಾಗ ಒಂದರಲ್ಲಿ ಧ್ವನಿಮಾಧ್ಯಮದ ಹಾಗೂ ಲೇಖನ ಮಾಧ್ಯಮದ ಗದ್ಯ ಮತ್ತು ಪದ್ಯ ಸಾಹಿತ್ಯದ ಬಗೆಗೆ ಚರ್ಚಿಸಿ ಕನ್ನಡದಲ್ಲಿ ಧ್ವನಿ ಹಾಗೂ ಲೇಖನ ಮಾಧ್ಯಮ ಗೀತ ಸಾಹಿತ್ಯದ ಬಗೆಗೆ ವಿವರಿಸಿದ್ದಾರೆ. ಕನ್ನಡದಲ್ಲಿ ವೀರಶೈವ, ಬ್ರಾಹ್ಮಣ, ಜೈನ, ಇತರ ಕ್ರೈಸ್ತ ಗೀತ ಸಾಹಿತ್ಯವೆಂದು ವರ್ಗೀಕರಿಸಿದ್ದಾರೆ. ಭಾಗ ಎರಡರಲ್ಲಿ ಕ್ರೈಸ್ತ ಗೀತ ಸಾಹಿತ್ಯದ ಆಕರ ವರ್ಗೀಕರಣ, ಕ್ರೈಸ್ತ ಗೀತ ಸಾಹಿತ್ಯದ ಸ್ವರೂಪ, ವಸ್ತು ವೈವಿಧ್ಯ, ಶಿಲ್ಪ, ಪ್ರಸಾರ ಮತ್ತು ಪ್ರಭಾವ, ಭಾವಗೀತೆಗೆ ಪ್ರೇರಣೆ ಈ ಅಂಶಗಳ ಬಗೆಗೆ ವಿವೇಚಿಸಿದ್ದಾರೆ. ಶ್ರೀ ಗೌಡರವರು ಕ್ರೈಸ್ತ ಗೀತ ಸಾಹಿತ್ಯದ ಮೌಲ್ಯವನ್ನು ಅದರ ನೆಲೆ-ಬೆಲೆಗಳನ್ನು ತುಂಬ ಶ್ರಮವಹಿಸಿ ಆಕರ ಸಾಮಗ್ರಿಗಳನ್ನು ಕಲೆ ಹಾಕಿ ಖಚಿತವಾಗಿ ವಿವರಿಸಿದ್ದಾರೆ. ಮಿಶನರಿಗಳು

ರಚಿಸಿದ ಗೀತ ಸಾಹಿತ್ಯದ ಸಮೀಕ್ಷೆಯನ್ನು ಅರ್ಥಪೂರ್ಣವಾಗಿ ನಡೆಸುವ ಮೂಲಕ ಕನ್ನಡ ಕ್ರೈಸ್ತ ಸಾಹಿತ್ಯದ ಅಧ್ಯಯನಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

ಕನ್ನಡ ನಾಡು-ನುಡಿಗೆ ಸೇವೆ ಸಲ್ಲಿಸಿದ ವಿದೇಶಿ ಮಿಶನರಿಗಳೆಂದಾಗ ಎದ್ದು ಕಾಣುವ ಹೆಸರುಗಳೆಂದರೆ ಕಿಟೆಲ್ ಮತ್ತು ಮೊಗ್ಲಿಂಗ್‌ರದು. ಕನ್ನಡದಲ್ಲಿ ಕಿಟೆಲ್‌ರ ಜೀವನ ಸಾಧನೆಗಳ ಬಗೆಗೆ ನಡೆದಷ್ಟು ಕೆಲಸ ಮೊಗ್ಲಿಂಗ್ ಹಾಗೂ ಇತರ ಮಿಶನರಿಗಳ ಬಗೆಗೆ ನಡೆದಿಲ್ಲವೆಂದೇ ಹೇಳಬೇಕು. ಡಾ. ಹರ್ಮನ್ ಗುಂಡರ್ಟ್‌ರು ಹರ್ಮನ್ ಮೊಗ್ಲಿಂಗ್‌ನ ಜೀವನ ಚರಿತ್ರೆಯನ್ನು ಜರ್ಮನ್ ಭಾಷೆಯಲ್ಲಿ ಬರೆದಿದ್ದಾರೆ. ಅದು ಈಚೆಗೆ ಜರ್ಮನಿಯಿಂದ ಇಂಗ್ಲಿಷಿಗೂ ಅನುವಾದವಾಗಿದೆ.[೩೪] ಅದರಲ್ಲಿ ಮೊಗ್ಲಿಂಗ್‌ರ ಬಾಲ್ಯ ಜೀವನ, ವಿದ್ಯಾಭ್ಯಾಸ, ಬಾಸೆಲ್ ಮಿಶನ್‌ದಲ್ಲಿ ಕಳೆದ ಜೀವನ, ಕರ್ನಾಟಕದಲ್ಲಿ ಆತನ ಸೇವೆ ಪ್ರಾರಂಭವಾದುದು, ಮುದ್ರಣ, ಗ್ರಂಥಸಂಪಾದನೆ ಮುಂತಾದ ಸಾಹಿತ್ಯಿಕ ಚಟುವಟಿಕೆಗಳು, ಕೊಡಗು ನಾಡಿನಲ್ಲಿ ಆತನ ಕೆಲಸ ಮುಂತಾದ ಮೊಗ್ಲಿಂಗ್‌ನ ಜೀವನ ಸಾಧನೆಯನ್ನು ಈ ಗ್ರಂಥವು ತಿಳಿಸಿಕೊಡುತ್ತದೆ.

ವಿದೇಶಿ ಮಿಶನರಿಗಳು ಧರ್ಮ ಪ್ರಸಾರಕ್ಕೆಂದು ಕನ್ನಡ ನಾಡಿಗೆ ಬಂದು ಕನ್ನಡಿಗರೊಂದಿಗೆ ಬೆರೆತು ಧರ್ಮ ಪ್ರಸಾರದ ಜೊತೆಗೆ ಕನ್ನಡ ನಾಡು-ನುಡಿಯ ಅಭಿವೃದ್ಧಿಗಾಗಿ ಶ್ರಮಪಟ್ಟರು. ಮುದ್ರಣ, ಶಿಕ್ಷಣ ಕ್ರಮ, ಪತ್ರಿಕಾ ವ್ಯವಸಾಯ, ಗ್ರಂಥೋದ್ಯಮ, ವ್ಯಾಕರಣ, ಕೋಶರಚನೆ ಮುಂತಾದ ಕ್ಷೇತ್ರದಲ್ಲಿ ಹೊಸತನವನ್ನು, ಹೊಸ ವಿಚಾರಗಳನ್ನು ತಂದು ಅಪೂರ್ವ ಸಾಹಿತ್ಯ ರಚನೆ ಮಾಡಿ, ಕನ್ನಡ ನಾಡು ಸಾಹಿತ್ಯಕ್ಕೆ ಮೌಲಿಕ ಕೊಡುಗೆಯನ್ನು ನೀಡಿದರು. ಮುಂದಿನ ಅಧ್ಯಾಯಗಳಲ್ಲಿ ಮಿಶನರಿಗಳು ರಚಿಸಿದ ಕೋಶಗಳು ಅವುಗಳ ರಚನಾ ಸ್ವರೂಪ ಹಾಗೂ ಅವು ಒಳಗೊಂಡಿರುವ ಸಾಂಸ್ಕೃತಿಕ ವಿವರಗಳ ಅಧ್ಯಯನವನ್ನು ವಿವರವಾಗಿ ಮಾಡಲಾಗಿದೆ.

ಅಡಿ ಟಿಪ್ಪಣಿ

೧. ಎಡ್ವರ್ಡ್ ನೊರೋನ ೧೯೯೬ 'ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ' ಪುಟ-೨೮ ಯೇಸುಕ್ರಿಸ್ತನು ಶಿಷ್ಯರಿಗೆ ತನ್ನ ಧರ್ಮದ ತಿರುಳನ್ನು (ಸುವಾರ್ತೆ) ಎಲ್ಲ ಕಡೆಗೂ ಪ್ರಚಾರ ಮಾಡುವಂತೆ ಕೊಟ್ಟ ಆದೇಶವೇ ಈ ಕಳುಹಿಸುವಿಕೆಯ ಮೂಲ ಕಾರಣ.

೨. 'ಮಿಶನ್' ಪದದ ಸ್ವರೂಪದ ಬಗೆಗೆ ತಿಳಿದುಕೊಳ್ಳಲು ಪ್ರೊ. ಜಿ. ವೆಂಕಟಸುಬ್ಬಯ್ಯನವರಿಗೆ ಕಾಗದ ಬರೆದಿದ್ದೆ. ನನ್ನ ಕಾಗದಕ್ಕೆ ಪ್ರತ್ಯುತ್ತರವಾಗಿ 'ಇಗೋ ಕನ್ನಡ' ಅಂಕಣದಲ್ಲಿ ತಿಳಿಸಿ ಉಪಕರಿಸಿದ್ದಾರೆ. (ನೋಡಿ 'ಇಗೋ ಕನ್ನಡ' ಪ್ರಜಾವಾಣಿ ದಿನಪತ್ರಿಕೆ ೭-೧೨-೧೯೯೭ ಸಾಪ್ತಾಹಿಕ ಪುರವಣಿ) ಈಚೆಗೆ ಯಾವುದಾದರೂ ವಿಶೇಷ ಕಾರ್ಯಭಾರಕ್ಕಾಗಿ ಕಳುಹಿಸಿದ ಜನರ ಗುಂಪಿಗೂ ಮಿಶನ್ ಶಬ್ದವನ್ನು ಉಪಯೋಗಿಸುತ್ತಾರೆ.

೩. ಎಡ್ವರ್ಡ್ ನೊರೋನ ಪೂರ್ವೋಕ್ತ ಪುಟ-೧.

೪. ಜಯವಂತ ಎಮ್. ಜೋಗುಳ ೧೯೮೬ 'ಮಿಶನರಿ ಚಳುವಳಿ' 'ಕರ್ನಾಟಕದಲ್ಲಿ ಬಾಸೆಲ್ ಮಿಶನ್' ಪುಟ-೨

೫. ಡಾ. ವರದರಾಜ ಹುಯಿಲಗೋಳ ೧೯೭೯ 'ಕನ್ನಡಕ್ಕೆ ವಿದೇಶಿಯರ ಸೇವೆ' ಪುಟ-೪

೬. ಪ್ರಾಟೆಸ್ಟಂಟ್ ಮತ್ತು ಕಥೋಲಿಕ ಮತಗಳ ಸಾಮ್ಯ- ವೈಷಮ್ಯಗಳನ್ನು ಹಾಗೂ ಆ ಮಿಶನರಿಗಳ ಸಾಹಿತ್ಯಿಕ ಕಾರ್ಯ ಸಾಧನೆಗಳನ್ನು ಇದೇ ಅಧ್ಯಾಯದ 'ಮಿಶನರಿಗಳ ಆಗಮನ' ಮತ್ತು 'ಸಾಹಿತ್ಯ ರಚನೆ' ಎಂಬ ಉಪವಿಭಾಗಗಳಲ್ಲಿ ಚರ್ಚಿಸಲಾಗಿದೆ.

೭. ಡಾ. ಶ್ರೀನಿವಾಸ ಹಾವನೂರು ೧೯೯೧ 'ಕನ್ನಡ ಸಾಹಿತ್ಯಕ್ಕೆ ಮಿಶನರಿಗಳ ಕೊಡುಗೆ' ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ-೬ ಬೆಂ. ವಿ. ವಿ. ಪುಟ-೧೯೪

೮. ಡಾ. ವರದರಾಜ ಹುಯಿಲಗೋಳ ೧೯೭೯ 'ಕನ್ನಡಕ್ಕೆ ವಿದೇಶಿಯರ ಸೇವೆ' ಪುಟ- ೧೦

೯. ಕ್ರೈಸ್ತ ಧರ್ಮದಲ್ಲಿ ಕಥೋಲಿಕರು, ಸಿಜ್ಮಾಟಿಕರು ಮತ್ತು ಪ್ರಾಟೆಸ್ಟಂಟರು ಎಂಬ ಮೂರು ಮತ ವಿಭಾಗಗಳಿವೆ. ಯೇಸು ಕ್ರಿಸ್ತ ಸ್ಥಾಪಿಸಿದ ಕ್ರೈಸ್ತ ಧರ್ಮ ಸಭೆಯ ಆಡಳಿತ ವ್ಯವಸ್ಥೆ ಒಂದು ನಿಶ್ಚಿತ ರೂಪವನ್ನು ಪಡೆಯುವ ಹೊತ್ತಿಗೆ ರೋಮಿನ ಬಿಷಪನು ಎಲ್ಲಾ ಬಿಷಪರಿಗೆ ಮೇಲಾಧಿಕಾರಿ ಎಂಬ ತಿಳುವಳಿಕೆ ಮೂಡಿತ್ತು. ಇವನೇ ಪೋಪ, ಧರ್ಮಗುರು. ಕ್ರೈಸ್ತ ಪರಿಭಾಷೆಯಲ್ಲಿ ಸನಾತನ ಧಾರ್ಮಿಕ ತತ್ವಗಳಿಗೆ ವಿರೋಧವಾದ ಬೋಧನೆ 'ಹರಿಸಿ' : ಅದನ್ನು ಬೋಧಿಸುವವನು ಮತ್ತು ನಂಬುವವನು 'ಹೆರಟಿಕ್' : ಬೋಧನೆಯಲ್ಲಿ ವ್ಯತ್ಯಾಸವಿಲ್ಲದೆ ಪೋಪನ ಪರಮಾಧಿಕಾರವನ್ನು ನಿರಾಕರಿಸಿ, ಸನಾತನ ಧರ್ಮಸಭೆಯಿಂದ ಬೇರ್ಪಡುವುದು 'ಸಿಜ್ಮ್' ಹೀಗೆ ಬೇರ್ಪಟ್ಟವರು ಸಿಜ್ಮಾಟಿಕರು. ತುಂಬ ಸ್ವಮತ ನಿಷ್ಠೆಯ ಇವರು ಹೆಚ್ಚು ಪ್ರಚಾರ, ಪ್ರಸಿದ್ಧಿಗೆ ಬರಲಿಲ್ಲ.

೧೬ನೆಯ ಶತಮಾನದ ಆದಿಭಾಗದಲ್ಲಿ ಯೂರೋಪಿಯನ್ ಹಲವು ಕಥೋಲಿಕರು ಮೂಲ ಧರ್ಮದಿಂದ ಸಿಡಿದು ಭಿನ್ನ ಮತೀಯರಾದರು. ಈ ಧಾರ್ಮಿಕ ದಂಗೆಗೆ ಹಲವು ತಾತ್ವಿಕ, ಸಾಮಾಜಿಕ ಮತ್ತು ರಾಜಕೀಯ ಕಾರಣಗಳಿದ್ದವು: ಸ್ಕೊಲಾಸ್ಟಿಕ್ ತತ್ವ ಶಾಸ್ತ್ರಕ್ಕೆ ಮತ್ತು ಧರ್ಮದರ್ಶನಕ್ಕೆ ಪ್ರಬಲವಾದ ವಿರೋಧ, ಪೋಪರ ಮತ್ತು ಇಟೆಲಿಯರ ರಾಜಕೀಯ ಅಧಿಕಾರದ ಬಗೆಗೆ ಅಸಹನೆ, ಯುರೋಪಿನಲ್ಲಿ ರಾಷ್ಟ್ರೀಯ ಭಾವಗಳ ಉಗಮ, ಪುನರುಜ್ಜೀವನ ಕಥೋಲಿಕ ಧರ್ಮ ಸಭೆಯಲ್ಲಿ ತಲೆದೋರಿದ ಹಲವು ಅನಾಚಾರಗಳು ಇವೆ ಮೊದಲಾದ ಕಾರಣಗಳಿಂದ ಅತೃಪ್ತರಾದ ಕಥೋಲಿಕರು ಲೂತರನ ಸುತ್ತಲೂ ಸೇರಿ ರೋಮನ್ ಕಥೋಲಿಕ ಧರ್ಮ ಸಭೆಯಿಂದ ಬೇರ್ಪಟ್ಟು ಪ್ರಾಟೆಸ್ಟಂಟರು ಎನಿಸಿಕೊಂಡರು. (ಕಥೋಲಿಕರಿಗೂ ಪ್ರಾಟೆಸ್ಟಂಟರಿಗೂ ಧರ್ಮ, ತತ್ವಗಳ ವಿಚಾರ ಸರಣಿಗಳಿಗೂ ಮುಖ್ಯವಾದ ವ್ಯತ್ಯಾಸಗಳಿವೆ. ಅವುಗಳ ಬಗೆಗೆ ಹೆಚ್ಚಿನ ವಿವರಣೆ ನೋಡಿ- ಎಡ್ವರ್ಡ್ ನೊರೋನ್ ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ ಪುಟ-೯-೨೧)

೧೦. C. B. Firth - An Introduction to Indian Church History p-154

೧೧. C. B. Firth -Ibid p-157

೧೨. Indian Missionary Directory 1899 P-272

೧೩. ಡಾ. ಶ್ರೀನಿವಾಸ ಹಾವನೂರು ೧೯೭೪ 'ಹೊಸಗನ್ನಡದ ಅರುಣೋದಯ' ಪುಟ-೧೭

೧೪. ಡಾ. ಶ್ರೀನಿವಾಸ ಹಾವನೂರ (೧೯೯೧) ಪೂರ್ವೋಕ್ತ ಪುಟ-೧೯೪

೧೫. ಮಿಶನರಿಗಳ ಸಾಹಿತ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ 'ಹೊಸಗನ್ನಡದ ಅರುಣೋದಯ' (೧೯೭೪) '೧೯ ನೆಯ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' (೧೯೯೨ ದ್ವಿ. ಮು) ಈ ಎರಡು ಗ್ರಂಥಗಳು ನನಗೆ ಆಧಾರವಾಗಿವೆ. ಹೆಚ್ಚಿನ ವಿವರಗಳಿಗಾಗಿ ಆ ಗ್ರಂಥಗಳನ್ನು ಪರಿಶೀಲಿಸಬೇಕಾಗಿ ವಿನಂತಿ.

೧೬. ಜಯವಂತ ಎಮ್. ೧೯೮೬ ಜೋಗುಳ 'ಮಿಶನರಿ ಚಳುವಳಿ' ಪೂರ್ವೋಕ್ತ ಪುಟ-೭

೧೭. ಡಾ. ಕೆ. ಎಂ. ಮ್ಯಾಥ್ಯೂ ೧೯೯೫-ರೆ. ಎಫ್. ಕಿಟೆಲ್-ಒಂದು ಸಮಗ್ರ ಅಧ್ಯಯನ, ಪುಟ-೮

೧೮. G. N Thomsen-Samuel Hebich of India p-44

೧೯. ಎಡ್ವರ್ಡ್ ನೊರೋನ ೧೯೯೬-ಪೂರ್ವೋಕ್ತ ಗ್ರಂಥದ ಅಧ್ಯಾಯ ಎರಡರಲ್ಲಿ ಕಥೋಲಿಕ ಸಾಹಿತ್ಯ ಚರಿತ್ರೆಯ ಬಗೆಗೆ ವಿಸ್ತಾರವಾಗಿ ಚರ್ಚಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆ ಗ್ರಂಥವನ್ನು ನೋಡಿ

೨೦. ಐ. ಮಾ. ಮುತ್ತಣ್ಣ ೧೯೯೨ '೧೯ ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡಸೇವೆ' (ದ್ವಿ ಮು) ಪು vi-vii

೨೧. ಡಾ. ವರದರಾಜ ಹುಯಿಲಗೋಳ ೧೯೬೬ 'ಕ್ರೈಸ್ತರಿಂದ ಕನ್ನಡಕ್ಕೆ ಕಾಣಿಕೆ' (ಶ್ರೀ ಸಿ. ಜೆ. ಸಕ್ಕರಿ, ಧಾರವಾಡ) ೨೨. ಡಾ. ವರದರಾಜ ಹುಯಿಲಗೋಳ (೧೯೭೯) 'ಕನ್ನಡಕ್ಕೆ ವಿದೇಶಿಯರ ಸೇವೆ' ಮತ್ತು 'ಫರ್ಡಿನಾಂಡ್ ಕಿಟೆಲ್'

೨೩. ಡಾ. ವರದರಾಜ ಹುಯಿಲಗೋಳ ೧೯೭೯- 'ಫರ್ಡಿನಾಂಡ್ ಕಿಟೆಲ್' (ಭಾರತ-ಭಾರತಿ ಪುಸ್ತಕ ಸಂಪದ) ಪುಟ-೪

೨೪. ಪ್ರೊ. ಐ. ಮಾ ಮುತ್ತಣ್ಣ ೧೯೮೭ 'ಭಾರತ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಸೇವೆ'

೨೫. ಪ್ರೊ. ಐ. ಮಾ. ಮುತ್ತಣ್ಣ ೧೯ ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' ಪ್ರ. ಮು ೧೯೬೯. ದ್ವಿ ಮು ೧೯೯೨

೨೬. ಡಾ. ಶ್ರೀನಿವಾಸ ಹಾವನೂರ ೧೯೭೪ ಪೂರ್ವೋಕ್ತ

೨೭. ಡಾ. ಶ್ರೀನಿವಾಸ ಹಾವನೂರ ೧೯೯೧ 'ಕನ್ನಡ ಸಾಹಿತ್ಯಕ್ಕೆ ಮಿಶನರಿಗಳ ಕೊಡುಗೆ' ಭಾಗ ೧ ಮತ್ತು ೨ ಸಮಗ್ರ ಸಾಹಿತ್ಯ ಚರಿತ್ರೆ ಸಂ-೬ ಪುಟ

೨೮. ಡಾ. ರಾ. ಯ ಧಾರವಾಡಕರ ೧೯೭೫ 'ಹೊಸಗನ್ನಡ ಸಾಹಿತ್ಯದ ಉದಯ ಕಾಲ ' (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ)

೨೯. ರೆ. ಜಯವಂತ ಎಮ್. ಜೋಗುಳ (ಸಂ) ೧೯೮೬ ಪೂರ್ವೋಕ್ತ, ಪುಟ -೧೮

೩೦. ಡಾ. ಕೆ. ಎಂ. ಮ್ಯಾಥ್ಯೂ ೧೯೯೪ 'ರೆ. ಎಫ್. ಕಿಟೆಲ್ ಒಂದು ಸಮಗ್ರ ಅಧ್ಯಯನ'(ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ)

೩೧. ಡಾ. ವಾಮನಬೇಂದ್ರೆ, ಬಿ. ಟಿ. ದೇಸಾಯಿ (ಸಂ) 'ಕನ್ನಡಕ್ಕೆ ಕಿಟೆಲರ ಕೊಡುಗೆ' (೧೯೭೧) ಡಾ. ಜಿ. ಎಂ. ಹೆಗಡೆ (ಸಂ) 'ಕಿಟೆಲ್ ಜೀವನ ಹಾಗೂ ಸಾಧನೆ ' (೧೯೯೪) ಡಾ. ಜಿ. ಎಂ. ಹೆಗಡೆ 'ರೆವರೆಂಡ್ ಫರ್ಡಿನಾಂಡ್ ಕಿಟೆಲ್ ಜೀವನ ಹಾಗೂ ಕೃತಿ ಸಮೀಕ್ಷೆ (೧೯೯೬)

೩೨. ಡಾ. ಎಡ್ವರ್ಡ್ ನೊರೋನ ೧೯೯೬

೩೩. ಎಸ್. ಪಿ. ಗೌಡರ ೧೯೯೭ 'ಕನ್ನಡ ಕ್ರೈಸ್ತ ಗೀತೆಗಳ ಅಧ್ಯಯನ' (ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ)

೩೪. Dr. Harmann Gundert 1997 'Herrmann Moegling' Translated from Germon into English by christoph steinweg and Elisabeth steinweg-Fleckner D. C. Book Kottayam, Kerala, India.

ಅಧ್ಯಾಯ-೩ ಮಿಶನರಿಗಳ ನಿಘಂಟು ರಚನಾ ಕಾರ್ಯ

೩.೦೧ ಭಾಷಾಧ್ಯಯನ

೩.೦೨ ಇಂಗ್ಲಿಶ್-ಕನ್ನಡ ಕೋಶಗಳು

(ರೀವ್, ಗ್ಯಾರೆಟ್, ಜೀಗ್ಲರ್, ವಾಟ್ಸ ಇವರ ಕೋಶಗಳ ಸಮೀಕ್ಷೆ)

೩.೦೩ ಕನ್ನಡ-ಇಂಗ್ಲಿಶ್ ಕೋಶಗಳು

(ರೀವ್, ಗ್ಯಾರೆಟ್, ಸ್ಯಾಂಡರ್‌ಸನ್, ಕಿಟೆಲ್, ಬ್ಯುಚರ್

ಇವರ ಕೋಶಗಳಗಿ ಸಮೀಕ್ಷೆ)

ಮಿಶನರಿಗಳ ನಿಘಂಟು ರಚನಾ ಕಾರ್ಯ

೩.೦೧ ಭಾಷಾಧ್ಯಯನ

ಧರ್ಮ ಪ್ರಚಾರಕ್ಕಾಗಿ ಬಂದ ಮಿಶನರಿಗಳು ಅದಕ್ಕೆ ಮಾತ್ರ ಸೀಮಿತಗೊಳ್ಳದೆ ಅನ್ಯಕ್ಷೇತ್ರಗಳನ್ನು ಆವರಿಸಿ ಧರ್ಮ ಪ್ರಸಾರದ ಪರಿಕರವಾದ ಧಾರ್ಮಿಕ ಸಾಹಿತ್ಯ ರಚನೆಗೆ ಸೀಮಿತಗೊಳ್ಳದೆ ಪಠ್ಯರಚನೆ, ಗ್ರಂಥ ಸಂಪಾದನೆ, ವ್ಯಾಕರಣ, ಕೋಶರಚನೆ, ಸಾಹಿತ್ಯ ಚರಿತ್ರೆಯ ಸಂಯೋಜನೆಗೆ ತೊಡಗಿದುದನ್ನು ನೋಡಿದರೆ ಅವರ ಧಾರ್ಮಿಕ ಮನಸ್ಸಿನಲ್ಲಿ ಶಿಕ್ಷಣ-ಸಾಹಿತ್ಯ, ಶಾಸ್ತ್ರ ಮೊದಲಾದ ಶಿಸ್ತುಗಳು ಗಾಢವಾಗಿ ಸ್ಪಂದಿಸುತ್ತಿರುವುದು ಸಹಜವೆನಿಸುತ್ತದೆ. ತಮ್ಮ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಮಿಶನರಿಗಳು ಭಾಷಾಧ್ಯಯನಕ್ಕೆ ಪೂರಕವಾಗಿರುವ ವ್ಯಾಕರಣ, ಕೋಶರಚನೆಗೆ ತಮ್ಮನ್ನು ತಾವು ತೊಡಗಿಸಿಕೊಂಡರು.[1]

ಧರ್ಮ ಪ್ರಚಾರವೇ ಮಿಶನರಿಗಳ ಉದ್ದೇಶ. ಅದನ್ನು ಸಾಧಿಸುವುದು ಸುಲಭವಾಗಿರಲಿಲ್ಲ. ಜನರ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವ ಉದ್ದೇಶದಿಂದ ಅವರು ಮುಮ್ಮುಖವಾದ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಮೊದಲನೆಯದಾಗಿ ಇಲ್ಲಿ ಮುದ್ರಣ ಯಂತ್ರಗಳನ್ನು ಸ್ಥಾಪಿಸುವುದು ಹಾಗೂ ಅವುಗಳ ನೆರವಿನಿಂದ ಸ್ಥಳೀಯ ಜನರಲ್ಲಿ ಹರಡುವುದಕ್ಕಾಗಿ ಕ್ರಿಶ್ಚಿಯನ್ ಸಾಹಿತ್ಯವನ್ನು ಪ್ರಕಟಿಸುವುದು. ಎರಡನೆಯದಾಗಿ ಅವರು ಧರ್ಮ ಪ್ರಚಾರವನ್ನು ತ್ವರಿತಗೊಳಿಸುವ ಉದ್ದೇಶದಿಂದ ಶಾಲಾ-ಕಾಲೇಜುಗಳನ್ನು ಸ್ಥಾಪಿಸುವುದು. ಮೂರನೆಯದಾಗಿ ಸಮಾಜದ ಎಲ್ಲ ವರ್ಗಗಳ ಜನರಿಗೂ ಕ್ರೈಸ್ತಧರ್ಮದ ಸಂದೇಶವನ್ನು ಹರಡಬೇಕೆಂಬ ಉದ್ದೇಶದಿಂದ ಸ್ಥಳೀಯ ಭಾಷೆಗಳನ್ನು ಕಲಿತರು. ಪ್ರಾದೇಶಿಕ ಭಾಷೆ-ಉಪಭಾಷೆಗಳನ್ನು ಅತ್ಯಂತ ಸಮಗ್ರವಾಗಿಯೂ, ಸಮರ್ಪಕವಾಗಿಯೂ ಕಲಿಯಬೇಕೆಂಬ ಅಪೇಕ್ಷೆಯಿಂದ ಅವರು ಹಲವಾರು ಭಾರತೀಯ ಭಾಷೆಗಳ ವ್ಯಾಕರಣಗಳನ್ನೂ ನಿಘಂಟುಗಳನ್ನೂ ರಚನೆ ಮಾಡಿದರು[2] ಅದರಂತೆ ಪಠ್ಯಪುಸ್ತಕಗಳ ರಚನೆ, ಅವುಗಳ ಪ್ರಕಟನೆ-ವಿತರಣೆ ಈ ವ್ಯವಸ್ಥಿತ ಚೌಕಟ್ಟಿನಲ್ಲಿ ಮಿಶನರಿ ಜನರ ಭಾಷಾಧ್ಯಯನವು ಸಾಗಿಬಂದಿತು. ಇದರಿಂದ ಅವರಿಗೆ ಹೊಸ ಸಂಸ್ಕೃತಿಯ ಪರಿಚಯ, ಆಡಳಿತ, ವ್ಯವಹಾರ, ಪರಸ್ಪರ ವಿಚಾರವಿನಿಮಯ ಹಾಗೂ ಆತ್ಮತೃಪ್ತಿ ಸುಲಭವಾದವು. ಭಾಷಾ ಕಲಿಕೆಯಲ್ಲಿ ತುಂಬ ಆಸಕ್ತರಾಗಿದ್ದ ಅವರು ಬಹುಬೇಗನೆ ಕನ್ನಡವನ್ನು ಕಲಿತರು. ಮಿಶನರಿಗಳಿಗೆ ಕನ್ನಡವು ಸ್ವಭಾಷೆಯಾಯಿತು[3].

ಮಿಶನರಿಗಳು ರಚಿಸಿದ ವ್ಯಾಕರಣಗಳನ್ನು ಸುಲಭ ವ್ಯಾಕರಣಗಳು ಮತ್ತು ಪ್ರೌಢ ವ್ಯಾಕರಣಗಳು ಎಂದು ಎರಡುವರ್ಗಗಳಲ್ಲಿ ವಿಂಗಡಿಸುವುದು ಉಚಿತವೆನಿಸುತ್ತದೆ. ಕನ್ನಡ ಬಾರದವರು ಸುಲಭವಾಗಿ ಕನ್ನಡವನ್ನು ಕಲಿಯುವುದಕ್ಕೆ ಅನುಕೂಲ ವಾಗುವಂತೆ ಮಿಶನರಿಗಳು ಇಂಗ್ಲಿಶಿನಲ್ಲಿ ಕನ್ನಡ ವ್ಯಾಕರಣಗಳನ್ನು ರಚಿಸಿದರು. ಕನ್ನಡ ಭಾಷೆಯ ಸ್ವರೂಪವನ್ನು ಸುಲಭವಾಗಿ ತಿಳಿಸಿಕೊಡಬೇಕೆಂಬುದೇ ಸುಲಭವ್ಯಾಕರಣಗಳ ಉದ್ದೇಶ. ಅನ್ಯ ಭಾಷಿಕರಿಗೂ, ಶಾಲಾಬಾಲಕರಿಗೂ ಇವು ತುಂಬ ನೆರವಾಗುತ್ತಿದ್ದವು. ಸರಳವಾದ ಗದ್ಯದಲ್ಲಿ ವ್ಯಾಕರಣ

ನಿಯಮಗಳನ್ನು ನಿತ್ಯ ಜೀವನದಲ್ಲಿ ಬಳಕೆಯಲ್ಲಿರುವ ಉದಾಹರಣೆಗಳನ್ನೇ ಅವುಗಳ ಸಮರ್ಥನೆಗೆ ಆಯ್ದುಕೊಂಡು ವಿವರಿಸುವುದು ಇಲ್ಲಿ ವಿದ್ದು ಕಾಣುವ ಅಂಶವಾಗಿದೆ. ಅಂತಹ ಮಹತ್ವದ ಸರಳ ವ್ಯಾಕರಣಗಳೆಂದರೆ ವಿಲ್ಯಂ ಕ್ಯಾರಿಯವರ The Grammar of Karnataka (೧೮೧೭), ಜಾನ್ ಮೆಕೆರಲ್ ಅವರ Karnataka Vyakarana (೧೮೨೦) ಥಾಮಸ್ ಹಡಸನ್‌ರವರ An Elementary Grammar of Canarese (೧೮೫೯) ಹಾಗೂ ಕನ್ನಡ ವ್ಯಾಕರಣ(೧೮೬೪) ಜೀಗ್ಲರ್‌ರ A Practical key to the Canarese language(೧೮೭೦) ಹಾಗೂ ಕನ್ನಡ ಶಾಲಾ ವ್ಯಾಕರಣ (೧೮೬೬) ಸಿ.ಕ್ಯಾಂಪ್‌ಬೆಲರವರ ಕನ್ನಡ ವ್ಯಾಕರಣ ಸಾರಂ(೧೮೪೯) ಜಿ. ಕೊಯ್ಸುರವರ ಕನ್ನಡ ಬಾಲ ವ್ಯಾಕರಣ(೧೮೫೮) ಜೆ. ಗ್ಯಾರೆಟ್‌ರ ಕನ್ನಡ ವ್ಯಾಕರಣ(೧೮೬೫). ಕನ್ನಡ ಭಾಷೆಯನ್ನು ಗಂಭೀರವಾಗಿ ಅಧ್ಯಯನ ಮಾಡುವ ವಿದ್ವಾಂಸರನ್ನು ಅನುಲಕ್ಷಿಸಿ ಮಿಶನರಿಗಳು ರಚಿಸಿದ ಪ್ರೌಢ ವ್ಯಾಕರಣ ಗಳೆಂದರೆ ಕಿಟೆಲರವರ ಕನ್ನಡ ವ್ಯಾಕರಣ ಸೂತ್ರಗಳು (೧೮೯೯) ಸಂಕ್ಷೇಪ ವ್ಯಾಕರಣ ಸೂತ್ರಗಳು (೧೮೯೯) ಹಾಗೂ A Grammar of Kannada language(೧೯೦೩) ಜೀಗ್ಲರ್‌ರ A practical key to the Canarese language (೧೮೬೫)ಇವು ಕನ್ನಡ ವ್ಯಾಕರಣ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆಗಳಾಗಿವೆ.

ಮಿಶನರಿಗಳು ತಮ್ಮ ಉದ್ದೇಶ ಸಿದ್ಧಿಗಾಗಿ ಇಂಗ್ಲಿಶ್-ಕನ್ನಡ, ಕನ್ನಡ-ಇಂಗ್ಲಿಶ್ ದ್ವಿಭಾಷಾ ಕೋಶಗಳ ರಚನೆಗೆ ಹೆಚ್ಚು ಗಮನ ಹರಿಸಿದರು. ಒಂದು ಭಾಷೆಯ ಪದಗಳಿಗೆ ಇನ್ನೊಂದು ಭಾಷೆಯಲ್ಲಿ ಅರ್ಥವನ್ನು ನಿರೂಪಿಸುವ ದ್ವಿಭಾಷಾ ನಿಘಂಟುಗಳ ರಚನೆ ಕನ್ನಡದಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಇಂಗ್ಲಿಶ್‌ರ ಆಡಳಿತ ಪರಿಣಾಮವಾಗಿ ಇಂಗ್ಲಿಶ್ ಭಾಷೆಯ ಮುಖಾಂತರ ವೈಜ್ಞಾನಿಕ ತಿಳುವಳಿಕೆಯನ್ನು ಮತ್ತು ಪಾಶ್ಚಾತ್ಯ ರಾಜಕೀಯ ಚಿಂತನೆಗಳನ್ನು ಇಲ್ಲಿಯವರು ಪಡೆಯುತ್ತಿದ್ದುದು. ಮತ್ತು ತಮ್ಮ ಮತಪ್ರಚಾರಕ್ಕಾಗಿ ಇಲ್ಲಿಗೆ ಬಂದ ಪಾಶ್ಚಾತ್ಯ ಕ್ರೈಸ್ತ ಪುರೋಹಿತ ವರ್ಗದವರು ಇಲ್ಲಿಯ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಯತ್ನಿಸುತ್ತಿದ್ದುದು-ಈ ಅವಳಿ ವಿದ್ಯಮಾನಗಳು ಇಂಗ್ಲಿಶ್- ಕನ್ನಡ, ಕನ್ನಡ - ಇಂಗ್ಲಿಶ್ ದ್ವಿಭಾಷಿಕ ನಿಘಂಟುಗಳ ರಚನೆಗೆ ಮುಖ್ಯ ಪ್ರೇರಣೆಯಾದವು. ಆಡಳಿತಗಾರರಿಗೆ, ಮತ ಪ್ರಚಾರಕರಿಗೆ ಕನ್ನಡ ಕಲಿಯಲು ಅವು ಅಗತ್ಯವೂ ಆಗಿದ್ದವು. ವೈಜ್ಞಾನಿಕ ಸಾಧನೆಗಳನ್ನು ಮಾಡಲು ಉತ್ಸಾದಕರಾಗಿ ಮತ್ತು ಆಡಳಿತದಲ್ಲಿ ಹುದ್ದೆಗಳಿಗಾಗಿ ಹಂಬಲವಿಟ್ಟುಕೊಂಡು ಇಂಗ್ಲಿಶ್ ವಿದ್ಯಾಭ್ಯಾಸದಲ್ಲಿ ತೊಡಗಿದ್ದ ಈ ನಾಡಿನ ಯುವಕರಿಗೂ ಇಂತಹ ನಿಘಂಟುಗಳ ಅಗತ್ಯವಿತ್ತು. ಈ ಎಲ್ಲಾ ಕಾರ್ಯದ ಪರಿಣಾಮವಾಗಿ ಕನ್ನಡ ನಿಘಂಟು ಬೆಳವಣಿಗೆಯು ಹೊಸ ಸ್ತರವನ್ನು ತಲುಪಿತು[೪]. ಮಿಶನರಿಗಳ ತೀಕ್ಷ್ಣಬುದ್ಧಿ, ವೈಜ್ಞಾನಿಕ ವಿಚಾರ ವೈಖರಿ, ಪರಿಶ್ರಮಶೀಲತೆ, ಉತ್ಸಾಹ, ಅಧ್ಯಯನಾಕಾಂಕ್ಷೆ ಮುಂತಾದವುಗಳಿಂದಾಗಿ ಭಾಷಾಧ್ಯಯನ ಕ್ಷೇತ್ರದಲ್ಲಿ ಕೆಲಸ ಮಾಡಿ ತೋರಿಸಿ ಹೊಸಮಾರ್ಗ ಮಾಡಿಕೊಟ್ಟರು.

ಇದು ಇಂಗ್ಲಿಶ್-ಕನ್ನಡ ದ್ವಿಭಾಷಿಕ ಕೋಶವಾಗಿರುವುದರಿಂದ ಮುಖ್ಯ ನಮೂದು ಇಂಗ್ಲಿಶ್‌ನಲ್ಲಿದ್ದು ಅವಕ್ಕೆ ಕನ್ನಡದ ಅರ್ಥ, ವಿವರಣೆಗಳನ್ನು ನೀಡಿದ್ದಾನೆ. ಇಂಗ್ಲಿಶ್ ಶಬ್ದಗಳಿಗೆ ಅರ್ಥಗಳನ್ನು ಕೊಡುವಾಗ ರೂಢಿಯಲ್ಲಿದ್ದ ಕನ್ನಡ, ಸಂಸ್ಕೃತ ಶಬ್ದಗಳನ್ನು ಸೂಚಿಸಿದ್ದಾನೆ. ವ್ಯವಹಾರ ಮತ್ತು ಆಡಳಿತಕ್ಕೆ ಸಂಬಂಧಿಸಿದ ಶಬ್ದಗಳಿಗೆ ಅನ್ಯದೇಶಿಯ ಶಬ್ದಗಳನ್ನು ಕೊಟ್ಟಿದ್ದಾನೆ. ಒಂದು ಪದ ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ಅರ್ಥಗಳಲ್ಲಿ ಬಳಕೆಯಾಗುತ್ತದೆ.

ಉದಾ- Frame -ಎಂಬ ಪದಕ್ಕೆ ಆಕಾರ, ರೂಪ, ಕಟ್ಟು, ಪದ್ಧತಿ, ಕ್ರಮರೀತಿ, ಬಗೆ, ಪ್ರಯತ್ನ, ಅಚ್ಚು, ಗೂಡು, ಗೃಹಾಂಗ, ಮನೆಯಾಕಾರ ಮುಂತಾದ ಅರ್ಥಗಳನ್ನು ಕೊಟ್ಟಿದ್ದಾನೆ.

Poem-ಕವಿ, ಪದ, ಪದ್ಯ, ಕವನ, ಕಾವ್ಯ ಎಂಬರ್ಥಗಳನ್ನು ಹೇಳಿ ರಘುವಂಶ, ಮೇಘದೂತ, ಶೃಂಗಾರ ರತ್ನಾಕರ ಮುಂತಾದವು ತನ್ನ ಗಮನಕ್ಕೆ ಬಂದ ಕಾವ್ಯಗಳನ್ನು ಪಟ್ಟಿಮಾಡಿದ್ದಾನೆ.

Poetry-ಕನ್ನಡದಲ್ಲಿ ಪದ, ಪದ್ಯ, ದ್ವಿಪದ, ದಂಡಕ, ಯಕ್ಷಗಾನ ಎಂಬ ೫ ತರಹದ ಕಾವ್ಯಗಳಿವೆ. ಅವುಗಳ ಲಕ್ಷಣಗಳನ್ನು ಉದಾಹರಣೆ ಸಮೇತವಾಗಿ ರೀವ್ ವಿಸ್ತಾರವಾಗಿ ಹೇಳಿದುದು ಗಮನಿಸಬೇಕಾದ ಸಂಗತಿ.[೫]

ಇಂಗ್ಲಿಶ್ ಶಬ್ದಗಳಿಗೆ ಕನ್ನಡದ ಅರ್ಥವನ್ನು ಕೊಡುವಾಗ ಒಂದಕ್ಕಿಂತ ಹೆಚ್ಚು ಪ್ರತಿಶಬ್ದಗಳನ್ನು ತಿಳಿಸಿರುವನು.ಈ ಕೋಶ ಕನ್ನಡವನ್ನು ಕಲಿಯತಕ್ಕ ಪಾಶ್ಚಾತ್ತರಿಗೂ ಇತರ ದೇಶಿಯ ಭಾಷಾ ಪಂಡಿತರಿಗೂ ಉಪಯೋಗವಾಗಿದೆ. ರೀವ್‌ನ ಉದ್ದೇಶವು ಕೇವಲ ಶಬ್ದಾರ್ಥ ಹೇಳುವುದಿರದೆ ಕನ್ನಡ ಭಾಷೆಯ ಹಾಗೂ ಜನಜೀವನದ ಬಗ್ಗೆ ಹೆಚ್ಚಿನ ಪರಿಚಯವನ್ನು ತನ್ನ ದೇಶಬಾಂಧವರಿಗೆ ಮಾಡಿಕೊಡುವುದಾಗಿತ್ತು. ಆದ್ದರಿಂದ ಈ ಕೋಶದಲ್ಲಿ ಅನೇಕ ಸಮಾನಾರ್ಥಕ ಶಬ್ದಗಳನ್ನು ಕೊಟ್ಟಿದುದು ಕಂಡುಬರುತ್ತದೆ. ಉದಾ -Idol ಎಂಬುದರ ಅರ್ಥವನ್ನು ವಿಗ್ರಹ, ಮೂರ್ತಿ ಎಂಬು ಹೇಳಿ ಅವುಗಳ ಸ್ವರೂಪವನ್ನು ವಿವರಿಸಿದುದಲ್ಲದೆ ಕನ್ನಡಿಗರು ಪೂಜಿಸುವ ದೇವ, ದೇವತೆಗಳನ್ನು ಹೆಸರಿಸಿದ್ದಾನೆ. Dictionary ಎಂಬುದಕ್ಕೆ ಅಕಾರಾದಿಕೋಶ, ನಿಘಂಟು ಎಂದು ಹೇಳಿ ಅಮರಕೋಶ, ಅಭಿದಾನ ರತ್ನಮಾಲೆ, ಕರ್ಣಾಟಕ ಶಬ್ದ ಮಂಜರಿ, ಕಬ್ಬಿಗರ ಕೈಪಿಡಿಗಳ ಉಲ್ಲೇಖವಿದೆ. ಅವುಗಳ ಪರಿಚಯ ಮಾಡಿಕೊಡು ವಂತಹ ಒಂದೊಂದು ವಾಕ್ಯವನ್ನು ಸೇರಿಸಿದ್ದಾನೆ. Music ಎಂಬ ಪದಕ್ಕೆ ಸಂಗೀತ, ಗಾನ ಇತ್ಯಾದಿ ಪರ್ಯಾಯ ಪದಗಳನ್ನು ಕೊಡುವಲ್ಲಿ ಮಾತ್ರ ರೀವ್ ತೃಪ್ತನಾಗದೆ ಭಾರತೀಯರಿಗೆ ಈ ಬಗ್ಗೆ ಗೊತ್ತಿರುವುದನ್ನು ತಾನು ಸಂಗ್ರಹಿಸಿ ತಿಳಿಸಿಬಿಡಬೇಕೆಂದು ತವಕಿಸುತ್ತಾನೆ. ಅವನು ಕೊಡುವ ಅರ್ಥ ಮುಂದೆ ಹೀಗೆ ಸಾಗುತ್ತದೆ. The Principal Instrumental music among the

Hindoos is as follows ಎಂದು ಹೇಳಿ ಭೇರಿ -A Drum used at all the Hindoo Festivals ಡೊಳ್ಳ - A shepherd's drum---ಇತ್ಯಾದಿ ಉದಾಹರಣೆ ಕೊಡುತ್ತಾನೆ.

ಕೋಶಕ್ಕೆ ವಿಸ್ತಾರವಾದ, ಅಭ್ಯಾಸಪೂರ್ಣವಾದ ಪೀಠಿಕೆಯೊಂದನ್ನು ಬರೆದು ಕನ್ನಡ ಶಬ್ದಗಳ ಪ್ರಯೋಗ, ಅರ್ಥವೈವಿಧ್ಯ ಹಾಗೂ ವಾಕ್ಯರಚನೆಗಳ ಬಗ್ಗೆ ವಿದೇಶಿಯರಿಗೆ ಕೆಲವೊಂದು ಮಾರ್ಗದರ್ಶಕ ಸೂತ್ರಗಳನ್ನು ಕೊಟ್ಟಿದ್ದಾನೆ. ಕೆಲವೊಂದನ್ನು ಇಲ್ಲಿ ಸಂಗ್ರಹಿಸಿ ಹೇಳಲಾಗಿದೆ.[೬] ಹಳಗನ್ನಡ ಶಬ್ದಗಳು ಹೊಸಗನ್ನಡಕ್ಕೆ ತಿರುಗುವಾಗ ಆಗುವ ಬದಲಾವಣೆಗಳನ್ನು ಉದಾಹರಣೆಗಳಿಂದ ವಿಶದೀಕರಿಸಿದ್ದಾನೆ. ಹಳಗನ್ನಡದ ಕೆಲವು ಅನುನಾಸಿಕ ಯುಕ್ತ ಪದಗಳು ಹೊಸಗನ್ನಡಕ್ಕೆ ಬರುವಾಗ ಅಲ್ಲಿಯ ಅನುನಾಸಿಕ ಲೋಪವಾಗುತ್ತದೆ, ಆದರೆ ಅರ್ಥದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ.

ಉದಾ - ಇರುಂಬೆ - ಇರುವೆ

ನೊರಂಜು - ನೊರಜು

ಬೇಂಟೆ - ಬೇಟೆ

ಬೆಡಂಗು - ಬೆಡಗು ಮುಂತಾದವು.

ಕೆಲವು ವೇಳೆ ಪದಾದಿಯ ಲ > ಳ ಕಾರವಾಗಿ, ವ > ಬ ಕಾರವಾಗಿ ಪದಾಂತ್ಯ ಳ ಕೆಲವು ವೇಳೆ ಟ,ಡ,ಣ ಕಾರವಾಗಿ ಪರಿಣಮಿಸುತ್ತದೆ.

ಬೆರಲು - ಬೆರಳು

ಒರಲು - ಒರಳು

ಕರುವು -ಕರುಬು

ಜಗಿಳೆ-ಜಗಿಟೆ

ಮೂಳ-ಮೂಡ

ಕವಳ -ಕವಣ

ಕೆಲವು ವೇಳೆ ತ >ದ ವಾಗಿ, ಟ >ಡ ವಾಗಿ, ಡ >ಟ ವಾಗಿ, ಣ >ಳ ವಾಗಿ ಪರಿಣಮಿಸುತ್ತದೆ.

ಅರಿತು - ಅರಿದು

ಕಾತುದು - ಕಾದುದು

ಕಾಟಿಗೆ - ಕಾಡಿಗ

ಏಡ್ಡತನ - ಎಟ್ಟತನ

ಹುಣಿಶೆ - ಹುಳಿಸೆ

ಗಣೆ - ಗಳೆ

ಪದಗಳಲ್ಲಿ ಅರ್ಥ ಹುದುಗಿಕೊಂಡಿರುವುದಿಲ್ಲ. ಅದು ಸಂದರ್ಭಕ್ಕೆ ತಕ್ಕಂತೆ ವ್ಯತ್ಯಾಸವಾಗುತ್ತದೆ. ಅದಕ್ಕೆ ಭಾಷೆಗಿರುವ ಯಾದೃಚ್ಛಿಕ ಗುಣವೇ ಕಾರಣ. ಅಂತಹ ನಾನಾರ್ಥ ರೂಪಗಳನ್ನು ಕೊಟ್ಟಿರುತ್ತಾನೆ.

ಮಲಗು ೧. ಶಯನ sleep ೨. ಉಪಧಾನ apillow

ಕುದಿ ೧. ಮನಸ್ತಾಪ Grief, sorrow ೨. ಪಜಿನ bubble

ಹರಿ ೧. ಕತ್ತರಿಸು ೨. ಚಲಿಸು ೩. ದೇವರು

ಕೆಲವು ಪದಗಳಿಗೆ ರೀವ್ ಕೊಡುವ ಅರ್ಥ ಈಗ ಇಲ್ಲ. ಉದಾ - ಒಟ್ಟು –೧. ಒಗ್ಗರ ೨. ಮೊಳಕೆ ಇಂಗ್ಲಿಶ್‌ನಿಂದ ಕನ್ನಡಕ್ಕೆ, ಕನ್ನಡದಿಂದ ಇಂಗ್ಲಿಶಿಗೆ ಅನುವಾದಿಸಲು ಅನುಕೂಲವಾಗುವಂತೆ ಕೆಲವು ಸರಳ ವಾಕ್ಯಗಳ ಪಟ್ಟಿಯನ್ನು ಕೊಟ್ಟಿರುವನು.

-ನಾನು ಕೆಲಸವನ್ನು ಮಾಡಬಂದೆನು

-ನಾನು ಕೆಲಸವನ್ನು ಮಾಡಲು ಬಂದೆನು I came to work

-ನಾನು ಕೆಲಸವನ್ನು ಮಾಡಲಿಕ್ಕೆ ಬಂದೆನು

ರೀವ್ ಕೊಟ್ಟಿರುವ ಕೆಲವು ವಾಕ್ಯಗಳ ರಚನಾಕ್ರಮ ಸಾಧುವಲ್ಲ.

-ಅಮ್ಮಾ ಕಾಗದವನ್ನು ಬರೆಯಲು ಚಂದಾಗಿರುವುದು

-ಆ ಹೆಣ್ಣವನಿಗೆ ಮದುವೆಯಾಗ ಚಂದಾಗಿರುವುದು ಮುಂತಾದವು.

ಒದ್ದೇನೆಲ, ಉದ್ದಮರ, ಹಳೇಪುಸ್ತಕ ಇಂತಹ ಕೆಲವು ವಿಶೇಣಗಳ ಪಟ್ಟಿಯನ್ನು ಕೊಟ್ಟಿರುವನು. 'ಆಗಿ' ಯಿಂದ ಕೊನೆಯಾಗುವ ಕೆಲವು ಕ್ರಿಯಾ ವಿಶೇಷಣಗಳನ್ನು ಹೇಳಿದ್ದಾನೆ. ಸುಖವಾಗಿ, ಸರಿಯಾಗಿ, ನಯವಾಗಿ, ಹಸಿಯಾಗಿ ಮುಂತಾದವು. -ಅನೆಯಿಂದ ಕೊನೆಯಾಗುವ ವಿಶೇಷಣಗಳನ್ನು ಹೇಳರುವನು ನೆಟ್ಟನೆ, ತಣ್ಣನೆ, ಹಚ್ಚಗೆ, ಕೆಂಪನೆ, ಬೆಳ್ಳಗೆ.

ನಾಮಪದಕ್ಕೆ ಉಳ್ಳ, ಆದ, ಆದಂಥಾ ಎಂಬ ರೂಪಗಳು ಹತ್ತಿ ಸಮಾನಾರ್ಥವನ್ನು ಕೊಡುತ್ತವೆ.

ಬಿಳುಪಿನ ಬಟ್ಟೆ ಬಿಳುಪಾದಂತಹ ಬಟ್ಟೆ

ಬಿಳುಪುಳ್ಳ ಬಟ್ಟೆ   ಬಿಳಿದಾದಂಥಾ ಬಟ್ಟೆ

ಬಿಳುವಾದ ಬಟ್ಟೆ

ಇಂತಹ ರೂಪಗಳ ಯಾದಿಯನ್ನು ಕೊಟ್ಟಿದ್ದಾನೆ. ಮನೆಮಾರು, ಗಿಡಗಂಟಿ, ದನಕರು, ಹಣ್ಣುಹಂಪಲು ಇಂತಹ ಜೋಡುನುಡಿಗಳನ್ನು, ಪಟಪಟನೆ, ಚುರುಚುರನೆ, ಚರಚರನೆ, ದಬ್ಬನೆ ಇಂತಹ ಅನುಕರಣಾವ್ಯಯ ಶಬ್ದಗಳನ್ನು ಕೊಟ್ಟಿರುವನು. ಪ್ರತ್ಯೇಕ ಶಬ್ದ ನಿರ್ಮಾಣಕ್ಕೆ ಕಾರಣವಾದ ಶಬ್ದಗಳನ್ನು ಕೊಟ್ಟಿರುವರು ಉದಾ- ಕಾಲು-ಕಾಳು ಶರ-ಸರ, ಚಿಗಿ-ಜಿಗಿ ಮುಂತಾದವು ಇವು ವೈದೃಶ್ಯ ಪ್ರಸಾರದಲ್ಲಿರುತ್ತವೆ ಕನ್ನಡ ಭಾಷೆಯ ರಚನೆಯನ್ನು, ಸ್ವರೂಪವನ್ನು ವಿದೇಶಿಯರಿಗೆ ತಿಳಿಸಲು ಬೇರೆ ಬೇರೆ ಮೂಲಗಳಿಂದ ಪದಗಳನ್ನು ಸಂಗ್ರಹಿಸಿ ರೀವ್ ಕೊಟ್ಟಿರುವನು. ಕನ್ನಡ ಭಾಷೆಯ ಅಧ್ಯಯನಕ್ಕೂ ಇವು ತುಂಬ ನೆರವಾಗುತ್ತವೆ.

ರೀವ್‌ನ ಇಂಗ್ಲಿಶ್-ಕನ್ನಡ ಕೋಶವು ಪಾಶ್ಚಾತ್ಯರಿಗೆ ಹೆಚ್ಚಿನ ಪ್ರಯೋಜನಕಾರಿಯಾಗಿದ್ದರೂ ಕನ್ನಡ ಭಾಷಿಕರಿಗೆ ಕನ್ನಡ-ಇಂಗ್ಲಿಶ್ ಕೋಶದಷ್ಟು ಪ್ರಯೋಜನಕಾರಿಯಾಗಲಿಲ್ಲ. ಅದೇನೇಯಿದ್ದರೂ 'ಅ' ಕಾರಾದಿ ನಿಘಂಟಿನ ಸ್ವರೂಪವನ್ನು ಕನ್ನಡಕ್ಕೆ ಪರಿಚಯಿಸಿದ ಕೀರ್ತಿ ರೀವ್‌ನದಾಗಿದೆ. ಇಂಗ್ಲಿಶ್ ಪದಗಳಿಗೆ ಕನ್ನಡದ ಅರ್ಥ ಹೇಳುವ ರೀತಿಯನ್ನು ರೂಢಿಸಿದ ಹೆಚ್ಚುಗಾರಿಕೆ ಈ ನಿಘಂಟಿನಲ್ಲಿದೆ. ಇದರ ನೆಲೆಗಟ್ಟಿನ ಮೇಲೆ ಇಂಗ್ಲಿಶ್-ಕನ್ನಡ ನಿಘಂಟುಗಳ ಒಂದು ಪರಂಪರೆ ಬೆಳೆಯಿತು.

ಗ್ಯಾರೆಟ್ ಕೋಶ

ರೀವ್‌ನ ಕಾರ್ಯದಿಂದ ಕನ್ನಡ ನಿಘಂಟು ಕ್ಲಿಷ್ಟಕರವಾದ ಹಂತವನ್ನು ದಾಟಿ ಪರಾಮರ್ಶೆಗೆ ಯೋಗ್ಯವಾದ ವ್ಯಾಪಕ ಅರ್ಥ ಕೋಶವಾಗಿ ರೂಪುಗೊಂಡಿತು. ಮುಂದಿನ ಸುಮಾರು ಅರವತ್ತೆರಡು ವರ್ಷಗಳ ಕಾಲ ರೀವ್ ನಿಘಂಟಿನ ಪರಿಷ್ಕರಣಗಳೇ ಪ್ರಕಟವಾಗುತ್ತಿದ್ದವು. ಈ ವಿದ್ಯಮಾನ ರೀವ್ ನಿಘಂಟಿನ ಮಹತ್ವವನ್ನು, ಜನಪ್ರಿಯತೆಯನ್ನು ಎತ್ತಿ ತೋರಿಸುತ್ತದೆ. ರೀವ್ ನಿಘಂಟಿನ ದೋಷಗಳನ್ನು ಸರಿಪಡಿಸುವ, ಸುಧಾರಿಸುವ ಅಗತ್ಯವನ್ನು ಮಿಶನರಿ ನಿಘಂಟುಗಾರರು ಮನಗಂಡಿದ್ದರೆಂಬುದನ್ನೂ ತೋರಿಸುತ್ತದೆ. ರೀವ್ ಕೋಶಗಳನ್ನು ಸಂಕ್ಷಿಪ್ತಗೊಳಿಸಿ, ಪರಿಷ್ಕರಿಸಿ ಪ್ರಕಟಿಸುವ ಕಾರ್ಯವನ್ನು ಮೊದಲು ಗ್ಯಾರೆಟ್ ಕೈಕೊಂಡನು. ಅದಕ್ಕೆ ಕಾರಣಗಳೆಂದರೆ ರೀವ್ ಕೋಶಗಳು ಬಹಳ ಸಮಯದಿಂದ ಅನುಪಲಬ್ಧವಾಗಿದ್ದವು : ಕನ್ನಡದ ಸಹಜ ಶಬ್ದಗಳು ಮತ್ತು ಹೆಚ್ಚು ರೂಢಿಯಲ್ಲಿರುವ ಸಂಸ್ಕೃತ ಶಬ್ದಗಳಿಗೆ ಅರ್ಥ ಕೊಡುವ ಹಾಗೂ ಶಾಲಾ ವಿದ್ಯಾರ್ಥಿಗಳನ್ನು ಅನುಲಕ್ಷಿಸಿಕೊಂಡು ರಚಿತವಾಗುವ ನಿಘಂಟುಗಳು ಬೇಕಾಗಿದ್ದವು. ಆ ಕೊರತೆಯನ್ನು ಗ್ಯಾರೆಟ್ ಹೋಗಲಾಡಿಸಿದರು. ಇದರಲ್ಲಿ ಸುಮಾರು ೨೩,೦೦೦ ಪದಗಳಿವೆ.

ಇಂಗ್ಲಿಶ್ ಕಲಿಯುವ ಮಕ್ಕಳ ಅಭ್ಯಾಸಕ್ಕೆಂದು ಗ್ಯಾರೆಟ್ ಕೈಕೊಂಡ ಮೊದಲ ಕಾರ್ಯವೆಂದರೆ ರೀವ್‌ನ ಇಂಗ್ಲಿಶ್-ಕನ್ನಡ ಕೋಶದ ಪರಿಷ್ಕರಣ. ಗ್ಯಾರೆಟ್ ಶಬ್ದಾರ್ಥವನ್ನಷ್ಟೇ ತಿಳಿಸುವ ಕೋಶವನ್ನು Manual

English Canerese Dictionary ಎಂಬ ಹೆಸರಿನಿಂದ ೧೮೭೨ ರಲ್ಲಿ ಪ್ರಕಟಿಸಿದನು. ರೀವ್‌ನ ಕೋಶವನ್ನು ಸಂಕ್ಷಿಪ್ತಗೊಳಿಸಿದೆ ಅದನ್ನು ತಳಹದಿಯಾಗಿಟ್ಟುಕೊಂಡು ಪ್ರತ್ಯೇಕವಾಗಿ ರಚಿಸಲಾಗಿದೆ. ಅಂತೆಯೇ ರೀವ್ ಕೊಟ್ಟಿದ್ದ ಅನೇಕ ಶಬ್ದಗಳನ್ನು ಬಿಡಲಾಗಿದೆ, ಹೆಚ್ಚಿನವುಗಳನ್ನು ಸೇರಿಸಲಾಗಿದೆ. ರೀವ್‌ನಲ್ಲಿರುವ ದೀರ್ಘ ವಿವರಣೆಗಳು ಇದರಲ್ಲಿಲ್ಲ. ರೀವ್‌ನ ನಿರೂಪಣಾ ತಂತ್ರಗಳನ್ನೇ ಇವನು ಅನುಸರಿಸಿದರೂ ಅಲ್ಲಿಯ ನ್ಯೂನತೆಗಳನ್ನು ಸರಿಪಡಿಸಿದ್ದಾನೆ. ಉದಾ-ಉಳ್ಳ ಡೊಳ್ಳ ಇಂತಹ ಪದಗಳನ್ನು ಉಳ್ಳು, ಡೊಳ್ಳು ಎಂದು ಮಾರ್ಪಡಿಸಿದ್ದಾನೆ. ಅಕಾರಾಂತವಾಗಿರುವ ಕ್ರಿಯಾಪದಗಳಿಗೆ ಹಳಗನ್ನಡ ವ್ಯಾಕರಣ ಪರಂಪರೆಯನ್ನನುಸರಿಸಿ ಉಕಾರಾಂತವಾಗಿ ಬಳಸಿದ್ದಾನೆ.

ಉದಾ -	ರೀವ್	ಗ್ಯಾರೆಟ್
	ಇಳಿಸ	ಇಳಿಸು
	ಕೊಡ	ಕೊಡು
	ಬಿಡ	ಬಿಡು
	ಅಳಿಸ	ಅಳಿಸು

ರೀವ್ ಕೊಟ್ಟಿರುವ ಪದಗಳು ಉಚ್ಚಾರಣೆಯಲ್ಲಿ ವ್ಯಂಜನಾಂತದಲ್ಲಿದ್ದಿರಬಹುದು. ಅನೇಕ ಇಂಗ್ಲಿಶ್ ಪದಗಳಿಗೆ ಗ್ಯಾರೆಟ್ ಕೊಟ್ಟಿರುವ ಅರ್ಥಗಳು ರೀವ್‌ನ ಅರ್ಥ ಗಳೊಂದಿಗೆ ಹೋಲುತ್ತವೆ. ರೀವ್‌ನಿಂದ ಸ್ವೀಕರಿಸಿರುವ ಪದಗಳಿಗೆ ಗ್ಯಾರೆಟ್ ಕೆಲವು ಪರ್ಯಾಯಗಳನ್ನು ಸೇರಿಸಿದ್ದಾನೆ.

ಉದಾ-

Curtial	ಇಳಿಸ, ಕಡಿಮೆ, ಮಾಡ	ರೀವ್
Curtial	ಇಳಿಸು, ಕಡಿಮೆ, ಮಾಡು	ಗ್ಯಾರೆಟ್
Patient	ತಾಳ್ಮೆಯುಳ್ಳ, ಸೈರಣೇಯ	ರೀವ್
Patient	ತಾಳ್ಮೆಯುಳ್ಳ, ಶಾಂತವಾದ	ಗ್ಯಾರೆಟ್
Precipice	ಜರಿಪತನಸ್ಥಳ, ಪ್ರಪಾತ	ರೀವ್
Precipice	ಜಾರುವನ ಬೀಳುವ ಸ್ಥಳ	ಗ್ಯಾರೆಟ್

ಹೀಗೆ ಗ್ಯಾರೆಟ್ ನೀಡಿರುವ ಅರ್ಥಗಳು ರೀವ್ ಕೋಶವನ್ನಾಧರಿಸಿದ್ದರೂ ಅರ್ಥವಿವರಣೆಯಲ್ಲಿ ಅದಕ್ಕಿಂತ ಭಿನ್ನತೆ ಇದೆ.

ಜೀಗ್ಲರ್ ಕೋಶ

ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಅನುಲಕ್ಷಿಸಿ ಜೀಗ್ಲರ್‌ರು ಸಿದ್ಧಪಡಿಸಿದ ಇಂಗ್ಲಿಶ್-ಕನ್ನಡ ಶಬ್ದಕೋಶ ಬೆಳಕು ಕಂಡದ್ದು ೧೮೭೬ ರಲ್ಲಿ. ಅದು ಪ್ರಕಟವಾದಾಗಿನಿಂದ ಉಪಾಧ್ಯಾಯರಿಗೆ, ವಿದ್ಯಾರ್ಥಿಗಳಿಗೆ ಕೈಪಿಡಿಯಾಗಿ ಉಳಿದಿದೆ. ಈ ಕೋಶದ ರಚನೆಯಲ್ಲಿ ಜೀಗ್ಲರ್‌ರಿಗೆ ನೆರವು ನೀಡಿದವರು ಮಂಗಳೂರಿನ ಬಾಸೆಲ್ ಮಿಶನ್‌ದಲ್ಲಿ ಮಿಶನರಿಗಳಾಗಿದ್ದ ವಾಲ್ಜ್ ಮತ್ತು ಕ್ರಿಸ್ತಾನುಜ ವಾಟ್ಸ. ಈ ಕೋಶ ರಚಿಸುವ ಕಾಲಕ್ಕೆ ಜೀಗ್ಲರ್‌ರು ಧಾರವಾಡದ ಬಾಸೆಲ್ ಮಿಶನ್ ಶಾಲೆಯಲ್ಲಿ ವಿದ್ಯಾಧಿಕಾರಿಯಾಗಿದ್ದರಿಂದ ಸಹಜವಾಗಿಯೇ ಆ ಪ್ರದೇಶದ ಶಬ್ದಗಳು ಅವರ ಕೋಶದಲ್ಲಿ ಧಾರಾಳವಾಗಿ ಸೇರ್ಪಡೆಯಾಗಿವೆ. ಅವರಿಗಿಂತ ಹಿಂದಿನ ರೀವ್, ಕಿಟೆಲ್, ಗ್ಯಾರೆಟ್‌ರ ಕೋಶಗಳೂ ಇವರಿಗೆ ಆಕರವಾಗಿದ್ದವು. ಕಿಟೆಲ್‌ರು ಬೃಹತ್ ಕನ್ನಡ-ಇಂಗ್ಲಿಶ್ ಕೋಶ ರಚನೆಯಲ್ಲಿ ತೊಡಗಿದಾಗ ಜೀಗ್ಲರರು ಉತ್ತರ ಕರ್ನಾಟಕದ ಭಾಷಾ ರೂಪಗಳನ್ನು ಕಿಟೆಲ್‌ರಿಗೆ ನೀಡಿದರು. ಜೀಗ್ಲರ್‌ರ ಸೇವೆಯನ್ನು ಕಿಟೆಲ್‌ರು ಸ್ಮರಿಸಿದ್ದಾರೆ.[೮]

ಜೀಗ್ಲರ್‌ರು ತಮ್ಮ ಕೋಶವನ್ನು ಉಪಯೋಗಿಸುವಾಗ ಕೆಲವು ಮೂಲಭೂತ ಅಂಶಗಳ ಬಗೆಗೆ ಕೋಶದ ಆರಂಭದಲ್ಲಿಯೇ ಹೇಳಿದ್ದಾರೆ. ಇಂಗ್ಲಿಶ್ ಶಬ್ದಗಳ ಉಚ್ಚಾರಣೆಯ ವಿಷಯವಾಗಿ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ.[೯]

೧) ಶಬ್ದಾಂತ್ಯದಲ್ಲಿ ಬರುವ e ಕಾರ ಉಚ್ಚಾರವಾಗದು; ಅದನ್ನು ಉಚ್ಚರಿಸಬೇಕಾದಲ್ಲಿ e ಎಂಬ ರೂಪವಾಗಿ ಕಾಣಿಸಿರುತ್ತದೆ.

೨) a ಕಾರದ ಪೂರ್ವದಲ್ಲಿ ಬರುವ ದೀರ್ಘ a ಕಾರ ಮತ್ತು there, where, their, heir ಮುಂತಾದ ಶಬ್ದಗಳ ಮಧ್ಯಾಕ್ಷರವಾದ e ಕಾರಗಳ ಉಚ್ಚಾರಕ್ಕೂ, fate ಎಂಬ ಶಬ್ದದಲ್ಲಿಯ ā ಕಾರದ ಉಚ್ಚಾರಕ್ಕೂ ಹೆಚ್ಚು ಕಡಿಮೆಯಿದೆ. "ಬೇಡ" ಎಂಬ ಶಬ್ದದಲ್ಲಿ ಕೇಳಿಸುವ ಏ ಸ್ವರ ಉಚ್ಚಾರಣೆಯಾಗುವಂತೆ ಅದನ್ನು ಉಚ್ಚರಿಸಬೇಕು.

೩) ಒಂದು ಶಬ್ದದಲ್ಲಿರುವ ದ್ವಿಸ್ವರ ಅಥವಾ ತ್ರಿಸ್ವರಗಳಲ್ಲಿ ಒಂದಕ್ಕೆ ಮಾತ್ರ ಉಚ್ಚಾರಚಿಹ್ನೆ ಇದ್ದರೆ ಅದು ಅಪೂರ್ಣ ಸ್ವರಗಣದ ಉಚ್ಚಾರವೆಂತಲೂ ಚಿಹ್ನೆ ಇಲ್ಲದ ಸ್ವರಕ್ಕೆ ಇಲ್ಲವೆ ಸ್ವರಗಳಿಗೆ ಲೋಪವೆಂತಲೂ ಎಣಿಸತಕ್ಕದ್ದು. ಉದಾ: tear (= tēr) ಕಣ್ಣೀರು, tear (= tăr) ಹರಿ.

೪) ಯಾವದೊಂದು ಸ್ವರದ ಪೂರ್ವದಲ್ಲಿ ಬರುವ ce, ci, sci, se, si, ti ಎಂಬಿವುಗಳ ಉಚ್ಚಾರಣೆ ವಾಡಿಕೆಯಾಗಿ sh ಎಂಬುದಾಗಿ, ಅವುಗಳ e ಕಾರ ಅಥವಾ i ಕಾರ ಉಚ್ಚಾರಕ್ಕೆ ಬರುವುದಿಲ್ಲ. ಪರಂತು ಅಂಥಾ e ಕಾರ ಅಥವಾ i ಕಾರ ಉಚ್ಚರಿಸಬೇಕಾದಲ್ಲಿ (ce, ci ಎಂಬೀತರದ) ಅಕ್ಷರಗಣವು (–) ಚಿಕ್ಕಗೀಟಿನಿಂದ ಪ್ರತ್ಯೇಕಿಸಲಾಗಿದೆ. ಹೇಗೆಂದರೆ con'science ಎಂಬುದು Con'shens ಎಂದು

ಉಚ್ಚರಿಸಬೇಕಾಗುತ್ತದೆ; ಆದರೆ con-sci-en'tious ಎಂಬುದರ ಉಚ್ಚಾರ con-shi-en'shus ಎಂತಾಗಿದೆ.

೫) ಮೂಲ ಶಬ್ದಗಳಿಂದ ಸಹಜವಾಗಿ ಸಾಧಿತವಾದ ಶಬ್ದಗಳ ಉಚ್ಚಾರಣೆಯನ್ನು ಆಯಾ ಮೂಲ ಶಬ್ದವನ್ನೇ ನೋಡಿ ಗೊತ್ತು ಮಾಡಬಹುದಾದ ಕಾರಣ ಅಂಥವುಗಳ ಉಚ್ಚಾರಣೆಯನ್ನು ಪ್ರತ್ಯೇಕವಾಗಿ ಕಾಣಿಸಲಿಲ್ಲ. ಉದಾ - Form-Formal, Formalism ಮುಂತಾದವು.

ಒಂದು ಇಂಗ್ಲಿಶ್ ಶಬ್ದವು ಎರಡು-ಮೂರು ಬಾರಿ ಆವರ್ತಿಯಾದಲ್ಲಿ ಅದರ ಮೊದಲನೆಯ ಅಕ್ಷರವನ್ನು ಮಾತ್ರ ಕಾಣಿಸಲಾಗಿದೆ.

ಉದಾ - Ant. n ಇರುವೆ; white. a (=ant) ಗೆದ್ದಲು; red a (=ant) ಕೆಂಪಿರುವೆ.

ಈ ಕೋಶದ ವಿನ್ಯಾಸ ಹೀಗಿದೆ ಲಇಂಗ್ಲಿಶ್ ಪದಗಳನ್ನು ಉಲ್ಲೇಖಿಸುವಾಗ ಅಕ್ಷರಗಳ ಮೇಲೆ ಕೆಲವು ಚಿಹ್ನೆಗಳನ್ನು ಅಳವಡಿಸುವುದರ ಮೂಲಕ ಅವುಗಳ ಸ್ಪಷ್ಟ ಉಚ್ಚಾರವನ್ನು ತಿಳಿಸಲಾಗಿದೆ. ಉದಾ - Gripe- ಉದರಶೂಲೆ, Herb - ಮೂಲಿಕೆ, ಹುಲ್ಲು. ಕೆಲವು ಕಡೆ ಈ ಉದ್ದೇಶಕ್ಕಾಗಿ ಪದಗಳನ್ನು ಪುನರ್ಲೇಖಿಸಿರುವುದೂ ಇದೆ. ಉದಾ - colonel (Kernel)n. ಪದಗಳ ವ್ಯಾಕರಣಾಂಶವನ್ನು ಹೆಚ್ಚು ಸ್ಪಷ್ಟವಾಗಿ ತಿಳಿಸಲು ಹೊಸ ತಂತ್ರಗಳನ್ನು ಅಳವಡಿಸಿರುವುದು ಇನ್ನೊಂದು ಉಪಯುಕ್ತ ಪ್ರಯೋಜನ. ಕ್ರಿಯಾಪದಗಳ ನಿಯಮಿತತೆ (ರೆಗ್ಯೂಲಾರಿಟಿ) ಅಥವಾ ಅನಿಯಮಿತತೆ (ಇರ್ ರೆಗ್ಯುಲಾರಿಟಿ) ಗಳನ್ನು ತಿಳಿಸಲು r ಅಥವಾ ir ಎಂಬುದು ಜೀಗ್ಲರನ ಸಂಕೇತಗಳು. ನಾಮಪದದ ಬಹುವಚನ ರೂಪದಲ್ಲಿ ವೈವಿಧ್ಯವಿದ್ದರೆ ಅಂತಹವುಗಳನ್ನು ಆವರಣಗಳಲ್ಲಿ ತೋರಿಸಿದ್ದಾನೆ. ಅನಿಯಮಿತ ಕ್ರಿಯಾಪದಗಳ ಭೂತ, ಭೂತಕೃದಂತ ರೂಪಗಳನ್ನು ಇದೇರೀತಿ ಆವರಣದಲ್ಲಿ ತೋರಿಸಿದ್ದಾನೆ.

ಉದಾ- Hinder. v.tr; ತಡೆ, ತರುಬು, ಅಡಗಣಸು.

Hit, v.t.ir (hit, hit); ಬಡಿ, c.d ತಾಕು, ತಗಲಿಸು.

ನಿಷ್ಪನ್ನ ಪದಗಳು ಮತ್ತು ಸಮಾಸ ಪದಗಳನ್ನೆಲ್ಲಾ ಒಂದೇ ಪದವಡಿಯಲ್ಲಿ ಸೇರಿಸಿದ್ದಾನೆ. ಹಿಂದಿನ ನಿಘಂಟುಗಳಲ್ಲಿ ಈ ವಿಧಾನ ಅಲ್ಲಲ್ಲಿ ಕಾಣಿಸುತ್ತಿದ್ದರೂ ನಿಯಮಿತವಾಗಿ ಪಾಲಿಸಿರಲಿಲ್ಲ. ಈ ಅಂಶವು ಪದಗಳ ಪರಸ್ಪರ ಸಂಬಂಧವನ್ನು ಸುಸ್ಪಷ್ಟಗೊಳಿಸುತ್ತದೆ.

ಜೀಗ್ಲರ್‌ರು ವಿದ್ಯಾಧಿಕಾರಿಯಾಗಿದ್ದರಿಂದ ಪಠ್ಯ ಪುಸ್ತಕ ರಚನೆ ಹಾಗೂ ತಾನು ಪಡೆದ ಅನುಭವಗಳಿಂದ ಸಮುದಾಯದ ಬೇರೆ ಬೇರೆ ವಲಯಗಳಲ್ಲಿ ಬಳಕೆಯಾದ ಪದಗಳನ್ನು ಸಂಗ್ರಹಿಸಿದ್ದಾನೆ. ವಿಜ್ಞಾನದ ಬೇರೆ ಬೇರೆ ಶಾಖೆಗಳಿಗೆ ಸಂಬಂಧಿಸಿದ ಪಾರಿಭಾಷಿಕ ಪದಗಳು ರೀವ್, ಗ್ಯಾರೆಟ್ ನಿಘಂಟುಗಳಿಗಿಂತ ಇಲ್ಲಿ ಹೆಚ್ಚಾಗಿ ಸೇರಿವೆ. ಇದು ಈ ಕೋಶದ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಉದಾ :

Plant - ಸಸಿ, ಗಿಡ, Plant-action- ತೋಟ

Plantain - ಬಾಳೇಹಣ್ಣು, Plash- ರೆಂಬೆಗಳನ್ನು ಹೆಣೆದು ಬೇಲಿ ಕಟ್ಟುವುದು

Collier - ಕಲ್ಲಿದ್ದಲು, Co-coon ಕೋಶ, ಪಿಂಡ

Rib - ಪಕ್ಕೆಲುಬು ಮುಂತಾದವು

ಸಂದರ್ಭಾನುಸಾರವಾಗಿ ಆಂಗ್ಲ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಕೆಯಾಗುವ ಪರ್ಯಾಯ ರೂಪಗಳನ್ನು ಕೊಡುತ್ತಾನೆ.

Zo-olo-gy = ಪ್ರಾಣಿವಿದ್ಯೆ, ಜೀವಜಂತುವಿದ್ಯೆ, ಪಶ್ವಾದಿಶಾಸ್ತ್ರ ಅದರಿಂದ ನಿಷ್ಪನ್ನವಾದ ರೂಪಗಳನ್ನು ಅದರ ಅಡಿಯಲ್ಲಿ ಕೊಡಲಾಗಿದೆ.

Zo-o-lo-gist = ಪಶ್ವಾದಿಶಾಸ್ತ್ರಜ್ಞ

Zo-o-logi-cal = ಪಶ್ವಾದಿಶಾಸ್ತ್ರ ಸಂಬಂಧ

ಇದರಂತೆ ಶಿಲ್ಪಶಾಸ್ತ್ರ, ಗಣಿತಶಾಸ್ತ್ರ, ವ್ಯಾಪಾರ, ರಸಾಯನಶಾಸ್ತ್ರ, ಭೂಗೋಳಶಾಸ್ತ್ರಗಳಿಗೆ ಸಂಬಂಧಿಸಿದ ಪದಗಳು ಈ ಕೋಶದಲ್ಲಿ ಬಂದಿವೆ. ಕೆಲವು ಶಬ್ದಗಳ ಅರ್ಥ ಸ್ಪಷ್ಟತೆಗಾಗಿ ಶಬ್ದಾರ್ಥ ನಿರೂಪಣೆ ತುಂಬ ಚೆನ್ನಾಗಿ ನೀಡಿದ್ದಾನೆ ಉದಾ -

Green = ಹಸುರು ; ಹುಲ್ಲಿನ ಮೈದಾನ : ಪಲ್ಲೆ: ಬಾಡದ ಹುಲ್ಲುನೆಲ ಹುಲ್ಲಿನಿಂದ ಹಚ್ಚಗೆ ಕಾಣುವ ನೆಲ

ಸಾಧಿತ ಪದಗಳನ್ನು ಮುಖ್ಯ ಉಲ್ಲೇಖವಾಗಿ ಕೊಟ್ಟಿಲ್ಲ. ಕೆಲವೆಡೆ ಮುಖ್ಯ ಉಲ್ಲೇಖ ಶಬ್ದಕ್ಕೆ ಸಮಾಸದಲ್ಲಿ ಸೇರುವ ಇತರ ಶಬ್ದಗಳನ್ನು ಅಕಾರಾದಿ ಕ್ರಮದಲ್ಲಿ ಕೊಟ್ಟಿದೆ ಉದಾ-

Moon	=	ಚಂದ್ರ
The waning	=	ನಷ್ಟಚಂದ್ರ
The gibbous moon	=	ಪಿಂಡಚಂದ್ರ
Moon - beam (-bem)	=	ಚಂದ್ರಕಿರಣ
Moon light (shine)	=	ಬೆಳದಿಂಗಳು

ಕೋಶದಲ್ಲಿ ಮೊದಲು ಮುಖ್ಯ ಶಬ್ದಗಳನ್ನು ಕೊಟ್ಟು ಅದರ ಮುಂದೆ ವಾಚಕರನ್ನು ನಿರ್ದೇಶಿಸಿ ಆಮೇಲೆ ಅರ್ಥಗಳನ್ನು ಕೊಡಲಾಗಿದೆ. ಶಬ್ದಗಳಿಗೆ ಒಂದಕ್ಕಿಂತ ಹೆಚ್ಚು ಅರ್ಥಗಳಿದ್ದಲ್ಲಿ ಅವುಗಳನ್ನು ಸಂಖ್ಯೆಗಳಿಂದ ಸೂಚಿಸಲಾಗಿದೆ. ಕ್ರಿಯಾಪದಗಳ ಸಕರ್ಮಕ, ಅಕರ್ಮಕ ಅರ್ಥಗಳನ್ನೂ ನಿರೂಪಿಸಿದೆ. ಮುಖ್ಯ ಶಬ್ದದಿಂದ ನಿಷ್ಪನ್ನವಾದ ಇತರ ರೂಪಗಳನ್ನೆಲ್ಲ ಅರ್ಥಗಳನ್ನು ಕೊಟ್ಟ ನಂತರ ಕೊಡಲಾಗಿದೆ. ಶಬ್ದಗಳ ಉಚ್ಚಾರಣೆಗಳನ್ನು ವಿವರಣೆ ಚಿಹ್ನೆಗಳಿಂದ ಸೂಚಿಸಲಾಗಿದೆ.

Blind ೧. ಕುರುಡ ೨. ಬುದ್ಧಿಗೇಡಿ, ವಿವೇಕ ಹೀನವಾದ ೩. ತಿಳಿಯದ, ಗುಪ್ತ

b. path ಕತ್ತಲುದಾರಿ ; b. Wrath ಅವಿವೇಕದ ಸಿಟ್ಟು

beb. to a thing - ಕಂಡುಕಾಣದಂತಿರು ; one born b- ಜನ್ಮಾಂಧ, ಹುಟ್ಟು ಕುರುಡ

V. t. r ಕುರುಡುಮಾಡು ; ೨. ಕತ್ತಲೆ ಮಾಡು ೩. ಕಂಗೆಡಿಸು

n. ತೆರೆ, ಪರದೆ, ಜಾಟು, ಅರಜಾಟು, ಚೀಕು

V. t. r. ಕಣ್ಣುಕಟ್ಟು; Blind -man's Buff.n ಕಣ್ಣಾಟ, ಕಣ್ಣುಮುಚ್ಚಾಲೆಯಾಟ

Blind ness - n ಕುರುಡುತನ ಅಜ್ಞಾನ, ಅವಿವೇಕ, ಬುದ್ಧಿಗೇಡಿತನ

ವೃತ್ತಿಗಳಿಗೆ ಸಂಬಂಧಿಸಿದ ಪದಗಳು ಕೋಶದಲ್ಲಿ ಬಂದಿವೆ.

ಉದಾ:

Poter. n ಕುಂಬಾರ ; Potter's wheel -ತಿಗುರಿ, ತಿಗರಿ

Pottery. n -ಕುಂಬಾರನ ಕೆಲಸ, ಗಡಿಗೆ, ಮಡಿಕೆ ಕುಂಬಾರನ ಕಾರಖಾನೆ

ಶಬ್ದಶಾಸ್ತ್ರ ಪರಿಣತನೂ, ವ್ಯಾಕರಣಕಾರನೂ ಆದ ಜೀಗ್ಲರ್ ರಚಿಸಿದ ಈ ಕೋಶವು ಈಗ ಏಳನೇ ಆವೃತ್ತಿಯನ್ನು ಕಂಡಿದೆ (೧೯೯೫). (ಏಶಿಯನ್ ಎಜ್ಯುಕೇಶನ್ ಸರ್ವಿಸ್‌ದವರು ಪುನರ್ಮುದ್ರಿಸಿ ಪ್ರಕಟಿಸಿದ್ದಾರೆ)೭೧೪ ಪುಟಗಳ ವ್ಯಾಪ್ತಿಯನ್ನು ಹೊಂದಿರುವ ಈ ಕೋಶ ೩೦ ಸಾವಿರಕ್ಕೂ ಹೆಚ್ಚು ಶಬ್ದಗಳಿಗೆ ಅರ್ಥಕೊಡಲಾಗಿದೆ. ಸಾಮಾನ್ಯಮಟ್ಟದ ವಿದ್ಯಾವಂತರಿಗೂ ಅರ್ಥವಾಗುವಂತೆ ಶಬ್ದಾರ್ಥದ ವಿವರಣೆ ಇರುವ ಈ ಕೋಶ ಕನ್ನಡಕ್ಕೆ ವಿಶಿಷ್ಟ ಕೊಡುಗೆಯಾಗಿದೆ.

ಕ್ರಿಸ್ತಾನುಜವಾಟ್ಸ ಕೋಶ

ಜರ್ಮನಾಯಿಂದ ಕನ್ನಡ ನಾಡಿಗೆ ಬಂದ ಮಿಶನರಿಗಳಲ್ಲಿ ವಾಟ್ಸರವರು ಒಬ್ಬರು. ಇವರು ಮಂಗಳೂರಿನ ಬಾಸೆಲ್ ಮಿಶನ್ ಕೇಂದ್ರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಕಾರ್ಯ ಪ್ರವೃತ್ತರಾದರು.

ವಾಟ್ಸ್‌ರ ಕೀರ್ತಿ ಶಾಶ್ವತವಾಗಿ ನಿಂತಿರುವುದು ಅವರು ಸಿದ್ಧಪಡಿಸಿದ ಇಂಗ್ಲಿಶ್-ಕನ್ನಡ ಕಿಸೆ ಕೋಶದಿಂದ (Pocket-Dictionary). ಈ ನಿಘಂಟು ಪ್ರಕಟವಾದದ್ದು ೧೯೬೩ ರಲ್ಲಿ. ಈ ನಿಘಂಟು ಕರ್ನಾಟಕದಲ್ಲೆಲ್ಲ ಅತ್ಯಂತ ಪ್ರಚುರವಾಗಿದೆ. ಇದನ್ನು ೧೯೮೫ ರಲ್ಲಿ 'ಏಶಿಯನ್ ಎಜ್ಯುಕೇಶನ್ ಸರ್ವಿಸ್'(A. E. S.)ದವರು ಮರು ಮುದ್ರಣ ಮಾಡಿದ್ದಾರೆ. ಪಿ. ಮಂಗೇಶರಾವ್ ಅವರು ಈ ಕೋಶವನ್ನು ಪರಿಷ್ಕರಿಸಿದ್ದಾರೆ. ೬೨೧ ಪುಟಗಳ ವ್ಯಾಪ್ತಿ ಇರುವ ಈ ಕೋಶದಲ್ಲಿ ಸುಮಾರು ೭ ಸಾವಿರಕ್ಕೂ ಹೆಚ್ಚು ಶಬ್ದಗಳಿಗೆ ಅರ್ಥಕೊಡಲಾಗಿದೆ. ಇವುಗಳಲ್ಲಿ ಸುಮಾರು ೪ ಸಾವಿರ ಮುಖ್ಯ ಉಲ್ಲೇಖಗಳು : ಮಿಕ್ಕವು ಉಪಉಲ್ಲೇಖಗಳಾಗಿವೆ.

ಈ ಕೋಶವು ಮುಖ್ಯವಾಗಿ ಸಾಮಾನ್ಯ ಓದುಗರ ಅಗತ್ಯತೆಯನ್ನು ಪೂರೈಸುವುದರ ಕಡೆಗೆ ಗಮನ ಕೊಡಲಾಗಿದೆ. ತನ್ನ ಕೋಶ ರಚನೆಯ ಉದ್ದೇಶದ ಬಗೆಗೆ ವಾಟ್ಸ್ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿಯೆ ಹೇಳಿದ್ದಾನೆ. The present English, kannada Dictionary has been prepared for the convenience of the general reader of the current literature-news paper, magazine or books[೨೦] ಈ ಕೋಶ ಸಿದ್ಧತೆಗೆ ಪೂರ್ವಸೂರಿಗಳಾದ ರೀವ್ ಮತ್ತು ಕಿಟೆಲ್‌ರು ಅನುಸರಿಸಿದ ರಚನಾ ಮಾದರಿಯನ್ನು ವಾಟ್ಸ್ ಅನುಸರಿಸಿದ್ದಾನೆ. ಕೋಶ ರಚನೆಗೆ ಸಾಮಗ್ರಿಗಳನ್ನು ಸಂಗ್ರಹಿಸುವಾಗ ಮಾಹಿತಿಗಳನ್ನು ಪಡೆದುಕೊಳ್ಳುವಾಗ ಭ. ಶಿವರಾಮು, ಕೆ. ಮಿಶ್ರಾ, ಕೆ. ರಾಮಕೃಷ್ಣಯ್ಯ, ಪಿ. ಪಂಡಿತ, ಎನ್. ಬಾಲಪಯ್ಯ, ಶಾಂತಪ್ಪ ಇಂತಹ ದೇಶಿಯ ಪಂಡಿತರ ಸಹಾಯವನ್ನು ಪಡೆದುಕೊಂಡಿದ್ದಾನೆ.

ತಾನು ನಿಘಂಟುವಿನಲ್ಲಿ ಉಪಯೋಗಿಸಿದ ಸಂಕೇತಗಳನ್ನು, ಸಂಕ್ಷೇಪಗಳನ್ನು ಕೋಶದ ಆರಂಭದಲ್ಲಿಯೇ ಕೊಟ್ಟಿದ್ದಾನೆ. ಉದಾ-R.C=Roman catholic, sup=superlative pt = past tence ಮುಂತಾದವುಗಳ (ಹೆಚ್ಚಾಗಿ ವ್ಯಾಕರಣ ವರ್ಗಗಳನ್ನು) ಪಟ್ಟಿಯನ್ನು ಕೊಟ್ಟಿದ್ದಾನೆ. ನಿಘಂಟನ್ನು ಬಳಸುವಾಗ ಇದು ತುಂಬ ಅನುಕೂಲವಾಗುತ್ತದೆ. ಜೀಗ್ಲರ್ ಬಳಸಿದ ಚಿಹ್ನೆಗಳನ್ನೇ ವಾಟ್ಸ್ ಬಳಸಿದ್ದಾನೆ.

ಈ ನಿಘಂಟಿನ ವೈಶಿಷ್ಟ್ಯವೆಂದರೆ ನಿಘಂಟಿನಲ್ಲಿ ಬಳಕೆಯಾದ ಎಲ್ಲ ಪದಗಳು ಇಂಗ್ಲಿಶ್‌ದ ದಪ್ಪ ಅಕ್ಷರದಲ್ಲಿವೆ (Capital letters) ಅದರಿಂದ ಸಾಧಿತವಾದ ರೂಪಗಳು ಸಣ್ಣ ಅಕ್ಷರದಲ್ಲಿವೆ. (Small letters) ಉದಾ-IMMOBILE,S ಅಚಲ, ಸ್ಥಿರ =lity,s ಸ್ಥೈರ್ಯ, ಅವಿಕಂಪತ್ವ =lize,v. ಗಟ್ಟಿಯಾಗಿ ನೆಡು, ಊರು: ಚಲಾವಣೆಯಲಿಲ್ಲದ ನಾಣ್ಯವನ್ನು ಮರಳಿ ಕೊಡುವುದು. ಒಂದು ಶಬ್ದಕ್ಕೆ ಒಂದಕ್ಕಿಂತ ಹೆಚ್ಚಿನ ಅರ್ಥಗಳಿಗೂ ಅರ್ಥ ಛಾಯೆಗೂ ಇರುವುದು ಸಾಧ್ಯ. ಇಂತಹ ಸಂದರ್ಭಗಳಲ್ಲಿ ಒಂದು ಶಬ್ದದ ಅರ್ಥಗಳನ್ನು, ಅರ್ಥ ಛಾಯೆಗಳನ್ನು ಹೆಚ್ಚು ಪ್ರಸಿದ್ಧವಾದ ಮತ್ತು ಬಹುಮುಖ್ಯವೆನಿಸುವ ಅರ್ಥಗಳನ್ನು, ಅರ್ಥಛಾಯೆಗಳನ್ನು ಮಾತ್ರ ಈ ನಿಘಂಟಿನಲ್ಲಿ ಕೊಡಲಾಗಿದೆ. ಇಂಗ್ಲಿಶ್ ಪದಕ್ಕಿರುವ ಕನ್ನಡದ ನಾನಾರ್ಥಗಳು ಕೊಡಲಾಗಿದೆ. ಉದಾ: KITTEN,S ಬೆಕ್ಕಿನ ಮರಿ: ಮೋಜುಗಾರ ಹುಡುಗಿ V. ಮರಿ

ಹಾಕು, ಇದು ಇಂಗ್ಲಿಶ್ ಪದಕ್ಕಿರುವ ಕನ್ನಡದ ಸಮಾನಾರ್ಥಕ ರೂಪಗಳನ್ನು ಮುಟ್ಟಿ ಉಲ್ಲೇಖಿಸಿದ ಮುಂದೆಯೇ ಇರುತ್ತವೆ. ಉದಾ- EM'ISSARY.S ಬೇಹಿಗ, ಗೂಢಚಾರ, ಪ್ರಣಿಧಿ, ಬೇಹುಕಾರ. ಹೀಗೆ ಆಯಾ ಪದರೂಪಗಳನ್ನು ಸ್ಪಷ್ಟವಾಗಿ ಉಲ್ಲೇಖಿಸುವುದರಿಂದ ಇಂಗ್ಲಿಶ್ ಭಾಷಾ ಕಲಿಕೆಗೆ ತುಂಬ ಸಹಾಯವಾಗುತ್ತದೆ. ವಾಟ್ಸನು ಯಾವ ಶಬ್ದಕ್ಕೂ ವ್ಯುತ್ಪತ್ತಿಯನ್ನು ಕೊಟ್ಟಿಲ್ಲ. ಪ್ರತಿ ಶಬ್ದದ ಮುಂದೆ ಅದರ ವ್ಯಾಕರಣ ವರ್ಗವನ್ನು ನೀಡಲಾಗಿದೆ.

ಈ ಕೋಶದ ಅಧ್ಯಯನಕ್ಕೆ ನೆರವಾಗುವಂತಹ ಎರಡು ಅನುಬಂಧಗಳನ್ನು ಸೇರಿಸಲಾಗಿದೆ. ಮೊದಲನೆಯ ಅನುಬಂಧದಲ್ಲಿ ಸಂಕ್ಷೇಪಗಳ ವಿವರವಿದೆ. ಇದು ವ್ಯಾಕರಣ ವರ್ಗಗಳ ಸಂಕ್ಷೇಪವಲ್ಲ ವಿಶಿಷ್ಟ ಪದ ಪುಂಜಗಳ ಸಂಕ್ಷೇಪರೂಪ. ಉದಾ-

A.D.C.= Aide-de-camp	ಸೇನಾನಿಯ ಹಸ್ತಕ
Dr = Debtor, Doctor, Drem	ಸಾಲಿಗ, ಪಂಡಿತ ಡ್ರೆಮ್‌ತೂಕ ಇಲ್ಲವೆ ಅಳತೆ
Gent = gentleman	ಸಭಾಪೂಜ್ಯ
A. M.= Anti meridiem	ಪೂರ್ವಾಹ್ನ

ಅನುಬಂಧ ಎರಡರಲ್ಲಿ ಕೋಶದಲ್ಲಿ ಬಳಕೆಯಾದ ಲ್ಯಾಟಿನ್ ಹಾಗೂ ಫ್ರೆಂಚ್ ರೂಪಗಳು ಯಾವ ಅರ್ಥದಲ್ಲಿ ಅಭಿವ್ಯಕ್ತವಾಗುತ್ತವೆ ಎಂಬುದನ್ನು ತಿಳಿಸಿದ್ದಾನೆ.

Cachets = ರಾಜಮುದ್ರೆ (F)

Hauteurs = ಉದ್ದಟತನ (F)

Advalorem.ad = ಸರಕುಗಳ ಬೆಲೆಗನುಸಾರವಾಗಿ (L)

Nisi,s = ನಿಶಿಂ, ಹೊರತು ಮೀ (L)

ವಾಟ್ಸ್ ಕೊಟ್ಟಿರುವ ಇಂತಹ ರೂಪಗಳು ತುಂಬ ಅರ್ಥಪೂರ್ಣವಾಗಿವೆ. ವಿದ್ಯಾರ್ಥಿಗಳಿಗೆ ಭಾಷಾಧ್ಯಯನದ ಆಸಕ್ತರಿಗೆ ತುಂಬ ನೆರವಾಗುತ್ತದೆ. ವಾಟ್ಸ್ ತುಂಬ ಶ್ರಮವಹಿಸಿ ಸಿದ್ಧಪಡಿಸಿದ ಈ ಕಿಸೆ ಕೋಶ ಶಾಲಾ ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ ತುಂಬ ಉಪಯುಕ್ತವಾಗಿರುವುದರಿಂದ ಕನ್ನಡಕ್ಕೆ ವಿಶಿಷ್ಟವಾದ ಕೊಡುಗೆಯೇ ಆಗುತ್ತದೆ.

ಹೀಗೆ ನಾಲ್ಕು ಮಿಶನರಿಗಳು ಇಂಗ್ಲಿಶ್ -ಕನ್ನಡ ದ್ವಿಭಾಷಾ ಕೋಶಗಳನ್ನು ಸಂಕಲಿಸಿ ಪ್ರಕಟಿಸಿದರು.

ಇವುಗಳಲ್ಲಿ ರೀವ್ ಕೋಶವು ಗಾತ್ರದ ದೃಷ್ಟಿಯಿಂದ ತುಂಬ ವಿಸ್ತಾರವಾಗಿದೆ. ಗ್ಯಾರೆಟ್ ಕೋಶ ರೀವ್‌ಕೋಶದ ಪರಿಷ್ಕರಣ ಮತ್ತು ಸಂಕ್ಷೇಪ ರೂಪ. ಜೀಗ್ಲರ್ ಕೋಶವು ಶಾಲಾ ಬಾಲಕರನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾದರೆ ವಾಟ್ಸ ಕೋಶ ಸಾಮಾನ್ಯ ಓದುಗರನ್ನು ಅನುಲಕ್ಷಿಸಿ ರಚಿತವಾಗಿದೆ. ಈ ಎಲ್ಲ ಮಿಶನರಿಗಳ ಕೋಶ ರಚನೆ ವಿಭಿನ್ನ ದೃಷ್ಟಿಕೋನಗಳಿಂದ ಕೂಡಿದ್ದರೂ ಅವರ ಮುಖ್ಯ ಉದ್ದೇಶ ಧರ್ಮಪ್ರಚಾರ. ಅದಕ್ಕಾಗಿ ವಿವಿಧ ವಲಯಗಳನ್ನು ಗಮನದಲ್ಲಿಟ್ಟುಕೊಂಡು ಕೋಶ ರಚಿಸಿದರು. ಇದರಿಂದ ಪರೋಕ್ಷವಾಗಿ ಕನ್ನಡಿಗರಿಗೆ ಇಂಗ್ಲಿಶ್ ಕಲಿಕೆ ಮತ್ತು ಬಳಕೆಗೆ ತುಂಬ ಅನುಕೂಲವಾಯಿತು ಎಂಬುದು ಗಮನಿಸಬೇಕಾದ ಸಂಗತಿ.

೩.೦೩ ಕನ್ನಡ-ಇಂಗ್ಲಿಶ್ ಕೋಶಗಳು

ರೀವ್ ಕೋಶ

ರೀವ್ ಸಂಕಲಿಸಿದ ಕನ್ನಡ-ಇಂಗ್ಲಿಶ್ ನಿಘಂಟು (೧೮೩೨) ಗುಣ ಮತ್ತು ಗಾತ್ರದಲ್ಲಿ ಆತನ ಇಂಗ್ಲಿಶ್-ಕನ್ನಡ ನಿಘಂಟಿಗಿಂತಲೂ (೧೮೨೪) ಮಹತ್ವವಾದದ್ದು. ಕನ್ನಡ-ಇಂಗ್ಲಿಶ್ ಕೋಶದ ವಿಚಾರದಲ್ಲಿಯೂ ರೀವನೇ ಮೊದಲಿಗನಾಗಿದ್ದಾನೆ. ರೀವ್‌ನ ಉದ್ದೇಶವು ಕೇವಲ ಶಬ್ದಾರ್ಥವನ್ನು ಹೇಳುವುದಿರದೆ ಕನ್ನಡ ಭಾಷೆ ಹಾಗೂ ಜನಜೀವನದ ಹೆಚ್ಚಿನ ಪರಿಚಯವನ್ನು ವಿದೇಶಿಯರಿಗೆ ಮಾಡಿಕೊಡುವುದಾಗಿತ್ತು (ಆತನ ಪ್ರಥಮ ಕೋಶದ ಉದ್ದೇಶವು ಇದೇ ಆಗಿತ್ತು). ಬ್ರೌನ್ ವಿರಚಿತ ತೆಲುಗು, ಇಂಗ್ಲಿಶ್ ಕೋಶದ ಮಾದರಿಯಲ್ಲಿ ರೀವ್ ತನ್ನ ಕಾರ್ಯವನ್ನು ಮುಂದುವರಿಸಿದನು. ಹಳಗನ್ನಡ ಕೋಶಗಳಾದ ಚತುರಾಸ್ಯ ನಿಘಂಟು ಕರ್ಣಾಟಕ ಶಬ್ದಮಂಜರಿ, ಕಬ್ಬಿಗರ ಕೈಪಿಡಿ ಇವುಗಳನ್ನು ಪರಿಶೀಲಿಸಿದ್ದನು. ಆತನ ಕಾಲದಲ್ಲಿ ಹಲವಾರು ಪ್ರಾಚೀನ ಕಾವ್ಯಗಳು ಬೆಳಕನ್ನೇ ಕಂಡಿರಲಿಲ್ಲ. ರೀವ್ ಅವುಗಳ ಹಸ್ತ ಪ್ರತಿಗಳನ್ನು ಪರಿಶೀಲಿಸಿ ಆ ಮೂಲಕ ಅನೇಕ ಪ್ರಯೋಗಗಳನ್ನು ಆತ ಸಂಗ್ರಹಿಸಿದ್ದನಾದರೂ ಅವನ್ನು ಕೋಶದಲ್ಲಿ ಸೇರಿಸಲಿಲ್ಲ. ಹಳಗನ್ನಡ ಕೃತಿಗಳನ್ನು ವೀಕ್ಷಿಸಿ ಅವುಗಳಲ್ಲಿರುವ ಎಲ್ಲ ಶಬ್ದಗಳನ್ನು ತಾನು ಕೊಟ್ಟಿಲ್ಲವೆಂದೂ ಪೀಠಿಕೆಯಲ್ಲಿ ಹೇಳಿದ್ದಾನೆ.[೧೧] ಆ ಕೆಲಸವನ್ನು ಮುಂದೆ ಕಿಟೆಲ್ ಬಹುಮಟ್ಟಿಗೆ ಕೈಕೊಂಡನೆಂಬುದನ್ನು ಇಲ್ಲಿ ನೆನೆಯಬಹುದು. ಕೋಶರಚನಾ ಕಾರ್ಯದಲ್ಲಿ ತನಗೆ ಪ್ರಾಚೀನ ಕೃತಿಗಳು ದೊರೆಯದೆ ಹೋದುದು, ಪ್ರತಿಕಾರರಿಂದುಂಟಾದ ಸ್ಖಾಲಿತ್ಯಗಳು, ತುಲನೆ ಮಾಡಿನೋಡಲು ಇಂಥವೇ ಕೃತಿಗಳು ಇಲ್ಲದಿರುವುದು ಮತ್ತು ಭಾಷಾಶಾಸ್ತ್ರ ತಿಳುವಳಿಕೆಯ ಸಾಹಿತ್ಯಿಕ ಸಂಶೋಧನೆಯ ದೃಷ್ಟಿಯೂ ಇರುವಂಥ ದೇಶೀ ಪಂಡಿತರು ಸಿಕ್ಕದಿದ್ದುದು ಇವುಗಳಿಂದ ತನ್ನ ಕಾರ್ಯದಲ್ಲಿ ಸಮರ್ಪಕತೆ ಬರಲಿಲ್ಲವೆಂದೂ ಕೆಲವಾರು ಲೋಪ ದೋಷಗಳುಂಟಾಗಿವೆ ಎಂದೂ ಪ್ರಾಮಾಣಿಕವಾಗಿ ಹೇಳಿಕೊಂಡಿದ್ದಾನೆ.[೧೨] ಹೊಸಗನ್ನಡದ ಪ್ರಥಮ ಕೋಶಕಾರನಾದ ರೀವ್ ಪಟ್ಟ ಶ್ರಮ ಗೌರವಾನ್ವಿತವಾದುದು. ಕನ್ನಡಕ್ಕೆ ಅವನಿಂದ ಸಂದ ಮಹತ್ವದ ಕಾಣಿಕೆಯೆಂದರೆ ಮುಂದಿನ ಎಲ್ಲ ಕೋಶಕಾರರಿಗೂ ಸೂಕ್ತವಾದ ತಳಹದಿಯನ್ನೊದಗಿಸಿದನೆಂಬುದೇ ಆಗಿದೆ.

ಕನ್ನಡ -ಇಂಗ್ಲಿಷ್ ಬೃಹತ್ ನಿಘಂಟನ್ನು ರಚಿಸುವ ಹೊಣೆ ಹೊತ್ತ ಈ ವಿದ್ವಾಂಸನು ತಾನು ಅದನ್ನು ನಿಸ್ವಾರ್ಥ ದೃಷ್ಟಿಯಿಂದ ಮತ್ತು ಸೇವಾಭಾವದಿಂದ ಕೈಕೊಂಡೆನೆಂಬುದು ಹೀಗೆ ತಿಳಿಸಿದ್ದಾನೆ. 'ಮುಖ್ಯವಾಗಿ ಕನ್ನಡವನ್ನು ಪ್ರಾಂತೀಯ ಭಾಷೆಯಾಗಿ ಬಳಸುತ್ತಿರುವ ಜನರ ಬೌದ್ಧಿಕ ಮತ್ತು ಆಧ್ಯಾತ್ಮಿಕ ಸುಧಾರಣೆಯನ್ನು ಸಾಧಿಸುವುದಕ್ಕೆ, ತೀವ್ರಗೊಳಿಸುವುದಕ್ಕೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸುವುದು ಮತ್ತು ಆಂಶಿಕವಾಗಿ ಇದು ಸಾರ್ವಜನಿಕ ಸೇವೆಗೆ ಅನುಕೂಲಕರವೂ ಉಪಯುಕ್ತವೂ ಆಗಿ ಪರಿಣಮಿಸುವ ಸಂಭವ ಇದ್ದುದು. ಇವೇ ನನ್ನನ್ನು ಈ ಕಾರ್ಯಕ್ಕೆ ಚೋದಿಸಿದ ಹಾಗೂ ಅದಕ್ಕೆ ಟೊಂಕಕಟ್ಟಿ ನಿಲ್ಲುವಂತೆ ಮಾಡಿದ ಪ್ರೇರಣೆಗಳು'[೧೩] ರೀವ್ ಕೋಶರಚನಾ ಕಾರ್ಯದ ಬಗೆಗೆ ಹೀಗೆ ಹೇಳಿದ್ದಾನೆ.

'The method adopted in collecting and orranging the materials of which the present work is composed has been briefly as follows. Two clever man were employed in culling from the ' Amara-Cosha' and other sanscrit vocabularies such terms as are current among classical writers on science and mythology ; two in writing on the margins of the teloogoo and Tamil Dictionaries corresponding carnatac words ; two in the collection, under appropriate heads, of radicals, synonyms technicalities, peculiar phrases, proverbs & c & c occurring in ancient and modern vocabularies and grammars or marked down for the purpose in other books, during the progress of a long course of reading. The names of the articles of trade and commerce, and those of the implements of husbandry, the tools and apportuses of mechanics and artists and the fruits, flowers, grains & C & C cultivated by gardeners and farmers, were obtained by securing, in succession, the attendance of a person tolerably informed, from each of these trades or callings'[೧೪] ಕನ್ನಡಿಗರಲ್ಲಿ ಬಳಕೆಯಲ್ಲಿರುವ ಸಂಸ್ಕೃತ, ಹಿಂದುಸ್ತಾನೀ ಮತ್ತು ತೆಲುಗು ಶಬ್ದಗಳನ್ನು ಅದರಂತೆ ಹಳಗನ್ನಡ ಕಾವ್ಯಗಳಲ್ಲಿರುವ ಶಬ್ದಗಳನ್ನೂ ಎಷ್ಟರ ಮಟ್ಟಿಗೆ ಉಳಿಸಿಕೊಳ್ಳಬೇಕೆನ್ನುವುದರ ಬಗೆಗೆ ಅವನಿಗೆ ಸಂದಿಗ್ಧತೆ ಉಂಟಾಯಿತು. ತಾನು ಒಳನಾಡಿನಲ್ಲಿರದೇ ಬಹುಭಾಷಿಕರಿರುವ ಬಳ್ಳಾರಿ, ಬೆಂಗಳೂರುಗಳಲ್ಲಿ ವಾಸವಾಗಿದ್ದದ್ದೇ ಇದರ ಕಾರಣವೆಂದು ಒಪ್ಪಿಕೊಂಡಿದ್ದಾನೆ. ತನ್ನ ಕೋಶದಲ್ಲಿ ಅಚ್ಚಗನ್ನಡ ಪದಗಳು ಕೈಬಿಟ್ಟಿರುವುದರ ಬಗೆಗೆ ವಿಷಾದಿಸಿದ್ದಾನೆ.

ರೀವ್ ಈ ಕೋಶದಲ್ಲಿ ಶಬ್ದಾರ್ಥಗಳನ್ನು ಹೇಗೆ ಕೊಟ್ಟಿರುವನೆಂಬುದಕ್ಕೆ ಕೆಲವು ಉದಾಹರಣೆಗಳನ್ನು ಕೊಡಲಾಗಿದೆ.

ಬಂಟ - s. n. A hero or warrior, a foot soldier, a servant, apawn at chess

ಬಂಡ - adj obstinate, perverse, forward, disobedient unfeeling, selfish, s. n. wool

ಬಂಡಣ - s. n. war, combat, fight, battle ಹಲವು ಸಂದರ್ಭಗಳಲ್ಲಿ ಒಂದೊಂದು ಶಬ್ದದ ವಿವಿಧ ಕನ್ನಡ ರೂಪಾಂತರಗಳನ್ನು ಕೊಟ್ಟು ಅರ್ಥವನ್ನು ಸಮರ್ಪಕವಾಗಿ ವಿವರಿಸಿದ್ದಾನೆ. ಒಂದು ಶಬ್ದಕ್ಕೆ ಸಂಬಂಧಿಸಿದಂತೆ ಹಲವಾರು ಪೂರಕ ಅಂಶಗಳನ್ನು ಕೊಟ್ಟಿರುವುದು ತುಂಬ ಸೂಕ್ತವಾಗಿದೆ.

ಆಟ - A play, dance, game ಅದಕ್ಕೆ ಸಂಬಂಧಿಸಿದ ಪದಗಳನ್ನು ಅದರ ಅಡಿಯಲ್ಲಿ ಕೊಡಲಾಗಿದೆ. ವೀರಾಟ, ಕುಣಿದಾಟ, ಹಣಿದಾಟ, ಕೋಲಾಟ, ಡೊಂಬರಾಟ, ಆಟಗಾರ್ತಿ, ಆಟಕಾರ್ತಿ, ಆಟಗಾರ, ಆಟಹೂಡು, ಆಟಕೊ, ಆಟಕಿಕೊಳ್ಳು, ಆಟಕಿಸು, ಆಟಗೂಳಿ ಆಟವಾಡು, ಆಟಾಡಿಸು, ಆಟವಾಡಿಸು, ಆಟಾಳಿ, ಆಟವಾಟವಾದ್ಯ ಆ ಕಾಲದಲ್ಲಿ ರೂಢಿಯಲ್ಲಿದ್ದ ಆಟದ ಹೆಸರುಗಳನ್ನು ಕೊಟ್ಟಿದ್ದಾನೆ. ಏಕಾರ್ಥ ರೂಪಗಳನ್ನು ಮುಖ್ಯ ನಮೂದುವನ್ನಾಗಿ ಅದರ ಅರ್ಥವನ್ನು ಇಂಗ್ಲಿಶಿನಲ್ಲಿ ಹೇಳಲಾಗಿದೆ.

ಉದಾ-

ಆಟಂಪ, ಆಟಂಪು, ಆಟೋಪ s. n. controul, subjection ಕೆಲವು ಶಬ್ದಗಳ ಅರ್ಥಗಳನ್ನು ವಿವರಿಸುವಾಗ ಬಳಕೆಯ ಸಂದರ್ಭಗಳನ್ನು ಕೊಡಲಾಗಿದೆ.

ಉದಾ-

ಅಂತು Thus, so, in that manner, s. n. total amount aggregate

ಅಂತುಯೇನಾಯಿತು, ಅಂತುಯಿಷ್ಟಾಯಿತು,

ನನ್ನ ಲೆಖ್ಖವೆಲ್ಲವು ಅಂತುಯಿಷ್ಟಾಯಿತು.

- ನಾನಂತೂ ಬರುವುದಿಲ್ಲ ನೀನು ಬೇಕಾದರೆ ಹೋಗು

-ನನಗಂತೂ ಅವನ ಸಂಗಡ ಹೋಗುವುದಕ್ಕಿಂತ ಶೀರುವುದಿಲ್ಲ

ಇಂತಹ ಭಾಷಾ ಬಳಕೆಯ ಸಂದರ್ಭ ಹಾಗೂ ವಾಗ್ರೂಢಿಗಳಿಂದ ವಿದೇಶಿಯರಿಗೆ ಹಾಗೂ ಕನ್ನಡೇತರರಿಗೆ

ಕನ್ನಡವನ್ನು ಕಲಿಯಲು, ಕನ್ನಡ ಭಾಷೆಯ ಸ್ವರೂಪವನ್ನು ತಿಳಿದುಕೊಳ್ಳಲು ಸುಲಭವಾಯಿತು. ಕೆಲವು ವೇಳೆ ಶಬ್ದಕ್ಕೆ ಅರ್ಥ ಕೊಡುವಾಗ ಅಗತ್ಯಕ್ಕಿಂತ ಹೆಚ್ಚಿನ ವಿವರಗಳನ್ನು ಒದಗಿಸಿದ್ದುದು ಈ ಕೋಶದ ದೋಷ ವೆನ್ನುವುದಕ್ಕಿಂತಲೂ ಆತನಿಗೆ ಮಾಹಿತಿಗಳ ಕೊರತೆ ಇತ್ತು.

ಉದಾ-

ಅಂತೀ s. n. Arow or string of oxen tied abreast and made to move circularly round a pillar in treading out corn, placed for that purpose under their feet ಅಂತಿಯಿಂದ ಸಾಧಿತ ಪದಗಳನ್ನು ಕೊಡುವಾಗ ಅಂತೀಕಟ್ಟು, ಅಗುಳಂತೀ, ಹಸಂತೀ ಎಂದು ಹೇಳಿ ಬಾಣಂತೀ, ಬಾಳಂತೀ, ಏನಂತಿ ಎಂಬ ಅನಗತ್ಯ ರೂಪಗಳನ್ನು ಅಂತಿ ಅಡಿಯಲ್ಲಿಯೇ ಕೊಟ್ಟಿದ್ದಾನೆ.

ಕನ್ನಡವರ್ಣಮಾಲೆಗೆ ಬಳಸಿದ ರೋಮನ್ ಲಿಪಿಗಳ ಪಟ್ಟಿಯನ್ನು ಕೋಶದ ಪ್ರಾರಂಭದಲ್ಲಿ ಕೊಡಲಾಗಿದೆ ಅವುಗಳಲ್ಲಿ

ಋ - roo,

ೠ - roo

ಷ - sha

ಛ - chha,

ಞ - ghya

ಹೀಗೆ ಲಿಪೀಕರಿಸಿದ್ದಾನೆ. ಬಹುಶಃ ಇವು ಆ ಕಾಲದ ಉಚ್ಚಾರಣೆಯಲ್ಲಿರಬೇಕು.

ಕನ್ನಡ ಪದಗಳಿಗೆ ಅರ್ಥಗಳನ್ನು ಕೊಡುವಾಗ ಸಂದರ್ಭಕ್ಕೆ ತಕ್ಕಂತೆ ಗಾದೆ, ನುಡಿಗಟ್ಟುಗಳನ್ನು ಕೊಡಲಾಗಿದೆ. ರೀವ್ ರೂಢಿಯಲ್ಲಿದೆಯೆಂದು ಕಂಡುಕೊಂಡ (ಅಥವಾ ಕೆಲವು ವೇಳೆ ರೂಢಿಯಲಿಲ್ಲದ) ಅನ್ಯಭಾಷಾ ಶಬ್ದಗಳನ್ನು ತನ್ನ ಕೋಶದಲ್ಲಿ ಸೇರಿಸಿಕೊಂಡಿದ್ದರೂ ಕೋಶದಲ್ಲಿ ಆ ಶಬ್ದಗಳ ನಿಷ್ಪತ್ತಿಯ ಬಗೆಗೆ ಮತ್ತು ಮೂಲದ ಬಗೆಗೆ ಯಾವ ಸೂಚನೆಯನ್ನೂ ಕೊಡದಿರುವುದರಿಂದ ಆ ಕೋಶದ ಶಬ್ದಗಳೆಲ್ಲವೂ ಕನ್ನಡವೆಂದೂ ಅನ್ಯಭಾಷೆಯವರು ಮತ್ತು ಅನ್ಯಭಾಷಾ ಕೋಶಕರ್ತರು ಭಾವಿಸುವಂತಾಗಿದೆ. ಅರ್ಥಕೊಟ್ಟರಷ್ಟರಲ್ಲಿಯೇ ತನ್ನ ಉದ್ದೇಶವು ಸಾಧಿತವಾಗುತ್ತದೆಂಬ ದೃಷ್ಟಿಯಿಂದ ರೀವ್‌ನು ನಿಷ್ಪತ್ತಿಯನ್ನು ಕೊಡಲು ಹೊರಟಿಲ್ಲವೆನ್ನಬಹುದು. ಕನ್ನಡ ಭಾಷೆಯನ್ನು ಸಾಕಷ್ಟು ಅಧ್ಯಯನ ಮಾಡಿದ ರೀವ್ ಕನ್ನಡದ ವಿವಿಧ ಪ್ರಭೇದಗಳನ್ನು ಗುರುತಿಸಿದ್ದನು ಎಂಬುದರ ಬಗೆಗೆ ಅವನ ಕೋಶದ ಪ್ರಸ್ತಾವನೆಯಿಂದ ತಿಳಿದುಬರುತ್ತದೆ. ಕನ್ನಡ ನಾಡಿನ ಪರಿಸರ, ಜೀವನಕ್ರಮದ ಬಗೆಗೆ ಸಾಕಷ್ಟು ಮಾಹಿತಿ, ಕನ್ನಡದ ಸಾಂಸ್ಕೃತಿಕ

ಪರಂಪರೆಯ ತಿಳಿವು ಮುಂತಾದವುಗಳಿಲ್ಲದೆ ಇಷ್ಟು ದೊಡ್ಡ ಕೋಶದ ಅರಿವು ಅಸಾಧ್ಯ. ಕೋಶಸಿದ್ಧತೆಗಾಗಿ ಕನ್ನಡವನ್ನು ಚೆನ್ನಾಗಿ ಬಲ್ಲ ಆಯಾ ಪ್ರದೇಶವನ್ನು ಪ್ರತಿನಿಧಿಸುವ ಹಳಬಜನ ದೇಶಿಯ ವಿದ್ವಾಂಸರನ್ನು ಸಹಾಯಕರನ್ನಾಗಿ ತೆಗೆದುಕೊಂಡಿದ್ದನು.

ಕೋಶರಚನೆಯಲ್ಲಿ ಪದಗಳ ಸಂಗ್ರಹ ಅವುಗಳನ್ನು ಜೋಡಿಸುವ ಕ್ರಮ ಮತ್ತು ಅರ್ಥಗಳನ್ನು ನಿರೂಪಿಸುವ ತಂತ್ರ ಮೊದಲಾದ ವಿಚಾರಗಳಲ್ಲಿ ರೀವ್‌ನ ಸಾಧನೆ ಅಪೂರ್ವವಾದುದು. ಅವನ ಈ ರಚನಾ ವಿಧಾನ ನಿಘಂಟು ಕ್ಷೇತ್ರದಲ್ಲಿ ಹೊಸ ಅಲೆಯನ್ನುಂಟುಮಾಡಿತು. ಇವನ ನಂತರ ಬಂದ ಪ್ರಬಲ ಕನ್ನಡ ನಿಘಂಟುಕಾರ ಕಿಟೆಲ್‌ರು ರೀವ್‌ನ ನಿಘಂಟುಗಳನ್ನು ನೋಡಿ ಈ ರೀತಿ ಉದ್ಗರಿಸಿರು Considering the conditions of kannada scholarship when it reeve's dictionary was compiled, Mr.William Reeve's work was wonderfull production[೧೫] ಕನ್ನಡ ಇಂಗ್ಲಿಶ್ ಬೃಹತ್ ನಿಘಂಟನ್ನು ರಚಿಸುವಾಗ ಕಿಟೆಲ್‌ನಿಗೆ ರೀವ್ ಕೋಶ ಮಹತ್ವದ ಆಕರವಾಯಿತು. ಇದು ಮೊದಲು ಕೋಶವಾದುದರಿಂದ ಲೋಪದೋಷಗಳಿರುವುದು ಸಹಜವೇ ಆಗಿದೆ. ಮುಂದಿನ ಕೋಶಕಾರರು ಅದನ್ನು ಪರಿಷ್ಕರಿಸಿದರು. ಮುಂದೆ ಕಿಟೆಲ್ ನಿಘಂಟು ಬಂದಾಗ ಅದರಷ್ಟು ಪರಿಪೂರ್ಣತೆಯನ್ನು ಪಡೆಯದ ರೀವ್‌ನ ಕೋಶಗಳು ಹಿಂದೆ ಸರಿದವು. ಹಾಗೆಂದು ರೀವ್‌ನ ಪ್ರಯತ್ನ ವ್ಯರ್ಥವೆನ್ನಲು ಸಾಧ್ಯವಿಲ್ಲ. ಎಲ್ಲ ಮಿತಿಗಳೊಡನೆ ರೀವ್‌ನ ಕೋಶಗಳು ಸುಮಾರು ಶತಮಾನದಷ್ಟು ಕಾಲ ಕನ್ನಡ ಭಾಷಾಧ್ಯಯನಕ್ಕೆ ಆಧಾರ ಗ್ರಂಥಗಳಾದವು. ಇಂಗ್ಲಿಶ್-ಕನ್ನಡ, ಕನ್ನಡ-ಇಂಗ್ಲಿಶ್ ಕೋಶಗಳ ರಚನೆಯಿಂದಾಗಿ ದ್ರಾವಿಡ ಭಾಷಾ ನಿಘಂಟುಗಾರರಲ್ಲಿ ರೀವ್ ಕನ್ನಡವನ್ನು ಪ್ರತಿನಿಧಿಸುವವರಲ್ಲಿ ಮೊದಲಿಗನಾದನು.

ಮದ್ರಾಸಿನ ಗವ್ನರ್ನ್‌ಮೆಂಟ್ ಗ್ಯಾಜಿಟೆರ್ ಪ್ರೆಸ್‌ನಿಂದ ೧೮೩೨ ರಲ್ಲಿ ಈ ಕೋಶ ಪ್ರಕಟವಾಯಿತು. ೧೪೩೦ ಪುಟಗಳಷ್ಟು ವ್ಯಾಪ್ತಿಯನ್ನೊಳಗೊಂಡಿದೆ. ನಂತರ ೧೯ ರಿಂದ ೧೯ ರವರೆಗೆ ಏಶಿಯನ್ ಎಜ್ಯುಕೇಶನ್ ಸರ್ವಿಸ್‌ದವರು ಈ ಕೋಶವನ್ನು (ಸ್ಯಾಂಡರ್ ಸನ್ ಪರಿಷ್ಕರಿಸಿದ) ಪುನರ್ ಮುದ್ರಿಸಿದ್ದಾರೆ.

ಗ್ಯಾರೆಟ್ ಕೋಶ

ವಿಲ್ಯಂ ರೀವ್‌ನ ಇಂಗ್ಲಿಶ್- ಕನ್ನಡ ಕೋಶವನ್ನು ಪರಿಷ್ಕರಿಸಿದ ಗ್ಯಾರೆಟ್. ಆತನ ಕನ್ನಡ-ಇಂಗ್ಲಿಶ್ ಕೋಶವನ್ನು ಪರಿಷ್ಕರಿಸಿದ. ಅದು 'A manual Canarese and English Dictionary' ಎಂಬ ಹೆಸರಿನಿಂದ ೧೮೭೨ ರಲ್ಲಿ ಪ್ರಕಟವಾಯಿತು. ರೀವ್ ಕೋಶವು ಹಳಗನ್ನಡ ಹಾಗೂ ಸಂಸ್ಕೃತ ಶಬ್ದಗಳಿಂದ ನಿಬಿಡವಾಗಿತ್ತು. ವಿದ್ಯಾರ್ಥಿಗಳಿಗೆ ಅದು ಉಪಯುಕ್ತವಾಗಿರಲಿಲ್ಲ. ಅದು ಕಂಡು ಗ್ಯಾರೆಟ್ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಪರಿಷ್ಕರಿಸುವುದಾಗಿ ಪ್ರಸ್ತಾವನೆಯಲ್ಲಿ ಹೇಳಿದ್ದಾನೆ.[೧೬] ಗ್ಯಾರೆಟ್‌ನಿಗೆ ರೀವ್ ಕೋಶ ಆಧಾರವಾಗಿದ್ದರೂ ಶಬ್ದಾರ್ಥಗಳ ನಿರೂಪಣೆಯಲ್ಲಿ ತನ್ನ ಸಾಮರ್ಥ್ಯ ಮತ್ತು ವಿದ್ವತ್ತನ್ನು ಪ್ರದರ್ಶಿಸಿದ್ದಾನೆ. ಈ ಕೋಶದಲ್ಲಿ ಶಬ್ದಾರ್ಥಗಳು ಹೀಗೆ ಕೊಡಲ್ಪಟ್ಟಿವೆ.

ತೀವ್ರ -haste, expedition ; Adj ; Quick, speedy

ಬಾಧ್ಯ - relationship - obligatory ; duty ; Adj ; related to

ಹೀಗೆಯೇ ರಾಶಿ, ರಾಹು, ರೂಢಿ, ರುಚಿ ಮುಂತಾದ ಶಬ್ದಗಳಿಗೆ ಏಳೆಂಟು ಪಂಕ್ತಿಗಳಲ್ಲಿ ಅರ್ಥವನ್ನು ವಿವರಿಸಿಲಾಗಿದೆ. ಈತನ ನಿಘಂಟಿನಲ್ಲಿ ಒಟ್ಟು ಪದ ಸಂಗ್ರಹ ೧೮೦೦೦. ಈ ನಿಘಂಟಿನ ಮೂರನೆಯ (ಕೊನೆಯ) ಮುದ್ರಣವು ಕ್ರಿ. ಶ. ೧೮೮೬ ರಲ್ಲಿ ಮಂಗಳೂರಿನ ಬಾಸೆಲ್ ಮಿಶನ್‌ನಿಂದ ಪ್ರಕಟವಾಯಿತು. ಉತ್ತಮ ಶಾಲಾ ನಿಘಂಟು' ಎಂದೇ ಇದಕ್ಕಿರುವ ಖ್ಯಾತಿ.

ಗ್ಯಾರೆಟ್‌ರ ಎರಡೂ ಕೋಶಗಳು ರೀವ್ ಕೋಶಗಳನ್ನೇ ಅವಲಂಬಿಸಿ ರಚಿತವಾಗಿವೆ. ರೀವ್ ಕೋಶದಲ್ಲಿಯ ಇತಿಮಿತಿಗಳನ್ನು ಇವನು ಪರಿಷ್ಕರಿಸಲಿಲ್ಲ ; ಶಾಲಾ ಕೋಶಗಳೆಂದು ಕರೆದರೂ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟಕ್ಕೆ ತಕ್ಕಂತೆ ಇವು ರಚಿತವಾಗಿಲ್ಲ ಜೀಗ್ಲರ್, ಬ್ಯುಚರ್, ವಾಟ್ಸ್ ಕೋಶಗಳು ವಿದ್ಯಾರ್ಥಿಗಳ, ಶ್ರೀ ಸಾಮಾನ್ಯರ ಅವಶ್ಯಕತೆಗಳನ್ನು ಈಡೇರಿಸುವುದರಿಂದ ಪುನರ್ ಮುದ್ರಣಗೊಂಡವು ಆದರೆ ಗ್ಯಾರೆಟ್ ಕೋಶಗಳಿಗೆ ಆ ಭಾಗ್ಯ ಬರಲಿಲ್ಲ.

ಡೇನಿಯಲ್ ಸ್ಯಾಂಡರ್‌ಸನ್ ಅವರ ರೀವ್ಸ್ ಕನ್ನಡ-ಇಂಗ್ಲಿಶ್ ಕೋಶದ ಪರಿಷ್ಕರಣ

ರೀವ್ಸ್ ರಚಿಸಿದ ಕನ್ನಡ-ಇಂಗ್ಲಿಶ್ ಕೋಶವನ್ನು ಸ್ಯಾಂಡರ್‌ಸನ್ ಅವರು ೧೮೫೮ ರಲ್ಲಿ ಪರಿಷ್ಕರಿಸಿ ವಿಸ್ತರಿಸಿದರು. ರೀವ್ಸ್ ಕೃತಿಯಲ್ಲಿಯ ಬಹುತರ ಎಲ್ಲ ಶಬ್ದಗಳನ್ನು ಉಳಿಸಿಕೊಂಡು ತಿದ್ದಿ ಬೆಳೆಸಿದ ಆವೃತ್ತಿಯಿದು. A. E. S. ದವರು ಮರು ಮುದ್ರಿಸಿದ ಈ ಕೋಶ ಈಗಾಗಲೇ ೩ ನೆಯ ಮುದ್ರಣವನ್ನು ಕಂಡಿದೆ.

ಪರಿಷ್ಕರಿಸುವಾಗ ಸ್ಯಾಂಡರ್‌ಸನ್ ಮಾಡಿದ ಮಾರ್ಪಾಟುಗಳೆಂದರೆ -

೧. ಹನ್ನೊಂದು ನೂರು ಶಬ್ದಗಳನ್ನು ಹೊಸದಾಗಿ ಸೇರಿಸಿದ್ದಾನೆ. ಮುಖ್ಯ ಉಲ್ಲೇಖದ ಶಬ್ದಾರ್ಥವನ್ನು ಹೆಚ್ಚು ವಿಶದಗೊಳಿಸಿದ್ದಾನೆ, ಮತ್ತು ಅನೇಕ ಶಬ್ದಗಳಿಗೆ ವ್ಯುತ್ಪತ್ತಿಯನ್ನು ಹೇಳಲು ಪ್ರಯತ್ನಿಸಿದ್ದಾನೆ.

೨. ಮುಖ್ಯ ಉಲ್ಲೇಖದಲ್ಲಿರುವ ಪ್ರತಿಯೊಂದು ಕನ್ನಡ ಪದದ ಇಂಗ್ಲಿಶ್ ಲಿಪ್ಯಂತರವನ್ನು ಕೊಟ್ಟಿದ್ದಾನೆ. ಆಂಗ್ಲ ಪದಗಳು ಒಡೆದು ಕಾಣುವಂತೆ ಅಡ್ಡಗೆರೆ ಬಳಸಿದ್ದಾನೆ.

೩. ಆವರಣದಲ್ಲಿ ಸಂಸ್ಕೃತ ಮೂಲವನ್ನು ಅಥವಾ ಮುಖ್ಯ ಉಲ್ಲೇಖದ ಪ್ರಾಚೀನ ರೂಪವನ್ನು ಕೊಟ್ಟಿರುವನು.

೪. ರೀವ್ಸ್ ಕೋಶದಲ್ಲಿಯ ಅಕ್ಷರ ದೋಷಗಳನ್ನು ತಿದ್ದಿರುವನು.

೫. ಮುಖ್ಯ ಪದಗಳ ಮುಂದೆಯೇ ಅವುಗಳ ಸಮಾಸ ರೂಪಗಳನ್ನು ಹಾಗೂ ಅವುಗಳ ಇಂಗ್ಲಿಶ್ ಪದಗಳ ಅರ್ಥವನ್ನು ಕೊಡಲಾಗಿದೆ.

೬. ಕನ್ನಡವನ್ನು ಕಲಿಯುವ ಪಾಶ್ಚಿಮಾತ್ಯರಿಗೆ ಅನುಕೂಲವಾಗುವಂತೆ ಗಾದೆಗಳನ್ನು, ನುಡಿಗಟ್ಟುಗಳನ್ನು ಕೊಡಲಾಗಿದ [೨೭]

ಕನ್ನಡ ಪದಗಳನ್ನು ಆಂಗ್ಲದಲ್ಲಿ ಉಚ್ಚರಿಸುವಾಗ ಉಚ್ಚರಿಸಿದಂತೆ ಬರೆಯಲಿಕ್ಕೆ ಅನುಕೂಲವಾಗಲು ರೋಮನ್ ಲಿಪಿಯ ಪಟ್ಟಿಯನ್ನು ಕೋಶದ ಆರಂಭದಲ್ಲಿ ನೀಡಲಾಗಿದೆ ಉದಾ- ಅ a, ಆ-a, ಟ-ṭa, ತ-tat, ದ-dat -ಳ ḷa ಮುಂತಾದವು ಗ್ರಂಥಾಭ್ಯಾಸಕ್ಕೆ ಇದು ತುಂಬ ನೆರವಾಗುತ್ತದೆ.

ಈ ಕೋಶದಲ್ಲಿ ಕನ್ನಡ ಪದಗಳ ಅರ್ಥ ವಿವರಣೆಯನ್ನು ಹೀಗೆ ಕೊಡಲಾಗಿದೆ.

ಗುಬ್ಬಿ gubbi, s A spaarrow 2. The name of a town, ಗುಬ್ಬಿ ಗುಟುಕು a sparrow to feed its young ಗುಬ್ಬಿಯಾಗಿ ಅರಸು V. n. to moaa insicknes, as a sparrow ಗುಬ್ಬಿ ಪೋಗರೆ around faced hammer.

ಗುರುಹಿರಿಯರು - guru-kiriyaru,s the great and small, gentry and peasantry; elders and juniors ಇಂತಹ ಜೋಡು ನುಡಿಗಳು ಅರ್ಥವತ್ತಾಗಿ ಬಂದಿವೆ.

ಒಗಿ- ಒಗಿಯು, ಒಗೆ-ಒಗೆಯು ಒದಿ-ಒದೆಯು, ಇಂತಹ ಸಮಾನಾರ್ಥಕ ಪದಗಳನ್ನು ಒಂದೇ ಕಡೆ ಕೊಟ್ಟು ಅರ್ಥ ಹೇಳಲಾಗಿದೆ. ಒಗಿ/ಒಗೆ, ಒದಿ/ಒದೆ ಎನ್ನುವಲ್ಲಿ ಇ<ಎ ಧ್ವನಿ ಪರಿವರ್ತನೆ ಇರುವುದರಿಂದ ಮುಖ್ಯ ಉಲ್ಲೇಖವನ್ನು ಕೊಡುವಾಗ ಅದನ್ನು ಗಮನದಲ್ಲಿಟ್ಟಿರಬಹುದು. ಕುಡುಗೋಲು kudagolu ಭೂಮಿಯಲ್ಲಿ ಪೈರನ್ನು ಕೊಯ್ಯಲು ಬಳಸುವ ಸಾಧನ ಎದು ಹೇಳಿ ಕೊಂಕು+ ಕೊಲ್(kounk+kol) ಎಂದು ಅದರ ನಿಷ್ಪತ್ತಿಗೆ ತೊಡಗುತ್ತಾನೆ. ಕೆಲವು ಶಬ್ದಗಳಿಗೆ ಅರ್ಥಕೊಡುವಾಗ ಸಂದರ್ಭಕ್ಕೆ ತಕ್ಕಂತೆ ಗಾದೆಗಳನ್ನು ಕೊಡಲಾಗಿದೆ. ಉದಾ- ಒಕ್ಕಲು Wokkalu ಶಬ್ದಕ್ಕೆ ಅರ್ಥಕೊಡುವಾಗ 'ಒಕ್ಕಲಿಗನ ನಂಟು ಪಡಿವೆ ಗೇಡು ' ಅರ್ಥ ಸ್ಪಷ್ಟತೆ ಇವು ತುಂಬ ನೆರವಾಗುತ್ತವೆ. ರೀವ್ಸ್ ಕೋಶದಲ್ಲಿ ಸೇರದ ಜಿರ್ಕು, ತೆಳಂಕ, ತುಶಾರ, ಪ್ಲವಗ, ಮಶಕ, ರಜ್ಜು, ಸಿಕ್ಥ ಹಸ್ತ ಇಂತಹ ಅನೇಕ ಶಬ್ದಗಳನ್ನು ಹೊಸದಾಗಿ ಸೇರಿಸಿದ್ದಾನೆ.

ಇವೆಲ್ಲವುಗಳಿಂದ ರೀವ್ ಕೋಶದ ಉಪಯುಕ್ತತೆ ಹೆಚ್ಚಿತು. ಶಬ್ದಾರ್ಥವನ್ನು ಕಂಡುಕೊಳ್ಳುವುದು ಸುಲಭವಾಯಿತು. ಪರಿಷ್ಕೃತ ಹಾಗೂ ವಿಸ್ತೃತ ನಿಘಂಟಿನಿಂದಾಗಿ ಕನ್ನಡ ಪದ ಭಂಡಾರ ಬೆಳೆಯಿತು. ಮುಂದೆ ಕಿಟೆಲ್ ನಿಘಂಟು ಬರುವವರೆಗೆ ಸ್ಯಾಂಡರ್‌ಸನ್ ಪರಿಷ್ಕರಿಸಿದ ರೀವ್ ನಿಘಂಟು ಜನಪ್ರಿಯವಾಗಿ ಉಳಿಯುವುದಕ್ಕೆ ಸಹಕಾರಿಯಾಯಿತು.

ಕಿಟೆಲ್ ನಿಘಂಟು

ಮಿಶನರಿಗಳಿಂದ ರಚಿತವಾದ ನಿಘಂಟುಗಳಲ್ಲಿ ಕಿಟೆಲ್‌ರ ಕನ್ನಡ-ಇಂಗ್ಲಿಶ್ ನಿಘಂಟು ಬಹುಮುಖ್ಯವಾಗಿದೆ. ಕಿಟೆಲ್‌ರ ವಿದ್ವತ್ತಿಗೆ ಸ್ಮಾರಕವಂತಿರುವ ಈ ಕೋಶ ಕನ್ನಡ ಸಾರಸ್ವತ ಪ್ರಪಂಚದಲ್ಲಿ ಅವರ ಹೆಸರನ್ನು ಚಿರಸ್ಥಾಯಿಯನ್ನಾಗಿ ಮಾಡಿದೆ. ಕಿಟೆಲ್‌ರಿಗಿಂತ ಹಿಂದೆಯೇ ಸು ೧೮೩೨ ರಲ್ಲಿ ವಿಲ್ಯಂ ರೀವ್‌ನ ಕನ್ನಡ-ಇಂಗ್ಲಿಶ್ ಕೋಶವು ಪ್ರಕಟವಾಗಿತ್ತು. ಅದು ಮೊದಲ ಕೋಶವಾದರೂ ಅಸಮರ್ಪಕವೂ ಅಪೂರ್ಣವೂ ಆದ ಕೃತಿಯಾಗಿತ್ತು. ಆ ಕೊರತೆಯನ್ನು ಕಂಡ ಆಗಿನ ಕಂಪನಿ ಸರಕಾರ ಪರಿಪೂರ್ಣ ಶಬ್ದಕೋಶವೊಂದನ್ನು ರಚಿಸಲು ಕಿಟೆಲರಿಗೆ ವಹಿಸಿತು. ತುಂಬ ಜವಾಬ್ದಾರಿಯುತವೂ ಶ್ರಮಸಾಧ್ಯವೂ ಆದ ಈ ಕಾರ್ಯಕ್ಕೆ ಕಿಟೆಲ್‌ರು ತಮ್ಮನ್ನು ತಾವು ತೊಡಗಿಸಿಕೊಂಡರು. ಕಿಟೆಲರು ಈ ಕಾರ್ಯವನ್ನು ಪ್ರಾರಂಭಿಸಿದ್ದು ೧೮೭೫ ರಲ್ಲಿ ನಿಘಂಟು ಪ್ರಕಟವಾದದ್ದು ೧೮೯೪ ರಲ್ಲಿ ಮಂಗಳೂರಿನ ಬಾಸೆಲ್ ಮಿಶನ್ನ ಮುದ್ರಣಾಲಯದಿಂದ.

ಈ ನಿಘಂಟನ್ನು ರಚಿಸಲು ೧೮ ಹಳಗನ್ನಡ ಕೃತಿಗಳನ್ನೂ ೧೮ ನಡುಗನ್ನಡ ಕೃತಿಗಳನ್ನೂ ಮುಂಬಯಿ ವಿದ್ಯಾ ಇಲಾಖೆ ಪ್ರಕಟಿಸಿದ ೫ ಪಠ್ಯ ಪುಸ್ತಕಗಳನ್ನೂ ಹಾಗೂ ಕ್ಷೇತ್ರಕಾರ್ಯದ ನೆರವಿನಿಂದ ದಕ್ಷಿಣ ಮಹಾರಾಷ್ಟ್ರ ಹಾಗೂ ಕರಾವಳಿ ಪ್ರದೇಶದ ಆಡುನುಡಿಗಳನ್ನು, ಗಾದೆಗಳನ್ನು ಸಂಗ್ರಹಿಸಿ ಬಳಸಿಕೊಂಡಿದ್ದಾನೆ. ತತ್ಸಮ, ತದ್ಭವಗಳಿಗೆ ಸಂಸ್ಕೃತದ ಮೂಲವನ್ನು ಕೊಡುವಾಗ ಸಂಸ್ಕೃತ ಕೋಶಗಳ ನೆರವನ್ನು ಪಡೆದಿದ್ದಾನೆ. ರೀವ್‌ನ ಕನ್ನಡ -ಇಂಗ್ಲಿಶ್ ಕೋಶ, ರೊಟ್ಲರನ ತಮಿಳು- ಇಂಗ್ಲಿಶ್ ಕೋಶ, ಕ್ಯಾಂಬೆಲನ ತೆಲುಗು-ಇಂಗ್ಲಿಶ್ ಕೋಶ, ಗುಂಡರ್ಟನ ಮಲಯಾಳಂ-ಇಂಗ್ಲಿಶ್ ಕೋಶ, ಮ್ಯಾನರನ ತುಳು-ಇಂಗ್ಲಿಶ್ ಕೋಶಗಳ ರಚನಾ ವಿಧಾನಗಳನ್ನು ಪರಿಶೀಲಿಸಿದ್ದಾನೆ. ಧಾರವಾಡದಲ್ಲಿ ಮಿಶನರಿಯಾಗಿದ್ದ ಜೀಗ್ಲರ್ ಹಾಗೂ ಹುಬ್ಬಳ್ಳಿಯ ಶಾಲಾ ಶಿಕ್ಷಕ ಶಿವಲಿಂಗಯ್ಯ ವಸ್ತ್ರದ ಅವರು ಉತ್ತರ ಕರ್ನಾಟಕದ ಅನೇಕ ಶಬ್ದಗಳ ಪಟ್ಟಿಯನ್ನು, ಎಂ. ಸಿ. ಶ್ರೀನಿವಾಸಾಚಾರ್ಯ ಎಂಬುವರು ಮೈಸೂರು ಪ್ರದೇಶದ ಕೆಲವು ಶಬ್ದಗಳನ್ನು ಪೂರೈಸಿದರು.[೧೮] ಶಬ್ದ ಸಂಗ್ರಹದ ಬಗೆಗೆ ಕಿಟೆಲ್‌ರಿಗೆ ವಿಷ್ಟೊಂದು ಕುತೂಹಲವಿತ್ತೆಂದರೆ ಹುಬ್ಬಳ್ಳಿ ಧಾರವಾಡ ಮುಂತಾದ ನಗರಗಳಲ್ಲಿ ಸಂತೆಯ ದಿನ ಅಕ್ಕ ಪಕ್ಕದ ಹಳ್ಳಿಗರು ಬಂದು ನೆರೆದಾಗ ಅವರ ಸಂಭಾಷಣೆಯ ಶಬ್ದಗಳನ್ನು ತಿಳಿದುಕೊಳ್ಳಲು ಅವರ ಸ್ನೇಹ ಬೆಳೆಸಿ ಅವರೊಟ್ಟಿಗೆ ನಾಲ್ಕಾರು ಮೈಲುಗಳವರೆಗೆ ನಡೆದು ಹಿಂತಿರುಗುತ್ತಿದ್ದರಂತೆ. ಅಲ್ಲದೆ ಹಲವು ವಸ್ತುಗಳನ್ನು ಜೇಬಿನಲ್ಲಿಟ್ಟುಕೊಂಡು ಭೇಟಿಯಾದ ಕನ್ನಡಿಗರಿಂದ ಅವುಗಳ ಸರಿಯಾದ ಶಬ್ದ ಹಾಗೂ ಅರ್ಥ ಯಾವುದೆಂಬುದನ್ನು ತಿಳಿದುಕೊಳ್ಳುತ್ತಿದ್ದರು. ಹೀಗೆ ಗ್ರಂಥಸ್ಥ ಸಾಹಿತ್ಯದ ಜೊತೆಗೆ ಕ್ಷೇತ್ರಕಾರ್ಯದ ಮೂಲಕ ಆಡುನುಡಿಗಳನ್ನು ಸಂಗ್ರಹಿಸಿದರು. ರಾಶಿ ರಾಶಿಯಾಗಿ ಪದಗಳನ್ನು ಕಲೆ ಹಾಕಿದರು.

ಕೋಶಕ್ಕೆ ಅವರು ಬರೆದ ವಿಸ್ತಾರವಾದ ಪ್ರಸ್ತಾವನೆ ಅನನ್ಯವಾದದ್ದು. ಅದರಲ್ಲಿ ಕೋಶ ರಚನೆಯ ಸ್ವರೂಪ, ಹಾಗೂ ಕನ್ನಡ ಭಾಷೆಯ ರಚನೆಯ ಬಗೆಗೆ ಅವನು ವ್ಯಕ್ತಪಡಿಸಿದ ಸಂಗತಿಗಳನ್ನು ಗಮನಿಸಿದಾಗ ಅವನ ವೈಜ್ಞಾನಿಕ ಪರಿಕಲ್ಪನೆ ಆಶ್ಚರ್ಯವನ್ನುಂಟುಮಾಡುತ್ತದೆ. ಮೂಲಗಾಮಿಯಾಗಿ ಅನ್ವೇಷಿಸುವುದು ಅವರಿಟ್ಟುಕೊಂಡ ಧೋರಣೆಯಾಗಿದೆ. ಇದಕ್ಕೆ ನಿದರ್ಶನವಾಗಿ ಸಂಸ್ಕೃತದಲ್ಲಿ ದ್ರಾವಿಡ ಭಾಷೆಗಳ ಸು. ೪೨೦ ಶಬ್ದಗಳನ್ನು ಪಟ್ಟಿ ಮಾಡಿಕೊಟ್ಟಿದ್ದಾನೆ[೧೯] ಅವು ಶರೀರ, ಪ್ರಾಣಿ, ಸಸ್ಯ, ಲೋಹ, ಬಣ್ಣ, ಆಹಾರ, ಸಂಖ್ಯಾವಾಚಕಗಳು ಇಂತಹ ೧೫ ವಿವಿಧ ವಿಭಾಗಗಳಿಗೆ ಸಂಬಂಧಿಸಿವೆ. ೧೭೫೨ ಪುಟಗಳ ಈ ಬೃಹತ್ ಕೋಶದ ನಿರೂಪಣಾ ವಿಧಾನ ಹೀಗಿದೆ. ಮುಖ್ಯ ಉಲ್ಲೇಖವನ್ನು ಸೂಚಿಸುವಲ್ಲಿ ದೇಶ್ಯರೂಪಗಳನ್ನು ದಪ್ಪಾಕ್ಷರಗಳಲ್ಲಿ (೧೨ ಪಾಯಿಂಟು) ಇತರ ರೂಪಗಳನ್ನು ಸಾಮಾನ್ಯಕ್ಷರಗಳಲ್ಲಿ (೧೦ ಪಾಯಿಂಟು) ಸೂಚಿಸಿ ಪರ್ಯಾಯಗಳನ್ನು ಪಕ್ಕದಲ್ಲಿ ಕೊಟ್ಟಿದ್ದಾನೆ. ಮುಖ್ಯ ಉಲ್ಲೇಖದ ದೇಶ್ಯ, ತತ್ಸಮ, ತದ್ಭವ ಮೊದಲಾದ ವಿವರಗಳನ್ನು ಕೊಟ್ಟು ಸಮಾಸಗಳನ್ನು ಸೂಚಿಸಿದ್ದಾನೆ. ಮುಖ್ಯ ಉಲ್ಲೇಖದ ಉಚ್ಚಾರವನ್ನು ಪರಿಷ್ಕರಿಸಿದ ರೋಮನ್ ಲಿಪಿಯ ಮೂಲಕ ಸೂಚಿಸಿ ಖಚಿತಗೊಳಿಸಿದ್ದಾನೆ. ದ್ರಾವಿಡ ಭಾಷೆಗಳ ಜ್ಞಾತಿ ಪದಗಳನ್ನು ಸಮರ್ಪಕವಾಗಿ ಗುರುತಿಸಲಾಗಿದೆ. ಅವಶ್ಯ ಕಂಡಲ್ಲಿ ಪದದ ವ್ಯುತ್ಪತ್ತಿಯನ್ನು ಸೂಚಿಸಿ ಕೋಶದ ಉಪಯುಕ್ತತೆಯನ್ನು ಹೆಚ್ಚಿಸಿದ್ದಾನೆ. ಸೂಕ್ತವಾದ ಪ್ರಯೋಗಗಳನ್ನು ಅತಿವ್ಯಾಪ್ತಿ ದೋಷಬಾರದ ಹಾಗೆ ಸಾಹಿತ್ಯ ಗ್ರಂಥಗಳಿಂದ ಆಕರವಾಗಿ ಕೊಟ್ಟು ಪ್ರಾದೇಶಿಕ ರೂಪ, ಗಾದೆ ಮುಂತಾದವುಗಳನ್ನು ಸಮರ್ಪಕವಾಗಿ ಸೂಚಿಸಿದ್ದಾನೆ. ಕನ್ನಡೇತರರಿಗೆ ಶಬ್ದದ ಅರ್ಥ ತಿಳಿದುಕೊಳ್ಳಲು ನಿಘಂಟಿಮಗಳ ಅರ್ಥ ವಿವರಗಳನ್ನು ಇಂಗ್ಲಿಶಿನಲ್ಲಿ ಕೊಟ್ಟಿದ್ದಾನೆ. ಈ ಕಾರಣಗಳಿಂದ ಕಿಟೆಲ್ ಕೋಶವನ್ನು ದ್ವಿಭಾಷಿಕ ಸರ್ವಸಂಗ್ರಾಹದ ವಿವರಣಾತ್ಮಕ ಶಬ್ದಕೋಶವೆಂದು ಡಾ. ವಿಲ್ಯಂ ಮಾಡ್ತ ಅವರು ಕರೆದಿರುವುದು ಸೂಕ್ತವಾಗಿದೆ[೨೦] ಹಲವಾರು ವೈಶಿಷ್ಟ್ಯಗಳಿಂದ ಕೂಡಿದ ಈ ಕೋಶ ಇವೊತ್ತಿಗೂ ಪ್ರಮಾಣಗ್ರಂಥವಾಗಿ ಉಳಿದಿದೆ.

ಈ ಕೋಶ ನಿರ್ಮಾಣಗೊಳ್ಳುತ್ತಿರುವ ಹೊತ್ತಿಗೆ ದ್ರಾವಿಡ ಭಾಷೆಯಲ್ಲಿ ಸಂಶೋಧನೆ ನಡೆದು ಅನೇಕ ಹೊಸ ಸಿದ್ಧಾಂತಗಳು ಬೆಳಕಿಗೆ ಬಂದಿದ್ದವು ಡಾ॥ ಕಾಲ್ಡವೆಲ್‌ನ 'A Comparative grammar of Dravidian language' ಎಂಬ ಕೃತಿ ಸಿದ್ಧವಾಗಿದ್ದಿತು. ದ್ರಾವಿಡ ಭಾಷೆಗಳು ಒಂದು ಪ್ರತ್ಯೇಕ ಭಾಷಾ ವರ್ಗವಾಗಿದ್ದು ಕನ್ನಡವು ಆ ವರ್ಗಕ್ಕೆ ಸೇರುತ್ತದೆ ಎಂಬ ವಿಚಾರ ಕಿಟೆಲ್ ಕೋಶದ ರಚನೆಯಲ್ಲಿ ಪ್ರಮಾಣಭೂತ ಪಾತ್ರವಹಿಸಿದೆ. ಕಿಟೆಲ್ ಕನ್ನಡದ ದೇಶ್ಯ ಶಬ್ದಗಳನ್ನು ನಿರ್ಧರಿಸುವಾಗ ಅವು ಇತರ ದ್ರಾವಿಡ ವರ್ಗದ ಭಾಷೆಗಳಲ್ಲಿ ಪ್ರಯೋಗಗೊಳ್ಳುವುದನ್ನು ಸವಿಸ್ತಾರವಾಗಿ ವಿವೇಚಿಸಿದ್ದಾನೆ. ಕಿಟೆಲ್‌ಕೋಶದ ರಚನೆಯನ್ನು ತಿಳಿದುಕೊಳ್ಳಲಿಕ್ಕೆ ಅದರ ಕೆಲವು ಉದಾಹರಣೆಗಳನ್ನು ಗಮನಿಸಬಹುದಾಗಿದೆ.

ಬರು baru ಬರ್ ta- ವರು ma-ವರು, te-ವಚ್ಚು, Tu- ಬರು ಬೇರೆ ಬೇರೆ ವಾಕ್ಯ ರಚನೆಗಳಲ್ಲಿ 'ಬರು'

ಬರುವ ಸಂದರ್ಭಗಳನ್ನು ಕೊಡುತ್ತಾನೆ. 'ಮುಂಜಾನೆ ಎದ್ದು ಕಲಿತರೆ ವಿದ್ಯೆಯು ಬೇಗ ಬರುವುದು' ವಿದ್ಯೆ ಬಾರದೆ ಜ್ಞಾನಬರುವುದಿಲ್ಲ. ಅವಕ್ಕೆ ತಕ್ಕಂತೆ ಗಾದೆಗಳನ್ನು ಕೊಡುವರು 'ಬರಬರುತ್ತಾ ರಾಯರ ಕುದುರೆ ಕತ್ತೆಯಾಯಿತು'

ಒಂದು ಶಬ್ದ ಬೇರೆ ಬೇರೆ ಮೂಲಗಳಿಂದ ಬಂದದ್ದಾಗಿದ್ದು ಪ್ರತ್ಯೇಕ ನಿಷ್ಪತ್ತಿಯನ್ನು ಹೊಂದಿದ್ದರೆ ಆ ಶಬ್ದವನ್ನು ಒಂದು, ಎರಡು, ಮೂರು ಎಂದು ಪ್ರತ್ಯೇಕ ಮುಖ್ಯ ಉಲ್ಲೇಖಗಳಾಗಿ ಕೊಡಲಾಗಿದೆ.

ಈಡು ೧ ಇರು ಅಥವಾ ಈವ್, pulling, dragging ಈಡಜ್ಕೆ ಇಲಾ

ಈಡು ೨ ಇಡು-ಇಡು putting, placing that is pul; an object or mark to aim at 3 throwing

ಈಡು ೩ ೧. Joining, coming together, unting (t ಈಣ್ಸು tojoin vi; ಈಟ್ಟು to join v. t ; see ಇಡಿ ಇಣ್ಣೆ)

೨. increase, plentry greatness (My)

೩. Fitness proportion ; equality; that is equal or mathes (c; T. M. te. tu ಸರಿ ಸಮಾನ)

ಈ ಕ್ರಮ ಅತ್ಯಂತ ಉಪಯುಕ್ತವಾದುದು. ಈ ತರಹದ ಶಾಸ್ತ್ರೀಯ ನಿಘಂಟನ್ನು ಕನ್ನಡದಲ್ಲಿ ಮೊದಲ ಬಾರಿಗೆ ರಚಿಸಿದ ಶ್ರೇಯಸ್ಸು ಕಿಟೆಲ್ಲನಿಗೆ ಸಲ್ಲತಕ್ಕದ್ದಾಗಿದೆ. ನಿಘಂಟಿನಲ್ಲಿರುವ ಪ್ರತಿಯೊಂದು ಶಬ್ದಕ್ಕೂ ಆಧಾರವನ್ನು ಕೊಡಲಾಗಿದೆ. ಶಬ್ದಗಳಿಗೆ ಕಾವ್ಯ ಪ್ರಯೋಗಗಳ ಆಧಾರವಿದ್ದರೆ ಅವನ್ನು ಉದ್ಧರಿಸಲಾಗಿದೆ. ಇಲ್ಲವೆ ಆ ಶಬ್ದಗಳು ಆಡುಮಾತಿನಲ್ಲಿ ಮಾತ್ರವಿದ್ದರೆ ಅವು ಯಾವ ಪ್ರಾಂತದಲ್ಲಿ ಯಾವ ಅರ್ಥದಲ್ಲಿ ಬಳಕೆಯಲ್ಲಿವೆ ಎಂಬುದನ್ನು ಸೂಚಿಸಲಾಗಿದೆ.

ಅರೆಕಾಅ : are-kara a man who fosters a fosterer (cpr-9 102 va ; Grj 6.56 va; RSV-6.11 va)

ಅರೇಕೆ areke ಅರಯಿಕೆ (M. Y)

ಈ ಕ್ರಮದಿಂದ ಪ್ರಾಚೀನ ಕಾವ್ಯಗಳಲ್ಲಿನ ಶಬ್ದಗಳಷ್ಟೇ ಅಲ್ಲದೇ ಪ್ರಾದೇಶಿಕ ಶಬ್ದಗಳೂ, ಆಡುಮಾತಿನ ಶಬ್ದಗಳೂ, ನುಡಿಗಟ್ಟುಗಳು ನಿಘಂಟಿನಲ್ಲಿ ಸೇರಲು ಅವಕಾಶವಾಯಿತು.

ಕಿಟೆಲ್‌ನ ಈ ನಿಘಂಟಿನಲ್ಲಿ ಏಕಾಕ್ಷರ ಶಬ್ದಗಳು, ಪ್ರತ್ಯಯಗಳು, ವ್ಯಾಕರಣ ಪ್ರಕ್ರಿಯೆಗಳು, ಸಮುಚ್ಚಯಗಳು ಈ ಮೊದಲಾದ ಎಲ್ಲ ಪ್ರಕಾರದ ಶಬ್ದಗಳನ್ನೂ ಸೂಚಿಸಿದ್ದಾನೆ. ಸಮಾಸ ಶಬ್ದಗಳನ್ನು

ಪ್ರತ್ಯೇಕ ಮುಖ್ಯ ಉಲ್ಲೇಖಗಳಾಗಿ ಕೊಡದೆ ಮುಖ್ಯ ಶಬ್ದದ ಕೆಳಗೆ ಸೂಚಿಸಿದ್ದಾರೆ.

ಮಸಣ- ಮಸಾಣ, ಶ್ಮಶಾನ

ಮಸಣದ ಬೂದಿ, ಮಸಣವಟ್ಟಿಗ

ಮಸಣಗಾಡು, ಮಸಣವಟ್ಟೆ

ಇದರಿಂದ ಸಮಾಸಗಳು ಯಾವ ಶಬ್ದದಿಂದ ಬಂದಿವೆ ಎಂಬುದು ಸುಲಭವಾಗಿ ಮನದಟ್ಟಾಗುತ್ತದೆ. ನಿಘಂಟು ರಚನೆಗೆ ಪರಿಷ್ಕೃತ ಸಂಪಾದಿತ ಕೃತಿಗಳ ನೆರವು ಅತ್ಯಾವಶ್ಯಕ. ಅವುಗಳ ಅಭಾವದಿಂದ ಕೆಲವಾರೂ ಅಪಶಬ್ದಗಳೂ ಮಿಥ್ಯಾ ಶಬ್ದಗಳೂ ನಿಘಂಟಿನಲ್ಲಿ ಸೇರಿ ಹೋಗುತ್ತವೆ. (ಹತ್ತೊಂಬತ್ತನೆಯ ಶತಮಾನದ ಆದಿಭಾಗದ ವೇಳೆಗೆ ಹಲವಾರು ಪ್ರಾಚೀನ ಕೃತಿಗಳು ಬೆಳಕನ್ನೇ ಕಂಡಿರಲಿಲ್ಲ) ಇದಕ್ಕೆ ಕಿಟೆಲ್‌ರ ನಿಘಂಟಿನಿಂದಲೇ ಒಂದೆರಡು ಉದಾಹರಣೆಗಳನ್ನು ನೋಡಬಹುದು. 'ಅಗ ' ಶಬ್ದದ ಕೆಳಗೆ 'ಅಗ ನೆಲ' ಎಂಬ ಸಮಾಸವನ್ನು ಕೊಟ್ಟು ಅದಕ್ಕೆ adeep place, aditch ಎಂಬ ಅರ್ಥವನ್ನು ಸೂಚಿಸಿದ್ದಾನೆ. ವಾಸ್ತವವಾಗಿ ಅದು ಸಮಾಸವಲ್ಲ 'ಅಲ್ಲಿ ಒಂದು ಅಗ ನೆಲದಲ್ಲಿ ಬೀ ಲು' ಎಂಬ ಪ್ರಯೋಗದಲ್ಲಿನ ಆ ಭಿನ್ನ ಶಬ್ದಗಳನ್ನು ಕಿಟೆಲ್ 'ಅಗ ನೆಲ' ಸಮಾಸವಾಗಿ ತಿಳಿದುಕೊಂಡಿದ್ದಾರೆ. ಅಗು (ಳ್) ಪದಕ್ಕೆ ಅಗ: ಮುಳುಗು; ಕಂದಕ: ಬೆಂದ ಅಕ್ಕಿ ಕಾಳು ಎಂಬ ನಾನಾರ್ಥಗಳಿವೆ. ಈ ಗೊಂದಲವೆ ಕಾರಣವಾಗಿರಬೇಕು. ಹಾಗೆಯೇ 'ಎದೆ' ಶಬ್ದದ ಕೆಳಗೆ 'ಎದೆವಣಿ' ಎಂಬ ಸಮಾಸವನ್ನು ಕೊಟ್ಟು ಅದಕ್ಕೆ A brest Jewel ಎಂದು ಅರ್ಥವನ್ನು ಕೊಟ್ಟಿದ್ದಾನೆ. ಅದಕ್ಕೆ ಜೈಮಿನಿ ಭಾರತ ಪ್ರಯೋಗವನ್ನು ಕೊಟ್ಟಿದ್ದಾನೆ. ಆದರೆ ವಾಸ್ತವವಾಗಿ ಆ ಶಬ್ದ 'ಎರ್ದೆವೆಣೆ' ಎಂದು. ಈ ಶಬ್ದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ 'ಎದೆಯವೆಣೆ' 'ಎದೆಯುಗೂಟ' ಎಂದು ಅರ್ಥಕೊಟ್ಟಿದೆ. ಇದು 'ಎರ್ದೆ+ ಪೆಣೆ' ಎಂಬ ಎರಡು ಶಬ್ದಗಳಿಂದಾಗಿರುವ ಸಮಸ್ತರೂಪ. ಇಂತಹ ಸ್ಖಾಲಿತ್ಯಗಳು ಕಿಟೆಲ್‌ರ ಅಜ್ಞಾನದಿಂದ ಸಂಭವಿಸಿದವುಗಳೆಂದು ಭಾವಿಸಬಾರದು. ಅವರಿಗೆ ದೊರೆತ ಅಶುದ್ಧ ಪ್ರತಿಗಳಿಂದ ಸಂಭವಿಸಿವೆ. ಈ ತರಹದ ದೋಷಗಳ ಅರಿವು ಕಿಟೆಲ್‌ರಿಗಿತ್ತು. ಅದನ್ನೇ ಪೀಠಿಕೆಯಲ್ಲಿ ಹೀಗೆ ಹೇಳಿದ್ದಾರೆ "The Compiler entreats the public to look upon the present dictionary with an indulgent eye. He is sensible of the many deficiencies, short comings and inelogancies it contains, and has to confess that the longer he worked, the more he became aware of his incompetency to satisfy all the wishes of scholars. Most of the errors and essential amissions hitherto discovered, whether typographical or caused by the author's own want of knowledge or the inaccuracy and discrepancies in the native authorities consulted or the limited time presenting it self to

search the mass of kannada literature, have, he trusts, been corrected and supplied in the supplied in the corrections and additions[20] ಈ ಮಾತುಗಳು ಕಿಟೆಲ್‌ರ ಸರಳತೆಗೂ ಸಜ್ಜನತೆಗೂ ಪ್ರಾಮಾಣಿಕತೆಗೂ ಸಾಕ್ಷಿಯಾಗಿವೆ.

ಹಳಗನ್ನಡದಲ್ಲಿ ಪ್ರಯೋಗದಲ್ಲಿದ್ದ ಶಕಟರೇಫ್, ಕುಳಗಳ ಬಗೆಗೆ ಶಾಸ್ತ್ರೀಯವೂ ಖಚಿತವೂ ಆದ ಪರಿಜ್ಞಾನಪಡೆದು ಆಧ್ವನಿಗಳಿಂದ ಸಂಯೋಜಿತವಾದ ಶಬ್ದಗಳನ್ನು ಕೋಶದಲ್ಲಿ ಬಳಸಿದ್ದಾರೆ. ಬಿಱ- ಬಿೞ

1. Firmness, etc 2. tightness ನಂತರ ಅದರ ಸಾಧಿತ ರೂಪಗಳನ್ನು ಕೊಟ್ಟಿದ್ದಾರೆ. ಬಿ ದಿಸ, ಬಿಱಿಕಟ್ಟು, ಬಿರುಗಾಳಿ ಮುಂತಾದವು

ಪದಗಳ ಮೂಲಧಾತು, ಪ್ರಯೋಗ ಮುಂತಾದವುಗಳನ್ನು ಆಧಾರಪೂರ್ವಕವಾಗಿ ಕೊಡಲಾಗಿದೆ.

ತೆರಟು - teraṭu tomake round (T. ತಿರಟ್ಟು) to roll up tuck up to (agarment when passing ariver) to join to unite (see- ತೆರಳು, ತೆರೆ)

ತೆಗ್ಗು - teggu- ತಗ್ಗು, ಅಪಟೆ, ಕುಣಿ, ಗರ್ತ, ಗುಣ್ಡಿ ತೆಗ್ಗು ತೆವರು, ತೆಗ್ಗುದಿನ್ನೆ, ತೆಗ್ಗುಬೀರು

ತೆತ್ತಿಗ- tettiga (fr ತೆತ್ತು) A man who is entwined or closely bound to ; aservant (B. P.23, 30 .....) 2. a. Connection, afriend

ಈ ರೀತಿ ಹಲವಾರು ಪದಗಳನ್ನು ವ್ಯಾಖ್ಯಾನಿಸಿದ್ದಾರೆ. ತೆನೆ, ತೆಂಕು, ಎಳ್ಳು, ಬಲಿ ಎಂಬಂಥ ಪದಗಳಿಗೆ ಅರ್ಥ ವಿವರಗಳು ಪುಟಗಟ್ಟಲೆ ವಿವರಿಸಲಾಗಿದೆ. ಪ್ರಯೋಗಗಳನ್ನು ಕೊಡುವಾಗ ಪ್ರತಿಯೊಂದು ಶಬ್ದದಲ್ಲಿ ಯಾವ ಯಾವ ಅಂಶಗಳು ಅಡಕವಾಗಿರಬೇಕು ಎನ್ನುವುದರ ಕುರಿತು ಕಿಟೆಲ್‌ರಿಗೆ ಸ್ಪಷ್ಟವಾದ ಶಾಸ್ತ್ರೀಯ ದೃಷ್ಟಿಕೋನವಿದೆ. ಆಧುನಿಕ ರೀತಿಯ ನಿಘಂಟು ರಚನೆಯಲ್ಲಿ ಅನುಸರಿಸಲಾಗುತ್ತಿರುವ ಇಂತಹ ವಿಧಾನ ಈ ಕೋಶದಲ್ಲಿ ಬಂದಿರುವ 'ಕೆಯ್' ಶಬ್ದವನ್ನು ಗಮನಿಸಬಹುದು.

ಕೆಯ್; Key - The hand; the forearm, ಕರ, ಹಸ್ತ, ತಳ, ತಲ, ಕೆಯ್ಯಿ, ಕೈ, ಕೈಯಿ, ಕೈಯ್ಯಿ, ತ ಕೈ ಮ ಕಯ್ಯಿ, ಕೈಯಿ, ತು. ಕೈ, ತೆ. ಚೆಯಿ, ಚೆಯ್ಯಿ, ಚೇ, ಚೇಯಿ Anelephants trunk, the branch of a tree, astaff, apole a handle, akey, Means, Instrumentality, Handiness, smallness

-ಎತ್ತಿದ ಕೆಯ್ಯೊಳ್ ಮುತ್ತಿದಂ (ಶಬ್ದಮಣಿದರ್ಪಣ)

-ಕೆಯ್ಯ ಕಾಲ ಎಲ್ವು (ಹಲಾಯುಧ)

-ಕೆಯ್ಯ ಬಗಸೆ (ನಾನಾರ್ಥ ರತ್ನಾಕರ)

-ಕೆಯ್ ತೋರಿಸಿ ಅವಲಕ್ಷಣ ಅನ್ನಿಸಿ ಕೊಂಡ ಹಾಗೆ (ಗಾದೆ)

-ಕೆಯಿದ್ದರೆ ಅರ್ಥ, ಹತ್ತರ ಇದ್ದರೆ ಹೆಣ್ಡತಿ (ಗಾದೆ)

-ಕೆಯ್ಮುಗು, ಕೆಯ್ಗುದುರೆ, ಕೆಯ್ವಾರ (ನುಡಿಗಟ್ಟು)

ಈ ಶಬ್ದಕ್ಕೆ ಕಿಟೆಲ್ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳಿಂದ, ಪ್ರಾದೇಶಿಕ ಆಡುನುಡಿಗಳಿಂದ ಸು. ೨೫೦ ಕೆಯ್ ಶಬ್ದದ ನುಡಿಗಟ್ಟುಗಳನ್ನು ತೆಗೆದು ಒಂದೆಡೆ ಕೊಟ್ಟಿರುವುದು ಯಾರನ್ನೂ ಬೆರಗುಗೊಳಿಸಬಲ್ಲುದು.

ಕನ್ನಡಕ್ಕೆ ವಿಶಿಷ್ಟವಾದ ಶಬ್ದಗಳನ್ನು ಕಿಟೆಲ್ ಕಲೆ ಹಾಕಿದ್ದಾನೆ. ಉದಾ- 'ಕೆಪಸಿ' ಎಂಬುದು ಉತ್ತರಕನ್ನಡ ಜಿಲ್ಲೆಯಲ್ಲಿ ಮತ್ತು ಪಶ್ಚಿಮ ಘಟ್ಟದಲ್ಲಿ ಏಳುಸಾವಿರ ಪೂಟಿನ ಮೇಲೆ ಬೆಳೆಯುವಂತಹ ಗಿಡವೆಂದು ವರ್ಣಿಸಿ ಆ ಶಬ್ದದ ಮೂಲವು ಕನ್ನಡದ್ದೆಂದು ಹೇಳಲಾಗಿದೆ. ಅದಕ್ಕೆ ಸಮಾನವಾದ ಶಬ್ದವು ಬೇರೆ ದ್ರಾವಿಡ ಭಾಷೆಗಳಲ್ಲಿ ಅಥವಾ ಮರಾಠಿಯಲ್ಲಿ ದೊರೆಯುವುದಿಲ್ಲವಾದ್ದರಿಂದ ಅದು ಕನ್ನಡಕ್ಕೆ ವಿಶಿಷ್ಟವಾದ ಶಬ್ದವಾಯಿತು. ಇಂತಹ ಅನೇಕ ಶಬ್ದಗಳು ಈ ಕೋಶದ ಪರಿಶೀಲನೆಯಿಂದ ದೊರೆಯಬಹುದಾಗಿದೆ.

ಅಚ್ಚಿನ ವಿಚಾರದಲ್ಲಿಯೂ ಅತ್ಯಂತ ಸೂಕ್ಷ್ಮ ಕುಸುರಿನ ಕೆಲಸ ನಡೆದಿದೆ. ಶಬ್ದದ ವಿವಿಧ ವಿವರಣೆಗಳಿಗಾಗಿ ಬೇರೆ ಬೇರೆ ಗಾತ್ರದ ಮೊಳೆಗಳ ಬಳಕೆಯಾಗಬೇಕಷ್ಟೆ. ಸಂಕ್ಷಿಪ್ತಾಕ್ಷರ ಸಂಜ್ಞೆ, ಪೂರ್ಣ ವಿರಾಮಾದಿ ಅವಗ್ರಹಚಿಹ್ನೆ ಇವುಗಳ ಉಪಯೋಗದಲ್ಲಿಯೂ ನಿರ್ದಿಷ್ಟತೆಯನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಇಂತಹ ವಿಚಾರಗಳಲ್ಲಿ ಕಿಟೆಲ್ ಎಷ್ಟೊಂದು ಸೂಕ್ಷ್ಮ ದೃಷ್ಟಿಯುಳ್ಳವನಾಗಿ ಪರಿಶ್ರಮ ಪಡುತ್ತಿದ್ದನೆಂಬುದಕ್ಕೆ ಇದೊಂದು ನಿದರ್ಶನ.

ಅಕ್ಷೋಭ- a-Kshobha - Freedom from agitation 2. Unagitated (M. Y)

ವಿಸ್ಫುಲಿಂಗ - vi-sphulinga. A spark of fire 2. a sort of posion (BP 53, 52)

ಮೇಲಿನ 'ಅಕ್ಷೋಭ' ಎಂಬ ಸಂಸ್ಕೃತ ಶಬ್ದದ ೨ ನೆಯ ಅರ್ಥ ಹೇಳಿದ ಮೇಲೆ ಪೂರ್ಣ ವಿರಾಮ ಕೊಟ್ಟು ಮುಂದೆ ಮೈಸೂರು ಭಾಗದಲ್ಲಿ ಪ್ರಯೋಗದಲ್ಲಿದೆ ಎಂದು ಸೂಚಿತವಾಗಿದೆಯಷ್ಟೆ. ಅದೇ ವಿಸ್ಫುಲಿಂಗದ ವಿಚಾರದಲ್ಲಿ Poison ದ ಮುಂದೆ ಪೂರ್ಣ ವಿರಾಮ ಕೊಡುವುದರಲ್ಲಿ ಪ್ರೂಫ್ನವರು ತಪ್ಪಿದ್ದರಿಂದ ಬಸವಪುರಾಣದಲ್ಲಿ ಅದರ ಎರಡನೇ ಅರ್ಥದಲ್ಲಿ ಮಾತ್ರ ಪ್ರಯೋಗವಾಗಿದೆ ಎಂಬ ತಪ್ಪು ಅರ್ಥ ಹೊರಡುತ್ತದೆ ಎಂದು ಕಿಟೆಲ್ ಪೀಠಿಕೆಯಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ. ಕರಡನ್ನು ತಿದ್ದುವ ಕಾರ್ಯದಲ್ಲಿ ಶಿವರಾಜ ಭಾರದ್ವಾಜ ಎಂಬುವರ ನೆರವು ವಿಶೇಷವಾಗಿ ಸಂದಿದೆ.

ಕೋಶದಲ್ಲಿ ಉಪಯೋಗಿಸಿದ ಸಂಕ್ಷೇಪಸೂಚಿ, ಸಾಹಿತ್ಯಸೂಚಿ, ಉಚ್ಚಾರಣಾ ವಿವರ ಮೊದಲಾದ

ತಾಂತ್ರಿಕ ಅಂಶಗಳನ್ನು ಕೋಶಾರಂಭದಲ್ಲಿಯೇ ಕೊಟ್ಟಿದ್ದಾರೆ. ಕೋಶವನ್ನು ಉಪಯೋಗಿಸುವಾಗ ಅವು ತುಂಬ ನೆರವಾಗುತ್ತವೆ. ಈ ಕೋಶ ಮಿಶನರಿಗಳಿಗಲ್ಲದೆ ಆಗಿನ ಬ್ರಿಟಿಶ್ ಸರಕಾರಕ್ಕೂ ಅವಶ್ಯಕವಾಗಿರುವುದರಿಂದ ಅದರ ಪ್ರಕಟನೆಗಾಗಿ ಕಂಪನಿ ಸರಕಾರ ಧನ ಸಹಾಯ ನೀಡಿತು. ಕೋಶ ಪ್ರಕಟವಾದ ನಂತರ ಪ್ರಪಂಚದ ಅನೇಕ ವಿದ್ವಾಂಸರ ಮೆಚ್ಚುಗೆ ಪಡೆಯಿತು. it will remain a monumentumare perennius of a noble life devoted to incessant earnest labour - ಎಂದಿದ್ದಾನೆ ಹಲ್ಷ್. ಈ ಕೋಶದ ವಿಮರ್ಶೆಯನ್ನು ಬರೆಯುತ್ತಾ ಫ್ಲೀಟ್ ಕೆಲವು ನ್ಯೂನತೆಗಳನ್ನು ತೋರಿಸಿರುವನಾದರೂ 'Every page of it and o its preface, bears witness to the constant care earnestness and throughtness with which Mr. Kittle devoted himself to the task that lay before him. It would have been diffcult to find any one more competent to undertake that task' [5] ಎಂಬುದಾಗಿ ಮುಕ್ತ ಕಂಠದಿಂದ ಹುದ್ಗಾರ ತೆಗೆದಿದ್ದಾನೆ [೨೨]

ಕಿಟೆಲ್ ಕೋಶ ತೌಲನಿಕ ಭಾಷಾಧ್ಯಯನಕ್ಕೆ, ಜಾನಪದ ಅಧ್ಯಯನಕ್ಕೆ ಮಹತ್ವದ ಸಾಮಗ್ರಿಗಳನ್ನು ಕೊಡುವುದರಿಂದ ಇದೊಂದು ಅತ್ಯುತ್ತಮ ಆಕರಗ್ರಂಥವಾಗಿದೆ. ಪ್ರಪಂಚದ ಶ್ರೇಷ್ಠ ನಿಘಂಟುಗಳನ್ನು ಹೆಸರಿಸುವಾಗ ಕಿಟೆಲ್ ನಿಘಂಟನ್ನು ಹೆಸರಿಸುತ್ತಾರೆ ಎಂಬುದು ಗಮನಿಸಬೇಕಾದ ಸಂಗತಿ.

ಬ್ಯುಚರ್ ಕೋಶ

ಮಂಗಳೂರಿನಲ್ಲಿ ಮಿಶನರಿಯಾಗಿದ್ದ ಬ್ಯುಚರ್ ಶಾಲಾ ವಿದ್ಯಾರ್ಥಿಗಳಿಗಾಗಿ ಕನ್ನಡ-ಇಂಗ್ಲಿಶ್ ಶಬ್ದಕೋಶವನ್ನು ೧೮೯೪ ರಲ್ಲಿ ಪ್ರಕಟಿಸಿದರು. ೧೯೨೩ ರಲ್ಲಿ ಕ್ರಿಸ್ತಾನುಜ ವಾಟ್ಸನು ಅದನ್ನು ವಿಸ್ತೃತಗೊಳಿಸಿ ಪರಿಷ್ಕರಿಸಿ ಪ್ರಕಟಿಸಿದರು. ಈಗ ಏಶಿಯನ್ ಎಜ್ಯುಕೇಶನ್ ಸರ್ವಿಸ್ (A. E. S.) ದವರು ಪ್ರಕಟಿಸಿದ ಈ ಕೋಶ ೯ ನೆಯ ಆವೃತ್ತಿಯನ್ನು ಕಂಡಿದ. (೧೯೯೬) ೫೩೯ ಪುಟಗಳ ವ್ಯಾಪ್ತಿಯನ್ನು ಒಳಗೊಂಡಿರುವ ಈ ಕೋಶದಲ್ಲಿ ಸು ೧೮ಸಾವಿರ ಶಬ್ದಗಳಿಗೆ ಅರ್ಥಕೊಡಲಾಗಿದೆ.

ಬ್ಯುಚರ್‌ನ ಈ ಕೋಶಕ್ಕೆ ಕಿಟೆಲ್‌ರ ಕೋಶವೇ ತಳಹದಿಯಾಗಿದೆ. ಅದನ್ನು ಬ್ಯುಚರ್ ಸ್ಪಷ್ಟವಾಗಿಯೇ ಹೇಳಿದ್ದಾನೆ[೨೩] ಅಲ್ಲದೆ ರೀವ್ಸ್, ಜೀಗ್ಲರ್‌ರ ಕೋಶಗಳನ್ನು ಅಪ್ಟೆ ಅವರ ಸಂಸ್ಕೃತ-ಇಂಗ್ಲಿಶ್ ಕೋಶ, ಮೊಳೇಶ್‌ವರ್ಥರ ಮರಾಠಿ-ಇಂಗ್ಲಿಶ್ ಕೋಶ ಹಾಗೂ ಕಾರ್ವನರ್ ಹಿಂದೂಸ್ತಾನಿ-ಇಂಗ್ಲಿಶ್ ಕೋಶಗಳನ್ನು ಬಳಸಿಕೊಂಡಿದ್ದಾನೆ. ಇವನು ಪದಗಳ ಅರ್ಥಗಳನ್ನು ಕಿಟೆಲ್ ನಿಘಂಟಿನಿಂದ ಸಂಗ್ರಹಿಸಿದ್ದಾನಲ್ಲದೆ

K = (pure kannada)

Mal = Malayalam

t = tamil

Tu = Tulu

a. k. = Ancient Kannada

ಇತ್ಯಾದಿ ಸಂಕೇತಾಕ್ಷರಗಳನ್ನು ಅಲ್ಲಿಂದಲೇ ತೆಗೆದುಕೊಂಡಿದ್ದಾನೆ. ಆದರೆ ಕಿಟೆಲ್ ನಿಘಂಟಿನ ಮುಖ್ಯ ಗುಣಗಳಾದ ಪದಗಳ ರೋಮನ್ ಲಿಪ್ಯಂತರ, ಪ್ರಾಚೀನ ಕಾವ್ಯಗಳಿಂದ ಉದಾಹರಣೆಗಳನ್ನು ಕೊಡುವುದು ಗಾದೆಗಳಿಂದ ಅರ್ಥ ಸಮರ್ಥನೆ ದ್ರಾವಿಡ ಜ್ಞಾತಿಪದಗಳನ್ನು ಕೊಡುವುದು ಮುಂತಾದವುಗಳನ್ನು ಕೈಬಿಟ್ಟಿದ್ದಾನೆ. ಪದಗಳ ಭಾಷಾಮೂಲ ಕೊಡುವ ಸಂದರ್ಭದಲ್ಲಿ ರೀವ್ ನಿಘಂಟನ್ನು ಅನುಸರಿಸಿದ್ದಾನೆ. ಆದರೆ ಇವೆರಡನ್ನೂ ಉಲ್ಲೇಖ ಪದದ ಮುಂಬದಿಯಲ್ಲಿ ಒಟ್ಟಿಗೆ ಕೊಟ್ಟಿರುವುದರಿಂದ ಗೊಂದಲ ಉಂಟಾಗಿದೆ. ಜೀಗ್ಲರ್ ನಿಘಂಟನ್ನು ಅನುಸರಿಸಿ ವ್ಯಾಕರಣ ಸಂಕೇತಗಳನ್ನು ಕೊಟ್ಟಿದ್ದಾನೆ. ಆ ನಿಘಂಟಿನ ಮುಖ್ಯ ಗುಣವಾದ ಒಂದು ಪದ ಪ್ರಯೋಗವಾಗುವ ಬೇರೆ ಬೇರೆ ರೀತಿಗಳನ್ನು ಉದಾಹರಿಸಿ ಅವುಗಳ ಅನುವಾದಗಳನ್ನು ಕೊಡುವ ಪದ್ಧತಿ ಇಲ್ಲಿಲ್ಲ. ಈ ಎಲ್ಲವೂ ಕಲಸುಮೇಲೋಗರವಾಗಿ ಪರಿಣಮಿಸಿದೆ. 'ಬ್ಯುಚರ್ ನಿಘಂಟು ಒಂದು ಸುಸಂಬದ್ಧವಾದ ಸಂಕ್ಷಿಪ್ತ ನಿಘಂಟಾಗಿರದೆ ಬೇರೆ ಬೇರೆ ಮೂಲಗಳಿಂದ ಕೆಲವು ಅಂಶಗಳನ್ನು ಸ್ವೀಕರಿಸಿ ತಯಾರಿಸಿದ ಒಂದು ಕಲಸು ನಿಘಂಟಾಗಿದೆ'[೨೪]

ಮುಖ್ಯ ಉಲ್ಲೇಖದಿಂದ ನಿಷ್ಪನ್ನವಾಗುವ ಸಾಧಿತ ರೂಪಗಳನ್ನು ಪ್ರತ್ಯೇಕವಾಗಿ ಅಕಾರಾದಿಯಲ್ಲಿ ಕೊಟ್ಟು ಅರ್ಥ ವಿವರಿಸಿದ್ದಾನೆ. ಇದು ಬ್ಯುಚರ್ ನಿಘಂಟಿನ ವೈಶಿಷ್ಟ್ಯ (ಇತರ ಮಿಶನರಿ ಕೋಶಗಳಲ್ಲಿ ಸಾಧಿತ ರೂಪಗಳನ್ನು ಮುಖ್ಯ ಉಲ್ಲೇಖದ ಮುಂಬದಿಯಲ್ಲಿಯೇ ನೀಡಲಾಗಿದೆ)

ಉದಾ-

ಅಗ್ರ, S. N. Atop, point, front, thebeginning

ಅಗ್ರಗಣ್ಯ, S. A. Foremost, leading

ಅಗ್ರಗಾಮಿ, S. N. A leader, apioneer

ಅಗ್ರಬಲ, S. N. An Advance force

ಮುಖ್ಯ ಉಲ್ಲೇಖಕ್ಕೆ ನಾನಾರ್ಥಗಳಿದ್ದರೆ ಅವುಗಳನ್ನು ೧. ೨. ೩ ಹೀಗೆ ಸಂಖ್ಯೆಗಳನ್ನು ಬಳಸಿಕೊಡಲಾಗಿದೆ.

ಉದಾ-

ಅಂಕ 1. S. N. A book, 2. the lap, thing 3. the side or flank 4. the body 5. a mark 6. a numerical figure 7. afault 8. proximity 9. place

ಇತರ ಪ್ರದೇಶಗಳಿಂದ ಬಂದಿರುವ ರೂಪಗಳನ್ನು ಆ ಪ್ರದೇಶದ ಸಂಕೇತದ ಮೂಲಕ ಸೂಚಿಸಿದ್ದಾನೆ.

ಕಂಗೋರೆ, m. n. An ornamental cordon; groove

ತೂರಿ ಮೀನು k. n. sardine (kdp)

ಬ್ಯುಚರ್‌ರಿಗೆ ಶಬ್ದಾಂತ್ಯ ಎ /ಇ ಧ್ವನಿ ಪರಿವರ್ತನೆಯ ವಿಕಲ್ಪ ಉಂಟಾಗಿರಬಹುದು ಮುಖ್ಯ ಉಲ್ಲೇಖಗಳನ್ನು ಕೊಡುವಾಗ ಎರಡನ್ನೂ ಉಲ್ಲೇಖಿಸುತ್ತಾನೆ.

ಕೊರೆ/ಕೊರಿ - To cut

ಕೊಂಪೆ, ಕೊಂಪಿ - A smallhamlet

ಕೊಳವಿ, ಕೊಳವೆ - A tube

ಅಡುನೆಲ್ಲಿಗಿಡ, ಅಡುಸೊಗೆ ಇಂತಹ ಸಸ್ಯಗಳ ಹೆಸರುಗಳು, ಮಂಡಕ್ಕಿ, ಮುದ್ದೆ, ಸಾಂಬಾರು ಇಂತಹ ಆಹಾರ ಪದಾರ್ಥಗಳ ಹೆಸರುಗಳು ಕೋಶದಲ್ಲಿ ದಾಖಲಾಗಿದೆ.

ನಿತ್ಯ ಬದುಕಿನಲ್ಲಿ ಬಳಕೆಯಾಗುವ ಪದ ಪುಂಜಗಳು ಈ ಕೋಶದಲ್ಲಿ ಉಲ್ಲೇಖವಾಗಿವೆ

ಉದಾ-

ಅರುಮೂರು ಮಾಡು - To pervert

ಕೊಕ್ಕೆ ಮನುಷ್ಯ - A perverseman

ಗಂಡಾಗುಂಡಿ - Impudence ; audacity

ಈ ಕೋಶವು ವಿದ್ಯಾರ್ಥಿಗಳನ್ನು ಅನುಲಕ್ಷಿಸಿ ರಚನೆಯಾಗಿರುವುದರಿಂದ ಸಂಕೀರ್ಣ, ಗೊಂದಲಮಯವಾದ ಶಬ್ದಗಳು ದಾಖಲಾಗಿಲ್ಲ. ಕೋಶದಲ್ಲಿ ಉಪಯೋಗವಾದ ಸಂಕೇತಾಕ್ಷರಗಳ ಪಟ್ಟಿಯನ್ನು ಆರಂಭದ ಭಾಗದಲ್ಲಿಯೇ ಕೊಟ್ಟಿದ್ದಾನೆ. ಇದು ಕೋಶವನ್ನು ಉಪಯೋಗಿಸುವಾಗ ತುಂಬ ನೆರವಾಗುತ್ತದೆ.

ಹೀಗೆ ಐದು ಮಿಶನರಿಗಳು ಕನ್ನಡ-ಇಂಗ್ಲಿಶ್ ದ್ವಿಭಾಷಿಕ ನಿಘಂಟುಗಳನ್ನು ರಚಿಸಿದರು. ಅವುಗಳಲ್ಲಿ ರೀವ್ ಕೋಶ ಗಾತ್ರದ ದೃಷ್ಟಿಯಿಂದ ವಿಸ್ತಾರವಾಗಿದೆ. ಸ್ಯಾಂಡರ್‌ಸನ್ ಅದನ್ನು ಪರಿಷ್ಕರಿಸಿ ವಿಸ್ತರಿಸಿದರು. ಗ್ಯಾರೆಟ್ ಮತ್ತು ಬ್ಯುಚರ್‌ರ ಕೋಶಗಳು ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟು ರಚಿತವಾಗಿವೆ. ಕಿಟೆಲ್ ಕೋಶ ಗುಣ ಮತ್ತು ಗಾತ್ರಗಳಲ್ಲಿ ಮಹತ್ವದ್ದಾಗಿದೆ. ಅದೊಂದು ಪ್ರಮಾಣಭೂತ ನಿಘಂಟಾಗಿದೆ. ಮಿಶನರಿಗಳಿಗೆ ತಮ್ಮ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳಲು ಹಾಗೂ ಕನ್ನಡವನ್ನು ಕಲಿಯುವಲ್ಲಿ ಈ ಕೋಶಗಳು ತುಂಬ ನೆರವಾದವು.

ಕೊನೆ ಟಿಪ್ಪಣಿಗಳು

ಕಿಟೆಲ್ ಕೋಶ ಎಂ. ಮರಿಯಪ್ಪ ಭಟ್ಟ ಅವರ ಪರಿಷ್ಕರಣ

ಕಿಟೆಲ ನಿಘಂಟು ಸುಮಾರು ಏಳು ದಶಕಗಳಿಗೂ ಹೆಚ್ಚು ಕಾಲ ಮರುಮುದ್ರಣವನ್ನಾಗಲಿ, ಮರುಪರಿಷ್ಕರವನ್ನಾಗಲಿ ಕಂಡಿರಲಿಲ್ಲ. ಇಂತಹ ಬೃಹತ್ ಯೋಜನೆಯನ್ನು ಕೈಗೆತ್ತಿಕೊಂಡು ಮದರಾಸು ವಿಶ್ವವಿದ್ಯಾಲಯದ ಮೂಲಕ ಪ್ರೊ. ಎಂ. ಮರಿಯಪ್ಪ ಭಟ್ಟರು ಆಗು ಮಾಡಿದರು. ಪ್ರೊ. ಭಟ್ಟರು ಅಲಭ್ಯವಾಗಿದ್ದ ಕಿಟೆಲರ ನಿಘಂಟನ್ನು ಪರಿಷ್ಕರಿಸಿ ವಿಸ್ತೃತಗೊಳಿಸಿ ಪ್ರಕಟಿಸಿರುವುದು ಕನ್ನಡಕ್ಕೆ ಮಾತ್ರವಲ್ಲದೆ ದ್ರಾವಿಡ ಭಾಷೆಗಳಿಗೇ ಅವರು ಸಲ್ಲಿಸಿದ ಅಪೂರ್ವ ಕೊಡುಗೆಯಾಗಿದೆ. ಪ್ರೊ. ಭಟ್ಟರು ತಮ್ಮ ಸಹೋದ್ಯೋಗಿಗಳಾದ ಡಾ. ಎ. ಎಸ್. ಕೆದಿಲಾಯ ಮತ್ತು ಡಾ. ಪಾಶ ಶ್ರೀನಿವಾಸ ಅವರ ಸಹಕಾರದೊಂದಿಗೆ ಕೇವಲ ಎಂಟುವರ್ಷಗಳಲ್ಲಿ ಈ ನಿಘಂಟನ್ನು ವಿಸ್ತರಿಸಿ, ಪರಿಷ್ಕರಿಸಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದರು. ಮೊದಲ ಸಂಪುಟದಲ್ಲಿ ೪೧೪ ಪುಟಗಳಿದ್ದು 'ಅ' ದಿಂದ 'ಅಃ' ವರೆಗಿನ ವರ್ಣಗಳಿಂದ ಪ್ರಾರಂಭವಾಗುವ ಪದಗಳಿಂದ ಕೂಡಿದೆ. ಎರಡನೆಯ ಸಂಪುಟವು 'ಕ' ದಿಂದ 'ದ' ವರೆಗಿನ ವರ್ಣಗಳಿಂದ ಪ್ರಾರಂಭವಾಗುವ ಪದಗಳಿಂದ ಕೂಡಿದ್ದು ೫೫೯ ಪುಟಗಳ ವ್ಯಾಪ್ತಿಯನ್ನು ಹೊಂದಿದೆ. ಮೂರನೆಯ ಸಂಪುಟದಲ್ಲಿ 'ನ'ದಿಂದ 'ಮ' ವರೆಗಿನ ವರ್ಣಗಳಿಂದ ಪ್ರಾರಂಭವಾಗುವ ಪದಗಳು ಒಳಗೊಂಡಿದ್ದು ಇದು ೫೨೧ ಪುಟಗಳ ವ್ಯಾಪ್ತಿಯನ್ನು ಪಡೆದಿದೆ. ನಾಲ್ಕನೆಯ ಸಂಪುಟವು 'ಯ' ದಿಂದ ವರ್ಣಮಾಲೆಯ ಕೊನೆಯವರೆಗಿನ ಆರಂಭವಾಗುವ ಪದಗಳನ್ನು ಹೊಂದಿದ್ದು ಅದು ೪೬೦ ಪುಟಗಳ ವಿಸ್ತಾರವನ್ನು ಹೊಂದಿದೆ. ಈ ನಾಲ್ಕು ಸಂಪುಟಗಳು ಕ್ರಮವಾಗಿ ೧೯೬೮. ೧೯೭೯. ೧೯೭೦. ೧೯೭೧ ರಲ್ಲಿ ಪ್ರಕಟವಾದುವು. ಈ ನಿಘಂಟಿನ ಪ್ರಥಮ ಸಂಪುಟದ ಮುನ್ನುಡಿಯಲ್ಲಿ ಕನ್ನಡ ನಿಘಂಟುಗಳ ಇತಿಹಾಸವನ್ನು ನಿರೂಪಿಸಲಾಗಿದೆ. 'A Bigraphical Note'ಎಂಬ ಭಾಗದಲ್ಲಿ ಕಿಟೆಲನ ಜೀವನ ಮತ್ತು ಕೃತಿಗಳ ಪರಿಚಯವಿದೆ. ' The present work' ಎಂಬ ಭಾಗದಲ್ಲಿ ಪರಿಷ್ಕೃತ ನಿಘಂಟಿನ ಸ್ವರೂಪ ಹಾಗೂ ಅವರ ಅಧ್ಯಯನ ವಿವರಣೆಯನ್ನು ಮರಿಯಪ್ಪಭಟ್ಟರು ಇಂಗ್ಲಿಶ್‌ನಲ್ಲಿ ನೀಡಿದ್ದಾರೆ.

ಪ್ರೊ. ಮರಿಯಪ್ಪ ಭಟ್ಟರು ಪರಿಷ್ಕರಿಸಿ ಪ್ರಕಟಿಸಿರುವ ಕಿಟೆಲ್ ನಿಘಂಟಿಗೆ ಹೊಸದಾಗಿ ಏಳುಸಾವಿರದ ಎಂಟುನೂರ ನಲವತ್ತು ಹೊಸ ಉಲ್ಲೇಖಗಳನ್ನು ತಾವು ಸೇರಿಸಿರುವುದಾಗಿ ಹೇಳಿಕೊಂಡಿದ್ದಾರೆ. ಅವರು ಹೊಸದಾಗಿ ಶಬ್ದ ಸಂಗ್ರಹಕ್ಕೆ ಆಧರಿಸಿದ ಕೃತಿಗಳು ಕವಿರಾಜಮಾರ್ಗ, ಪಂಪಭಾರತ, ಆದಿಪುರಾಣ, ವಡ್ಡಾರಾಧನೆ, ಬಸವೇಶ್ವರರ, ಚೆನ್ನಬಸವೇಶ್ವರರ ವಚನಗಳು. ಕಿಟೆಲ್‌ರವರು ನಿಘಂಟು ರಚಿಸುವ ಕಾಲದಲ್ಲಿ ಈ ಕೃತಿಗಳು ಲಭ್ಯವಾಗಿರಲಿಲ್ಲ. ಹೊಸತಾಗಿ ಸೇರಿಸಲಾದ ಪದಗಳ ಮೇಲೆ (*) ನಕ್ಷತ್ರ ಚಿಹ್ನೆಯ ಮೂಲಕ ಸೂಚಿಸಿದ್ದಾರೆ. ಹೊಸ ಪ್ರಯೋಗಗಳನ್ನು ಅರ್ಥಗಳನ್ನು ಚೌಕ ಕಂಸಗಳೊಂದಿಗೆ [ ] ಗುರುತು ಮಾಡಿದ್ದಾರೆ.

ಒಂದು ಪದ (ಕವಿರಾಜ ಮಾರ್ಗ, ಪಂಪಭಾರತ, ಆದಿಪುರಾಣಗಳಲ್ಲಿ) ಒಂದಕ್ಕಿಂತ ಹೆಚ್ಚು ಗ್ರಂಥಗಳಲ್ಲಿ ಬಂದಿದ್ದರೆ, ಹೆಚ್ಚು ಪ್ರಾಚೀನ ಗ್ರಂಥದಿಂದ ಪ್ರಯೋಗವನ್ನು ಕೊಟ್ಟು, ಉಳಿದವುಗಳಿಂದ ಆಕರ ಮಾತ್ರ ಸೂಚಿಸಲಾಗಿದೆ. ಪ್ರತ್ಯಯಗಳನ್ನೂ ಬದ್ಧ ಆಕೃತಿಮಾಗಳನ್ನೂ (bound Morphs) ಸೂಚಿಸುವಲ್ಲಿ (-) ಚಿಹ್ನೆಯನ್ನು ಉಪಯೋಗಿಸಿದ್ದಾರೆ. ಏನಾದರೂ ಹೆಚ್ಚಿನ ವಿವರವನ್ನು ಹೇಳಬೇಕಾದಲ್ಲಿ ... ಚಿಹ್ನೆಯನ್ನು ಕೊಟ್ಟಿರುತ್ತಾರೆ. ಹೆಚ್ಚಾಗಿ ಕಿಟೆಲರು ಉಪಯೋಗಿಸಿದ ಸಂಕೇತ ಚಿಹ್ನೆಗಳನ್ನೇ ಉಪಯೋಗಿಸಿದ್ದಾರೆ. ಕೆಲವಡೆ ಮಾತ್ರ ಇಂದು ಸರ್ವತ್ರ ಬಳಕೆಯಲ್ಲಿರುವವನ್ನು ತರಬೇಕಾಯಿತು. ಚ, ಞ, ಶ, ಷ ಗಳನ್ನು ಇಂಗ್ಲಿಶ್‌ನಲ್ಲಿ c, n, s, s ಎಂದು ಕೊಡಲಾಗಿದೆ. ಕಿಟೆಲರು ನಿಘಂಟುವಿನ ಕೊನೆಯಲ್ಲಿ ಅನುಬಂಧಿಸಿದ್ದ ಹೆಚ್ಚಿನ ಪದಗಳನ್ನೂ ಒಪ್ಪೋಲೆಗಳನ್ನೂ ಆಯಾ ಸ್ಥಳಗಳ ಗ್ರಂಥ ಭಾಗದಲ್ಲಿ ಸೇರಿಸಲಾಗಿದೆ. ಕಿಟೆಲರ ಆವೃತ್ತಿಯಲ್ಲಿ ಕಂಡುಬರುವ ತಪ್ಪುಗಳನ್ನು ಸರಿಪಡಿಸಲಾಗಿದೆ.

ಈ ನಿಘಂಟಿನ ಪರಿಷ್ಕರಣ ಕಾರ್ಯದಲ್ಲಿ ಮರಿಯಪ್ಪಭಟ್ಟರು ಅನುಸರಿಸಿರುವ ಕ್ರಮ ರೀತಿ ವಿಧಾನಗಳ ಬಗೆಗೆ ಅವರೇ ಹೀಗೆ ಹೇಳಿದ್ದಾರೆ. 'First of all the earliest extant Kannada works (since found) namely kavirajmarga (865), Pampa Bharata and Adipurana (941) and the earliest prose work vaddaradhane (10th centurly) have been studied and vocables (of Basaveshwar and chenna Basaveshwar) have now been consulted. For fear of delay in the publication of the work we had to restrict our scope of collection to these works only. However, the lexical materials of most of the earliest of Kannada works are now to be found in the revised edition. All the Desya and Tadbhava words now collected have been listed. Samskrita words have been left out, as any good sanskrit Dictionary would give their meanings. This has made room for additional Desay words of the language, as desired by Mr. L. Rice in his review er of the work. Also the defects pointed out by another great reviewer, Fleet, with regard to the inconvenience felt due to meanings of words having not been given at certain places and the reader requiring to hunt forwards and back words has been minimised to a great extent by giving the meaning at places where one should expect them [೨೫]

ಮರಿಯಪ್ಪ ಭಟ್ಟರು ಪರಿಷ್ಕರಿಸಿದ ಈ ನಿಘಂಟಿನ ಕೆಲವು ವೈಶಿಷ್ಟ್ಯಗಳು ಇಂತಿವೆ.

೧. ಆದ್ಯಗ್ರಂಥಗಳಿಂದ ಸೂಕ್ತ ಪ್ರಯೋಗಗಳು ಚೌಕ ಕಂಸಗಳಲ್ಲಿ ಕೊಡಲಾಗಿದೆ.

ಉದಾ- ಇಡ್ಡಲಿಗೆ ; a kind of sour pudding (ಪೂರಿಗೆಯಿಡ್ಡಲಿಗೆ ಸೋದಿಗೆ ಲಾವಣಿಗೆ ... ಮೊದಲಾಗೊಡೆಯ ಪದಿನೆಣ್ಬುಂ ತೆರಿದ ಭಕ್ಷ್ಯ ರೂಪಂಗಳುಮಂ ವಡ್ಡಾರಾಧನೆ ಪುಟ-೭೮) ಹತ್ತನೆಯ ಶತಮಾನದಲ್ಲಿ ನಮ್ಮ ಜನ ಇಡ್ಡಲಿ ತಿನ್ನುತ್ತಿದ್ದರೆಂದರೆ ನಮ್ಮ ಇಡ್ಡಲಿಯ ಸಂಸ್ಕೃತಿ ಎಷ್ಟು ಪ್ರಾಚೀನವೆಂದು ಸಂತೋಷವಲ್ಲವೆ ?

೨. ಹೆಚ್ಚಿನ ಜ್ಞಾತಿ ಪದಗಳು (cognates) ಮುಖ್ಯವಾಗಿ ತುಳುವಿನಿಂದ

೩. ಹಿಂದೆ ಅರ್ಥ ಹೇಳದೆ ಇದ್ದಲ್ಲಿ, ಅರ್ಥಸೂಚಿಸಲು ಯತ್ನಿಸಿದೆ.

೪. ತಪ್ಪಾದ ಶಬ್ದ ವಿಭಜನೆಯಿಂದ ಆದ ಪ್ರಮಾದವನ್ನು ಹೋಗಲಾಡಿಸಿದೆ.

೫. ಮುಖ್ಯ ಶಬ್ದಗಳಿಗೆ ಅಲ್ಲಲ್ಲಿ ಅರ್ಥ ಕೊಡಲಾಗಿದೆ. ಅಲ್ಪಸ್ವಲ್ಪ ವ್ಯತ್ಯಾಸದಲ್ಲಿ ಅದೇ ಪದ, ಅದೇ ಪುಟದಲ್ಲಿದ್ದರೆ ಮಾತ್ರ ಅರ್ಥ ಕೊಡುವುದಿಲ್ಲ.

೬. ಹೆಚ್ಚು ಬಳಕೆಯಲ್ಲಿರುವ ಉಪಭಾಷಾ ರೂಪಗಳನ್ನು ಕಿಟೆಲ್ ಬಿಟ್ಟಿದ್ದರೆ ಮರಿಯಪ್ಪ ಭಟ್ಟರು ಬಹಳ ಪಟ್ಟಿಗೆ ಬಿಡಲಿಲ್ಲ. ಏಕೆಂದರೆ ಉಪಭಾಷೆಗಳ ಅಧ್ಯಯನಕ್ಕೆ ಅವು ತುಂಬ ನೆರವಾಗುತ್ತವೆ.

೭. ಅನುಸ್ವಾರಗಳನ್ನು ಬರೆಯುವಲ್ಲಿ ಕಿಟೆಲರ ಮಾರ್ಗವನ್ನೇ ಅನುಸರಿಸಿದ್ದಾರೆ. ಉಚ್ಚಾರಣೆಯ ದೃಷ್ಟಿಯಿಂದ ವರ್ಗಾನುಸ್ವಾರಗಳಿಗೆ ಬೇರೆ ಬೇರೆ ಬೆಲೆಯಿರುವುದು ಸರ್ವವಿದಿತ. ಇದು ನಾವು ಅಂಗ, ಅಂಜು, ಅಂಟು, ಅಂದು, ಅಂಬು ಎಂಬೀ ಪದಗಳನ್ನು ಒಂದೇ ರೀತಿಯಾಗಿ ಬಿಂದುವನ್ನು ಪಯೋಗಿಸಿ ಬರೆಯುತ್ತೇವೆ. ಆದರೆ ಈ ಬಿಂದುವಿಗೆ ಮೇಲಿನ ಐದೆಡೆಗಳಲ್ಲಿ ಬೇರೆ ಬೇರೆ ಐದು ಮೌಲ್ಯವುಂಟು. ಅದಕ್ಕೆ ಅನುಕ್ರಮವಾಗಿ ಙ, ಞ, ಣ, ನ, ಮಗಳಿಗೆ ಮೌಲ್ಯವಿದೆ. ಆದುದರಿಂದ ಭಾಷಾಶಾಸ್ತ್ರ ದೃಷ್ಟಿಯಿಂದ ಕಿಟೆಲರ ಮಾರ್ಗ ಶಾಸ್ತ್ರೀಯವಾಗಿದೆ. ಇವರು ಅದೇ ದಾರಿಯಲ್ಲಿ ಸಾಗಿದ್ದಾರೆ.

ಕಿಟೆಲರ ಆವೃತ್ತಿಯಲ್ಲಿ ಬಂದಿರುವ ತಪ್ಪುಗಳನ್ನು ಸರಿಪಡಿಸುವುದು ಈ ಪರಿಷ್ಕೃತ ಆವೃತ್ತಿಯ ಗಮನಾರ್ಹ ಅಂಶವಾಗಿದೆ.

ಉದಾ: ಅಲ್ಲಮ- allama = A Lingayata N; perhaps taken from H. Allah, Alaman (Bp. 59, 3 T. C) ಅಲ್ಲಮ ದೇವ An see - ತುಯ್ಯಲ್, ಸೊಕ್ಕಿ ಅಲ್ಲಮದೇವಿ Ansee ಸೋಹದ, ಹಾವಿನ- ಅಲ್ಲಮಪ್ರಭು AN (BP. 8 sum ; 8, 18)- ಕಿಟೆಲ್ ಸಂಪಾದಿತ

ಅಲ್ಲಮ - allama-a lingayata N, (Bp 59, 3 ; Te) ಅಲ್ಲಮದೇವ-an. see ತುಯ್ಯಲ್- ಸೊಕ್ಕಿ- ಅಲ್ಲಮದೇವಿ an. see ಸೋಹದ-ಹಾವಿನ- ಅಲ್ಲಮಪ್ರಭು-an of the Virasaiva saint (Bp. 8 sum 8, 1.8)- ಮರಿಯಪ್ಪಭಟ್ಟ ಸಂಪಾದಿತ

ಹೀಗಿದ್ದರೂ ಮರಿಯಪ್ಪಭಟ್ಟರು ಪರಿಷ್ಕರಿಸಿದ ಆವೃತ್ತಿಯಲ್ಲಿಯೂ ಕೆಲವು ದೋಷಗಳು ಉಳಿದಿವೆ (ಶಬ್ದಾರ್ಥದ ಬಗೆಗೆ) ಎಸ್. ಬಸವಾರಾಧ್ಯರು ಅವುಗಳನ್ನು ಗುರುತಿಸಿದ್ದಾರೆ[೨೬] ಉದಾಹರಣೆಗೆ ಕೆಲವನ್ನು ನೋಡಬಹುದು.

ಅಕಳಂಕ ; ಈ ಶಬ್ದವನ್ನು ಹೊಸದಾಗಿ ಸೇರಿಸಲಾಗಿದೆ. ಆದರೆ ಈ ಶಬ್ದಕ್ಕೆ ಯಾವ ಪ್ರಯೋಗವನ್ನೂ ಕೊಟ್ಟಿಲ್ಲ. ಆಕರವನ್ನೂ ಸೂಚಿಸಿಲ್ಲ.

ಅಚ್ಚಳಿಸು: ಆದಿಪುರಾಣ (೧೨-೧೩) ದ ಈ ಶಬ್ದವನ್ನು ಹೊಸದಾಗಿ ಸೇರಿಸಿ ಇದಕ್ಕೆ to destroy the form, ruin ಎಂಬ ಅರ್ಥವನ್ನು ಕೊಟ್ಟು .... this may be a scrible error for ಅಚ್ಚರಿಸು ಎಂದಿದ್ದಾರೆ. ಅಚ್ಚಟಿಸು, ಅಚ್ಚರಿಸು ಎಂಬ ಎರಡು ರೂಪಗಳೂ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುಗಳಲ್ಲಿ ಕಂಡುಬರುವುದಿಲ್ಲ ಇದು ಅಚ್ಚಳಿಸು ಎಂದು ಆದಿಪುರಾಣದ ಬೇರೆ ಬೇರೆ ಮುದ್ರಣಗಳಲ್ಲಿದೆ. ಈ ಶಬ್ದ ಅನೇಕ ಕಾವ್ಯಗಳಲ್ಲಿ ಬಳಕೆಯಲ್ಲಿದ ಹೀಗಾಗಿ ಅಚ್ಚಳಿಸು ಎಂಬುದನ್ನು ಉಚ್ಚಳಿಸು ಎಂಬುದಕ್ಕೆ ತಪ್ಪಾಗಿಕೊಟ್ಟಿರಬೇಕು.

ಅಂದಣಗಿತ್ತಿ; ಈ ಶಬ್ದವನ್ನು ಹೊಸದಾಗಿ ಸೇರಿಸಿ a showy woman ಎಂದು ಅರ್ಥವನ್ನು ಸೂಚಿಸಿದೆ. ಬಸವಣ್ಣನವರ ವಚನದ ಪ್ರಯೋಗವನ್ನು ಕೊಟ್ಟಿದೆ. ಆ ವಚನಗಳ ಕೋಶದಲ್ಲಿ ಬೋಯಿತಿ, ತನ್ನ ಶೃಂಗಾರವನ್ನು ಲಕ್ಷಿಸುವವಳು ಅಂದಗಾರ್ತಿ (?) ಎಂಬ ಅರ್ಥಗಳನ್ನು ಪ್ರಶ್ನಾರ್ಥಕ ಚಿಹ್ನೆಗಳೊಂದಿಗೆ ಕೊಡಲಾಗಿದೆ. ಚೆನ್ನಬಸವಣ್ಣನ ವಚನಗಳಲ್ಲೂ, ಮೋಳಿಗೆ ಮಾರಯ್ಯನ ವಚನಗಳಲ್ಲೂ ಈ ಶಬ್ದ ಪ್ರಯೋಗವಿದೆ. ಇವರ ಸರಿಯಾದ ಅರ್ಥವನ್ನು ಅಡಿಗೆಮಾಡಿ ಮಾರುವವಳು: ಆಹಾರ ವಿಕ್ರಯಿಸುವವಳು ಎಂದು ಕೊಡಬೇಕಾಗಿತ್ತು.

ಅವ್ವಳಿಸು: ಕಿಟೆಲ ಅವರು ಈ ಶಬ್ದಕ್ಕೆ ಅರ್ಥಗಳನ್ನೂ ಪ್ರಯೋಗಗಳನ್ನೂ ಕೊಟ್ಟಿದ್ದಾರೆ. ಪರಿಷ್ಕೃತ ನಿಘಂಟಿನಲ್ಲಿ ಅವ್ವಳಿಸು ಎಂಬ ಮತ್ತೊಂದು ಹೊಸ ಉಲ್ಲೇಖವನ್ನು ಕೊಟ್ಟು ಆದಿಪುರಾಣ ಮತ್ತು ಪಂಪ ಭಾರತದಿಂದ ಪ್ರಯೋಗಗಳನ್ನು ಉದ್ಧರಿಸಲಾಗಿದೆ. ಈ ಎರಡನೆಯ ಉಲ್ಲೇಖ ಅನಗತ್ಯ. ಕಿಟೆಲ್ ಅವರು ಕೊಟ್ಟಿರುವ ಅವ್ವಳಿಸು ಶಬ್ದಕ್ಕೆ ಈ ಅರ್ಥ ಪ್ರಯೋಗಗಳನ್ನು ಸೇರಿಸಬಹುದಾಗಿದೆ.

ಸರ್ವಯಮಕ : ಕವಿರಾಜಮಾರ್ಗ (೨-೧೩೭) ದಿಂದ ಈ ಶಬ್ದವನ್ನು ಹೊಸದಾಗಿ ಸೇರಿಸಿ ಇದಕ್ಕೆ 'one of the varieties' ಎಂಬ ಅರ್ಥವನ್ನು ಕೊಟ್ಟಿದೆ. ಶ್ರೀ ಎಂ. ವೆಂಕಟರಾವ್ ಮತ್ತು ಎಚ್. ಶೇಷಅಯ್ಯಂಗಾರ್ ಅವರು ಸಂಪಾದಿಸಿರುವ ಕವಿರಾಜಮಾರ್ಗದಲ್ಲಿ ಲಕ್ಷಣ ಪದ್ಯವನ್ನು ಉದಾಹರಿಸಿದ ಮೇಲೆ (ಇದು ಸರ್ವಯಮಕಂ) ಎಂದು ಪದ್ಯದ ಆದಿಯಲ್ಲಿ ಸೂಚಿಸಲಾಗಿದೆ. ಪ್ರೊ. ಎಂ. ವಿ. ಸೀತಾರಾಮಯ್ಯನವರು ಸಂಪಾದಿಸಿದ ಪ್ರತಿಯಲ್ಲಿ (ಯಮಕಂ) ಎಂದಿದೆ. ಡಾ. ಕೆ. ಕೃಷ್ಣಮೂರ್ತಿ ಅವರು ಸಂಪಾದಿಸಿರುವ ಪ್ರತಿಯಲ್ಲಿ ಯಮಕ ಭೇದಗಳು ಎಂದು ಈ ಲಕ್ಷ್ಯ ಪದಗಳ ಆದಿಯಲ್ಲಿ ಕೊಟ್ಟಿದೆ. ಈ ಶಬ್ದಕ್ಕೆ ಸೂಚಿಸಿರುವ ಅರ್ಥವೂ ಸಮರ್ಪಕವಾಗಿಲ್ಲ.

ಇಂತಹ ಉದಾಹರಣೆಗಳಿಂದ ನಿಘಂಟುಕಾರ್ಯದಲ್ಲಿ ಸಂಭವಿಸಬಹುದಾದ ಸ್ಖಾಲಿತ್ಯಗಳನ್ನು ಮನಗಾಣಬಹುದಾಗಿದೆ. ಪ್ರೊ. ಮರಿಯಪ್ಪಭಟ್ಟ ಅಪಾರ ಪರಿಶ್ರಮದಿಂದ ಹೊರತಂದಿರುವ ನಿಘಂಟಿನ ಪರಿಷ್ಕರಣ ದೋಷಯುಕ್ತವಾಗಿಲ್ಲ. ಏಕೆಂದರೆ ಭಾಷೆಯಲ್ಲಿನ ಎಲ್ಲ ಶಬ್ದಗಳನ್ನೂ ಅವುಗಳಿಗಿರುವ ಎಲ್ಲ ಅರ್ಥಗಳನ್ನೂ ಸಮಗ್ರವಾಗಿ, ಸಮರ್ಪಕವಾಗಿ ನಿರೂಪಿಸುವುದು ಅಸಂಭವ ಎಂಬುದನ್ನು ಕೋಶಕಾರರು ಬಲ್ಲರು.

ಭಟ್ಟರ ಮರು ಸಂಪಾದನೆಯಲ್ಲಿ ಕೆಲವು ಕೊರತೆಗಳಿವೆ. ಜ್ಞಾತಿ ಪದಗಳನ್ನು ಹೆಚ್ಚಾಗಿ ಅವರು ತುಳು ಭಾಷೆಯಿಂದಲೇ ಕೊಟ್ಟಿದ್ದಾರೆ. ಕ್ರಿ. ಶ ೧೯೬೮ ರ ಸುಮಾರಿಗೆ ಕನ್ನಡ ಭಾಷೆಯಲ್ಲಿ ತೀವ್ರವಾದ ಬದಲಾವಣೆ ನಡೆದಿತ್ತು. ಆಧುನೀಕರಣದ ಪ್ರಭಾವದಿಂದ ಎಷ್ಟೋ ಹೊಸ ಪದಗಳು ಕನ್ನಡದಲ್ಲಿ ಸೇರಿದ್ದವು. ನವೋದಯ ಸಾಹಿತ್ಯದಲ್ಲಿ ಅನೇಕ ಗ್ರಂಥಗಳು ಹೊರ ಬಂದಿದ್ದವು. ಕರ್ನಾಟಕದ ಉತ್ತರ ಭಾಗದ ಬೇರೆ ಬೇರೆ ಪ್ರದೇಶಗಳಲ್ಲಿ ಕನ್ನಡ ಪ್ರತ್ಯೇಕ ಉಪಭಾಷೆಯಾಗಿತ್ತು. ಇವನ್ನೆಲ್ಲ ಸೇರಿಸಬೇಕೆಂದು ಅವರು ಇಚ್ಛಿಸಿರುವಂತೆ ತೋರುವುದಿಲ್ಲ. ಕಿಟೆಲರ ನಿಘಂಟನ್ನು ಅವಲೋಕಿಸಿ ಗೋವಿಂದ ಪೈಯವರು ತಿದ್ದುಪಡಿ ಮಾಡಿದ ಶಬ್ದಾರ್ಥಗಳನ್ನು ಭಟ್ಟರು ಗಮನಿಸಿದಂತಿಲ್ಲ. ಮರು ಸಂಪಾದನೆಯಲ್ಲಿ ಆಧುನಿಕ ಕೋಶ ವಿಜ್ಞಾನದ ದೃಷ್ಟಿಯಿಂದ ಎಷ್ಟೋ ಹೊಸ ಅಂಶಗಳನ್ನೂ ಸೇರಿಸಬಹುದಿತ್ತು.

ಕೊನೆ ಟಿಪ್ಪಣಿ - ೨

ಬೇಂದ್ರೆ ಅವರ ಕಿಟೆಲ್ ಕೋಶಾಭ್ಯಾಸ

ದ. ರಾ. ಬೇಂದ್ರೆ ಅವರು ಕಿಟೆಲ್ ಕೋಶವನ್ನು ಅಭ್ಯಸಿಸಿ ಕೆಲವು ಟಿಪ್ಪಣಿಗಳನ್ನು ಮಾಡಿದ್ದಾರೆ. ಆ ಟಿಪ್ಪಣಿಗಳನ್ನು ವ್ಯವಸ್ಥಿತವಾಗಿ ಶೇಖರಿಸಿ ಡಾ. ವಾಮನಬೇಂದ್ರೆಯವರು ಲೇಖನವೊಂದನ್ನು ಬರೆದಿದ್ದಾರೆ.[೫] ಈ ಭಾಗವನ್ನು ಬರೆಯುವಾಗ ಅವರ ಲೇಖನವನ್ನು ಧಾರಾಳವಾಗಿ ಬಳಸಿಕೊಂಡಿದ್ದೇನೆ. ಬೇಂದ್ರೆಯವರು ಮಾಡಿಕೊಂಡ ಟಿಪ್ಪಣಿಗಳನ್ನು ಏಕಾರ್ಥ ಪದಪಟ್ಟಿ, ಸಕರ್ಮಕ ಶಬ್ದ ಸಂಗ್ರಹ ಕನ್ನಡ ಮರಾಠಿ ಶಬ್ದ ಸಾಮ್ಯ, ಗಾದೆಮಾತು ನಿರ್ಮಿತಿಗಳೆಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಬಹುದು.

ಏಕಾರ್ಥ ಪದಪಟ್ಟಿ

೧. ಬಂಗ-ತರಂಗ-ವೀಚಿ-ತೆರೆ-ಅಲೆ-ಉರ್ಮಿ

೨. ಕೂಟ-ಯೋಗ-ಸಂಧಿ-ನೆರೆ-ಮಿಲನ

೩. ಭ್ರಮರ-ಚಂಚರೀಕ-ಭೃಂಗ-ಇಂದಿಂದರ-ಅಲರುಣಿ-ಆರಡಿ -ಪರಮೆ- ತುಂಬಿ-ಬಂಡುಣಿ -ಗುಂಗಿ

ಹೀಗೆ ಅನೇಕ ಕಡೆ ಬೇಂದ್ರೆಯವರು ಏಕಾರ್ಥ ಪದ ಪಟ್ಟಿಕೆಗಳನ್ನು ಮಾಡಿದ್ದಾರೆ. ವಿಪುಲಾರ್ಥವಿರುವುದೂ ಒಂದು ಶಬ್ದ ಶಕ್ತಿ ಕಾವ್ಯಗುಣ. ಈ ಗುಣವನ್ನು ಬೆಳೆಸಿಕೊಳ್ಳುವುದಕ್ಕೆ ಏಕಾರ್ಥಪದಪಟ್ಟಿ ಮಾಡುವ ಅಭ್ಯಾಸ ಅವಶ್ಯ ಎಂದು ತೋರುತ್ತದೆ. 'ಭೃಂಗದ ಬೆನ್ನೇರಿ ಬಂತು', 'ತುಂಬಿ' ಇತ್ಯಾದಿ ಅವರ ರಚನೆಯ ಮೇಲೆ ನಮೂದಿಸಿದ ಕವನದ ಶೀರ್ಷಿಕೆ ಏಕಾರ್ಥ ಪದಪಟ್ಟಿ ಅಭ್ಯಾಸದ ಫಲವನ್ನು ಊಹಿಸಲು ಸಾಧ್ಯ.

ಸಕರ್ಮಕ ಶಬ್ದ ಸಂಗ್ರಹ

ಕೇವಲ ಕೋಶಪಾಠವಿದ್ದವನು ಕವಿಯಾಗಲಾರ ಅಕರ್ಮಕ ಶಬ್ದಕೋಶವನ್ನು ಸಕರ್ಮಕ ಶಬ್ದಕೋಶ ಮಾಡಿಕೊಳ್ಳುವ ಕೌಶಲ್ಯವನ್ನು ಪಡೆದವನು ಶಬ್ದ ಸೌಂದರ್ಯವನ್ನು ಅರಳಿಸುವಲ್ಲಿ ಶಕ್ತನಾಗುವನು. ಅಂಥ ಅಭ್ಯಾಸವನ್ನು ಬೇಂದ್ರೆಯವರು ಮಾಡಿದಕ್ಕೆ ಕೆಲವು ಆಧಾರಗಳನ್ನು ಕಾಣುತ್ತೇವೆ.

ಕಿಟೆಲ್ ಕೋಶ

ಅಗೋ (ಪುಟ -೪)	ಅಗೋ ಎಂದು ತೋರಲೆಂತು ಅಗೋಚರವ ನಾವು ?
ಎಳಸು (ಪುಟ- ೨೮೩)	ಎಳತಿನಲ್ಲಿ ಎರಸಿದತ್ತ ನಮ್ಮ ನಿಮ್ಮ ಎಳೆತವು
ಚಪ್ಪಡಿ, ಚಪ್ಪಟೆ (ಪುಟ-೫೯೩)	ಮುಂದೆ ಇತ್ತು ಚಪ್ಪಡಿ ಅಲ್ಲಿ ಬಿತ್ತು ತಪ್ಪಡಿ ದೊಪ್ಪನೆಂದು ಅಪ್ಪಳಿಸಲು ಚಪ್ಪೆಯಾಯಿತು ಚಪ್ಪಟೆ

ಈ ರೀತಿ ಬೇಂದ್ರೆಯವರ ಕಾವ್ಯ ಕೌಶಲ್ಯ ಸಾಧನೆಯಲ್ಲಿ ಕಿಟೆಲ್ ಕೋಶವು ಪ್ರೇರಕವಾಗಿದೆ.

ಕನ್ನಡ-ಮರಾಠಿ ಶಬ್ದ ಸಾಮ್ಯ

ಬೇಂದ್ರೆಯವರ ಮಾತೃಭಾಷೆ ಮರಾಠಿಯಾಗಿದ್ದರಿಂದ ಕಿಟೆಲ್ ಕೋಶವನ್ನು ಅಭ್ಯಸಿಸುವಾಗ ಮರಾಠಿ ಶಬ್ದಗಳ ಸಾಮ್ಯವನ್ನು ಕಾಣುವುದು ಸಹಜ. ಅವರು ಕೆಲವು ಶಬ್ದಗಳನ್ನು ಹೀಗೆ ಗುರುತಿಸಿದ್ದಾರೆ.

ಕನ್ನಡ	ಮರಾಠಿ
ಓಡ	ಹೋಡಿ
ಕಡಿ	ಕಧಿ
ಕಲ್ಮಷ	ಕಳಕಣೆ
ಗಾವಳಿಗ	ಗಾವಢಳ
ಗುಜಾರಿ	ಖುಜಾ
ಪವಾಡ	ಪೋವಾಡಾ
ಡವಕ	ಡಬಕೆ ಮುಂತಾದವು

ಗಾದೆ ಮಾತು ನಿರ್ಮಿತಿ

ಗಾದೆ ಮಾತಿನ ಅರ್ಥ ತಿಳಿಯುವುದು ಮತ್ತು ಗಾದೆ ಮಾತು ನಿರ್ಮಿಸುವುದು ಒಂದು ಪ್ರತ್ಯೇಕ ಕೌಶಲ್ಯ. ಆ ಸಾಧನೆಯನ್ನು ಬೇಂದ್ರೆಯವರು ಹೀಗೆ ಮಾಡಿದ್ದಾರೆ.

ಕಿಟೆಲ್ ಕೋಶ ಶಬ್ದ	ಬೇಂದ್ರೆಯವರ ಗಾದೆ ಮಾತಿನ ನಿರ್ಮಿತಿ
ಪಚಡಿ	ಪಚಡಿ ಮಾಡುವೆನೆಂದು ಖಿಚಡಿ ಮಾಡಿದ್ದಾನೆ
ಬೆಸುಗೆ	ಬಿಸಿ ಇಲ್ಲದೆ ಬೆಸುಗೆಯುಂಟೆ ?
ಮೈಲಿಗೆ	ಮೈಲಿಗಿಲ್ಲದವರಿಗೆ ಮಡಿವಾಳನೇಕೆ ?

ಹೀಗೆ ಬೇಂದ್ರೆಯವರು ಕಿಟೆಲ್ ಕೋಶವನ್ನು ಅಭ್ಯಸಿಸುವಾಗ ಅನೇಕ ಟಿಪ್ಪಣಿಗಳನ್ನು ಮಾಡಿರುವರು. ಅವರ ಕಾವ್ಯದಲ್ಲಿ ವಿಪುಲಾರ್ಥ, ಹುರಿಕಟ್ಟಾದ ಮಾತುಗಳಿಗೆ ಈ ಕೋಶಾಭ್ಯಾಸವೂ ಪೋಷಕವಾಗಿದೆಯೆಂದು ತೋರುತ್ತದೆ. ಕೋಶಕಾರರು ಕವಿಗಳ ಕಾವ್ಯಾಭ್ಯಾಸವನ್ನು ಮಾಡಿ ಕೋಶಗಳನ್ನು ನಿರ್ಮಿಸುತ್ತಾರೆ. ಕವಿಗಳು ಕೋಶಾಭ್ಯಾಸವನ್ನು ಮಾಡಿ ಕಾವ್ಯ ರಚಿಸುತ್ತಾರೆ ಅಥವಾ ಕಾವ್ಯಕ್ಕೆ ಬೇಕಾದ ಪದಭಂಡಾರವನ್ನು ಬೆಳೆಸಿಕೊಳ್ಳುತ್ತಾರೆ. ಹೀಗಾಗಿ ಕವಿಗೂ ಕೋಶಕಾರರಿಗೂ ಒಂದು ಅನ್ಯೋನ್ಯ ಸಂಬಂಧ ಬೆಳೆದು ಬಂದಿದೆ.

ಕೊನೆ ಟಿಪ್ಪಣಿ-೩

ದ್ರಾವಿಡ ವ್ಯುತ್ಪತ್ತಿ ನಿಘಂಟಿನಲ್ಲಿ ಆಕರವಾಗಿ ಕಿಟೆಲ್ ಕೋಶ

ದ್ರಾವಿಡ ಭಾಷಾಧ್ಯಯನ ಕ್ಷೇತ್ರದಲ್ಲಿ ನಿರಂತರವಾಗಿ ಕೆಲಸ ಮಾಡಿದ ವಿದೇಶಿ ವಿದ್ವಾಂಸರಲ್ಲಿ ಇಂಗ್ಲೆಂಡ್‌ದ ಟಿ. ಬರೊ, ಅಮೇರಿಕದ ಎಂ. ಬಿ. ಎಮಿನೊ ಅವರು ಪ್ರಮುಖರು. ವರ್ಣನಾತ್ಮಕ ಭಾಷಾವಿಜ್ಞಾನದ ನಿಯಮಗಳನ್ನು ದ್ರಾವಿಡ ಭಾಷೆಗಳಿಗೆ ಅನ್ವಯಿಸುವುದರಲ್ಲಿ ಇವರು ಮೊದಲಿಗರು. ಇವರಿಬ್ಬರೂ ಸೇರಿ ದ್ರಾವಿಡ ವ್ಯುತ್ಪತ್ತಿ ನಿಘಂಟನ್ನು ಸಿದ್ಧಪಡಿಸಿದರು (೧೯೬೧). ದ್ರಾವಿಡ ಭಾಷೆಗಳ ಪದಗಳನ್ನು ಅರ್ಥದ ದೃಷ್ಟಿಯಿಂದ ಒಂದು ಕ್ರಮದಲ್ಲಿ ಅಳವಡಿಸಿರುವ ಈ ಕೋಶ ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನಕ್ಕೆ ನೆರವಾಗುವಂತಹ ಮಹತ್ವದ ಆಕರ ಗ್ರಂಥ. ಕೋಶಸಿದ್ಧತೆಗಾಗಿ ತುಂಬ ಶ್ರಮವಹಿಸಿದ್ದಾರೆ. ಈ ಜ್ಞಾತಿ ಕೋಶವನ್ನು ಸಿದ್ಧ ಪಡಿಸಲು ಲಿಪಿಯುಕ್ತ ಭಾಷೆಗಳಲ್ಲಿ (ತಮಿಳ್, ಮಲಯಾಳಂ, ಕನ್ನಡ, ತೆಲುಗು) ರಚಿತವಾದ ನಿಘಂಟುಗಳನ್ನು ಧಾರಾಳವಾಗಿ ಬಳಸಿಕೊಂಡಿದ್ದಾರೆ. ಉಳಿದ ೧೪ ಅಲಿಖಿತ ಭಾಷೆಗಳ ಪದಗಳನ್ನೂ ಕ್ಷೇತ್ರಕಾರ್ಯದ ಮೂಲಕವಾಗಿ ಸಂಗ್ರಹಿಸಿದ್ದಾರೆ. ತಮಿಳ್ ರೂಪಗಳನ್ನು ಮುಖ್ಯವಾಗಿ ಕೊಟ್ಟು ನಂತರ ಆ ರೂಪ ಇತರ ಭಾಷೆಗಳಲ್ಲಿ ಯಾವ ರೀತಿಯಾಗಿ ಪಸರಿಸಿದೆ ಎಂಬುದನ್ನು ಹೇಳಲಾಗಿದೆ. ಜ್ಞಾತಿ ರೂಪಗಳನ್ನು ಅಂತರಾಷ್ಟ್ರೀಯ ರೋಮನ್ ಲಿಪಿಯಲ್ಲಿ ಕೊಡಲಾಗಿದೆ. ಕೋಶದಲ್ಲಿ ಒಟ್ಟು ೪೫೭೨ ಪದಗಳ ಉಲ್ಲೇಖವಿದ್ದು, ಅವುಗಳಲ್ಲಿ ಸು. ೪ ಸಾವಿರ ಕನ್ನಡ ಪದಗಳು ದಾಖಲಾಗಿವೆ.

ಈ ಕೋಶದಲ್ಲಿ. ದಾಖಲಾದ ಜ್ಞಾತಿ ರೂಪಗಳು ತಮಿಳ್, ಮಲಯಾಳಂ, ಕೊತ, ತೊದ, ಕನ್ನಡ, ಕೊಡಗು, ತುಳು, ತೆಲುಗು, ಕೊಲಾಮಿ ನಾಯ್ಕಿ, ಪರ್ಜಿ, ಗೊಂಡ, ಗೌಂಡಿ, ಕೊಂಡ, ಕುಇ, ಕುರುಖ್, ಮಾಲ್ತೊ, ಬ್ರಾಹೂಇ ಈ ಕ್ರಮದಲ್ಲಿ ದಾಖಲಾಗಿವೆ. ದ್ರಾವಿಡ ಜ್ಞಾತಿರೂಪಗಳು ಇಂಡೋ ಆರ್ಯನ್ ಹಾಗೂ ಗ್ರೀಕ್, ಬಲುಚಿ ಭಾಷೆಗಳಲ್ಲಿ ಬಳಕೆಯಾದ ರೂಪಗಳನ್ನೂ ದಾಖಲಿಸಿದ್ದಾರೆ.

ದ್ರಾವಿಡ ಭಾಷೆಗಳು ಒಂದೆ ಕುಟುಂಬಕ್ಕೆ ಸೇರಿರುವುದರಿಂದ ಅವುಗಳ ರಚನಾತ್ಮಕ ಅಂಶಗಳನ್ನು ತೌಲನಿಕವಾಗಿ ವಿವೇಚಿಸಲು, ಚಾರಿತ್ರಿಕವಾಗಿ ಅವು ಬೆಳೆದು ಬಂದ ವಿಧಾನವನ್ನರಿಯಲು, ಅವುಗಳ ಆಂತರಿಕ ಸಂಬಂಧವನ್ನು ತಿಳಿದುಕೊಳ್ಳಲು ಈ ಕೋಶ ತುಂಬ ನೆರವಾಗುತ್ತದೆ. ಇದರ ನೆರವಿನಿಂದ ಇಂಡೋ ಆರ್ಯನ್ ಅಥವಾ ಇತರ ಭಾಷಾ ಪರಿವಾರದ ಭಾಷೆಗಳ ವೈದೃಶ್ಯ ಅಂಶಗಳನ್ನು ವಿವೇಚಿಸಲು ಸಾಧ್ಯವಾಗುತ್ತದೆ.

ಈ ಕೋಶದಲ್ಲಿಯ ಕನ್ನಡ ಪದಗಳಿಗೆ ಅರ್ಥ ಕೊಡುವಲ್ಲಿ ಮಿಶನರಿ ಕೋಶಗಳು ವಿಶೇಷವಾಗಿ ಕಿಟೆಲ್ ಕೋಶ ಬಹುಮುಖ್ಯ ಆಕರವಾಗಿದೆ. ಕಿಟೆಲ್ ಕೋಶದಲ್ಲಿ ಕೊಟ್ಟಿರುವ ಅರ್ಥವೇ ಈ ಜ್ಞಾತಿ ಕೋಶದಲ್ಲಿಯೂ ಕೊಡಲಾಗಿದೆ. ಕೆಲವು ಪದಗಳನ್ನು ಗಮನಿಸಬಹುದು. (ಪ್ರತಿಪದದ ಪಕ್ಕದಲ್ಲಿ ಕೊಟ್ಟಿರುವ ಪುಟ ಸಂಖ್ಯೆಗಳು

ದ್ರಾವಿಡ ವ್ಯುತ್ಪತ್ತಿ ನಿಘಂಟಿನ ೧೯೯೮ ರ ಹೊಸ ಮುದ್ರಣಕ್ಕೆ ಅನುಸಾರಿಯಾಗಿದೆ)

ಅಡವು - ರೀತಿ: ಹಿಡಿತಕ್ಕೆ ಉಚಿತವಾದ ಗಾತ್ರ: ಸಮೃದ್ಧಿ : ಆಸರೆ ಸಾಲವಾಗಿ ಕೊಟ್ಟ ಹಣದ ಭರವಸೆಗಾಗಿ ಚಿನ್ನ ಬೆಳ್ಳಿ ಪಾತ್ರ ಮೊದಲಾದವುಗಳನ್ನು (ಹಣ ಕೊಟ್ಟವನ) ವಶದಲ್ಲಿಡುವುದು (ಒತ್ತೆ) (೬೮೭೩)

ಅನವು, ಅನು, ಅನುವು - ಬಯಸು: ವ್ಯಾಪಿಸು: ಸಂಭಾಳಿಸು ವಿನಯದಿಂದ ಕೇಳಿಕೊ (೧೯೯೯)

ಅರುಬು - ಕರ್ತವ್ಯ: ಹೊಣೆಗಾರಿಕೆ: ಬರ/ ಕ್ಷಾಮ (೩೬೬)

ಎಗ್ಗಳ - ಅಧಿಕ : ಬಹಳ (೬೫೫. ೬೬೯೬)

ಒಡ್ಡು - ಅರ್ಪಿಸು: ಈಡುಮಾಡು: ಎದುರಿಸು (೮೦೨. ೮೦೭. ೮೧೨)

ಪ್ರತಿಭಟಿಸು: ಎದುರಿಗೆ ಹಿಡಿ: ಮುಂದಿಡು (೮೧೩. ೮೧೪)

ಕಡಲ್ - ಸಮುದ್ರ: ಒಂದು ಬಗೆಯ ಮೀನು ಕಡಲಿಡು ಸಮುದ್ರದಂತೆ ಉಬ್ಬು (೯೩೯)

ಕದ - ಕದವು: ಬಾಗಿಲು (೯೯೮)

ಕಿರಚು - ಕೂಗು: ಚೀರು: ಅರಚುವಿಕೆ ಆಟ- ಕೂಗಾಟ (೧೩.೨೩)

ಗರಡಿ, ಗರುಡಿ - ವ್ಯಾಯಾಮ ಶಾಲೆ (೧೦೫೮)

ಚಿರುಕು - ನೂಲುವರಾಟೆ: ಚಕ್ರ (೨೨೯೭)

ಜಡೆ - ಹೆರಳು: ಕೂದಲುಗಂಟಿಕ್ಕುವುದು (೧೮೯೭)

ಜಲ್ಲಿ - ಪಾತ್ರೆಗಳಿಗೆ ಜಿದ್ದ ಅಥವಾ ಮಾಡಿದ ಸಣ್ಣ ತೂತು (೨೧೨೩)

ತಡ - ನಿಧಾನ: ಸಾವಕಾಶ: ವಿಳಂಬ (೨೪೬೨)

ಬೆರಗು - ಆಶ್ಚರ್ಯಪಡು: ಸೋಜಿಗಪಡು (೪೪೪೪)

ಮಡ - ಪಾದದ ಹರಡು: ಹಿಮ್ಮಡಿ: ಗಾಡಿಯ ಅಚ್ಚಿನ ಹಿಂಭಾಗ (೩೮೦೦.೩೮೧೯. ೩೮೧೧)

ಮಿಡುಕು - ಅಲುಗು: ಅಲ್ಲಾಡು: ಸಂಕಟಪಡು (೩೯೭೦. ೩೦೭೬)

ಹೀಗೆ ದ್ರಾವಿಡ ವ್ಯುತ್ಪತ್ತಿ ನಿಘಂಟನ್ನು ಸಿದ್ಧಪಡಿಸುವಾಗ ಕಿಟೆಲ್ ಕೋಶ ಮಹತ್ವದ ಆಕರವಾಗಿದೆ. ಇದು ಆ ಕೋಶದ ಘನತೆಗೆ ಸಾಕ್ಷಿ.

ಅಡಿಟಿಪ್ಪಣಿ

೧. ಕನ್ನಡ ಶಾಸ್ತ್ರ ಸಾಹಿತ್ಯದ ಬೆಳವಣಿಗೆಯಲ್ಲಿ ಹತ್ತೊಂಬತ್ತನೆಯ ಶತಮಾನದ ಕಾಲಘಟ್ಟ ತುಂಬ ವಿಶಿಷ್ಟವಾದುದು ಮತ್ತು ಪ್ರಮುಖವಾದುದು. ಹತ್ತೊಂಬತ್ತನೆಯ ಶತಮಾನದ ಕನ್ನಡಶಾಸ್ತ್ರ ಸಾಹಿತ್ಯವೆಂದೊಡನೆ ಕ್ರೈಸ್ತ ಮಿಶನರಿಗಳ ನೆನಪಾಗುತ್ತದೆ.

೨. ಕೆ. ಎಸ್. ದೇಶಪಾಂಡೆ ೧೯೮೬ 'ರೆ. ಎಫ್. ಜೀಗ್ಲರ್' ಕರ್ನಾಟಕದಲ್ಲಿ ಬಾಸೆಲ್ ಮಿಶನ್ ಪುಟ-೧೭೬

೩. ಒಬ್ಬ ವ್ಯಕ್ತಿ ಯಾವ ಸಮಾಜದ ಅಥವಾ ಪ್ರದೇಶದ ಸದಸ್ಯನಾಗಿ ಬಾಳಿಕೊಂಡಿರುತ್ತಾನೆಯೋ ಆ ಸಮಾಜ ಅಥವಾ ಪ್ರದೇಶ ರೂಪಿಸಿಕೊಂಡಿರುವ ಭಾಷೆಯೇ ಅವನ ಸ್ವಭಾಷೆಯಾಗುತ್ತದೆ. ಮಿಶನರಿಗಳು ಇಂಗ್ಲಿಶ್/ ಜರ್ಮನಿ ಮಾತೃಭಾಷೆಯ ಜೊತೆಗೆ ಕನ್ನಡವನ್ನು ಸ್ವಭಾಷೆಯಾಗಿ ಕಲಿತರು ಒಂದು ಭಾಷೆ ಸ್ವಭಾಷೆಯಾಗಿ ಕರಗತವಾದರೆ ಅದು ಅವನ ಜೀವನದ್ದುದ್ದಕ್ಕೂ ಉಳಿಯುತ್ತದೆ. ವ್ಯಕ್ತಿ ತನ್ನ ಪರಿಸರದಿಂದ ಸ್ವಭಾಷೆಯನ್ನು ಕಲಿಯುತ್ತಾನೆ. ನಿರಂತರವಾದ ಭಾಷಾ ಸಂಪರ್ಕವೇ ಸ್ವಭಾಷಾ ಕಲಿಕೆಗೆ ಉತ್ತಮ ಅವಕಾಶವಾಗಿರುತ್ತದೆ.

೪. ಡಾ. ಬಿ. ಪಿ. ಮಹೀದಾಸ್ ೧೯೯೭ 'ಕನ್ನಡದಲ್ಲಿ ನಿಘಂಟುಗಳು' ಕನ್ನಡ ವ್ಯಾಕರಣಗಳ ಹೊಸ ಸಮೀಕ್ಷೆ ಮತ್ತು ಇತರ ಪ್ರಬಂಧಗಳು, ಪುಟ-೫೩-೫೪

೫. W. Reeve 1824 Dictionary English-Carnatak pp-743-746

೬. W. Reeve Ibid pp-xii -LXVI

೭. ಎರಡು ಶಬ್ದಗಳಲ್ಲಿ ಒಂದೇ ಸ್ಥಾನದಲ್ಲಿ ಭಿನ್ನತೆ ಇದ್ದು ಉಳಿದೆಲ್ಲ ಧ್ವನಿಗಳು ಒಂದೇ ತೆರನಾಗಿದ್ದರೆ ಅದು ವೈದೃಶ್ಯ ಪ್ರಸಾರವೆನಿಸುವುದು.

೮. Rev. F. Ziegler of Dharwar, who was kind enough to furnih him with a Kannada-English list of a number of plants growing in southern Maharatta- preface - XLVI R. F. Kittle A, Kannada-English Dictionary

೯. Rev. F. Ziegler - English - Kannada Dictionary some Preliminary Remarks pp vii-viii

೧೦. Chrſstanuji watsa- ' The English-Kannada pocket dictionary' preface to the First edition (1933)

೧೧. W. Reeve-A Dictionary Carnataka and English (1832) preface pp-i

೧೨. W. Reeve Ibid-preface pp-iii

೧೩. W. Reeve Ibid-preface pp-iv

೧೪. W. Reeve Ibid - preface pp-ii

೧೫. F. Kittle - A dictionary Kannada and English preface pp-viii

೧೬. J. Garrett 1886 A. Manual Canarese and English Dictionary preface-iii

೧೭. W. Reeve-Dictionary Carnataca and English Revised by-D. Sanderson (1858) preface-i

೧೮. F. Kittle- A Kannada-English Dictionary (A. E. S. .... 1996) preface- pp-v

೧೯. F. Kittle Ibid - preface xvii-XLIII

೨೦. ವಿಲ್ಯಂ ಮಾಡ್ತ ೧೯೯೪ ಫರ್ಡಿನಾಂಡ್ ಕಿಟೆಲ್ ಜೀವನ ಸಾಧನೆ ಕೋಶ ರಚನೆ ಪುಟ ೨೧-೨೨ ಕ. ವಿ. ಹಂಪಿ.

* ಕೋಶರಚನೆಯಲ್ಲಿ ಮಿಶನರಿಗಳು ಬಳಸಿದ ಗಾದೆಗಳನ್ನು ನುಡಿಗಟ್ಟುಗಳನ್ನು ೫ ನೆಯ ಅಧ್ಯಾಯದ ೩ ನೇ ಉಪವಿಭಾಗದಲ್ಲಿ ಪ್ರತ್ಯೇಕವಾಗಿ ವಿವೇಚಿಸಲಾಗಿದೆ.

೨೧. F. Kittle Ibid preface- XLVII

* ಮಿಶನರಿಗಳು ಬಳಸಿದ ದೇಶ್ಯ ಅನ್ಯದೇಶ್ಯ ಪದಗಳನ್ನು ೪ ನೆಯ ಅಧ್ಯಾಯದ ೭ ನೇ ಉಪವಿಭಾಗದಲ್ಲಿ ಪ್ರತ್ಯೇಕವಾಗಿ ವಿವೇಚಿಸಲಾಗಿದೆ.

೨೨. ಶ್ರೀನಿವಾಸ ಹಾವನೂರ ೧೯೭೪ ಪೂರ್ವೋಕ್ತ ಪುಟ-೧೨೭

೨೩. Rev. J. Bucher - kannada- English Dictionary (1899) preface-i

೨೪. ಬಿ. ಬಿ. ಮಹೀದಾಸ 'ಕನ್ನಡದಲ್ಲಿ ನಿಘಂಟುಗಳು' ಕನ್ನಡ ವ್ಯಾಕರಣಗಳ ಹೊಸ ಸಮೀಕ್ಷೆ ಮತ್ತು ಇತರ ಪ್ರಬಂಧಗಳು ಪುಟ-೬೩

೨೫. Kittele's kannada-English Dictionary vol-I (1968) page xiii-xiv University of Madras

೨೬. ಎಸ್. ಬಸವರಾಧ್ಯ ಕಿಟೆಲ್‌ರ ಕನ್ನಡ ಇಂಗ್ಲಿಶ್ ನಿಘಂಟು ಒಂದು ಅವಲೋಕನ 'ಸಾರ್ಥಕ' ಪ್ರೊ. ಎಂ. ಮರಿಯಪ್ಪ ಭಟ್ಟ ಸಂಸ್ಮರಣ ಗ್ರಂಥ (೧೯೯೫) ಸಂ ಡಾ. ಶ್ರೀ ಕೃಷ್ಣಭಟ್ ಅರ್ತಿಕಜೆ

೨೭. ವಾಮನಬೇಂದ್ರೆ- ಅಂಬಿಕಾತನಯದತ್ತ ಕಿಟೆಲ್ ಕೋಶಾಭ್ಯಾಸ 'ಕನ್ನಡಕ್ಕೆ ಕಿಟೆಲ್‌ರ ಕೊಡುಗೆ' (೧೯೭೧) ಕಿಟೆಲ್ ಕಾಲೇಜು, ಧಾರವಾಡ (ಸಂ) ಡಾ. ವಿ. ಡಿ. ಬೇಂದ್ರೆ, ಪ್ರೊ. ಬಿ. ಟಿ. ದೇಸಾಯಿ

ಅಧ್ಯಾಯ-೪ ಮಿಶನರಿಗಳ ನಿಘಂಟು ರಚನಾ ವಿನ್ಯಾಸ (ಭಾಗ-೧)

೪.೦೧ ಕೋಶಶಿಲ್ಪ

೪.೦೨ ಪ್ರಧಾನ ಉಲ್ಲೇಖಗಳು: ಸಾಧಿತ ರೂಪಗಳು ಹಾಗೂ ಉಲ್ಲೇಖಗಳು (ಆಯ್ಕೆ, ಅರ್ಥವಿವರಣೆ, ವ್ಯಾಕರಣ ವರ್ಗಗಳನ್ನು ಅನುಲಕ್ಷಿಸಿ)

೪.೦೩ ಕಾಗುಣಿತ ಮತ್ತು ಉಚ್ಚಾರಣೆ

೪.೦೪ ಸಮಾನಾರ್ಥಕಗಳು

೪.೦೫ ನಾನಾರ್ಥಕಗಳು

೪.೦೬ ನಿಷೇದಾರ್ಥಕಗಳು

೪.೦೭ ದೇಶ್ಯ-ಅನ್ಯದೇಶ ಪದಗಳು

೪.೦೮ ಸಂಕ್ಷೇಪಗಳು

೪.೦೯ ವಿರಾಮ ಚಿಹ್ನೆಗಳು

ನಿಘಂಟು ರಚನಾ ವಿನ್ಯಾಸ (ಭಾಗ -೧)

೪.೦೧ ಕೋಶ ಶಿಲ್ಪ

ಕೋಶಸಿದ್ಧತೆಯಲ್ಲಿ ಮಿಶನರಿಗಳು ಲಿಖಿತ ಹಾಗೂ ಅಲಿಖಿತ ಆಕರಗಳಿಂದ ನಿಘಂಟಿಮಗಳನ್ನು ಸಂಗ್ರಹಿಸಿದ್ದಾರೆ. ಮುಖ್ಯ ಪದ ಅದರ ಅರ್ಥ, ಲಿಪ್ಯಂತರ, ವ್ಯುತ್ಪತ್ತಿ, ಸಾಧಿತ ಪದಗಳು, ಜ್ಞಾತಿರೂಪಗಳು ಮುಖ್ಯ ಪದಕ್ಕೆ ಸಂಬಂಧಿಸಿದಂತೆ ಗಾದೆಗಳನ್ನು ಕೊಡುವ ಬಗೆ ಈ ಕ್ರಮದಲ್ಲಿ ಅವರ ಶಬ್ದಾರ್ಥ ವಿವೇಚನೆ ಇದೆ. ಮಿಶನರಿಗಳ ಕೋಶಸಿದ್ಧತೆ ಮೂರು ಹಂತಗಳಲ್ಲಿ ನಡೆದಿದೆ. ೧. ಪೂರ್ವಸಿದ್ಧತೆ-ಯೋಜನೆ, ಸಾಮಗ್ರಿ ಸಂಗ್ರಹ ೨. ಸಂಕಲನ- ಹಾಗೂ ನಮೂದುಗಳ ಆಯ್ಕೆ ೩. ಕರಡುಸಿದ್ಧತೆ-ನಮೂದುಗಳ ಜೋಡಣೆ. ಸಾಮಾನ್ಯವಾಗಿ ಭಾಷಾ ಘಟಕಗಳ ಅರ್ಥವೈಶಿಷ್ಟ್ಯತೆಯನ್ನನುಲಕ್ಷಿಸಿ ಮುಖ್ಯ ನಮೂದುಗಳನ್ನು ಕೊಡಲಾಗಿದೆ.

ಧ್ವನಿರೂಪ+ಅರ್ಥ	-	ಭಾಷಾಘಟಕ
ಅದೇ ಧ್ವನಿರೂಪ+ಅದೇ ಅರ್ಥ	-	ಅದೇ ಭಾಷಾ ಘಟಕ
ಅದೇ ಧ್ವನಿರೂಪ+ಬೇರೆ ಅರ್ಥ	-	ಬೇರೆ ಭಾಷಾ ಘಟಕ

ಧಾತುಗಳಿಗೆ ಹತ್ತುವ ಬದ್ಧ ಹಾಗೂ ಸ್ವತಂತ್ರ ಆಕೃತಿಮಾಗಳನ್ನು ಮುಖ್ಯ ನಮೂದದ ಅಡಿಯಲ್ಲಿ ನಿಯಮಕಾಲಿಕ ರೂಪದಲ್ಲಿ ನಮೂದಿಸಲಾಗಿದೆ.

ಮನೆ- ಮನೆಗಳು	ಸಾಲು ಮನೆ, ಹಿತ್ತಲಮನೆ
ಕಟ್ಟೆ - ಕಟ್ಟೆಯಲ್ಲಿ	ಕಟ್ಟೆಮೇಲೆ

ನಿಘಂಟಿಮಗಳಿಗೆ ಸಾಮಾನ್ಯವಾಗಿ ಒಂದೇ ಅರ್ಥ ಇಲ್ಲದಿರುವುದರಿಂದ ಅವುಗಳ ವಿಭಿನ್ನ ಅರ್ಥಗಳನ್ನು ಸಂದರ್ಭಸಹಿತವಾಗಿ ಸೂಚಿಸಿ ಪ್ರಯೋಗಗಳನ್ನು ಕೊಡಲಾಗಿದೆ. ಈ ತಂತ್ರಗಳಿಂದಾಗಿ ಮಿಶನರಿಗಳು ಕೊಟ್ಟಿರುವ ಅರ್ಥ ಸುಸ್ಪಷ್ಟವಾಗಿದೆ (ಈ ಬಗೆಗೆ ಹೆಚ್ಚಿನ ವಿವರಣೆಯನ್ನು ಇದೇ ಅಧ್ಯಾಯದ ೨. ೩. ೪ ನೇ ಭಾಗದಲ್ಲಿ ಕೊಡಲಾಗಿದೆ).

ನಿಘಂಟುಗಳನ್ನು ಸಿದ್ಧಪಡಿಸುವಾಗ ನಿಘಂಟಿಮಗಳನ್ನು ಅರಿತರೆ ಸಾಲದು ಅವುಗಳನ್ನು ಹೊಂದಿಸುವ ಬಗೆಯನ್ನು ಅರಿತಿರಬೇಕಾಗುತ್ತದೆ. ಈ ದಿಶೆಯಲ್ಲಿ ಕೋಶಕಾರ ಘಟಕಗಳ ಜೋಡಣೆಯಲ್ಲಿರುವ ತೊಂದರೆ ಹಾಗೂ ಸಂಧಿನಿಯಮದ ತೊಂದರೆಗಳನ್ನು ಎದುರಿಸಬೇಕಾಗುತ್ತದೆ[೧] ಉದಾ-ಕನ್ನಡ ಶಬ್ದರಚನೆಯಲ್ಲಿ ಗಳು, ಅರು ಮುಂತಾದ ಬಹುವಚನ ಪ್ರತ್ಯಯಗಳು ಪದದ ಅಂತ್ಯದಲ್ಲಿ ಬರುತ್ತವೆ. ಮನೆಗಳು, ಕಲ್ಲುಗಳು ಮುಂತಾದವು (ಗಳು ಮನೆ, ಗಳು ಕಲ್ಲುಗಳೆಂದಾದರೆ ಪದಭಂಗವುಂಟಾಗುತ್ತದೆ). ನಿಘಂಟಿಮಗಳ

ಜೋಡಣೆಯ ಕ್ರಮ ಕೋಶಕಾರರಿಗೆ ತಿಳಿದಿರಬೇಕಾಗುತ್ತದೆ. ಎರಡು ನಿಘಂಟಿಮಗಳನ್ನು ನೇರವಾಗಿ ಜೋಡಿಸಿ ಸಾಧಿತ ರೂಪಗಳನ್ನಾಗಿಸಲು ಆಗುವುದಿಲ್ಲ. ಎರಡು ನಿಘಂಟಿಮಗಳಿಂದ ಶಬ್ದ ನಿರ್ಮಾಣವಾಗುವಾಗ ಕೆಲವು ಸಲ ಅವುಗಳ ಮಧ್ಯ ಒಂದು ಧ್ವನಿ ಸೇರಬಹುದು ಅಥವಾ ಇದ್ದ ಧ್ವನಿಗಳಲ್ಲಿ ಒಂದು ಲೋಪವಾಗಬಹುದು. ಒಂದು ಧ್ವನಿಯ ಸ್ಥಳವನ್ನು ಮತ್ತೊಂದು ಧ್ವನಿ ಆಕ್ರಮಿಸಿಕೊಳ್ಳಬಹುದು ಅಂದರೆ ಸಂಧಿಯಾಗಬಹುದು.

ಮರ + ಅನ್ನು -ಮರವನ್ನು ('ವ್' ಕಾರ ಆಗಮವಾಗಿದೆ)

ಊರು + ಇಂದ -ಊರಿಂದ ('ಉ' ಲೋಪವಾಗಿದೆ)

ನರ + ಇಂದ್ರ- ನರೇಂದ್ರ ('ಅ', 'ಇ' ಸ್ಥಾನವನ್ನು ಏ ಆಕ್ರಮಿಸಿದೆ)

ಒಂದು ಭಾಷೆಯ ಶಬ್ದ ರಚನೆಯನ್ನರಿಯುವಾಗ ಇಂತಹ ಸಂಧಿ ನಿಯಮಗಳನ್ನು ಅರಿಯಬೇಕಾಗುತ್ತದೆ. ಕನ್ನಡ ಜಾಯಮಾನಕ್ಕನುಗುಣವಾಗಿ ಭಾಷಾ ಘಟಕಗಳ ಜೋಡಣೆಯ ವಿಧಾನ ಮಿಶನರಿಗಳಿಗೆ ಚೆನ್ನಾಗಿಗೊತ್ತಿತ್ತು. ಪ್ರತಿಯೊಂದು ನಿಘಂಟಿಮದ ಪೂರ್ತಿ ವಿವರಗಳನ್ನು ದೇಶಿಯ ಪಂಡಿತರೊಡನೆ ಚರ್ಚಿಸಿ (ಕೃಷ್ಣಾಮಾಚಾರ್ಯ ಮುಂತಾದವರು). ತಿಳಿದುಕೊಳ್ಳುವ ಕೌಶಲ್ಯತೆ ಅವರಿಗಿತ್ತು. ಸಾಮಾಜಿಕ ಏಣಿ ಶ್ರೇಣಿಗಳಲ್ಲಿ ಪದಗಳ ಬಳಕೆ ಹಾಗೂ ಪದಗಳ ಜೊತೆಗೆ ಅರ್ಥದ ಸಂಬಂಧದ ಬಗೆಗೆ ಮಿಶನರಿಗಳು ಯೋಚಿಸಿ ಅರ್ಥ ಕೊಡುವ ಬಗೆ, ಮಾದರಿಯಾಗಿದೆ.

ಶಬ್ದಕೋಶದ ರಚನೆ ಮುಗಿದ ಮೇಲೆ ಅದನ್ನು ಹೆಚ್ಚಾಗಿ ಗಮನಿಸುವವರು ಭಾಷಾಭ್ಯಾಸಿಗಳಾದುದರಿಂದ ಅದರ ಆಕೃತಿಮ ಬಗ್ಗೆ ಕೋಶದ ಕೆಲಸ ಆರಂಭವಾಗುವುದಕ್ಕಿಂತ ಮುಂಚೆಯೆ ನಿರ್ಧಾರಿತವಾಗುತ್ತದೆ. ಮಿಶನರಿ ಕೋಶಗಳಲ್ಲಿ ಮೂರು ಭಾಗಗಳಿರುತ್ತವೆ ಎಂದು ಸ್ಥೂಲವಾಗಿ ಹೇಳಬಹುದು (ಆಕೃತಿಯನ್ನನುಲಕ್ಷಿಸಿ) ಮೊದಲ ಭಾಗದಲ್ಲಿ ಪ್ರಸ್ತಾವನೆ ಮತ್ತು ಓದುಗರಿಗೆ ಮಾರ್ಗದರ್ಶನ ಸೂಚನೆಗಳಿರುತ್ತವೆ. ಎರಡನೆಯ ಭಾಗದಲ್ಲಿ ಯಥಾರ್ಥವಾದ ಶಬ್ದಕೋಶ, ಮೂರನೆಯ ಭಾಗದಲ್ಲಿ ಅನುಬಂಧ, ಹೆಚ್ಚಿನ ವಿಷಯಗಳು/ ಮಾಹಿತಿಗಳಿರುತ್ತವೆ (ಮುಖ್ಯವಾಗಿ ಭಾಷೆಯನ್ನು ಕಲಿಯುವವರಿಗಾಗಿ). ಕೋಶದ ಶೀರ್ಷಿಕೆ ಸ್ಪಷ್ಟವಾಗಿರುತ್ತದೆ. ಕನ್ನಡ-ಇಂಗ್ಲಿಶ್ ನಿಘಂಟು, ಇಂಗ್ಲಿಶ್- ಕನ್ನಡ ನಿಘಂಟು ಹೀಗೆ. ಇವು ಕೋಶದ ಉದ್ದೇಶವನ್ನು ಕುರಿತು ಸೂಚನೆ ಕೊಡುತ್ತವೆ (ಇದೇ ಅಧ್ಯಾಯದ ಮುಂದಿನ ಉಪವಿಭಾಗಗಳಲ್ಲಿ ಹಾಗೂ ಐದನೆಯ ಅಧ್ಯಾಯದಲ್ಲಿ ಪ್ರಾಸಂಗಿಕವಾಗಿ ಈ ಬಗೆಗೆ ನಿರೂಪಿಸಲಾಗಿದೆ).

ಮಿಶನರಿ ಕೋಶಕಾರರಿಗೆ ಕೋಶ ರಚನೆಯ ಸಿದ್ಧತೆಗಳಿದ್ದವು. ಜರ್ಮನ್ ವಿದ್ವತ್ ಪರಂಪರೆ ಅಲ್ಲಿ ಕೆಲಸ ಮಾಡಿದೆ. ಇವರ ಕೋಶಗಳನ್ನು ಆಧುನಿಕ ಕೋಶ ರಚನೆಯ ಯಾವ ದೃಷ್ಟಿಯಿಂದ ನೋಡಿದರೂ ಅನನ್ಯವಾಗಿಯೇ ಇವೆ. ಕೋಶಕಾರರು ಹೇಳುವ ಎಲ್ಲ ಕ್ರಮಗಳನ್ನು ಮಿಶನರಿಗಳು ಪಾಲಿಸಿ ತಮ್ಮ ಕೋಶ ಸಿದ್ಧತೆಯಲ್ಲಿ ಬಳಸಿಕೊಂಡಿದ್ದಾರೆ.

೪.೦೨ ಪ್ರಧಾನ ಉಲ್ಲೇಖಗಳು, ಸಾಧಿತ ರೂಪಗಳು ಹಾಗೂ ಉಪ ಉಲ್ಲೇಖಗಳು

(ಆಯ್ಕೆ, ಅರ್ಥ ವಿವರಣೆ, ವ್ಯಾಕರಣವರ್ಗಗಳನ್ನು ಅನುಲಕ್ಷಿಸಿ)

ಮಿಶನರಿಗಳ ಕೋಶ ರಚನೆ ಎರಡು ಮಾರ್ಗಗಳಲ್ಲಿ ಸಾಗಿದೆ ೧. ನಿಘಂಟಮಗಳ ಸಂಗ್ರಹ ೨. ದಾಖಲಿಸುವುದು. ನಿಘಂಟಮಗಳನ್ನು ದಾಖಲಿಸುವಾಗ ಪ್ರಧಾನ ಉಲ್ಲೇಖಗಳು, ಸಾಧಿತರೂಪಗಳು, ಉಪ ಉಲ್ಲೇಖಗಳು ಪ್ರಮುಖ ಪಾತ್ರ ವಹಿಸುತ್ತವೆ. ನಿಘಂಟಿನಲ್ಲಿ ಬರುವ ಮುಖ್ಯ ಪದವೇ ಪ್ರಧಾನ ಉಲ್ಲೇಖ. ಇದು ನಿಘಂಟಮದ ರೂಪವನ್ನು ಸೂಚಿಸುತ್ತದೆಯಲ್ಲದೆ ಅದರ ಅಡಿಯಲ್ಲಿ ಬರುವ ವ್ಯಾಕರಣವರ್ಗ, ಅರ್ಥ ಮುಂತಾದ ಮಾಹಿತಿಗಳಿಗೆ ಆಧಾರವಾಗಿ ನಿಲ್ಲುತ್ತದೆ. 'ಪ್ರಧಾನ ಪದವಾಗುವ ನಿಘಂಟಮ ಭಾಷೆಯಲ್ಲಿ ಸಾಮಾನ್ಯವಾಗಿ ಹೆಚ್ಚು ಪ್ರಚಲಿತವಾಗಿರುತ್ತದೆ; ಬಳಕೆಯಲ್ಲಿ ಹೆಚ್ಚು ಆವೃತ್ತಿಯಾಗಿರುತ್ತದೆ; ಹೇಳಬೇಕಾದ ವಿಷಯ ವಸ್ತುವನ್ನು ಪ್ರತಿನಿಧಿಸುತ್ತದೆ'[2]. ಪ್ರಧಾನ ಪದಗಳು ಹೆಚ್ಚಾಗಿ ಭಾಷೆಯ ಧಾತುರೂಪಗಳಾಗಿರುತ್ತವೆ. ಇವುಗಳಿಂದ ನಿಷ್ಪನ್ನವಾಗುವ ಸಾಧಿತ ರೂಪಗಳಿಗಿಂತ ಇದರ ಗಾತ್ರ ದೊಡ್ಡದಾಗಿರುತ್ತದೆ. ಕೋಶದಲ್ಲಿ ಪ್ರಧಾನ ಪದಗಳು ಹತ್ತಿಸಿಕೊಳ್ಳುವ ಪ್ರತ್ಯಯಗಳನ್ನು ಅಥವಾ ಅವುಗಳ ಸಾಧಿತ ರೂಪಗಳನ್ನು ಅವುಗಳ ಮುಂದೆಯೇ ದಾಖಲಿಸಬೇಕು ಉದಾ- ಬರೆ - ಬರೆದನು, ಸಾಯು- ಸತ್ತನು ಮುಂ. ಪ್ರಧಾನ ಉಲ್ಲೇಖ ನಾಮಪದ ಮತ್ತು ಕ್ರಿಯಾಪದ ಎರಡೂ ಆಗಿದ್ದರೆ ಅವುಗಳ ಅರ್ಥ ವಿವರಣೆಗಳಿಂದ ಅವುಗಳ ಸಂಬಂಧವನ್ನು ಸೂಚಿಸುವುದು ಬಹಳ ಪ್ರಯೋಜನಕಾರಿ. ಪ್ರಧಾನ ಉಲ್ಲೇಖಗಳು ಭಿನ್ನಾರ್ಥದಲ್ಲಿ ಬಳಕೆಯಾದಾಗ ಅವುಗಳಿಗೆ ಸೂಕ್ತವಾದ ಉದಾಹರಣೆಗಳನ್ನು ಕೊಡಬೇಕು. ಪ್ರಧಾನ ಉಲ್ಲೇಖದ ನಂತರ ಅದರ ವ್ಯಾಕರಣಾತ್ಮಕ ಮಾಹಿತಿಯನ್ನು ಆ ಪದದ ಮುಂದೆಯೂ ಕೊಡಬಹುದು ಅಥವಾ ಪ್ರಸ್ತಾವನೆಯಲ್ಲಿ ಅಥವಾ ಅನುಬಂಧದಲ್ಲಿಯಾದರೂ ಕೊಡಬಹುದು. ಪ್ರಧಾನ ಉಲ್ಲೇಖದಲ್ಲಿ ನಾಮಪದ, ಕ್ರಿಯಾಪದ, ಲಿಂಗ, ವಚನ ಸಮೀಕರಣ ಉದಾಹರಣೆಗಳು; ಅನ್ಯೋನ್ಯ ಸಂಬಂಧ ವ್ಯುತ್ಪತ್ತಿ ಜ್ಞಾತಿಪದಗಳು ಈ ಎಲ್ಲ ಮಾಹಿತಿಗಳಿದ್ದರೆ ಆ ಭಾಷೆಯ ರಚನೆಯು ತಿಳಿಯುತ್ತದೆ. ಮೇಲಿನ ಅಂಶಗಳನ್ನು ಆಧರಿಸಿ ಮಿಶನರಿ ಕೋಶಗಳಲ್ಲಿ ಪ್ರಧಾನ ಉಲ್ಲೇಖಗಳು ದಾಖಲಾಗಿವೆ. ಅವು ದಾಖಲಾದ ಬಗೆಯನ್ನು ಈ ಕೆಳಗಿನಂತೆ ನಿರೂಪಿಸಬಹುದು.

ಒಂದು ಪದದ ಅರ್ಥ ಹಾಗೂ ವ್ಯಾಕರಣ ವರ್ಗ ವಿಭಿನ್ನವಾಗಿದ್ದರೆ ಅದನ್ನು ಪ್ರತ್ಯೇಕ ಮುಖ್ಯ ಪದವಾಗಿ ಪರಿಗಣಿಸಲಾಗಿದೆ (ಮಿಶನರಿಗಳು ಆಡುನುಡಿಯನ್ನು ಲಕ್ಷಿಸಿರಬಹುದು).

ಆಡು (ಕ್ರಿ) ಚಲಿಸು, ಅಲುಗು

ಆಡು (ಕ್ರಿ) ಆಟ

ಆಡು (ನಾ) ಒಂದು ಪ್ರಾಣಿಯ ಹೆಸರು: ಮೇಕೆ

ಕತ್ತು (ನಾ) ಕೊರಳು

ಕತ್ತು (ಕ್ರಿ) ಉರಿಹತ್ತು : ಸುಡು

ಕತ್ತು (ನಾ) ಒರಟುಕಾಗದ

ಕತ್ತು (ನಾ) ಕತ್ತೆಯಹಾಗೆ ಧ್ವನಿಮಾಡು

ಕನ್ನಡದಲ್ಲಿ ಹೆಚ್ಚು ಬಳಕೆಯಲ್ಲಿರುವ ಮತ್ತು ಕೆಲವು ವೇಳೆ ವಿಶೇಷಾರ್ಥವಿರುವ ಸಂಸ್ಕೃತ ಶಬ್ದಗಳನ್ನು ಈ ನಿಘಂಟುಗಳಲ್ಲಿ ಕಾಣಬಹುದು. ಆದರೆ ಕೇವಲ ಪಾರಿಭಾಷಿಕ ಶಬ್ದಗಳನ್ನು ಇಲ್ಲಿ ಸೇರಿಸಿಲ್ಲ. ವ್ಯಾಕರಣ, ಅಲಂಕಾರ, ಸಂಗೀತ, ನಾಟ್ಯ ಮುಂತಾದ ಶಾಸ್ತ್ರಗಳಿಗೆ ಸಂಬಂಧಿಸಿದ ಶಬ್ದಗಳಿಗೆ ಇತರ ಅರ್ಥಗಳೂ ಇರುವುದಾದರೆ ಅಂತಹ ಶಬ್ದಗಳನ್ನು ಸೇರಿಸಿಕೊಳ್ಳಲಾಗಿದೆ.

ಕನ್ನಡದಲ್ಲಿ 'ಇಸು' ಪ್ರತ್ಯಯವು ಅನೇಕ ಶಬ್ದಗಳಿಗೆ ಸೇರುತ್ತದೆ 'ಇಸು' ಸೇರಿದಾಗ ಎರಡು ಬೇರೆ ಬೇರೆ ಶಬ್ದಗಳು ಒಂದೇ ರೂಪವನ್ನು ಪಡೆಯಬಹುದು. ಅಂತಹ ಸಂದರ್ಭದಲ್ಲಿ ಆ ಎರಡನ್ನೂ ಒಂದೇ ಮುಖ್ಯ ಉಲ್ಲೇಖವನ್ನಾಗಿ ಕೊಡಲಾಗಿದೆ (ಅರ್ಥ ವ್ಯತ್ಯಾಸವಿದೆ ಎಂಬುದು ಗಮನಿಸಬೇಕಾದ ಸಂಗತಿ). ಕಿಟೆಲ್ ಕೋಶದಲ್ಲಿಯ ಜೋಗರಿಸು, ಕುಪ್ಪಳಿಸು ಪದ ಹೀಗಿವೆ.

ಜೋಗರಿಸು

ಜೋಗರ್ + ಇಸು (ಬಳಸು, ಉಪಯೋಗಿಸು)

ಜೋಗರ + ಇಸು (ಸೇರಿಸು, ಸಿದ್ಧಗೊಳಿಸು)

ಕುಪ್ಪಳಿಸು

ಕುಪ್ಪಳಿ + ಇಸು (ಹಾರು, ಜಿಗಿ)

ಕುಪ್ಪಳ + ಇಸು (ಕುಸಿ, ಜರಿ)

ಸಂಸ್ಕೃತ ಶಬ್ದಗಳಿಗೆ 'ಇಸು' ಪ್ರತ್ಯಯವನ್ನು ಸೇರಿಸಿದಾಗ ಆ ಶಬ್ದಗಳಲ್ಲಿ ಅಕ್ಷರ ಲೋಪವುಂಟಾಗುವುದು. ಅಂತಹುಗಳು ಸಾಧಿತ ಧಾತುಗಳು. ಅವುಗಳನ್ನು ಮುಖ್ಯ ಉಲ್ಲೇಖಗಳನ್ನಾಗಿಯೇ ಕೊಡಲಾಗಿದೆ. ಉದಾ- ಸಮರ್ಥ + ಇಸು ಸಮರ್ಥಿಸು. ಸಂಸ್ಕೃತದಲ್ಲಿರುವ ದೀರ್ಘ ಸ್ವರಾಂತ ಶಬ್ದಗಳನ್ನು ಸಾಮಾನ್ಯವಾಗಿ ಕನ್ನಡದಲ್ಲಿ ಅಲ್ಪ ಪರಿವರ್ತನೆಯೊಡನೆ ಉಪಯೋಗಿಸುತ್ತಾರೆ. ಅವುಗಳಿಗೆ ಸಮಸಂಸ್ಕೃತವೆಂದು ಹೆಸರು. ಅವುಗಳನ್ನು ಮುಖ್ಯ ಉಲ್ಲೇಖಗಳನ್ನಾಗಿ ಕೊಡಲಾಗಿದೆ. ಉದಾ- ಕದಲೀ-ಕದಳಿ, ಗಂಗಾ-ಗಂಗೆ ಈ ಕಾರಣದಿಂದಲೇ ಇಂತಹ ಪದಗಳೊಡನೆ ಕೂಡಿಕೊಂಡು ಆದ ಸಮಾಸ ಪದಗಳನ್ನು ಮುಖ್ಯ ಉಲ್ಲೇಖಗಳನ್ನಾಗಿಯೇ ಕೊಡಲಾಗಿದೆ. ಉದಾ- ಕದಳೀಗರ್ಭ, ಗಂಗಾಧರ ಮುಂತಾದವು.

'ಱ' ದಿಂದ ಕೂಡಿದ ಪದಗಳು ಕಾಲಕ್ರಮದಲ್ಲಿ ಸರೇಫವಾಗಿವೆ. ಅಂತಹ ಸಂದರ್ಭಗಳನ್ನು ಸೂಚಿಸುವುದಕ್ಕೆ 'ಱ' ದಿಂದ ಕೂಡಿದ ಶಬ್ದಗಳಿಗೆ ಮೂಲಾರ್ಥವನ್ನು ಕೊಡಲಾಗಿದೆ. ಸಾಮಾನ್ಯ ರೇಫದ ಪದಗಳಿಗೆ ಬೇರೆ ಅರ್ಥಗಳಿದ್ದರೆ ಅವುಗಳನ್ನು ಪ್ರತ್ಯೇಕವಾಗಿ ಕೊಟ್ಟು ಅವುಗಳ ಜೊತೆಯಲ್ಲಿಯೇ ಅವರ ಸಮಾಸ ರೂಪಗಳನ್ನು ಕೊಡಲಾಗಿದೆ.

ಉದಾ- ಕರೆ (ಕ್ರಿ) ಬರ ಹೇಳು; ಆಹ್ವಾನಿಸು: ಕೂಗು

ಕಱೆ (ಕ್ರಿ) ಹಾಲನ್ನು ಹಿಂಡು: ಸೂಸು: ಸುರಿ

ವಿರಚು: ಚೆಲ್ಲು: ಕಪ್ಪು: ಕ ತೊಗಲ್,

ಕಱೆಬೋನ, ಕಱೆಪಟ್ಟಿ

ೞ ಮತ್ತು ಳ ಇವುಗಳಿಗಿರುವ ಶಬ್ದಗಳಿಗೂ ಮೇಲಿನ ನಿಯಮವೇ ಅನ್ವಯವಾಗುತ್ತದೆ.

ಉದಾ- ಬಾಳು ನಾ- ಕತ್ತಿ ಖಡ್ಗ

ಬಾೞ ನಾ- ಜೀವನ, ಬದುಕು

ಅರ್ಥ ವ್ಯತ್ಯಾಸ ಕಂಡು ಬಂದ ಶಬ್ದಗಳನ್ನು ಬೇರೆ ಬೇರೆಯಾಗಿ ಕೊಟ್ಟು ಅವುಗಳಿಗಿರುವ ಸಂಬಂಧವನ್ನು ಸೂಚಿಸಲಾಗಿದೆ.

ಉದಾ-

ತಾಳ್ (ಕ್ರಿ) ಪಡೆ; ಹೊಂದು: ಸಹಿಸು; ಸ್ವೀಕರಿಸು

ಕಾಯು; ಬಾಳಿಕೆಬರು- ತಾಳುವಿಕೆ

ತಾಳ್ (ನಾ) ಹಾಡುವಾಗ ನಿಯತಗತಿಯನ್ನು ಸೂಚಿಸಲು

ಕೈಗಳಿಂದ ಹಾಕುವ ಪೆಟ್ಟು: ಕಂಚಿನಿಂದ ಮಾಡಿದ ಜತೆವಾದ್ಯ

ತಾಳಮದ್ದಲೆ, ತಾಳಹಾಕು.

ಙ, ಞ, ಳ, ೞ ಈ ಅಕ್ಷರಗಳಿಂದ ಮೊದಲಾಗುವ ಪದಗಳು ಕನ್ನಡದಲ್ಲಿ ಸಿಗುವುದಿಲ್ಲವಾದುದರಿಂದ ಈ ಅಕ್ಷರಗಳು ಬೇರೆಯಾಗಿ ಉಲ್ಲೇಖಗೊಂಡಿಲ್ಲ. ಆದರೆ ಉಳಿದ ಅಕ್ಷರಗಳು ಕನ್ನಡ ವರ್ಣಮಾಲೆಯಲ್ಲಿ ಎಷ್ಟನೆಯ ಅಕ್ಷರವಾಗುತ್ತದೆಂಬುದನ್ನು ಸೂಚಿಸುವಾಗ ಇವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಈ ನಿಘಂಟುಗಳಲ್ಲಿ ಪದಗಳ ಅಕಾರಾದಿ ಹೀಗಿದೆ. ಸ್ವರ, ಅನುಸ್ವರ, ವರ್ಗೀಯಾಕ್ಷರಗಳು ಮತ್ತು ಅವರ್ಗೀಯಾಕ್ಷರಗಳು. ಅವರ್ಗೀಯಾಕ್ಷರಗಳನ್ನು ಕೊಡುವಾಗ ಸಾಮಾನ್ಯ ರೇಫದ ನಂತರ ಶಕಟರೇಫವನ್ನೂ ಕುಳದ ನಂತರ 'ೞ' ವನ್ನು ಕೊಡಲಾಗಿದೆ.

ಕ

ಕಂ

ಕಕಲಾತಿ

ಕರೆ

ಕಜ್ಜಿ

ಕವರು

ಕವರ್ತೆ

ಕಳುಹು

ಕಲ್ಗಿ

ಕಲ್ತಲಿ

ಮಿಶನರಿ ಕೋಶಗಳಲ್ಲಿ ಮುಖ್ಯ ಉಲ್ಲೇಖಗಳಂತೆ ಸಾಧಿತರೂಪಗಳು ತುಂಬ ವೈಜ್ಞಾನಿಕವಾಗಿ ಸೇರಿವೆ. ಮುಖ್ಯ ಉಲ್ಲೇಖದ ರೂಪ ವೈವಿಧ್ಯತೆಯಿಂದಾಗಿ ಅದರ ಅರ್ಥ ಬದಲಾದರೆ ಆ ಬದಲಾವಣೆಯನ್ನು ಸಾಧಿತವೆಂದು ಕರೆಯುತ್ತಾರೆ. ಅವುಗಳಿಗೆ ಪ್ರತ್ಯಯ ಮಾದಲಾದವುಗಳನ್ನು ಸೇರಿಸಿ ನಿಷ್ಪನ್ನ ಮಾಡಿದ ಪದಗಳು. ಸಾಧಿತ ಪದಗಳು[3] ಮುಖ್ಯ ಪದದ ಅರ್ಥಕೊಟ್ಟು ಅಲ್ಲಿಯೇ ನಿಯಮ ಬದ್ಧವಾಗಿ ಸಂಬಂಧಪಟ್ಟ ಸಾಧಿತಗಳನ್ನು ತೋರಿಸಬೇಕು. ಸಾಧಿತಗಳು ನಿಷ್ಪನ್ನಗೊಂಡಾಗ ಕೆಲವು ವೇಳೆ ಅವುಗಳ ಘಟಕಗಳಲ್ಲಿ ಧ್ವನಿಮಾತ್ರಕ ಬದಲಾವಣೆಗಳು ಉಂಟಾಗುತ್ತವೆ. ಉದಾ- ಮುಂದು + ಕೈ > ಮುಂಗೈ (ಕ್ > ಗ್: ನ್ > ಉ > ಉಂ) ಇಂತಹ ಕ್ರಿಯೆ ನಡೆಯುವಾಗ ಪದಗಳು ವಿರಾಮ ಕಳೆದುಕೊಳ್ಳಬಹುದು ಅಥವಾ ಕಳೆದುಕೊಳ್ಳದಿರಬಹುದು. ಸಾಧಿತ ಪದಗಳಿಗೂ ನುಡಿಗಟ್ಟುಗಳಿಗೂ ಸೂಕ್ಷ್ಮ ವ್ಯತ್ಯಾಸವಿದೆ. ಸಾಧಿತಪದಗಳಲ್ಲಿ ಪದಪುಂಜಗಳಿರುತ್ತವೆ. ನುಡಿಗಟ್ಟಿನಲ್ಲಿ ಪದ ಪುಂಜಗಳಿದ್ದರೂ ಅವು ವಿಶೇಷ ಅರ್ಥ ಸೂಚಿಸುತ್ತವೆಂಬುದು ಗಮನಿಸಬೇಕಾದ ಸಂಗತಿ (ಅಧ್ಯಾಯ ೫ ನುಡಿಗಟ್ಟುಗಳು ಎಂಬ ಉಪವಿಭಾಗದಲ್ಲಿ ಈ ಬಗೆಗೆ ವಿವರವಾಗಿ ಚರ್ಚಿಸಲಾಗಿದೆ).

ಆಡು- ಚಲಿಸು; ಅಲುಗಾಡು, ಈಡಾಡು, ಈಸಾಡು

ಎಬ್ಬಾಡು; ಎಡೆಯಾಡು, ಒಡನಾಡು, ಒಲೆದಾಡು

ಓಲಾಡು: ಕುಣಿದಾಡು, ಕೊಟ್ಟಾಡು, ಕೊಣ್ಣಾಡು

ಕೊ ಚಾಡು: ತಿರಿಗಾಡು, ತುಳಕಾಡು, ನಲಿದಾಡು

ನೇತಾಡು: ಬಿಸಾಡು ಹೊಡಶೆಳಾಡು ಹೊರಳಾಡು

ಎಳ್ಳು - ಒಂದು ಬಗೆಯ ಎಣ್ಣೆ ಬೀಜ. ಎಳ್ಳುಣ್ಣೆ, ಎಳ್ಳುಬೆಲ್ಲ

ಎಳ್ಳು ಹಿಣ್ಣೆ, ಎಳ್ಳು ಹೂವು, ಎಳ್ಳೆಣ್ಣೆ

ಕತ್ತಲೆ- ಕತ್ತಲು, ಇರುಳು ಕಗ್ಗತ್ತಲೆ: ಕಡುಗತ್ತಲೆ, ಕಾರ್ಗತ್ತಲೆ

ಕಿಱಿಗತ್ತಲೆ, ಬಲುಗತ್ತಲೆ, ಮೋಡಗತ್ತಲೆ

ಹಗಲುಗತ್ತಲೆ, ಹೆಗ್ಗತ್ತಲೆ

ನಡು- ನೆಡು; ಸೊಂಟ ನಡುಗಟ್ಟು, ನಡುವಗಲ್

ಎಳೆ-	ಎಳೆ ತುಲಸಿ	ಎಳೆಬಳ್ಳಿ
	ಎಳೆತೆಂಗು	ಎಳೆಹುಲ್ಲು
	ಎಳೆವನೆ	ಎಳೆಬಿಸಿಲ್/ ಬಿಸಿಲ್
	ಎಳೆಪ್ರಾಯ	ಎಲೆದೇರ್/ ತೇರ್

ರೀವ್ ಕೋಶದಲ್ಲೂ ಸಾಧಿತ ಪದಗಳಿಗೆ ಕೊರತೆಯಿಲ್ಲ 'ಬಿಡು' ಎಂಬ ಕ್ರಿಯಾಪದಕ್ಕೆ

ಎಲೆಬಿಡು	ನಿಂಬೆಹುಳಿಬಿಡು	ಬಿಟ್ಟುಬಿಡು
ಹೂವುಬಿಡು	ಗಡ್ಡಬಿಡು .	ಸ್ಥಳಬಿಡು
ಕಾಯಿಬಿಡು	ಹಗ್ಗಬಿಡು	ಕೈಬಿಡು
ನೀರುಬಿಡು	ದಾರಿಬಿಡು	ಮೈಬಿಡು

'ರಾಶಿ' ಎಂಬುದಕ್ಕೆ ಅಕ್ಕಿರಾಶಿ, ತೂರಿದರಾಶಿ, ತೂರುರಾಶಿ, ಭತ್ತದರಾಶಿ, ರಾಶಿಹಾಕು, ರಾಶಿಮಾಡು 'ಒಪ್ಪೊತ್ತು'ಎಂಬುದಕ್ಕೆ ಒಪ್ಪೊತ್ತುಣ್ಣು ಒಪ್ಪೊತ್ತುಮಾಡು ಒಪ್ಪೊತ್ತಿರು ಇಂತಹ ಸಾಧಿತ ರೂಪಗಳು ಬಳಕೆಯಲ್ಲಿವೆ.

ನಿಘಂಟಿನಲ್ಲಿ ಪ್ರಧಾನ ಉಲ್ಲೇಖಕ್ಕೆ ಪೂರಕ ಅರ್ಥವನ್ನು ಕೊಡುವ ಪದಪುಂಜ ಉಪಉಲ್ಲೇಖವಾಗುತ್ತದೆ. ಅದು ಮುಖ್ಯಪದದ ಒಂದು ಭಾಗ. ಮುಖ್ಯ ಪದದ ಅಡಿಯಲ್ಲಿ ಇವು ಹೆಚ್ಚಾಗಿ ದಾಖಲಾಗುತ್ತವೆ. ಉಪಉಲ್ಲೇಖಗಳು (ಹೆಚ್ಚಾಗಿ) ನುಡಿಗಟ್ಟುಗಳೊ ಅಥವಾ ಪದ ಪುಂಜಗಳೋ ... ಉದಾಹರಣೆಗಳನ್ನು ಗಮನಿಸಬಹುದು.

ಕಥೆ :

ಕಥೆ - ನಡೆದ ಅಥವಾ ಕಲ್ಪಿತವಾದ ಸಂಗತಿ

ಕಥಕ - ಕತೆ ಹೇಳುವವ: ಕತೆಗಾರ

ಕಥನ - ನಿರೂಪಣೆ

ಕಥ್ಯಯ - ಪಂಕ್ತಿ

ಗರ್ಭ :

ಗರ್ಭ - ಹೊಟ್ಟೆ; ಬಸಿರು; ಭ್ರೂಣ; ಒಳಗು

ಗರ್ಭಗೃಹ - ಒಳಗಿನ ಕೋಣೆ: ದೇವಾಲಯದಲ್ಲಿ ಮೂಲ ವಿಗ್ರಹವನ್ನು ಇಟ್ಟಿರುವ ಒಳಭಾಗ ಗರ್ಭಗುಡಿ

ಗರ್ಭಧಾರಣ - ಬಸಿರಾದಸ್ಥಿತಿ

ಗರ್ಭವತಿ - ಗರ್ಭಿಣಿ

ಗರ್ಭೀಕರಿಸು - ಹುದುಗಿಸು; ಒಳ ಸೇರಿಸು

ಗಲಿ :

ಗಲಿ - ಜಾರಿದ; ಕಳಚಿದ

ಗಲಿಬಿಲಿ - ಗಲಾಟೆ; ಗೊಂದಲ

ಗಲಿಯಿಸು - ಕೆಳಗೆ ಬೀಳು

ಗಲೀತ - ಪೆಟ್ಟು : ಹೊಡೆತ

ತಾಳ್ :

ತಾಳದ - ಒಂದು ಬಗೆಯ ವ್ಯಂಜಕ ಪದಾರ್ಥ ಪಲ್ಯ

ತಾಳಲು - ಉಪ್ಪಿನಕಾಯಿಗೆ ಬಳಸುವ ಒಂದು ಬಗೆಯ ಕಾಯಿ

ತಾಳವಟ್ಟ - ತಾಳೆಗರಿಯ ಬೀಸಣಿಗೆ

ತಾಳ್ಪು - ಹೊಂದು, ಪಡೆ, ಧರಿಸು, ಸಹಿಸು, ತಾಳು, ಸ್ವೀಕರಿಸು

ಕೋಶ ಸಿದ್ಧತೆಯಲ್ಲಿ ನಿಘಂಟಿಮಗಳನ್ನು ಸಂಯೋಜಿಸುವಾಗ ಪ್ರಧಾನ ಉಲ್ಲೇಖ, ಸಾಧಿತರೂಪ ಹಾಗೂ ಉಪಉಲ್ಲೇಖಗಳು ವ್ಯವಸ್ಥಿತವಾದಾಗ ಆ ಕೋಶಕ್ಕೆ ವೈಜ್ಞಾನಿಕತೆ ಪ್ರಾಪ್ತವಾಗುತ್ತದೆ.

೪.೦೩ ಕಾಗುಣಿತ ಮತ್ತು ಉಚ್ಚಾರಣೆ

ಧ್ವನಿಗಳ ಉಚ್ಚಾರಣೆಗಳಿಗನುಗುಣವಾಗಿ ಜಗತ್ತಿನ ಯಾವುದೇ ಭಾಷೆಗೆ ಅನ್ವಯಿಸುವಂತಹ ಲಿಪಿಯನ್ನು ನಿರ್ಮಿಸುವ ಸಲುವಾಗಿ ಭಾಷಾವಿಜ್ಞಾನಿಗಳು ಪ್ರಯತ್ನ ಮಾಡುತ್ತಲೇ ಇದ್ದುದು ಕಾಲಾನಂತರದಲ್ಲಿ ಒಂದು ವರ್ಣಮಾಲೆ ಹೊರಬರಲು ಕಾರಣವಾಯಿತು. ಅದೇ ಉಚ್ಚರಿಸಿದ ಧ್ವನಿಗಳನ್ನು ಅಂತೆಯೇ ಬರೆದಿಡುವ ವಿಧಾನ. ಉದಾಹರಣೆಗೆ ಎರಡೂ ತುಟಿಗಳಿಂದ ಉತ್ಪತ್ತಿಯಾದ ಅಘೋಷಧ್ವನಿ ಅದು ಯಾವುದೇ ಭಾಷೆಗೆ ಸೇರಿರಲಿ ಪ್ ಆಗಿರುತ್ತದೆ. ಅದಕ್ಕೆ ಒದಗಿದ ಸಂಕೇತ (P). ಇದೇ ರೀತಿ ಪ್ರತಿಯೊಂದು ಧ್ವನಿಗೂ ಅದು ಯಾವುದೇ ಭಾಷೆಗೆ ಸಂಬಂಧಿಸಿರಲಿ ಅದನ್ನುಚ್ಚರಿಸುವಾಗ ಬಳಸಿದ ಕರಣ, ಸ್ಥಾನ ಹಾಗೂ ಅದರ ಉತ್ಪಾದನಾ ರೀತಿಯನ್ನು ಆಧರಿಸಿ ಸಂಕೇತ ಕೊಡಲಾಗುತ್ತದೆ. ಅಂತಾರಾಷ್ಟ್ರೀಯ ಧ್ವನಿವರ್ಣಮಾಲೆ ಈ ದಿಶೆಯಲ್ಲಿ ಅತ್ಯಂತ ಸಮರ್ಪಕವಾದ ವರ್ಣಮಾಲೆಯಾಗಿದೆ.

ಭಾಷೆ ಬದಲಾಗುತ್ತಲೇ ಇರುವುದು ಅದರ ಸಹಜ, ಅಂತೆಯೇ ಜೀವಂತಿಕೆಯ ಲಕ್ಷಣ. ಭಾಷೆ ಬದಲಾಗುವಷ್ಟು ತೀವ್ರವಾಗಿ ಲಿಪಿ ಬದಲಾವಣೆ ಹೊಂದುವುದಿಲ್ಲ ಆದ್ದರಿಂದ ಭಾಷೆಗೂ ಲಿಪಿಗೂ ಅಂತರ ಹೆಚ್ಚಾಗುತ್ತಾ ಹೋಗುತ್ತದೆ. ಉದಾಹರಣೆಗೆ ಇಂಗ್ಲಿಶ್‌ನ Knight, Knife ಗಳ ಉಚ್ಚಾರ ನೈಟ್, ನೈಫ್ ಆಗಿವೆ ಅಂದರೆ K ಧ್ವನಿಯ ಉಚ್ಚಾರ ಬಿಟ್ಟುಹೋಗಿದೆ Cup, Cut ಗಳಲ್ಲಿ u ಇದ್ದಲ್ಲಿ a ಸ್ವರ ಉಚ್ಚರಿತವಾಗುತ್ತದೆ. ಅದೇ ರೀತಿ ಕನ್ನಡದಲ್ಲಿ ಹಂಸ, ಹಂತಿ, ಅಂಟು, ಅಂಚೆ ಅಂಗಿ ಇವುಗಳಲ್ಲಿಯ ಅನುನಾಸಿಕದ ಸಂಕೇತ ಒಂದೇ ಇದ್ದರೂ ಧ್ವನಿ ಬೇರೆ ಬೇರೆಯಾಗಿವೆ. ಇತ್ತೀಚೆಗೆ ಕನ್ನಡದಲ್ಲಿ ೧. ಶಿ ಸ್ವರಗಳೂ f, z ವ್ಯಂಜನಗಳು ಸೇರಿವೆಯಾದರೂ ಅವುಗಳನ್ನು ಸೂಚಿಸಲು, ರೂಢಿಗತ ಲಿಪಿಯಲ್ಲಿ ಸಂಕೇತಗಳಿಲ್ಲ. ಇಂತಹ ವೈಷಮ್ಯಗಳನ್ನು ಹೋಗಲಾಡಿಸಲು ಅಲ್ಲದೇ ಉಚ್ಚಾರಕ್ಕೂ ಲಿಪಿಗೂ ಅನುರೂಪತೆಯನ್ನು ತರಲು ಕೋಶ ರಚನೆಯಲ್ಲಿ ಅಂತಾರಾಷ್ಟ್ರೀಯ ಧ್ವನಿಲಿಪಿ ತುಂಬ ಅನುಕೂಲವಾಗುತ್ತದೆ.

ಕಾಗುಣಿತವನ್ನು ದಾಖಲಿಸುವಾಗ ಧ್ವನ್ಯಾಲೇಖನವನ್ನು ಬಳಸಬೇಕೋ ಅಥವಾ ಧ್ವನಿಮಾಲೇಖನವನ್ನು ಬಳಸಬೇಕೊ ಎಂಬುದರ ಬಗೆಗೆ ಕೋಶಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ. ಧ್ವನಿಮಾ ಯಾವಾಗಲೂ ಉಪಧ್ವನಿಗಳ ಮೂಲಕ ಉಚ್ಚಾರಣೆಗೊಳ್ಳುವುದರಿಂದ ಧ್ವನ್ಯಾಲೇಖದಲ್ಲಿ ದಾಖಲಿಸಬೇಕೆಂಬುದು ಕೆಲವರ ವಾದ. ಧ್ವನ್ಯಾಲೇಖದಲ್ಲಿ ಉಚ್ಚಾರದ ಪ್ರತಿಯೊಂದು ಸೂಕ್ಷ್ಮ ಅಂಶಕ್ಕೂ ಮಹತ್ವವನ್ನು ಕೊಟ್ಟು ಅದನ್ನು ಇದ್ದಕ್ಕಿದ್ದಂತೆಯೇ ಆಲೇಖಿಸಲಾಗುತ್ತದೆ. ಆದರೆ ಅನೇಕ ಪ್ರಸಂಗಗಳಲ್ಲಿ ಇದು ಅಸಾಧ್ಯ. ಅಲ್ಲದೇ ಅನವಶ್ಯ. ಧ್ವನ್ಯಾಲೇಖದಲ್ಲಿ ದಾಖಲಿಸುವುದರಿಂದ ಕೋಶವನ್ನು ಬಳಸುವವರಿಗೆ ತೊಂದರೆಯಾಗುತ್ತದೆ. ಏಕೆಂದರೆ

ಒಂದು ಧ್ವನಿಮಾ ಎರಡು ಅಥವಾ ಮೂರು ಉಪಧ್ವನಿಗಳ ಮೂಲಕ ಉಚ್ಚಾರಣೆಗೊಳ್ಳುವುದರಿಂದ ಅವುಗಳ ಸಂಕೇತಗಳನ್ನು ತಿಳಿದುಕೊಳ್ಳುವುದು ಕಷ್ಟಸಾಧ್ಯ. ಆದ್ದರಿಂದ ಭಾಷೆಯ ಮಹತ್ವದ ಧ್ವನಿಗಳನ್ನು ಅಂದರೆ ಧ್ವನಿಮಾಗಳನ್ನು ಅಂತಾರಾಷ್ಟ್ರೀಯ ಧ್ವನಿ ಪಟ್ಟಿಯ ಸಂಕೇತಗಳ ಸಹಾಯದಿಂದ ಆಲೇಖಿಸಬಹುದು. ಇದನ್ನು ಸ್ಥೂಲ ಆಲೇಖ ಎನ್ನುವರು.

ಮಿಶನರಿ ಕೋಶಕಾರರು ಕಾಗುಣಿತಗಳನ್ನು ದಾಖಲಿಸುವಾಗ ಸ್ಥೂಲ ಆಲೇಖವನ್ನು ಬಳಸಿದರು. ಭಾರತೀಯ ಭಾಷೆಗಳಲ್ಲಿ ಈ ವಿಧಾನವನ್ನು ಅನುಸರಿಸಿದವರು ಬಹುಶಃ ಮಿಶನರಿಗಳೇ ಮೊದಲಿಗರು.

ರೀವ್ ಕೋಶದಲ್ಲಿ

ಅಟ್ಟು	aṭṭu
ಅರೆಗಂಟು	are-ganṭu
ಕೇಸರಿ	keśari
ಬಿಡುಪು	biḍupu
ಮುಂಡ	munḍa
ಸಾಮೀಪ್ಯ	samipya
ಹೈರಾಣ	heirana

ಕಿಟೆಲ್ ಕೋಶದಲ್ಲಿ

ಅಮೆರಿಕೆ	amarike	ನೆಮ್ಬುಗೆ	nembuge
ಅರ್ತು	artu	ಪೊರ್ಕುಳಿ	porkuli
ಅಳ್ಳು	aḷḷu	ಮಿಂಚು	miñcu
ಆದಿತ್ಯ	ā̆ditya	ಮಿಟ್ಟು	miṭṭu
ಉತ್ತಣ್ಡ	uttaṇḍa	ಮಿಣ್ಟೆ	minṭe
ಕಿಱು	kiru		
ಕಿಱಚು	kiracu		

ಮುಖ್ಯ ನಮೂದುಗಳನ್ನು ರೋಮನ್ ಲಿಪಿಯಲ್ಲಿ ಲಿಪ್ಯಂತರ ಮಾಡುವಾಗ ಅಂತಾರಾಷ್ಟ್ರೀಯ

ಧ್ವನಿಪಟ್ಟಿಯ ಸಂಕೇತಗಳನ್ನು ಬಳಸಿದ್ದಾರೆ. ಅವರು ಲಿಪ್ಯಂತರ ಮಾಡಿಕೊಂಡ ಧ್ವನಿಗಳು ಇಂತಿವೆ (ಕಿಟೆಲ್ ಕೋಶವನ್ನು ಅನುಲಕ್ಷಿಸಿ).

ಕನ್ನಡ	ಲಿಪ್ಯಂತರ	ಕನ್ನಡ	ಲಿಪ್ಯಂತರ
ಅ	a	ಗ್	g
ಆ	â	ಘ್	gh
ಇ	i	ಙ್	n̄
ಈ	î	ಚ್	ć
ಉ	u	ಛ್	ch
ಊ	û	ಜ್	j
ಋ	ri	ಝ್	jh
ೠ	r̂i	ಞ್	n
ಌ	ṙi	ಟ್	ṭ
ೡ	r̂i	ಠ್	ṭh
ಎ	e	ಡ್	ḍ
ಏ	ê	ಢ್	ḍh
ಐ	âi, ei	ಣ್	ṇ
ಒ	o	ತ್	t
ಓ	ô	ಥ್	th
ಔ	ôu	ದ್	d
ಂ	m	ಧ್	dh
ಃ	ḣ	ನ್	n

ಕನ್ನಡ	ಲಿಪ್ಯಂತರ	ಕನ್ನಡ	ಲಿಪ್ಯಂತರ
X, x	h	ಪ್	p
ಃ,ೞ	r, h, r	ಫ್	ph
		ಬ್	b
		ಭ್	bh
ಕ್	k	ಮ್	m
ಖ್	kh	ಯ್	y
ರ್	r		
ೞ	ṛ		
ಲ್	i		
ವ್	v		
ಶ್	s		
ಷ್	sh		
ಸ್	s		
ಹ್	h		
ಳ್	I		
ೞ	I		

ಬರೆಹಕ್ಕೂ ಉಚ್ಚಾರಣೆಗೂ ಸಾಮ್ಯತೆಯನ್ನು ತರಲು ಮಿಶನರಿಗಳು ರೋಮನ್ ಲಿಪಿ ಸಂಕೇತಗಳನ್ನು ಬಳಸಿದರು. ಇದರಿಂದ ಕನ್ನಡೇತರರಿಗೆ ಕನ್ನಡ ಭಾಷಾ ರಚನೆಯನ್ನು ತಿಳಿದುಕೊಳ್ಳಲಿಕ್ಕೆ ತುಂಬ ಅನುಕೂಲವಾಯಿತು.

೪.೦೪ ಸಮಾನಾರ್ಥಕಗಳು

ಮಿಶನರಿಗಳು ಶಬ್ದಾರ್ಥ ವಿವರಣೆ ಕೊಡುವುದರ ಜೊತೆಗೆ ಆ ಶಬ್ದಗಳ ಸಮಾನಾರ್ಥಗಳನ್ನೂ ನಾನಾರ್ಥಗಳನ್ನೂ ಸೋದಾಹರಣವಾಗಿ ವಿವರಿಸಿದ್ದಾರೆ. ಈ ಕಾರಣದಿಂದ ಮಿಶನರಿ ಕೋಶಗಳು ತುಂಬ

ಜನಪ್ರಿಯತೆಯನ್ನು ಗಳಿಸಿಕೊಂಡಿರುತ್ತವೆ. ಸಮಾನಾರ್ಥಕ ಪದಗಳೆಂದರೆ ಒಂದು ಪದಕ್ಕೆ ಸಮಾನವಾದ ಅರ್ಥವುಳ್ಳ ಹಲವು ಪದಗಳು (ಇವುಗಳಿಗೆ ಪರ್ಯಾಯ ರೂಪಗಳೆಂದೂ ಕರೆಯುವರು)[೬]. ಇವುಗಳಿಂದ ಒಂದು ಭಾಷೆಯ ಶಬ್ದಬಾಹುಳ್ಯವನ್ನು, ರೂಪ ಬದಲಾವಣೆಯನ್ನು ಗುರುತಿಸಬಹುದು. ಆ ಭಾಷೆಯ ಗಂಭೀರತೆಯನ್ನೂ ವಿಶಾಲತೆಯನ್ನೂ ಹಳಮೆಯನ್ನೂ ಅರಿತುಕೊಳ್ಳಬಹುದು. ಒಂದು ಶಬ್ದದ ಸಮಾನಾರ್ಥಕಗಳನ್ನು ಕೊಡುವುದೆಂದರೆ ಅದರ ಅರ್ಥಗಳನ್ನು ಕೊಟ್ಟಂತೆಯೇ ಸರಿ. ಪುಟ್ಟ ಅರ್ಥ ಭೇದಗಳುಳ್ಳ ಶಬ್ದಗಳನ್ನು ಒಂದೆಡೆ ಕಲೆ ಹಾಕಿದಂತಾಗುತ್ತದೆ.

ಸಮಾನಾರ್ಥಕ ಪದಗಳ ಅರ್ಥ ಸೂಕ್ಷ್ಮತೆಯನ್ನು ಅತ್ಯಂತ ಪರಿಶ್ರಮದಿಂದ ತಿಳಿದುನೋಡಬೇಕಾಗುತ್ತದೆ. ಒಂದು ಪದ ಹಲವು ಕಡೆ ಪ್ರಯೋಗವಾಗುವಾಗ ಅದು ಕೊಡುವ ಅರ್ಥ ಸೂಕ್ಷ್ಮತೆಯನ್ನು ಪ್ರಯೋಗಗಳ ಹಾಗೂ ರೂಢಿ ವಾಕ್ಯಗಳ ನಿದರ್ಶನಗಳನ್ನಿತ್ತು ವಿವರಿಸುವುದು ಸಮಂಜಸವಾದ ವಿಧಾನ. ಮಿಶನರಿಗಳು ಈ ಕಾರ್ಯವನ್ನು ಸಮರ್ಥವಾಗಿ ಮಾಡಿದ್ದಾರೆ. ಮಿಶನರಿಗಳು ತಮ್ಮ ಕೋಶದಲ್ಲಿ ಪೌರಾಣಿಕ, ಪ್ರಾಕೃತಿಕ ಹಾಗೂ ವಿವಿಧ ವ್ಯಾಕರಣ ವರ್ಗ ರೂಪಗಳನ್ನು ವಿವರಿಸುವಾಗ ಅವುಗಳ ಸಮೀಪ ಅರ್ಥವನ್ನು ಕೊಡುವ ಕನಿಷ್ಠ ಮೂರು ನಾಲ್ಕು ಪದಗಳನ್ನು ಕೊಡುವರು. ಈ ಭಾಗದಲ್ಲಿ ಮಿಶನರಿ ಕೋಶಗಳಿಂದ ಆಯ್ದ ಕೆಲವು ಸಮಾನಾರ್ಥಕ ರೂಪಗಳನ್ನು (ವಿಶೇಷವಾಗಿ ಕಿಟೆಲ್ ಕೋಶವನ್ನಾಧರಿಸಿ) ಗಮನಿಸಬಹುದು. ಆ ರೂಪಗಳಿಗೆ ಆಧುನಿಕ ಕನ್ನಡದಲ್ಲಿಯ ಇನ್ನು ಯಾವ ಯಾವ ರೂಪಗಳನ್ನು ಸೇರಿಸಬಹುದು ಎಂಬುದರ ಬಗ್ಗೆಯೂ ವಿವೇಚಿಸಲಾಗಿದೆ.

ಎಕ್ಕಡ – ಎಕ್ಕವಡ, ಚಪ್ಪಲಿ, ಚಪ್ಪಲ್, ಚಪ್ಪಲಿ, ಚಮ್ಮಾಳಿಗೆ (ಚಪ್ಪಲಿಚೆಣ್ಣು) ಇದಕ್ಕೆ (ಇನ್ನೂ ಕೆಲವು ರೂಪಗಳನ್ನು ಸೇರಿಸಬಹುದು. ಎಕಡ, ಕೆರ, ಕೆರವು, ಜೋಡು, ಜೋಡಿ, ಪಾದರಕ್ಷೆ, ಆವಿಗೆ, ಪಾದರಾಕ್ಷಿ, ಪಾದುಕೆ, ಪಾದುಕಾ, ಕಾಲಾನು, ಕಾಲ್ಮರಿ, ತಟ್ಲಿ).

ಓಣಿ – ಓಳಿ, ಬೀದಿ, ಕೋರಿ, (ಪಾತರದವರ ಓಣಿ, ಬೀದಿಜಗಳ, ಬೀದಿರಂಪ, ಓಣಿ ಓಣಿ) ಇನ್ನೂ ಹಲವು ರೂಪಗಳು: ಗಲ್ಲಿ, ಗೊಂದಿ, ಸಂದಿ, ಸಂದು. ಮನೆಗಳಸಾಲು, ಕಿರುದಾರಿ (ಒಕ್ಕಲಿಗರ ಓಣಿ, ಕುರುಬರ ಓಣಿ ಮುಂತಾದವು).

ಕಣ್ಣು – ಕಣ್ಣು, ನೇತ್ರ (ಕಣ್ಣಾಣಿ, ಕಣ್ ಮಿಂಚು, ಕಣ್ ಸೂಲಿ) ಅಕ್ಷಿ, ಅಸ್ರು, ಚಕ್ಷು, ಜ್ಯೋತಿ, ದೃಕ್, ದೃಷ್ಟಿ, ದೃಶ್, ದಿಟ್ಟಿ, ದಿಷ್ಟಿ, ನಯನ, ಕೊಣ್ಣ (ಕಣ್ ಗುಡ್ಡೆ, ಕಣ್ ಗೊಂಬೆ, ಕಣ್ಣೀರು, ಕಣ್ಣವೆ, ಕಣ್ಣರೆಪ್ಪೆ, ಕಣ್ಣಾಗ್ಗದಲು).

ಕೊಮ್ಬ್ – ಕೊಮ್ಬು, ಶಾಖೆ, ಲತೆ (ಕೊಮ್ಬುಬಾಳೆ ಗಿಡ) (ಇನ್ನೂ ಹಲವು ಕೊಂಬೆ, ಕೊಂಬು, ಕೊಂಗೆ, ಕೊಂಚೆ, ಕೋಡು, ಕವಲು, ಟಿಸಲು, ಟಿಸಿಲು, ಟೊಂಗಿ, ಟೊಂಗೆ, ತೊಂಗೆ, ಎಗೆ, ರೆಂಬೆ, ಪ್ರಕಾಂಡ (ಕೊಂಬೆ ರೆಂಬೆ, ಟೊಂಗಿ ಕಡಿದು ಹಾಕು).

ಗಣ್ಟೆ – ಕಣ್ಡೆ, ಗಣ್ಡೆ, ಸಪ್ಪಳ, ಸಮಯ (ಗಂಟೆ ಬಾರಿಸು, ಹೆಡೆ, ಗಣ್ಟೆ ಕಾಯಕ) (ಇನ್ನೂ ಹಲವು ಅವಧಿ, ಕಾಲ, ತಾಸು, ನಿಮಿಷ, ಯುಗ, ವರ್ಷ, ಟೈಮ್, (ಸಂ > ಘಣ್ಟೆ ಗಣ್ಟೆ)

ಗಣ್ಡ – ಕಾನ್ತ, ಕಮಿತ್ರ, ಪತಿ, ರಮಣ, ಪ್ರಿಯ, ಧವ, ಪುರುಷ (ಗಣ್ಡ ಕೂಸು, ಗಣ್ಡ ಕೊಡಲಿ, ಗಣ್ಡ ಹೆಣ್ಡರು ಮುಂ). ಇನಿಯ, ಇಷ್ಟ, ಎರವಿಗ, ಒಡೆಯ, ಕುಟುಂಬಿ, ಕುಟುಂಬಸ್ತ, ಮನೆಯವ, ಯಜಮಾನ, ನಾಯಕ, ನಲ್ಲ (ಪತಿರಾಯ, ಪ್ರಾಣಕಾಂತ, ಪ್ರಿಯತಮ, ಪ್ರಾಣವಲ್ಲಭ, ಮನದನ್ನ, ಪ್ರಾಣನಾಥ).

ಚನ್ದ್ರ – ಚನ್ದರ್, ಚೆನ್ದಿರ್, ಸುಧಾಕರ್, ತಿಂಗಳ್, ಅರುಣ (ಚಂದ್ರಕಾನ್ತ, ಚನ್ದ್ರಮುರುಗ). (ಹಲವು ರೂಪಗಳು ಚಂದ್ರ, ಚಂದು, ಶಶಿ ಇಂದು, ಅತ್ರಿಜ, ತಂಬೆಳಗ (ಚಂದ್ರಕಾಂತ, ಚಂದಮಾಮ, ಚಂದಪ್ಪ, ಬೆಳ್ಗಿರಣ, ಶಶಿಕಿರಣ ಮುಂ).

ಚೆಲುವು – ಚನ್ದ, ಲಾವಣ್ಯ, ಚುಲುವ, ಚಲ್ವ. (ಹಲವು ರೂಪಗಳು. ಚಲೋ, ಚಂದ, ಚಾರು, ಚಾರುತ್ವ, ಚಾರುತೆ, ಚೆಲ್ವು, ಚೆಲು, ಚೆನ್ನ, ಚೆಲುವಿಕೆ, ಚೊಕ್ಕ, ಚೊಕ್ಕಟ್ಟು, ಥಾಳ, ನಿರ್ಮಲ, ಒಳ್ಪು ಒಪ್ಪು, ಒಚ್ಚತ, ಒಪ್ಪ, ಒಯ್ಯಾರ, ಓಜ, ಓಜಸ್ಸು, ಓಜೆ, ಬೆಡಗು, ಮಧುರ, ರಮ್ಯ, ರಂಜಕ, ಸಿಂಗರ, ಸಿಂಗಾರ, ಶೋಭೆ, ಸುಂದರ, ಸುರೂಪ, ಸೊಬಗು, ಸೊಗಸು, ಸೌಂದರ್ಯ, ಸೌಷ್ಠವ. ಹಸನು).

ಜಾಗ – ಕೊಠಡಿ, ಜಾಗ, ಸ್ಥಳ. (ಹಲವು ರೂಪಗಳೂ ಪ್ರದೇಶ, ನಿವೇಶನ, ಹದ್ದು, ಸೀಮಂತ, ಏರಿಯಾ, ಪ್ಲಾಟ್ (ಖಾಲಿಜಾಗ, ಪ್ಲಾಟ್ ನಂ ೧೦ ಮುಂ).

ಜಾಣ – ಕ್ಷೇತ್ರಜ್ಞ, ಪ್ರವೀಣ, ಬುದ್ಧಿವಂತ. (ಇನ್ನೂ ಹಲವು ರೂಪಗಳು. ಕೌಶಲ್ಯ, ಜಾಣು, ಜಾಣ್ಮೆ, ಚತುರತೆ, ಚದುರ, ಚಳಕ, ಚೈತನ್ಯ, ಚಾತುರ್ಯ, ಚಾಲಾಕು, ನಿಪುಣ, ಪಟುತ್ವ, ಪ್ರತಿಭೆ, ಪಾಂಡಿತ್ಯ, ಪರಿಣಿತ, ಬಲ್ಲತನ, ವಿವೇಕ, ವಿದ್ವತ್ತು, ವಿಪ್ರ ವಿಬುಧ, ಶ್ಯಾಣ್ಯಾ) ಬೇರಿಕಿ, ಜಾಬಾದ್, ಎಕ್ಸ್‌ಪರ್ಟ್.

ದಡ್ಡ – ಮಡ್ಡ, ತಿಳಿಗೇಡಿ, ಎಡಗ. (ದಡ್ಡ ಗುಣ, ದಡ್ಡ ಮಗ, ದಾಡ್ಡಾಳು) (ಇನ್ನೂ ಹಲವು ರೂಪಗಳು ಅಚತುರ, ಅಜಾಣ, ಅಜ್ಞಾನಿ, ಅಬುದ್ಧ, ಅಪ್ರೌಢ, ಅಶಿಕ್ಷಿತ, ಅಪ್ರಬುದ್ಧ, ಅವಿವೇಕಿ, ಎಡ್ಡ, ಎಬಡ, ಎಗ್ಗ, ಕ್ಷುಲ್ಲಕ, ಗಾಂಪ, ಗಾವಿಲ, ಜಡ ತರುಳ, ಬುದ್ಧಿ ಹೀನ, ವಡ್ಡ, ಮಂಕು, ಹೆಡ್ಡ, ಮತಿಗೇಡಿ, ಮುಗ್ಧ, ಹುಚ್ಚ (ದಡ್ಡ ಶಿಖಾಮಣಿ, ಮಂಕುಪ್ರಾಣಿ ಮುಂ).

ಮನೆ– ಆವಾಸ, ಗೃಹ, ಭವನ, ನಿವೇಶನ, ಸದನ. (ಇನ್ನೂ ಹಲವು ರೂಪಗಳು. ನಿಲಯ, ಕುಟಿ, ಕುಟೀರ, ಕೊಪ್ಪ, ಗೂಡು, ಗುಡಿಸಲು, ವಾಸ, ಛತ್ತರ, ಬೀಡು, ಸ್ಥಾನ, ನೆಲೆ, ಧಾಮ, ವಸತಿ, ವಟಾರ, ಘರ್).

ಸರಸ್ವತಿ– ಸರಸತಿ, ಶಾರದೆ (ಸರಸ್ವತಿ ಪೂಜೆ ಪೀಠ). ಹಲವು ರೂಪಗಳು ಗೀರ್ವಾಣಿ, ನುಡಿವೆಣ್ಣು, ಭಾರತಿ / ತೀ, ವಾಗ್ದೇವಿ ವಿದ್ಯಾದೇವತೆ, ವಿದ್ಯಾಮಾತೆ.

ಸಾವು – ನಿಧನ, ನಾಶ, ಮೃತ್ಯು, ಮರಣ, ಪಂಚತ್ವ (ಸಾವುನೋವು, ಸಾವು ಮದುವೆಗೆ ಸಮಾನ). (ಹಲವು ರೂಪಗಳು ಅವಸಾನ, ಅಳಿವು, ಅಂತ್ಯ, ಅಜೀವ, ಅಪಾಯ, ಕಾಲಾಧೀನ, ಕಾಲವಶ, ಕೈಲಾಸವಾಸ, ಕೀರ್ತಿಶೇಷ, ಕಣ್ಣುಮುಚ್ಚಿಕೆ, ದೀರ್ಘನಿದ್ರೆ ದೈವಾಧೀನ, ದೇಹತ್ಯಾಗ, ನಿಧನ, ಪರಲೋಕವಾಸ, ಯಾತ್ರೆ, ತೀರಿಹೋದ, ಶಿವೈಕ್ಯ, ಲಿಂಗೈಕ್ಯ, ಮೃತ್ಯು, ವೈಕುಂಠವಾಸ, ಹತ್ಯೆ).

ಸ್ವಲ್ಪ – ಸಲುಪ, ಅಲ್ಪಕೊಂಚ ಸ್ವಲ್ಪ ಸ್ವಲ್ಪ, ಸ್ವಲ್ಪ ಹೊತ್ತು. (ಇನ್ನೂ ಹಲವು ರೂಪಗಳು ಕಡಿಮೆ, ಕಡಮೆ, ತುಸು, ಇನಿತು, ಒಸಿ, ವಸಿ, ಇಂಶ್ರ, ಇಷ್ಟು, ಇಷ್ಟ, ಈಟ, ಈಟೆ,·ಈಸೆ. (ಒಂದೀಸೆ) (ಒಂದಿಷ್ಟು, ಒಂದೀಟು) (ಕೀಟೆ, ಕಿಷ್ಟೆ) (ಒಂಚೂರು, ಚೂರು) ತಟಕು, ತಟಿಕೆ, ರವಟು, ರವಷ್ಟು, ಲವಲೇಶ, ಹನಿ (ಕಿಂಚಿತ್ತು, ಕೊಂಚ, ಕ್ವಚಿತ್) ಜರ, ಕಮ್ಮಿ, ಕಮಿ, ತ್ವಾಡೆ, ಥೋಡೆ, ಥ್ವಾಡೆ).

ಹೆಚ್ಚು – ಎಚ್ಚು, ಪೆಚ್ಚು, ಪೆರ್ಚು ವೃದ್ಧಿ. (ಹೆಚ್ಚಿಚ್ಚು, ಹೆಚ್ಚುನುಗ್ಗಿ, ಹೆಚ್ಚುಕಡಿಮೆ) (ಹಲವು ರೂಪಗಳು ಬಾಳ, ಬಹಳ, ಬಹುಳ, ಬಹು, ಬಹಲಿ, ಭಾರಿ, ಅಗದಿ, ಅನೇಕ, ಅಪಾರ, ಅಧಿಕ, ಅತಿ, ಅಗಲ, ಈಪ್, ಬಟ್ಬ್ಯಾಪ್, ಖುಬಿ, ಕೂಬ್, ಕುಟರಿ, ಗಾಢ, ಜಾಸ್ತಿ, ತುಂಬಾ, ದಟ್ಟಿ, ನಿವಳ್, ಜೋಕ್ಕೊಳು, ಬೇಜಾಮು, ಮನಗಂಡ, ಮನಾರ, ಮಸ್ತ, ಮೀರು, ರಗಡ, ರಾಶಿ ವಿಸ್ತಾರ, ಸಕತ್, ಹೇರಳ, ಶಿಕ್ಕಾಪಟ್ಟೆ).

ಸಮಾನಾರ್ಥಕ ಶಬ್ದಗಳೆಂದರೆ ಎಲ್ಲ ಶಬ್ದಗಳ ಅರ್ಥಗಳೂ ನೂರಕ್ಕೆ ನೂರು ಸಮಾನವೆಂದೂ ಹೇಳಲಾಗದು. ಉದಾ – ಕೊಂಬೆ ಈ ಪದಕ್ಕೆ ಟಿಸಿಲು, ರೆಂಬೆ ಪದಗಳು ಬಹಳ ಮಟ್ಟಿಗೆ ಸಮಾನಾರ್ಥವುಳ್ಳವು. ಆದರೆ ಎಗೆ, ಕವಲು, ಶಾಖೆ ಮೊದಲಾದ ಪದಗಳು ಹೆಚ್ಚು ಸಮಾನತೆಯನ್ನು ಹೊಂದಿರುವುದಿಲ್ಲ. ಅವಕ್ಕೆ ಚಿಕ್ಕರೆಂಬೆ ಎಂಬ ಅರ್ಥವುಂಟು. ಪ್ರಕಾಂಡ ಎಂಬುದು ಮರದ ಕಾಂಡವೂ ಹೌದು. ಕೊಂಬೆಯೂ ಹೌದು ಇಂಥ ಸಣ್ಣ ಪುಟ್ಟ ಅಸಮತೆಗಳು ಈ ಸಮಾನಾರ್ಥಕಗಳಲ್ಲಿ ಅನಿವಾರ್ಯ.

ಕೆಲವು ಸಮಾನಾರ್ಥಕಗಳು ಸಾಮಾಜಿಕ ವರ್ಗಗಳನ್ನನುಸರಿಸಿ ಬಳಕೆಯಾಗುತ್ತವೆ. ಉದಾ – 'ಸಾವು'

ಪೂಜ್ಯ ಸ್ವಾಮಿಗಳು ಲಿಂಗೈಕ್ಯರಾದರು	(ವೀರಶೈವ ಗುರುಗಳು)
ಶ್ರೀಗಳು ದೇಹತ್ಯಾಗ ಮಾಡಿದರು	(ಜೈನ ಬೌದ್ಧ ಗುರುಗಳು)
ಶ್ರೀಯುತರು ಕೈಲಾಸವಾಸಿಯಾದರು	(ಪ್ರತಿಷ್ಠಿತರು)
ನಿನ್ನೆ ತಾನೆ ಅವರ ಮಹಾಪ್ರಸ್ಥಾನ ಕಾರ್ಯ ಮುಗಿಯಿತು	(ಬ್ರಾಹ್ಮಣ)
ಮನೆ ದರೋಡೆ ಮಾಡಿದ ಕಳ್ಳನು ಸತ್ತನು	(ಸಮಾಜ ವಿರೋಧಿ ವ್ಯಕ್ತಿ)
ಮಾದಿಗರ ಹನುಮ ಮೊನ್ನೆ ಸತ್ತು ಹೋದನು	(ಹರಿಜನರಲ್ಲಿ,ಅಪ್ರಾಪ್ತ ವಯಸ್ಸಿನವರು)

ಆಯಾ ಸಾಮಾಜಿಕ ಸ್ಥಾನಮಾನಗಳನ್ನನುಸರಿಸಿ ಈ ಎಲ್ಲ ಸಮಾನಾರ್ಥಕಗಳು ಬಳಕೆಯಾಗುತ್ತವೆ. ಕೆಲವು ಸಮಾನಾರ್ಥಕಗಳ ಬಳಕೆಯ ಸಂದರ್ಭವನ್ನು ಗಮನಿಸಿದಾಗ ಅವು ಸಮಾನಾರ್ಥಕವನ್ನು ಕೊಡುವ ಬದಲು ಪೂರಕಾರ್ಥವನ್ನು ಕೊಡುತ್ತದೆ. ಉದಾ – ಜಾಗ

ಪಾರ್ವತಮ್ಮ ನಗರದಲ್ಲಿ ಜಾಗ ಖಾಲಿ ಇದೆ	(ಸ್ಥಳ)
ಅಲ್ಲಿರುವ ಜಾಗ ನಮ್ಮದು	(ಪ್ರದೇಶ)
ನಿವೇಶನದ ಸಲುವಾಗಿ ಆ ಜಾಗವನ್ನು ಹಾಗೆಯೇ ಬಿಟ್ಟಿದೆ	(ಮನೆ ಕಟ್ಟಲಿಕ್ಕೆ ಮಾತ್ರ ಬಳಸುವ ಸ್ಥಳ)

ಗಂಟೆ –

ಹೊಸಪೇಟೆಯಿಂದ ಸವದತ್ತಿ ಎಷ್ಟು ತಾಸಿನ ದಾರಿ?	(ಕಾಲಾವಧಿ)
ಈಗ ಸಮಯ ನಾಲ್ಕಾಯಿತು	(ಹೊತ್ತು)
ಅವನ ಟೈಮ್ ಯಾಳೆ ಚನ್ನಾಗಿದೆ	(ದೈವ)
ನಮಗೂ ಸಮಯ ಬರಲಿ ನೋಡೋಣ	(ಅವಕಾಶ)

ಹೀಗೆ ಸಮನಾರ್ಥಕಗಳು ಸಾಮಾಜಿಕ ಸ್ಥಾನಮಾನವನ್ನನುಸರಿಸಿ ಪರ್ಯಾಯ ರೂಪಗಳಾಗಿ ಬಳಕೆಯಾದರ ಕೆಲವು ವೇಳೆ ಬಳಕೆಯ ಸಂದರ್ಭವನ್ನಾಧರಿಸಿ ಪೂರಕಾರ್ಥವನ್ನು ಕೊಡುತ್ತವೆ. ಒಂದು ಭಾಷೆಯ ರಚನಾ ಸ್ವರೂಪವನ್ನು ತಿಳಿದುಕೊಳ್ಳುವಲ್ಲಿ ಇವು ಮಹತ್ವದ ಪಾತ್ರವಹಿಸುತ್ತವೆ.

೪.೦೫ ನಾನಾರ್ಥಕಗಳು

ಪದವೊಂದರ ಉಚ್ಚಾರಣೆ ಮತ್ತು ಕಾಗುಣಿತ ಒಂದೇ ಆಗಿದ್ದು, ಆ ಪದ ವಿಭಿನ್ನ ಅರ್ಥಗಳನ್ನು ಹೊಂದಿದ್ದರೆ ಅಂತಹ ಪದಗಳಿಗೆ ನಾನಾರ್ಥ ಪದಗಳೆನ್ನುವರು[೫]. ನಾನಾರ್ಥಕಗಳು ಬೇರೆ ಬೇರೆ ಬಗೆಯ ಸಂಯುಕ್ತರೂಪ. ಇದನ್ನು ಇನ್ನಷ್ಟು ಸ್ಪಷ್ಟಗೊಳಿಸುವುದಾದರೆ ಒಂದು ವಿಷಯಕ್ಕೆ ಸಬಂಧಿಸಿದಂತೆ ಒಂದು ಶಿಷ್ಟ ಪದವನ್ನು ನಿರ್ದೇಶಿಸುವುದು. ಪದವೊಂದರ ಅರ್ಥವಿಸ್ತಾರ; ಅರ್ಥಾಂತರ ಇತ್ಯಾದಿಗಳ ಸ್ವರೂಪವನ್ನು ಕೊಡುವ ರಚನೆ. ನಾನಾರ್ಥಕಗಳಲ್ಲಿ ಅರ್ಥ ಸಂಬಂಧ ಇರುವುದಿಲ್ಲ. ಬಳಕೆಯ ಸಂದರ್ಭದ ಮೇಲಿಂದ ಅವು ಅರ್ಥವನ್ನು ಗುರುತಿಸಬಹುದು. ಆ ಸಂದರ್ಭದಲ್ಲಿ ಅವುಗಳ ವ್ಯಾಕರಣ ವರ್ಗಗಳಲ್ಲಿ ಬದಲಾವಣೆಯಾಗುತ್ತದೆ (ನಾಮ ರೂಪಗಳು ಕ್ರಿಯಾರೂಪಗಳಾಗಿ ಕ್ರಿಯಾ ರೂಪಗಳು ನಾಮರೂಪಗಳಾಗಿ).

ಉದಾ– ಅವನ ಮುಖದ ಮೇಲೆ ಕಳೆ ಇಲ್ಲ (ತೇಜಸ್ಸು)

ಹೊಲದಲ್ಲಿ ಕಳೆ ತೆಗೆಯಬೇಕು (ಪೈರಿನ ನಡುವೆ ಬೆಳೆದಿರುವ ಹುಲ್ಲು)

ನಾನು ಮೊನ್ನೆ ಜಾತ್ರೆಯಲ್ಲಿ ಹಣ ಕಳೆದುಕೊಂಡೆನು (ನಾಶ)

ಕೋಶ ಸಿದ್ಧತೆಯಲ್ಲಿ ಕೋಶಕಾರ ನಾನಾರ್ಥ ರೂಪಗಳನ್ನು ಗಮನಿಸಬೇಕಾಗುತ್ತದೆ. ಮಿಶನರಿ ಕೋಶಕಾರರು ತಮ್ಮ ಕೋಶಗಳಲ್ಲಿ ನಾನಾರ್ಥಕಗಳನ್ನು ದಾಖಲಿಸಿ ಅರ್ಥೈಸಿದ್ದಾರೆ. ಕಿಟೆಲ್ ಕೋಶವನ್ನನುಲಕ್ಷಿಸಿ ಕೆಲವು ಉದಾಹರಣೆಗಳನ್ನು ಗಮನಿಸಬಹುದು.

ಇಕ್ಕು
೧. ಇಡು: ಇರಿಸು: ಮಡಗು
೨. ತ್ಯಾಗ: ಬಿಟ್ಟು ಹೋಗು
೩. ಕೆಡಹು: ಬಿಸಾಡು
೪. ನೀಡು: ಉಣಿಸು

ಕಪಿ
೧. ಮುಸುಕು
೨. ದಟ್ಟವಾಗು

೩. ಏರಗು; ಮೇಲೆ ಬೀಳು

೪. ಹೊದಿಕೆ; ಮುಚ್ಚಳ

೫. ಚತುರ; ಬುದ್ಧಿವಂತ

೬. ಕಾವ್ಯರಚಿಸುವವ

ಕಾಯ್ ೧. ಕಾವು: ಉಷ್ಣತೆ

೨. ಸಿಟ್ಟಾಗು

೩. ಮಿಡಿಗೂ ಹಣ್ಣಿಗೂ ನಡುವಿನ ಸ್ಥಿತಿ

ಗಾಳಿ ೧. ವಾಯು

೨. ದೆವ್ವ: ಪಿಶಾಚಿ

೩. ಸುಳಿವು

೪. ಪ್ರಭಾವ

೫. ಗಲಬೆ : ತಂಟೆ

ನಡು ೧. ನೆಡು: ನಾಟುವಂತೆ ಮಾಡು

೨. ಒಳಸೇರು; ನಾಟು

೩. ಸೊಂಟ; ಟೊಂಕ

೪. ಮಧ್ಯಭಾಗ

ನೆರೆ ೧. ಸೇರು: ಒಟ್ಟಾಗು

೨. ಸಮೂಹ: ಗುಂಪು

೩. ಕೂದಲು ಬೆಳ್ಳಗಾಗು

೪. ಸಮೀಪ: ಅಕ್ಕಪಕ್ಕ

ಪೊಡೆ ೧. ಹೊಡೆ: ಬಡಿ: ಓಡಿಸು

೨. ಎಸೆ; ಬಿಸಾಡು

೩. ಸುರಿ

೪. ಕತ್ತರಿಸು

೫. ಕಬಳಿಸು: ತಿನ್ನು

ಬಿಗಿ ೧. ಭದ್ರಮಾಡು;

೨. ಗಟ್ಟಿಯಾಗಿ ಕಟ್ಟು; ಬಂಧಿಸು

೩. ಗರ್ವಿಸು; ಬೀಗು

೪. ಒತ್ತು; ಅಮುಕು

೫. ಹೊಡೆ: ಥಳಿಸು

ಮಣಿ ೧. ಬಾಗು: ಬಗ್ಗು

೨. ನಮಸ್ಕರಿಸು; ವಂದಿಸು

೩. ಅಪಜಯಹೊಂದು: ಸೋಲು

೪. ಬೆಲೆಬಾಳುವ ಹರಳು; ರತ್ನ

ಮುಕ್ಕು ೧. ಗಬಗಬನೆ ತಿನ್ನು; ಅವಸರದಿಂದ ಕಬಳಿಸು

೨. ತಿಣುಕು

೩. ಭಂಗ; ನಾಶ

೪. ತುಂಡು: ಚೂರು

೫. ಬೀಸುಕಲ್ಲಿನಲ್ಲಿ ಒಂದು ಸಲಕ್ಕೆ ಹಿಡಿಯುವಷ್ಟು ಧಾನ್ಯ

ಮುಟ್ಟು ೧. ಸೋಕು: ಸ್ಪರ್ಶಿಸು

೨. ತಲುಪು: ಸೇರು

೩. ತಾಯಿಯಲ್ಲದೆ ಬೇರೆಯ ಮುಟ್ಟಾದ ಹೆಂಗಸು ಮುಟ್ಟುವುದರಿಂದ ಮಗುವಿಗೆ ಬರುವ ರೋಗ

ಮುತ್ತು ೧. ಆವರಿಸು

೨. ವೃದ್ಧಾಪ್ಯ

	೩.	ಚುಂಬನ: ಮುದ್ದು
	೪.	ನವರತ್ನಗಳಲ್ಲಿ ಒಂದು
ಮೆಟ್ಟು	೧.	ತುಳಿ
	೨.	ಹೆಜ್ಜೆ ಹಾಕು
	೩.	ಕೆಟ್ಟು
	೪.	ಸ್ಥಳ: ಜಾಗ
ಸಾಕು	೧.	ಕಾಪಾಡು: ಪೋಷಿಸು
	೨.	ಅಗತ್ಯ ಪೂರೈಸಿರುವುದನ್ನು ಸೂಚಿಸಲು ಬಳಸುವ ಒಂದು ಮಾತು
	೩.	ಬೇಡ, ನಿಲ್ಲಿಸು ಎಂಬುದನು ಸೂಚಿಸಲು ಬಳಸುವ ಒಂದು ಮಾತು
	೪.	ಬೇಸರವಾಗು : ಬೇಜಾರುಂಟಾಗು

ಒಂದು ಭಾಷೆಯ ರಚನಾ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವಲ್ಲಿ ನಾನಾರ್ಥಕಗಳು ಪ್ರಮುಖ ಪಾತ್ರ ವಹಿಸುತ್ತವೆ.

೪.೦೬ ನಿಷೇಧಾರ್ಥಕ

ನಿಷೇಧಾರ್ಥಕ ರೂಪಗಳೆಂದರೆ ಬಹುಮಟ್ಟಿಗೆ ಅರ್ಥದಲ್ಲಿ ವೈಷಮ್ಯ ಅಥವಾ ವಿರೋಧ ಇರುವ ಪದಗಳು. (ಅವು ಯಾವಾಗಲೂ ವಿರುದ್ಧಾರ್ಥಕ ಅರ್ಥವನ್ನು ಕೊಡುವುದಿಲ್ಲ*) ಈ ಪದಗಳು ಪ್ರತ್ಯೇಕವಾಗಿಯೂ ಬರಬಹುದು ಅಥವಾ ಜೊತೆ ಜೊತೆಯಾಗಿಯೂ ಬರಬಹುದು. ಜೊತೆ ಜೊತೆಯಾಗಿ ಬಂದಾಗ ವಿಶಿಷ್ಟ ಅರ್ಥವನ್ನು ಕೊಡುತ್ತವೆ. ಮಾತನಾಡುವಾಗ ಭಾವನೆಯ ಅಭಿವ್ಯಕ್ತಿಗಾಗಿ, ಸ್ಪಷ್ಟತೆಗಾಗಿ ನಿಷೇಧಾರ್ಥ ರೂಪಗಳನ್ನು ಬಳಸುವುದುಂಟು. ಮಿಶನರಿ ಕೋಶಗಳಲ್ಲಿ ನಿಷೇಧ ರೂಪಗಳು ವಿಪುಲವಾಗಿ ದೊರೆಯುತ್ತವೆ. ಅವುಗಳನ್ನು ಪದದ ಹಂತದಲ್ಲಿ ಹಾಗೂ ವಾಕ್ಯದ ಹಂತದಲ್ಲಿ ನಿಷೇಧ ಸೂಚಿಸುವ ರೂಪಗಳೆಂದು ಎರಡು ರೀತಿಯಾಗಿ ಗುರುತಿಸಬಹುದು. ಪದಗಳು ಪಡೆದುಕೊಳ್ಳುವ ಪೂರ್ವ ಪ್ರತ್ಯಯಗಳನ್ನಾಧರಿಸಿ ನಿಷೇಧ ರೂಪಗಳನ್ನು ಐದು ಗುಂಪುಗಳಾಗಿ ವಿಂಗಡಿಸಬಹುದು.

೧. ಕನ್ನಡದ ನಿಷೇದಾರ್ಥಕ ಪದಗಳಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸಿರುವುದೆಂದರೆ 'ಅ' ಪ್ರತ್ಯಯ.

ಉದಾ –

ಅಕಶೇರುಕ - ಬೆನ್ನುಮೂಳೆಯಿಲ್ಲದ

ಅಕ್ರಮ - ಕ್ರಮವಿಲ್ಲದ: ನಿಯಮಕ್ಕೆ ಹೊರತಾದ: ಕ್ರಮವಾಗಿಲ್ಲದ

ಅಗೌರವ - ಸೂಕ್ತ ರೀತಿಯಲ್ಲಿ ಕಾಣದಿರುವುದು: ಗೌರವವಿಲ್ಲದಿರುವುದು

ಅನರ್ಥ - ಅರ್ಥವಲ್ಲದ: ಕೇಡು

ಅನರ್ಹ - ಅರ್ಹತೆಯಿಲ್ಲದ

ಅವಯಸ್ಕ - ವಯಸ್ಸಿಗೆ ಬಂದಿಲ್ಲದ: ಅಪ್ರಾಪ್ತ

'ಅ' ಪ್ರತ್ಯಯವು ಆದಿಯಲ್ಲಿ ವ್ಯಂಜನವುಳ್ಳ ಪದದೊಡನೆ ಸೇರುತ್ತದೆ.

೨. ಎರಡನೆಯ ಸ್ಥಾನವನ್ನು 'ನಿ' 'ನಿರ್' ಮತ್ತು 'ನಿಸ್' ಪ್ರತ್ಯಯಗಳು ಹಿರಿದಾದ ಪಾತ್ರ ವಹಿಸಿವೆ.

ಉದಾ –

ನಿಗರ್ವಿ - ಜಂಬವಿಲ್ಲದಿರುವವನು: ಸೊಕ್ಕಿಲ್ಲದಿರುವವನು: ವಿನಯಶೀಲ

ನಿತ್ರಾಣ - ಬಲ್ಲವಿಲ್ಲದಿರುವಿಕೆ: ದೌರ್ಬಲ್ಯ

ನಿಶ್ಚಿಂತೆ - ಚಿಂತೆಯಿಲ್ಲದಿರುವಿಕೆ: ಸುಖಮಯ

ನಿರಪರಾಧಿ - ತಪ್ಪು ಮಾಡದವ: ಅಪರಾಧ ಮಾಡದವ

ನಿರುಪಾಯ - ಯುಕ್ತಿಯಿಲ್ಲದೆ: ಉಪಾಯವಿಲ್ಲದ

ನಿರಹಂಕಾರ - ಸೊಕ್ಕಿಲ್ಲದ: ಜಂಬವಿಲ್ಲದ: ಗರ್ವವಿಲ್ಲದ

ನಿಸ್‌ಕಾಳಜಿ - ಕಾಳಜಿಯಿಲ್ಲದ: ಜೋಪಾನ/ ಆಸಕ್ತಿ ವಹಿಸಿದ

೩. 'ಅ' 'ನಿ' ಮತ್ತು 'ನಿರ್' ಪ್ರತ್ಯಯಗಳು ಸೇರಿದಾಗ ಕೆಲವೊಮ್ಮೆ ಒಂದೇ ನಿಷೇಧಾರ್ಥವನ್ನು ಕೊಡುತ್ತವೆ. ಉದಾ–

ಅಭಯ/ ನಿರ್ಭಯ	-	ಭಯವಿಲ್ಲದ, ಧೈರ್ಯ
ಅನುದ್ದೇಶ/ ನಿರುದ್ದೇಶ	-	ಗುರಿ, ಉದ್ದೇಶವಿಲ್ಲದ
ಅಕಳಂಕ/ ನಿಷ್ಕಳಂಕ	-	ದೋಷವಿಲ್ಲದ
ಅವಿಶೇಷ/ ನಿರ್ವಿಶೇಷ	-	ವಿಶೇಷವಿಲ್ಲದ

೪. ಇನ್ನು ಕೆಲವೆಡೆ **'ವಿ'** ಪ್ರತ್ಯಯ ಸೇರಿದಾಗ ನಿಷೇಧಾರ್ಥಕ ಬರುತ್ತದೆ

ವಿದ್ಯುತ್	-	ಸಮಾನವಲ್ಲದ್ದು : ಕಾಣದಿರುವಿಕೆ
ವಿಷಮ	-	ಸಮತಲವಲ್ಲದ: ಕಷ್ಟ ಪರಿಸ್ಥಿತಿ
ವಿಘಟನೆ	-	ಒಡೆಯುವಿಕೆ: ನಾಶ
ವಿಲಕ್ಷಣ	-	ಲಕ್ಷಣವಲ್ಲದ: ವಿಚಿತ್ರವಲ್ಲದ: ಕುರೂಪಿ
ವಿಸ್ಮೃತಿ	-	ನೆನಪಿಲ್ಲದೆ: ಮರವೆ
ವಿಸಂಧಿ	-	ಸಂಧಿಯಿಲ್ಲದ: ಹೊಂದಿಕೆಯಾಗದಿರುವಿಕೆ
ವಿಶಾಪ	-	ಶಾಪ ವಿಮೋಚನೆ

೫. ಇನ್ನು ಕೆಲವೊಮ್ಮೆ **'ಅನು'** **'ಅಪ'** ಪ್ರತ್ಯಯಗಳು ನಿಷೇಧಾರ್ಥವನ್ನು ನೀಡುತ್ತವೆ

ಅನುತ್ತೀರ್ಣ	-	ಉತ್ತೀಣವಲ್ಲದ
ಅನುಪಯುಕ್ತ	-	ಉಪಯುಕ್ತವಲ್ಲದ; ಕಳಪೆ
ಅಪ ಪ್ರಯೋಗ	-	ಯುಕ್ತವಲ್ಲದ ಪ್ರಯೋಗ
ಅಪ ಪ್ರಚಾರ	-	ಯುಕ್ತವಲ್ಲದ/ತಪ್ಪು ಮಾಹಿತಿ ಯನ್ನೊಳಗೊಂಡು ಪ್ರಚಾರ ಮಾಡುವುದು

ಈ ಎಲ್ಲ ಸಂಸ್ಕೃತ ಪ್ರತ್ಯಯಗಳು ಪದಾದಿಯಲ್ಲಿ ಸೇರಿ ನಿಷೇಧಾರ್ಥವನ್ನು ಕೊಡುತ್ತವೆ.

ಕೆಲವು ಸಂದರ್ಭದಲ್ಲಿ 'ನಿ' ಪ್ರತ್ಯಯ ಸೇರಿದಾಗ ನಿಷೇಧಾರ್ಥ ಬರುವುದಿಲ್ಲ ಬದಲಾಗಿ ಭಿನ್ನಾರ್ಥ ಬರುತ್ತದೆ.

ನಿಯೋಗ	-	ಕೆಲಸ: ವಿಶೇಷ ಕಾರ್ಯಕ್ಕಾಗಿ ಕಳುಹಿಸುವುದು
ನಿಕಾಯ	-	ಗುಂಪು: ಕೇಂದ್ರ

ನಿಕ್ಷಿಪ್ತ	-	ಇರಿಸಿದ: ಹೂಳಲ್ಪಟ್ಟ
ನಿಖರ	-	ಕರಾರುವಕ್ಕಾದ

ಮುಂತಾದವು.

ಕೆಲವೊಮ್ಮೆ 'ವಿ' ಮತ್ತು 'ಅನು' ಪ್ರತ್ಯಯ ಸೇರಿದಾಗ ನಿಷೇಧಾರ್ಥಕವಾಗುವ ಬದಲು ಪೂರಕಾರ್ಥವನ್ನು ಕೊಡುತ್ತದೆ.

ವಿಮುಕ್ತಿ	-	ಪಾರಾಗುವಿಕೆ: ವಿಮೋಚನೆ: ಬಿಡುಗಡೆ: ಮುಕ್ತಿ
ವಿಳಂಬ	-	ತಡ: ಮಂದಗತಿ
ವಿಕೋಪ	-	ಮಿತಿಮೀರಿದ ಕೋಪ; ಅತಿರೇಕ
ವಿಜ್ಞಾನ	-	ವಿಶೇಷವಾದ ಜ್ಞಾನ: ಶಾಸ್ತ್ರ: ವೈಜ್ಞಾನಿಕವಾಗಿ ಆಲೋಚಿಸುವುದು
ವಿಭೇದ	-	ಒಡೆಯುವಿಕೆ: ರೀತಿ: ಬಗೆ
ಅನುಕಂಪನ	-	ಸಹಾನುಭೂತಿ
ಅನುಚರ	-	ಸೇವಕ

ಮುಂತಾದವು.

ಇತ್ತೀಚೆ ವೃತ್ತಪತ್ರಿಕೆಯಂತಹ ಸಮೂಹ ಮಾಧ್ಯಮಗಳಲ್ಲಿ (ಸಾಹಿತ್ಯಿಕ ಬರೆಹಗಳಲ್ಲಿಯೂ) **'ಬೇ'** ಪ್ರತ್ಯಯ ಪರ್ಶ್ಯೋ ಅರೇಬಿಕ್ ಪದಗಳಿಗೆ ಸೇರಿ ನಿಷೇಧಾರ್ಥ ಕೊಡುತ್ತದೆ.

ಬೇಜವಾಬ್ದಾರಿ	-	ಜವಾಬ್ದಾರಿಯಿಲ್ಲದ : ಹೊಣೆಗೇಡಿತನ
ಬೇಬಾಕಿ	-	ಬಾಕಿ ಇಲ್ಲದ

ಮುಂತಾದವು

ಧಾತುವಿಗೆ ನಿಷೇಧಾರ್ಥದ ಆಖ್ಯಾತ ಪ್ರತ್ಯಯಗಳು ಸೇರಿ ನಿಷೇಧಾರ್ಥಕ ಕ್ರಿಯಾಪದ ರೂಪಗೊಳ್ಳುತ್ತವೆ. ನಿಷೇಧಾರ್ಥಕ ಆಖ್ಯಾತ ಪ್ರತ್ಯಯಗಳು ಇಂತಿವೆ.

ಪುರುಷ	ಲಿಂಗ	ಏಕವಚನ	ಬಹುವಚನ
ಪ್ರಥಮ	ಪುಂ	ಅನು	ಆರು
	ಸ್ತ್ರೀ	ಅಳು	ಅದು
	ನಪುಂ	ಅದು	ಅವು
ಮಧ್ಯಮ	-	ಎ	ಅರಿ
ಉತ್ತಮ	-	ಎನು	ಎವು

ಉದಾ- 'ನಡೆ' ಧಾತುವಿನ ಕ್ರಿಯಾಪದ ರೂಪಕ್ಕೆ ಮೇಲಿನ ಪ್ರತ್ಯಯಗಳು ಹತ್ತಿದಾಗ ನಡೆಯನು, ನಡೆಯಳು, ನಡೆಯದು, ನಡೆಯ, ನಡೆಯನು, ನಡೆಯರು, ನಡೆಯದು, ನಡೆಯವು ನಡೆಯರಿ, ನಡೆಯೆವು ಎಂಬ ನಿಷೇಧಾರ್ಥಕ ಕ್ರಿಯಾಪದ ಪುಂಜಗಳು ಸೃಷ್ಟಿಯಾಗುತ್ತವೆ. ನಿಷೇಧ ಕ್ರಿಯೆಗೆ ಕೇಶಿರಾಜನು ಪ್ರತಿಷೇಧಕ್ರಿಯೆ, ಅಭಾವ ಕ್ರಿಯೆ ಅಥವಾ ಪ್ರವಿಲೋಮ ಕ್ರಿಯೆ ಎಂಬುದಾಗಿ ಕರೆದಿದ್ದಾನೆ. ಅವನ ಪ್ರಕಾರ ಒಂದು ಕಾರ್ಯ ನಡೆಯಲಿಲ್ಲ, ನಡೆಯುತ್ತಿಲ್ಲ, ನಡೆಯುವುದಿಲ್ಲವೆಂದು ಹೇಳುವ ಕ್ರಿಯೆ ನಿಷೇಧ ಕ್ರಿಯೆ.

ವಾಕ್ಯದ ಹಂತದಲ್ಲಿ- **ಇಲ್ಲ-ಅಲ್ಲ-ಬೇಡ-ಆಗದು-ಕೂಡದು-ಅದ-ಅದೆ-ಹೀನ-ಶೂನ್ಯ-ರಹಿತ** ಇವು ಪದಾಂತ್ಯದಲ್ಲಿ ಬಂದು ನಿಷೇಧಾರ್ಥ ಕೊಡುತ್ತವೆ. -ಇಲ್ಲ- ಅಲ್ಲ-ಬೇಡ-ಶೂನ್ಯ ಇವು ಮುಕ್ತ ಆಕೃತಿಮಾಗಳಾದರೆ ಮಿಕ್ಕವು ಬದ್ಧ ಆಕೃತಿಮಾಗಳಾಗಿವೆ.

ಉದಾ- ಅವನು ಮನೆಯಲ್ಲಿ ಇಲ್ಲ

ಅದು ಪುಸ್ತಕವಲ್ಲ

ಅವನಿಗೆ ಬರಬೇಡವೆಂದು ತಿಳಿಸು

ಈ ಕೆಲಸ ನನ್ನಿಂದಾಗದು

ಈ ಕೆಲಸ ಮಾಡಕೂಡದು

ಕೆಲಸವನ್ನು ಮುಗಿಸದೆ ಬಂದ

ಅವನು ಮಾಡಿದ ಕೆಲಸವನ್ನು ನಾನು ಮಾಡಿದೆ

ಆಧುನಿಕ ಕನ್ನಡದಲ್ಲಿ ನಿಷೇಧ ಕ್ರಿಯಾಪದ ರೂಪಗಳು ಪ್ರಾದೇಶಿಕ ಭಿನ್ನತೆಯಿಂದಾಗಿ ಸಂಕೋಚನವಾಗುತ್ತವೆ. ಮೈಸೂರು ಕನ್ನಡದಲ್ಲಿ 'ಇಲ್ಲ' ಪದದ ಹಿಂದೆ 'ಒ' ಕಾರವೂ ಮಂಗಳೂರು ಕನ್ನಡದಲ್ಲಿ 'ಇ' ಕಾರವೂ ಧಾರವಾಡ ಕನ್ನಡದಲ್ಲಿ 'ಉ' ಕಾರವೂ ಬರುತ್ತದೆ. ಉದಾ- ಮಾಡೋಲ್ಲ (ಮೈ.ಕ), ಮೋಡೋದಿಲ್ಲ (ಮ. ಕ) ಮಾಡೋದುಲ್ಲ (ಧಾ. ಕ) ನಿಷೇಧಾರ್ಥಕ ರೂಪಗಳು ಹೇಳಬೇಕಾದ ವಿಷಯದ/ಕ್ರಿಯೆಯ ಗುಣವನ್ನು ಸ್ವರೂಪವನ್ನು ವಿಶೇಷಿಸುತ್ತದೆ. ಈ ಕಾರಣಕ್ಕಾಗಿಯೇ ಮಿಶನರಿಗಳು ತಮ್ಮ ಕೋಶದಲ್ಲಿ ನಿಷೇಧ ರೂಪಗಳಿಗೆ ಸ್ಥಾನ ಕೊಟ್ಟಿದ್ದಾರೆ.

೪.೦೭ ದೇಶ್ಯ-ಅನ್ಯದೇಶ್ಯ ಪದಗಳು

ದೇಶ್ಯ ಅನ್ಯದೇಶ ಪದಗಳು ಭಾಷೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇದಕ್ಕೆ ಕನ್ನಡವು ಹೊರತಲ್ಲ. ಕನ್ನಡ ಭಾಷೆಯಲ್ಲಿಯು ದೇಶ್ಯ ಶಬ್ದಗಳಲ್ಲದೆ ಸಂಸ್ಕೃತ, ಪ್ರಾಕೃತ, ಮರಾಠಿ ಮುಂತಾದ ಅನ್ಯ ಭಾಷಾ ಶಬ್ದಗಳನ್ನೊಳಗೊಂಡು ಬೆಳೆಯುತ್ತಲಿವೆ. ದೇಶ್ಯ ಶಬ್ದಗಳೆಂದರೆ ಅಚ್ಚಗನ್ನಡ ಶಬ್ದಗಳು. ಇವು ಭಾಷೆಯ ಮೂಲ ಸಂಪತ್ತು. ಮಿಶನರಿಗಳು ತಮ್ಮ ಕೋಶದಲ್ಲಿ ನೂರಾರು ದೇಶ್ಯ ಪದಗಳಿಗೆ ಅರ್ಥ ಕೊಟ್ಟಿದ್ದಾರೆ. ಅನ್ಯ ಭಾಷೆಗಳ ಪ್ರಭಾವದಿಂದಾಗಿ ಕನ್ನಡಿಗರು ಕನ್ನಡ ಶಬ್ದಗಳನ್ನು ದಿನದಿಂದ ದಿನಕ್ಕೆ ಮರೆತು ನಾಡನುಡಿಗಳು ಮೂಲೆ ಪಾಲಾಗುತ್ತಿರುವ ಈ ದಿನಗಳಲ್ಲಿ ಮಿಶನರಿಗಳು ಶಬ್ದಾರ್ಥ ವಿವೇಚಿಸುವಾಗ ಅಚ್ಚಗನ್ನಡ ಪದಗಳನ್ನಾಯ್ದು ಅರ್ಥ ಕೊಟ್ಟಿರುವುದು ಶ್ಲಾಘನೀಯ. ಕೆಲವು ಪದಗಳನ್ನು ಗಮನಿಸಬಹುದು. (ಕಿಟೆಲ್ ಕೋಶವನ್ನು ಅನುಲಕ್ಷಿಸಿ).

ಅಡಿ

- ಪಾದ, ಕಾಲ್

ಎಮ್ಮ ಅಡಿಗಳಂ ಬಿಡು (ಬಸವ ಪುರಾಣ)

-ತಳ, ಅಡಿಗಲ್ಲು

ಅಡೀಲಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ (ಗಾದೆ)

-ಹೆಜ್ಜೆ

ಹಿನ್ನ ಹಿನ್ನಕೆ ಅಡಿಯಿಡುತ (ಬಸವ ಪುರಾಣ)

-ಪಾದ (ಗೌರವಾರ್ಥ)

ನಿಮ್ಮ ಅಡಿಯ ಕೃಪೆವಡೆದು (ಬಸವ ಪುರಾಣ)

-ಅಳತೆ

ಆರಡಿ ಜಗಿವರು

ಅಗಿ

-ತೊಡು, ತೂತುಮಾಡು

ಬೆಟ್ಟ ಅಗಿದು ಇಲಿಯ ಹಿಡಿದ ಹಾಗೆ (ಗಾದೆ)

-ತಿನ್ನು, ಕಚ್ಚು

ಕು ಕಟ್ಟಿನೊಳು ಹೊಕ್ಕು, ಆ ವದೇ ತನಿರಸವ (ಸರ್ವಜ್ಞನ ಪದ)

ಹೊ ಗಣ ಸೋಗೆಯು ಆಗಿವನ್ತ?

-ಮೊಳಕೆ, ಸಸಿ

ಅಡಗು - ಮರೆಯಾಗು

ಸಾರಂಗವು........... ಸೊಪ್ಪೆಯುಮ ಗೆ ಅಡಗಿಕೊಣ್ಡಿತು

(ಮುಂಬೈ ಸಾರ್ವಜನಿಕ ಶಿಕ್ಷಣ ಇಲಾಖೆ ಕನ್ನಡ ಪುಸ್ತಕ)

ಪೊದ ಳ್ ಅಡಗು

-ಮಾಂಸ

ಅಡಗುದಿಮ್ಬುವನು

ಇದಿರ್-

ಇದರು, ಇದಿರು, ಇದುರು, ಎದುರು, ಎದಿರ್, ಎದು, ಎದುರು

ಹಿರಿಯರಿಗೆ ಇದಿರಾಗಿ ಏಳುವುದು (ಗೌರವ ಸೂಚಕ)

ಇದಿರೆದ್ದು ಕಾಡು (ಅಭಿಯೋಗ)

ಇದಿರೊಡ್ಡು (ಕಾಡು/ಪೀಡಿಸು)

ಇದಿರಾಗಿ ಹೋಗಿ ಕಾಣಿಸಿಕೊಳ್ಳು (ಸ್ವಾಗತ)

ಉಡಿ

ಒಡಿ, ಒಡೆ, ಮುರಿ

-ಉಡಲು, ಮಡಿಲಲ್ಲಿ ಹಾಕು

ಬಸು ದ್ದವಳ ಉಡಿಯ ತುಮ್ಬುವ ಕಾರ್ಯ (ಸೀಮನ್ತಕಾರ್ಯ)

ಅದಕೆ ಉಡಿಯಲ್ಲಿ ಹಾಕಬಹುದು, ಮರವಾದ ಮೇಲೆ ಆಗದು (ಗಾದೆ)

-ಸೊಂಟ

ಉಡಿದೊವಲ್, ಉಡಿನೂಲ್ (ಉಡದಾರ)

-ತುಣುಕು, ತುಣ್ಣು, ರೋಗ

ಕಂಕುಳಿನಲ್ಲಿ ಹುಟ್ಟಿದ ಹುಣ್ಣು

ಎಡೆ

-ಸ್ಥಳ

ಕೆಲವು ಎಡೆವೊಳ್, ಅರಡೆಯೊಳ್

-ನಡುವೆ

ಎಡೆಗಾಳ, ಎಡೆಹೊಡೆ

-ನೈವೇದ್ಯ

ಎಡೆಮಾಡು, ಎಡೆಮಡುಗು, ಎಡೆಹಚ್ಚು

ಅಚ್ಚಿ -ದೋಸೆ

-ಚಿಕ್ಕಮಗು ತಾಯಿಯನ್ನು ಕರೆಯುವ ಶಬ್ದ ಅಚ್ಚ> ಅಚ್ಚಿ

ಅಣ್ಬುಕ - ಜಗಳಗಂಟ

- ಭಾವುಕ

ಅಡಲ್ - ಒಂದು ಬಗೆಯ ಮೀನು/ಸಸಿ

ಅಣ್ಣುಮುಟ್ಟು - ಅಶುದ್ಧ

- ಸತ್ತ ಮನೆಯಕೊಳೆ/ಸೂತಕ

ಎಳೆ - ದಾರ, ಸವರು

ಅಗಚು - ಆಯಾಸ, ಮುಗಚು

ಅಟ್ಟಳ - ಕೊತ್ತಲ, ಕೋಟೆ; ಅರುಗು-ಅಂಚು, ಪಕ್ಕ

ಒಸಗೆ - ಮಂಗಳಕಾರ್ಯ; ಸಂತೋಷ; ಉಡುಗೊರೆ

ಅಚ್ಚಗನ್ನಡ ಪ್ರತಿರೂಪಗಳಾದ ತದ್ಭವಗಳು ಮಿಶನರಿಕೋಶಗಳಲ್ಲಿವೆ.

ಅಕ್ಕರ (< ಅಕ್ಷರ)

ಅಗ್ಗಿಗ (< ಅಗ್ರಹ)

ಅಚ್ಚನೆ (< ಅರ್ಚನೆ)

ಅಟ್ಟು (< ಅಷ್ಟು)

ಅದ್ದಿಗೆ (< ಅಧ್ಯಕ್ಷ) ಮುಂತಾದವು

ಇಂತಹ ಅನೇಕ ದೇಶ್ಯ ಪದಗಳಿಗೆ ಕೊಟ್ಟಿರುವ ಅರ್ಥ ವಿವರಣೆ ಕನ್ನಡ ಭಾಷೆಯ ವೈವಿಧ್ಯವನ್ನರಿಯಲಿಕ್ಕೆ ಸಹಾಯಕಾರಿಯಾಗಿದೆ. ಈ ಕೋಶಗಳಲ್ಲಿ ಅನೇಕ ಪ್ರಾದೇಶಿಕ ರೂಪಗಳು ಬಂದಿವೆ. ಅವುಗಳನ್ನು ಈ ಭಾಗದ ಕೊನೆಯಲ್ಲಿ ಕೊಡಲಾಗಿದೆ.

ಮಿಶನರಿಗಳು ಕೋಶ ರಚನೆಗೆ ತೊಡಗಿದಾಗ ಸಹೋದರ ದ್ರಾವಿಡ ಭಾಷೆಗಳ ಸಂಪರ್ಕ ಅವರಿಗಿತ್ತು. ಆ ವೇಳೆಗೆ ಮಲಯಾಳಂದಲ್ಲಿ ಗುಂಡರ್ಟ್, ತೆಲುಗು ಪ್ರದೇಶದಲ್ಲಿ ಬ್ರೌನ್, ತಮಿಳುನಾಡಿನಲ್ಲಿ ಕಾಲ್ಡ್‌ವೆಲ್ ಮುಂತಾದವರು ಕೆಲಸ ಮಾಡುತ್ತಿದ್ದರು. ಪರಸ್ಪರರಲ್ಲಿ ಸಂಪರ್ಕವುಂಟಾದಾಗ ಇತರ ದ್ರಾವಿಡ ಭಾಷಾ ರೂಪಗಳು ಮಿಶನರಿ ಕೋಶಗಳಲ್ಲಿ ಕಾಣಿಸಿಕೊಂಡಿವೆ. ಆದರೆ ಅವು ಎರವಲು ಪದಗಳಲ್ಲ. ಅವು ಪರಸ್ಪರ ಸಂಬಂಧವುಳ್ಳ ಜ್ಞಾತಿಪದಗಳಾಗಿವೆ. ಕೆಲವನ್ನು ಇಲ್ಲಿ ಗಮನಿಸಬಹುದು.

ಅಕ್ಕಲು - ಬುದ್ಧಿ, ವಿವೇಕ (ತುಳು. ಅಕಲು)

ಊದು - ಕಂದುಬಣ್ಣ (ತೆಲು. ಊದಾ)

ಕಮ್ಮಿ - ಕೊರತೆ (ತಮಿ. ಕಮ್ಮಿ)

ಗಚ್ಚು - ನೆಲ, ಗೋಡೆ
ಮೊದಲಾದವುಗಳಿಗೆ ಹಾಕುವ ಗಾರೆ (ತೆಲು. ಗಚ್ಚು)

ಚಿಮ್ಮುಟ - ಇಕ್ಕಳ (ತಮಿ, ಚಿಮಿಟ್ಟಾ : ತೆಲು ಚಿಮಟಿ, ಚಿಮ್ಮಟಿ: ತುಳು. ಚಿಮಟಿ, ಚಿಮಿಟಿ, ಚಿಮ್ಟಿ)

ಚುಂಗಾಣಿ - ಜೇಡಿಮಣ್ಣಿನಿಂದ ಮಾಡಿದ
ಚಿಕ್ಕದಾದ ಪಾತ್ರೆ (ತಮಿ, ಚುಟ್ಟಾನ್: ಮಲ, ಚುಟ್ಟಾ: ತುಳು, ಚುಂಗಾಣಿ)

ಉಡಿ- (ತಮಿ. ಉಡೈ: ಮಲ. ಉಡೆ: ತುಳು ಉಡಿ)

ಮಿಶನರಿ ಕೋಶಗಳಲ್ಲಿ ದೇಶ್ಯ ಹಾಗೂ ಜ್ಞಾತಿರೂಪಗಳಂತೆ ಅನೇಕ ಅನ್ಯದೇಶ್ಯ ಪದಗಳು ಸೇರಿವೆ. ಮಿಶನರಿಗಳು ಕೋಶ ರಚಿಸುವ ಕಾಲಕ್ಕೆ ಹಿಂದೂಸ್ತಾನಿ, ಮರಾಠಿ, ಉರ್ದು, ಇಂಗ್ಲಿಶ್ ಭಾಷೆಯ ಪದಗಳು

ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಪ್ರಭಾವದಿಂದಾಗಿ ಕನ್ನಡದಲ್ಲಿ ಬಂದು ಸೇರಿದ್ದವು. ಎರಡು ಭಾಷೆಗಳು ಪರಸ್ಪರ ಸಂಪರ್ಕದಲ್ಲಿ ಬಂದಾಗ ಕೊಡು-ಕೊಳ್ಳುವಿಕೆ ನಡೆಯುವುದು ಸಹಜ. ಆ ಪ್ರಕ್ರಿಯೆಗೆ ಸ್ವೀಕರಣವೆಂದು ಹೆಸರು. ಒಂದು ಭಾಷೆಯಲಿಲ್ಲದ ವಿಚಾರ, ವ್ಯವಹಾರ ಮತ್ತು ವಸ್ತುವನ್ನು ಸೂಚಿಸುವ ಪದಗಳು ಅನ್ಯ ಭಾಷೆಯಲ್ಲಿದ್ದರೆ ಆ ಭಾಷೆ ಅವುಗಳನ್ನು ಸ್ವೀಕರಿಸುತ್ತದೆ. ಒಂದು ಕೊಡುವ ಭಾಷೆ ಇನ್ನೊಂದು ತೆಗೆದುಕೊಳ್ಳುವ ಭಾಷೆಯಾಗುತ್ತದೆ [..].

ಒಂದು ಭಾಷೆಯಲ್ಲಿರುವ ಅನ್ಯ ದೇಶ್ಯಗಳು ಸಾಮಾನ್ಯವಾಗಿ ನಾಮಪದಗಳು, ಗುಣವಾಚಕಗಳು, ಕ್ರಿಯಾ ರೂಪಗಳು. ಸರ್ವನಾಮವಾಗಲಿ, ಸಂಖ್ಯಾ ವಾಚಕಗಳಾಗಲಿ ಬರುವುದಿಲ್ಲ. ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಹೇಳುವ ಮಾತುಗಳನ್ನೇ ಬಳಸಿ ಹೇಳುವುದಾದರೆ ಅನ್ಯದೇಶಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು [೬]

೧. ಕನ್ನಡ ಭಾಷೆಯೊಡನೆ ಸಂಪೂರ್ಣವಾಗಿ ಬೆರೆತು ಮೂಲಭಾಷೆಯ ಯಾವ ಸತ್ವವೂ ಉಳಿಯದೆ ಕನ್ನಡವೇ ಆಗಿಬಿಟ್ಟಿರುವವು. ಅವು ಬೇರೆಯ ಭಾಷೆಯದಿರಬಹುದು ಎಂಬ ಸಂದೇಹವೇ ಬಾರದಂತೆ ನಮ್ಮ ಭಾಷೆಯೊಡನೆ ಒಂದಾಗಿ ಹೋಗಿರುವವು ಉದಾ-ಅಮಲು, ಇನಾಮು, ನಾಜೂಕು ಮುಂತಾದವು.

೨. ಪರಭಾಷೆಯಿಂದ ಬಂದ ಪಾರಿಭಾಷಿಕ ಪದಗಳು ಬೇರೆ ಬೇರೆ ವೃತ್ತಿಗೆ ಸಂಬಂಧಪಟ್ಟಿದ್ದು, ಕನ್ನಡಕ್ಕೆ ಹೊಂದಿಕೊಳ್ಳಲಾರದೆ ಪ್ರತ್ಯೇಕವಾಗಿ ಉಳಿಯುವ ಶಬ್ದಗಳು ಇವು ಕೆಲವು ಸಂದರ್ಭದಲ್ಲಿ ಮಾತ್ರ ಉಳಿಯುವಂತಹವು. ಉದಾ-ರೇಡಿಯೊ, ಕಂಪ್ಯೂಟರ್, ಮೋಟಾರು ಇತ್ಯಾದಿ.

ಅನ್ಯದೇಶಗಳ ಪ್ರಭಾವ ಹೆಚ್ಚಿದಂತೆಲ್ಲಾ ತೆಗೆದುಕೊಳ್ಳುವ ಭಾಷೆಯ ರಚನೆಯ ಮೇಲೆ ಪರಿಣಾಮಗಳುಂಟಾಗುತ್ತದೆ. ಉದಾ-ಕನ್ನಡದಲ್ಲಿ ಆಂಗ್ಲ ಪದಗಳ ಬರುವಿಕೆಯಿಂದಾಗಿ ಕನ್ನಡ ಧ್ವನಿ ವ್ಯವಸ್ಥೆಯ ಮೇಲೆ ಪರಿಣಾಮ ಉಂಟಾಯಿತು. ಕೆಲವು ಪದಗಳನ್ನು ಗಮನಿಸಬಹುದು.

Zoo	ಝ್ಯೂ
Fund	ಫಂಡ್
Father	ಫಾದರ್
Officer	ಆಫೀಸರ್

ಕನ್ನಡದಲ್ಲಿ F ಹಾಗೂ Z ಅಕ್ಷರದ ಉಚ್ಚಾರಣೆಗಳಿಲ್ಲ. ಅವು ಕ್ರಮವಾಗಿ 'ಫ' 'ಜ' ಆಗಿ ಬಿಡುತ್ತವೆ. 'ಅನ್ಯ ದೇಶ್ಯಗಳಿಂದ ಶಬ್ದಕೋಶ ಬೆಳವಣಿಗೆಯಾಗುವುದಲ್ಲದೆ ಎರಡು ಭಾಷೆಗಳಲ್ಲಿ ವ್ಯವಹಾರ ನಡೆಸಲಿಕ್ಕೆ ಹಾಗೂ ಎರಡು ಭಾಷೆಗಳ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ ಸೃಷ್ಟಿಸಲೂ ಅನುಕೂಲವಾಗುತ್ತದೆ. [೬]

ಮಿಶನರಿ ಕೋಶಗಳಲ್ಲಿ ಅಡಕವಾಗಿರುವ ಕೆಲವು ಅನ್ಯದೇಶ್ಯಗಳನ್ನು ಗಮನಿಸಬಹುದು.

ಕರ್ನಾಟಕದ ಉತ್ತರ ಭಾಗದ ಪ್ರದೇಶಗಳ ಭಾಷೆಯ ಮೇಲೆ ಮರಾಠಿ ಭಾಷೆಯ ಪ್ರಭಾವ ದಟ್ಟವಾಗಿದೆ. ಅಲ್ಲಿ ಭಾಷೆಯ ಮೇಲೆ ಮರಾಠಿ ರೂಪಗಳು ಸೇರಿವೆ. ಮಿಶನರಿಗಳು ಕೋಶ ಸಿದ್ಧತೆಗಾಗಿ ಆ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಕೊಂಡಾಗ ಅಲ್ಲಿ ಬಳಕೆಯಲ್ಲಿರುವ ಅನೇಕ ಮರಾಠಿ ಶಬ್ದಗಳನ್ನು ತಮ್ಮ ಕೋಶದಲ್ಲಿ ದಾಖಲಿಸಿದ್ದಾರೆ. ಕೆಲವು ಪದಗಳು ಇಂತಿವೆ.

ಕಿರ್ದಿ	-	ದಿನವಹಿ ಲೆಕ್ಕ ಪತ್ರ, ಆಯವ್ಯಯಗಳನ್ನು ಬರೆದಿಡುವ ಪುಸ್ತಕ (ಮರಾ. ಕಿರ್ದಿ)
ಕಿಲ್ಲೆ	-	ಕೋಟೆ, ದುರ್ಗ (ಮರಾ. ಖಿಲ್ಲಾ / ಕಿಲ್ಲಾ)
ಕುಲ್ಲಾ	-	ತೆರೆದ, ತೆರವಾದ: ಬರಿದಾದ ಖಾಲಿಯಾದ (ಮರಾ. ಖುಲ್ಲಾ)
ಚವಲ	-	ಎರಡಾಣೆ ಬೆಲೆಯ ನಾಣ್ಯ (ಮರಾ. ಚವಲ್, ಚವಲೀ)
ಜೌಳ್	-	ಹುಟ್ಟು ಕೂದಲು, ಜಡೆ; ಮಗುವಿನ ಮೊದಲ ಸಲ ಕೂದಲು ತೆಗೆಯುವ ಸಂಸ್ಕಾರ (ಮರಾ. ಜಾವಳ)
ಟಿಸಿಲು	-	ಕೊಂಬೆ, ಕವಲ (ಮರಾ. ಟಹಾಳಾ)
ಡಬ್ಬಿ	-	ಲೋಹದ ತಗಡಿನಿಂದ ಮಾಡಿದ ಸಣ್ಣ ಪೆಟ್ಟಿಗೆ (ಮರಾ. ಡಬ್ಬಾ, ಡಬ್ಬೀ)
ತರಪು	-	ತರಬು; ನಿಲ್ಲು (ಮರಾ. ತರಫಾ)
ತಮಾಷೆ	-	ವಿನೋದ ಪ್ರಸಂಗ: ಶೃಂಗಾರ ಅತಿರೇಕವುಳ್ಳ ಮಹಾರಾಷ್ಟ್ರದ ಒಂದು ಬಗೆಯ ಗ್ರಾಮೀಣ ರೂಪಕ (ಮರಾ. ತಮಶಾ, ತಮಸಾ)
ತಮ್ಬೂರಿ	-	ಒಂದು ವಾದ್ಯದ ಹೆಸರು (ಮರಾ. ತಮ್ಬುರಾ, ತಮ್ಬುರೀ)
ತಾ ರ	-	ತಂತಿಯ ಸಮಾಚಾರ (ಮರಾ. ತಾರ್)
ತಾಲೀಮು	-	ತರಬೇತಿ, ಕಸರತ್ತು, ವ್ಯಾಯಾಮ (ಮರಾ. ತಾಲೀಮು)
ಬೆಣೆ	-	ಕಟ್ಟಿಗೆಯ ಗೂಟ (ಮರಾ. ಬೇಣೆ)
ಹಲ್ಕಾ	-	ಯೋಗ್ಯವಲ್ಲದ: ಮಹತ್ವವಲ್ಲದ (ಮರಾ. ಹಲಕಾ)

ಇಂತಹ ನೂರಾರು ಮರಾಠಿ ಶಬ್ದಗಳು ಕಿಟೆಲ್ ಕೋಶದಲ್ಲಿವೆ. ಕೆಲವು ರೂಪದಲ್ಲಿ ಅಲ್ಪಸ್ವಲ್ಪ ಬದಲಾವಣೆಯಾಗಿ ಬಂದಿವೆ. ಉದಾ-ಚವಲ-ಚವಲ್/ಚವಲಾ ಮಹಾಪ್ರಾಣಗಳು ಅಲ್ಪಪ್ರಾಣಗಳಾಗಿವೆ. ಖಿಲ್ಲಾ > ಕುಲ್ಲಾ ಖಿಲ್ಲೆ >ಕಿಲ್ಲೆ, ದೀರ್ಘೀಕರಣ, ಹ್ರಸ್ವಗಳಾಗಿವೆ. ಬೆಣೆ > ಬೇಣೆ ತರಪು > ತರಫಾ ಮುಂತಾದ ಮರಾಠಿ ರೂಪಗಳು ಕನ್ನಡಿಗರ ಮನೆ ಮಾತಿನಂತೆ ಬಳಕೆಯಾಗಿವೆ.

ಅನ್ಯದೇಶ್ಯಗಳ ಸ್ವೀಕರಣ ಕ್ರಿಯೆ ನಡೆವಾಗ ಅರ್ಥ ಪರಿವರ್ತನೆಗಳುಂಟಾಗುತ್ತದೆ. ಅದು ಮೂರು ದಿಶೆಗಳಲ್ಲಿ ನಡೆಯುತ್ತದೆ. ೧. ಅರ್ಥ ವಿಸ್ತಾರ ೨. ಅರ್ಥ ಸಂಕೋಚ ೩. ಅರ್ಥಾದೇಶ. ಕಿಟೆಲ್ ಕೋಶದಲ್ಲಿ ದಾಖಲಾಗಿರುವ ಹಿಂದಿ ಶಬ್ದಗಳಲ್ಲಿ ಈ ಕ್ರಿಯೆ ನಡೆದಿದೆ.

ಅರ್ಥವಿಸ್ತಾರ-ಶಬ್ದಗಳ ಅರ್ಥವು ತನ್ನ ಸೀಮಿತ ಕ್ಷೇತ್ರದಿಂದ ಹೊರಬಿದ್ದು, ವಿಸ್ತಾರ ಪಡೆಯುವ ಕ್ರಿಯೆಗೆ ಅರ್ಥ ವಿಸ್ತಾರವೆಂದು ಹೆಸರು. ಇಂತಹ ಪ್ರಕ್ರಿಯೆ ಭಾಷೆಯ ಬೆಳವಣಿಗೆಯನ್ನು ಹೆಚ್ಚಿಸುತ್ತದೆ.

ಉದಾ-

ಚಿಟ್ಟಿ - ಇದರ ಹಿಂದಿ ರೂಪ ಚಿಠ್ಠಾ (ಹಾಳೆ). ಕನ್ನಡದಲ್ಲಿ ಇದರರ್ಥ ರಫ್ ಹಾಳೆಯಲ್ಲಿಯ ಬರೆಹ, ಪತ್ರ ಎಂಬರ್ಥವನ್ನು ಕೊಡುತ್ತದೆ.

ಜತ್ತಾ - ಹಿಂದಿ ರೂಪ ಜತ್ಥಾ (ಕೂಡುವುದು). ಕನ್ನಡದಲ್ಲಿ ಇದು ಜತೆ, ಜತಾ, ಜೊತೆ, ಜೋಡಿ ಎಂಬರ್ಥವನ್ನು ಕೊಡುತ್ತದೆ.

ಪಕ್ಕಾ - ಪಖ್ಖಾ ಹಿಂದಿರೂಪ. (ಒಂದು ವಿಷಯದ ಬಗೆಗೆ ನಿಖರತೆ ಬಂದಾಗ ಅಚ್ಚುಕಟ್ಟಾಗಿ ಬರೆಯುವುದು) ಈ ರೂಪ ಕನ್ನಡದಲ್ಲಿ ಚೇರಿಕಿ, ಚಾಲಾಕು, ನುರಿತವ ಎಂಬರ್ಥ ಕೊಡುತ್ತದೆ.

ಅರ್ಥ ಸಂಕೋಚ-

ದಿವಾಳಿ - ಹಿಂದಿಯಲ್ಲಿ ಎಲ್ಲವನ್ನೂ ಕಳೆದುಕೊಂಡು ದಾರಿದ್ರ್ಯಕ್ಕೆ ಗುರಿಯಾದವನು: ಅತಿಯಾದ ಖರ್ಚು ಎಂಬರ್ಥವಿದೆ. ಕನ್ನಡದಲ್ಲಿ ಹಾಳುಮಾಡು ಎಂಬರ್ಥವಿದೆ.

ಬಡಾಯಿ - ದೊಡ್ಡಸ್ತಿಕೆ, ಬಣಜಂಬ ಹಿಂದಿ ಅರ್ಥ. ಕನ್ನಡದಲ್ಲಿ ಆತ್ಮಪ್ರಶಂಸೆ 'ಬಡಾಯಿ ಬಲ್ಲವನು ಲಡಾಯಿಬಲ್ಲನೇ?'

ಗೋಲಿ - ಈ ಶಬ್ದದ ಹಿಂದಿ ಅರ್ಥ ಬಂದೂಕಿನಲ್ಲಿ ಉಪಯೋಗಿಸುವ ಕಾಡತೂಸು. ಕನ್ನಡದಲ್ಲಿ ಚಿಕ್ಕಮಕ್ಕಳು ಆಡುವ ಗಾಜಿನ ಗುಂಡು.

ಅರ್ಥಾದೇಶ-

ಬಿಚಡಿ -(ಹಿಂ) ಬೇಳೆಕಾಳು (ಕ) ಅಕ್ಕಿ ಅನ್ನ > ಕಿಚಡಿ

ಝೂಲ್ -(ಹಿಂ) ಹೊರಸಿನ ಮೇಲೆ ಶೋಭೆಗಾಗಿ ಹಾಕುವ ಕವಚ

(ಕ) ಕುದುರೆ ಎತ್ತುಗಳ ಮೇಲೆ ಅಲಂಕಾರಕ್ಕಾಗಿ ಹಾಕುವ ಬಟ್ಟೆ ?

ಝೂಲ್ > ಜೂಲ್

ಚಾವಡಿ -(ಹಿಂ) ಪಥಿಕರು ವಿಶ್ರಮಿಸುವ ಸ್ಥಾನ

(ಕಂ) ಪಂಚಾಯಿತಿ /ನ್ಯಾಯ ತೀರ್ಮಾನ ಸ್ಥಳ. ಚಾಮಡಿ > ಚಾವಡಿ

ಮಿಶನರಿ ಕೋಶಗಳಲ್ಲಿ ಅರ್‍ಯಾಬಿಕ್, ಫಾರಸಿ ಶಬ್ದಗಳು ದಾಖಲಾಗಿವೆ. (೧೬ನೇ ಶತಮಾನದಲ್ಲಿ ಪೋರ್ಚುಗೀಸರ ಪ್ರಭಾವದಿಂದಾಗಿ ಅನೇಕ ಫಾರಸಿ ಶಬ್ದಗಳು ಕನ್ನಡದಲ್ಲಿ ಬಳಕೆಯಾಗಿವೆ). ಉದಾ-

ಜಕಾತಿ - ಸರಕುಗಳಿಗೆ ಕೊಡುವ ತೆರಿಗೆ

ಜಮಾ - ವಸೂಲಾದ ಹಣದ ಮೊತ್ತ: ಅದರ ದಾಖಲೆ: ಮೊತ್ತ

ಜಮಾಖರ್ಚು - ಲೆಕ್ಕಪತ್ರ

ಜಮಿನದಾರ - ಭೂ ಒಡೆಯ

ಜಮೀನು - ಭೂಮಿ (ಜಮೀನ್)

ದೌಲತ್ತು - ಐಶ್ವರ್ಯ : ಆಡಂಬರ

ನಗದು - ಹಣ (ನಗದ್)

ನಮೂದು - ಉಲ್ಲೇಖ; ನೊಂದಣೆ (ನಮೂದ್)

ನೌಕರಿ - ಸೇವಾವೃತ್ತಿ (ನೌಕರೀ)

ಬಾಕಿ - ಕೊಡಬೇಕಾದ ಶಿಲ್ಕು (ಬಾಕೀ)

ಮುದ್ದತ್ತು - ನಿರ್ದಿಷ್ಟ ಕಾಲಾವಧಿ (ಮುದ್ದತ್)

ಮುದ್ದಾಮು - ಉದ್ದೇಶಪೂರ್ವಕವಾಗಿ (ಮುದ್ದಾಮ್)

ಹುಜರ್ - ಸಮಕ್ಷಮ; ಸಮೀಪ (ಹುಜರ್)

ಮಿಶನರಿಗಳು ಕನ್ನಡ ನಾಡನ್ನು ಪ್ರವೇಶಿಸುವ ಹೊತ್ತಿಗೆ ಬ್ರಿಟಿಷರು ನೆಲೆಯೂರಿದ್ದರು. ಅವರ ಭಾಷೆ

ಹಾಗೂ ಭಾಷಾ ರೂಪಗಳು ಜನರ ವ್ಯವಹಾರಿಕ ಜೀವನದಲ್ಲಿ ಬಳಕೆಯಾಗುತ್ತಿದ್ದವು. ಆಂಗ್ಲ ಭಾಷಾ ರೂಪಗಳು ಮಿಶನರಿ ಕೋಶದಲ್ಲಿ ಸಹಜವಾಗಿ ಸುಸುಳಿವೆ.

ಚೆಕ್ - ಚೆಕ್ಕು

ಪ್ಲಾನ್ - ಪ್ಲಾನ್/ ಪ್ಲಾನು

ಬೀರ್ - ಬೀರು

ರೋಲ್ - ರೋಲು/ ರೊಲ್

ಕವರ್ - ಕವರು/ ಕವರ್

ಆಂಗ್ಲ ರೂಪಗಳಲ್ಲಿ ಕೆಲವು ವ್ಯಂಜನಾಂತಗಳು ಸ್ವರಾಂತಗಳಾಗಿ ಇನ್ನೂ ಕೆಲವು ರೂಪ ಬದಲಾವಣೆಯಾಗದೇ ಕನ್ನಡದಲ್ಲಿ ಬಳಕೆಯಾಗಿವೆ. (ಕನ್ನಡದಲ್ಲಿ ಆಂಗ್ಲ ಭಾಷೆಯ ಪ್ರಭಾವದ ಬಗ್ಗೆಯೇ ಪ್ರತ್ಯೇಕ ಅಧ್ಯಯನದ ವಿಷಯವಾಗುತ್ತದೆ).

ಕನ್ನಡವಲ್ಲಿ ಸಂಸ್ಕೃತದಷ್ಟು ಇನ್ನಾವ ಭಾಷೆಯೂ ಬೆರೆತಿಲ್ಲ. ರಾಜಾಶ್ರಯದಲ್ಲಿದ್ದ ಪ್ರಾಚೀನ ಕವಿಗಳು ಕಾವ್ಯ ರಚಿಸುವಾಗ ಕನ್ನಡದೊಡನೆ ಸಂಸ್ಕೃತವನ್ನು ಹೇರಳವಾಗಿ ಬೆರೆಸಿದರು (ಕನ್ನಡದ ಶಬ್ದ ಸಂಪತ್ತು ಸಂಸ್ಕೃತ ಭೂಯಿಷ್ಠವಾದುದು). ಸಂಸ್ಕೃತವು ಇಂಡೋ ಆರ್ಯನ್ ಭಾಷಾ ವರ್ಗಕ್ಕೆ ಸೇರಿದೆಯಾದರೂ ಅದು ಕನ್ನಡದಲ್ಲಿ ಆತ್ಮೀಯವಾಗಿ ಬೆರೆತು ಹೋಗಿರುವುದರಿಂದಲೂ ಸಂಸ್ಕೃತದಿಂದ ಬಂದ ಶಬ್ದಗಳು ತತ್ಸಮ ತದ್ಭವಗಳೆಂದು ಎರಡು ವಿಧವಾಗಿ ಬಂದು ಕನ್ನಡಿ ಕೃತವಾಗಿವೆ. ಸಂಸ್ಕೃತ ಪದಗಳು ತತ್ಸಮ ತದ್ಭವಗಳಾಗುವಾಗ ಕೆಲವು ನಿಯಮಗಳನ್ನು ಅಳವಡಿಸಿಕೊಳ್ಳುತ್ತವೆ. ***

೧. ಸಂಸ್ಕೃತದ 'ಶ' ಮತ್ತು 'ಷ' ವರ್ಣಗಳಿಂದ ಕೂಡಿದ ಶಬ್ದಗಳು 'ಸ' ವರ್ಣವನ್ನು ಹೊಂದಿ ತದ್ಭವಗೊಳ್ಳುತ್ತವೆ.

'ಶ'ಕಾರಕ್ಕೆ 'ಸ' ಕಾರ: ಶಂಕು- ಸಂಕು, ಶೀತ -ಸೀತ

'ಷ' ಕಾರಕ್ಕೆ 'ಸ' ಕಾರ- ಭಾಷೆ -ಭಾಸೆ, ಪೌರುಷ- ಪೌರುಸ

೨. ಸಂಸ್ಕೃತದ ಸಂಯುಕ್ತಾಕ್ಷರಗಳು ತದ್ಭವವಾದಾಗ ಸರಳವಾಗುತ್ತವೆ. ವಿರಳವಾಗಿ 'ಅ'ಕಾರ 'ಇ' ಕಾರ 'ಉ' ಕಾರವಾಗುತ್ತವೆ. 'ಅ' ಕಾರ 'ಇ' ಕಾರದ ಮುಂದಿನ ದೀರ್ಘಕ್ಕೆ ಹ್ರಸ್ವ ಉಂಟಾಗುತ್ತದೆ.

'ಅ' ಕಾರಕ್ಕೆ : ಇಂದ್ರ -ಇಂದರ, ಕ್ರಕಚ -ಗರಗರ

'ಇ'ಕಾರಕ್ಕೆ : ಗಿರ್ಗಟ -ಗಿರಿಗಟ, ವರ್ಷ-ವರುಸ

'ಉ' ಕಾರಕ್ಕೆ:	ಪದ್ಮ - ಪದುಮ,	ಭಕ್ತಿ - ಭಕುತಿ
'ಹ್ರಸ್ವಕ್ಕೆ' :	ತ್ರಾಣ -ತರಣ,	ಪ್ರಾಯ -ಹರಣ
	ವ್ಯಾಳ- ಬಿಯಳ,	ವ್ಯಾದಿ- ಬಿಯದಿ

೩. ವರ್ಗದ ಪ್ರಥಮಾಕ್ಷರಗಳಿಗೆ ತೃತೀಯಾಕ್ಷರಗಳು ತದ್ಭವವಾಗಿ ಬರುತ್ತವೆ. 'ಪ' ವರ್ಗವು ಈ ನಿಮಯಕ್ಕೆ ಹೊರತಾಗಿದೆ.

'ಕ' ಕಾರಕ್ಕೆ 'ಗ' ಕಾರ :	ಆಕಾಶ -ಆಗಸ, ಮಲ್ಲಿಕೆ -ಮಲ್ಲಿಗೆ
'ಚ' ಕಾರಕ್ಕೆ 'ಜ' ಕಾರ :	ಸೂಚಿ -ಸೂಜಿ, ವಚಾ -ಬಜೆ
'ಟ' ಕಾರಕ್ಕೆ 'ಡ' ಕಾರ :	ತಟ -ತಡ, ಕೋಟೆ -ಗೋಡೆ
'ತ' ಕಾರಕ್ಕೆ 'ದ' ಕಾರ :	ಜಾತಿ -ಜಾದಿ, ಭೂತಿ -ಬೂದಿ

ಸಂಸ್ಕೃತ ಮಹಾಪ್ರಾಣಾಕ್ಷರಗಳು ಶಬ್ದಗಳು ತದ್ಭವಾದಾಗ ಅಲ್ಪಪ್ರಾಣಾಕ್ಷರವನ್ನು ಪಡೆಯುತ್ತವೆ.

ಖಡ್ಗ	-	ಕಡುಗ
ಘಂಟೆ	-	ಗಂಟೆ
ಛಂದ	-	ಚಂದ್ರ
ಝಗಟೆ	-	ಜಗಳ
ಪಂಥ	-	ಪಂತ
ಫಾಲ	-	ಪಾಳ

೪. ಸಂಸ್ಕೃತ ಶಬ್ದಗಳಲ್ಲಿ 'ಖ' ಕಾರಕ್ಕೆ 'ಗ' ಕಾರವೂ 'ಛ' ಕಾರವು ಒತ್ತಕ್ಷರವಾಗಿದ್ದರೆ ಮತ್ತು 'ಯ' ಕಾರದೊಡನೆ ಕೂಡಿದ್ದರೆ 'ಚ್ಚ' ಕಾರವಾಗಿ ತದ್ಭವವಾಗುವುದು 'ಛ' ಕಾರಕ್ಕೆ ಕೆಲವು ಕಡೆ 'ಸ' ಕಾರ ಬರುವುದು

ಮುಖ	-	ಮೊಗ	ವೈಶಾಖ	-	ಬೇಸಿಗೆ
ಇಚ್ಛೆ	-	ಇಚ್ಚೆ	ಮಚ್ಛರ	-	ಮಚ್ಚರ
ತುಚ್ಛ	-	ತುಚ್ಚೆ	ಅಚ್ಛ	-	ಅಚ್ಚೆ
ಸುರಿಕಾ	-	ಸುರಿಗೆ	ಛತ್ರಿಕಾ	-	ಸತ್ತಿಗೆ

೫. 'ಠ' ಕಾರವು ತದ್ಭವವಾದಾಗ 'ಡ' ಕಾರವು ಕೆಲವೆಡೆ 'ಳ' ಕಾರವಾಗುತ್ತದೆ. 'ಸ್ಥ' ವರ್ಣವು ತದ್ಭವವಾಗಿ 'ತ' ಆಗುವುದು. 'ಥ' ಕಾರವು ಕೆಲವೆಡೆ 'ದ' ಕಾರವಾಗಿ ಮತ್ತೆ ಕೆಲವೆಡೆ 'ಥ' ಕಾರವು 'ಹ' ಕಾರವಾಗಿ ತದ್ಭವವಾಗುತ್ತದೆ.

ಮಠ	-	ಮಡ	ಮಠಿಗೆ	-	ಮಳಿಗೆ
ಸ್ಥೂಲ	-	ತೂಳ	ಸ್ಥಾನ	-	ತಾಣ
ವೀಥಿ	-	ವೀಧಿ, ಬೀದಿ	ಗ್ರಂಥಿ	-	ಗಂಟು, ಗಾಥೆ-ಗಾಹೆ

೬. ಸಂಸ್ಕೃತದ 'ಪ' ಕಾರಕ್ಕೆ 'ವ' ಮತ್ತು 'ಹ' ಕಾರ ತದ್ಭವದಲ್ಲಿ ಬರುತ್ತವೆ. 'ಬ' ಕಾರಕ್ಕೆ 'ವ' ಕಾರವೂ 'ವ' ಕಾರಕ್ಕೆ 'ಬ' ಕಾರವೂ ಬರುತ್ತದೆ.

ವಾಪಿ	-	ಬಾವಿ	ದೀಪಿಕೆ	-	ದೀವಿಗೆ
ಪಾದುಕ	-	ಹಾವುಗೆ	ಪಂಜರ	-	ಹಂಜರ
ಕಬಲ	-	ಕವಳ	ಶಿಬಿಕೆ	-	ಸಿವಿಗೆ
ವಿಧಿ	-	ಬಿಡಿ	ವೀರ	-	ಬೀರ

೭. 'ಯ' ಕಾರವು ತದ್ಭವವಾದಾಗ 'ಗ' ಕಾರ ಆದೇಶವಾಗಿ ಬರುವುದು. ಬಹುಕಡೆಗಳಲ್ಲಿ 'ಜ' ಕಾರವು ಬರುತ್ತದೆ. 'ದ' ಕಾರಕ್ಕೆ 'ಯ' ಕಾರವು ಒತ್ತಾಗಿದ್ದಾಗ ತದ್ಭವದಲ್ಲಿ ದ್ವಿತ್ವ 'ಜ' ಕಾರವು ಬರುತ್ತದೆ.

ದ್ವಿತೀಯ	-	ಬಿದಿಗೆ	ತೃತಿಯ	-	ತದಿಗೆ
ಯಮ	-	ಜಮ-ಜವ	ಯೋಗಿ	-	ಜೋಗಿ
ವೈದ್ಯ	-	ಬೆಜ್ಜ	ಉದ್ಯೋಗ	-	ಉಜ್ಜುಗ

೮. 'ದ' ಕಾರಕ್ಕೆ 'ಯ' ಕಾರ ಒತ್ತಾದಾಗ ದ್ವಿತ್ವ ಜಕಾರ ಬರುವುದಿಲ್ಲ

ಸಂಧ್ಯೆ	-	ಸಂಜೆ	ಧ್ಯಾನ	-	ಜ್ಞಾನ

೯. ಒತ್ತಕ್ಷರವಾಗಿ ಬಂದ ರೇಫವು ತದ್ಭವವಾಗುವಾಗ ಲೋಪವಾಗುತ್ತದೆ. ಆವೃತ ರೇಫವು ಆ ವರ್ಣಕ್ಕೆ ಒತ್ತಾಗಿ ಬಂದಿದ್ದರೆ ಅದು ಲೋಪವಾಗುತ್ತದೆ. 'ರ' ಬೇರೆ ವ್ಯಂಜನಕ್ಕೆ ಒತ್ತಾಗಿದ್ದರೆ ತದ್ಭವವಾಗುವಾಗ ಸಜಾತೀಯ ದ್ವಿತ್ವವಾಗುತ್ತದೆ.

ಪುರ್ಗಿ	-	ಪುಗ್ಗಿ	ಅರ್ಘ್ಯ	-	ಅಗ್ಗ
ಚಂದ್ರ	-	ಚಂದ	ಶ್ರಮಣ	-	ಸವಣ
ವೇತ್ರ	-	ಬೆತ್ತ	ತೀವ್ರ	-	ತಿಬ್ಬ

೧೦. 'ಕ್ಷ' ಕಾರವು ತದ್ಭವವಾಗುವಾಗ ದ್ವಿತ್ವ 'ಕ' ಕಾರವೂ, ಕೆಲವೆಡೆ ದ್ವಿತ್ವ ಚ ಕಾರವೂ, ಅಲ್ಲದೆ ದ್ವಿತ್ವ 'ಖ' ಕಾರವೂ ಬರುವುದು 'ಣ' ಕಾರ ಮಿಶ್ರಿತವಾದ ಕ್ಷಕಾರವೂ ದ್ವಿತ್ವ 'ಕ' ಕಾರವಾಗುತ್ತದೆ. ಕೆಲವು ಬಾರಿ 'ಸ' ಕಾರವು ಬರುತ್ತದೆ.

ರಕ್ಷೆ	-	ರಕ್ಕೆ	ಲಕ್ಷ	-	ಲಕ್ಕ
ಅಕ್ಷಿ	-	ಅಚ್ಚಿ	ಮಕ್ಷಿ	-	ಮಚ್ಚು
ತೀಕ್ಷ್ಣ	-	ತಿಕ್ಕಣ್ಣಿ	ಪಣ	-	ಸವಣ
ಪ್ರಕ್ಷಾಳ	-	ಪಖ್ಖಾಳ			

೧೧. ಪದದೊಳಗಿನ 'ಮ' ಕಾರವು ತದ್ಭವವಾಗುವಾಗ 'ವ' ಕಾರವಾಗುವುದು. 'ಚ' ಕಾರಕ್ಕೆ 'ಸ' ಕಾರ ಮತ್ತು 'ದ' ಕಾರಗಳು ಬರುತ್ತವೆ. 'ಶ, ಷ, ಸ' ಕಾರಗಳಿಗೆ 'ಚ'ಕಾರವು ಬರುವುದು.

ಕಾಮ	-	ಕಾವ	ರೋಮ	-	ರೋವ
ಚೂರ್ಣ	-	ಸುಣ್ಣ	ಚರ್ಮಕಾರ	-	ಚಮ್ಮಗಾರ
ಉಚ್ಚ	-	ಉದ್ದ	ಷಷ್ಠಿ	-	ಚಟ್ಟಿ
ಶಷ್ಕುಲಿ	-	ಚಕ್ಕುಲಿ	ವಂಶ	-	ಬಂಚ
ಹಂಸ	-	ಅಂಚೆ			

ಸಂಸ್ಕೃತದ 'ಹ' ಕಾರಕ್ಕೆ ತದ್ಭವದಲ್ಲಿ ಗ, ಣ, ಯ ಕಾರಗಳು ಬರುತ್ತವೆ.

ಕುಹಕ	-	ಕೋಯಕ
ಸಿಂಹ	-	ಸಿಂಗ
ಸನ್ನಾಹ	-	ಸನ್ನಾಣ

೧೨. ಸಂಸ್ಕೃತದ ಕ್ತ, ಸ್ತ, ಪ್ತ ವರ್ಣಗಳು ತದ್ಭವವಾದಾಗ ದ್ವಿತ್ವ 'ತ' ಕಾರವಾಗುತ್ತದೆ. 'ಹ್ಮ' ಕಾರವು 'ಮ' ಕಾರವಾಗಿಯೂ, 'ಹ್ನ' ಕಾರವು 'ನ' ಕಾರವಾಗಿಯೂ ಪರಿಣಮಿಸುತ್ತದೆ.

ಶುಕ್ತಿ	-	ಸುತ್ತಿ	ಯುಕ್ತಿ	-	ಜುತ್ತಿ
ಬಿಸ್ತರ	-	ಬಿತ್ತರ	ಕಸ್ತೂರಿ	-	ಕತ್ತೂರಿ
ಬ್ರಹ್ಮ	-	ಬೊಮ್ಮ	ಜಿಹ್ವೆ	-	ಜಿನೆ

೧೩. 'ಪ' ಕಾರಕ್ಕೆ 'ಮ' ಮತ್ತು 'ಕ' ಒತ್ತುಗಳಿದ್ದಾಗ ತದ್ಭವದಲ್ಲಿ ಒತ್ತಿನ ರೂಪವನ್ನೆ ಹೊಂದುವುದು.

ಉಪ್ಮೆ	-	ಉಮ್ಮೆ
ಪುಷ್ಕರಣಿ	-	ಪೊಕ್ಕರಣಿ

೧೪. 'ತ' ಕಾರಕ್ಕೆ 'ಪ' ಕಾರವೂ, 'ನ' ಕಾರವೂ ಣ ಕಾರಕ್ಕೆ ನ ಕಾರವು ಮತ್ತು ನ ಕಾರಕ್ಕೆ ಮ ಒತ್ತುಗಳಿದ್ದಾಗ ಮೇಲಿನ ವರ್ಣಗಳು ಕೆಳಗಿನ ಒತ್ತುಗಳ ಸ್ವರೂಪವನ್ನೇ ಹೊಂದುತ್ತದೆ.

ಉತ್ಪಟ	-	ಉಪ್ಪಡ
ಕರ್ಣಾಟಕ	-	ಕನ್ನಡ
ರತ್ನ	-	ರನ್ನ
ಉನ್ಮತ್ತ	-	ಉಮ್ಮತ

೧೫. ಸಂಸ್ಕೃತ ಪದದಲ್ಲಿ 'ಜ', 'ತ', 'ಲ' ವರ್ಣಗಳಿಗೆ ವ ಒತ್ತಾಗಿ ಇದ್ದಾಗ ತ, ಸ, ಲ, ಪ ಕಾರಗಳಿಗೆ 'ಯ' ಒತ್ತಾಗಿದ್ದರೆ ಸಜಾತೀಯ ಒತ್ತು ಪಡೆಯುತ್ತದೆ. 'ಗ' ಕ್ಕೆ 'ನ' ಒತ್ತಾಗಿದ್ದರೆ ತದ್ಭವದಲ್ಲಿ 'ಗ' ಜಾತೀಯ ಒತ್ತನ್ನು ಪಡೆಯುವವು.

ಉಜ್ವಲ	-	ಉಜ್ಜಲ	ಪ್ರಜ್ವಲ	-	ಪಜ್ಜಳ
ಬಿಲ್ವಪತ್ರ	-	ಬೆಲ್ಲಪತ್ತ	ಕನ್ಯಕ	-	ಕನ್ನಿಕೆ
ಅನ್ಯಾಯ	-	ಅನ್ನೆಯ	ಮೃತ್ಯು	-	ಮಿತ್ತು
ಪಲ್ಯಯನ	-	ಹಲ್ಲಣ	ಲೇಪ್ಯ	-	ಲೆಪ್ಪ
ಕಾವ್ಯ	-	ಕಬ್ಬ	ಲಾಗ್ನಿಕ	-	ಲಗ್ಗಿಗ
ಅಗ್ನಿ	-	ಅಗ್ಗಿ			

೧೬. ಪದದೊಳಗಿನ ಕಾರಕ್ಕೆ ವ, ರ, ಜ, ಯ, ತ, ಡ ಆದೇಶವಾಗುತ್ತದೆ. ಕೆಲವು ಶಬ್ದಗಳ ಆದಿಯು ದೀರ್ಘವಾಗುತ್ತದೆ.

ಪಾದುಕ	-	ಹಾವುಗೆ	ಕದಂಬ	-	ಕರಂಬ
ಗದೆ	-	ಗಜೆ	ಮದನ	-	ಮಯಣ
ದರ್ದುರ	-	ತದ್ದುರ್	ನವಮಿ	-	ನಾವಿು

೧೭. ಪದದ ಮೊದಲು 'ಋ' ಕಾರಕ್ಕೆ ತದ್ಭವದಲ್ಲಿ ಅ, ಇ, ಎ ಕಾರಗಳು ಬರುತ್ತವೆ. 'ಅಮೃತ' ಶಬ್ದವು 'ಬ್ರಹ್ಮ' ಶಬ್ದದ ಹಾಗೆ ರೇಫೆಯನ್ನು ಹೊಂದುತ್ತದೆ.

ಋತು	-	ರಿತು	ಬ್ರಹ್ಮ	-	ಬಮ್ಮ, ಬೊಮ್ಮ
ಋಣ	-	ರಿಣ	ಹೃದಯ	-	ಹೆದಯ
ವೃಷ್ಟ	-	ಹೆಟ್ಟಿ	ಕೃತಕ	-	ಗತಕ
ವೃಷಭ	-	ಬಸವ	ಅದ್ಭುತ	-	ಅಮರ್ದು

೧೮. ತದ್ಭವವಾಗುವಾಗ ಪದದ ಆದಿಯಲ್ಲಿನ 'ಅ' ಕಾರವು 'ಇ, ಉ, ಹ' ಕಾರವಾಗುತ್ತದೆ. ಪದದ ಮಧ್ಯದಲ್ಲಿ ಬಂದ 'ಜ್ಞಾ' ವರ್ಣಕ್ಕೆ 'ನ' ಕಾರವು ದ್ವಿತ್ವವಾಗಿ ಬರುತ್ತದೆ.

ಅಂಗುಷ್ಟ	-	ಉಂಗುಟ	ವಿಜ್ಞಾನ	-	ಬಿನ್ನಣ
ಅಂಗಾರ	-	ಇಂಗಳ	ಸಂಜ್ಞಾ	-	ಸನ್ನೆ
ಅಗ್ನಿ	-	ಹಗ್ಗಿ			

೧೯. ಪದಗಳ ಆದಿಯಲ್ಲಿರುವ 'ಉ', 'ಊ', 'ಔ' ಗಳಿಗೆ 'ಒ', 'ಓ' ಕಾರಗಳೂ, ಪದದ ಆದಿಯ 'ಅ' ಸ್ವರಕ್ಕೆ 'ಒ', 'ಓ' ಗಳೂ ಬರುವುದು. ಪದದ ಆದಿಯ ದೀರ್ಘವು ಹ್ರಸ್ವವಾಗುವುದು

ತುಮರಿ	-	ತೊವರಿ	ಮಯೂರ	-	ಮೋರ
ಕೂಟ	-	ಕೋಡು	ಸ್ವರ್ಣ	-	ಸೊನ್ನ
ಸೌರಾಷ್ಟ್ರ	-	ಸೊರಟ	ಕಾರ್ಯ	-	ಕಜ್ಜ
ಕಾಂಚಿ	-	ಕಂಚಿ			

೨೦. ಪದದ ಆದಿಯಲ್ಲಿರುವ 'ಅ', 'ಇ', 'ಐ' ಗಳಿಗೆ ತದ್ಭವದಲ್ಲಿ 'ಐ', 'ಏ' ಅಕ್ಷರಗಳು ಬರುವವು. ಶಬ್ದದ ಆದಿಯಲ್ಲಿರುವ ಹ ಕಾರವು ವ್ಯಂಜನವನ್ನು ಕಳೆದುಕೊಂಡು ಸ್ವರ ಉಳಿಸಿ ಕೊಳ್ಳುತ್ತದೆ.

ದಿವಸ	-	ದೆವಸ	ಹಂಸ	-	ಅಂಚೆ
ನಿಯಮ	-	ನೇಮ	ಹಿಂಗು	-	ಇಂಗು
ವ್ಯವಹಾರ	-	ಬೇಹಾರ			

೨೧. ಸ್ಪರ್ಶ, ಸ್ಫಟಿಕ, ಸ್ಪೃಕ್ಕೆ, ಸ್ಫೋಟಕ, ಸ್ತುತಿ, ಸ್ಮಿತ, ಸ್ತೋಮ ಶಬ್ದಾದಿಯ ಸ ಕಾರವು

ಸ್ಪರ್ಶ	-	ಪರುಸ	ಸ್ತುತಿ	-	ತುತಿ
ಸ್ಫಟಿಕ	-	ಪಳಿಕ	ಸ್ತಿಮಿತ	-	ತಿಮಿತ
ಸ್ಫಿಕ್ಕಾ	-	ಪಿಕ್ಕೆ	ಸ್ತೋಮ	-	ತೋಮ
ಸ್ಫೋಟಕ	-	ಪೋಳಿಗೆ	ಸ್ಮಶಾಣ	-	ಮಸಣ

೨೨. ತದ್ಭವವಾಗುವಾಗ ಪದ ಮಧ್ಯ ದೀರ್ಘವೂ ಹ್ರಸ್ವವಾಗುವುದು. ಪದಗಳ ಮಧ್ಯದ 'ಒ, ಓ' ಕಾರಕ್ಕೆ 'ಉ' ಕಾರ, 'ಉ' ಕಾರಕ್ಕೆ 'ಇ' ಕಾರ 'ಅ' ಕಾರಗಳೂ, 'ಅ' ಕಾರಕ್ಕೆ 'ಇ' ಕಾರವೂ ಬರುತ್ತದೆ.

ದುಕೂಲ	-	ದುಗುಲ	ಆಯುಷ್ಯ	-	ಆಯಿಸ
ಅಶೋಕ	-	ಅಸುಗೆ	ಮನುಷ್ಯ	-	ಮಾನಸ
ವಿಲಾಸ	-	ವಿಳಸ	ಕನ್ಯಕಾ	-	ಕನ್ನಿಕೆ

೨೩. ಶಬ್ದದ ಮಧ್ಯ 'ಈ' ಮತ್ತು 'ಏ' ಕಾರಗಳಿಗೆ 'ಅ' ಕಾರವೂ 'ಔ' ಕಾರಕ್ಕೆ 'ಉ' ಕಾರ 'ಆ' ಕಾರಕ್ಕೆ 'ಎ' ಕಾರವೂ ತದ್ಭವದಲ್ಲಿ ಬರುತ್ತದೆ.

ಅಲೀಕ	-	ಅಳಕ
ಕೌಪೀನ	-	ಕೋವಣ
ಸತ್ವಕ	-	ಸತ್ತುಗ
ಅನ್ಯಾಯ	-	ಅನ್ನೆಯ

೨೪. ತದ್ಭವವಾಗುವಾಗ ಪದ ಮಧ್ಯ ಅಕ್ಷರಗಳು ಲೋಪಗೊಳ್ಳುತ್ತವೆ. ಶಬ್ದದ ಆದಿಯ 'ಅ', 'ಆ' ಕಾರಗಳಿಗೆ 'ಐ' ಕಾರವೂ ಆದಿಯ 'ಬ' ಕಾರಕ್ಕೆ 'ಫೆ' ಕಾರವೂ ಬರುತ್ತದೆ.

ಗಹನ	-	ಗಾಳಿ	ಮಹಿಮೆ	-	ಮೈಮೆ
ವಾಹಳಿ	-	ವಾಳಿ	ವಾಹ್ಯಾಳಿ	-	ವೈಹಾಳಿ
ಬಹಿತ್ರ	-	ಝೈತ್ರ			

೨೫. ಪದ ಮಧ್ಯದ 'ಮ' ಮತ್ತು 'ಳ' ಕಾರಗಳಿಗೆ 'ಗ' ಕಾರವು ಬರುತ್ತದೆ. 'ಕ' ಕಾರಕ್ಕೆ 'ವ' ಕಾರವೂ 'ಧ್ಯ' ವರ್ಣಕ್ಕೆ 'ದ್ದ' ದ್ವಿತ್ವವು ಬರುತ್ತದೆ.

ಯಮನೆ	-	ಜಗುನೆ

ಸೀಕರ	-	ಸೀವರ
ಜಳೂಕೆ	-	ಜಿಗುಳೆ
ಅಧ್ಯಕ್ಷ	-	ಅದ್ದಿಕ

೨೬. ಪದ ಮಧ್ಯದಲ್ಲಿರುವ 'ಡ' ಕಾರಕ್ಕೆ 'ಗ, ಟ, ರ' ಕಾರಗಳು ಬರುತ್ತದೆ. ಶಬ್ದದ ಕೊನೆಯಲ್ಲಿರುವ 'ತ' ಕಾರಕ್ಕೆ 'ಡ' ಕಾರ, 'ಹ' ಕಾರಗಳು ಬರುತ್ತವೆ.

ಘಾತಿಗೆ	-	ಘಾರಿಗೆ	ಉತ್ಕಟ	-	ಉತ್ಗಡ
ಪತ್ತನ	-	ಪಟ್ಟಣ	ಸಂಘಾತ	-	ಸಂಗಡ
ತ್ವರಿತ	-	ತುರಿಹ			

೨೭. ಪದಾಂತ್ಯದಲ್ಲಿರುವ 'ಕ', 'ನ', 'ಜ್ಞಾ' ಕಾರಗಳಿಗೆ ತದ್ಭವದಲ್ಲಿ 'ಣ' ಕಾರ ಬರುತ್ತದೆ. ಪದಾಂತ್ಯದಲ್ಲಿರುವ ಅ ಕಾರಕ್ಕೆ 'ಇ', 'ಉ', 'ಎ', ಕಾರಗಳು ಬರುತ್ತವೆ.

ನರ್ತಕಿ	-	ನಚ್ಚಣಿ	ಮಾಘ	-	ಮಾಗಿ
ಕನಿ	-	ಕಣಿ	ದಂಡ	-	ದಂಡು
ಆಜ್ಞೆ	-	ಆಣೆ	ಚೀರ	-	ಸೀರೆ

೨೮. ಶಬ್ದದ ಕೊನೆಯಲ್ಲಿರುವ 'ಉ' ಕಾರಕ್ಕೆ 'ಇ' ಕಾರವೂ, 'ಇ' ಕಾರಕ್ಕೆ 'ಎ', 'ಉ' ಕಾರವೂ ಕೆಲವೆಡೆ ಪದಾಂತ್ಯದ ಸ್ವರವು ಲೋಪ ಆಗುವುದು

ಖರ್ಜು	-	ಕಜ್ಜಿ	ಮೀನ	-	ಮೀನ್
ಗ್ರಂಥಿ	-	ಗಂಟು	ಕೀಲ	-	ಕೀಲ್
ಅತಸೆ	-	ಅಗಸೆ			

೨೯. ಆಶ್ಚರ್ಯ, ಪ್ರಗ್ರಹ, ವಿಜ್ಞಾಪನ, ಕಪಿಂಜಲು, ಅಂಗಿರಸ ಎಂಬ ಶಬ್ದಗಳ ಅಂತ್ಯಾಕ್ಷರಗಳು ಲೋಪವಾಗುತ್ತದೆ. ಗ್ರಹಣ ಶಬ್ದಕ್ಕೆ ಗರಣ ವೆಂದು ಆದೇಶ ಬರುತ್ತದೆ.

ಆಶ್ಚರ್ಯ	-	ಅಚ್ಚರಿ
ವಿಜ್ಞಾಪನ	-	ಬಿನ್ನಹ
ಪ್ರಗ್ರಹ	-	ಹಗ್ಗ

ಕಪಿಂಜಲ - ಕಪಿಂಜು

ಅಂಗಿರಸ - ಅಂಗಿರ

ಗ್ರಹಣ - ಗರಣ

೩೦. ಕೂರ ಮತ್ತು 'ಪ್ರ' ಕಾರ ಶಬ್ದಗಳ ಕೊನೆಯ 'ರ' ಕಾರಕ್ಕೆ ಕ್ರಮವಾಗಿ 'ಳ್' ಮತ್ತು 'ಲ್' ಕಾರಗಳು ಬರುತ್ತವೆ. ಗ್ರಾಮೀಣ ಪದದಲ್ಲಿಯ 'ಣ' ಕಾರಕ್ಕೆ 'ಲ' ಕಾರವು ಬರುತ್ತದೆ.

ಕೂರ - ಕೂಳ್

ಪ್ರಕಾರ - ಪಾಗಲ್

ಗ್ರಾಮೀಣ - ಗಾವಿಲ

೩೧. ತ, ದ, ಧ ಜ, ಲ, ಶ, ಸ, ಳ ವರ್ಣಗಳಿಗೆ 'ವ' ಕಾರವು ಒತ್ತಾಗಿದ್ದರೆ ತದ್ಭವದಲ್ಲಿ ಲೋಪವಾಗುವುದು 'ಸ' ಕಾರಕ್ಕೆ 'ನ' ಕಾರವು ಒತ್ತಾದಾಗ ಲೋಪವಾಗುವುದು

ಈಶ್ವರ	-	ಈಸರ	ಸ್ವಯುಂಭು	-	ಸಂಶಯ
ದ್ವೀಪ	-	ದೀಪ	ಧ್ವನಿ	-	ದನಿ
ಸುಲ್ವ	-	ಸುಲು	ಜ್ವರ	-	ಜರ
ಸ್ನುಷಾ	-	ಸೂಸೆ			

ಕ, ಜ, ನ, ವ, ಶ, ಷ ವರ್ಣಗಳಿಗೆ 'ಯ' ಕಾರವು ದ್ವಿತ್ವವಾಗಿದ್ದರೆ ಅದು ಲೋಪವಾಗುವುದು.

ಮಾಣಿಕ್ಯ	-	ಮಾಣಿಕ	ವ್ಯಥೆ	-	ಚಿತೆ
ಜ್ಯೋತಿ	-	ಜೋತಿ	ಶ್ಯಾಮವರ್ಣ	-	ಸಾಮವರ್ಣ
ಸ್ಯೂನ	-	ಸೂವ	ಆಯುಷ್ಯ	-	ಆಯಿಸ

೩೨. ತದ್ಭವವಾಗುವಾಗ 'ಜ' ಕಾರಕ್ಕೆ ಚ, ದ, ಯ, ಸ ಕಾರಗಳೂ 'ಭ', ಕಾರಕ್ಕೆ ಪ, ವ, ಹ ಕಾರಗಳೂ, 'ರ' ಕಾರಕ್ಕೆ ಲ ಮತ್ತು ಳ ಕಾರಗಳೂ ಬರುತ್ತವೆ.

ಲಾಮಜ್ಜ	-	ಲಾಮಂಚ	ರಾಜ್ಯ	-	ರಾಯ
ಮುಂಜ	-	ಮೊದೆ	ಕುಟಜಕ	-	ಕೊಡಸಿಗೆ
ವಲ್ಲಭ	-	ಬಲ್ಲಹ	ಭಿಂಡಿವಾಲ	-	ಬಿಂದಿವಾಳ

ವೃಷಭ	-	ಬಸವ	ಕುಠಾರ	-	ಕೊಡಲಿ, ಮರೀಚ, ಮೆಳಸಾ

೩೩. ಒತ್ತಕ್ಷರದಿಂದ ಕೂಡಿದ 'ಢ' ಕಾರವು ಡ, ಜ, ಕಾರವಾಗಿಯೂ, 'ಷ' ಕಾರಕ್ಕೆ ದ್ವಿತ್ವದ 'ಡ' ಕಾರವೂ, 'ಟ' ಕಾರವೂ ತದ್ಭವದಲ್ಲಿ ಉಂಟಾಗುವುದು.

ವರ್ಧಕಿ	-	ಬಡ್ಡಗಿ
ಕಾಷ್ಟ	-	ಕಡ್ಡಿ
ಪದ್ಧತಿ	-	ಪಜ್ಜೆ
ನಿಷ್ಠಾ	-	ನಿಟ್ಟೆ

೩೪. ದಾಡಿಮ, ಕೂಷ್ಮಾಂಡ ಶಬ್ದಗಳಲ್ಲಿಯ 'ಮ' ಕಾರ 'ಬ' ಕಾರವಾಗಿ ಆದೇಶವಾಗುವುದು. ಕೂಷ್ಮಾಂಡ ಪದದಲ್ಲಿನ ಅನುಸ್ವಾರವು ಸ್ಥಾನಪಲ್ಲಟ ಹೊಂದುವುದು.

ದಾಡಿಮ	-	ದಾಳಿಂಬ
ಕೂಷ್ಮಾಂಡ	-	ಕುಂಬಳ

೩೫. ಕೆಲವು ಶಬ್ದಗಳು ತದ್ಭವವಾಗುವಾಗ ಪೂರ್ವಾಕ್ಷರ ಮತ್ತು ದ್ವಿತೀಯ ವರ್ಣಗಳು ಅನುಸ್ವರವನ್ನು ಹೊಂದುತ್ತವೆ. ಸಹಜಬಿಂದುವನ್ನು ಹೊಂದಿದ ಶಬ್ದಗಳಲ್ಲಿ ಲೋಪವಾಗುತ್ತದೆ.

ತಾತ	-	ತಂದೆ
ಕಮುಕ	-	ಕಪುಂಗು
ಮರ್ಕಟ	-	ಮಂಕಡ
ಸಂಸ್ಕೃತ	-	ಸಕ್ಕದ

೩೬. ತದ್ಭವ ವಾಗುವಾಗ ಪದದ ಎರಡನೆಯ ಅಕ್ಷರ ಅ, ಆ ಕಾರಗಳಿಗೆ 'ಎ' ಕಾರವು ಊ ಕಾರಕ್ಕೆ ಅ ಕಾರವೂ ಬರುವವು. ದ್ವಿತೀಯ ಮತ್ತು ತೃತೀಯಾಕ್ಷರಗಳಲ್ಲಿರುವ ದೀರ್ಘವು ಹ್ರಸ್ವವಾಗುವುದು.

ಉಜ್ಜಯಿನಿ	-	ಉಜ್ಜೆಣಿ	ವಿನಾಯಕ	-	ಬೆನಕ
ರಸಾಯನ	-	ರಸೆಯನ	ಉತ್ತರೀಯಕ	-	ಉತ್ತರಿಗೆ
ನಿರೂಪಿಸಿದ	-	ನಿರಪಿಸಿದ			

೩೭. ಮೂರನೆಯ ಅಕ್ಷರ 'ಅ' ಕಾರವಾಗುಳ್ಳ ಶಬ್ದಗಳು ತದ್ಭವವಾಗುವಾಗ ಇ, ಉ, ಎ ಕಾರವನ್ನು ಹೊಂದುತ್ತದೆ. ಉ ಕಾರವು ಅ ಕಾರವನ್ನು ಹೊಂದುತ್ತದೆ.

ಹಿಂಗೂಲಕ - ಇಂಗುಲಿಕ

ಸುರಪರ್ಣೆ - ಸುರಹೊನ್ನೆ

ಆಲಸ್ಯಕ - ಆಲಸುಗೆ

ಕಸ್ತುಂಬುರು - ಕೊತ್ತುಂಬರಿ

೩೮. ಪದಗಳಲ್ಲಿನ ನಾಲ್ಕನೆಯ ಅಕ್ಷರದ 'ಅ' ಕಾರಕ್ಕೆ 'ಎ' ಕಾರವು ಬರುವುದು. ಕೆಲವೆಡೆ ದ್ವಿತೀಯಾಕ್ಷರ, ಕೆಲವು ಕಡೆ ತೃತೀಯಾಕ್ಷರ, ಇನ್ನು ಕೆಲವು ಕಡೆ ತೃತೀಯಾಕ್ಷರವಲ್ಲದೆ ನಾಲ್ಕನೆಯ ಅಕ್ಷರವೂ ಲೋಪ ಹೊಂದುವುದು.

ಆಟರೂಪಕ - ಆಡಸೋಗೆ

ವ್ಯವಹಾರ - ಬೇಹಾರ

ಅಮವಾಸ್ಯೆ - ಅವಸೆ

ಉತ್ತರೀಯಕ - ಉತ್ತರಿಗೆ

ತತ್ಸಮ -ತದ್ಭವದ ಸಮಾನ ನಿಯಮಗಳು

೧. ಸಮಾಸವಾಗುವಾಗ ಎರಡೂ ಪದಗಳು ತದ್ಭವವಾಗುವುದುಂಟು. ಕೆಲವೊಮ್ಮೆ ಪೂರ್ವ ಪದ ಮಾತ್ರ ತದ್ಭವಗೊಳ್ಳುವುದನ್ನು ಇನ್ನು ಕೆಲವೆಡೆ ಉತ್ತರ ಪದ ತದ್ಭವವಾಗಿ ಸಮಾನವಾಗುವುದನ್ನು ಕಾಣಬಹುದು. ಇದನ್ನೂ ಕನ್ನಡ ಸಮಾಸವೆಂದು ತಿಳಿಯಲಾಗುತ್ತದೆ.

ವರ್ಣಸರ - ಬಣ್ಣ

ವಿಜಯಶೇಷೆ - ವಿಜಯಸೇನೆ

ಯಮಪುರ - ಜವಪುರ

ಪರಬ್ರಹ್ಮ - ಪರಬೊಮ್ಮ

ಶ್ರೀರಾಮ - ಸಿರಿರಾಮ

ದ್ವಿಗುಣ - ದುಗುಣ

೨. ಸಂಸ್ಕೃತದ ಸಮಾನ ಪದಗಳ ಆದಿಯಲ್ಲಿರುವ ಏಕ, ದ್ವಿ, ತ್ರಿ ಮತ್ತು ಚತುಃ ಶಬ್ದಗಳಿಗೆ ತದ್ಭವ ಸಮಾನದಲ್ಲಿ ಎಕ್ಕ, ದು, ತಿ ಮತ್ತು ಚೌ ಕಾರಗಳು ಬರುತ್ತವೆ. ಪ್ರತ್ಯಯಾಂತ ಶಬ್ದಗಳಿಗೂ ಇದೇ ನಿಯಮ.

ಏಕದಶ - ಎಕ್ಕಸರ

ದ್ವಿಶರ - ದುಸರ

ತ್ರಿಗುಣ - ತಿಗುಣ

ಚತುಃಪಟ್ಟ - ಚೌಪಟ್ಟ

ಏಕಕಂ - ಎಕ್ಕಕಂ, ಚತುಷ್ಕಂ-ಚೌಕಂ

೩. ಸಂಸ್ಕೃತದ ಸಮಾನ ಪದದಲ್ಲಿನ 'ಸಹ' ಶಬ್ದವು ಆದಿಯಲ್ಲಿದ್ದಾಗ 'ಸಾ' ತದ್ಭವವಾಗುವುದು 'ಮಹತ್' ಶಬ್ದವಿದ್ದಾಗ 'ಮಾ' ಇರುವುದು

ಸಹದೇವ - ಸಾದೇವ

ಸಹವಾಸಿ - ಸಾವಾಸಿ

ಮಹದೇವ - ಮಾದೇವ

ಮಹಾಪುರ - ಮಾಹುರ

೪. ಉತ್ತರಪದದ ಮೊದಲಲ್ಲಿ ಬರುವ ಪ, ಬ, ಮ ಕಾರಗಳಿಗೆ 'ಪೂ' ಎಂಬುದು 'ಉ' ಕಾರವಾಗುತ್ತದೆ. 'ಅಂತರ್' ಪದಾಂತ್ಯದ ರೇಫೆಯು ಲೋಪವಾಗುತ್ತದೆ.

ಹಂಸಪಿಂಡ - ಅಂಚೆಪಿಂಡು

ರತ್ನಮಣಿ - ರನ್ನವಣಿ

ಅಂತಃಪುರ - ಅಂತಪುರ

ದಿಶಾಬಲಿ - ದೆಸೆವಲಿ

ವರ್ಣಪೂರ - ಬಣ್ಣಪುರ

ಪ, ಬ, ಮ ಕಾರಗಳಿಗೆ ಕೆಲವೆಡೆ ವಕಾರ ಬರುವುದಿಲ್ಲ.

ಕಾಂಡಪಟ - ಕಂಡಪಟ

ಪತಿವ್ರತೆ - ಹದಿಬದೆ

ಮಲ್ಲಿಕಾ - ಮಲ್ಲಿಗ

೫. ಉತ್ತರ ಪದದ ಆದಿಯಲ್ಲಿರುವ ಕ, ತ, ಪ ಗಳಿಗೆ ಗ, ದ, ಬ ಗಳು ಬರುತ್ತವೆ. ಕೆಲವೆಡೆ ಪೂರ್ವಪದದ ಕೊನೆಯ ಅಕ್ಷರಕ್ಕೆ ದೀರ್ಘವೂ, ಉತ್ತರ ಪದದ ಆದಿಯ ಅಕ್ಷರಕ್ಕೆ ಲೋಪವೂ ಬರುತ್ತದೆ.

ಕಾಶಾಕರ್ಪಟ - ಕಾಸೆಗಪ್ಪಡ

ಧರ್ಮಪಾನೀಯ - ದಮ್ಮಾಣಿ

ಖದಿರತಾಂಬೂಲ - ಕೈರದಂಬುಲ

ಕಾಂಸ್ಯತಾಳ - ಕಂಸಾಳ

೬. ತದ್ಭವ ಸಮಾಸ ಪದದಲ್ಲಿ ಪೂರ್ವ ಪದದ ಕೊನೆಯ ಅಕ್ಷರವು ಲೋಪವಾಗುವುದು.

ಸೂಚೀಯಾನ - ಸೂಯಾಣ

ದೇಶಶಾಖೆ - ದೇಸಾಕೆ

೭. ಆಕಾರ, ಆಗಾರ, ಆವಳಿಕೆ ಎಂಬ ಪದಗಳು ಪರವಾದಾಗ ಪೂರ್ವ ಪದದ ಎರಡನೆಯ ಮತ್ತು ಮೂರನೆಯ ವರ್ಣವು ಲೋಪವಾಗುವುದು.

ಚಿತ್ರಾಕಾರ - ಚಿತ್ತಾರ ರೂಪಾಕಾರ - ರೂಪರ

ಭಂಡಾಗಾರ - ಭಂಡಾರ ಗೂಢಾಚಾರ - ಗುಡಾರ

ದೀಪಾವಲಿಕೆ - ದೀಪಾಳಿಗೆ

೮. ಸಂಸ್ಕೃತ ಸಮಾಸ ಪದದ ಉತ್ತರ ಪದವಲ್ಲಿ 'ಸ್ಥಾನ' ಎಂಬ ಪದವು ಇದ್ದರೆ ತದ್ಭವವಾಗಿ ದರ, ಸಾರ, ಚಾರ ವೆಂದಾಗುತ್ತದೆ.

ಶ್ರೀದ್ವಾರ - ಸಿರಿಯದರ, ಸಿರಿಯದಾರ, ಸಿರಿಯಬಾರ

ಪಾನಿಯದ್ವಾರ, - ಪಾಣಿಯದರ, ಪಾಣಿಯದಾರ, ಪಾಣಿಯಬಾರ

ಕಂಟಕದ್ವಾರ	-	ಕಂಟೆಯಬಾರ
ವಕ್ರದ್ವಾರ	-	ವಂಕದರ, ವಂಕವಾರ ವಂಕಬಾರ

ಹೀಗೆ ಸಂಸ್ಕೃತ ಪದಗಳು ಕನ್ನಡಕ್ಕೆ ಬಂದು ಸೇರುವಾಗ ಕೆಲವೊಮ್ಮೆ ಗುರುತು ಸಿಕ್ಕಲಾರದಷ್ಟು ರೂಪಾಂತರವನ್ನು ಹೊಂದುತ್ತವೆ. ಆದರೆ ಹೀಗೆ ರೂಪಾಂತರ ಹೊಂದುವಾಗ ಮೇಲೆ ಹೇಳಿದ ನಿಯಮಗಳನ್ನು ಆಧರಿಸಿಯೇ ಕನ್ನಡದ ಒಡಲನ್ನು ತುಂಬಿಕೊಂಡಿವೆ. ಮಿಶನರಿ ಕೋಶಗಳಲ್ಲಿರುವ ಸಂಸ್ಕೃತ ಪದಗಳು ಈ ನಿಯಮಗಳಿಗನುಸಾರವಾಗಿ ಬಂದಿರುವುದರಿಂದ ತತ್ಸಮ-ತದ್ಭವ ನಿಯಮಗಳನ್ನು ಕೊಂಚ ವಿಸ್ತಾರವಾಗಿ ಹೇಳಬೇಕಾಯಿತು.

ಮಿಶನರಿ ಕೋಶಗಳಲ್ಲಿ ಕನ್ನಡ ನಾಡಿನ ಅನೇಕ ಪ್ರಾದೇಶಿಕ ರೂಪಗಳು ಹಾಗೂ ಅಂದು ಬಳಕೆಯಲ್ಲಿದ್ದ ಇಂದು ಇಲ್ಲದ ಅನೇಕ ವಿಶಿಷ್ಟ ಪದಗಳು ಸೇರಿವೆ. ಪ್ರಾದೇಶಿಕ ರೂಪಗಳನ್ನು ಮಿಶನರಿಗಳು ತಮ್ಮ ಉದ್ದೇಶಗಳಿಗನುಗುಣವಾಗಿ ಹಾಗೂ ಎಷ್ಟೆಷ್ಟು ಬಗೆಗಳಲ್ಲಿ ಬಳಸಿಕೊಂಡರು ಎಂಬುದನ್ನು ಪರಿಶೀಲಿಸುವುದು ಫಲಪ್ರದವಾದ ಕಾರ್ಯವಾಗುತ್ತದೆ. ಆಡುನುಡಿಗಳನ್ನು ಗ್ರಹಿಸಿ, ದಾಖಿಸಿ, ಅರ್ಥಕೊಡುವಲ್ಲಿ ಒಂದು ಸಾಮಾಜಿಕ ಅಂಶವೂ ಇತ್ತು. ಆ ಕಾಲದಲ್ಲಿ ಸ್ಪಷ್ಟವಾಗಿ ರೂಪುಗೊಳ್ಳುತ್ತಿದ್ದ ಸಂಧಿಕಾಲದಲ್ಲಿ ತಮ್ಮ ಧ್ಯೇಯಸಾಧನೆಗೆ ಸಹಾಯಕವಾಗುವಂತೆ ಭಾಷೆಯನ್ನು ಖಚಿತ, ಸಾಂದ್ರ, ವ್ಯಾವಹಾರಿಕ ರೂಪ ಧಾರಣೆಯಿಂದ ದಾಖಲಿಸುವುದು ಹಾಗೂ ತಮ್ಮ ವಿಚಾರಗಳನ್ನು ಜನರಿಗೆ ತಲುಪಿಸಲು ಅವರಾಡುವ ಭಾಷಾ ರೂಪಗಳನ್ನು ತಿಳಿದುಕೊಳ್ಳುವುದು ಅವರಿಗೆ ಅಗತ್ಯವಾಗಿತ್ತು. ‘ಕತ್ತಲೇ ಗುದ್ಯಾಟ', ‘ಕಿಚ್ಚಿಗೆ ಅಂಜದವ ಬೂದಿಗೆ ಅಂಜ್ಯಾನೆ'? ‘ಬುಡ ಹತ್ತಲರಿಯದವ ನಡು ಹತ್ಯಾನೆ?' ‘ಮೆಯ್ತುಂಬ ಅರಿವಿ ಹೊಟ್ಟೆ ತುಂಬ ಅನ್ನ' ಉತ್ತರ ಕರ್ನಾಟಕದ ಆಡುನುಡಿಯಲ್ಲಿ ಬಳಕೆಯಾಗುವ ಇಂತಹ ಗಾದೆಗಳಲ್ಲಿ ಬಳಕೆಯಾಗುವ ಗುದ್ಯಾಟ, ಅಂಜ್ಯಾನ, ಅರಿವಿ, ಕಿಚ್ಚು ಮುಂತಾದ ರೂಪಗಳನ್ನು ಜನರು ಉಚ್ಚರಿಸಿದ ರೀತಿಯಲ್ಲಿ ದಾಖಲಿಸಿದ್ದಾರೆ. ಇದರಿಂದ ಭಾಷಾ ಸಂಕೀರ್ಣತೆ ದೂರವಾಗಿ ಪರಸ್ಪರರಲ್ಲಿ ಸಂವಹನ ಸುಲಭವಾಗುತ್ತದೆ. ಮಿಶನರಿಗಳ ಬಹುಮುಖ್ಯ ಸಾಧನೆಯೆಂದರೆ ಪ್ರಾದೇಶಿಕ ರೂಪಗಳನ್ನು ಸಂವಹನಕ್ಕೆ ಅನುಕೂಲವಾಗುವಂತೆ ಬಳಸುವ ಪ್ರಯತ್ನ ಮಾಡಿದ್ದು : ಶಬ್ದಗಳ ಒಳ ಮೈಯನ್ನು ಕೆದಕಿನೋಡಿ ಅರ್ಥ ಕೊಟ್ಟಿರುವುದು. ಮಿಶನರಿ ಕೋಶಗಳಲ್ಲಿ (ವಿಶೇಷವಾಗಿ ಕಿಟೆಲ್ ಕೋಶದಲ್ಲಿ) ಬಳಕೆಯಾದ ಪ್ರಾದೇಶಿಕ ರೂಪಗಳನ್ನು ಈ ರೀತಿಯಾಗಿ ಕಲೆಹಾಕಬಹುದು.

ಅಗಡುತನ	ತುಂಟತನ
ಅಗುಳು	ಅನ್ನದ ಚೂರು
ಅಗ್ಗಳ	ದೊಡ್ಡವ
ಅಬ್ಬೆ	ತಾಯಿ
ಅಬ್ಬಿನ ಮನುಷ್ಯ	ಬಲಶಾಲಿ
ಅಚ್ಚು	ಚೌಕಾಕಾರದ ಬೆಲ್ಲ
ಅಜ	ಬ್ರಹ್ಮ
ಅಟ್ಟೆ	ಚಪ್ಪಲ್ಲಿನ ಕೆಳಭಾಗಕ್ಕೆ ಹಾಕುವ ಚರ್ಮ
ಅಡವಿ	ಕಾಡು
ಅಣಕ	ಅಡಕ, ದಟ್ಟ, ಭದ್ರವಾದ
ಅಪ್ಪಚ್ಚಿ	ರೊಟ್ಟಿ, ಎರೆಯಪ್ಪ
ಅಪ್ಪಂಥವರು	ದೊಡ್ಡವರು
ಅಪ್ಪಿಗೆ	ಹೊಲಿಗೆ. ತ್ಯಾಪೆ
ಅಬ್ಬೆ	ತಾಯಿ
ಅಮಗ	ಅನುಕೂಲ ಕಾಲ, ಹಬ್ಬದ ದಿನ
ಅಮೇಧ್ಯ	ಹೇಸಿಗೆ
ಅರಣೆ	ಓತಿಕ್ಯಾತ
ಅರಿವೆ	ಬಟ್ಟೆ
ಅರ್ತಿ	ಪ್ರೀತಿ, ಆಸೆ
ಅಪುಟು	ಸಣ್ಣ ಪಿರಂಗಿ
ಅಸಡ್ಡಾಳು	ತಿರಸ್ಕಾರ, ಕ್ಷುದ್ರ, ನಿಕೃಷ್ಟ
ಅಹಿ	ಸರ್ಪ
ಅಳಿಗೆ	ನೀರಿಡುವ ಮಣ್ಣಿನ ದೊಡ್ಡ ಸಾಧನ
ಅಳೆ	ಮಜ್ಜಿಗೆ
ಅಂಕಣ	ಎರಡು ಕಂಬಗಳ ನಡುವಣ ಜಾಗ
ಅಂಗಲವಾಗಿ	ತೆಳುವಾಗಿ, ವಿರಳವಾಗಿ
ಅಂಡೆ	ನೀರನ್ನು ತುಂಬಲು ಉಪಯೋಗಿಸುವ ದೊಡ್ಡ ಸಾಧನ
ಅಂತಕ	ಯಮ
ಅಂಬು	ಬಾಣ
ಆಕಳು	ಹಸು
ಆಗಾತ್ಯಗಾರ	ಆತ್ಮಹತ್ಯ ಮಾಡಿಕೊಳ್ಳುತ್ತೇನೆ ಎಂದು ಹೆದರಿಸುವವ
ಆಟಾಳು	ಆಳಿನ ಆಳು
ಆಣೆಕಾರ	ಮೊಳೆ ಮಾಡುವವನು
ಆರಂಭ	ವ್ಯವಸಾಯ
ಆರು	ತಣ್ಣಗಾಗು, ಒಣಗು
ಆರುಗಾಲ	ಆರುಋತುಮಾನಗಳು, ಯಾವಾಗಲು
ಆಲೆ	ಕಬ್ಬಿನಗಾಣ
ಆವಿಗೆ	ಮಡಕೆಗಳನ್ನು ಬೇಯಿಸಲು ಕುಂಬಾರ ಮಾಡಿಕೊಂಡಿರುವ ಬೆಂಕಿಗೂಡು

ಇಕ್ಕು	ಒಡಿಸು
ಇಡು	ಹೊಡೆ
ಇಪ್ಪಣ	೯ ಆಣೆ ಮತ್ತು ೪ ಪೈಸೆ
ಇಬ್ಬಾಯಿ	ಎರಡೂ ಬಾಯಿ, ಮಾತಿಗೆ ತಪ್ಪುವವ
ಇರವಾರ	ಎರಡು ಪಟ್ಟು ಹೆಚ್ಚಾಗಿ
ಇಂಬು	ಆಶ್ರಯ
ಈಟು	ಇಷ್ಟು, ಸ್ವಲ್ಪ
ಈಡು	ಸಮಾನ, ಶಕ್ತ, ಐಶ್ವರ್ಯವಂತ ಜೋಡಿ
ಈಸೀಸು	ಇಷ್ಟಿಷ್ಟು
ಉಕ್ಕೆ	ಉಳುವುದು, ನೇಗಿಲಿನಿಂದ ಭೂಮಿಯನ್ನು ಹದಮಾಡುವುದು
ಉಡಿ	ಮೊಳಕೆ, ನಡು, ಸೊಂಟ
ಉಡಿಕೆ (ಕಿ)	ಕೂಡಿಗೆ-ಮರುಮದುವೆ
ಉದ್ದುರುಟುತನ	ಒರಟುತನ
ಉಪದ್ರ	ತೊಂದರೆ
ಉಪ್ಪಾರ	ಉಪ್ಪು ಮಾಡತಕ್ಕವ, ಒಂದು ಜಾತಿ
ಉಮ್ಮಿ	ಉಬ್ಬಲು, ಭತ್ತ, ರಾಗಿ ಮುಂತಾದವುಗಳ ಹೊಟ್ಟು
ಉರುಟು	ವೃತ್ತಾಕಾರ
ಉಳಿ	ಮರ, ಕಟ್ಟಿಗೆಗಳನ್ನು ಕೆತ್ತಲು ಉಪಯೋಗಿಸುವ ಸಾಧನ
ಉಳ್ಳಿ	ಈರುಳ್ಳಿ
ಊಚ	ಉಚ್ಚ, ಬೆಲೆಯುಳ್ಳ
ಊಡಕ	ಕಿವುಡ, ಉಂಡಾಡಿಗ
ಊಣೆಯ	ನ್ಯೂನತೆ, ಕೊರತೆ
ಊಬು	ಮುಳ್ಳಿರುವ ಹುಲ್ಲು
ಉರ್ವಿಕರು	ಹಳ್ಳಿಯ ಜನರು
ಎಡವಟ್ಟು	ಹೆಡ್ಡತನ, ಮೂರ್ಖತನ
ಎಡೆ	ಊಟ, ನೈವೇದ್ಯ
ಎದೆಗುದಿ	ತಳಮಳ, ವ್ಯಥೆ
ಎರವು	ಕೈಗಡ, ಸಾಲ
ಎರೆ	ದಾನಮಾಡು
ಎಲು	ಎಲುಬು, ಮೂಳೆ
ಎಸರು	ಸಾರು
ಎಂಜಲು	ಊಟಮಾಡಿದ ಜಾಗ, ಮುಸರೆ
ಒಕ್ಕಲು	ಕುಟುಂಬ, ಕುಳ
ಒಕ್ಕಳ	ಅಳೆಯುವ ಸಾಧನ, ೧೦ ಸೇರು
ಒಡ್ಡಂತಿ	ವರ್ಧಂತಿ
ಒದಗು	ಜೋರಾಗಿಬಿಡು
ಒನಕೆ	ಕುಟ್ಟುವ ಸಾಧನ
ಒಮ್ಮಾನ	ಒಂದು ಮಾನ ೧/೨ ಸೇರು

ಒಮ್ಮಾರು	ಒಂದು ಮಾರು, ಎರಡು ಬೊಗಸೆ ಹಿಡಿಯುವಷ್ಟು ಅಳತೆ
ಒಲಪುಗಾತಿ	ವಯ್ಯಾರಿ, ಬೆಡಗಿ
ಒಲ್ಲಿ	ಹೊದಪು
ಒಂಟಿ	ಗಂಡಸರು ಕಿವಿಗೆ ಧರಿಸುವ ಚಿನ್ನದ ಆಭರಣ
ಓಟೆ	ಚಿಪ್ಪು, ಕಾಯಿಯ ಹೊರಭಾಗ, ಪೊಟೆ ಹಳ್ಳ
ಕಕ್ಕುಲತೆ	ಚಿಂತೆ
ಕಟಿ	ನಡು, ಸೊಂಟ
ಕಟ್ಟಣ	ಮನೆ
ಕಡ	ಸಾಲ
ಕಡಗು	ಬಾಳೆಗಿಡಕ್ಕೆ ಮಾಡಿದ ಸಣ್ಣ ಕಾಲುವೆ
ಕಡಾಸು	ಚರ್ಮ (ತೊದಲು)
ಕಡು	ಹೆಚ್ಚಾದ
ಕಡುನಾಲಗೆ	ಯಾವಾಗಲೂ ಮಾತಾಡುತ್ತಾ ಇರುವುದು
ಕಣಿಕಾ	ಗೋಧಿ ಹಿಟ್ಟು
ಕತಿ	ಅತಿ ಕೋಪ
ಕದನ್ನ	ಕೆಟ್ಟ ಅನ್ನ
ಕಬ್ಬಲಿಗ	ಬೆಸ್ತ
ಕರಡ	ಒಣಗಿದ ಹುಲ್ಲು
ಕರುಬು	ಅಸೂಯೆ
ಕಲಿಕಾಲ	ಎಲ್ಲಾ ಕಾಲ
ಕಲಕು	ಕದಡು
ಕವುದಿ	ಚಿಂದಿ ಬಟ್ಟೆಯಿಂದ ಮಾಡಿದ ಹೊದಿಕೆ
ಕಸ್ತಿ	ಜಗಳ, ಗಲಾಟೆ, ರಕ್ಷಣೆ
ಕಾಕು	ಕೊಂಕುಮಾತು, ವಕ್ರ
ಕಾಟಿನಾಯಕ	ಕಾಡಿನ ಮನುಷ್ಯ
ಕಾವಲಿ	ಕಾಲುವೆ, ದೋಸೆಯ ಕಲ್ಲು
ಕಾವು	ಕೊಡಲಿ, ಗುದ್ದಲಿಗಳನ್ನು ಹಿಡಿಯಲಿಕ್ಕೆ ಉಪಯೋಗಿಸುವ ಸಾಧನ
ಕಾಸ್ವಾರ	ಕುದುರೆಯಚಾಕರ
ಕಿಟ್ಟಿ	ಗಜ್ಜುಗ
ಕಿಲುಬು	ಕೊಳೆ
ಕಿಸವಾಯಿ	ತೆರೆದಬಾಯಿ
ಕಿಸೆ	ಜೇಬು
ಕುಕ್ಕುಟ	ಕೋಳಿ
ಕುಕ್ಕೆ	ಬಿದಿರಿನ ಪುಟ್ಟಿ
ಕುಡಿ	ಬಳ್ಳಿಯ ತುದಿ
ಕುಣಿ	ಗುಳಿ
ಕುತ್ತರಿ	ಮೆದೆ
ಕುಬ್ಬಾಟ	ಗರ್ವಭರಿತ, ಜಂಬ

ಕುರಂಗ	ಜಿಂಕೆ
ಕುರುಬು	ಮಂಟಪ
ಕುರು	ಕೀವು ತುಂಬಿದ ಸಣ್ಣ ಗುಳ್ಳೆ
ಕುಲಾಪಿ (ಇ)	ಟೋಪಿ
ಕುಳವಾರು	ಒಕ್ಕಲು, ಒಕ್ಕಲಿಗರ ಸಮೂಹ
ಕೂಗಡೆ	ಹುಣ್ಣು ಕಿವಿಯಲ್ಲಿ ಗುಗ್ಗೆಯಿಂದ ಆಗಬಹುದಾದ ಹುಣ್ಣು
ಕೂಚು	ತೊಲೆಗೆ ಆಧಾರವಾದ ಗೋಡೆಯ ಮೇಲಿನ ಕಂಬ
ಕೂಡಿಕೆ	ಮರು ಮದುವೆ
ಕೂಳು	ಅನ್ನ
ಕೆತ್ತ	ಚಕ್ಕೆ, ಚೂರು
ಕೆಪ್ಪೆ	ಸಿಪ್ಪೆ
ಕೆರಾ	ಚಪ್ಪಲಿ
ಕೊಗ್ಗಿಡಿ	ಮುಳ್ಳಿರುವ ಕುರುಚಲ ಗಿಡ
ಕೊಟ್ಟಣೆ	ಭತ್ತವನ್ನು ಒನಕೆಯಿಂದ ಕುಟ್ಟುವುದು
ಕೊಡತಿ	ಕೃಷಿ ಉಪಕರಣಗಳನ್ನು ತಯಾರಿಸುವಾಗ ಬಡಿಗ ಉಪಯೋಗಿಸುವ ಸಾಧನ
ಕೊಮ್ಮೆ	ಭತ್ತವನ್ನು ತುಂಬುವ ಬಿದಿರಿನ ಸಾಧನ
ಕೊಳಕೆ	ಕೆರೆಯಲ್ಲಿ ಬೆಳೆದ ವಿಷಪೂರಿತ ಮುಳ್ಳಿನ ಗಿಡ, ಭತ್ತದ ಮೂರನೇ ಬೆಳೆ
ಕೊಳಗ	ಅಳೆಯುವ ಸಾಧನ (೧೦ ಸೇರು)
ಕೊಳ್ಳಿ	ಬೆಂಕಿ ಹೊತ್ತಿಸಿದ ಸೌದೆ ತುಂಡು
ಕೋಸರು	ಹೆಚ್ಚಿಗೆ ಕೇಳುವುದು
ಕೋಲ	ಬಟ್ಟೆ ಬರೆ, ಸಿಂಗಾರ
ಕಂಗು	ಕುಗ್ಗು
ಕುಂಟಣಗಿತ್ತಿ	ವ್ಯಭಿಚಾರಕ್ಕೆ ಹೆಣ್ಣು ಗಂಡುಗಳನ್ನು ಕೂಡಿಸುವವಳು
ಕುಂಬು	ಬಾಗು, ನಮಸ್ಕರಿಸು
ಕೊಂಪೆ	ಸಣ್ಣ ಹಳ್ಳಿ
ಗಂಗರ	ಗಗ್ಗರ, ಗೆಜ್ಜೆ
ಗಂಗಳ	ಊಟದ ತಟ್ಟೆ
ಗಂಜೀಪು	ಇಸ್ಪೀಟು
ಗಂಡಿಗೆ	ಮಡಕೆ
ಗಣೆ	ಗಳ
ಗದ್ಯಾಣ	ಚಿನ್ನದ ಒಂದು ನಾಣ್ಯ
ಗನ್ನ	ಮೋಸ, ಬಹಳ
ಗಭಸ್ತಿ	ಕಾಂತಿ
ಗವಸಣಿಗೆ	ಹೊದಿಕೆ, ಮುಸುಕು
ಗವುಜಿ	ಗದ್ದಲ, ಗಲಾಟೆ
ಗವುಳಿ	ಹಲ್ಲಿ
ಗವ್ಯ	ಹೈನು
ಗಸಣೆ	ತೊಂದರೆ
ಗಸಿ	ಎಣ್ಣೆ ಅಥವಾ ಬೆಣ್ಣೆಯ ಉಳಿದ ಚರಟ

ಗುಂಗುರು	ಸೊಳ್ಳೆಯಂತಿರುವ ಪ್ರಾಣಿ
ಗುಂಜಿ	ಒಂದು ಕಾಳಿನ ತೂಕ
ಗುಗ್ಗರಿ	ಧಾನ್ಯಗಳನ್ನು ಉರಿದು ಮಾಡಿದ ತಿಂಡಿ
ಗುಡಾಣ	ಮಣ್ಣಿನ ದೊಡ್ಡ ಸಾಧನ (ಪದಾರ್ಥಗಳನ್ನು ತುಂಬಲು)
ಗುಡಿಕಾರ	ಬಣ್ಣಗಾರ, ಚಿತ್ರಗಾರ
ಗುದಿಗೆ	ದಡಿ, ಬಡಿಗೆ
ಗುಮಾನ	ರಹಸ್ಯ, ಸಂಶಯ
ಗುಮ್ಮಗಟ್ಟು	ಸಂದಣಿಯಲ್ಲಿ ಸೇರುವುದು
ಗುಲ್ಲು	ಗುಲಾಟಿ
ಗೆರಸೆ	ಮೊರ
ಗೊಂಗಡಿ	ಕಂಬಳಿ
ಗೊಂಡೆ	ಹೂವಿನ ಬಟ್ಟೆಯ ಕುಚ್ಚು
ಗೊಟ್ಟ	ಕೆರೆ ಬತ್ತಿದ ಕೆರೆ
ಗೊಟ್ಟು	ದುರ್ಲಭ
ಗೊಡವೆ	ಸಂಬಂಧ ಸಂಪರ್ಕ
ಗೊಡ್ಡು	ಬಂಜೆ
ಗೊಬ್ಬು	ಗಬ್ಬು, ಹೊಲಸು
ಗೊರೆ	ಗೊರಕೆ
ಗೋಮು	ಸಾವಿರ ಕಾಲು (ಜರಿ)ಸೂತಕ
ಚಟ್ಟು	ಹೆಣ ತೆಗೆದುಕೊಂಡು ಹೋಗಲು ಕಟ್ಟುವ ಸಾಧನ

ಚಟ್ಟಿ	ಆರನೆಯ ದಿನ, ಷಷ್ಠಿ
ಚಾರಕ	ಸೇವಕ
ಚಾಕ್ರಿ	ಕೆಲಸ
ಚಾಳಿ	ನಡತೆ, ಅಭ್ಯಾಸ
ಚಿಂದಿ	ಹರಿದ ಜೂಲು ಜೂಲಾದ ಬಟ್ಟೆ
ಚೀಲಿ	ಚಿಕ್ಕ
ಚುಂಗಡಿ	ಚಿಲ್ಲರೆ
ಚೆಂಗಾಟ	ಚೆಲ್ಲಾಟ
ಜಂಬರ	ಕೆಲಸ
ಜತನ	ಯತ್ನ, ಎಚ್ಚರಿಕೆ
ಜರೆ	ಮುಪ್ಪು, ಸೊರಗು
ಜಲ್ಲು	ದೋಣಿಯ ಕಂಬ
ಜಾಡಗಿತ್ತಿ	ನೇಕಾರನ ಹೆಂಡತಿ
ಜಾಲಿಸು	ನೀರಲ್ಲಿ ಅದ್ದಿ ತೊಳೆ
ಜಿನ್ನದೇವ	ಜಿನದೇವ
ಜೀತಗಾರ	ಗುಲಾಮ, ಕೂಲಿ ಮಾಡುವವ
ಜೀನ	ಲೋಭಿ
ಜೀನಸು	ಜಿನಸು ತಿನಸು-ತಿಂಡಿ
ಜುಗಾರು	ಜೂಜು
ಜುಣುಗು	ಒಂದು ಬಗೆಯ ನಾಯಿ
ಜೂತಿ	ಚಪ್ಪಲಿ

ಜೊಂಡು	ಕೆರೆಯ ಶೀತ ಪ್ರದೇಶದಲ್ಲಿ ಬೆಳೆಯುವ ಒಂದು ತರದ ಹುಲ್ಲು
ಜೋಡು	ಸಮ, ಜೊತೆ, ಚಪ್ಪಲಿ
ಜೋಲಿಗಾರ	ಕಾಲಕಳೆಯುವವ, ತಿರುಗಾಡುವವ
ಟಂಕು	ಕುದುರೆ ಜೀನನ್ನು ಭದ್ರಪಡಿಸಲು ಅದರ ದೇಹದ ಸುತ್ತಲು ಬಿಗಿಯುವ ಚರ್ಮದ ಅಥವಾ ಬಟ್ಟೆಯ ಪಟ್ಟಿ
ಟವಳಿಗಾರ	ಠಕ್ಕ, ಮೋಸಗಾರ
ಟಿಕಾಣಿ	ಜಾಗ, ಸ್ಥಳ
ಟೊಣಪೆ	ದೊಣ್ಣೆ
ಟೊಣೆ	ಮೋಸ, ಕದಿ, ವಂಚಿಸು
ಟೊಣ್ಣೆ	ದಪ್ಪನೆಯ ಒರಟು ಹೆಂಗಸು
ತಂಗಳು	ಹಳಸಿದ ಅನ್ನ
ತಂಟೆ	ಜಗಳ
ತಂಡುಲ	ಅಕ್ಕಿ
ತಂಬಟೆ	ತಮ್ಮಟೆ ವಾದ್ಯ ವಿಶೇಷ
ತಂಬು	ಡೇರೆ
ತಕ್ಯ	ದಿಂಬು, ಮೆತ್ತನೆ
ತಕ್ರ	ಮಜ್ಜಿಗೆ
ತಗಡು	ಲೋಹ (ತಾಮ್ರ)
ತಗಲುಗಾರ	ಅಪ್ರಾಮಾಣಿಕ ಮನುಷ್ಯ
ತಟಕು	ತೊಟ್ಟು, ಸ್ವಲ್ಪ, ಹನಿ

ತಟಾಯಿಸು	ಪಾರಾಗಿ ಹೋಗು
ತಡೇಕಟ್ಟುವವ	ಅಡ್ಡಿ ಮಾಡುವವ, ಯಂತ್ರ ಮಂತ್ರ ಮಾಡುವವ
ತತ್ರಬಿತ್ರಿ	ತಂತ್ರಗಾರ, ಗಾರುಡಿಗ
ತತ್ವಾರ	ಕೊರತೆ
ತಪ್ಪನೆ	ತಕ್ಷಣ, ಕೂಡಲೆ
ತಘಾವತುಗಾರ	ಹಣವನ್ನು ತಿಂದುಹಾಕುವವ
ತಬಕು	ಎಲೆ ಅಡಿಕೆ ತಟ್ಟೆ
ತಬರಿಸು	ಗಾಬರಿಯಾಗು, ಬೆರಗಾಗು
ತಮ್ಮಡಿ	ಪೂಜಾರಿ
ತರಹರಿಸು (ಕೆ)	ಸಮಾಧಾನ, ಸಹನೆ
ತರಗು	ಮರದಿಂದ ಬಿದ್ದ ಒಣ ಎಲೆಗಳು, ಕಸ
ತರುಬು	ಅಡ್ಡಕಟ್ಟು, ಹೊಡೆ
ತವುಡು	ಭತ್ತದ ಹೊಟ್ಟು
ತಳಿಗೆ	ತಣಿಗೆ ತಟ್ಟೆ
ತಳ್ಳಿ	ಜಾಡಿ, ಜಗಳ
ತಾಟುಗಾರ	ಗರ್ವದ ಮನುಷ್ಯ
ತಾಪೆ	ನರ್ತನ ಮೇಳ
ತಾರ	ಎರಡು ಕಾಸಿನ ತಾಮ್ರದ ನಾಣ್ಯ

ತಾಲಿ	ಮಾಂಗಲ್ಯ
ತಿರಿಕೆ	ಭಿಕ್ಷೆ
ತಿರಿಚು	ಸುತ್ತು, ಹೊರಳಿಸು
ತಿರುಗ	ಮತ್ತೆ
ತೀಟೆ	ಆಶೆ, ನವೆ
ತುಟಾರ	ಮಿತಿ ಮೀರಿದ, ವ್ಯರ್ಥ ವಾದ
ತುಟ್ಟಿ	ಬೆಲೆ ಏರಿಕೆ
ತುಪಟ	ಕುರಿಯ ಕೂದಲು, ಉಣ್ಣೆ
ತುಪಾನು	ಬಿರುಗಾಳಿ, ಅಪವಾದ
ತುರಂಗ	ಕುದುರೆ
ತುರಿ	ತೀಟೆ, ನವೆ
ತೂಬು	ಕೆರೆಯಿಂದ ನೀರು ಹೊರಗೆ ಹೋಗುವಂತೆ ಮಾಡಿರುವ ಜಾಗ
ತೂಳು	ಆವೇಶ
ತೆಕ್ಕೆ	ಜೋಡಿ, ಬಂಧಿಸು
ತೇಗು	ಢರಿಕೆ
ತೊಂಡೆ	ಕಬ್ಬಿನ ತುದಿಯಭಾಗ
ತೊಂಕು	ಸುತ್ತು, ಹತ್ತುವಿಕೆ
ತೊಗಲು	ಚರ್ಮ
ತೊಟ್ಟೆ	ತೆಂಗಿನ ಗರಿಯ ಬುಟ್ಟಿ
ತೊಪ್ಪೆ	ಸಗಣಿ
ತೊವ್ವೆ	ಬೇಳೆಕಾಳಿನ ಸಾರು
ತೋರ	ದಪ್ಪ
ತ್ಯಾಪೆ	ಹರಿದ ಬಟ್ಟೆಗಳನ್ನು ಸೇರಿಸಿ ಹೊಲಿಯುವುದು
ದಂಡಿಗೆ	ಪಲ್ಲಕ್ಕಿ
ದಗಡಿ	ದಾಂಡಿಗ, ದಡೂತಿ, ಆಸಾಮಿ
ದಗದ	ಕೆಲಸ
ದಟ್ಟಿ	ಸಣ್ಣ ಪಂಚೆ / ಸೀರೆ
ದಡಂಬಡಿಕೆ	ಉದ್ರೇಕ, ಜೋರು
ದಡಿ	ಕೋಲು, ಸೀರೆಯ ಒಂದು ಭಾಗ
ದಡೆ	೧೦ ಸೇರಿನ ತೂಕ
ದದ್ದು	ರೂಢಿಯಾಗಿರುವುದು, ಸೂಲು ಬಿಟ್ಟಿರುವುದು
ದವನ	ಸುವಾಸನೆಯ ಗಿಡ
ದವುತಿ	ಮಸಿ ಕುಡಿಕೆ
ದಾವಳಿ	ಉಣ್ಣೆವಸ್ತ್ರ
ದಾವಣಿ	ದನಗಳನ್ನು ಕಟ್ಟುವ ಜಾಗ
ದುಗ್ಗಾಣಿ	ಎರಡು ಕಾಸು
ದುಸ್ತು	ಬಟ್ಟೆ
ದುಹಿ	ದ್ವೇಷ, ದುಷ್ಟತನ

ದೆಪ್ಪೆ	ಬೊಂಬಿನ ಸಣ್ಣ ಸಣ್ಣ ಭಾಗಗಳು
ದೊಂದಿ	ಪಂಜು
ದೊಂಬಿ	ಜಗಳ
ದೊಡ್ಡಿ	ಒಕ್ಕಲು
ದೊಣೆ	ಕೊಳ
ದೋಮೆ	ಸೊಳ್ಳೆ
ದೋಳು	ಡೋಲು, ವಾದ್ಯ ವಿಶೇಷ
ದ್ರಾಬೆ	ಬುದ್ದಿಹೀನ, ಮೂರ್ಖ, ಹೆಡ್ಡ
ನಖ	ಉಗುರು
ನಗ	ಆಭರಣ
ನಡಾಂತರ	ಮಧ್ಯದಲ್ಲಿ
ನತ್ತಿ	ಅಸ್ಪಷ್ಟ, ತೊದಲು
ನತ್ತು	ಮೂಗಿನಲ್ಲಿ ಹಾಕಿಕೊಳ್ಳುವ ಒಡವೆ
ನಯನ	ಕಣ್ಣು
ನರಟುಗಾರ	ಗೊಣಗು ಮನುಷ್ಯ, ಅತೃಪ್ತ
ನರಡ	ಒರಟ
ನವೆ	ಸಣ್ಣಗಾಗು, ಸವೆ
ನಸೆ	ನಸ್ಯ, ಭೋಗಾಭಿಲಾಶೆ
ನಳಿಗೆ	ಕೊಳವೆ
ನಳ್ಳಿ	ಏಡಿ
ನಾಕ	ಸ್ವರ್ಗ
ನಾಗಳ	೪೦ ಸೇರು
ನಾಟಿರಾಗ	ಒಂದು ಬಗೆಯರಾಗ
ನಾದಿಗ	ಕ್ಷೌರಿಕ
ನಾದಿದ	ನೆನಸಿದ, ಲೇಪಿಸಿದ
ನಾಭಿ	ಹೊಕ್ಕಳು
ನಾರು	ಕೊಳಚೆ, ನಾರುಮಡಿ
ನಾಲೆ	ಕಾಲುವೆ
ನಾಳ	ಕೊಳವೆ
ನಿಗದಿ	ಸಂಬಳ
ನಿಚ್ಚಣಿಗೆ	ಏಣಿ
ನಿಯತ್ತು	ಸತ್ಯಬುದ್ದಿ
ನಿಲಬಾಕಿ	ನಿಂತಹಣ
ನಿವಾಳಿ	ದೃಷ್ಟಿದೋಷದ ಆರತಿ
ನಿಸ್ತೂಕ	ನಿಶ್ಯಕ್ತ, ತೂಕವಿಲ್ಲದ, ಹಗುರ
ನೀಗು	ಬಿಡು
ನೀಳ	ಉದ್ದ
ನುಚ್ಚು	ಚೂರಾದ ಅಕ್ಕಿ
ನುರಿ	ತೆಯ್ಯಿ, ಸಣ್ಣಚೂರು ಮಾಡು
ನುಸಿ	ನುಸುಳು, ಹೊರಡು

ನೆಗಳು	ಮೊಸಳೆ
ನೆಗ್ಗು	ನಾಶಮಾಡು
ನೆನೆ	ಒದ್ದೆಯಾದ, ತೇವವಾದ
ನೆಲು	ಮೊಸರು, ಹಾಲುಗಳನ್ನಿಡಲು ಮೇಲ್ಭಾವಣಿಗೆ ಕಟ್ಟಿ ನೇತು ಹಾಕಿರುವ ಹಗ್ಗದ ಸಾಧನ
ನೆಲ್ಲು	ಭತ್ತ
ನೆವರು	ಜಾರು
ನೆಸ್ವಾಟ	ಕೋಪದಿಂದ ನೆಗೆದುಕೊಂಡು ಹೋಗುವಿಕೆ
ನೇವಳ	ಹಾರ
ನೊಗ	ಉಳುವಾಗ ಎತ್ತುಗಳ ಕೊರಳಿಗೆ ಕಟ್ಟುವ ಮರದ ಸಾಧನ
ನೊರಜು	ಸೊಳ್ಳೆ
ನೊಸಲು	ಹಣೆ
ನೋತ	ನೋವು
ಪಂಗು	ಹೆಳವ, ಕುಂಟ, ಶನೀಶ್ವರ
ಪಂತ	ಪಂದ್ಯ, ಹಟ
ಪಕಾಲಿ	ನೀರುತರುವ ಚರ್ಮದ ಚೀಲ

ಪಗಡಿ	ರುಮಾಲು
ಪಗದಿ	ತೆರಿಗೆ, ಕಪ್ಪ, ಕಾಣಿಕೆ
ಪಚ್ಚು	ಪೆಚ್ಚು, ದಡ್ಡತನ, ತಬ್ಬಿಬ್ಬು
ಪಟ್ಬಾಂಗ	ಸೋಮಾರಿ ಮಾತು
ಪಟ್ಟಿ	ಸಂಬಳ, ಎಲೆ ಅಡಿಕೆ ಕೂಡಿಸಿ ಕಟ್ಟಿದುದು (ಪಾನಪಟ್ಟಿ)
ಪಟ್ಟೆ	ರೇಶ್ಮೆ
ಪಡಪೋಸಿ	ಎಚ್ಚರವಿಲ್ಲದವ, ದಡ್ಡ
ಪಡಿ	ಹಬ್ಬ, ಮದುವೆ ಮುಂತಾದವುಗಳಲ್ಲಿ ಊಟ ಮಾಡದೆ ಇರುವವರಿಗೆ ಭತ್ಯ ಕೊಡುವುದು, ಒಂದು ಅಳತೆ
ಪತ್ರಾವಳಿ	ಊಟದ ಎಲೆ
ಪನ್ನಿ	ಹೆಮ್ಮೆ, ಜಂಭ
ಪರಡು	ಕೈಯಿಂದ ತಡವರಿಸಿ ಹುಡುಕಾಡು
ಪರಡಿ	ಶಾವಿಗೆತಿಂಡಿ
ಪರತರ	ಶ್ರೇಷ್ಠ, ಉತ್ತಮ
ಪರಸು	ಗಂಡುಕೊಡಲಿ
ಪರಾತ	ತಟ್ಟೆ

ಪಳ್ಳಿ	ಒಂದು ರೀತಿಯ ಆಟ
ಪಾಗು	ಒಂದು ರೀತಿಯ ಟೋಪಿ
ಪಾಣಿ	ಕೈ, ಕ್ರಮ
ಪಾದ್ಯ	ಕಾಲಿಗೆ ಕೊಡುವ ನೀರು
ಪಾಪೋಸು	ಚಪ್ಪಲಿ
ಪಾಲಿ	ಕಾವಲು, ಅಳತೆ
ಪಾವಳಿ	ನಾಲ್ಕಾಣೆ
ಪಿಂಡಾರಿ	ದರೋಡೆ ಕೋರ
ಪಿಪೀಲಿಕೆ	ಇರುವೆ
ಪಿಸುರು	ಸೊಕ್ಕು
ಪಿಸುಣ	ಚಾಡಿಕೋರ
ಪುಕ್ಕ	ಪುಕ್ಕಲು, ಹೆದರಿಕೆ
ಪುಟಗೋಸಿ	ಕ್ಷುಲ್ಲಕ
ಪುಣುಗು	ಸುಗಂಧ ದ್ರವ್ಯ
ಪೆಗ್ಗ	ದಡ್ಡ, ಮೂರ್ಖ
ಪೇಚು	ತೊಂದರೆ, ಸಂದಿಗ್ಧತೆ
ಪೈತ್ಯ	ಪಿತ್ತ
ಪೈಸಲು	ತೀರ್ಮಾನ
ಪೊಡವಿ	ಭೂಮಿ
ಪೋಕ	ಪೋಲಿ, ಉಂಡಾಡಿ ಅಪ್ರಯೋಜಕ ಮನುಷ್ಯ
ಪೋಟೆ	ಗುಳಿ, ಹಳ್ಳ
ಪೋರ	ಹುಡುಗ

ಫೌಜು	ಸೈನ್ಯ
ಬಂಡ	ದ್ರವ್ಯ ವಸ್ತು
ಬಂಡಾರಿಸು	ಕೆಲಸಕ್ಕೆ ಬಾರದಾಗು
ಬಕ್ಕರೆ	ಮಡಕೆಯ ಚೂರು
ಬಗದಾಳ	(ಕೆಲವು ಸಂಗ್ರಹಿತ)ಶ್ಲೋಕಗಳು
ಬಗಲು	ಪಕ್ಕ, ಕಂಕುಳು
ಬಚ್ಚು	ಬಡಕಲು
ಬಡಾಯಿ	ಜಂಭ, ವೈಯಾರ
ಬಡಿವಾರ	ಬೆಡಗು, ಒಣಹೆಮ್ಮೆ
ಬಡ್ಡು ದಡ್ಡ,	ನಿಷ್ಪ್ರಯೋಜಕ ಮನುಷ್ಯ
ಬತ್ತೇರಿ	ಕೋಟೆಯ ಮೇಲೆ ತೋಪು ಇಡುವ ಜಾಗ
ಬಯಲ್ಕಡೆ	ಕಕ್ಕಸ್ಸಿಗೆ ಹೋಗುವುದು
ಬಯ್ರಿಗೆ	ರಂಧ್ರಮಾಡಲು ಉಪಯೋಗಿಸುವ ಅಕ್ಕಸಾಲಿಗನ ಸಾಧನ
ಬರಡು	ಬಂಜೆ
ಬರಗು	ಒಂದು ಬಗೆಯ ಧಾನ್ಯ
ಬವರ	ಯುದ್ಧ, ಜಗಳ
ಬಸೆ	ನೆಣ (ಕೊಬ್ಬು)
ಬಳ್ಳ	ಒಂದು ಅಳತೆ ಕೊಳಗದ ೧/೪ ಭಾಗ

ಬಾಚಿ	ಬಡಿಗ, ಅಕ್ಕಸಾಲಿಗರ ಕೆತ್ತುವ ಸಾಧನ
ಬಾಣಸಿಗ	ಅಡಿಗೆ ಮಾಡುವವ
ಬಾದಿ	ಸಹಾಯಕ, ಇಷ್ಟರು
ಬಾರು	ಚರ್ಮದದಾರ (ಪಟ್ಟಿ)
ಬಾವು	ಊದಿಕೊಳ್ಳುವ ರೋಗ
ಬಿಸಾಟ	ನಿರ್ಲಕ್ಷ್ಯ
ಬುಗಡಿ	(ಮುತ್ತೈದೆಯ) ಕಿವಿಯ ಆಭರಣ
ಬುರುಜು	ಕೋಟೆಯ ಮೇಲಿನ ಅಟ್ಟಣೆ
ಬೂಟಕ	ಮೋಸಗಾರ
ಬೆಣೆ	ಮರದ ಸಣ್ಣಗೂಟ
ಬೆನಕ	ಗಣೇಶ
ಬೆಸನ	ಹೆರಿಗೆ
ಬೊಂದಿ	ಶರೀರ
ಬೊಕ್ಕ	ಹಲ್ಲಿಲ್ಲದವ
ಬೊಕ್ಕೆ	ಗುಳ್ಳೆ, ಮೊಡವೆ
ಬೊಟ್ಟು	ತೊಟ್ಟು, ಹನಿ
ಬೊಡ್ಡು	ಮೊಂಡು
ಬೊಬ್ಬೆ	ಆರ್ಭಟ
ಬೋಕಿ	ಒಡಕು ಪಾತ್ರೆಯ ಬಕ್ಕರಿ
ಬೋಣಿ	ಮೊದಲ ಮಾರುವಿಕೆ
ಬೋಡು	ಹಲ್ಲಿಲ್ಲದವ

ಬೋನ	ಅನ್ನ
ಭಗಂದರ	ಆಸನದ ವ್ರಣ
ಭಾಂಡ	ಕೊಡ, ಪಾತ್ರೆ
ಭುಕ್ತಿ	ಊಟ
ಭೂರಿ	ಅಪಾರ, ಬಹಳ
ಭೋಪ	ಗೌರವ
ಮಂಕ್ರಿ	ಕಸ ತುಂಬಲು ಬಳಸುವ ಈಚಲು ಕಡ್ಡಿಯಿಂದ ಮಾಡಿದ ಬುಟ್ಟಿ
ಮಂಜಿ	ದೊಡ್ಡ ದೋಣಿ
ಮಂಡಿಗೆ	ಸಿಹಿತಿಂಡಿ
ಮಂತಾನಸ್ಥ	ಗೃಹಸ್ಥ, ಗೌರವ ವ್ಯಕ್ತಿ
ಮಕರ	ಮೊಸಳೆ
ಮಜ್ಜನ	ಸ್ನಾನ
ಮುಟ್ಟು	ಇಳಿಮುಖಿ, ಮಂದ, ಯೋಗ್ಯತೆ, ಹಾಡು
ಮಟ್ಟಿ	ಮಣ್ಣು (ಭೂಮಿ)
ಮಡಲು	ಹೆಂಗಸರು ಹೊಟ್ಟೆಯ ಹತ್ತಿರ ಕಟ್ಟಿಕೊಳ್ಳುವ ಸೀರೆಯ ಪದರು
ಮಡ್ಡ	ಬೆಪ್ಪ, ಹಠವಾದಿ
ಮಡ್ಡಿ	ಕಲ್ಲುಭೂಮಿ
ಮಣಗು	ಬಾಗು, ಸೌಮ್ಯ

ಮಣಿಗಾರ — ಮಣಿಗಳನ್ನು ಮಾರುವವ

ಮದ್ದು — ಔಷಧಿ

ಮಹಿ — ಭೂಮಿ

ಮಾಣಿ — ಹುಡುಗ

ಮಾನ — ಅಳತೆಯ ಸಾಧನ ಮರ್ಯಾದೆ

ಮಾಯಿ — ಹೆಣ್ಣು

ಮಾರಣ — ವಿಘ್ನ

ಮಿಂಚು — ಒಂದು ಒಡವೆ

ಮೀಟಾದ — ಉದ್ದವಾದ, ದೊಡ್ಡ

ಮೀಣ — ಸ್ನಾನ

ಮುಂಡಾಸು — ರುಮಾಲು

ಮುಕ್ಕು — ಬಾಯಿ ತುಂಬ ಏನನ್ನಾದರೂ ಎಸೆದುಕೊಳ್ಳು, ಒಡೆದು ಹೋಗಿರುವ

ಮುಪ್ಪಾಗ — ಹಳೆಯಕಾಲದ ಒಂದು ಅಳತೆ

ಮುರವ — ತಿರುಕ

ಮುರವು — ಕಿವಿಯ ಆಭರಣ

ಮುರುಕು — ಬೆಡಗು, ಕೊಂಕು

ಮುಸರೆ — ಪಾತ್ರೆಗಳಲ್ಲಿ ಉಳಿದ ಚರಟ

ಮೂಗಳ — ೩೦ ಸೇರು

ಮೂಡೆ — ಕಾಳುಕಡ್ಡಿಗಳನ್ನು ಕಟ್ಟಲು ಉಪಯೋಗಿಸುವ ಸಾಧನ

ಮೂಲ — ಆರಂಭ ವ್ಯವಸಾಯ

ಮೆಟ್ಟು — ಚಪ್ಪಲಿ

ಮೆದೆ — ಹುಲ್ಲಿನಗುಪ್ಪೆ

ಮೆಳ್ಳ — ಮಾಲುಗಣ್ಣುಳ್ಳವ

ಮೇಟಿ — ಕಣದ ಮಧ್ಯದಲ್ಲಿ ನೆಡುವ ಮರದ ಕಂಬ

ಮೊಂಡ — ಹರಿತವಿಲ್ಲದ, ಒರಟ

ಮೊಗಚು — ಬದಲಿಸು, ಅಡಿಮೇಲಾಗಿಡು

ಮೊಗೆ — ಮಣ್ಣಿನ ಚಿಕ್ಕಪಾತ್ರೆ

ಮೊರ — ಕಾಳುಕಡಿಗಳನ್ನು ಕೇರುವ ಸಾಧನ

ಮೋಚ — ಮೋಕ್ಷ, ಬಿಡುಗಡೆ

ಮೋಚ್ಚೆ — ಚಪ್ಪಲಿ

ಮೋಟು — ತುಂಡು, ಮೇದು ಉಳಿದುಕೊಂಡ ಭಾಗ

ಮೋಳ — ಕೆಟ್ಟ, ಮೂರ್ಖ

ರಾತೀಬು — ದಿನಕ್ಕೆ ಬೇಕಾದ ಆಹಾರ

ರುಪ್ಪಿ — ಕಾಸು

ರೇಣು — ಧೂಳು

ರೊಕ್ಕ	ಹಣ
ಲಡಾಯಿ	ಜಗಳ
ಲತ್ತೆ	ಒದೆತ
ಲಲಾಟ	ಹಣೆ
ಲಾಟು	ಬಹಳ, ಅಪಾರ
ಲಾವಕತನ	ಕದಿವ ಕೆಲಸ
ಲಾಳಿ	ನೇಕಾರನ ಉಪಕರಣ
ಲೂತಿ	ಆಸನದ ಹುಣ್ಣು
ಲೆತ್ತ	ಜೂಜು
ಲೊಟ್ಟೆ	ಬಾಯಿಚಪ್ಪರಿಸು
ಲೊಲ್ಲಟ್ಟೆ	ಸಂಪೂರ್ಣ ಶೂನ್ಯ
ಲೋಗರು	ಜನರು
ವಮನ	ಶಾಂತಿ
ವರಾತ	ಒತ್ತಾಯ. ಬಲವಂತ
ವಸ್ತಿ	ಬಿಡಾರ
ವಾಯಸ	ಕಾಗೆ
ವಾರಿ	ಓರಿಗೆ, ಕ್ರಮ
ವಾಪಿ	ನಂಟು
ವಿದೂರ	ಶತ್ರುತ್ವ
ವಿತ್ತ	ಹಣ
ವೆಗ್ಗಳ	ಹೆಚ್ಚಳ, ಪ್ರಾಮುಖ್ಯತೆ

ವ್ರಣ	ಗಾಯ
ಶಕ್ರ	ಇಂದ್ರ
ಶಲಭ	ಮಿಡತೆ
ಶಾಮಿಲಾತು	ತನ್ನ ಜಮೀನಿಗೆ ಸೇರಿದ ಹಾಗಿರುವ ಭಾಗ
ಶುನಕ	ನಾಯಿ
ಶ್ವಾನ	ನಾಯಿ
ಸಂಕ	ಸೇತುವೆ
ಸಂಜಿ	ಎಲೆ ಅಡಿಕೆ ಚೀಲ
ಸಂದು	ಇಕ್ಕಟ್ಟಾದ ದಾರಿ, ಜಾಗ
ಸಂಪು	ತೃಪ್ತಿ
ಸಕಲಾತಿ	ಕೇಸರಿ ಬಣ್ಣದ ಉಣ್ಣೆಯ ಉಡುಪು
ಸಗಾಟ	ಒಳ್ಳೆಯ ಸ್ನೇಹ
ಸಣ್ಣೆ	ರೇಶಿಮೆ ವಸ್ತ್ರ
ಸತ್ತಿಗೆ	ಛತ್ರಿ
ಸದರು	ದಿವಾಖಾನೆ
ಸದೆ	ಕುದುರೆ ಮೇಲೆ ಹಾಕುವ ಅಡಿತಟ್ಟು
ಸಬಳ	ಈಟಿ
ಸರಿಗೆ	ಹೆಂಗಸಿನ ಕತ್ತಿನ ಸರ
ಸಹಪಿ	ಸುಮ್ಮನೆ, ಶಾಂತ
ಸಿಕಲಿಕಾರ	ಸಾಣೆ ಹಿಡಿಯುವವ
ಸಿಬ್ಬು	ಚರ್ಮರೋಗ
ಸೂಕರ	ಹಂದಿ

ಸೂಟಿ	ಪಂಜು
ಸೆರೇ	ಕೈತುಂಬ
ಸೆಳೆ	ಕೋಲು
ಸೇದು	ಎಳೆ, ಮೇಲಕ್ಕೆ ತೆಗೆ
ಸೊಲಗೆ	ಅಳೆಯುವ ಸಾಧನ
ಸೊಳ್ಳೆ	ಮೂಗಿನ ಎರಡು ಹೊಳ್ಳೆಗಳು
ಸೋನೆ	ತುಂತುರ
ಸೋವು	ಗುರುತು, ಚಿಹ್ನೆ
ಹಂತಿ	ಪಂತಿ, ಸಾಲು
ಹಕ್ಕಲು	ಫಸಲು ಕಟಾವಾದ ಮೇಲೆ ಬಿದ್ದ ತೆನೆಗಳು
ಹಗೇವು	ಧವಸ ಧಾನ್ಯಗಳನ್ನು ಹಾಕಲು ಭೂಮಿಯ ಒಳಗೆ ಮಾಡಿದ ಗುಳಿ
ಹಚ್ಚಡ	ಹೊದಪು, ಹಸಿರು
ಹಡಪ	ಸಣ್ಣ ಚೀಲ
ಹಡಿಕೆ	ಕೆಟ್ಟ ನಾತ
ಹಣಕು /ಕಿ	ಇಣಿಕಿನೋಡು
ಹಪ್ಪು	ಮಾಂಸದ ತುಂಡು
ಹಯನು	ಹಸು
ಹರವಿ	ದೊಡ್ಡ ಗಡಿಗೆ
ಹಲ	ನೇಗಿಲು
ಹಲವಂಗ	ಹಲವು ದಾರಿ /ರೀತಿ
ಹವನ	ಹೋಮ, ಯಜ್ಞ
ಹಳುವ	ಕಾಡು
ಹಾಗ	ರೀತಿ, ಎರಡು ಕಾಸು
ಹಾಳಿತ	ಅಳತೆ
ಹಿಂಡೆಕೂಳು	ಶಾದ್ವದ ಅನ್ನ
ಹಿಕಮತ್ತು	ಚತುರತೆ, ತಂತ್ರ
ಹುಗ್ಗಿ	ಒಂದು ಬಗೆಯ ಸಿಹಿ ಅಡುಗೆ
ಹೂಡೇವು	ಕೋಟೆ
ಹೆಕ್ಕು	ಆರಿಸಿತೆಗೆ
ಹೆಡಿಗೆ	ಬಿದಿರಿನ ದೊಡ್ಡ ಪುಟ್ಟಿ
ಹೆರೆ	ಹಾವಿನಪರೆ
ಹೇಮ	ಚಿನ್ನ, ಅಸಹ್ಯ, ಲಜ್ಜೆ
ಹೇರು	ಆರು ನೇಗಿಲಿಗೆ ಹೂಡಿದ ಎತ್ತುಗಳ ಜೋಡಿ
ಹೊಂಗರಕ	ಯಾವಾಗಲೂ ಹಸುರಾಗಿರುವ ಗಿಡ
ಹೊಂಬಾಳೆ	ಬಾಳೆಯ ಗಿಡದಲ್ಲಿ ಬಿಡುವ ಹೂವು
ಹೊಟ್ಟು	ಜೋಳ, ಭತ್ತದ ರಾಶಿಯಾದ ನಂತರ ಉಳಿಯುವ ಭಾಗ ಸಿಪ್ಪೆ
ಹೊಯಿಗೆ	ಮರಳು ಹೋಕು ಮಳುಕು, ದೋಷ, ಚೆನ್ನಾಗಿಲ್ಲದ
ಹೋಟೆ	ಪೊಟರೆ, ಮರದ ಪೊಟರೆ
ಹೋರೇವು	ಕೆಲಸ

ಮಿಶನರಿಗಳು ಭಾಷಾ ರೂಪಗಳ ಸೂಕ್ಷ್ಮ ನೆಲೆಗಳನ್ನು ಆಳವಾಗಿ ಗ್ರಹಿಸಿದ್ದಾರೆ: ಚಿಂತಿಸಿದ್ದಾರೆ. ಭಾಷೆಯಲ್ಲಿ ಸ್ಫೋಟಿಸಿ ಬೆಳಗಬೇಕಾಗುವ ಶಕ್ತಿ ಇದೆಯೆಂದು ಅವರು ಭಾವಿಸಿದ್ದರು. ಪ್ರಾದೇಶಿಕ ರೂಪಗಳು ಮತ್ತು ಅವುಗಳ ಸ್ವರೂಪವನ್ನು ತಮ್ಮದೇ ಆದ ಶೋಧನೆಯ ಪಥದಿಂದ ಕಂಡು ಹಿಡಿದಿದ್ದಾರೆ. ಕೋಶ ರಚನೆಯ ಹಿಂದೆ ಇಂಥದ್ದೊಂದು ಚಿಂತನೆ ಇದೆ. ಬಹುಶಃ ಸಮುದಾಯದಲ್ಲಿ ಈ ಬಗೆಯ ಆಲೋಚನೆ ಸಮೂಹ ಪ್ರಜ್ಞೆಯಲ್ಲಿ ಮೂಡಿ ಬಂದಿರಬೇಕು. ಈ ಸಮೂಹ ಪ್ರಜ್ಞೆಯ ಭಾಷಾ ವಿಷಯಕವಾದ ಚಿಂತನೆಗೆ ಮಿಶನರಿಗಳು ಸರಿಯಾಗಿ ಸ್ಪಂದಿಸಿದ್ದಾರೆ. ಅವರ ಕೋಶಗಳಲ್ಲಿರುವ ಪ್ರಾದೇಶಿಕ ರೂಪಗಳಿಂದ ಆ ಕಾಲ ಘಟ್ಟದ ಭಾಷೆ, ಸಮಾಜ, ಸಂಸ್ಕೃತಿ ಮುಂತಾದವುಗಳನ್ನು ಅರಿಯಲು ನೆರವಾಗುತ್ತದೆ.

೪.೦೮ ಸಂಕ್ಷೇಪಗಳು

ಪದ ಅಥವಾ ಪದ ಪುಂಜಗಳ ಸಾರಾಂಶವನ್ನು ಸಂಕುಚಿತವಾಗಿ ಬರೆಯುವುದೇ ಸಂಕ್ಷೇಪ ನಿರೂಪಣೆ ಅಥವಾ ಸಂಕ್ಷೇಪಿಸುವುದು. ಆದರೆ ಪದಗಳಲ್ಲಿಯ ಅಕ್ಷರಗಳನ್ನೆ ಹಾರಿಸಿ ಬಿಟ್ಟು ಸಂಕುಚಿತ ಮಾಡುವುದಲ್ಲ. ಕೊಟ್ಟ ಭಾಗದಲ್ಲಿರುವ ಎಲ್ಲ ಮುಖ್ಯಾಂಶಗಳಿಂದ ಕೂಡಿ ಸುಲಭವಾಗಿ ಅರ್ಥವಾಗುವಂತಿರುವುದು ಸಂಕ್ಷೇಪ ನಿರೂಪಣೆಯ ಲಕ್ಷಣ. 'ಬರವಣಿಗೆಯಲ್ಲಿ ಮತ್ತೆ ಮತ್ತೆ ಬಳಕೆಯಾಗುವ ಪದಗಳನ್ನು ಸಂಕ್ಷಿಪ್ತಗೊಳಿಸಿ ಬರೆಯುವುದು ವಾಡಿಕೆ. ಸಂಕ್ಷಿಪ್ತ ರೂಪಗಳು ಆಯಾ ಬಳಕೆಯ ಸಂದರ್ಭದಲ್ಲಿ ಚಾಲ್ತಿಗೆ ಬರಬಹುದು ಅಥವಾ ಎಲ್ಲರೂ ಒಪ್ಪಿ ಬಳಸುವಂಥದಾಗಿರಬಹುದು[೨] ಉದಾ- ನಮ್ಮ ಬರವಣಿಗೆಯಲ್ಲಿ 'ಕ್ರಿಯಾಪದರಚನೆ' ಎಂಬ ರೂಪ ಮತ್ತೆ ಮತ್ತೆ ಬಳಕೆಯಾಗುತ್ತಿದೆ ಎಂದು ಕೊಳ್ಳೋಣ. ಆ ರೂಪವನ್ನು ಅಷ್ಟು ಬಾರಿ ಬರೆಯುವ ಬದಲು ಮೊದಲ ಬಾರಿಗೆ ಬಳಸಿ ಕೂಡಲೇ ಅದರ ಸಂಕ್ಷಿಪ್ತ ರೂಪವನ್ನು ('ಕ್ರಿ. ಪರ') ಸೂಚಿಸಿ ಮುಂದೆ ಉದ್ದಕ್ಕೂ ಅದೇ ರೂಪವನ್ನು ಬಳಸುತ್ತಾ ಹೋಗಬಹುದು. ಈ ಸಂಕ್ಷಿಪ್ತ ರೂಪ ಆ ಬರವಣಿಗೆಯ ಮಟ್ಟಿಗೆ ಮಾತ್ರ ಬಳಕೆಯಾಗುತ್ತದೆ. ಬೇರೊಬ್ಬರು 'ಕ್ರಿಯಾರಚನೆ' ಎನ್ನಬಹುದು. ಆದರೆ ಆಯಾ ಬರಹಗಳಲ್ಲಿ ಆಯಾ ಸಂಕ್ಷಿಪ್ತ ರೂಪಗಳನ್ನು ವಿವರಿಸಿಬಿಡುವುದರಿಂದ ಗೊಂದಲಕ್ಕೆ ಅವಕಾಶವಿರುವುದಿಲ್ಲ ಉದಾ-

ರೀವ್ -	adj-	ನಾಮವಿಶೇಷಣ
	adv-	ಕ್ರಿಯಾ ವಿಶೇಷಣಾ
ಕಿಟ್ಟೆಲ್-	a-	ನಾಮವಿಶೇಷಣ
	ad-	ಕ್ರಿಯಾ ವಿಶೇಷಣ
ರೀವ್ -	S-	ಸಂಸ್ಕೃತ ಪದ

ಕಿಟೆಲ್ -	Sk-	ಸಂಸ್ಕೃತ ಪದ
ರೀವ್, ಜೀಗ್ಲರ್-	Ta-	ತಮಿಳ್
	Tu-	ತುಳು
	Te-	ತೆಲುಗು
ಕಿಟೆಲ್ -	Ta-	ತಮಿಳ್ -ಇಂಗ್ಲಿಶ್ ಕೋಶ
	Tu-	ಮ್ಯಾನರ್ ಕೋಶ
	Te-	ಬ್ರೌನ್ ಕೋಶ

ಹೀಗೆ ಮಿಶನರಿಗಳು ತಮಗೆ ಅನುಕೂಲವಾಗುವಂತೆ ಸಂಕ್ಷೇಪಗಳನ್ನು ನಿರೂಪಿಸಿದ್ದಾರೆ. ಸಂಕ್ಷಿಪ್ತ ರೂಪಗಳನ್ನು ರಚಿಸುವ ಮಾದರಿಗಳು ಕೆಲವಿದೆ.

೧. ಮೂಲರೂಪ ಒಂದೇ ಪದವಾಗಿದ್ದರೆ ಅದರ ಮೊದಲ ಒಂದು ಅಥವಾ ಎರಡು ಅಕ್ಷರಗಳನ್ನು ಬಳಸುವುದು.

H- Hindūstani

M- Malayaḷa

೨. ಸಾಮಾನ್ಯವಾಗಿ ಮೂಲಪದದಲ್ಲಿ ಮೂರಕ್ಕಿಂತ ಹೆಚ್ಚು ಅಕ್ಷರಗಳಿದ್ದಾಗ ಮಾತ್ರ ಸಂಕ್ಷಿಪ್ತ ರೂಪದಲ್ಲಿ ಮೊದಲ ಎರಡು ಅಕ್ಷರಗಳನ್ನು ಉಳಿಸಿಕೊಳ್ಳುವುದು ಸರಿ. ಮೂರು ಅಥವಾ ಅದಕ್ಕಿಂತ ಕಡಿಮೆ ಅಕ್ಷರಗಳಿದ್ದಾಗ ಮೊದಲ ಅಕ್ಷರವನ್ನು ಮಾತ್ರ ಉಳಿಸಿಕೊಳ್ಳಬಹುದು.

N- Name propername

V- Vriṣabhēndrāvijaya

೩. ಮೂಲರೂಪದಲ್ಲಿ ಒಂದಕ್ಕಿಂತ ಹೆಚ್ಚು ಪದಗಳಿದ್ದಾಗ ಪ್ರತಿ ಪದದ ಮೊದಲ ಅಕ್ಷರಗಳನ್ನು ಸೇರಿಸಿ ಸಂಕ್ಷಿಪ್ತ ರೂಪವನ್ನು ರಚಿಸಲಾಗುತ್ತದೆ.

BP- Basava Purāṇa

AP- Adj purāṇa

೪. ಮೊದಲ ಪದದ ಮೊದಲ ಎರಡು ಅಕ್ಷರಗಳು ಮತ್ತು ಎರಡನೆಯ ಪದದ ಮೊದಲ ಅಕ್ಷರಗಳನ್ನು

ಸಂಕ್ಷೇಪಕ್ಕೆ ಉಪಯೋಗಿಸಲಾಗುತ್ತದೆ.

S. Mhr-	South Marāṭha
C.BP-	Cannabasava Purāṇa

೫. ಸಂಕ್ಷಿಪ್ತ ರೂಪದ ಕೊನೆಯಲ್ಲಿ ಮಾತ್ರ ಚುಕ್ಕಿಯನ್ನು ಬಳಸುವುದು ಸೂಕ್ತ. ಇದರಿಂದ ಸಂಕ್ಷಿಪ್ತ ರೂಪವೆಂಬುದನ್ನು ಗುರುತಿಸಲು ಸಾಧ್ಯ.

Vi-	Verb intransitive
V.t-	Verb transitive

ಮಿಶನರಿ ಕೋಶಗಳಲ್ಲಿ ಬಳಕೆಯಲ್ಲಿರುವ ಕೆಲವು ಸಂಕ್ಷೇಪಗಳನ್ನು ಈ ಕೆಳಗೆ ಕೊಟ್ಟಿದೆ.

ರೀವ್ ಕೋಶ

C	-	ಅಚ್ಚಕನ್ನಡ ಶಬ್ದ
A. C	-	ಪ್ರಾಚೀನ ಉಪಭಾಷೆ
S.	-	ಸಂಸ್ಕೃತ ಪದಗಳು
T. B	-	ತದ್ಭವಗಳು
H	-	ಹಿಂದೂಸ್ತಾನಿ, ಪರ್ಶಿಯನ್ ಪದಗಳು
G	-	ಪ್ರಾದೇಶಿಕ ರೂಪ
E	-	ಇಂಗ್ಲಿಶ್ ಸ್ವೀಕರಣ ಪದಗಳು
T	-	ತಮಿಳ್ ಅಥವಾ ತೆಲುಗು ಸ್ವೀಕರಣ ಪದಗಳು
M	-	ಮರಾಠಿ ಪದಗಳು
D	-	ಭಾರತೀಯ ಭಾಷೆಗಳಲ್ಲಿ ಬಳಕೆಯಾದ ಸಾಮಾನ್ಯ ಪದಗಳು
S!	-	ವಿಶೇಷ್ಯಾತ್ಮಕ
adj	-	ನಾಮ ವಿಶೇಷಣ
adv	-	ಕ್ರಿಯಾ ವಿಶೇಷಣ

interj - ವಿಸ್ಮಯಾದಿ ಸೂಚಕ

postpos - ಉಪಸರ್ಗ

V.a - ಸಕ್ರಿಯ ಕ್ರಿಯಾಪದ

V.n - ಭಾವಸೂಚಕ ಕ್ರಿಯಾಪದ

V. caus - ಕಾರಣಾತ್ಮಕ ಕ್ರಿಯಾಪದ

V. Comp - ಸಂಯುಕ್ತ ಕ್ರಿಯಾಪದ

part - ಕೃದಂತ

ger. - ಧಾತು, ಸಾಧಿತನಾಮ/ ಕ್ರಿಯಾಪದ

dit - ಸಾಹಿತ್ಯಿಕ

fig - ಅಲಂಕಾರಿಕ

imp - ಆಜ್ಞಾರ್ಥಕ

neg - ನಿಷೇಧಾತ್ಮಕ

ಕಿಟೆಲ್ ಕೋಶದಲ್ಲಿಯ ಸಂಕ್ಷೇಪಗಳು

A -

Abha - ಅನುಭವಾಮೃತ (ಹತ್ತ ಪ್ರತಿ ೧೮೭೪)

Abh.P - ಅಭಿನವ ಪಂಪನ ರಾಮಾಯಣ (ಹಸ್ತಪ್ರತಿ)

Abhs - ಅನುಭವ ಶಿಖಾಮಣಿ (ಹಸ್ತಪ್ರತಿ)

adj - ಸಂಸ್ಕೃತದ ಕ್ರಿಯಾವಿಶೇಷಣ

B - ಬಾಂಬೆ ವಿದ್ಯಾ ಇಲಾಖೆಯ ಕನ್ನಡ ಪಠ್ಯ ಪುಸ್ತಕಗಳು (೧೮-೮೨೮೩)

Bd. - ಧಾರವಾಡದ ಬೇಡರ ಆಡುನುಡಿ

Bh - ಕುಮಾರವ್ಯಾಸ ಭಾರತ (೧೮೭೫)

Bhn - ಭಾರತ ನಿಘಂಟು (ಹಸ್ತಪ್ರತಿ)

Bp	-	ಬಸವ ಪುರಾಣ (೧೮೫೦)
Br	-	ಸಿ. ಪಿ. ಬ್ರೌನ್ (ತೆಲುಗು-ಇಂಗ್ಲಿಶ್ ನಿಘಂಟು)
C	-	ಸಾಮಾನ್ಯ
Cf	-	ಹೋಲಿಕೆ
Cm	-	ವ್ಯಾಖ್ಯಾನ
Čb	-	ಶಬ್ದಸಾಗರ (ಗುರುನಾಥ ವಿಠ್ಠಲ ಮೋಹರೆ) ೧೮೭೪
Č.BP	-	ಚೆನ್ನಬಸವ ಪುರಾಣ ೧೮೫೧
Čd	-	ಹಿಂದೂ ಚರಿತ್ರದರ್ಪಣ ೧೮೮೨
Čh	-	ನಾಗವರ್ಮನ ಛಂದಸ್ಸು ೧೮೭೫
Čpr	-	ಚಂದ್ರಪ್ರಭ ಪುರಾಣ
Čt	-	ಚತುರಾಸ್ಯ ನಿಘಂಟು
Dh	-	ಶಬ್ದಮಣಿದರ್ಪಣದ ಧಾತುಪ್ರಕರಣ
Dhw	-	ಧನಂಜಯನ ಟೀಕೆ
Dp	-	ದಾಸರ ಪದ (೧೮೫೦)
Dupl	-	ದ್ವಿರುಕ್ತಿ
eg	-	ಉದಾಹರಣೆ
fr	-	ಇಂದ (ಇದರಿಂದ)
G	-	ಕನ್ನಡಕೋಶ (ಗಂಗಾಧರ ಮಡಿವಾಳೇಶ್ವರ ತುರಮರಿ)
Grj	-	ಗಿರಿಜಾ ಕಲ್ಯಾಣ ೧೯೬೭
Ǵ.Z	-	ಬಾಂಬೆ ಪ್ರಾಂತದ ಗ್ಯಾಜಿಟಿಯರ್ (ಸಂ XXII-೧೮೮೪)
H	-	ಹಿಂದೂಸ್ತಾನಿ
Hla	-	ಹಲಾಯುಧನ ಅಭಿಧಾನರತ್ನಮಾಲಾ (ಹಸ್ತಪ್ರತಿ)

J	-	ಜೈಮಿನಿ ಭಾರತ
Jm	-	ಜಿನಮುನಿತ್ಯನಯ (ಹಸ್ತಪ್ರತಿ)
Jns	-	ಜವನ ಸಿಂಧು
Jnv	-	ಜಗನ್ನಾಥ ವಿಜಯ (ಹಸ್ತಪ್ರತಿ)
K	-	ಕನ್ನಡ
Kâvy	-	ನಾಗವರ್ಮನ ಕಾವ್ಯಾವಲೋಕನ
Kk	-	ಕಬ್ಬಿಗರ ಕೈಪಿಡಿ (ಹಸ್ತಪ್ರತಿ)
Kp	-	ಕೈವಲ್ಯ ಪದ್ಧತಿ ೧೮೭೩
Lilv	-	ಲಿಲಾವತಿ ಪುರಾಣ ೧೮೭೩
M	-	ಮಲಯಾಳಂ (ಗುಂಡರ್ಟ್‌ನ ಮಲಯಾಳಂ-ಇಂಗ್ಲಿಶ್ ನಿಘಂಟು ೧೮೭೨)
Mdb	-	ಮೂಡಬಿದರ (ದ. ಕದಲ್ಲಿಯ)
Mg	-	ಮಂಗಳೂರು (ದ. ಕ ದಲ್ಲಿಯ)
Mhr	-	ಮರಾಠಿ
Mr	-	ಮಂಗರಾಜನ ನಿಘಂಟು (ಹಸ್ತಪ್ರತಿ)
Ms	-	ಹಸ್ತಪ್ರತಿ/ಹಸ್ತಪ್ರತಿಗಳು
My	-	ಮೈಸೂರು
N	-	ಹೆಸರು
Nn	-	ನಾನಾರತ್ನಾಕರ
Nr	-	ನಾಚ್ಚಿರಾಸಿಯ
Or	-	ಇತರ ಓದು/ ಹೆಚ್ಚಿನ ಓದು
P	-	ಪಂಚತಂತ್ರ ೧೮೭೫
P.p	-	ಭೂಕಾಲಿಕ ಕೃದಂತ

Pr - ಡಬ್ಲ್ಯು ಎಸ್. ಫ್ರೈಸರ್ ಧಾರವಾಡ ಪ್ರದೇಶದ ಕಂದಾಯ ಸರ್ವೇಕ್ಷಣ ವರದಿ

Prll - ಪ್ರಭುಲಿಂಗಲೀಲೆ (ಹಸ್ತಪ್ರತಿ)

Prv - ಗಾದೆ

q. v - ಇಲ್ಲಿದೆ ನೋಡಿ/ಅದೇ ಭಾಗ ನೋಡಿ

R - ವಿಲ್ಯಂ ರೀವ್ ಅವರ ಕನ್ನಡ-ಇಂಗ್ಲಿಶ್ ಕೋಶ

Râgha - ರಾಘವಾಂಕ ಚರಿತ್ರ (ಹಸ್ತಪ್ರತಿ)

Ram - ಕುಮಾರ ವಾಲ್ಮೀಕಿಯ ರಾಮಾಯಣ

reit - ಪುನರ್ ವ್ಯಾಖ್ಯಾನ

rep - ಪುನರಾವೃತ್ತಿ

Rnc - ರಾಮನಾಥ ಚರಿತ್ರೆ (ಹಸ್ತಪ್ರತಿ)

Rsv - ರಾಜಶೇಖರ ವಿಲಾಸ (ಹಸ್ತಪ್ರತಿ) ೧೮೬೬

Šm - ತೊಂಟದಾರ್ಯನ ಶಬ್ದ ಮಂಜರಿ (ಹಸ್ತಪ್ರತಿ)

Šmd - ಶಬ್ದಮಣಿ ದರ್ಪಣ

Šmd. Dh - ಶಬ್ದ ಮಣಿ ದರ್ಪಣದ ಧಾತುಪಾಠ

Ššv - ಶಬರ ಶಂಕರ ವಿಲಾಸ ೧೮೮೨

ŠS - ಶಬ್ದ ಸಾರ (ಹಸ್ತಪ್ರತಿ)

S - ಉಪಉಲ್ಲೇಖ

Sd - ಸ್ಯಾಂಡರಸನ್‌ರ ರೀವ್ ಕೋಶಗಳ ಪರಿಷ್ಕರಣ ೧೮೬೫

Si - ಸಿದ್ಧಾಂತ ಸುಬ್ರಹ್ಮಣ್ಯ (ಅಮರಕೋಶದ ವ್ಯಾಖ್ಯಾನ) ೧೮೭೩

Sk - ಸಂಸ್ಕೃತ

S.mhr - ದಕ್ಷಿಣ ಮಹಾರಾಷ್ಟ್ರ

Sp - ಸರ್ವಜ್ಞಪದ

SŚ - ಸೋಮೇಶ್ವರ ಶತಕ

Sum - ಸಾರಾಂಶ

T - ತಮಿಳ್ (ಜೆ. ಪಿ. ರೋಟರ್‌ರ ತಮಿಳ್-ಇಂಗ್ಲಿಶ್ ನಿಘಂಟು ೧೮೩೪)

Tbh - ತದ್ಭವ

Te - ತೆಲುಗು (ಸಿ. ಪಿ. ಬ್ರೌನ್‌ರ ತೆಲುಗು-ಇಂಗ್ಲಿಶ್ ನಿಘಂಟು)

Ts - ತತ್ಸಮ

Tu - ತುಳು (ಎ. ಮ್ಯಾನರ್‌ರ ತುಳು-ಇಂಗ್ಲಿಶ್ ನಿಘಂಟು ೧೮೮೬)

V - ವೃಷಭೇಂದ್ರ ವಿಜಯ ೧೮೩೫

V.i - ಅಕರ್ಮಕ ಕ್ರಿಯಾಪದ

V.t - ಸಕರ್ಮಕ ಕ್ರಿಯಾಪದ

Z - ಜೀಗ್ಲರ್ ಇಂಗ್ಲಿಶ್- ಕನ್ನಡ ಕೋಶ

= - ಸಮಾನಾರ್ಥ

ಜೀಗ್ಲರ್ ಕೋಶದಲ್ಲಿಯ ಸಂಕ್ಷೇಪಗಳು

a - ನಾಮ ವಿಶೇಷಣ

abbr - ಸಂಕ್ಷೇಪವಾಗಿ .

acc - ಜಮಾ ಖರ್ಚಿನ ಲೆಕ್ಕ

ad - ಕ್ರಿಯಾ ವಿಶೇಷಣ

anat - ಶರೀರಶಾಸ್ತ್ರ

arch - ಶಿಲ್ಪಶಾಸ್ತ್ರ

arith - ಅಂಕಗಣಿತವಿದ್ಯೆ

astr - ಜ್ಯೋತಿಷ್ಯಶಾಸ್ತ್ರ

aux.v - ಸಹಾಯಕ ಕ್ರಿಯಾಪದ

Bad - ಬಡಗ ಉಪಭಾಷೆ

bot - ಸಸ್ಯಶಾಸ್ತ್ರ

C. a - ದ್ವಿತೀಯಾವಿಭಕ್ತಿ ಮುಂದೆ *

C. d - ಚತುರ್ಥಿವಿಭಕ್ತಿ ಮುಂದೆ *

Cf - ಸರಿನೋಡು

Cg - ಕೊಡಗು

Cg - ಷಷ್ಠಿಯ ಮುಂದೆ *

C.i - ತೃತೀಯೆಯ ಮುಂದೆ *

C.l - ಸಪ್ತಮಿಯ ಮುಂದೆ *

C.n - ಕರ್ತೃವಿನ ಮುಂದೆ *

(* ಈ ಸಂಕೇತಾಕ್ಷರವಿರುವ ಕ್ರಿಯಾಪದವು ಅಥವಾ ವಿಶೇಷಣವು ಅಥವಾ ಉಪಸರ್ಗಾವ್ಯಯವು ವಾಕ್ಯದಲ್ಲಿ ಆಯಾ ವಿಭಕ್ತಿಯ ಮುಂದೆ ಬರತಕ್ಕದ್ದು).

Chem - ರಸಾಯನಶಾಸ್ತ್ರ

Coll - ವ್ಯವಹಾರಿಕ ಶಿಷ್ಟ ಕನ್ನಡ

Com - ವ್ಯಾಪಾರ/ ವ್ಯವಹಾರ

Comp. or cpds- ಸಮಾಸಪದ

Conj - ಸಮುಚ್ಚಾವ್ಯಯ

Constr - ವಾಕ್ಯರಚನೆಯಾಗುವ

Contr. - ಸಂಕ್ಷೇಪ

Corrup. - ತದ್ಭವ

dim. - ಅಲ್ಪವಿರಾಮ

etc. - ಇತ್ಯಾದಿ

F.	-	ಸ್ತ್ರೀಲಿಂಗ
fig.	-	ರೂಪಕಾರ್ಥ
fr.	-	ಫ್ರೆಂಚ್‌ಭಾಷೆ
geog	-	ಭೂಗೋಳಶಾಸ್ತ್ರ
geol.	-	ಭೂ ರಚನಾಶಾಸ್ತ್ರ
geom.	-	ರೇಖಾಗಣಿತ
Gk.	-	ಗ್ರೀಕ್ ಭಾಷೆ
Gram	-	ವ್ಯಾಕರಣ
i.e	-	ಅಂದರೆ
imp	-	ವಿಧಿರೂಪ
int	-	ಭಾವಬೋಧಕ ನಿಪಾತ
inter	-	ಪ್ರಶ್ನಾರ್ಥಕ
ir	-	ವಿಕೃತ (ಕ್ರಿಯಾಪದ)
log	-	ತರ್ಕಶಾಸ್ತ್ರ
math	-	ಗಣಿತಶಾಸ್ತ್ರ
med	-	ವೈದ್ಯಶಾಸ್ತ್ರ
mil	-	ಶಸ್ತ್ರವಿದ್ಯೆ
mus	-	ಗಾಯನಶಾಸ್ತ್ರ
my	-	ಮೈಸೂರು ಪ್ರದೇಶದಲ್ಲಿ ರೂಢಿಯಾದ ಶಬ್ದ
n.	-	ನಾಮಪದ
N.c.	-	ಉತ್ತರ ಕನ್ನಡ ಸೀಮೆಯಲ್ಲಿ ರೂಢಿಯಾದ ಶಬ್ದ
pa.	-	ಕೃದ್ವಾಚಕ ವಿಶೇಷಣ

pass.	-	ಕರ್ಮಣಿ ಪ್ರಯೋಗ
prs.	-	ಪುರುಷ
phys.geog.	-	ಪ್ರಾಕೃತಿಕ ಭೂಗೋಳಶಾಸ್ತ್ರ
pl.	-	ಬಹುವಚನ
poss.	-	ಷಷ್ಠಿ
pp.	-	ಭೂತ ಕೃದ್ವಾಚಿ ಅಥವಾ ಭೂತನ್ಯೂನ
pref.	-	ಉಪಸರ್ಗ
prep.	-	ಉಪಸರ್ಗಾವ್ಯಯ
pron.	-	ಸರ್ವನಾಮ
pt.	-	ಭೂತಕಾಲ
r.	-	ಯಥಾವಿಧಿ ಕ್ರಿಯಾಪದ
réfl.	-	ಆತ್ಮಾರ್ಥಕ
rel.	-	ಪೂರ್ವ ಸಂಬಂದಾರ್ಥಕ
rhet.	-	ಅಲಂಕಾರಶಾಸ್ತ್ರ
sans.	-	ಸಂಸ್ಕೃತ ಶಬ್ದ
sing.	-	ಏಕವಚನ
su.	-	ಗ್ರಾಮ್ಯಪದ
S.c.	-	ದಕ್ಷಿಣ ಕನ್ನಡ ಸೀಮೆಯಲ್ಲಿ ರೂಢಿಯಾದ ಶಬ್ದ
Surg.	-	ಶಸ್ತ್ರವೈದ್ಯಶಾಸ್ತ್ರ
Surv.	-	ಮೋಜಣಿ ವಿದ್ಯೆ
v.i	-	ಅಕರ್ಮಕ ಕ್ರಿಯಾಪದ
r.t.	-	ಸಕರ್ಮಕ ಕ್ರಿಯಾಪದ
Zool.	-	ಪ್ರಾಣಿಶಾಸ್ತ್ರ

ವಾಟ್ಸ ಇಂಗ್ಲಿಶ್- ಕನ್ನಡಕೋಶ

a.	-	ನಾಮ ವಿಶೇಷಣ
abbr.	-	ಸಂಕ್ಷೇಪ
ad.	-	ಕ್ರಿಯಾ ವಿಶೇಷಣ
art.	-	ಉಪಪದ
conj.	-	ಸಮುಚ್ಚಾವ್ಯಯ
contr.	-	(ಅರ್ಥ) ಸಂಕೋಚ
fem.	-	ಸ್ತ್ರೀಲಿಂಗ
fig.	-	ಅಲಂಕಾರಿಕ
fr.	-	ಫ್ರೆಂಚ್
gr.	-	ಗ್ರೀಕ್
gram.	-	ವ್ಯಾಕರಣ
int.	-	ವಿಸ್ಮಯಾದಿ ಸೂಚಕ
l.	-	ಲ್ಯಾಟಿನ್
masc.	-	ಪುಲ್ಲಿಂಗ
part	-	ಕೃದಂತ
pl	-	ಬಹುವಚನ
pp	-	ಭೂತಕಾಲಿಕ ಕೃದಂತ
pr	-	ವರ್ತಮಾನಕಾಲ
pref.	-	ಪೂರ್ವ ಪ್ರತ್ಯಯ
prep	-	ಉಪಸರ್ಗ
pron	-	ಸರ್ವನಾಮ

ps	-	ಕರ್ಮಣಿ ಪ್ರಯೋಗ
pt.	-	ಭೂತಕಾಲ
R.c.	-	ರೋಮನ್ ಕೆಥೋಲಿಕ್
s.	-	ವಿಶೇಷ್ಯಾತ್ಮಕ
s.a.	-	ಅದೇ ರೀತಿ
s.n.	-	ಅಡಿಯಲ್ಲಿ ನೋಡಿ
sup.	-	ಉತ್ತಮಶ್ರೇಣಿ, ತಮಭಾವ
v.	-	ಕ್ರಿಯಾಪದ

ಮಿಶನರಿಗಳು ಕೋಶಸಿದ್ಧತೆಯಲ್ಲಿ ತಾವು ಬಳಸಿದ ಸಂಕ್ಷೇಪಗಳ ಪಟ್ಟಿಯನ್ನು ಕೋಶಾರಂಭದಲ್ಲಿ ಕೊಟ್ಟಿದ್ದಾರೆ. ಕೋಶವನ್ನು ಉಪಯೋಗಿಸುವಾಗ ತುಂಬ ನೆರವಾಗುತ್ತವೆ. ಸಂಕ್ಷೇಪ ನಿರೂಪಣೆಯೂ ಓದುಗರ ಅಥವಾ ಕೋಶವನ್ನು ಉಪಯೋಗಿಸುವವರ ಲಕ್ಷ್ಯವನ್ನು ಪ್ರಧಾನಾಂಶಗಳ ಕಡೆಗೆ ಸೆಳೆಯುತ್ತದೆ. ವಿಷಯಾಂಶಗಳನ್ನು ಸಂಗ್ರಹಿಸಿ, ನೆನೆಪಿನಲ್ಲಿಟ್ಟುಕೊಳ್ಳಲು, ಕೋಶಕಾರನ ಪ್ರಧಾನಾಭಿಪ್ರಾಯಗಳನ್ನು ತಿಳಿದುಕೊಳ್ಳಲು ಸುಲಭವಾಗುವುದು.

೪.೦೯ ವಿರಾಮ ಚಿಹ್ನೆಗಳು

ಕೋಶಗಳಲ್ಲಿಯ ಮುಖ್ಯ ಉಲ್ಲೇಖಗಳ ಹಾಗೂ ಉಪ ಉಲ್ಲೇಖಗಳ ನೋಟವು ಉತ್ತಮವಾಗಲು, ಕ್ರಮಬದ್ಧವಾಗಿರಲು ವಿರಾಮ ಚಿಹ್ನೆಗಳು (ಲೇಖನ ಚಿಹ್ನೆಗಳು) ಉಪಯೋಗವಾಗುತ್ತವೆ. ಮಿಶನರಿ ಕೋಶಗಳಲ್ಲಿ ಪೂರ್ಣವಿರಾಮ, ಅಲ್ಪವಿರಾಮ, ಅರ್ಧವಿರಾಮ, ಪ್ರಶ್ನಾರ್ಥಕ, ದುಂಡುಕಂಸ (ಆವರಣ ಚಿಹ್ನೆ), ಉದ್ಗಾರವಾಚಕ, ಕಿರುಗೆರೆ, ಇಂತಹ ವಿರಾಮಚಿಹ್ನೆಗಳು ಉಪಯೋಗವಾಗಿವೆ. ಪದಗಳ ಅರ್ಥಸ್ಪಷ್ಟತೆ ಹಾಗೂ ಖಚಿತತೆಯನ್ನುಂಟುಮಾಡುವಲ್ಲಿ ಇವುಗಳ ಪಾತ್ರ ಮಹತ್ವದ್ದಾಗಿದೆ. ಅವುಗಳ ಬಳಕೆಯ ಸಂದರ್ಭವನ್ನು ಗಮನಿಸಬಹುದು.

ಪೂರ್ಣ ವಿರಾಮ- ಮುಖ್ಯ ಉಲ್ಲೇಖಗಳ ವ್ಯಾಕರಣ ಸ್ವರೂಪವನ್ನು ನಿರ್ದೇಶಿಸಿದ ಅನಂತರವೂ ಅರ್ಥ ಛಾಯೆಯನ್ನು ತೋರಿಸುವ ೧. ೨. ೩ ಎಂಬ ಸಂಖ್ಯೆಗಳ ಮುಂದೆಯೂ ಒಂದು ಅರ್ಥವು ಪೂರೈಸಿದಾಗಲೂ ಪೂರ್ಣವಿರಾಮವನ್ನು ಬಳಸಲಾಗಿದೆ.

ಉದಾ - **(ರೀವ್ ಕೋಶ)**

ಗಿಡ ನಾ. ಸಣ್ಣಮರ. ಗಿಡಸಾಲು, ಗಿಡವಡಿ, ಗಿಡಪುಡ

ಗಿಡ್ಡ ವಿ. ಕುಳ್ಳ. ಗಿಡ್ಡಕಾಲು, ಗಿಡ್ಡಕೈ

(ಕಿಟೆಲ್ ಕೋಶ)

ನಾಲಗೆ = ನಾಲಗಿ, ಜಿಹ್ವೆ,ನಾಲಿಗೆತಪ್ಪು, ನಾಲಿಗೆ ಪ್ರಮಾಣ

ನಾಲಿಗೆ ವಾಸಿಯಿದ್ದವನ ಮಾತು ಹಾಲಿಗಿಂತ ಹೆಚ್ಚು (ಗಾದೆ)

ಮೇವು = ಮೇಹು

ಮೂಢಗೆ ಹೇ ದ ಬುದ್ಧಿ, ಅಡಿಗೆ ಹಾಕಿದ ಮೇವು (ಗಾದೆ)

ಮೊಗ ೧. ಮೊಗೆ

ಮೊಗ ೨. ಮೊಗು

ಮೊಗ ೩. ಮೊಗಸಿ

ಅಲ್ಪವಿರಾಮ- ಮುಖ್ಯ ಉಲ್ಲೇಖಕ್ಕೆ ಒಂದೆ ಅರ್ಥಕೊಡುವ ಭಿನ್ನ ರೂಪಗಳಿದ್ದಾಗ, ಸಾಧಿತರೂಪಗಳನ್ನು ಸೂಚಿಸುವಾಗ ಅವುಗಳ ಕೊನೆಯಲ್ಲಿ ಅಲ್ಪವಿರಾಮವನ್ನು ಬಳಸಿ ಕೊನೆಯ ವಿವರದ ನಂತರ ಪೂರ್ಣ ವಿರಾಮವನ್ನು ಬಳಸಲಾಗಿದೆ.

(ರೀವ್ ಕೋಶ)

ಗುರು ನಾ. ಗುರುವು, ಶಿಕ್ಷಕ, ಧರ್ಮಾಧಿಕಾರಿ

ಗುರುಧಾನ, ಗುರುಪೂಜೆ, ಗುರುದೀಕ್ಷೆ, ಗುರುಪ್ರಸಾದ

ಪಳ್ಳಿ ನಾ. ಪಿಳ್ಳೆ, ಪಿಳ್ಳೆ ಪಿಸಿಕೆ, ಚಿಕ್ಕಪಿಳ್ಳೆ, ಗಂಡುಪಿಳ್ಳೆ

(ಕಿಟೆಲ್ಕೋಶ)

ಅಟೆ = ಅಟು. ಅಟ್ಟೆ, ಅಡ, ಅಡಿ, ಅಡಿಕೆ, ಅಣೆ, ಅಣಗೆ, ಅಣೆ, ಉಬ್ಬಟೆ,

ಅರ್ಬಟೆ, ಹೋರಟೆ

ಚಕ್ರ= ಗಾಲಿ, ಚಕ್ಕ, ಚಕರ, ಚಕ್ಕರ, ಜಕ್ಕ, ಕುಲಾಲಚಕ್ರ

ಅರ್ಧವಿರಾಮ- ಮುಖ್ಯ ಪದದ ಅರ್ಥ ವಿವರಣೆಯೊಂದ ಕೂಡಿದ್ದರೆ 'ಅಥವಾ' ಮತ್ತು 'ಹಾಗೂ' ಸಂಬಂಧ ಸೂಚಕಾವ್ಯಯಗಳನ್ನು ಬಳಸದೆ ಇದ್ದಾಗ ಅವುಗಳ ನಡುವಿನ ಸಂಬಂಧವನ್ನು ಸೂಚಿಸಲು ಹಾಗೂ ಜ್ಞಾತಿ ಪದಗಳನ್ನು ಸೂಚಿಸುವಾಗ ಅರ್ಧವಿರಾಮವನ್ನು ಬಳಸಲಾಗಿದೆ.

(ಕಿಟೆಲ್ ಕೋಶದಲ್ಲಿ)

ಒಡನ್ = ಜತೆ ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ; ಅಲ್ಲದಹುದು ಎಂಬ್ಬ ಅಜಾಣನ ಒಡನಾಟ ಕಲ್ಲು ಹಾದಂತೆ (sp)

ಎಕ್ಕಲ್ = ಮೃಗ, ತೆಲು, ಏಕಲ; ತಮಿ, ಏನ, ಏ

ಕಿಟ್ಟು = ಗಿಟ್ಟು ತಮಿ ತೆಲು ಮಲ: ಕಿಟ್ಟು

ಪ್ರಶ್ನಾರ್ಥಕ-ಪ್ರಶ್ನಾರ್ಥಕ ಸೂಚಕವನ್ನು ಪ್ರಶ್ನಾರ್ಥಕ ಪದ/ವಾಕ್ಯದ ಕೊನೆಯಲ್ಲಿ ಬಳಸಲಾಗಿದೆ. ಕೋಶಕಾರನಿಗೆ ತಾವು ಸೂಚಿಸುವ ವಿಷಯಯೊಂದರ ಬಗ್ಗೆ ಸಂದೇಹವಿದ್ದಾಗ, ಪದವೊಂದರ ಭಾವವನ್ನು ಒತ್ತಿ ಹೇಳುವಾಗ ಆ ಪದ ಅಥವಾ ವಾಕ್ಯದ ಪಕ್ಕದಲ್ಲಿ ಪ್ರಶ್ನಸೂಚಕವನ್ನು ಬಳಸಲಾಗಿದೆ.

(ರೀವ್ ಕೋಶ)

ಏಸು. ಎಷ್ಟು, ಏಸಾಗುವುದು, ಏಸರದು? ಏಸಾರು?

ಕೋಟೆ. ದುರ್ಗ, ಕೋಟೆಕೊಂಬೆ?

(ಕಿಟೆಲ್ ಕೋಶ)

ಅಂಚು = ಕೊನೆ, ತುದಿ

ಅಂಚಿನಲ್ಲಿ ಹೋದರೆ ಮಿಂಚಿನ ಭಯತಪ್ಪೀತೇ?

ಉಪ್ಪು = ಲವಣ

ಈ ಹೊತ್ತು ಹರಿಕಥೆ ಸೀಯೋ? ಉಪ್ಪೋ?

ಉದ್ಗಾರವಾಚಕ -ಸಂತೋಷ, ದುಃಖ, ಆಶ್ಚರ್ಯ, ಕೋಪ, ಹೇಸಿಗೆ ಮುಂತಾದ ಭಾವನೆಗಳನ್ನು ಸೂಚಿಸುವ ಪದ/ವಾಕ್ಯದ ಕೊನೆಯಲ್ಲಿ ಉದ್ಗಾರಸೂಚಕ ಚಿಹ್ನೆ ಬಳಕೆಯಾಗಿದೆ.

(ಕಿಟೆಲ್ ಕೋಶ)

ಬಾರ್ = ಚರ್ಮದಪಟ್ಟಿ

ಬಾರ, ಮರಾಲಿ ಕಾಗಮನೆ ! ನೋಡ

ಚಕೋರ ವಿಲೋಲ ನೇತ್ರ (ಶಮದಾ)

ಬೊಪ್ಪಲ = ಒಡೆಯ

ಸಡಗರಮಿದು ! ಜಯಮೆ ಮೆ ವುದು!

ಅ ಬೊಪ್ಪಯಂ!

ಆವರಣ ಚಿಹ್ನೆ - ಆವರಣದೊಳಗೆ ಅಳವಡಿಸುವ ಪದ ವಾಕ್ಯ ಪೂರ್ಣವಾಗಿದ್ದಲ್ಲಿ ಆ ಪದ/ವಾಕ್ಯದ ಕೊನೆಯಲ್ಲಿ ಪೂರ್ಣವಿರಾಮದ ನಂತರ ಹಾಗೂ ಆಕರಗಳನ್ನು ಕೊಡುವಾಗ ಕಿಟೆಲ್ ಆವರಣ ಚಿಹ್ನೆಯನ್ನು ಹಾಕಿದ್ದಾನೆ.

ತನ್ನು = ತನ್ನಿತು

ಕೇಳದ ಕಿವಿಗೆ ಊರಿಗೆ ಮಾರಿಯ ತನ್ನು-

ಬುದ್ಧಿಯಿಲ್ಲದ ಮುಕ್ಕ ಇದ್ದವರಿಗೆಲ್ಲ ಕೊಡುತನ್ನು (ಗಾದೆ)

ತನ್ದೆ ತಾಯಿಗಳ ಮಾತು ಕೇಳದ ಮಕ್ಕಳು

ನಾಯಿಬಾಯಿಗೆ ಹಪ್ಪು (ಗಾದೆ)

ನೆಲೆ= ವಾಸಸ್ಥಳ, ನಿಲ್ಲುವಿಕೆ. (ಪೊವಿಲ್, ಇಕ್ಕೆ, ಹಕ್ಕೆ, ಚಾವಡಿ, ತಾಣ, ಬೀಡು ಇತ್ಯಾದಿ. ಆಶಯ; ವಿರಕ್ತ ತೋಂಟದಾರ್ಯ ಶಬ್ದಮಂಜರಿ, ತಮಿ, ನಿಲ್ಯೆ; ಮಲ, ನಿಲೆ)

ನೆಲ = ಭೂಮಿ ನೆಲವಮ್ ಆಗಸಮಿನ್ನು (ಬ. ಪು ೫೮, ೬೪)

(ಏಕ) ಕಿರುಗೆರೆ-ಭಾಷೆಯಲ್ಲಿ ಬಳಕೆಯಾಗುವ ಪ್ರತ್ಯಯಗಳನ್ನು ಬಿಡಿಯಾಗಿ ಗುರುತಿಸುವಾಗ, ಮೂಲ ರೂಪಗಳು ಇತರ ಪದಗಳೊಡನೆ ಸೇರಿ ಸಾಧಿತ ರೂಪಗಳಾಗುವಾಗ ಕಿರುಗೆರೆ ಬಳಕೆಯಾಗುತ್ತದೆ.

(ಕಿಟೆಲ್ ಕೋಶ)

ಒಸಗೆ = ಪೊಸಗೆ

-ಒಸಗೆ ಕಳುಹಿಸು

-ಒಸಗೆಯಾಳೆ

ಒಳ್ = ಉಳ್, ಒಳು

-ಒಳ್ಪೊಡವು - ತೊಡವು

-ಒಳ್ಪೊಡಿಗ - ತುಡಿಗ

-ಒಳ್ಪೊಲಿ - ತೊಲಿ

ತಲೆ = ನೆತ್ತಿ, ಶಿರ

-ತಲೆಗಟ್ಟು - ಕಟ್ಟು

-ತಲೆಕುತ್ತು - ಕುತ್ತು

-ತಲೆನೋವು - ನೋವು

ದ್ವಿಕಿರುಗೆರೆ-ಮುಖ್ಯ ಪದದ ಅರ್ಥವನ್ನು ಸೂಚಿಸುವಾಗ, ಒಂದು ಶಬ್ದಕ್ಕೆ ಸಮಾನಾರ್ಥವಿರುವ ಇನ್ನೊಂದು ಮುಂದೆಯೂ, ಪರ್ಯಾಯ ಶಬ್ದಗಳ ಮುಂದೆಯೂ ದ್ವಿಕಿರುಗರೆ ಬಳಕೆಯಾಗುತ್ತದೆ.

ಚಾವಟಿ = ಚಾಟಿ

ನರೆ = ನೆರೆ

ಪೆಸರ್ = ಪೆಸರು, ಹೆಸರು

ಪೊದಿಕೆ = ಹೊದಕೆ, ಹೊದಿಕೆ

ಎಡೆ = ನೈವೈದ್ಯ

-ಕೊಡು = ಎಡೆಕೊಡು

-ಕಟ್ಟು = ಎಡೆಕಟ್ಟು

ದ್ವಿಕಿರುಗೆರೆಗಳು ಕಿಟೆಲ್ ಕೋಶದಲ್ಲಿ ಮಾತ್ರ ಬಳಕೆಯಾಗಿವೆ. ಕಿಟೆಲ್ ಮುಖ್ಯ ಪದದ ನಂತರ ವ್ಯಾಕರಣ ವರ್ಗಗಳನ್ನು ನೀಡಿಲ್ಲ. ಮುಖ್ಯ ಪದಗಳ ಸ್ವರೂಪವನ್ನನುಸರಿಸಿ ವ್ಯಾಕರಣವರ್ಗಗಳನ್ನು ಪರಿಭಾವಿಸಬೇಕೆಂದು ಪ್ರಸ್ತಾವನೆಯಲ್ಲಿ ತಿಳಿಸಿದ್ದಾನೆ. ಮಿಕ್ಕ ಕೋಶದಲ್ಲಿ ದ್ವಿಕಿರುಗೆರೆಗಳು ಬಳಕೆಯಾಗಿಲ್ಲ.

ಮುಖ್ಯ ಪದಗಳ ನಂತರ ಅವುಗಳ ವ್ಯಾಕರಣ ವರ್ಗಗಳು ಬಳಕೆಯಾಗಿವೆ.

(ರೀವ್ ಕೋಶ)

ಜರೆ ವಿ. ಜಿಗಿತ

ಜಿರುಸು ನಾ. ಗಟ್ಟಿಯಾದುದು

ಮುಂಡಾಸು ನಾ. ರುಮಾಲು, ಪೇಟ

ಕೋಶಗಳಲ್ಲಿ ನಮೂದುಗಳನ್ನು ದಾಖಲಿಸುವಾಗ, ಅರ್ಥೈಸುವಾಗ ಸಂಶನರಿಗಳು ಸಂದರ್ಭಾನುಸಾರವಾಗಿ ವಿವಿಧ ವಿರಾಮ ಚಿಹ್ನೆಗಳನ್ನು ಬಳಸಿದ್ದಾರೆ.

ಅಡಿಟಿಪ್ಪಣಿ

೧. L. Zgusta (೧೯೭೧) -Ibid pp-೧೧೯

೨. R. A. Sing-Ibid pp-೧೧೧

೩. ಸಾಧಿತ ಪದಗಳನ್ನು ಮೂರು ರೀತಿಯಾಗಿ ವಿಂಗಡಿಸಬಹುದು ೧. ಕೃದಂತ-ಕೃದಂತ ಧಾತು, ನಾಮ, ವಿಶೇಷಣ, ಅವ್ಯಯ ೨. ತದ್ಧಿತ-ತದ್ಧಿತನಾಮ, ವಿಶೇಷಣ, ಭಾವ ನಾಮ, ಅವ್ಯಯ ೩. ಸಮಾಸಗಳು

೪. R. A. Sing - Ibid pp-೫೯

೫. R. A. Sing Ibid pp-೫೧

* ನಿಷೇಧಾರ್ಥಕ ಮತ್ತು ವಿರುದ್ಧಾರ್ಥಕ ಪದಗಳ ಮಧ್ಯ ಸೂಕ್ಷ್ಮ ವ್ಯತ್ಯಾಸವಿರುತ್ತದೆ. ನಿಷೇಧಾರ್ಥಕ ಪದಗಳು ಯಾವಾಗಲೂ ವಿರುದ್ಧಾರ್ಥವನ್ನು ಕೊಡುವುದಿಲ್ಲ. ಭಿನ್ನಾರ್ಥವನ್ನು, ವಿರುದ್ಧಾರ್ಥವನ್ನು ಕೊಡುತ್ತವೆ. ವಿರುದ್ಧಾರ್ಥ ಪದಗಳು ಯಾವಾಗಲು ನಿರಾಕರಣೆಯನ್ನು ಸೂಚಿಸುತ್ತವೆ. ವಿರುದ್ಧಾರ್ಥ ಪದಗಳಲ್ಲಿ ನಾಲ್ಕು ವಿಧಗಳಿರುತ್ತವೆ. ವೈದೃಶ್ಯ ರೂಪಗಳು ಉದಾ- ಹುಟ್ಟು-ಸಾವು, ರಾತ್ರಿ-ಹಗಲು ಮುಂತಾದವು. ಪಾರ್ಶ್ವಿಕ ರೂಪಗಳು ಉದಾ- ಒಳ್ಳೆಯ-ಕೆಟ್ಟ, ತಂಪು-ಬಿಸಿ ಮುಂತಾದವು. ಅಸಮಂಜಸ ರೂಪಗಳು ಉದಾ- ಮುಂಜಾನೆ-ಸಂಜೆ, ಬಿಳಿ- ಕೆಂಪು ಮುಂತಾದವು. ಪರಿವರ್ತಿತ ರೂಪಗಳು ಕೊಳ್ಳು - ಮಾರು, ಕೇಳು-ಹೇಳು ಮುಂತಾದವು, ಭಾಷಾ ಬಳಕೆಯ ಸಂದರ್ಭದಲ್ಲಿ ಇವೆರಡು (ನಿಷೇಧ/ ವಿರುದ್ಧಾರ್ಥಕ) ಬಹುಮಟ್ಟಿಗೆ ಪೂರಕಾರ್ಥವನ್ನು ಕೊಡುತ್ತವೆ.

** ಒಂದು ಭಾಷೆಯಿಂದ ಬಂದ ಪದ ಅಥವಾ ಪದಗಳು ಇನ್ನೊಂದು ಭಾಷೆಯಲ್ಲಿ ಸ್ವೀಕೃತವಾದರೆ ಅದು ತೆಗೆದುಕೊಂಡ ಭಾಷೆಯ ರಚನೆಯನ್ನವಲಂಬಿಸಿರುತ್ತದೆ. ಆ ಭಾಷೆಯ ವ್ಯಾಕರಣ ನಿಯಮಗಳಂತೆ ನಡೆಯುತ್ತದೆ. ಭಾಷಿಕರು ಪ್ರತಿಷ್ಠೆಗಾಗಿ ಹಾಗೂ ತಮ್ಮ ಅವಶ್ಯಕತೆಗಳನ್ನು ಪೂರೈಸಲು ಅನ್ಯ ದೇಶ್ಯ ಪದಗಳನ್ನು ಸ್ವೀಕರಿಸುತ್ತಾರೆ.

೬. ಪ್ರೊ. ಜಿ. ವೆಂಕಟಸುಬ್ಬಯ್ಯ ೧೯೯೮ ಎರವಲು ಪದಕೋಶ ಪುಟ-೧೩

*** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ವಿಕಾರ ಹೊಂದದೆ ಬಳಸಲ್ಪಡುವ ಶಬ್ದಗಳನ್ನು ತತ್ಸಮಗಳೆಂದು ಕರೆಯುವರು. ತತ್ಸಮ ಎಂಬುದರ ಅರ್ಥವೇ ಅದಕ್ಕೆ (ಸಂಸ್ಕೃತಕ್ಕೆ) ಸಮಾನವಾದುದು ಎಂದಾಗಿದೆ. ಅದನ್ನೇ ಸಮ ಸಂಸ್ಕೃತವೆಂದು ಕರೆಯುವರು. ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪ ಸ್ವಲ್ಪ ವಿಕಾರವನ್ನು ಹೊಂದಿ ಅಥವಾ ಪೂರ್ಣವಾಗಿ ಬದಲಾವಣೆಯಾಗಿ ಬರುವ ಶಬ್ದಗಳಿಗೆ ತದ್ಭವಗಳೆನ್ನುವರು. ವಿಕಾರವೆಂದರೆ ಕೆಟ್ಟು ಹೋಗಿರುವುದೆಂದರ್ಥವಲ್ಲ. ಮಾರ್ಪಾಡು ಎಂದರ್ಥ. 'ತತ್' ಎಂದರೆ ಸಂಸ್ಕೃತದಿಂದ 'ಭವ' ಎಂದರೆ ಹುಟ್ಟಿದ್ದು ಎಂದರ್ಥ.

೭. ಕನ್ನಡ ಶೈಲಿ ಕೈಪಿಡಿ ೧೯೯೫ ಕ. ವಿ. ಹಂಪಿ, ಪುಟ-೨೪೭

ಅಧ್ಯಾಯ-೫ ನಿಘಂಟು ರಚನಾ ವಿನ್ಯಾಸ (ಭಾಗ-೨)

ನಿಘಂಟು ರಚನಾ ವಿನ್ಯಾಸ (ಭಾಗ -೨)

೫.೦೧ ಪ್ರಾಚೀನ ಕಾವ್ಯಗಳ ಉದ್ಧರಣೆಗಳು

ಮಿಶನರಿಗಳು ಕೋಶ ಸಿದ್ಧತೆಯಲ್ಲಿ ಶಬ್ದಾರ್ಥವನ್ನು ವಿವೇಚಿಸುವಾಗ ತಾವು ಹೇಳುವ ವಿಷಯವನ್ನು ಸ್ಪಷ್ಟ ಪಡಿಸುವುದಕ್ಕಾಗಿ ಅಥವಾ ತಾವು ಕೊಡುವ ಅರ್ಥ ವಿವರಣೆಗೆ ಪುಷ್ಟಿಯನ್ನು ಕೊಡಲು ಉದ್ಧರಣೆಗಳನ್ನು ಬಳಸಿದ್ದಾರೆ[೧] ಉದ್ಧರಣೆಗಳನ್ನು ಬಳಸುವಲ್ಲಿ ಎರಡು ವಿಧಾನಗಳಿವೆ. ೧. ಇತರರ ಹೇಳಿಕೆಗಳನ್ನು ಇದ್ದಕ್ಕಿದ್ದ ಹಾಗೆಯೇ ಉದ್ಧರಣ ಚಿಹ್ನೆಯೊಂದಿಗೆ ಬಳಸಿಕೊಳ್ಳುವುದು. ೨. ಇತರರ ಹೇಳಿಕೆಯ ವಿವರಗಳನ್ನು ಸಂಗ್ರಹಿಸಿ ತನ್ನ ಮಾತಿನಲ್ಲಿ ಹೇಳುವುದು. ಇಲ್ಲಿ ಮೂಲ ಬರೆಹದ ಸಂಪೂರ್ಣ ಆಶಯವಿರಬೇಕು. ಇವುಗಳಲ್ಲಿ ಮಿಶನರಿಕೋಶಕಾರರು ಮೊದಲನೆಯ ವಿಧಾನವನ್ನನುಸರಿಸಿದರು. ಉದ್ಧರಣೆಗಳನ್ನು ಬಳಸುವುದರಿಂದ ಹಲವು ಪ್ರಯೋಜನಗಳಾಗುತ್ತವೆ. ೧. ಇತರರ ಹೇಳಿಕೆಗಳನ್ನು ಕೊಟ್ಟು ನಂತರ ತನ್ನ ನಿರ್ಣಯವನ್ನು ಕೊಡುವುದರಿಂದ ಇತರರಿಗಿಂತ ತನ್ನ ಅಭಿಪ್ರಾಯ ಮುಂದುವರಿದುದು ಎಂದು ತೋರಿಸಿಕೊಟ್ಟಂತಾಗುತ್ತದೆ. ೨. ಈ ಹಿಂದೆ ಬಂದಿರುವ ತೀರ್ಮಾನಕ್ಕಿಂತ ತನ್ನ ತೀರ್ಮಾನ ತುಂಬ ಹೊಸದು, ಮೌಲಿಕವಾದುದು ಎಂಬುದನ್ನು ಸಾಧಿಸಲು ಸಾಧ್ಯವಾಗುತ್ತದೆ. ೩. ಉದ್ಧರಣೆಗಳ ಬಳಕೆಯಿಂದ ಸಂಶೋಧಕನ/ಕೋಶಕಾರನ ಸ್ವಂತಿಕೆಯೆಷ್ಟು ಎಂಬುದು ತಿಳಿಯುತ್ತದೆ. ಆದರೆ ಅವುಗಳನ್ನು ಅತಿಯಾಗಿ ಬಳಸುವುದರಿಂದ ಪ್ರಬಂಧದ/ಕೋಶದ ಬೆಲೆ ಕಡಿಮೆಯಾಗುತ್ತದೆ. ಅನಿವಾರ್ಯ ಅಗತ್ಯ ಸಂದರ್ಭದಲ್ಲಿ ಮಾತ್ರ ಉದ್ಧರಣೆಗಳನ್ನು ಬಳಸಬೇಕು. ಆದರೆ ತಿರುಳನ್ನು ಕೊಡುವಾಗ ಸ್ಪಷ್ಟವಾಗಿ, ಸಂಗ್ರಹವಾಗಿ ಹೇಳಬೇಕು.

ಮಿಶನರಿಗಳು ತಮ್ಮ ಕೋಶಗಳಲ್ಲಿ ಪಂಪರಾಮಾಯಣ/ರಾಮಚಂದ್ರ ಚರಿತ ಪುರಾಣ, ಗಿರಿಜಾಕಲ್ಯಾಣ, ಕುಮಾರವ್ಯಾಸಭಾರತ, ತೊರವೆ ರಾಮಾಯಣ, ಶಬ್ದಮಣಿದರ್ಪಣ, ರಾಜಶೇಖರವಿಳಾಸ, ಬಸವಪುರಾಣ, ದಾಸಸಾಹಿತ್ಯ, ಜೈಮಿನಿಭಾರತ ಮುಂತಾದ ಕಾವ್ಯಗಳಿಂದ ಉದ್ಧರಣೆಗಳನ್ನು ತೆಗೆದುಕೊಂಡಿದ್ದಾರೆ. ಮಾರ್ಗ ಹಾಗೂ ದೇಸಿಯ ಲೌಕಿಕ ಕಾವ್ಯಗಳಿಗೆ ಅವರು ಹೆಚ್ಚು ಒತ್ತು ಕೊಟ್ಟರು. ಕೆಲವು ಕಾವ್ಯಗಳ ಪ್ರಯೋಗಗಳನ್ನು ಗಮನಿಸಬಹುದು.

ಪಂಪರಾಮಾಯಣದ ಉದ್ಧರಣೆಗಳನ್ನು ಕುರಿತು ಪಂಪರಾಮಾಯಣವು ಕನ್ನಡದಲ್ಲಿ ಉಪಲಬ್ಧವಾದ ಮೊದಲನೆಯ ಜೈನ ರಾಮಾಯಣ; ನಾಗಚಂದ್ರನ ಎರಡನೆಯ ಮತ್ತು ಹೆಚ್ಚು ಪರಿಪಕ್ವವಾದ ಕೃತಿ. ಕವಿಯ ಭಾಷೆ, ಶೈಲಿಯ ಮೇಲೆ ಸಂಸ್ಕೃತದ ಪ್ರಭಾವ ಈ ಕೃತಿಯ ಮೇಲೆ ನಿಬಿಡವಾಗಿದ್ದರೂ ಅದನ್ನು ಸಂಸ್ಕೃತಮಯವೆನ್ನಲಾಗದು. ಕಾಲಮಾನಕ್ಕನುಸರಿಸಿ ಅಪರಿಹಾರ್ಯವಾಗಿದ್ದ ಸಂಸ್ಕೃತ ಪ್ರಭಾವಗಳನ್ನು ಅಲ್ಲಗಳೆಯದೆ ಯಥೋಚಿತವಾಗಿ ಬಳಸಿ, ಜೊತೆಗೆ ಕನ್ನಡ ದೇಸಿಯ ಪ್ರಭಾವಕ್ಕೂ ಒಳಗಾಗಲು ಹೆಣಗಿದ ಕವಿಬುದ್ಧಿ ಇಲ್ಲಿ ತೋರುತ್ತದೆ. ದೇಸಿ ಮಾರ್ಗಗಳ ಸುಂದರ ಸಂಗಮವೆಂದರೆ ಇದೇ. ಕಿಟೆಲ್ ನಾಗಚಂದ್ರನ

ಈ ಕೃತಿಗೆ ಹೆಚ್ಚು ಮಾರು ಹೋಗಿದ್ದಾನೆ. ದೇಸಿ ಹಾಗೂ ಮಾರ್ಗಗಳ ಎರಡು ರೀತಿಯಲ್ಲಿ ಶಬ್ದಗಳನ್ನು ಬಳಸುವಲ್ಲಿ ನಾಗಚಂದ್ರನು ತೋರಿಸಿದ ಪ್ರಯೋಗಶೀಲತೆ ಕನ್ನಡ ಶಬ್ದ ಸಂಪತ್ತನ್ನು ಹೆಚ್ಚಿಸಿದೆ. ಎಂಬ ಭಾವನೆ ಕಿಟೆಲನಿಗೆ ಪಂಪರಾಮಾಯಣದ ಅಭ್ಯಾಸದಿಂದ ಅರಿಕೆಯಾಗಿರಬೇಕು. ಅಂತಲೆ ಕಿಟೆಲ್ ಹೆಚ್ಚಾಗಿ ನಾಗಚಂದ್ರನನ್ನು ಸಾಧ್ಯವಿದ್ದಷ್ಟು ಕಡೆಗಳಲ್ಲಿ ಉದಾಹರಿಸುತ್ತಾ ಹೋಗಿದ್ದಾನೆ. ಆ ಪ್ರಯೋಗಗಳಿಗೆ Abh.p ಎಂಬ ಸಂಕೇತ ಕೊಟ್ಟಿದ್ದಾರೆ. (Abhinava pampa's Ramayana) ಅದರ ಕೆಲವು ಪ್ರಯೋಗಗಳು ಇಂತಿವೆ.

'ಅಟ್ಟ' ಶಬ್ದಕ್ಕೆ ವಿವರಣೆ ಕೊಡುವ ಸಂದರ್ಭದಲ್ಲಿ ಅದರ ಸಾಧಿತರೂಪವನ್ನು ಹೇಳುವಾಗ 'ಅಟ್ಟಾಸುರ' ಪದವನ್ನು ಪ್ರಯೋಗಿಸಿದ್ದಾನೆ -'ಅಸುರ' ರಾಕ್ಷಸ 'ಅಟ್ಟಾಸುರ' ಅತಿಭಯಂಕರ (ಸ್ತ್ರೀ ತಿ) 'ಕಂದರ್ಪ ನೆಟ್ಟೆಚ್ಚೆಂತುಂ ಕೈವಾರವಟ್ಟಾಸುರವೆನೆ ಮುನಿದೆಚ್ಚಟ್ಟ' (ಪಂ. ರಾಮಾಯಣ ೯-೮೪) (ಅಟ+ಅಸುರ)

'ಅಳುರ್' ಎಂಬುದಕ್ಕೆ ವ್ಯಾಪಿಸು; ಸುಡು ಎಂಬರ್ಥ ಕೊಡಲಾಗಿದೆ. ಹರಡು: ಆವರಿಸು: ವ್ಯಾಪ್ತಿ: ವಿಸ್ತಾರ ಎಂಬ ಸಮಾನಾರ್ಥಕಗಳನ್ನು ಅದಕ್ಕೆ ಸೇರಿಸಬಹುದು 'ಈತನ ಪರಾಕ್ರಮದಳುರ್ಕೆಯಂ ಪೇಳ್ವೊಡೆ' (೧೧-೧೦೩)

'ಇಟ್ಟಳ' ಎಂಬುದಕ್ಕೆ ಸಮೂಹ ಎಂದು ಹೇಳಿ 'ಇಟ್ಟಳವಿಡು' ಎಂಬ ಸಾಧಿತ ರೂಪವನ್ನು ಹೇಳಲಾಗಿದೆ. ಅದರರ್ಥ 'ಅಪವಾದ ಹೊರಿಸು' 'ರಾಮಸ್ವಾಮಿಯ ಭಾರ್ಯೆ' ಸೀತಾದೇವಿಯೆಂಬೆನ್ನ ಮೇಲೆ ಜನಪದ ಜನಂ ಪೊಲ್ಲನಪ್ಪ ರಾವಣನುಯ್ಯಳಂ ತಂದು ವಿಚಾರಿಸದೆ ಮಹಾದೇವಿ ಪಟ್ಟಂಗಟ್ಟುವುದಾವುಚಿತ ಮೆಂದಿಟ್ಟಳ ಮಿಟ್ಟು ನುಡಿಯೆ (೧೫- ೮೧) ಇಟ್ಟಳ+ಇಡು

'ಎಕ್ಕತುಳ' ಎಂಬ ಶಬ್ದವು 'ಏಕಕಾಲ' ದ ತದ್ಭವ ಎಂದಿಷ್ಟೆ ಹೇಳಲಾಗಿದೆ. 'ಎಕ್ಕತುಳ' ಎಂದರೆ ಒಂದೇ ತೂಕ: ಒಂದೇ ಬಲ; ಒಂದು ಸಮ 'ರಾವಣನೊಳಡುರ್ತೆಕ್ಕ ತುಳ ಮಿಳ್ದು' (೯-೧೦೫) ಆ ಪದ ಬೇರೆ-ಬೇರೆ ಸಂದರ್ಭದಲ್ಲಿ ಪ್ರಯೋಗವಾದಾಗ ಪರಾಕ್ರಮ'ಶೌರ್ಯ, ದಿಟ್ಟತನ ಎಂಬರ್ಥವನ್ನು ಕೊಡುತ್ತದೆ.

'ಸುಟ್ಟು' ಎಂಬ ಕ್ರಿಯಾರೂಪಕ್ಕೆ ಕಿಟೆಲ್ 'ಬೆರಳಿನಿಂದ ನಿರ್ದೇಶಿಸು' ಎಂಬರ್ಥ ಕೊಟ್ಟಿದ್ದಾನೆ. ಶಬ್ದಮಣಿದರ್ಪಣದ ಧಾತು ಪಾಠದಲ್ಲಿಯೂ ಇದೇ ಅರ್ಥವಿದೆ (ಸುಟ್ಟು-ಅಂಗುಲಿದರ್ಶನೇ'). ಪಂಪ ರಾಮಾಯಣದಲ್ಲಿ ಇದರ ಉಲ್ಲೇಖ ಹೀಗಿದೆ 'ಲತಾಗಾರದ ಪು ಲಿಡೆಯಂ ಸೀತಾರಮಣಿಗೆ ಸುಟ್ಟಿ ತೋ ದಂ ರಘುವೀರಂ' (೧೫-೨೪) ಸುಟ್ಟು+ ತೋಱು ಇಂತಹ ನೂರಾರು ಪದಗಳಿಗೆ ಅರ್ಥ ಕೊಡುವಾಗ ಕಿಟೆಲ್ ಪಂಪ ರಾಮಾಯಣವನ್ನು ಧಾರಾಳವಾಗಿ ಬಳಸಿಕೊಂಡಿದ್ದಾರೆ.

ಬಸವ ಪುರಾಣದ ಪ್ರಯೋಗಗಳು : ಬಸವ ಪುರಾಣ ರಚಿತವಾದ ಕಾಲದಲ್ಲಿ (ಸು ೧೪ ನೇ ಶತಮಾನ) ಕನ್ನಡ ಸಾಹಿತ್ಯವು ಮಾರ್ಗದಿಂದ ದೇಸಿಗೆ ಸಂಕ್ರಮಣ ಹೊಂದಿ ಮಾರ್ಗಕಾವ್ಯದ ಪ್ರಭಾವಗಳು ಈ ಯುಗದ ಮೇಲೆ ಮೂಡಿದ್ದರೂ ದೇಸಿಗೆ ವಿಶಿಷ್ಟವಾದ ಸ್ವಾತಂತ್ರ್ಯವು ಛಂದಸ್ಸು, ಭಾಷೆಯಲ್ಲಿ ತಲೆದೋರಿವೆ. ಬಸವ

ಪುರಾಣದಲ್ಲಿ ಅದು ಗೋಚರಿಸುತ್ತದೆ. ಇಲ್ಲಿಯ ವಿಶಿಷ್ಟ ಪದ ಪ್ರಯೋಗಗಳನ್ನು BP ಎಂಬ ಸಂಕೇತದ ಮೂಲಕ ಮಿಶನರಿಗಳು ಬಳಸಿದರು. ಕೆಲವನ್ನು ಇಲ್ಲಿ ಅವಲೋಕಿಸಬಹುದು.

ಚೋಳಿ: 'ಚೋಳಿಯಣ್ಣ' ಬಿಜ್ಜಳನ ಮಂತ್ರಿಗಳಲ್ಲೊಬ್ಬ. ಬಿಜ್ಜಳನ ಮಂತ್ರಿಗಣವು ಬಸವಣ್ಣನ ದಂಡನಾಯಕನ ಬಗೆಗೆ ದೂರಿತೆಂದು ಹೇಳುವಲ್ಲಿ ಬಸವ ಪುರಾಣವು ಆ ಮಂತ್ರಿಗಳ ಹೆಸರುಗಳನ್ನು ಹೇಳುತ್ತದೆ. ಕರವೀರ, ಕರವೂರ, ಕರಿಕಾಲ, ನರೇದ್ರ, ಚೋಳಿಯಣ್ಣ, ಕುಂದ ತಮಿಳುಭೂಪಾಳ, ಹೆಮ್ಮಡಿಯುಗ್ರ, ಚಂಡಿ. ಮೋಳಿ ಗರಸ ಬಿಜ್ಜಳನ ಮಂತ್ರಿ ಮಂಡಲದ ಎಲ್ಲ ಹೆಸರುಗಳು ಉಕ್ತವಾಗಿರುವುದು ವಿಶೇಷ.

ಅರುಹ: ಎಂಬ ಪದಕ್ಕೆ ಅರ್ಹ: ಯೋಗ್ಯ ಎಂಬರ್ಥದ ಜೊತೆಗೆ 'ಜಿನ' ಎಂಬರ್ಥವನ್ನು ಕಿಟೆಲ್ ಕೋಶವು ಕೊಡುತ್ತದೆ. 'ಅರಸನೊಕ್ಕೈ ಯೋಗರಕೆ ತಾನರುಹನುಳಿ ದಂತೀ ಧರಿತ್ರಿಗೆ ನಿರುತವಧಿಪತಿ ನೀವೆಯಲ್ಲಾ ಬಸವ ಮಂತ್ರೀಶ' (ಬಸ ಪು ೫-೧೦) ಈ ಪದವನ್ನು ಕವಿ ಜಾಣ್ಮೆಯಿಂದ ಪ್ರಯೋಗಿಸಿದ್ದಾನೆ.

ಅಗ್ರೇಶ್ವರ-ಅತ್ಯಂತ ಶ್ರೇಷ್ಠನಾದವನು. ಬಿಜ್ಜಳನ ಮಂತ್ರಿಮಂಡಲದಲ್ಲಿ ಹನ್ನೆರಡು ಜನ ಮಂತ್ರಿಗಳಿದ್ದು ಬಿಜ್ಜಳನು ಬಸವೇಶ್ವರನನ್ನು ಕರೆದು 'ಮನ್ನಣೆವೆತ್ತಪನ್ನಿಬ್ಬರು ಮಹಾಮಾತ್ಯರೊಳಗಗ್ರೇಶ್ವರನ ನೀನೆಂದು ತಿಳಿಸಿದನಂತೆ' (೧- ೧೬) ಅಗ್ರ+ಈಶ್ವರ

'ಲಿಪಿ' ಪದಕ್ಕೆ 'ಅಕ್ಷರದ ಬರಹಂ' ಎಂಬರ್ಥವನ್ನು ಕೊಟ್ಟು ಅದಕ್ಕೆ ಕಿಟೆಲ್ ಬಸವ ಪುರಾಣದ ಉದಾಹರಣೆಯನ್ನು ಕೊಟ್ಟಿದ್ದಾನೆ. ಬಸವ ಪುರಾಣ ಕರ್ತೃ ತನ್ನ ಕಾಲಕ್ಕೆ ಈ ನಾಡಿನಲ್ಲಿ ಉಪಲಬ್ಧವಿದ್ದ ಲಿಪಿಗಳನ್ನು ಇಂತು ತಿಳಿಸುತ್ತಾನೆ

> ತೆಲುಗುಲಿಪಿ ನಾಗರದ ಲಿಪಿ, ಗ್ರಂಥಲಿಪಿ
>
> ಹಳಗನ್ನಡದಲಿಪಿ, ದ್ರಾವಿಳಲಿಪಿಯು, ಪಾರಿಸಲಿಪಿಯು, ಲಾಟಲಿಪಿ
>
> ಮೊದಲಾದ ಹಲವು ಲಿಪಿಗಳ ನೋದಬಲ್ಲಗ್ಗಳದ ಕರಣೆಕರಂ ಕರೆಸಿ ಬಿಜ್ಜಳ ಮಹೀಪತಿ

'ಗ್ರಂಥಲಿಪಿ'ಗೆ ಬರೆಹದ ಲಿಪಿ ಎಂದು ಕರೆದಿದ್ದಾರೆ. ಇಂತಹ ವಿಷಯಗಳು ಲಿಪಿಯ ಇತಿಹಾಸವನ್ನು ಬರೆಯುವವರಿಗೆ ಚಾರಿತ್ರಿಕವಾಗಿ ಒಳ್ಳೆಯ ಸಾಮಗ್ರಿಯನ್ನೊದಗಿಸುವಲ್ಲಿ ಸಂದೇಹವಿಲ್ಲ.

'ಮಠ' ಎಂಬ ಪದವು 'ಭಕ್ತನ ಮನೆ' ಎಂಬರ್ಥದಲ್ಲಿ ಬಸವ ಪುರಾಣದಲ್ಲಿ ಯುಕ್ತವಾದುದನ್ನು ಕಿಟೆಲ್ ಕೋಶವು ತೋರಿಸುತ್ತದೆ. 'ಪಾಂಡುರಂಗ' ಎಂಬ ಪದಕ್ಕೆ ಕಿಟೆಲ್ ಕೋಶದಲ್ಲಿ ಪಾಂಡು+ರಂಗ ಎಂದು ಬಿಡಿಸಿ ಬರೆದು ಅದು 'ವ್ಯಕ್ತಿಯ ಹೆಸರು' ಎಂದು ಹೇಳಿ ಬಸವಪುರಾಣದ ಪದವನ್ನು ಉದಾಹರಿಸಿದ್ದಾನೆ. ಇತರ ಅರ್ಥಗಳಲ್ಲಿ 'ಕೃಷ್ಣ' ಎಂದು ದಾಖಲಿಸಿದ್ದಾರೆ. 'ಪಾಂಡುರಂಗ' ಎಂದರೆ 'ಶಿವ' ಎಂಬ ಅರ್ಥವೂ ಇದೆ. ಕಿಟೆಲ್‌ನು ಬಸವಪುರಾಣದಿಂದ ಧಾರಾಳವಾಗಿ ಉದಾಹರಣೆಗಳನ್ನು ತೆಗೆದುಕೊಂಡಿರುವುದರಿಂದ ಬಸವ ಪುರಾಣದ ಅಭ್ಯಾಸಕ್ಕೆ ಕಿಟೆಲ್ ಕೋಶವು ಸಾಕಷ್ಟು ಸಹಾಯ ಮಾಡುತ್ತದೆ.

ದಾಸ ಸಾಹಿತ್ಯದ ಉದ್ಧರಣೆಗಳನ್ನು ಕುರಿತು ದಾಸ ಸಾಹಿತ್ಯ ಕೀರ್ತನೆ, ಸುಳಾದಿ, ಉಗಾಭೋಗ ಈ ಮುಖ್ಯ ರೂಪಗಳಲ್ಲಿದೆ. ವಿಷಯಾನುಗುಣವಾಗಿ ಆಯ್ದುಕೊಳ್ಳುವ ರೀತಿಯಲ್ಲಿ ಅದು ಭಾವಗೀತೆಯ ಲಕ್ಷಣವನ್ನು ಸ್ವೀಕರಿಸಿದೆ. ಕೀರ್ತನೆಯಲ್ಲಿ ರಾಗ, ತಾಳಬದ್ಧವಾಗಿ ಪಲ್ಲವಿ, ಅನುಪಲ್ಲವಿ, ನುಡಿಗಳ ಸಂಯೋಜನೆಯಿರುತ್ತದೆ. ಕಿಟೆಲ್ ದಾಸ ಸಾಹಿತ್ಯದಿಂದ ಸು. ೨೫೦ ಕ್ಕೂ ಹೆಚ್ಚು ಪದಗಳನ್ನು ತೆಗೆದುಕೊಂಡಿದ್ದಾರೆ. ಈ ರೀತಿ ಉಲ್ಲೇಖಿತವಾದ ಪದಗಳು ವಿಶೇಷವಾಗಿ ಅಚ್ಚಕನ್ನಡದವುಗಳಾಗಿರುವುದು ವಿಶೇಷ. ಕೆಲವನ್ನು ಗಮನಿಸಬಹುದು.

ಎತ್ತು - 'ಎತ್ತಿಗೋಣೆ ಬಲ್ಲದೆ ಎತ್ತಿನ ಆಮುಃಖವ' (ಎತ್ತಿ> ಎತ್ತು)

ಕಲ್ಲು - 'ಸೇವೆ ಅ ಯದ ದಣಿಯು ಕಲ್ಲಿನ ದಣಿಯು'

ಬೆಣ್ಣೆ - 'ಕಡಗೋಲು ಹೊ ತಾಗಿ ಬೆಣ್ಣೆ ತೋ ವದೇನೋ ' (ಬೆಳ್+ ನೆಯ್)

ಹೇನ್ - 'ಹೇನು ಬಲ್ಲುದೆ ಮುಡಿದ ಹೂವಿನ ಪರಿಮಳವ' (ಪೇನ್> ಹೇನ್)

ಇಲ್ - 'ಹೀನತನವ ಬಿಡಲಿಲ್ಲ, ಸ್ವಾನುಭವ ಕೊಡಲಿಲ್ಲ

ಕಮಲೇಶನನ್ನು ಒಂದು ಬಾರಿ, ಸ್ವಾಮೀ ಎನ್ದು ನೆನೆವುದಿಲ್ಲ

ಅನ್ತಕನದೂತರಿಕ ಕಿಂಚಿತ್ತು ದಯವಿಲ್ಲ

(ಇಲ್- ನಿಷೇಧಾತ್ಮಕ, ಇರ್- ಇಲ್)

ಬಹ - 'ದುಷ್ಟ ವ್ಯಾಘ್ರವ ಕೈಯ್ಯ ಮುಟ್ಟಿ ಹಿಡಿತರಬಹುದು

ಅಟ್ಟಬಹಮದಕರಿಯ ಕಟ್ಟಬಹುದು

ಕೃಷ್ಣಸರ್ಪವ ಹುತ್ತ ಕಲಕಿ ಜೀವಿಸಬಹುದು

ದುಷ್ಟಾತ್ಮರಾದವರ ಬಿಟ್ಟು ಕಳೆಮನವೇ

(ಬಹ > ಬಾಹ > ಬಹುದು / ಬಪ್ಪ)

ಅಕ್ಕರೆ - 'ಒಕ್ಕಲಿಲ್ಲದ ಊರು, ಮಕ್ಕಳಿಲ್ಲದ ಮನೆಯು

ಅಕ್ಕ ಯಿಲ್ಲದ ತವರು ಇದ್ದಷ್ಟು ಫಲವೇನು'

(ತ್ರ್ಕೆ > ಅಕ್ಕ > ಅಕ್ಕರೆ)

ಕತ್ತೆ - 'ಕತ್ತೆ ಬಲ್ಲುದೆ ಹೊತ್ತ ಕಸ್ತೂರಿಯ ಪರಿಮಳ'?

(ಕಟ್ತೆ > ಕತ್ತೆ)

ಕಕ್ಕಸ - 'ಕಕ್ಕಸದ ದೂತರ್ ಬನ್ದು ಲೆಕ್ಕವಾಯಿತು

ಹೋಲೆ ಡೆನ್ದರೆ ಪಕ್ಕೋರಲ್ಲ; ಬಿಡಿಸೋರೇನೋ ಮನುಜ

(ಸಂ - ಕರ್ಕಶ > ಕಕ್ಕಸ)

ಹೀಗೆ ಕಿಟೆಲ್ ಸಂದರ್ಭಾನುಸಾರಿಯಾಗಿ ಶಬ್ದಾರ್ಥ ವಿವೇಚಿಸುವಾಗ ದಾಸ ಸಾಹಿತ್ಯದಿಂದ ಉದ್ಧರಣೆಗಳನ್ನು ಕೊಡುತ್ತಾರೆ.

ಶಬ್ದಮಣಿದರ್ಪಣದ ಪ್ರಯೋಗಗಳನ್ನು ಕುರಿತು-ಶಬ್ದಾರ್ಥದ ಸ್ವರೂಪವನ್ನು ವಿಶ್ಲೇಷಿಸುವಾಗ ಕಿಟೆಲ್‌ರು ಕನ್ನಡದ ಪ್ರಮಾಣಭೂತ ವ್ಯಾಕರಣವಾದ ಶಬ್ದಮಣಿದರ್ಪಣವನ್ನು ಧಾರಾಳವಾಗಿ ಉದ್ಧರಿಸುತ್ತಾರೆ. ಕೆಲವನ್ನು ಅವಲೋಕಿಸಬಹುದು.

ಅಕ್ಷರವೃತ್ತಿ- ಪದದಲ್ಲಿರುವ ಅಕ್ಷರಗಳ ಸಂಖ್ಯೆ 'ದಿಟವಾದ ನಾಮಂಗಳ ಅಕ್ಷರಗಳ ಸಂಖ್ಯೆ' 'ದಿಟವಾದ ನಾಮಂಗಳ ಅಕ್ಷರವೃತ್ತಿಗೆ- ಪ್ರಾಮರಂ ಹೊತ್ತಗೆ ಕವಳಿಗೆ ಕಟ್ಟತ್ತಿಗೆ (ಶಮಧಾ ೭೬ ಪ್ರಯೋಗ) ಅಕ್ಷರ+ವೃತ್ತಿ 'ಅಡರ್' ಹತ್ತು, ಹತ್ತಿಕೊಳ್ಳು 'ಸಮಾಸದೊಳಮ್ ಅಸಮಾಸದೊಳಂ ರೇಫೆ ಅಡರ್ದ ಅಕ್ಕರಕ್ಕೆ ದ್ವಿತ್ವಮ್ ಅಕ್ಕು' (೨೧೮) 'ಕವಲ್'-ರೆಂಬೆ, ಟಿಸಿಲು, ಎರಡು ಭಾಗ. 'ಕವಲ್ ಕವಲ್ತು ಪಲವುಂ ಕೊಮ್ಬಾದುವು 'ಕವಿ' ಹೊದಿಕೆ, ಮುಚ್ಚು ಆವರಣ 'ಕವಿ ಪೊ ಗಿರೆ ಕೀಳೊಳಗಿರೆ ಯವಿರಳ ಮಾತುರಗ ಮುಕವ್ವೊ ನೃಪಮಂದಿರವೋ (ಶಮಧಾ ೧೧೯) ಪುಗುತೆ- ಪ್ರವೇಶ ಬೀ -ಕೊಡು ಕೇಶಿರಾಜನ ಧಾತು ಪಾಠದಲ್ಲಿ ಇವರ ಉಲ್ಲೇಖವಿದೆ. ಬೀರು-ಸ್ವೇಚ್ಛಾ ಪ್ರಾದನೇ (ಸ್ವಸಂತೋಷದಿಂದ ಕೊಡು) 'ಪುಲ್'-ಪುಲ್ಲು ಹುಲ್ಲು 'ಮರಗಿಡಬಳ್ಳಿ ಪುಲ್' ಪೊದ (೧೧೯)

ಮಿಶನರಿಗಳಿಗೆ ಚಾರಿತ್ರಿಕ ದೃಷ್ಟಿಕೋನ ಮುಖ್ಯವಾಗಿರಲಿಲ್ಲ. ಭಾಷಾ ರಚನೆಯೇ ಮುಖ್ಯವಾಗಿತ್ತು. ಉದಾ- ಕಿಟೆಲ್ ಕೊಟ್ಟಿರುವ 'ಬಹ' ರೂಪ 'ಬರ್' ದಿಂದ ನಿಷ್ಪತ್ತಿಯಾಗಿದೆ ಅದು ಬರ್ ಅಡಿಯಲ್ಲಿ ಬರಬೇಕಾಗಿತ್ತು. ಆದರೆ ಕಿಟೆಲ್ 'ಬಹ' ಪ್ರತ್ಯೇಕ ನಮೂದಾಗಿ ಕೊಟ್ಟಿರುವುದನ್ನೂ ಗಮನಿಸಬೇಕು.

ಹೀಗೆ ಮಿಶನರಿಗಳು ಶಬ್ದಾರ್ಥವನ್ನು ವಿವೇಚಿಸುವಾಗ ಸಂದರ್ಭಾನುಸಾರವಾಗಿ ಪ್ರಾಚೀನಕಾವ್ಯಗಳ ವಾಕ್ಯವನ್ನೋ, ಸಂಧಿಯನ್ನೊ ಹೆಸರಿಸುತ್ತಾರೆ. ಇದರಿಂದ ಕೋಶಗಳ ಸತ್ವ ಹಾಗೂ ಶಬ್ದಾರ್ಥಗಳ ಖಚಿತತೆ ಹೆಚ್ಚುತ್ತದೆ. ಹಾಗೂ ಆಯಾ ಕಾವ್ಯಗಳ ಅಧ್ಯಯನಕ್ಕೂ ಮಿಶನರಿ ಕೋಶಗಳು ತುಂಬ ನೆರವಾಗುತ್ತವೆ.

೫.೦೨ ಗಾದೆಗಳು

ಜನಪದ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಗಾದೆಯೂ ಒಂದು. ಗಾದೆಗಳು ಜನಪದರ ಬದುಕಿನಲ್ಲಿ ಹಾಸು ಹೊಕ್ಕಾಗಿ ಅವರ ಬದುಕಿನ ಅನುಭವಗಳನ್ನು ಅಭಿವ್ಯಕ್ತಿಸುತ್ತವೆ. ಕಿರಿಯದರಲ್ಲಿ ಹಿರಿದಾದ ಅರ್ಥ

ತುಂಬಿದ ಗಾದೆಗಳು ಜೀವನಾನುಭವದ ಹರಳುಗಳು. ಗಾದೆಯ ಲಕ್ಷಣಗಳನ್ನು ಕುರಿತು ಬರೆಯುತ್ತ ಜೆ. ಪಿ. ಕೆಲ್ಸೊ ಅವರು ನಾಲ್ಕು ಗುಣಗಳನ್ನು ಹೆಸರಿಸುತ್ತಾರೆ. ಸಂಕ್ಷಿಪ್ತತೆ, ವಿವೇಕಪೂರ್ಣತೆ ಅಥವಾ ಸಂವೇದನಾಶೀಲತೆ, ತೀಕ್ಷ್ಣತೆ, ಮತ್ತು ಜನಪ್ರಿಯತೆ [೨]. ಗಾ ದೆಗೆ ಸಂವಾದಿಯಾಗಿ ಲೋಕೋಕ್ತಿ, ಸೂತ್ರ ಸಾರೋಕ್ತಿ, ಸೂಕ್ತಿ ನಾಣ್ಣುಡಿ, ಜಾಣ್ಣುಡಿ, ನಿಯಮ, ಹೇಳಿಕೆ ಇತ್ಯಾದಿ ಪರ್ಯಾಯ ನಾಮಗಳಿವೆ [೩]. ಗಾದೆಗಳ ಸ್ವರೂಪವನ್ನು ಕುರಿತು ಡಾ. ಎಂ. ಚಿದಾನಂದಮೂರ್ತಿಯವರು ಹೇಳುವಂತೆ 'ಅವುಗಳಲ್ಲಿ (ಗಾದೆಗಳಲ್ಲಿ) ಜೀವನೋತ್ಸಾಹವಿದೆ, ವ್ಯಂಗ್ಯವಿದೆ, ಹಾಸ್ಯವಿದೆ, ನಲಿವಿದೆ, ವಿವೇಕದ ಬೋಧನೆಯಿದೆ. ಹಾಗೆಯೇ ಆಳವಾದ ನೋವೂ ಇದೆ, ವಿಷಾದವೂ ಇದೆ. ಒಂದು ಜನಾಂಗವನ್ನು ಅರ್ಥಮಾಡಿಕೊಳ್ಳಲು ಅವರು ಆಡುವ ಭಾಷೆಯನ್ನು ಅಧ್ಯಯನ ಮಾಡಬೇಕೆಂದು ಹೇಳುತ್ತಾರೆ. ಒಂದು ಜನಾಂಗದ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ಭಾಷೆಯಂತೆಯೇ ಅವರು ಬಳಸುವ ಗಾದೆಗಳನ್ನು ಅಧ್ಯಯನ ಮಾಡಬೇಕು. ಗಾದೆಗಳು ನಿಜವಾದ ಅರ್ಥದಲ್ಲಿ ಜನಜೀವನದ ಪ್ರತಿಬಿಂಬ [೪]. ಗಾದೆಗಳು ಸಾಂಪ್ರದಾಯಿಕ ಮೌಲ್ಯಗಳಿಗೆ ರಕ್ಷಣೆಕೊಟ್ಟಿವೆ.

ಕರ್ನಾಟಕದಲ್ಲಿ ಗಾದೆಗಳ ಸಂಗ್ರಹದ ಕಾರ್ಯ ಆರಂಭವಾದುದು ಮಿಶನರಿಗಳಿಂದ. ಕೋಶಸಿದ್ಧತೆಗಾಗಿ ಅವರು ನಾಡಿನ ನಾನಾ ಭಾಗಗಳಲ್ಲಿ ಸುತ್ತಾಡಿ ಪದಗಳನ್ನು ಪದಪ್ರಯೋಗಗಳನ್ನು ಸಂಗ್ರಹಿಸಿದುದು ಗಮನಿಸಬೇಕಾದ ಸಂಗತಿ. ಕನ್ನಡಿಗರ ಜನಜೀವನದ ಎಷ್ಟೋ ಅಂಶಗಳು ಗಾದೆಗಳಲ್ಲಿ ಹುದುಗಿರುವುದರಿಂದ ಅವುಗಳನ್ನು ಪರಿಚಯಿಸಿಕೊಳ್ಳಲು ಗಾದೆಗಳ ಸಂಗ್ರಹದ ಕಡೆಗೆ ಹೆಚ್ಚು ಆಸಕ್ತಿವಹಿಸಿದರು. ಕೋಶದಲ್ಲಿ ಗ್ರಾಮ್ಯ ಶಬ್ದಗಳು, ದೇಶ್ಯ ಶಬ್ದಗಳು ಬಂದಾಗ ಅದರ ವಿಶದತೆಗೆ ಹಾಗೂ ಶಬ್ದಾರ್ಥ ಸ್ಪಷ್ಟೀಕರಣಕ್ಕೆ ಗಾದೆಗಳನ್ನು ಉದಾಹರಿಸುತ್ತಾ ಹೋಗುತ್ತಾರೆ. ರೀವ್ ತನ್ನ ಕನ್ನಡ ಇಂಗ್ಲಿಶ್ ಕೋಶದಲ್ಲಿ ಶಬ್ದಾರ್ಥ ವಿವೇಚಿಸುವಾಗ ಸಂದರ್ಭಾನುಸಾರವಾಗಿ ಗಾದೆಗಳನ್ನು ದಾಖಲಿಸಿರುವನು. ಕಿಟೆಲ್ ತನ್ನ ಕೋಶದಲ್ಲಿ ರೀವ್ ಬಳಸಿದ ಗಾದೆಗಳನ್ನು ಬಳಸಿಕೊಂಡನಲ್ಲದೆ ಅನೇಕ ಹೊಸ ಗಾದೆಗಳನ್ನು ಸೇರ್ಪಡಿಸಿದ್ದಾನೆ. ಕಿಟೆಲ್ ಕೋಶದ ಗಾದೆಗಳು ಕೋಶದ ಘನತೆಯನ್ನು ಹೆಚ್ಚಿಸಿವೆ. ಪ್ರಾಯಶಃ ಜಗತ್ತಿನ ಬೇರಾವ ಶಬ್ದಕೋಶದಲ್ಲೂ ಇಷ್ಟು ಗಾದೆಗಳನ್ನು ಬಳಸಿರುವ ಉದಾಹರಣೆ ಸಿಗುವುದಿಲ್ಲ.

ಗಾದೆಗಳ ಸಂಗ್ರಹವನ್ನು ಕುರಿತು ಕಿಟೆಲ್‌ರು ತಮ್ಮ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದ್ದಾನೆ. 'ಇಲ್ಲಿಯ ಗಾದೆಗಳು ಮಹಾರಾಷ್ಟ್ರದ ದಕ್ಷಿಣಭಾಗ, ಮೈಸೂರು ಹಾಗೂ ದಕ್ಷಿಣ ಕನ್ನಡ ಪ್ರದೇಶಗಳಿಂದ ಸಂಗ್ರಹಿತವಾದವುಗಳು. ಕೋಶದಲ್ಲಿಯ ಪದಗಳಿಗೆ ಅರ್ಥದ ವಿಷಯವನ್ನು ಪ್ರಸ್ತಾಪಿಸುತ್ತ ಇಲ್ಲಿಯ ಬಹುತೇಕ ಪದಗಳು ಅರ್ಥವನ್ನು ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಕೃತಿಗಳ ನಿದರ್ಶನಗಳಿಂದ ಮಾತ್ರವಲ್ಲದೆ ಗಾದೆಗಳಿಂದಲೂ ವಿವರಿಸಲಾಗಿದೆ ಎಂದಿದ್ದಾರೆ[೫] ಆದ್ದರಿಂದ ಅವನು ಕೋಶದಲ್ಲಿ

ಗಾದೆಗಳನ್ನು ಬಳಸುವ ಕಾರಣ ಸ್ಪಷ್ಟವಾದಂತಾಯಿತು. ಕಿಟೆಲ್ ಕೋಶದಲ್ಲಿ ಬಳಕೆಯಾದ ಕೆಲವು ಗಾದೆಗಳ ಬಗೆಗೆ ವಿವೇಚಿಸಬಹುದಾಗಿದೆ.

ಗಾದೆಗಳು ಗದ್ಯ ಪದ್ಯಗಳೆರಡರಲ್ಲೂ ರಚಿತವಾಗಿವೆ. ಛಂದೋಬದ್ಧತೆ, ಪ್ರಾಸಾನುಪ್ರಾಸಗಳ ಯೋಜನೆ, ಅಲಂಕಾರಿಕ ಅಭಿವ್ಯಕ್ತಿ ಇವು ಸಾಮಾನ್ಯವಾಗಿ ಕಾಣುವ ಕಾವ್ಯಗುಣಗಳು. ಗದ್ಯದಂತೆ ತೋರುವ ಗಾದೆಗಳಲ್ಲಿಯೂ ಲಯ ಇದ್ದೇ ಇರುತ್ತದೆ. ಇದರಿಂದ ಇವುಗಳನ್ನು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಲು ಅನುಕೂಲವಾಗುತ್ತದೆ.

'ಹೆಣ್ಣು ಮಕ್ಕಳಿಗೆ ಹಾಡಕಲಿಸಿದವರಿಲ್ಲ
ನಾಯಿಗೆ ಬೊಗಳ ಕಲಿಸಿದವರಿಲ್ಲ'

'ಪಾಲು ಮಾಡಿದರೆ ಹಾಳು'

'ನಾಯಿ ಬಾಲ ಡೊಂಕು'

ಇಂತಹ ಸ್ವಭಾವೋಕ್ತಿ ಹೋಲಿಕೆಗಳು ಮೂಲ ಭಾವದ ಅರ್ಥಸ್ಪಷ್ಟತೆಗಾಗಿ ಬರುತ್ತವೆ. ಇವೆಲ್ಲವುಗಳಲ್ಲಿ ಸತ್ವವಿದೆ. ಗಾದೆಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು ಅಡಕವಾಗಿರುತ್ತವೆ.

'ನಾಲ್ವತ್ತರ ಮೇಲೆ ನಡಿಕೆ; ಎಂಬತ್ತರ ಮೇಲೆ ಬಡಿಕೆ
ತೊಂಬತ್ತಕ್ಕೆ ಶಯನ; ನೂರಕ್ಕೆ ಮರಣ'

'ನೀಚರ ಸಭೆಗೆ ಹೋದರೆ; ನಾಚಿಕೆಗೇಡಾಗುವುದು'

'ಸವತೆಕಾಯಿ ಕಹಿಯಾದರೆ; ಸವತಿ ಏನು ಮಾಡುವಳು'

'ಅಕ್ಕರೆ ಇಲ್ಲದ ಉಪ್ಪರಿಗೆಗಿಂತ: ಅಕ್ಕರೆ ಇರುವ ತಿಪ್ಪೇಲೇಸು'

ಇವುಗಳ ಪ್ರತಿಯೊಂದರ ಹಿಂದೆಯೂ ಜನಪದ ಜೀವನದ ಅಗಾಧ ಸಂಸ್ಕಾರವಿದೆ. ಸೂಕ್ಷ್ಮ ಸಂವೇದನೆಯಿದೆ. ಸಾಮಾಜಿಕ ಪ್ರಜ್ಞೆ ಇದೆ. ಸಮುದಾಯಗಳಲ್ಲಿ ನಡೆಯುತ್ತಿರುವ ಸಾಮಾಜಿಕ ಏಣಿ ಶ್ರೇಣಿ ಗಾದೆಗಳಲ್ಲಿ ಹುದುಗಿಕೊಂಡಿರುತ್ತವೆ.

'ದೊಡ್ಡವನ ಹೆಂಡತಿ ಎಲ್ಲರಿಗೂ ಅತ್ತೆ
ಬಡವನ ಹೆಂಡತಿ ಎಲ್ಲರಿಗೂ ಸೊಸೆ'

'ಬಡವನ ಸಿಟ್ಟು ದವಡೆಗೆ ಮೂಲ'

'ಬಡದಾಸನಿಗೆ ನಾಮವೇ ಆಧಾರ'

ಉಚಿತವಾದ ಹೋಲಿಕೆಯಿಂದ ಸಮಾಜದ ಪರಿಸ್ಥಿತಿಯನ್ನು ಅದರ ಹೇಯವನ್ನು ಬಹುವಾಗಿ ಪ್ರತಿನಿಧಿಸುತ್ತದೆ. ಗಾದೆಗಳಲ್ಲಿ ಕಾಣಸಿಕೊಳ್ಳುವ ಮತ್ತೆರಡು ವಿಶೇಷಗಳೆಂದರೆ ವಿಡಂಬನೆ ಮತ್ತು ಹಾಸ್ಯ.

'ಸಣ್ಣ ತಲೆಗೆ ದೊಡ್ಡ ಮುಂಡಾಸ'

'ಮನೆ ಮುಂದೆ ಹಳ್ಳ ಹರಿದರೂ ಕುಡಿಯಲಿಕ್ಕೆ ನೀರಿಲ್ಲ'

'ಬಿಕ್ಕಿ ಬಿಕ್ಕಿ ಅತ್ತರೆ ಬೀಸುಕಲ್ಲು ತಿರುಗೀತೆ'

'ಬಾಳೇ ಹಣ್ಣಿಗೆ ಕರಗಸವು ಯಾಕೆ?'

'ಹಪ್ಪಳಾ ಮುರಿಯೋಕೆ ಡೊಗ್ಗಾಲು ಹಾಕಬೇಕೆ'?

ಇಂತಹ ಹಲವಾರು ಹಾಸ್ಯ ಚಿತ್ರಗಳು ನಿತ್ಯ ಜೀವನದ ಅನುಭವ ಕೋಶದಿಂದ ತೆಗೆದಂತಾಗಿದೆ. ಅವು ಅರ್ಥ ಗರ್ಭಿತವಾಗಿವೆ. ಗ್ರಾಮೀಣ ಪ್ರದೇಶದ ವ್ಯಾಪಕ ಕೆಲಸವೆಂದರೆ ವ್ಯವಸಾಯ. ಅದರ ವಿವಿಧ ಮಗ್ಗಲುಗಳಾದ ಮಳೆ, ಬೆಳೆ, ಬಿತ್ತನೆ ಮುಂತಾದ ವಿಷಯಗಳಿಗೆ ಸಂಬಂಧ ಪಟ್ಟ ಅಂಶಗಳು ಗಾದೆಗಳಲ್ಲಿ ವ್ಯಕ್ತವಾಗಿವೆ. ಕಿಟೆಲ್ ಕೋಶದಲ್ಲಿ ಬಳಕೆಯಾದ ಕೃಷಿ ಗಾದೆಗಳನ್ನು ಈ ಭಾಗದ ಕೊನೆಯಲ್ಲಿ ಕೊಡಲಾಗಿದ. ಅವುಗಳಲ್ಲಿ ಕೃಷಿಕರ ಅನುಭವ ಅಡಗಿದೆ. ಆ ಬಗೆಯ ಗಾದೆಗಳು ವಿಶೇಷ ಅಧ್ಯಯನಕ್ಕೆ ಬೇಕಾದಷ್ಟು ಸಾಮಗ್ರಿ ಒದಗಿಸುತ್ತದೆ.

ಒಂದು ವಸ್ತು ಅಥವಾ ಪ್ರಾಣಿಯ ಬಗೆಗೆ ವಿವರಣೆ ಕೊಡುವಾಗ ಅದರ ಗುಣ ಸ್ವಭಾವಗಳಿಗೆ ತಕ್ಕಂತೆ ಎಲ್ಲ ಗಾದೆಗಳನ್ನು ಒಂದೆಡೆಹಾಕುತ್ತಾರೆ. ಉದಾ- ಆನೆಯ ಬಗೆಗೆ ವಿವರಣೆ ಕೊಡುವಾಗ ಕಾಡಾನೆ, ಗಣ್ದಾನೆ, ನೀರಾನೆ, ಪಟ್ಟದಾನೆ, ಪಿಡಿಯಾನೆ, ಪೇರಾವೆ, ಸಲಗಾತಿ, ಸೊರ್ಕಾನೆ, ಹೆಣ್ಣಾನೆ ಎಂಬ ಆನೆಯ ವಿಧಗಳನ್ನು ಹೇಳಿ ಆನೆಗೆ ಸಂಬಂಧಿಸಿದಂತೆ ಗಾದೆಗಳನ್ನು ಕೊಡುವರು.

'ಆನೆ ನೀರಾಟದಲ್ಲಿ ಮೀನ ಕಂಡು ಅಂಜುವುದೆ?'

'ಆನೆ ಕಣ್ಡು ಶ್ವಾನ ಬೊಗುಳಿದ ಹಾಗೆ'

'ಆನೆ ಬೆಣ್ದಾದರೆ ಕೊಟ್ಟಿಗೇ ಹೊಕ್ಕೀತೇ?'

'ಆನೆಯ ಕಣ್ಣು ಗೊಂಬೆಯ ತಲೆಕೆಳಗು'

'ಆನೆಗೆ ಗುಂಗುರು ಕಾಡಿದ ಹಾಗೆ'

'ಆನೆ ತಿಂಬೋದು ಸೊಪ್ಪು: ಇರುವೆ ತಿಂಬೋದು ಸಕ್ಕರೆ'

'ಆನೆ ಮಲಗಿದರೆ ಆಡಿನಷ್ಟು ಉದ್ದವಿಲ್ಲವೇ?'

'ಆನೆ ಮೆಟ್ಟಿದ್ದೇ ಸಂದು; ಸೆಟ್ಟಿ ಬಿಟ್ಟಿದ್ದೇ ಪಟ್ಟಣ'

'ಆನೆ ಮೇಲೆ ಹೋಗುವವ ಸುಣ್ಣ ಕೇಳಿದ ಹಾಗೆ'

'ಆನೆಪಿತ್ತ? ಆಡುಪಿತ್ತ'

ಇವುಗಳಿಂದ 'ಆನೆ'ಗೆ ಸಂಬಂಧಿಸಿದಂತೆ ಸ್ಪಷ್ಟ ಚಿತ್ರಣ ಸಿಗುತ್ತದೆ. ಅದರಂತೆ 'ಆಳು' ಶಬ್ದಕ್ಕೆ ಕಿಟೆಲ್ ಕಾಲಾಳು, ಬಿಲ್ಲಾಳು, ಕೂಲಿಯಾಳು, ಸಾವಿರಾಳು ಎಂದು ಹೇಳಿ ಅದಕ್ಕೆ ಸಂಬಂಧಿಸಿದ ಗಾದೆಗಳನ್ನು ಹೇಳುವನು.

'ಆಳಾಗಬಲ್ಲವ ಅರಸಾಗಬಲ್ಲ'

'ಆಳಿಲ್ಲದವನಿಗೆ ಅರಸುತನವು ಯಾಕೆ?'

'ಆಳು ಕಟ್ಟಿದವನೇ ಅರಸು; ಕೂಳು ಇಕ್ಕಿದವನೇ ದಾತು'

'ಆಳೂ ಆಗಬೇಕು; ಅರಸೂ ಆಗಬೇಕು

'ಆಳಾಗಿ ದುಡಿಯಬೇಕು; ಅರಸನಾಗಿ ಉಣ್ಣಬೇಕು'

'ಹಾಸಿಗೆ' ಎಂಬುದಕ್ಕೆ ಶಯನ, ಶಯ್ಯೆ, ಹಾಸಿಕೆ ಎಂದು ಹೇಳಿ ಅದಕ್ಕೆ ಸಂಬಂಧಿಸಿದ ಗಾದೆಗನ್ನು ಹೇಳುವನು.

'ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು'

'ಹಾಸಿಗೆ ಹಾಸಲಿಕ್ಕೆ ತಿಳಿಯದವಳು ದೋಸೆ ಮಾಡ್ಯಾಳೇ?

'ಬಾಸಿಗ ಆದರೆ ಹಾಸಿಗೆಯಲ್ಲಿ ಯಾಕೆ?

'ವಾಸೀಲಿ ಸಿಕ್ಕುವ ಜೀನಸು ಹಾಸಿಗೆಯಲ್ಲಿ ಆದರೂ ಕೊಡ್ತಾನು

'ಹಸಿವೆಗೆ ಬಾಯ್ಸುವಿ ಬೇಡ; ನಿದ್ರೆಗೆ ಹಾಸಿಗೆ ಬೇಡ'

'ಹಾರುವ' ಈ ಸಾಮಾಜಿಕ ವರ್ಗಕ್ಕೆ ಕಿಟೆಲ್ ಕೊಟ್ಟಿರುವ ಗಾದೆಗಳು ತುಂಬ ಸ್ವಾರಸ್ಯಕರವಾಗಿವೆ.

'ಹಾರುವನಿಗೆ ಆಳಾಗಬೇಡ; ಗಾಣಿಗನಿಗೆ ಎತ್ತಾಗಬೇಡ'

'ಕುದುರೇ ಹಿಂದಿರಬೇಡ; ಹಾರುವನ ಮುಂದಿರಬೇಡ'

'ಹಾರುವನ ಬದುಕು ಮಗನಿಗೆ: ಸೆಟ್ಟಿಯ ಬದುಕು ಅಳಿಯನಿಗೆ'

'ಹಾರುವರ ಮನೇಲಿ ಹರಿಸೇವೆ ಆದರೂ ಮೂಪಿನಾಯಿಗೆ ಒಡ್ಯಾಟ'

'ಹಾರುವನ ಮೋರೆಯಾದರೂ ನೀರಿನಿಂದ ತೊಳೆಯುದಿದ್ದರೆ ನಾರದೆ ಇದ್ದೀತೇ?'

'ಪೀರನ ಶೌರ್ಯ ಹಾರುವನ ಮೇಲೆಯೇ?'

'ಹೊಲೆಯನ ಪಾಯಸ ಹಾರುವನಿಗೆ ಯಾಕೆ?'

'ಹಸಿದ ಹಾರುವನನ್ನು ತೊಡಗಬಾರದು. ಉಣ್ಣ ತುರುಕನನ್ನು ತೊಡಗಬಾರದು'

'ಹಲವು ದೇವರನ್ನು ನಂಬಿ ಹಾರುವ ಕೆಟ್ಟ: ಹಾರುವನನ್ನು ನಂಬಿ ಹಲವರು ಕೆಟ್ಟರು'

'ಹಾರುವನಿದ್ದ ಊರು ಹಾರು; ಏಡಿಯಿದ್ದ ಕೆರೆ ಹಾರು

'ಹಾರುವ ಮಾಡುವುದು ಪಿಣ್ಡಕ್ಕೆ, ಹೊಲೆಯ ಮಾಡುವುದು ಹೆಣ್ಣಕ್ಕೆ'

'ಹಾರುವನ ಬೊಟ್ಟು ಹರಬಾರಿ ದೂರ'

'ಹಾರುವರ ಮನೆಯ ಬೋನಗಿತ್ತಿಗೆ ನೀರೇ ದಿಬ್ಬಣ'

ಬೇರೆ ಬೇರೆ ಸಾಮಾಜಿಕ ವರ್ಗ, ವೃತ್ತಿಗಳಿಗೆ ಸಂಬಂಧಿಸಿದ ಗಾದೆಗಳು ಕೋಶದ ಉದ್ದಕ್ಕೂ ಕಂಡುಬರುತ್ತದೆ. ಅವು ಕೋಶದ ಘನತೆಯನ್ನು ಹೆಚ್ಚಿಸಿವೆಯಲ್ಲದೆ ಕೋಶದ ಆಕರ್ಷಣೆಗೂ ಕಾರಣವಾಗಿದೆ. ಪ್ರಾದೇಶಿಕತೆಯ ಉತ್ಕಟತೆಯಿಂದ ಕೂಡಿದ ಗಾದೆಗಳು ಗ್ರಾಮ್ಯ ಭಾಷೆಯ ಕೆಚ್ಚನ್ನು ಸೊಗಡನ್ನು ನಿಚ್ಚಳವಾಗಿ ಪ್ರಕಟಿಸುತ್ತವೆ.

'ಹೆಚ್ಚಿದ ಪಲ್ಯಕ್ಕೆ ನುಚ್ಚಿನ ಅನ್ನವೇ?'

'ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು'

'ಫಾಯಿದೆ ನೋಡಿ ವಾಯಿದೆ ಕಳಕೊಂಡ'

'ಸಿವಾಳಿ ಮಾಡೋದಕ್ಕೆ ಹೋಗಿ ದಿವಾಳಿಯಾದ'

ಇಂತಹ ಗಾದೆಗಳಲ್ಲಿ ನೂರಾರು ಉಪಭಾಷಾ ರೂಪಗಳು ಹೆಪ್ಪುಗಟ್ಟಿವೆ. ಅವು ಗಾದೆಗೆ ಶಕ್ತಿಯನ್ನೂ ಮೊನಚನ್ನೂ ತಂದುಕೊಟ್ಟಿವೆ. ಮಿಶನರಿಗಳು ಶಬ್ದಾರ್ಥಗಳನ್ನು ವಿವೇಚಿಸುವಾಗ ಸಂದರ್ಭಾನುಸಾರವಾಗಿ ಗಾದೆಗಳನ್ನು ಕೊಡುವುದರಿಂದ ಸಾಹಿತ್ಯ ಸೃಷ್ಟಿಗೆ, ಜ್ಞಾನಾಭಿವೃದ್ಧಿಗೆ ಹಾಗೂ ಪರಸ್ಪರ ಸಂಸ್ಕೃತಿ ವಿನಿಮಯಕ್ಕೂ ದಾರಿಯಾಯಿತು.

ಕಿಟೆಲ್ ಕೋಶದ 'ಕೃಷಿ ಗಾದೆಗಳು'

ಕಿಟೆಲ್ ಕೋಶದಲ್ಲಿ ಬಳಕೆಯಾದ ಕೃಷಿಗೆ ಸಂಬಂಧಿಸಿದ ಗಾದೆಗಳನ್ನು ವರ್ಣ ನಾಮಕ್ರಮದಲ್ಲಿ ಕೊಡಲಾಗಿದೆ. ಪ್ರತಿ ಗಾದೆಯ ಪಕ್ಕದಲ್ಲಿ ಕೊಟ್ಟಿರುವ ಪುಟ ಸಂಖ್ಯೆಗಳು ಕಿಟೆಲ್ ಕೋಶದ ಹೊಸ ಮುದ್ರಣಕ್ಕೆ (೧೯೯೬) ಅನುಸಾರಿಯಾಗಿವೆ.

೧. ಅಣ್ಣಗೆ ಸುಣ್ಣವಿಲ್ಲ, ಎತ್ತಿಗೆ ಹುಲ್ಲು ಇಲ್ಲ. (೪೪)

೨. ಅಧಿಕ ಮಾಸದಲ್ಲಿ ಬರಗಾಲ ಬಂದ ಹಾಗೆ. (೫೪, ೧೧೪೭)

೩. ಅಸಲು ಇಲ್ಲದೆ ಬಡ್ಡಿಯಿಲ್ಲ ; ಮೊಸರು ಇಲ್ಲದೆ ಮಜ್ಜಿಗೆಯಿಲ್ಲ.
(೧೩೨, ೧೨೫೯, ೧೩೮೫)

೪. ಅಂಬಲಿಗೆ ಗತಿಯಿಲ್ಲದವನಿಗೆ; ಹಂಬಲಿಸುವುದು ಯಾಕೆ. ? (೯೧. ೧೭೦೧)

೫. ಈಡಿದ್ದವನ ಹೊಲ ತೋಟ ನೋಡಬೇಕು. (೨೧೩)

೬. ಉಕ್ಕಿನ ಕೊಡಲಿಯಾದರೂ ಕಡಿಯಲು ಕಾವು ಬೇಕು. (೨೧೮)

೭. ಉತ್ತ ಹೊಲ ಬಿತ್ತಿಸಿಕೊಂಡಿತು ; ಸತ್ತ ಹೆಣ ಸುಡಿಸಿಕೊಂಡೀತು. (೨೨೮, ೧೬೪೧)

೮. ಉತ್ತು ಬಿತ್ತಿದ ಭತ್ತವಾದರೂ ಮಳೆಯಿಲ್ಲದೆ ಮೊಳೆಯದು. (೧೧೮೪)

೯. ಉದ್ದು ಉಬ್ಬಿದರೆ ಮದ್ದಳೆ ಆದೀತೆ?. (೨೩೬)

೧೦. ಉದ್ದು ಮದ್ದಿಗೆಸಲ್ಲ; ಕದ್ದವ ಸಬಗನಲ್ಲ. (೨೩೬, ೧೫೮೦)

೧೧. ಉದ್ದು ಉರುಳಿದರೆ ಹೆದ್ದಾರಿ ದಾಟೀತೇ?.(೨೩೬, ೨೫೩, ೧೭೫೭)

೧೨. ಉಬ್ಬೇ ಮಳೆ ಗುಬ್ಬೀ ತಲೆ ನೆನೆಯುವುದಿಲ್ಲ. (೨೪೭)

೧೩. ಉಬ್ಬೇ ಮಳೆ ಅಬ್ಬೇ ಹಾಲು. (೨೪೭)

೧೪. ಊರ ಮುಂದೆ ನೇಗಿಲ ಹೂಡಿದರೆ ಕಂಡ ಕಂಡವರಿಗೆ ಒಂದೊಂದು ಮಾತು .
(೨೬೬, ೯೬೧, ೧೭೫೦)

೧೫. ಊರಗುದ್ದಲಿ ತಂದು ನಾಡ ಕಾವಲಿ ತೆಗೆದು. (೨೬೬, ೪೩೯)

೧೬. ಎತ್ತಿನ ಮುಂದೆ ತೆಂಗಿನಕಾಯಿ ಒಡೆದ ಹಾಗೆ. (೨೮೧)

೧೭. ಎತ್ತು ಈಯಿತು ಅಂದರೆ ಕೊಟ್ಟಿಗೆಯಲ್ಲಿ ತಂದು ಕಟ್ಟು ಅಂದ. (೨೮೧).

೧೮. ಎತ್ತು ಹಾರುವುದಕ್ಕಿಂತ ಮುಂಚೆ ಕವುದಿ ಹಾರಿತು. (೨೮೧, ೪೧೪)

೧೯. ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯುತ್ತದೆ. (೫೩೦)

೨೦. ಒಕ್ಕಲಿಗನ ಓಡಾಟ ನಾಯಿ ಒಡನಾಟ. (೩೪೦)

೨೧. ಒಕ್ಕಲಮನೆ ಸುಟ್ಟು ಹೋದ ಮೇಲೆ; ಕಕ್ಕುಲತೆ ಪಟ್ಟು ಪ್ರಯೋಜನವೇನು?. (೩೪೮)

೨೨. ಒಕ್ಕಲಿಗನ ನಂಟು ಒಡವೆಗೇಡು. (೩೧೧, ೩೧೭, ೯೫೩)

೨೩. ಒಕ್ಕಳ ಹೊನ್ನಿನ ಪರದೇಶಿ. (೩೧೦, ೯೯೮)

೨೪. ಕಡ್ಲೆಗೆ ಮುಂದು, ಕಡಿವಾಣಕ್ಕೆ ಹಿಂದು. (೩೬೩, ೩೬೭, ೧೩೪೬, ೧೭೩೬)

೨೫. ಕಡ್ಲೆ ಇದ್ದವರಿಗೆ ಹಲ್ಲಿಲ್ಲ; ಹಲ್ಲಿದ್ದವರಿಗೆ ಕಡ್ಲೆ ಇಲ್ಲ. (೩೬೭)

೨೬. ಕಡ್ಲೇ ತಿಂದು ಕೈತೊಳೆದ ಹಾಗೆ. (೩೬೭)

೨೭. ಕಡ್ಲೇ ಸಂಗಡ ರಾಗಿ ಕೂಡಿ ಹುರಿದ ಹಾಗೆ. (೩೬೭, ೧೪೧೩, ೧೭೪೬)

೨೮. ಕಬ್ಬು ಕೊನೆಯಿಂದ ಮೆದ್ದರೂ ಬುಡದಿಂದ ಮೆದ್ದರೂ ಸವಿ ಒಂದೇ.
(೩೮೭, ೧೧೯೯, ೧೬೦೬).

೨೯. ಕಬ್ಬು ಡೊಂಕಾದರೆ ಸವಿ ಡೊಂಕೇ?. (೩೮೭, ೭೧೩, ೧೬೦೬)

೩೦. ಕಬ್ಬು ಸೀಯೆಂತ ಬೇರು ನುಂಗಿದರೆ ದವಡೆ ಹರಿದೀತು. (೩೮೭)

೩೧. ಕಾಡಿನಲ್ಲಿ ಹುಲಿ ಕೂಗಿದರೆ ; ನಾಡಿನಲ್ಲಿ ಒಕ್ಕಲು ತೆಗೆದರಂತೆ. (೩೧೧, ೪೨೬)

೩೨. ಕಾರಮಳೆ ಬಿದ್ದರೂ ಕಾರ್ಯವಿಲ್ಲ. (೪೩೫)

೩೩. ಕಾಲ ಕೆಟ್ಟಿತು ಕಾಗೆ ರಾಗಿ ತಿಂತು. (೪೩೭, ೭೫೯, ೧೪೧೩)

೩೪. ಕೆಟ್ಟ ಭೂಮಿಗೆ ಮನೇ ದವಸಾ ಕೊಟ್ಟು ಕೂಲಿ ಮಾಡಿಸಿದ. (೪೯೫, ೮೨೩)

೩೫. ಗದ್ದೆಗೆ ಬಿಟ್ಟ ನೀರೂ, ಪರರಿಗೆ ಕೊಟ್ಟ ಮಾತೂ, ಬೆನ್ನಿಗೆ ಕೊಟ್ಟ ಪೆಟ್ಟು ಹಿಂದಕ್ಕೆ ಬಾರದು.
(೫೫೯)

೩೬. ಗಾಳಿ ಬಂದಾಗ್ಲೆ ತೂರಿಕೊಳ್ಳಬೇಕು. (೫೭೪, ೭೮೨)

೩೭. ಗೋದಿ ಕಾಯೋ ಮಗನೇ ಅಂದರೆ ಊಬು ಚುಚ್ಚಿಕೊಂಡ. (೬೦೭)

೩೮. ಜೋಳ ಹೊಸದಾದರೆ ಮುತ್ತು ಆದೀತೇ ?. (೭೦೦)

೩೯. ಜೋಳಾ ತಿಂದಾಕ್ಷಣ ಜೋಳಾ ಕಾಣುವುದೋ?. (೭೦೦)

೪೦. ತಗ್ಗ ದವಸಕ್ಕಾಗಿ ಹಗ್ಗ ಕೊಂಡ ಹಾಗೆ. (೭೧೯. ೮೨೩)

೪೧. ತಗ್ಗ ಗದ್ದೆಗೆ ಮೂರು ಬೆಳೆ: ಎತ್ತರದ ಗದ್ದೆಗೆ ಒಂದೇ ಬೆಳೆ. (೨೫೦. ೬೧೯)

೪೨. ತಾನು ತಿಂಬೋದು ಪಲ್ಲೇ ಸೊಪ್ಪು: ಹಿರೇ ಕುದುರೆ ಚೇಷ್ಟೆ.
(೭೫೦. ೧೦೧೫. ೧೫೭೯. ೧೭೬೯)

೪೩. ತುಳಿದ ಧಾನ್ಯ ಮಳಲು ಸಮವೋ?. (೭೮೦, ೧೩೦೩)

೪೪. ತೂರುವಾಗ್ಯೆ ಹಾರಿದ್ದೆಲ್ಲ ಮಾರೀ ಪಾಲು. (೭೮೨. ೧೩೧೫)

೪೫. ತೆಕ್ಕೆಯಿಲ್ಲದ ಎತ್ತು ಬಿಕ್ಕಿ ಪಲ್ಕಿರಿದಂತೆ. (೭೮೪, ೧೦೧೩)

೪೬. ತೆನೆ ತಿಂದ ಎತ್ತು ತೆವರಿಯನ್ನು ಏರಿತು. (೭೮೬)

೪೭. ತೊಂಬತ್ತರ ಮೇಲೆ ತೊಗರಿ ಬೇಳೆ. (೭೯೩, ೭೯೯, ೧೨೨೪)

೪೮. ದಣಿದ ಎತ್ತಿಗೆ ಮಣುವೇ ಭಾರ. (೮೧೬, ೧೨೬೪, ೧೨೬೫)

೪೯. ದನದ ಮನಸ್ಸನ್ನೂ ದಾಯಾದಿಯ ಮನಸ್ಸನ್ನೂ ಯಾರು ಬಲ್ಲರೂ?. (೮೧೮. ೮೨೯)

೫೦. ದನ ಮೇಯಿಸುವವನಿಗೆ ಘನ ಯಾಕೆ?. (೮೧೮, ೧೩೭೨)

೫೧. ದನಾ ತಿಂಬುವವನಿಗೆ ಗೊಬ್ಬರ ದಾಣೆ ಏನು?. (೬೦೪. ೮೧೮. ೧೫೫೬)

೫೨. ದುಡಿಯೋ ಎತ್ತು ಮಡಿದು ಬಿತ್ತು. (೮೪೧)

೫೩. ಧಾನ್ಯ ಹೆಚ್ಚಿದವನಿಗೆ ಮಾನ್ಯ ಬರುವುದು. (೮೭೨. ೧೧೪೬. ೧೩೧೩)

೫೪. ನಮ್ಮ ತೋಟದಲ್ಲಿ ನಾವು ಕೈ ಹಾಗೆ ಬೀಸಿದರೇನು? ಹೀಗೆ ಬೀಸಿದರೇನು?. (೮೮೯)

೫೫. ನವಧಾನ್ಯ ಬೆಳೆದವನಿಗೆ ವ್ಯವಧಾನವಿಲ್ಲ. (೯೩೬, ೧೫೧೩)

೫೬. ನೀರುಳ್ಳಿ ನೀರಲ್ಲಿ ತೊಳೆದರೆ ನಾರೋದು ತಪ್ಪೀತೇ. (೯೪೦)

೫೭. ನೀರು ಹಳ್ಳಕ್ಕೆ ಹೋದೀತೇ ಹೊತ್ತು ದಿಣ್ಣೆಗೆ ಹೋದೀತೇ?. (೯೪೧. ೧೭೭೪)

೫೮. ನುಚ್ಚು ಉಂಡ ಮಗನು ಇಚ್ಚೇಲಿ ಇರುವನು: ತುಪ್ಪ ಸಕ್ಕರೆ ಉಂಡ ಅಳಿಯ ತಿಪ್ಪೇಲಿ ನಿಂತು
ಬೊಗಳುವನು. (೯೪೫)

೫೯. ನೆಯ್ಯುವವನಿಗೆ ಲಾಳಿ, ನಗಕ್ಕೆ ಗಾಳಿ. (೯೫೬. ೧೪೩೮)

೬೦. ನೇಗಲು ಉತ್ತರೆ ಹೊಲ: ಹಾಲು ಇದ್ದರೆ ಗೋವು. (೯೬೧. ೧೭೨೮. ೧೭೭೪)

೬೧. ನೊಗ ಇದ್ದರೆ ನೇಗಿಲು; ಮಗ ಇದ್ದರೆ ತಂದೆ. (೯೬೫. ೧೨೫೪)

೬೨. ನೆಂಟ ನೆಂಟಗೆ ಮಾರಿ ಕೊಂಟೆತ್ತು ಹೊಲಕ್ಕೆ ಮಾರಿ. (೯೫೩. ೧೩೧೫. ೧೭೬೪)

೬೩. ಪಾಲು ಮಾಡಿದರೆ ಹಾಳ. (೧೦೩೪. ೧೭೩೧)

೬೪. ಫಲಕ್ಕೆ ತಕ್ಕ ಬೀಜ, ನೆಲಕ್ಕೆ ತಕ್ಕ ನೀರು. (೧೧೨೦)

೬೫. ಫಲ್ಲವಿಲ್ಲದ ಮರ ಹೊಲದಲ್ಲಿದ್ದರೇನು?. (೧೧೨೦)

೬೬. ಫಲಾನೋಡದೆ ಕೆಟ್ಟಿತು; ಹೊಲ ಹೂಡದೆ ಕೆಟ್ಟಿತು. (೧೧೨೦. ೧೭೫೦. ೧೭೭೪)

೬೭. ಫಲಾ ಬಿತ್ತಿ ಪಾಪಕಳೆ. (೧೧೨೦)

೬೮. ಬಡ ಎತ್ತಿಗೆ ದರೇ ಮೇಲಣ ಹುಲ್ಲೇ. (೧೧೩೦)

೬೯. ಬಡ್ಡಿ ಬಾಯಿಗೆ ಅಂಜೇಯಾ; ದೊಡ್ಡೆತ್ತಿನ ಕೋಡಿಗೆ ಅಂಜೇಯಾ?. (೧೧೩೩)

೭೦. ಬರಡೆಮ್ಮೆಗೆ ಕರಡು ಹುಲ್ಲು. (೧೧೪೭)

೭೧. ಬಲ್ಲಿದವನ ಹಗೇವು ತೆಗೆಯೋ ಹೊತ್ತಿಗೆ ಬಡವನ ಪ್ರಾಣ ಹೋಯಿತು. (೧೧೫೫. ೧೬೯೭)

೭೨. ಬಳ್ಳಿ ಹಿಡಿದು ಕಾಯಿ ಕೊಯ್ಯಬೇಕು. (೧೧೬೨)

೭೩. ಬಾವಿ ನೀರಾದರೆ ಭಾವಿಸಿದರೆ ಬಂದೀತೇ. (೧೧೭೫, ೧೨೪೨)

೭೪. ಬಾಳೇ ಹಣ್ಣಿಗೆ ಬೆಲ್ಲ ಹಾಕಬೇಕು ; ಬದನೆ ಕಾಯಿಗೆ ಕಾರ ಹಾಕಬೇಕು. (೧೧೭೮)

೭೫. ಬಿತ್ತಲಲ್ಲಿ ಬೆಳೆಯಲಿಲ್ಲ ಎತ್ತಲಾಗಿಂದ ಬಂದಿಯೋ ಹಕ್ಕಿರಾಜ. (೧೧೮೪)

೭೬. ಬಿತ್ತಿದ ಪಯ್ರು ಕೆತ್ತಿದರೆ ಆದೀತೇ. (೧೧೮೪)

೭೭. ಬಿತ್ತಿದ ಬೀಜಕ್ಕೆ ಸತ್ತಿಗೆ ಹಿಡಿದ ಹಾಗೆ. (೧೧೮೪, ೧೧೯೫, ೧೫೬೭)

೭೮. ಬಿತ್ತುವಾಗ ಮಲಗಿದರೆ ಕೊಯ್ಯುವಾಗ ಹಗುರವಾಯಿತು. (೧೧೮೪)

೭೯. ಬೀಜವೊಂದಾದರೆ ಫಲವೊಂದೇ ?. (೧೧೯೫)

೮೦. ಬೀಜವಿಲ್ಲದೆ ಮರವಿಲ್ಲ: ಮರವಿಲ್ಲದೆ ಬೀಜವಿಲ್ಲ. (೧೧೯೫)

೮೧. ಬೀಜ ಸಣ್ಣದಾದರೆ ಮರ ಸಣ್ಣದೋ?. (೧೧೯೫. ೧೨೮೫. ೧೫೬೬)

೮೨. ಬುತ್ತಿ ಇದ್ದವ ಏತ್ತಲೂ ಉಂಡಾನು. (೧೧೯೯)

೮೩. ಬೆಟ್ಟಕ್ಕೆ ಹೋಗುವವನ ಸೊಂಟದಲ್ಲಿ ಕುಡುಗೋಲು ಸಿಕ್ಕಿಸಿದ ಹಾಗೆ.
(೫೧೫. ೧೨೦೫. ೧೫೯೮. ೧೬೨೪. ೧೬೭೨)

೮೪. ಬೆಳೆಸುವವ ಬಳಸಿದರೆ ಬಳ್ಳಕಾಳು ಇಲ್ಲವೇ?. (೧೨೧೫)

೮೫. ಬೆಳೆ ಹೊಗಳಿಸಿ ಉಣ್ಣಬೇಕು ಹಯನು ಹಂಗಿಸಿ ಉಣ್ಣಬೇಕು. (೧೨೧೬. ೧೬೯೭. ೧೭೬೪)

೮೬. ಬೆಳೇ ಸಿರಿ ಮೊಳಕೆಯಲ್ಲೇ ಕಾಣುವುದು. (೧೨೧೬. ೧೩೮೫. ೧೬೩೩)

೮೭. ಬೇರು ಇದ್ದರೆ ನಾರು ಸಿಕ್ಕೀತು. (೧೨೨೧)

೮೮. ಬೇಲಿಯೆದ್ದು ಹೊಲ ಮೇಯುವಾಗ್ಯೆ ಕಾಯೋದು ಯಾರು?.
(೪೩೩. ೧೨೨೨. ೧೩೭೩. ೧೭೭೪)

೮೯. ಬೇಸಾಯ ಮಾಡಿದವ ಬೇಗ ಸಾಯ್ತು. (೧೨೨೩)

೯೦. ಬಂಡಿ ಬಂಡ್ಯಾಟ, ಹೇರು ಹೆಟ್ಟ್ಯಾಟ ತಲೆ ಮೊಟ್ಟೆ ಪರಮಸುಖ.
(೧೧೩೫, ೧೩೮೦. ೧೭೫೪, ೧೭೬೨)

೯೧. ಬಂಡಿಯ ಮೇಲೆ ಕೂತರೆ ಬಣ್ಣ ಬಂದೀತೇ?. (೧೧೩೫. ೧೧೩೬, ೧೧೪೬)

೯೨. ಬೆಂಕಿ ಆರಿದರೂ ಸುಂಕ ಬಿಡಲಿಲ್ಲ. (೧೨೦೪, ೧೨೦೬)

೯೩. ಭೂಮಿ ಯಿದ್ದ ಮಾದರೆ ಭೂರಿದಕ್ಷಿಣೆ ಕೊಟ್ಟಾನೆ.?. (೧೨೪೮)

೯೪. ಭೂಮಿ ಮಾರಿ ನಾಮ ಹಾಕಿಕೊಂಡಾ. (೧೨೪೮)

೯೫. ಮಳೆ ಮಳೆ ಆದರೆ ಮೊಕ ತೊಳೆಯುವುದಕ್ಕೆ ಆಗದೇ?. (೧೨೫೪)

೯೬. ಮಣ್ಣು ಹೊಯಿದು ಅಂಬಲಿ ಕಾಸಿದರೆ ಉಂಬೋ ಕಾದೀತೇ ?. (೧೨೬೭. ೧೭೭೧)

೯೭. ಮಳೆಯಿಲ್ಲದ ಪಯ್ರು ಮಾತೆಯಿಲ್ಲದ ಕೂಸು ಸಮ.
(೯೯೬. ೧೨೧೬. ೧೨೬೮. ೧೩೦೩. ೧೩೦೯. ೧೭೫೨. ೧೭೭೭)

೯೮. ಮಳೆಗೆ ಹೆದರಿ ಹೊಳೇಲಿ ಹಾರಿದ ಹಾಗೆ. (೧೩೦೩. ೧೭೨೭)

೯೯. ಮಳೇ ನೀರು ಬಿಟ್ಟು ಮಂಜಿನ ನೀರಿಗೆ ಕೈಯ್ಯೊಡ್ಡಿದ ಹಾಗೆ. (೫೦೧. ೧೨೬೦. ೧೩೦೩)

೧೦೦. ಮೂವರ ಹೊತ್ತ ಬಂಡಿ ಹೊಲಕ್ಕೆ ಹೋಗದು, ಮನೆಗೆ ಬಾರದು. (೧೩೫೭)

೧೦೧. ಮೆಣಸು ಕೊಳೆತರೆ ಜೋಳಕ್ಕಿಂತ ಕಡಿಯೇ?. (೧೩೬೫)

೧೦೨. ಮೆದೇ ಹುಲ್ಲು ಸೂರೆಯಾಗುತ್ತದೆ; ಹಿಡಿ ಹುಲ್ಲಿಗೆ ಒದ್ದಾಡುತ್ತಾನೆ.
(೧೩೬೬, ೧೬೬೦, ೧೭೩೪)

೧೦೩. ರೊಟ್ಟಿಗೆ ಬಂದ ನಾಯಿ ತುಪ್ಪಕ್ಕೆ ಬಂದೀತೇ?. (೧೪೨೫)

೧೦೪. ರೊಟ್ಟಿ ತೊಳೆದು ನೀರು ಕುಡಿದ ಹಾಗೆ. (೧೪೨೫)

೧೦೫. ಸಗಣೆ ತಿನ್ನುವವ ತುಪ್ಪದ ರುಚಿ ಬಲ್ಲನೆ?. (೧೫೫೬)

೧೦೬. ಸುಗ್ಗಿಯಲ್ಲಿ ಸೊಕ್ಕಲಿಲ್ಲ; ಆಷಾಢದಲ್ಲಿ ಸೊರಗಲಿಲ್ಲ. (೧೬೪೦)

೧೦೭. ಸುಗ್ಗಿ ಕಾಲದಲ್ಲಿ ನುಗ್ಗೆ ತಿಂದರೆ ಕಾತಿಕೆ ಕಾಲದಲ್ಲಿ ಜಗಲಿ ತಿಂದಾನೇ?. (೧೬೪೦)

೧೦೮. ಸುಗ್ಗೀ ಮೇಲೆ ಕೊಳಕೆ ಮಗ್ಗೀ ಮೇಲೆ ಲೆಕ್ಕ. (೧೬೪೦)

೧೦೯. ಹಕ್ಕಲಿಲ್ಲದ ಒಕ್ಕಲಿಲ್ಲ, ಮಕ್ಕಳಿಲ್ಲದ ಭಾಗ್ಯವಲ್ಲ. (೧೬೯೫)

೧೧೦. ಹಟ್ಟೀಗೆ ಗತಿಯಿಲ್ಲದವ ಮಠ ಕಟ್ಯಾನೇ?. (೧೬೯೯)

೧೧೧. ಹಟ್ಟೀಲಿ ಹುಟ್ಟಿದ್ದಲ್ಲ, ಕ್ರಯಕ್ಕೆ ಕೊಂಡದ್ದಲ್ಲ. (೧೬೯೯)

೧೧೨. ಹತ್ತಿ ನೂಲಬೇಕು; ಮುತ್ತಯ್ದೆ ಹಾಡಬೇಕು. (೧೭೦೨)

೧೧೩. ಹತ್ತಿಗೂ ಮುತ್ತಿಗೂ ಹಾಕಿದ ಹಣ ಯಾತಕ್ಕೂ ಬಾರದು. (೧೭೦೨)

೧೧೪. ಹಾರೆ ಮೋಟು, ಗುದ್ದಲಿ ಬೊಡ್ಡು ಗೆಯ್ಯುವವನಿಗೆ ಒಕ್ಕಯ್. (೧೭೨೭)

೧೧೫. ಹಿಡಿ ಕಾಳಿಗೆ ಅಡಿ: ಪಡಿ ಕಾಳು ಕಳಕೊಂಡ. (೧೭೩೪)

೧೧೬. ಹುರುಳೀ ತಿನ್ನುವವನಿಗೆ ಕಂಠ ಹಿಡಿಯುವವರು ಮೂರು ಮಂದಿ. (೭೫೯. ೧೩೫೦. ೧೭೪೬)

೧೧೭. ಹೂಡಲಿಕ್ಕೆ ತಿಳಿಯದಿದ್ದರೆ ನೋಡಲಿಕ್ಕು ತಿಳಿಯದೇ. (೧೭೫೦)

೧೧೮. ಹೂಡುವ ಎತ್ತುಕೊಟ್ಟು: ಆಡುವ ಹೋರಿತಂದ. (೧೭೫೦)

೧೧೯. ಹೆಣ್ಣು ಸೊಕ್ಕಿದರೆ ಮನೆಯಲ್ಲಿ ನಿಲ್ಲದು ಎತ್ತು ಸೊಕ್ಕಿದರೆ ಹಟ್ಟಿಯಲ್ಲಿ ನಿಲ್ಲದು. (೧೭೫೬)

೧೨೦. ಹೆತ್ತವರಿಗೆ ಮಕ್ಕಳು, ಬಿತ್ತಿದವರಿಗೆ ಬೆಳೆ ಎತ್ತಿದಕ್ಕನ ಕೈ ಬರಿಗೈ. (೧೭೫೯)

೧೨೧. ಹೆಸರು ಕಾಳಿಗೆ ಮುಂಡ ಮೋಚಿಕೊಂಡ ಹಾಗಾಯಿತು. (೧೩೪೦)

೧೨೨. ಹೊಟ್ಟು ಕುಟ್ಟಿ ಕೈಯೆಲ್ಲ ಗುಳ್ಳೆ. (೧೩೬೫)

೧೨೩. ಹೊಲಕ್ಕೆ ಹೋದರೆ ಹುಲಿಯ ಕಾಟ ಮನೆಗೆ ಬಂದರೆ ಮಸಿಯ ಕಾಟ. (೧೭೭೪)

೧೨೪. ಹೊಲ ಹಚ್ಚಗಾಯಿತು: ಒಡೆಯನ ಕಣ್ಣು ಕೆಂಪಗಾಯಿತು. (೧೭೭೪)

೧೨೫. ಹೊಲವೆಲ್ಲ ಹಾಳಾಯಿತು: ಹಿಡಿಸೂಡಿಗೆ ಬಡಿದಾಟ. (೧೭೭೪)

೧೨೬. ಹೊಲದ ಹತ್ತೀ ಹೊಲದಲ್ಲೇ; ನಿನಗೆ ಮೊಳಉದ್ದ, ನನಗೆ ಮೊಳ ಉದ್ದ ಎಂದ ಹಾಗೆ. (೧೭೦೨. ೧೭೭೪)

೧೨೭. ಹೊಲಾಬಿತ್ತಿ ನೋಡು; ನೆಲಾ ಸಾರಿಸಿನೋಡು. (೧೭೭೪)

೧೨೮. ಹೋರಿ ನೆಚ್ಚಿ ಹೊಲ ಮಾಡಬಾರದು ಪೋರಿ ನೆಚ್ಚಿ ಬೇರೆ ಆಗಬಾರದು. (೧೭೭೯)

೧೨೯. ಹೋರಿ ನಡೆಯದಿದ್ದರೆ ಹಾದಿಉದ್ದ ಅಂದ ಹಾಗೆ. (೧೭೭೯)

೧೩೦. ಹೋಳಿಗೆ ಹುಗ್ಗಿ ಎಡೆ ಮಾಡಿದರೆ ಜೋಳದ ಗುಗ್ಗರಿ ಬೇಡುತ್ತಿದ್ದ. (೧೭೮೦)

ಕೃಷಿಕರ ಜೀವನ, ಸಂಸ್ಕೃತಿಗಳನ್ನು ಅರಿಯಲು ಇಂತಹ ಗಾದೆಗಳು ತುಂಬ ನೆರವಾಗುತ್ತವೆ. ಕಿಟೆಲ್ ವ್ಯಾಪಕವಾದ ಕ್ಷೇತ್ರಕಾರ್ಯ ನಡೆಸಿ ಗಾದೆಗಳನ್ನು ಸಂಗ್ರಹಿಸಿದ್ದಾನೆ. ಅವು ಸಮುದಾಯದ ವಿವಿಧ ವಲಯಗಳನ್ನೊಳಗೊಂಡಿವೆ. ಕನ್ನಡಿಗರ ಜೀವನ ಸಂಸ್ಕೃತಿ ಗಾದೆಗಳಲ್ಲಿ ಅಡಕವಾಗಿರುವುದರಿಂದ ಅದನ್ನು ವಿದೇಶಿಯರಿಗೆ (ಕನ್ನಡೇತರರಿಗೂ) ಪರಿಚಯಿಸಬೇಕೆಂಬುದು ಅವರ ಉದ್ದೇಶವಾಗಿತ್ತು.

೫.೦೩ ನುಡಿಗಟ್ಟುಗಳು

ನುಡಿಗಟ್ಟುಗಳು ಭಾಷೆಯ ಜೀವಾಳ. ಭಾಷೆಯಲ್ಲಿ ಕೇವಲ ಶಾಬ್ದಿಕ ಘಟಕಗಳಿಂದ ಹೊರಡುವ ಅರ್ಥಕ್ಕಿಂತ ಬೇರೆಯಾದ ಅರ್ಥವನ್ನುಳ್ಳ ಹಾಗೂ ರೂಢಿಯಲ್ಲಿ ವಿಶೇಷಾರ್ಥವುಳ್ಳ ಪದಪುಂಜವೇ ನುಡಿಗಟ್ಟು (ನುಡಿ+ಕಟ್ಟು - ನುಡಿಗಟ್ಟು). ಇದಕ್ಕೆ 'ಪಡೆನುಡಿ'ಯೆಂದು ಕರೆಯುತ್ತಾರೆ. ಶಬ್ದಾರ್ಥದ ಬಗೆಗೆ ವಿವೇಚಿಸುವಾಗ ಮೂಲ ಧಾತುವಿನಿಂದ ನಿಷ್ಪನ್ನವಾದ ಪದಪುಂಜಗಳನ್ನು ಕೋಶದಲ್ಲಿ ಸೇರಿಸುವುದರಿಂದ ಆ ಪದದ ಸ್ವರೂಪ ತಿಳಿಯುತ್ತದೆ. ಮಿಶನರಿ ಕೋಶಕಾರರು ಒಂದು ಪದಕ್ಕೆ ಅರ್ಥ ಕೊಡುವಾಗ ಅದಕ್ಕೆ ಸಂಬಂಧಿಸಿದ ನುಡಿಗಟ್ಟುಗಳನ್ನು ಕೊಡುತ್ತಾರೆ. ಅವು ಆ ಕೋಶಗಳ ಘನತೆಯನ್ನು ಹೆಚ್ಚಿಸಿವೆ. ಕೋಶಗಳಲ್ಲಿ ನುಡಿಗಟ್ಟುಗಳನ್ನು ಕೊಡುವ ವಿಧಾನ ಮಿಶನರಿಗಳಿಂದ ಆರಂಭವಾಯಿತು.

ಗಾದೆ ಮತ್ತು ನುಡಿಗಟ್ಟುಗಳಿಗಿರುವ ವ್ಯತ್ಯಾಸವನ್ನು ಗಮನಿಸಬೇಕು. ನುಡಿಗಟ್ಟಿನ ಘಟಕಗಳಾದ ಶಬ್ದಗಳಿಂದ ಆ ನುಡಿಗಟ್ಟಿನ ಅರ್ಥವನ್ನು ಊಹಿಸುವುದು ಸಾಧ್ಯವಿಲ್ಲ. ರೂಢಿಯನ್ನು ನೋಡಿಯೇ

ಅರ್ಥವನ್ನು ತಿಳಿಯಬೇಕು. ನುಡಿಗಟ್ಟುಗಳ ಅರ್ಥವನ್ನು ಅಲ್ಲಿಯ ಶಬ್ದಗಳು ತಿಳಿಸಿಕೊಡುವುದಿಲ್ಲ ಅದನ್ನು ಪರಂಪರೆ ನಿರ್ಣಯಿಸುತ್ತದೆ. ಶಬ್ದಕ್ಕೂ ಅರ್ಥಕ್ಕೂ ಸಂಬಂಧ ಇವುಗಳಲ್ಲಿ ಕಡಿದು ಹೋಗಿರುತ್ತದೆ. ಆದರೆ ಗಾದೆಗಳ ಅರ್ಥ ಬಹುತೇಕ ಸ್ಪಷ್ಟವಾಗಿರುತ್ತದೆ. ಏಂದರೆ ಅದರಲ್ಲಿಯ ಪದಗಳು ಅರ್ಥವನ್ನು ಬಿಟ್ಟುಕೊಡುತ್ತವೆ. ನುಡಿಗಟ್ಟುಗಳನ್ನು ವ್ಯಾವಹಾರಿಕ ಭಾಷೆಯಲ್ಲಿ ಸಹಜವಾಗಿ ಬಳಸುತ್ತಾರೆ. ಏಂದರೆ ಅವು ವ್ಯಾವಹಾರಿಕ ಭಾಷೆಯ ಭಾಗವಾಗಿ ಪರಿಣಮಿಸುತ್ತವೆ. ಬಳಸುವವರ ದೃಷ್ಟಿಯಿಂದ ಹೇಳುವುದಾದರೆ ನುಡಿಗಟ್ಟುಗಳು ಭಾಷೆಯಲ್ಲಿ ಬೆರೆತಿರುತ್ತವೆ. ಮಾತಿನಸ್ತರದಲ್ಲಿ ಅವು ವಿನೋದ ಮತ್ತು ವಿವೇಕವನ್ನು ಅಭಿವ್ಯಕ್ತಿಸುತ್ತದೆ. ನುಡಿಗಟ್ಟುಗಳ ಬಹುಮುಖ್ಯ ಲಕ್ಷಣಗಳು ಎರಡು ಸಂಕ್ಷಿಪ್ತತೆ ಮತ್ತು ಅರ್ಥಸ್ವಾರಸ್ಯ. ಇವು ತುಂಬ ಆಕರ್ಷಕವಾಗಿರುತ್ತವೆ. ಒಂದು ವಿಷಯ ಅಥವಾ ಸಂಗತಿಯನ್ನು ಹೇಳುವಾಗ ಮಾತಿಗೆ ಮೊನಚನ್ನೂ, ಶಕ್ತಿಯನ್ನೂ ತಂದುಕೊಡುತ್ತವೆ. ಇವುಗಳಿಂದ ನುಡಿಗಟ್ಟುಗಳು ನೆನಪಿನಲ್ಲಿ ಉಳಿಯಲು ಮತ್ತು ಸಂದರ್ಭ ಬಂದಾಗ ಅನಾಯಾಸವಾಗಿ ಬಳಸಲು ಸಹಾಯಕವಾಗುತ್ತದೆ.

ನುಡಿಗಟ್ಟುಗಳ ಹುಟ್ಟು ಮತ್ತು ಪ್ರಚಾರ ಎರಡು ರೀತಿ. ಒಂದು ಜನಸಾಮಾನ್ಯರು; ಎರಡು ಬರೆಹ. ಆಡುಮಾತಿನಲ್ಲಿ ಹುಟ್ಟಿದ ನುಡಿಗಟ್ಟುಗಳು ಮೌಖಿಕವಾಗಿ ಪ್ರಸರಣಗೊಳ್ಳುತ್ತ ಹೋಗುತ್ತವೆ. ಬರೆಹಗಾರನ ಅನೇಕ ಸಾರವತ್ತಾದ ಮಾತುಗಳು ಅವರ ಬರೆಹದಿಂದ ಜನತೆಯ ಆಡುಮಾತಿಗೆ ಬರಬಹುದು. ಆಡುಮಾತಿನ ನುಡಿಗಟ್ಟುಗಳು ಸಾಹಿತ್ಯದಿಂದ ಜನತೆಯ ಆಡುಮಾತಿಗೆ ಬರಬಹುದು. ಆಡುಮಾತಿನ ನುಡಿಗಟ್ಟುಗಳು ಸಾಹಿತ್ಯ ಕೃತಿಗಳಲ್ಲಿ ಉದ್ಧೃತವಾಗಿ ಮತ್ತೆ ಅಲ್ಲಿಂದ ಚಿಮ್ಮಿ ಜೀವನಕ್ಕೆ ಬರಬಹುದು. ಸಾಹಿತಿಗಳ ಉಕ್ತಿಗಳು, ನುಡಿಗಟ್ಟುಗಳಾಗಿ ಚಲಾವಣೆಗೆ ಬರಬಹುದು. ಆಡುಮಾತು ಮತ್ತು ಬರೆಹಗಳೆರಡೂ ನುಡಿಗಟ್ಟುಗಳನ್ನು ವಿನಿಮಯ ಮಾಡಿಕೊಳ್ಳುತ್ತಲೇ ಇರುತ್ತವೆ. ನುಡಿಗಟ್ಟುಗಳ ಸೃಷ್ಟಿಹಾಗೂ ಪ್ರಸಾರಾಕಾರ್ಯದಲ್ಲಿ ಆಡುಮಾತಿನದೇ ಸಿಂಹಪಾಲು ಎನ್ನುವುದನ್ನು ಬೇರೆ ಹೇಳಬೇಕಿಲ್ಲ. ನುಡಿಗಟ್ಟುಗಳಲ್ಲಿ ಸಾಹಿತ್ಯಿಕ ಗುಣ ಇಲ್ಲವೆಂದಲ್ಲ ಆದರೆ ಅವುಗಳ ವ್ಯಾವಹಾರಿಕ ಬಳಕೆ, ಮಾತಿನಲ್ಲಿ ಅವು ವಹಿಸುವ ಪಾತ್ರ, ಜನರ ಬದುಕಿನ ಮೇಲೆ ಅವು ಬೀರುವ ಪರಿಣಾಮ ಅಥವಾ ಹೊಂದಿರುವ ಪತೋಟಿ ಇವು ಮುಖ್ಯವಾಗಿ ಗಮನಿಸಬೇಕಾದ ಅಂಶಗಳು. ಇವುಗಳಲ್ಲಿ ಲೋಕಾನುಭವ ಉಂಟು. ಆಡುಮಾತಿನಲ್ಲಿ ಅವು ಪರಿಣಾಮಕಾರಿಯಾಗಲು ಅವುಗಳ ಸಾಹಿತ್ಯಿಕ ಗುಣ ಕಾರಣವೆಂಬ ದೃಷ್ಟಿಯಿಂದ ನೋಡಬೇಕೇ ಹೊರತು ಅವುಗಳನ್ನು ಬಳಕೆಯ ಪರಿಸರದಿಂದ ಪ್ರತ್ಯೇಕಿಸಿ ಅವನ್ನು ಸಾಹಿತ್ಯಿಕವಾಗಿ ನೋಡುವುದು ಬಹಳ ಅನುಚಿತವಾಗುತ್ತದೆ. ನುಡಿಗಟ್ಟುಗಳು ಮಾತಿಗೆ ಒಂದು ಬಿಗಿಯನ್ನು ತಂದುಕೊಡುವುದಲ್ಲದೆ ಅದಕ್ಕೆ ಒಂದು ಬೆಲೆಯನ್ನು ತಂದುಕೊಡುತ್ತವೆ. ನುಡಿಗಟ್ಟಿನ ಮಾತನ್ನು ಶಾಶ್ವತ ಸತ್ಯವೆಂದು ಜನ ಒಪ್ಪಿರುತ್ತಾರೆ.

ನುಡಿಗಟ್ಟಿನ ಬಹುಮುಖ್ಯ ಭಾಗವೆಂದರೆ ಅದರ ರಚನೆ. ಅದೇ ಅದರ ಜೀವಾಳ. 'ದುಬ್ಬಕೆತ್ತು' (ದುಬ್ಬ + ಕೆತ್ತು) 'ಹೊಟ್ಟೆಉರಿ' (ಹೊಟ್ಟೆ + ಉರಿ) ಇಂತಹ ನುಡಿಗಟ್ಟುಗಳನ್ನು ಗಮನಿಸಿದಾಗ ಅವುಗಳನ್ನು

ಎರಡು ಭಾಗ ಮಾಡಬಹುದು. ಎರಡೂ ಘಟಕಗಳನ್ನು ಪ್ರತ್ಯೇಕವಾಗಿ ನೋಡದೆ ಒಟ್ಟಾಗಿ ನೋಡಿದಾಗ ವಿಶೇಷ ಅರ್ಥ ಹೊಳೆಯುತ್ತದೆ. ಮೊದಲ ಭಾಗದ ಮೊದಲ ಸ್ವರದ ಮೇಲೆ ಬೀಳುವ ಆಘಾತ, ಮತ್ತೆ ಎರಡನೇ ಭಾಗದ ಮೊದಲನೆಯ ಸ್ವರದ ಮೇಲೆಯೂ ಬೀಳುತ್ತದೆ. ಮೊದಲನೆಯ ಆಘಾತದ ಬಳಿಕ ಎರಡನೇ ಆಘಾತದವರೆಗಿನ ಕಾಲಾವಧಿ ಮತ್ತು ಎರಡನೇ ಆಘಾತದ ಬಳಿಕ ಅಂತ್ಯದವರೆಗಿನ ಕಾಲಾವಧಿ ಇವೆರಡೂ ಹೆಚ್ಚು ಕಡಿಮೆ ಒಂದೇ ಪ್ರಮಾಣದ್ದಾಗಿರುತ್ತವೆ. ಅರ್ಥದ ಮಟ್ಟದಲ್ಲಿ ಇರುವ ತೋಲನವನ್ನು ವಿವರಿಸುವುದು ಕಷ್ಟವಾದರೂ ಅಸಾಧ್ಯವೇನೂ ಅಲ್ಲ. 'ದುಬ್ಬಕೆತ್ತು' ಎಲ್ಲರ ಅನುಭವಕ್ಕೆ ಬಂದಿರುವ ಸಂಗತಿಯನ್ನು ಒಳಗೊಂಡಿರುತ್ತದೆ (ನಷ್ಟವಾದಾಗ ಉಂಟಾಗುವ ಅನುಭವ). ನುಡಿಗಟ್ಟನ್ನು ಬಳಸಿದಾಗ ಇರುವ ಶಕ್ತಿ ಇಡೀ ಒಂದು ಕ್ರಿಯೆಯ ಘಟನೆಯ ಅನುಭವವನ್ನು ಸಾರುತ್ತದೆ.

ನುಡಿಗಟ್ಟುಗಳನ್ನು ಸಾಮಾನ್ಯ ನುಡಿಗಟ್ಟುಗಳು ಮತ್ತು ವಿಶಿಷ್ಟ ನುಡಿಗಟ್ಟುಗಳೆಂದು ಎರಡು ರೀತಿಯಾಗಿ ವರ್ಗೀಕರಿಸಬಹುದಾಗಿದೆ. ಸಾಮಾನ್ಯ ನುಡಿಗಟ್ಟುಗಳು ಧಾತು ನಿಷ್ಪನ್ನ ಪದಗಳಾಗಿರುತ್ತವೆ. ಒಂದು ಧಾತು ರೂಪದೊಡನೆ ಇತರ ಶಬ್ದಗಳು ಸೇರಿ ಪದ ಪುಂಜವಾಗುತ್ತದೆ. ಆಗು, ಆಡು, ಇಡು ಇತ್ಯಾದಿ ಕೆಲವು ಕ್ರಿಯಾಪದಗಳು, ಆಳು ಕಟ್ಟು, ಕೇಡು ಇತಂಹ ನಾಮಪದಗಳು, ಎಳೆ, ಒಣ ಇತ್ಯಾದಿ ಕೆಲವು ಗುಣವಾಚಕಗಳು ಇತರ ಶಬ್ದಗಳೊಡನೆ ಸೇರಿ ಸಾಮಾನ್ಯ ನುಡಿಗಟ್ಟುಗಳಾಗುತ್ತವೆ.

ಆಗು ; ನಾಮಪದಗಳೊಡನೆ ಸೇರಿಕೊಂಡಾಗ. ಗುರಿಯಾಗು, ವಾಸಿಯಾಗು, ಹಣ್ಣಾಗು ಇತ್ಯಾದಿ.
ಅವ್ಯಯಗಳೊಡನೆ ಸೇರಿಕೊಂಡಾಗ. ಅಲ್ಲವಾಗು, ಇಲ್ಲವಾಗು, ಬೇಕಾಗು ಇತ್ಯಾದಿ.

ಆಡು: ನಾಮಪದದೊಡನೆ ಸೇರಿಕೊಂಡಾಗ. ಉಸಿರಾಡು, ಕುಣಿದಾಡು, ಗೋಳಾಡು, ಮಾತಾಡು ಇತ್ಯಾದಿ.

ಆಳು: ಗುಣವಾಚಕ ಅಥವಾ ನಾಮಪದಗಳೊಡನೆ ಸೇರಿಕೊಂಡಾಗ. ಹೆಣ್ಣಾಳು, ಗಂಡಾಳು, ಹುರಿಯಾಳು ಇತ್ಯಾದಿ.

ಇಡು: ನಾಮಪದಗಳೊಡನೆ ಸೇರಿಕೊಂಡಾಗ. ಆಣೆಯಿಡು, ಆಸೆಯಿಡು, ಮನಸ್ಸಿಡು, ಗೋಳಿಡು ಇತ್ಯಾದಿ.

ಇಳಿ: ನಾಮಪದಗಳೊಡನೆ ಸೇರಿಕೊಂಡಾಗ. ಬಿಸಿಲಿಳಿ, ಬೆಲೆ ಇಳಿ ಇತ್ಯಾದಿ.

ಎಳೆ: ಎಳೆ ಚರ್ಮ, ಎಳನೀರು, ಎಳೆ ಬಿಸಿಲು.

ಒಣ: ಒಣನೆಲ, ಒಣರೊಟ್ಟಿ ಇತ್ಯಾದಿ.

ಕಟ್ಟು; ಅಡ್ಡಕಟ್ಟು, ಗಣ್ಣುಕಟ್ಟು, ತಲೆಕಟ್ಟು, ಬೆಲೆಕಟ್ಟು ಇತ್ಯಾದಿ.

ಗೇಡು: ನಾಚಿಕೆಗೇಡು, ಬುದ್ಧಿಗೇಡು, ತಿಳಿಗೇಡು ಇತ್ಯಾದಿ.

ಕೊಡು: ಮನಸ್ಸುಕೊಡು, ಶಾಪಕೊಡು, ಶಿಕ್ಷೆಕೊಡು ಇತ್ಯಾದಿ.

ಹಾಕು: ಅಚ್ಚುಹಾಕು, ಮರಿಹಾಕು, ಕೂಡಿಹಾಕು, ಕೇಕೆ ಹಾಕು ಇತ್ಯಾದಿ.

ಹಿಡಿ: ಕೈಹಿಡಿ, ದಾರಿಹಿಡಿ, ನೀರುಹಿಡಿ ಇತ್ಯಾದಿ.

'ಕೆಯ್' ಶಬ್ದಕ್ಕೆ ಕಿಟೆಲ್ ಉಂಡೆ ಉಂಡೆಯಾಗಿ ನುಡಿಗಟ್ಟುಗಳನ್ನು ಕೊಟ್ಟಿದ್ದಾನೆ. ಹಳಗನ್ನಡ ಕಾವ್ಯಗಳಿಂದ ೧೩, ನಡುಗನ್ನಡ ಕಾವ್ಯಗಳಿಂದ ೫೪, ನಿಘಂಟುಗಳಿಂದ ೩೦, ಹೊಸಗನ್ನಡ ಕೃತಿಗಳಿಂದ ೬, ಪ್ರಾದೇಶಿಕ ಭಾಷೆಗಳಿಂದ ೧೦೨, ಜ್ಞಾತಿಭಾಷೆಗಳಿಂದ ೪ ಒಟ್ಟು ೨೦೯ ನುಡಿಗಟ್ಟುಗಳನ್ನು 'ಕೆಯ್' ಎನ್ನುವ ಶಬ್ದಕ್ಕೆ ಬಳಸಿದ್ದಾನೆ.[೬]

ಕೆಯ್ಗಣ್ಮು, ಕೆಯ್ಗಮಿ, ಕೆಯ್ಗುಡು, ಕೆಯ್ಗೊಳಿಸು, ಕೆಯ್ಜೋಳಿಸು, ಕೆಯ್ಮುಗು, ಕೆಯ್ಯಳವಿ, ಕೆಯ್ವಾರ್, ಕೆಯ್ವೀಗ, ಕೆಯ್ಯನ್ನಗೆಯ್, ಕೆಯ್ಸಾರ್, ಕೆಯ್ಕರಣ, ಕೆಯ್ಗಟ್ಟು, ಕೆಯ್ಗೊಪ್ಪೆ, ಕೆಯ್ಗೊಳ್, ಕೆಯ್ಗೊಳ್ಳಿ, ಕೆಯ್‌ಚಪ್ಪಳೆ, ಕೆಯ್ತಪ್ಪು, ಕೆಯ್ದೊಳಸು. ಕೆಯ್ದಾಳೆ, ಕೆಯ್ದೋಲ್, ಕೆಯ್ನೇಯು, ಕೆಯ್ಪಲ, ಕೆಯ್ಯಿಕ್ಕು, ಕೆಯ್ವರ್ತಿಸು, ಕೆಯ್ಸಾಲೆ, ಕೆಯ್ಸಾಲೆಗೊಳ್, ಕೆಯ್ಕಾಲ್ಪಡೆ, ಕೆಯ್ಕೊಲೆಕಾಲ್, ಕೆಯ್ಕೆಯ್, ಕೆಯ್ಗಟ್ಟು, ಕೆಯ್ಗಣ್ಣೆ, ಕೆಯ್ಗುಸ್ದು, ಕೆಯ್ಗೂಲೆ, ಕಯ್ತುತ್ತು, ಕೆಯ್ದುಡುಕು, ಕೆಯ್ದಿಗೆ, ಕೆಯ್ನೋಡು, ಕೆಯ್ಮುಟ್ಟು, ಕೆಯ್ಮುರಿಗೆ, ಕೆಯ್ಯತ್ತು, ಕೆಯ್ಯೊಡ್ಡು, ಕೆಯ್ವರಳ್, ಕೆಯ್ಗೊಡಲೆ, ಕೆಯ್ಜಿಟುಂಕಗೆಯ್, ಕೆಯ್ಮ[illegible], ಕೆಯ್ಗತತಿ, ಕೆಯ್ಗಾಣಿಕೆ, ಕೆಯ್ಗಾಯ್, ಕೆಯ್ಗುದುರೆ, ಕೆಯ್ಗೆಉದುರೆ, ಕೆಯ್ಗೆಡು, ಕೆಯ್ಗಯ್, ಕೆಯ್ತವಕ, ಕೆಯ್ವ ಗಟ್ಟು, ಕೆಯ್ಮಾಡು, ಕೆಯ್ಮಿಂಚು, ಕೆಯ್ವರ್ತಿಸು, ಕೆಯ್ವಿಡಿತ, ಕೆಯ್ಗುಡಿತೆ, ಕೆಯ್ಗೊಡತಿ, ಕೆಯ್ದುಡುಕು, ಕೆಯ್ದುದಿ, ಕೆಯ್ದೊಳಸುಕಾರಿ, ಕೆಯ್ದೋ ಕೆ, ಕೆಯ್ನೆರವು, ಕೆಯ್ದಾರ್, ಕೆಯ್ಗಾಣ್ಗೆ, ಕೆಯ್ಗುಡು, ಕೆಯ್ವಾರಿಸು, ಕೆಯ್ಜುಲ, ಕೆಯ್ಸುರಿಗಿ, ಕೆಯ್ಗೆಪಿಡಿ, ಕೆಯ್ಕೆಮಿ, ಕೆಯ್ಕಳಗ, ಕೆಯ್ಕಳಿಸು, ಕೆಯ್ಕೊಳುಹ, ಕೆಯ್ಗೆಡೆ ಕೆಯ್ಜಳಕ, ಕೆಯ್ಜೀಲ್, ಕೆಯ್ಜೊಪಿಗೆ, ಕೆಯ್ಜಡಿ, ಕೆಯ್ಜಾಡೆ, ಕೆಯ್ಜೊಳು, ಕೆಯ್ಮ[illegible], ಕೆಯ್ಮಾಟ, ಕೆಯ್ಮೊ[illegible], ಕೆಯ್ಯಾರೆ ಮಾಡುಹ, ಕೆಯ್ಜಟ್ಟಲ್ ಕೆಯ್ಜ ಗ, ಕಯಿವಾರಂ, ಕೆಯ್ಜಗು, ಕೆಯ್ಜಾಯ್, ಕೆಯ್ಜಾಲಗಾಯ್, ಕೆಯ್ದಿದ್ದಿಗೆ, ಕೆಯ್ಸುರಿಗೆ, ಕೆಯ್ಕಾಲು, ಕೆಯ್ಕೆಳಗಿನವ, ಕೆಯ್ಗಣ್ಣು, ಕೆಯ್ಗಾಲಿಕೆ, ಕೆಯ್ಜೀಲು, ಕೆಯ್ಜೋಡಿಸು, ಕೆಯ್ಕೋಲಿ, ಕೆಯ್ಗದಕ, ಕೆಯ್ಗದಕತನ, ಕೆಯ್ಗದಿರೆ, ಕೆಯ್ಗಾಯ್, ಕೆಯ್ಗುಟಕ, ಕೆಯ್ಗಸಿಕ್ಕ, ಕೆಯ್ತಾಳು, ಕೆಯ್ಜಾಡ, ಕೆಯ್ಕಟ್ಟು, ಕೆಯ್ಕಷ್ಟ, ಕೆಯ್ಕಾಗದ, ಕೆಯ್ಕುಂಚಿಗೆ, ಕೆಯ್ಕೂಸು, ಕೆಯ್ಕೋಳ್ತ, ಕೆಯ್ಗುಡಿಗೆ, ಕೆಯ್ಗೆಣ್ಟೆ, ಕೆಯ್ಗತ್ತಿ, ಕೆಯ್ಗಾ ಕೆಯ್ಗಾರಿಕೆ, ಕೆಯ್ಗುಕ್ಕ, ಕೆಯ್ಗುದಿಗೆ, ಕೆಯ್ಗೂಟ, ಕೆಯ್ಗೊಡಿಕೆ, ಕೆಯ್ಜಪರ, ಕೆಯ್ಜಟಿಕೆ, ಕೆಯ್ತಡೆ,

ಕೆಯ್ತಪ್ಪು, ಕೆಯ್ತಾಮಿ, ಕೆಯ್ತಸ್ತು, ಕೆಯ್ದೊಡಿಗೆ, ಕೆಯ್ದಾತಿ, ಕೆಯ್ದಿಡಿ, ಕೆಯ್ದಿಡಿಗೋಡೆ, ಕೆಯ್ಪೆಟ್ಟಿಗೆ, ಕೆಯ್ಪೆಟ್ಟು, ಕೆಯ್ಪದಲು, ಕೆಯ್ಪರಹ, ಕೆಯ್ಪಾಟಿ, ಕೆಯ್ಮಣಿ, ಕೆಯ್ಮಸಕು, ಕೆಯ್ಮುಚ್ಚು, ಕೆಯ್ಮುಟ್ಟು, ಕೆಯ್ಮುರಿ, ಕೆಯ್ಮುರಿಗೆ, ಕೆಯ್ಯಕ್ಕರ, ಕೆಯ್ಯಾಡು, ಕೆಯ್ಯಾತ, ಕೆಯ್ಯಾನ, ಕೆಯ್ಯಾರಯ್ಕೆ. ಕೆಯ್ಯಾಸೆ, ಕೆಯ್ಯೊಳು, ಕೆಯ್ವಟ್ಟು, ಕೆಯ್ವಸ್ತ್ರ, ಕೆಯ್ಯಾಲೆ, ಕೆಯ್ನೀರು, ಕೆಯೋರ್ ಕೆಯೊಡೆ, ಕೆಯೊಲ, ಕೆಯ್ಕೂಲಿ, ಕೆಯ್ಗದಕ, ಕೆಯ್ಗದಕತನ, ಕೆಯ್ಗದಿರೆ, ಕೆಯ್ಗೆಸಿಕ್ಕು, ಕೆಯ್ಚಪ್ಪಳೆ, ಕೆಯ್ಕೋಲು, ಕೆಯ್ಗೂಸು'ತು, ಕೆಯ್ಗೂಡು, ಕೆಯ್ಗೆಬರು, ಕೆಯ್ಚಳಕು, ಕೆಯ್ಚಾಚು, ಕೆಯ್ಚುಟುಕು, ಕೆಯ್ಚೂಟಿ, ಕೆಯ್ಚೀಲ, ಕೆಯ್ತೋಡಿಸು, ಕೆಯ್ತಪ್ಪು, ಕೆಯ್ತಾಳ, ಕೆಯ್ದೊಡ್ಡದು, ಕೆಯ್ದೊನಡ, ಕೆಯ್ಪೆಟ್ಟು, ಕೆಯ್ಪರಹ, ಕೆಯ್ಪಳ, ಕೆಯ್ಪಿಡು, ಕೆಯ್ಮಗ್ಗ, ಕೆಯ್ಮುಗಿ, ಕೆಯ್ಮುಳಿ, ಕೆಯ್ಯಾಡು, ಕೆಯ್ಯಿನ್ದ, ಕೆಯ್ಯಿಲ್ಲದವನು, ಕೆಯ್ಯಣ್ಣೆ, ಕೆಯ್ಯೊಳಗೆ, ಕೆಯ್ಲಾಗು, ಕೆಯ್ಲಾಗದವ, ಕೆಯ್ವ ಗ, ಕೆಯ್ವಶ, ಕೆಯ್ವಶವಾಗು, ಕೆಯ್ವಾಸು, ಕೆಯ್ವರಸು, ಕೆಯ್ವಾಲ, ಕೆಯ್ಸನ್ನೆ, ಕೆಯ್ದೇರು, ಕೆಯ್ದೋಲ್

ಕೆಯಾಕು

'ಕೆಯ್' ಎನ್ನುವ ಒಂದು ಪದಕ್ಕೆ ಇಷ್ಟೊಂದು ನುಡಿಗಟ್ಟುಗಳನ್ನು ಕಿಟೆಲ್ ಹೆಕ್ಕಿ ತೆಗೆದು ಒಂದೆಡೆ ಕೊಟ್ಟಿರುವುದು ಯಾರನ್ನೂ ಬೆರಗುಗೊಳಿಸಬಲ್ಲುದು. 'ಎಳೆ' ಎಂಬ ಶಬ್ದಕ್ಕೆ ಕಿಟೆಲ್ ಹಳಗನ್ನಡ, ನಡುಗನ್ನಡ ಹಾಗೂ ಹಳೆಯ ನಿಘಂಟುಗಳಿಂದ ೨೪ ನುಡಿಗಟ್ಟುಗಳನ್ನು ಕಲೆ ಹಾಕಿದ್ದಾನೆ.

ಎಳೆಗಾಯಿ ಕಾಯಿ

ಎಳೆಗಾಳಿ	ಎಳೆತೊಗಲ್	ಎಳೆನಾರು	ಎಳೆಬಣ್ಣ
ಎಳೆಗೂಸು	ಎಳೆತಳಿರ್/ದಳಿರ್	ಎಳೆನೀರು	ಎಳೆಮಕ್ಕ
ಎಳೆಗೆಮ್ಮು	ಎಳೆನಗೆ	ಎಳೆನೀಲ	ಎಳೆಬಿಳುಪು
ಎಳೆಜೊನ್ನ	ಎಳೆನಡಿಗೆ	ಎಳೆನೇಸರು	ಎಳೆಮಿಂಚು
ಎಳೆಗೌಂಗು	ಎಳೆಪಾಕ	ಎಳೆಮಾವು	ಎಳೆ ಮೊಗರು
ಎಳೆಪುಲ್	ಎಳೆಮುತ್ತು	ಎಳೆವೆಣ್	ಎಳೆವುಲ್ಲು

ಇಂತಹ ಸಾವಿರಾರು ಸಾಮಾನ್ಯ ನುಡಿಗಟ್ಟುಗಳು ಕಿಟೆಲ್ ಕೋಶದಲ್ಲಿವೆ. ಮಾತಿನ ಭಾವವನ್ನು ಸ್ಪಷ್ಟಗೊಳಿಸಲು ಉಪಮಾನ ವಾಚಕ ಪದ ಪುಂಜಗಳನ್ನು ಬಳಸುವುದುಂಟು. ಇವು ತುಂಬ ಸ್ವಾರಸ್ಯವಾಗಿರುತ್ತವೆ. ಹಾಗೂ ಅರ್ಥಗರ್ಭಿತವಾಗಿರುತ್ತವೆ. ವಿಶಿಷ್ಟ ಅರ್ಥವನ್ನು ಕೊಡುತ್ತವೆ. ಅಂತಹುಗಳನ್ನು ವಿಶಿಷ್ಟಾರ್ಥದ ನುಡಿಗಟ್ಟುಗಳೆಂದು ಕರೆಯುವರು. ಮಿಶನರಿ ಕೋಶಗಳಲ್ಲಿ ಬಳಕೆಯಾದ ಅಂತಹ ನುಡಿಗಳನ್ನು ಆರು ರೀತಿಯಾಗಿ ವಿಂಗಡಿಸಬಹುದು.

ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿದವುಗಳು

ನಾಯಿಪಾಡು - ದುರವಸ್ಥೆ

ಗೂಬೆ ಕೂರಿಸು - ಕಳಂಕ ಹಚ್ಚು

ಉಡದ ಹಿಡಿತ - ಹಿಡಿದಿದ್ದನ್ನು ಬಿಡದಿರು

ಹಳೆ ಹುಲಿ - ಚೆನ್ನಾಗಿ ಪಳಗಿದವ

ಗಿಳಿಪಾಠ - ಕಂಠಪಾಠ ಮುಂತಾದವು

ಮಹಾಭಾರತಕ್ಕೆ ಸಂಬಂಧಿಸಿದವು

ವಜ್ರದೇಹಿ - ಗಟ್ಟಿ ಶರೀರ

ಯಕ್ಷಪ್ರಶ್ನೆ - ಕಠಿಣಪ್ರಶ್ನೆ

ಚಕ್ರವ್ಯೂಹ - ತೊಡಕಾದ ರಚನೆ ಸನ್ನಿವೇಶ

ಅಕ್ಷಯ ಪಾತ್ರೆ - ಬರಿದಾಗದ ಪಾತ್ರೆ ಮುಂತಾದವು

ರಾಮಾಯಣಕ್ಕೆ ಸಂಬಂಧಿಸಿದವು

ಧರಣಿಸುತೆ - ಸೀತೆ

ರಾಮರಾಜ್ಯ - ಸುಖಕರ ರಾಜ್ಯ

ರಾಮನಾಮ - ಪಾವನ

ಸುಗ್ರೀವಾಜ್ಞೆ - ಮೀರಲಾಗದ ಕಟ್ಟಪ್ಪಣೆ

ಸಂಜೀವಿನಿ - ಜೀವದಾನ ಮಾಡುವ ವಸ್ತು ಮುಂತಾದವು

ಪುರಾಣಕ್ಕೆ ಸಂಬಂಧಿಸಿದವು

ದರಣಿಸುತೆ - ಕುಬೇರ

ಲಕ್ಷ್ಮೀವಾರ - ಗುರುವಾರ

ಬ್ರಹ್ಮಗಂಟು - ಶಾಶ್ವತ ಸಂಬಂಧ

ಶಿವಶೂನ್ಯ - ಏನೂ ಇಲ್ಲದ

ಸಾಮಾನ್ಯ ವಸ್ತುಗಳಿಗೆ ಸಂಬಂಧಿಸಿದವು

ಗಾಳಿಮಾತು	-	ವ್ಯರ್ಥವಾದ ಮಾತು
ಶ್ಮಶಾನಮೌನ	-	ನಿಶ್ಶಬ್ದ
ಹದ್ದಿಗಿಂತ ಕಡೆ	-	ನೀಚತಾತ್ಸಾರ
ಆಕಾಶಕ್ಕೆ ಏಣಿ ಇಟ್ಟಂತೆ	-	ಅಸಾಧ್ಯವಾದುದನ್ನು ಪ್ರಯತ್ನಿಸು

ಮುಂತಾದವು

ಇತರ

ಅಂಗಲಾಚು	-	ದೈನ್ಯದಿಂದ ಬೇಡು
ಎದ್ದುನಿಲ್ಲು	-	ಗೌರವತೋರಿಸು
ಎತ್ತಿದಕೈ	-	ಪ್ರವೀಣ
ಕಣ್ಣುಹಚ್ಚು	-	ದೃಷ್ಟಿಯಾಗು
ಕಲ್ಲುಹಾಕು	-	ವಿಘ್ನಮಾಡು ಮುಂತಾದವು

ಇಂತಹ ವಿಶಿಷ್ಟಾರ್ಥ ನುಡಿಗಟ್ಟುಗಳು ಮಿಶನರಿ ಕೋಶಗಳಲ್ಲಿ ಬಳಕೆಯಾಗಿವೆ. 'ನುಡಿಗಟ್ಟುಗಳಲ್ಲಿ ಗ್ರಾಮೀಣ ಪರಿಸರದ ಜನರ ರೀತಿ-ನೀತಿಗಳು ಅವರು ಬದುಕಿನಲ್ಲಿ ಅನುಭವಿಸುವ ಭಾವನೆಗಳು ಅಭಿವ್ಯಕ್ತವಾಗುತ್ತವೆ. ಅವುಗಳ ಹಿಂದೆ ಜೀವನವನ್ನು ಕಂಡುಂಡ ಜನಪದ ಮನಸ್ಸಿನ ತಾತ್ವಿಕ ಚಿಂತನೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. ಇಂತಹ ವಿಶಿಷ್ಟ ಪದ ಪ್ರಯೋಗಗಳಲ್ಲಿ ಜನಪದ ಭಾಷೆಯ ಸತ್ವ ಸೊಗಡು ಎದ್ದು ಕಾಣುತ್ತದೆ[2] ಸಾಮಾಜಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಪಡೆದಿರುವ ನುಡಿಗಟ್ಟುಗಳು ಮಿಶನರಿ ಕೋಶಗಳ ಮೌಲ್ಯವನ್ನು ಹೆಚ್ಚಿಸಿವೆ.

೫.೦೪ ಅನುಕರಣ ವಾಚಕಗಳು

'ಪುಸ್ತಕವು ಧೊಪ್ಪನೆ ಬಿದ್ದಿತು' 'ಮನೆಯು ಲಕಲಕ ಹೊಳೆಯುತ್ತದೆ' 'ಹಾವು ಸಳಸಳ ದಾಟಿತು' ಇಂತಹ ವಾಕ್ಯಗಳನ್ನು ನಮ್ಮ ನಿತ್ಯ ಬದುಕಿನಲ್ಲಿ ಬಳಸುತ್ತೇವೆ (ಕೇಳುತ್ತೇವೆ). ಇಲ್ಲಿ ಬಳಕೆಯಾದ ಧೊಪ್ಪನೆ, ಲಕಲಕ, ಸಳಸಳ ಇಂತಹ ಪದಗಳು ಪ್ರಕೃತಿಯಲ್ಲಿ ಉಂಟಾದ ಸದ್ದನ್ನು ಅದೇ ರೀತಿಯಲ್ಲಿ ಉಚ್ಚಾರಣೆಯ ಮೂಲಕ ಸೂಚಿಸುತ್ತದೆ. ಸದ್ದು ಮಾತ್ರವಲ್ಲದೆ ಗಾತ್ರ, ಚಲನೆ, ಕ್ರಿಯೆಗಳನ್ನು ಸಹ ಅನುಸರಿಸುವ ಧ್ವನ್ಯುಚ್ಚಾರಣೆ ಇವು. ಸಪ್ಪಳಕ್ಕೂ ಮತ್ತು ನಮ್ಮ ಉಚ್ಚಾರಣೆಗೂ ಸಾಮ್ಯತೆ ಇಲ್ಲಿರುತ್ತದೆ. ಮಿಶನರಿಗಳು ತಮ್ಮ

ಕೋಶಸಿದ್ಧತೆಯಲ್ಲಿ ಅನೇಕ ಅನುಕರಣವಾಚಕಗಳಿಗೆ ಅರ್ಥ ಕೊಟ್ಟಿದ್ದಾರೆ. ಅವರ ಕೋಶಗಳನ್ನು ಕೇಂದ್ರವಾಗಿಟ್ಟುಕೊಂಡು ಅನುಕರಣ ಪದಗಳ ಬಳಕೆಯ ಸಾಮಾಜಿಕ ಸಂದರ್ಭವನ್ನು ಅನುಲಕ್ಷಿಸಿ ಕೆಲವು ಅಂಶಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ಅನುಕರಣವಾಚಕಗಳು ವ್ಯಾಕರಣದಲ್ಲಿ ಅವ್ಯಯಗಳ ವರ್ಗಕ್ಕೆ ಸೇರುತ್ತವೆ[೨] ಕೇಶಿರಾಜ ಅನುಕರಣವಾಚಕಗಳ ಲಕ್ಷಣಗಳನ್ನು ಹೇಳುತ್ತಾ ಅವು ಭಾಷೆಯಲ್ಲಿ ಧ್ವನಿರೂಪಗಳೇ ವಿನಃ ಸ್ವತಂತ್ರವಾದ ಶುದ್ಧಾಕ್ಷರಗಳಲ್ಲ. ಅವುಗಳನ್ನು ಶ್ರವಣ ಮೂಲಕ ಕೇಳಬಹುದಲ್ಲದೆ ವರ್ಣಾವೃತ್ತಿಗೆ ತರುವುದು ಸಾಧ್ಯವಿಲ್ಲ ಎಂದಿದ್ದಾನೆ. ಅವೆಲ್ಲವೂ ಕೇಶಿರಾಜನ ದೃಷ್ಟಿಯಲ್ಲಿ ಘನ ಸ್ವನಾದಿ ಧ್ವನಿಗಳು. ಅನುಕರಣ ವಾಚಕಗಳಿಗೆ ಅರ್ಥ ಇರದಿದ್ದರೂ ಹೇಳುವ ವಿಷಯವನ್ನು ಮನದಟ್ಟು ಮಾಡಿಕೊಡುತ್ತವೆ.

ಅನುಕರಣ ವಾಚಕಗಳಲ್ಲಿ ಎರಡು ವಿಧ. ಧ್ವನ್ಯುಚ್ಚಾರಣೆ ಪುನಾವೃತ್ತಿಯಾಗುವ ಅನುಕರಣಗಳು ಹಾಗೂ ಪುನರಾವರ್ತನೆಯಾಗದ ಧ್ವನ್ಯುಚ್ಚಾರಣೆಗೆ ಉದಾ- ಸಳಸಳ ಪಟಪಟ ಮುಂತಾದವು. ಇಂತಹ ಅನುಕರಣವಾಚಕಗಳು ವಾಕ್ಯದಲ್ಲಿ ಒಂದೇ ಸಲ ಬಂದರೆ ಅದಕ್ಕೆ ಅರ್ಥವಿರುವುದಿಲ್ಲ. ರಾಮನು ಗಳನೀರು ಕುಡಿದನು ಎಂಬಲ್ಲಿ 'ಗಳ' ಎಂಬುದಕ್ಕೆ ಅರ್ಥವಿಲ್ಲ. 'ರಾಮನು ಗಳಗಳನೆ ನೀರು ಕುಡಿದನು' ಎಂಬಲ್ಲಿ 'ಗಳಗಳ' ಎಂಬುದು ನೀರು ಕುಡಿಯುವ ಕ್ರಿಯೆಯನ್ನು ತಿಳಿಸುತ್ತದೆ. ಅಂತಹ ಅನುಕರಣಗಳು ಸ್ವತಂತ್ರವಾಗಿ ಬಳಕೆಯಾಗುವುದಿಲ್ಲವಾದ್ದರಿಂದ ಅವುಗಳನ್ನು ಬದ್ಧರೂಪಗಳೆಂದು ಕರೆಯಬಹುದು. ಪುನರಾವರ್ತನೆಯಾಗದ ಅನುಕರಣಗಳು 'ಉಮೇಶನು ಸರ್ರನೆ ಹೋದನು' 'ಹಾವು ಬುಸ್ ಎಂದಿತು' ಎನ್ನುವಲ್ಲಿ ಸರ್ರನೆ, ಬುಸ್ಸನೆ ಸ್ವತಂತ್ರವಾಗಿ ಬಳಕೆಯಾಗುವುದರಿಂದ ಅಂತಹವು ಸ್ವತಂತ್ರರೂಪಗಳೆಂದು ಕರೆಯಬಹುದು.

ಅನುಕರಣವಾಚಕ ಪದಗಳಿಗೆ ಅರ್ಥವಿದೆಯೆ? ಇದೆ. 'ಪಾರಮ್ಮಳು ಗಟಗಟನೆ ಹಾಲನ್ನು ಕುಡಿದಳು' ಎನ್ನುವಲ್ಲಿ 'ಹಾಲನ್ನು ಕುಡಿದಳು' ಯಾವ ರೀತಿಯಾಗಿ ಎಂಬುದನ್ನು ಸ್ಪಷ್ಟಪಡಿಸುವ ಕಾರ್ಯವನ್ನು ಅನುಕರಣವಾಚಕಗಳು ಮಾಡುವುದರಿಂದ ಅವುಗಳನ್ನು ಭಾಷೆಯ ಅರ್ಥಪೂರ್ಣ ಘಟಕಗಳೆಂದೇ ಭಾವಿಸಬೇಕು. ಅನುಕರಣವಾಚಕಗಳ ಅರ್ಥ ಇಂತಹದೇ ಎಂದು ಖಚಿತವಾಗಿ ಹೇಳುವುದು ಕಷ್ಟ. ಅದರ ಬದಲು ಅವು ಬಳಕೆಯಾಗುವ ಸಂದರ್ಭಗಳನ್ನು ಕೆಳಗೆ ಗುರುತಿಸಲು ಪ್ರಯತ್ನಿಸಲಾಗಿದೆ.

೧. ಒಂದು ಸಂಗತಿಯ ವಿಷಯವನ್ನು ಸ್ಪಷ್ಟಪಡಿಸುವಾಗ ಅನುಕರಣಪದಗಳನ್ನು ಬಳಸುತ್ತೇವೆ. 'ಹುಡುಗ ಶಾಲೆಯಿಂದ ಬರುವಾಗ ಎಡವಿ ದೊಪ್ಪನೆ ಬಿದ್ದನು' 'ಗಂಟೆ ಢಣ ಢಣವೆಂದು ಬಾರಿಸಿತು' ಎಂಬಂತಹ ವಾಕ್ಯಗಳನ್ನು ಗಮನಿಸಿದಾಗ ಹುಡುಗ ಬಿದ್ದ/ಬೀಳುವ ಕ್ರಿಯೆಯನ್ನು ತೋರಿಸುತ್ತದೆ. ಎರಡನೇ ವಾಕ್ಯ ಗಂಟೆಯ ಸದ್ದನ್ನು ತಿಳಿಸುತ್ತದೆ. ಇಂತಹ ಕಡೆಗಳಲ್ಲಿ ನಿರ್ದಿಷ್ಟತೆಯನ್ನು ಸೂಚಿಸಲು ಅನುಕರಣ ಪದಗಳು ಬಳಕೆಯಾಗುತ್ತವೆ. ಮಾತಿನ ಭಾವವು ಸ್ಪಷ್ಟವಾಗಲು ಇವು ನೆರವಾಗುತ್ತವೆ.

೨. ಕ್ರಿಯೆ/ಭಾವನೆಗಳನ್ನು ವ್ಯಕ್ತಪಡಿಸುವ ಸಾಧನಗಳು ಅನುಕರಣ ವಾಚಕಗಳು. ತಾಯಿ ತನ್ನ ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ ಮಗಳಿಗೆ ಕೆಲವು ಹಿತವಚನಗಳನ್ನು ಹೇಳುತ್ತಾಳೆ. 'ಅತ್ತೆ ಮಾವಂದಿರ ಎದುರಿಗೆ ಗಳಗಳ ಮಾತಾಡಬಾರದು' 'ಗಂಡನ ಮುಂದೆ ಟೀ ಟೀ ಅಂತ ನಕ್ಕೀಯೆ' ಎಂಬ ವಾಕ್ಯಗಳು ಎಷ್ಟು ಪರಿಣಾಮಕಾರಿ! ವಿಧೇಯಕರಾಗಿ ಬಾಳಬೇಕು ಎಂಬುದನ್ನು ಸೂಚಿಸುತ್ತವೆ. ಅನುಕರಣವಾಚಕ ಪದಗಳಲ್ಲಿ ಸ್ವಾರಸ್ಯ ಉಂಟು: ಪರಿಣಾಮವೂ ಹೆಚ್ಚು.

೩. ಇವುಗಳ ಬಳಕೆ ಹಳ್ಳಿಯ ಅಥವಾ ಸಾಮಾನ್ಯ ವಿದ್ಯಾವಂತರ ಮಾತಿನಲ್ಲಿ ಹೆಚ್ಚು. ವಿದ್ಯಾವಂತರಲ್ಲಿಯೂ ಶಿಷ್ಟೇತರ ಸನ್ನಿವೇಶ (informal) ಗಳಲ್ಲಿ ಬಳಕೆಯಾಗುತ್ತವೆ. ಸಾಹಿತ್ಯದಲ್ಲಿ ಅಥವಾ ಬರಹ ಭಾಷೆಯಲ್ಲಿ ಅವುಗಳ ಬಳಕೆ ಕಡಿಮೆ. 'ಬಂದಾಗ ಗಿಲ್ ಗಿಲ್ ..... ನಾ ಬಂದೆ ಸಿಲ್ ಸಿಲ್, ಕಟಿಗಿ ಹೊರಿಚೆಲ್ ಚೆಲ್' (ಚೆನ್ನವೀರ ಕಣವಿ) 'ಗಿರಿಗಿರಿ ಗಿಂಡಿ ಇಬತ್ತಿ ಉಂಡಿ' (ಶಿಶುಪ್ರಾಸ), 'ಮಿರಿ ಮಿರಿ ಮಿಂಚತಿದ್ದೆ ಥಳಥಳ ಹೊಳೆತಿದ್ದೆ' (ಸಂಗ್ಯಾಬಾಳ್ಯಾ) ಎಂಬಂತಹ ಪ್ರಯೋಗಗಳು ಬರಹದಲ್ಲಿ ಬಳಕೆಯಾಗುತ್ತವೆ. ಕಾವ್ಯ, ನಾಟಕ, ಕತೆಗಳಲ್ಲಿ ವಿಶೇಷವಾಗಿ ಸಂಭಾಷಣೆಗಳಲ್ಲಿ ಅವುಗಳ ಬಳಕೆ ಹೆಚ್ಚು. ಇಲ್ಲೆಲ್ಲಾ ಮಾತಿಗೆ ಮೊನಚನ್ನು ತಂದುಕೊಡುವುದೋ ಸನ್ನಿವೇಶವೊಂದನ್ನು ಸಹಜವಾಗಿಸುವುದು ಇವುಗಳ ಉದ್ದೇಶವಾಗಿರುತ್ತದೆ. ಗಂಭೀರವಾಗಿರುವ ಚರ್ಚೆಗಳಲ್ಲಿ ಇವುಗಳ ಬಳಕೆ ಕಡಿಮೆ.

೪. ಜಡ ವಸ್ತುಗಳ ಧ್ವನ್ಯನುಕರಣೆ ಆ ವಸ್ತುವಿನ ಗುಣವನ್ನು ಸೂಚಿಸಿದರೆ ಉಳಿದವುಗಳ (ಸಚೇತನ ಜೀವಿಗಳ) ಧ್ವನ್ಯುಚ್ಚಾರಣೆಯು ಕ್ರಿಯೆಯನ್ನು ಸೂಚಿಸುತ್ತವೆ. ಜಡವಸ್ತುಗಳ ಅನುಕರಣಾವ್ಯಯಗಳು: 'ಬಾಗಿಲು ಕಟಕಟ ಸದ್ದಾಯಿತು', 'ಕಂಬವು ಗದಗದ ನಡುಗುತ್ತದೆ', 'ಬಳೆಗಳು ಕಣಕಣ ಸದ್ದು ಮಾಡಿದವು'. ಪ್ರಾಣಿಗಳ ಕೂಗು: ಪ್ರಾಣಿಗಳ ಕೂಗನ್ನು ಅನುಕರಿಸುವ ಹೆಸರು ಹೇರಳವಾಗಿವೆ. ಉದಾ ದನವು ಅಂಬಾ ಎನ್ನುತ್ತದೆ, ಕಾಗೆ, ಕಾಕಾ/ ಕೌಕೌಯೆನ್ನುತ್ತದೆ, ಬೆಕ್ಕು ಮಿಯಾಂ ಮಿಯಾಂ ಎನ್ನುತ್ತದೆ ಮುಂತಾದವು. ಕೆಲವು ವಿಶಿಷ್ಟ ಶಬ್ದಗಳು: ಮನುಷ್ಯ ಮತ್ತು ಇತರ ಸಚೇತನ ಪ್ರಾಣಿಗಳ ವಿಶಿಷ್ಟವಾದ ಕ್ರಿಯೆಗಳಲ್ಲಿ ಒಂದು ವಿಧವಾದ ಸದ್ದು ಕೇಳಿ ಬರುತ್ತದೆ. ಅದನ್ನು ಅನುಕರಿಸಿ ಕೆಲವು ಕ್ರಿಯಾ ವಿಶೇಷಣಗಳನ್ನು ಮಾತಿನಲ್ಲಿ ಬಳಸುತ್ತಾರೆ. ಅಂತಹ ಅನುಕರಣಾವ್ಯಯಗಳು ಆಯಾ ಕ್ರಿಯೆಗಳ ವೈಶಿಷ್ಟ್ಯವನ್ನು ಕಣ್ಣಿಗೆ ಕಟ್ಟುವಂತೆ ಅಭಿವ್ಯಕ್ತಗೊಳಿಸುತ್ತವೆ. ಕೆಲವು ಕ್ರಿಯಾ ಪದಗಳನ್ನು ಇಂತಹ ಅವ್ಯಯಗಳೊಡನೆ ಸಹಜವಾಗಿಯೆಂಬಂತೆ ಬಳಸುತ್ತಾರೆ. ಭಾಷೆಯಲ್ಲಿ ಅವುಗಳ ಅವಶ್ಯಕತೆ ಬಹಳ. ಅವು ವಾಕ್ಯಗಳ ಆಯಾ ಅವ್ಯಯಗಳ ಭಾವವನ್ನು ಸೂಚಿಸುತ್ತದೆ. ಉದಾ-'ರಮೇಶನು ತರಗತಿಯಲ್ಲಿ ತುಟಿಪಿಟಿಕ್ ಎನ್ನದೆ ಸುಮ್ಮನಿದ್ದನು' ಮೈ ತಲೆ, ಎದೆ ಜುಂ ಎಂದಿತು' ಮುಂತಾದವು.

ಮಾತನಾಡುವಾಗ ವಿಶೇಷಾರ್ಥ ಕೊಡಲಿಕ್ಕೆ, ಕಾವ್ಯಸೌಂದರ್ಯ ಹೆಚ್ಚಿಸಲಿಕ್ಕೆ (ಸಾಹಿತ್ಯದಲ್ಲಿ ವಿಶಿಷ್ಟ

ವಾತಾವರಣ ನಿರ್ಮಿಸಲು) ಅನುಕರಣಪದಗಳು ತುಂಬ ನೆರವಾಗುತ್ತವೆ. ವ್ಯಂಗ್ಯ, ನಿಂದೆ, ಕಟಕಿ, ತಿರಸ್ಕಾರ, ಅಣಕ, ಕೋಪ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸಲು ಅನುಕರಣ ವಾಚಕಗಳು ಒಳ್ಳೆಯ ಮಾಧ್ಯಮ. ಅರ್ಥ ಅಥವಾ ನಿಯೋಗದ ದೃಷ್ಟಿಯಿಂದ ಅವು ಭಾಷೆಯಲ್ಲಿ ಮುಖ್ಯವಲ್ಲದಿದ್ದರೂ ಗಣನೀಯವಾದ ಪಾತ್ರವನ್ನು ವಹಿಸುತ್ತವೆಂಬುದನ್ನು ಗಮನಿಸಬೇಕು.

೫.೦೫. ಸ್ಥಳನಾಮಗಳು, ವ್ಯಕ್ತಿನಾಮಗಳು ಮತ್ತು ವೃತ್ತಿ ಪದಗಳು

ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಗ್ರಹಿಸಲು ಹಾಗೂ ಪುನರ್ರಚಿಸಲು ಕಾವ್ಯ, ಶಾಸನಗಳಂತೆ ನಾಮಗಳೂ ಸಹಾಯಕ ಸಾಮಗ್ರಿಗಳಾಗುತ್ತವೆಂದು ವಿದ್ವಾಂಸರು ಕಂಡುಕೊಂಡಿದ್ದಾರೆ. ಇವುಗಳ ಮೂಲಕ ಒಂದು ಪ್ರದೇಶದ ಸಾಮಾಜಿಕ, ಧಾರ್ಮಿಕ, ಭೌಗೋಳಿಕ ಜೀವನದ ಸ್ವರೂಪ ಮತ್ತು ಪರಿಸರವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಒಂದು ಶೈಕ್ಷಣಿಕ ಶಿಸ್ತಾಗಿ ಬೆಳೆಯುತ್ತಲಿದೆ. ನಾಮಗಳನ್ನು ಸ್ಥಳನಾಮ, ವ್ಯಕ್ತಿನಾಮಗಳೆಂದು, ವ್ಯಕ್ತಿನಾಮಗಳನ್ನು ವ್ಯಕ್ತಿನಾಮ ಮತ್ತು ಕುಲನಾಮಗಳೆಂದು ವರ್ಗೀಕರಿಸಲಾಗಿದೆ. ಇವು ಸಾಮಾಜಿಕ ವೈಶಿಷ್ಟ್ಯದ ಮುದ್ರೆಯನ್ನು ಹೊತ್ತಿರುವುದರಿಂದ ಇವುಗಳ ಅಧ್ಯಯನ ಇಂದು ಸಂಸ್ಕೃತಿ ಅಧ್ಯಯನದ ಮೌಲಿಕ ಸಾಧನವಾಗಿ ಪರಿಣಮಿಸಿದೆ.

ಸ್ಥಳಗಳ ಹೆಸರುಗಳೇ ಸ್ಥಳನಾಮಗಳು: ಅವುಗಳ ಅಧ್ಯಯನವೇ ಸ್ಥಳನಾಮ ವಿಜ್ಞಾನ. ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ಎರಡು ಆಕೃತಿಮಾಗಳಿರುತ್ತವೆ. ಪೂರ್ವ ಭಾಗವನ್ನು 'ನಿರ್ದಿಷ್ಟ' (Specific), ಉತ್ತರ ಭಾಗವನ್ನು 'ವಾರ್ಗಿಕ'ವೆಂದು (Generic) ಕರೆಯಬಹುದು. ಉದಾ- 'ಬೆಟ್ಟದೂರು' ಎಂಬಲ್ಲಿ 'ಬೆಟ್ಟ' ಎಂಬುದು ನಿರ್ದಿಷ್ಟ ಆಕೃತಿಮಾ ಏಕೆಂದರೆ ಅದು ಆ ಊರಿನ ವೈಶಿಷ್ಟ್ಯವನ್ನು ಹೇಳತಕ್ಕದ್ದು. 'ಊರು' ಎಂಬುದು ವಾರ್ಗಿಕ ಆಕೃತಿಮ- ಏಕೆಂದರೆ ಅದು ಸಾಮಾನ್ಯವಾಚಕ. ವಾರ್ಗಿಕಗಳು ಆ ಗ್ರಾಮದ ಸ್ವರೂಪವನ್ನು ತಿಳಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಅವುಗಳನ್ನು ನಿಸರ್ಗವಾಚಿ (-ಶಿರಗುಪ್ಪಿ) ವಸತಿವಾಚಿ (-ನಾಗರಾಣ) ಮತ್ತು ನಿರ್ಮಾಣವಾಚಿ (-ಅಕ್ಕಿಹೊಂಡ)ಗಳೆಂದು ವರ್ಗೀಕರಿಸಬಹುದು. ನಿಸರ್ಗವಾಚಿಗಳು ಅಲ್ಲಿಯ ಭೌಗೋಳಿಕ ಪರಿಸರವನ್ನು ವಸತಿವಾಚಿಗಳು ಅಲ್ಲಿ ವಾಸಿಸುವ ಜನಾಂಗದ ಇತಿಹಾಸವನ್ನು, ನಿರ್ಮಾಣವಾಚಿಗಳು ಮನುಷ್ಯ ನಿರ್ಮಿತ ಗ್ರಾಮಗಳನ್ನು ಅಥವಾ ನಾಮಾಂತರದಿಂದುಂಟಾದ ಪರಿವರ್ತನೆಗಳನ್ನು ತಿಳಿಸುತ್ತವೆ. ನಿರ್ದಿಷ್ಟಗಳು ಸಾಮಾನ್ಯವಾಗಿ ಆ ಗ್ರಾಮದ ವೈಶಿಷ್ಟ್ಯವನ್ನು ತಿಳಿಸುತ್ತದೆ. ಅವುಗಳನ್ನು ನಿಸರ್ಗವಾಚಿ (-ಮಣ್ಣೂರು), ಜನಾಂಗವಾಚಿ(-ಮುಂಡರಗಿ), ವ್ಯಕ್ತಿವಾಚಿ (-ಕೊಂಡನಾಯಕನ ಹಳ್ಳಿ), ನಿರ್ಮಾಣವಾಚಿ (-ಹೊಸೂರು), ಆದರ್ಶವಾಚಿ (ಶ್ರೀನಗರ)ಗಳೆಂದು ವರ್ಗೀಕರಿಸಬಹುದು. ವಾರ್ಗಿಕಗಳು ನಿರ್ದಿಷ್ಟವಾಗಬಹುದು. ಹಳ್ಳಿಗುಡಿ, ಹಳ್ಳಿಕೇರಿ ಮುಂತಾದವು.

ಸ್ಥಳನಾಮಗಳು ಒಂದು ಜನಾಂಗದ ಸಂಸ್ಕೃತಿಯ ಬೇರುಗಳು. ಒಂದು ವೇಳೆ ಜನಾಂಗ ಸ್ಥಳಾಂತರಗೊಂಡರೂ ಆ ಬೇರುಗಳು ಅವರ ಅಸ್ತಿತ್ವವನ್ನು ಎತ್ತಿ ಹೇಳುತ್ತವೆ.

ಮಿಶನರಿಗಳು ಕೋಶಕಿದ್ದತೆಗಾಗಿ ನಾಡಿನಾದ್ಯಂತ ಸುತ್ತಾಡಿದವರು. ಆ ಸಂದರ್ಭದಲ್ಲಿ ಅವರಿಗೆ ಅನೇಕ ಸ್ಥಳದ, ವ್ಯಕ್ತಿಗಳ ಹಾಗೂ ವೃತ್ತಿಗಳ ಹೆಸರುಗಳು ದೊರೆತಿವೆ. ಅವುಗಳನ್ನು ತಮ್ಮ ಕೋಶದಲ್ಲಿ ದಾಖಲಿಸಿದ್ದಾರೆ. ಕನ್ನಡಿಗರ ಜನಜೀವನನ್ನು ತಿಳಿದುಕೊಳ್ಳುವುದು ಮಿಶನರಿಗಳ ಉದ್ದೇಶವಾದ್ದರಿಂದ ನಾಮಗಳನ್ನು ಸೇರ್ಪಡಿಸುವುದು ಅವರಿಗೆ ಅನಿವಾರ್ಯವಾಗಿತ್ತು. ಮಿಶನರಿಕೋಶಗಳಲ್ಲಿ ಕೆಲವು ಸ್ಥಳನಾಮಗಳು ಇಂತಿವೆ. (ಕಿಟೆಲ್ ಕೋಶವನ್ನು ಅನುಲಕ್ಷಿಸಿ)

ಕಾರ್ಕಳ-ಕಾರ್ಲ, ಜಾರ್ಕಳ-ಜಾರ್ಲ ಎಂದಿಷ್ಟೆ ಹೇಳಿದ್ದಾರೆ. ಅಲ್ಲಿ ನಡೆಯುವ ವ್ಯಾಕರಣ ಪ್ರಕ್ರಿಯೆಗಳನ್ನು ಹೇಳಿಲ್ಲ. ಅವುಗಳಲ್ಲಿ ಪದ ಮಧ್ಯವರ್ಣ ಲೋಪವಾಗಿದೆ. (ಕ > ರ) 'ಇಂಗಳೇಶ್ವರ' ಎಂಬುದಕ್ಕೆ ಇಂಗಳೇಶ್ವರ ಬಾಗೇವಾಡಿ ಎಂದು ಹೇಳಿ ಲಿಂಗಾಯತ ಧರ್ಮದ ಸ್ಥಾಪಕ ಬಸವಣ್ಣನ ಹುಟ್ಟೂರು ಎಂದು ಹೇಳಿದುದು ಸೂಕ್ತವಾಗಿದೆ. (ಇಂಗಳ + ಈಶ್ವರ) ವಿಜಾಪೂರ ಜಿಲ್ಲೆಯ ಬಾಗೇವಾಡಿ ಪ್ರದೇಶದಲ್ಲಿಯ ಒಂದು ಊರಿನ ಹೆಸರು ಅದಾಗಿದೆ. 'ಇಕ್ಕೇರಿ'- ಹಿಕ್ಕೇರಿ ಬಿದರೂರು ದೊರೆಗಳ ರಾಜಧಾನಿ (ಇಕ್ಕು+ಕೇರಿ). ಬಿದರೂರ ದೊರೆಗಳು ನಿರ್ಮಿಸಿದುದನ್ನು ಇದು ಸೂಚಿಸುತ್ತದೆ. ಇಲ್ಲಿರುವ ವಾರ್ಗಿಕ ಕೆರೆ > ಕೆರಿ/ಕೇರಿ ಜಲಸಂಬಂಧಿಯಾಗಿದೆ. ಇದು ಗ್ರಾಮ ಜೀವನಕ್ಕೆ ಇರುವ ನೀರಿನ ಮಹತ್ವವನ್ನು ಸೂಚಿಸುವ ಅಂಶವಾಗಿದೆ. 'ಊರು' ಎಂಬುದಕ್ಕೆ ವಾಸಸ್ಥಳ ಎಂದು ಹೇಳಿ ಅದಕ್ಕೆ ಉದಾಹರಣೆಗಳನ್ನು ಕೊಡದೆ ಸಾಧಿತ ರೂಪಗಳನ್ನು ಕೊಡುವಾಗ ಊರು ದೇವಮ್ಮ, ಊರಪ್ಪ (ಗ್ರಾಮದೇವತೆ)ಗಳನ್ನೂ ಹೆಸರಿಸಿದ್ದಾರೆ-'ಊರು' ಇದು ವಸತಿಗಾಗಿ ಕಟ್ಟಿದ ಗ್ರಾಮವನ್ನು ಸೂಚಿಸುತ್ತದೆ. ಈ ವಾರ್ಗಿಕವು ಆಯಾ ಗ್ರಾಮಗಳ ಗಾತ್ರವನ್ನು ಸೂಚಿಸುವುದು ಗಮನಾರ್ಹ. ಉದಾ-ದೇವಲಾಪೂರ, ಮಮದಾಪೂರ ಮುಂತಾದವು.

'ಉಡುಪಿ'ಗೆ ಪಶ್ಚಿಮ ಕರಾವಳಿಯ ಒಂದು ಪ್ರದೇಶ ಎಂದು ಹೇಳಿ ಅದರ ಮೂಲರೂಪ 'ಉಡುಪ್ಪು' ಎಂದಿದ್ದಾರೆ. 'ಒಡಿಪು ಅಥವಾ ಉಡುಪು ಎಂಬುದೇ ಈಗಣ 'ಉಡುಪಿ'ಯ ಮೂಲ ರೂಪವಾಗಿದೆ ಎಂಬುದನ್ನು ಸಾಧಾರಣವಾಗಿ ಸಾಧಿಸಲಾಗಿದೆ. ತುಳುವಿನ ಸ್ಥಳನಾಮಗಳು ವ್ಯಂಜನಾಂತವಾಗಿ ಕಾಣಿಸುವುದು ಅಧಿಕವಾದರೂ, ಅಷ್ಟು ತುಳುವಿನ ಕೆಲವು ಹೆಸರುಗಳು 'ಉ' ಕಾರಾಂತವಾಗಿ ನಿಲ್ಲುತ್ತವೆ. ಉದಾ: ಉಡುಪ್ಪು (< ಉಡ್ಪಿ), ಬಜಪ್ಪು, ಮಜಪ್ಪು, ಕುಡುಪ್ಪು, ಮಲಪ್ಪು ಮುಡುಪ್ಪು ಮುಂತಾದವು [೧೧]. 'ಕೊಪ್ಪ' ಎಂಬುದಕ್ಕೆ 'ಸಣ್ಣಹಳ್ಳಿ' ಎಂದು ಕಿಟೆಲ್ ಹೇಳಿದ್ದಾನೆ. ಕೊಪ್ಪ ಶಬ್ದದ ನಿರುಕ್ತಿಯ ಬಗ್ಗೆ ಒಂದು ಮಾತು. ಕೇಶಿರಾಜನ ಪ್ರಕಾರ 'ಕುಪ್ಪ' ಎಂಬುದು ಮೂಲವಾಗಿದ್ದು ಇದು 'ರಾಶಿಮಾಡು, ಪುಂಜೀಕರಿಸು, ರಾಶಿಬೀಳು' ಮುಂತಾದ ಅರ್ಥ ಹೊಂದಿದೆ [೧೧] ಇದರಿಂದ ಸಾಧಿತವಾದ 'ಕೊಪ್ಪ' ಎಂದರೆ ಹಲವಾರು ಜನ ಒಂದೇ ಕಡೆ ಗುಂಪಾಗಿ

ನೆಲೆಸಿರುವ ಒಂದು ಕೇರಿ ಅಥವಾ ಹಳ್ಳಿ ಎಂದಾಗುತ್ತದೆ. ಕುಪ್ಪಿ, ಗುಪ್ಪಿ ಎಂಬ ರೂಪಗಳು ಕೂಡ ಇದೇ ಮೂಲದಿಂದ ಬಂದುವೆಂದು ಡಾ. ಆರ್. ಸಿ. ಹಿರೇಮಠ ಅವರು ಅಭಿಪ್ರಾಯಿಸಿದ್ದಾರೆ[೧೨]. ಇವನ್ನು ಇನ್ನೂ ಯೋಚಿಸಬೇಕಾಗಿದೆ. -'ಕೊಪ್ಪ'ದಿಂದ ಕೊನೆಯಾಗುವ ಗ್ರಾಮನಾಮಗಳು (ಚಿಕ್ಕಕೊಪ್ಪ, ಭಾಗೋಜಿಕೊಪ್ಪ, ಗೋವನಕೊಪ್ಪ ಮುಂತಾದವು) ಆ ಹೆಸರುಗಳ ಪರಿಸರವನ್ನು ಪ್ರತಿನಿಧಿಸುತ್ತದೆ. ಇವುಗಳನ್ನು ಗಮನಿಸಿ ಆ ಗ್ರಾಮಗಳ ಭೌಗೋಳಿಕತೆಯನ್ನು ಹೇಳಬಹುದಾಗಿದೆ. ಸ್ಥಳನಾಮಗಳು ಒಂದು ಪ್ರದೇಶದ ಭೌಗೋಳಿಕತೆಯನ್ನು ಅಲ್ಲಿಯ ಜನತೆಯ ಇತಿಹಾಸ, ಸಂಸ್ಕೃತಿಗಳ ಸ್ವರೂಪವನ್ನು ತಿಳಿಸಿಕೊಡುವ ಉತ್ತಮ ಸಾಧನವೆನಿಸಿವೆ. ಭಾಷಾಶಾಸ್ತ್ರ ದೃಷ್ಟಿಯಿಂದ ಸ್ಥಳನಾಮ ಶೋಧನೆಗೆ ಅಗ್ರಮಾನ್ಯತೆ ಇದೆ. ಯಾವ ಗ್ರಂಥಗಳಲ್ಲೂ, ಕೋಶಗಳಲ್ಲೂ, ಆಡು ಮಾತಿನಲ್ಲಿಯೂ ಉಪಲಬ್ಧವಿರದ ಪ್ರಾಚೀನರೂಪಗಳು ಸ್ಥಳನಾಮಗಳಲ್ಲಿರುತ್ತವೆಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಸ್ಥಳನಾಮಗಳಂತೆ ವ್ಯಕ್ತಿನಾಮಗಳು ಮಿಶನರಿ ಕೋಶಗಳಲ್ಲಿ ಎಡೆ ಪಡೆದಿವೆ. ವ್ಯಕ್ತಿಗಳ ಹೆಸರುಗಳೇ ವ್ಯಕ್ತಿನಾಮಗಳು: ಅವುಗಳ ಅಧ್ಯಯನವೇ ವ್ಯಕ್ತಿ ನಾಮವಿಜ್ಞಾನ. ಸ್ಥಳನಾಮಗಳಂತೆ ವ್ಯಕ್ತಿನಾಮಗಳಲ್ಲಿಯೂ ಪೂರ್ವ (ನಿರ್ದಿಷ್ಟ) ಹಾಗೂ ಉತ್ತರ (ವಾರ್ಗಿಕ) ಎಂಬ ಎರಡು ಘಟಕಗಳಿರುತ್ತವೆ. ಉದಾ- ಮಲ್ಲಪ್ಪ ಎನ್ನುವಲ್ಲಿ ಮಲ್ಲ+ ಅಪ್ಪ ಇಲ್ಲಿ ನಿರ್ದಿಷ್ಟವೇ ವ್ಯಕ್ತಿನಾಮ. ವಾರ್ಗಿಕವನ್ನು ಬಿಟ್ಟರೂ ನಡೆಯುತ್ತದೆ. ವಾರ್ಗಿಕಗಳು ಸಾಮಾನ್ಯವಾಗಿ ಸಾಮಾಜಿಕ ಸ್ಥಾನವನ್ನು ನಿರ್ದೇಶಿಸುತ್ತವೆ. ಕನ್ನಡದಲ್ಲಿ ಬಳಕೆಯಾಗುವ ವಾರ್ಗಿಕಗಳನ್ನು ಸಂಬಂಧವಾಚಿ, ವೃತ್ತಿವಾಚಿ, ಗೌರವವಾಚಿಯೆಂದು ವರ್ಗೀಕರಿಸಬಹುದಾಗಿದೆ[೧೩] ಸಂಬಂಧವಾಚಿಗಳಲ್ಲಿ ಅಪ್ಪ, ಅಣ್ಣ, ಅಜ್ಜ, ತಮ್ಮ, ಅಯ್ಯ, ಅಜ್ಜಿ, ಅಮ್ಮ, ಅವ್ವ, ಅಕ್ಕ ಇತ್ಯಾದಿ. ವೃತ್ತಿವಾಚಿಗಳಲ್ಲಿ ಗೌಡ, ನಾಯಕ ಇತ್ಯಾದಿ. ಗೌರವವಾಚಿಗಳಲ್ಲಿ ದೇವ. ಸ್ವಾಮಿ, ಭಟ್ಟ, ದೇವಿ ಇತ್ಯಾದಿ. ವಾರ್ಗೀಕಗಳು ಕೆಲವೊಮ್ಮೆ ನಿರ್ದಿಷ್ಟವಾಗುತ್ತದೆ. ಅಣ್ಣಪ್ಪ, ಅಪ್ಪಣ್ಣ, ಇತ್ಯಾದಿ.

ಮಿಶನರಿ ಕೋಶಗಳಲ್ಲಿ 'ಅಮ್ಮ' ಎಂಬುದಕ್ಕೆ 'ಅಬ್ಬೆ', 'ಅವ್ವ', ಇತ್ಯಾದಿ ಪರ್ಯಾಯ ರೂಪಗಳನ್ನು ಕೊಟ್ಟಿದ್ದಾರೆ. ಅದರ ಅರ್ಥ ವಿವೇಚನೆಗೆ ತೊಡಗಿಲ್ಲ ಹಳಗನ್ನಡದಲ್ಲಿ ಅಮ್ಮ ಎಂದರೆ ತಂದೆ ಎಂದೂ ಅಬ್ಬೆ ಎಂದರೆ ತಾಯಿ ಎಂದೂ ಅರ್ಥವಾಗುತ್ತಿತ್ತು. ಹೊಸಗನ್ನಡದಲ್ಲಿ ಅಮ್ಮ ಎಂಬುದು ತಾಯಿ ಎಂಬರ್ಥದಲ್ಲಿ ಹೆಚ್ಚು ಕಡಿಮೆ ಕನ್ನಡ ನಾಡಿನ ಎಲ್ಲೆಡೆಗಳಲ್ಲಿಯೂ (ಬೆಳಗಾವಿ ಉಪಭಾಷೆಯಲ್ಲಿ ಅಮ್ಮ ಪದವು ಅಜ್ಜಿ ಅರ್ಥದಲ್ಲಿ ಬಳಕೆಯಾಗಿದೆ) ಅಬ್ಬೆ ಎಂಬುದು ತಾಯಿ ಎಂಬ ಅರ್ಥದಲ್ಲಿ ಕೆಲವು ಉಪಭಾಷೆಗಳಲ್ಲಿಯೂ ಬಳಕೆಯಲ್ಲಿದೆ. ದಾವಣಗೆರೆಯ ಸುತ್ತ ಮುತ್ತ ಇದು ಅಬೆ ಅಥವಾ ಬೇ ಆಗಿ ಸ್ವಲ್ಪ ಹೀನಾರ್ಥವನ್ನು ಪಡೆದುಕೊಂಡಿದೆ. ('ಏನಬೇ'-ಇದು ಲಂಬಾಣಿ ಸ್ತ್ರೀಯರನ್ನು ಸಂಬೋಧಿಸುವ ವಿಧಾನ) ಬೆಳಗಾವಿ ಸುತ್ತಮುತ್ತ ೫೦ ವಯಸ್ಸು ಮೇಲ್ಪಟ್ಟ ಸ್ತ್ರೀಯರನ್ನು ಸಂಬೋಧಿಸುವಾಗ ಸಂಬಂಧವಾಗಿ ವಾರ್ಗಿಕಕ್ಕೆ ಬೇ

ಸೇರಿಸುತ್ತಾರೆ. ಆಗ ಅದು ಗೌರವ ಸೂಚಕದಂತೆ ಬಳಕೆಯಾಗುತ್ತದೆ (ಯಮ್ಮಾಬೇ). ಈ ಎಲ್ಲ ಅಂಶಗಳನ್ನು ಗಮನಿಸಿ ವಿಚಾರ ಮಾಡಿದರೆ ಅಮ್ಮ ಮತ್ತು ಅಬ್ಬೆ ಎಂಬ ರೂಪಗಳು ಒಂದೇ ಮೂಲವಿರುವಂತಿದೆ. (ಸಂಸ್ಕೃತದ ಅಂಬಾದಿಂದ ಬಂದಿರುವ ಸಾಧ್ಯತೆ ಬಹುವಾಗಿ ಇವೆ) 'ಅಲ್ಲಮ' ಎಂಬುದಕ್ಕೆ ಕಿಟೆಲ್ ಅಲ್ಲಮದೇವ, ಲಿಂಗಾಯತ ಹೆಸರು ಎಂದಿಷ್ಟೇ ಹೇಳಿರುವರು. ಅಲ್ಲಮಪ್ರಭುದೇವನಿಗಿಂತ ಹಿಂದೆಯೇ ಈ ಹೆಸರಿನ ಹಲವು ವ್ಯಕ್ತಿಗಳು ಶಾಸನಗಳಲ್ಲಿಯೂ ಕಾವ್ಯಗಳಲ್ಲಿಯೂ ಉಕ್ತವಾಗಿದೆ. ಅವರು ಲಿಂಗಾಯತ ಕೋಮಿಗೆ ಮಾತ್ರ ಸೇರಿದವರಲ್ಲ. (-ಅಲ್ಲಿಗ, ಅಲ್ಲಗೌಡ, ಅಲ್ಲಯ್ಯ, ಅಲ್ಲಪ್ಪ ಮುಂತಾದವು). ಈ ಹೆಸರಿನ ಕೊನೆಯ 'ಮ' ಎಂಬುದು 'ಅಮ್ಮದ' ಸವೆದ ರೂಪ ಎಂಬುದು ತಕ್ಷಣವೇ ಹೊಳೆಯುತ್ತದೆಯಾದರೂ ಅಲ್ಲಮ ಪದದ ಪೂರ್ವಾರ್ಧದ ಮೂಲ ಇನ್ನೂ ಅಜ್ಞಾತವಾಗಿಯೇ ಉಳಿದಿದೆ [೧೪] ವಾರ್ಗಿಕಗಳು ನಿರ್ದಿಷ್ಟವಾಗುವ ವ್ಯಕ್ತಿನಾಮಗಳು ಮಿಶನರಿ ಕೋಶಗಳಲ್ಲಿವೆ. ಅಕ್ಕ-ಅಕ್ಕಮ್ಮ (-ಅಮ್ಮ) ಅಕ್ಕಯ್ಯ (ಅಯ್ಯ), ಅಕ್ಕವ್ವ (-ಅವ್ವ) ಅಪ್ಪ-ಅಪ್ಪಣ್ಣ (-ಅಣ್ಣ) ಅಪ್ಪಯ್ಯ (-ಅಯ್ಯ) ಪೌರಾಣಿಕ ಹೆಸರುಗಳ ಕೋಶಗಳಲ್ಲಿ ಬಂದಿವೆ. ಉರ್ವಶಿ, ಊರ್ಮಿಳೆ, ಧೃತರಾಷ್ಟ್ರ, ಕುಮಾರರಾಮ ಮುಂತಾದ 'ಶಿವ' ವ್ಯಕ್ತಿನಾಮಕ್ಕೆ ಕಿಟೆಲ್‌ರು ಅಮರೇಶ, ಈಶ್ವರ, ಉಕ್ಷಪತಿ, ಉಕ್ಷರಾಜ, ಉಮೇಶ, ಉಮಾಪತಿ, ಉಮಾವರ, ಉಮಾಪ್ರವರ, ಉಮಾವಲ್ಲಭ, ಉಮಾರಮಣ, ಏಣಾದಿನಾಥ, ಏಣಾಧಿನಾಯಕ, ನಾಗಯ್ಯ ಎಂಬ ಪರ್ಯಾಯ ಹೆಸರುಗಳನ್ನು ಕೊಟ್ಟಿದ್ದಾರೆ.

'ಅಡ್ಡ ಹೆಸರು' ಎಂಬ ಪದವನ್ನು ಉತ್ತರ ಕರ್ನಾಟಕದಲ್ಲಿ (ಕುಲನಾಮ) Surname ಎಂಬುದಕ್ಕೆ ದಕ್ಷಿಣ ಕರ್ನಾಟಕದಲ್ಲಿ Nickname (ತಮಾಷೆಗಾಗಿ ಕರೆಯುವ ಹೆಸರು) ಎಂಬುದಕ್ಕೆ ಪರ್ಯಾಯವಾಗಿ ಬಳಸುತ್ತಾರೆ. ಕುಲನಾಮಗಳನ್ನು ಧಾನ್ಯ, ಜಾಗ, ಮತ, ವೃತ್ತಿ, ಪ್ರಾಣಿಗಳು, ವಸ್ತುಗಳು, ಲಿಂಗ, ಹುಟ್ಟಿದೂರು, ಪೂರ್ವಜರುಗಳೆಂದು ಸ್ಥೂಲವಾಗಿ ವರ್ಗೀಕರಿಸಬಹುದು[೧೫]. ಕಿಟೆಲ್ ಕೋಶದಲ್ಲಿ ಕೆಲವು ಅಡ್ಡ ಹೆಸರುಗಳು ಬಳಕೆಯಾಗಿವೆ. 'ಕೊತ್ತಮ್ಬರಿ' ಎಂಬುದಕ್ಕೆ ಕೊತ್ತುಂಬರಿ, ಕೊತಂಬರಿ ಪರ್ಯಾಯ ರೂಪಗಳನ್ನು ಹೇಳಿದ್ದಾನೆ. ಅದು ವರ್ತಕ ವರ್ಗವನ್ನು ಸೂಚಿಸುತ್ತದೆ. ಸಂಭಾರ ಬೀಜಗಳನ್ನು ಮಾರುವವರು. 'ಕೊತ್ತವಾರ' ಎಂಬುದಕ್ಕೆ ಕಿಟೆಲ್ ಪೋಲೀಸ್ ಅಧಿಕಾರಿ ಎಂದು ಅರ್ಥ ಕೊಟ್ಟಿದ್ದಾರೆ. ಕೊತ್ತವಾರ (೮) ಎಂದರೆ ಕೋಟೆಯ ಕಾವಲುಗಾರ/ದುರ್ಗರಕ್ಷಕ ಒಂದು ಸಮುದಾಯದ ಸಂಸ್ಕೃತಿಯನ್ನರಿಯಲು, ವಂಶಾವಳಿಯನ್ನು ಅರಿಯಲು ವ್ಯಕ್ತಿನಾಮಗಳೆ ತುಂಬ ನೆರವಾಗುತ್ತವೆ.

ಮಿಶನರಿ ಕೋಶಗಳಲ್ಲಿ ಅನೇಕ ವೃತ್ತಿ ಪದಗಳು ದಾಖಲಾಗಿವೆ. ವಂಶ ಪರಂಪರಾಗತವಾಗಿ ಬಂದಿರುವ ಕೈಕಸಬುಗಳಾದ ಕುಂಬಾರಿಕೆ, ಕಂಬಾರಿಕೆ, ಬಡಿಗತನ, ಚಿಮ್ಮಾರಿಕೆ ಮುಂತಾದ ವೃತ್ತಿಗಳಿಗೆ ಸಂಬಂಧಿಸಿದ ಪದ ಸಂಪತ್ತನ್ನು ರಕ್ಷಿಸಿ ಆವೃತ್ತಿ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು

ತಿಳಿದುಕೊಳ್ಳಲು ವೃತ್ತಿಪದಗಳು ಮಹತ್ವದ ಪಾತ್ರ ವಹಿಸುತ್ತದೆ[೬] ಮಿಶನರಿಗಳು ಬೇರೆ ಬೇರೆ ವೃತ್ತಿ ಪದಗಳಿಗೆ ಸಂಕ್ಷಿಪ್ತವಾಗಿ ಅರ್ಥ ಹೇಳಿದ್ದಾರೆ. 'ಅಗಸ' ಎಂಬುದಕ್ಕೆ ಅಸಗ, ಅಗಸಿಗ, ಎಂದು ಹೇಳಿದ್ದಾರೆ. 'ಅಗಸ' ಎಂದರೆ ಬಟ್ಟೆ ಮಡಿಮಾಡುವವ.ಅಗಸರು ಗ್ರಾಮದಲ್ಲಿ ಸ್ಥಿತಿವಂತರ ಬಟ್ಟೆಗಳನ್ನು ಮಾತ್ರ ಮಡಿ ಮಾಡುತ್ತಾರೆ. ಮೈನೆರೆದಾಗ, ಮದುವೆ ಇಂತಹ ಸಾಂಸ್ಕೃತಿಕ ಸಂದರ್ಭಗಳಲ್ಲಿ ಇವರಿಗೆ ಸೀರೆ, ಕುಪ್ಪಸ ಕೊಡುವರು. ಮದುವೆಯ ಮನೆಯಿಂದ ವೀರಭದ್ರದೇವರ ಗುಡಿಯುವರೆಗೆ ಗುಗ್ಗುಳ ತೆಗೆದುಕೊಂಡು ಹೋಗುವಾಗ ಅಗಸರು ಹಡದಿ ಹಾಸುವರು (ಮಡಿಸೀರೆ) ಪಲ್ಲಕ್ಕಿ ಉತ್ಸವ, ಸ್ವಾಮಿಗಳು ಬಂದಾಗ ಅಗಸರು ಹಡದಿ ಹಾಸುವರು. ಕುಮ್ಮಾ -ಕುಮ್ಮ >ಕುಮ್ಮಪುರ, ಕುಮ್ಮರಪುರ ಇದು ಕಿಟೆಲ್‌ನ ವಿವರಣೆ. 'ಕುಂಬಾರ' ಎಂದರೆ ಮಣ್ಣಿನ ಪಾತ್ರೆಗಳನ್ನು ಮಾಡುವವನು. ಕುಂಭ (ಕುಂಬ) ಎಂದರೆ ಕಲಶ, ಗಡಿಗೆ ಅದನ್ನು ಮಾಡುವವ ಕುಂಭಕಾ (> ಕುಂಬಗಾ > ಕುಂಬ) ಕುಂಬಾರ. ಇವನ ಹೆಂಡತಿ ಕುಂಬರತಿ. (ಕುಂಬಾರಗಿತ್ತಿ) ಇವನ ಕಾರ್ಯಾಗಾರ ಕುಂಬಾರಸಾಲೆ. ಇಲ್ಲಿ ಇವನು ಬಳಸುವ ಮುಖ್ಯವಾದ ಉಪಕರಣಗಳ ಎರಡು 'ತಿಗುರಿ' ಮತ್ತು 'ತಿಗುರಿಕೋಲು' ಇವುಗಳನ್ನು ಬಳಸಿ ಆತ ಮಾಡುವುದು ಕುಂಬಾರಿಕೆ. ಒಕ್ಕಲು ಕುಟುಂಬಗಳಿಗೆ ವಿವಿಧ ನಮೂನೆಯ ಪಾತ್ರೆಗಳನ್ನು ಹಬ್ಬ ಹರಿದಿನಗಳಲ್ಲಿ ವಿವಿಧ ನಮೂನೆಯ ವಸ್ತುಗಳನ್ನು ಮಾಡಿಕೊಡುವರು.

ಮಿಶನರಿಗಳು ವಿವಿಧ ವೃತ್ತಿ ಪದಗಳನ್ನು ವಿವರಿಸುವಾಗ ಅವುಗಳಿಗೆ ಸಂಬಂಧಿಸಿದಂತೆ ಗಾದೆಗಳನ್ನು ಹೇಳುತ್ತಾರೆ. 'ಗಾಣಿಗ' ಎಣ್ಣೆ ತೆಗೆಯುವವ. ಆದಕ್ಕೆ ಸಂಬಂಧಿಸಿದಂತೆ 'ಎಳ್ಳು ಗಾಣಿಗಬಲ್ಲ ಸುಳ್ಳು ಸಿಂಪಿಗೆ..... ಎಂಬ ಸರ್ವಜ್ಞನ ವಾಣಿಯನ್ನು ಉದಾಹರಿಸುತ್ತಾನೆ. 'ಹಾರುವನಿಗೆ ಆಳಾಗಬೇಡ: ಗಾಣಿಗನ ಎತ್ತಾಗಬೇಡ' 'ಗಾಣಿಗನ ಸಂಗಡ ಕಡಿದಾಡಿ ಒಣರೊಟ್ಟಿ ತಿಂದ' ಎಂಬ ಗಾದೆಗಳು ಆ ವೃತ್ತಿಯ ಸ್ವರೂಪವನ್ನು ತಿಳಿಸುತ್ತವೆ. 'ತಳವಾರ' ಎಂಬುದಕ್ಕೆ ಕಿಟೆಲ್ ತಲಾರಿ. ತಳಾರ ಎಂಬ ಪರ್ಯಾಯ ಹೆಸರುಗಳನ್ನು ಹೇಳುತ್ತಾನೆ. 'ಕುಳವಾರು ಇಲ್ಲದ ಊರಿಗೆ ತಳವಾರ ಏನು ಮಾಡ್ಯಾನು?' (ತಳವಾರ ಊರಿನ ಕಾವಲುಗಾರ) 'ಉಪಾ ' ಉಪ್ಪು ತಯಾರಿಸುವವನು. 'ಉಪ್ಪಾರನ ಮಗನಾದರೆ ಉಪ್ಪಿಲ್ಲದೆ ಉಂಡಾನೆ' 'ಮೇಧಾರ' ಬಿದಿರು ಮತ್ತು ಬೆತ್ತದ ಕೆಲಸ ಮಾಡುವವರು. ಇವರು ಬಿದಿರಿನಿಂದ ಬುಟ್ಟಿ, ಚಾಪೆ ಮುಂತಾದವುಗಳನ್ನು ಮಾಡುವರು. ಮೇದಾರಕೇರಿ, ಮೇದಾರವ, ಮೇದಾರವಳು, ಕಿಟೆಲ್‌ರ ಈ ವಿವರಣೆ ಸೂಕ್ತವಾಗಿದೆ. 'ಬಡಿಗ' ಎಂಬುದಕ್ಕೆ ಕಿಟೆಲರು ಬಡಗಿ, ಬಡಿಗನ ಉಳಿ, ಊರ ಬಡಿಗ, ಬಡಿಗನ ಹಕ್ಕಿ ಬಡಿಗಿತನ, ಬಡಗಿ ಕೆಲಸ ಮಾಡುವವ ಎಂದು ವಿವರಣೆ ಕೊಟ್ಟಿದ್ದಾರೆ. 'ಬಡಿಗ' ಮರದ ಕೆಲಸ ಮಾಡುವವ. ರೈತ ಕುಟುಂಬಗಳಿಗೆ ವಿವಿಧ ಸಲಕರಣೆಗಳನ್ನು ನಿರ್ಮಿಸಿಕೊಡುವುದು ಅವರ ಕಾಯಕವಾಗಿದೆ. 'ಎಕ್ಕಸರ' ಏಕಸರದ ತದ್ಭವ ಎಂದು ಹೇಳಿರುವುದು ಸೂಕ್ತವಾಗಿದೆ. ಇದು ಅಕ್ಕ ಸಾಲಿಗರು ಮಾಡುವ ಆಭರಣ. ಸ್ತ್ರೀಯರು ಕೊರಳಲ್ಲಿ ಹಾಕಿಕೊಳ್ಳುತ್ತಾರೆ. 'ಉಳಿ' ಮರಕೆತ್ತುವ ಸಾಧನ, ಸಮಗಾರನ ಉಳಿ, ಉಗುರುಳಿ, ಕಲ್ಲುಳಿ, ತಿರುಪುಳಿ ವಿವಿಧ ಉಳಿಗಳ ಹೆಸರುಗಳನ್ನು ಕಿಟೆಲ್ ಹೆಸರಿಸಿದ್ದಾನೆ. 'ಉಳಿ ಸಣ್ಣದಾದರೂ ಮರ ಕಡಿಯೋದು ಬಿಡದು' ಎಂಬ ಗಾದೆ

ಉಳಿಯ ಸ್ವರೂಪವನ್ನು ತಿಳಿಸುತ್ತದೆ. 'ನಾವಲಿಗ' ಎಂಬುದಕ್ಕೆ ಕಿಟೆಲ್ ನಾವಳಿಗ, ನಾಪಿತ, ಕೆಲಸಿ, ಗ್ರಾಮಣಿ, ದಿವಾಕೀರ್ತಿ, ನಾಪಿತ, ಮುಣ್ಡಿ, ಕ್ಷೌರಿಕ, ನಾಹಿಗ, ಹಸಿಬೀ (ಹಡಪ) ಎಂಬ ಸಮಾನಾರ್ಥ ರೂಪಗಳನ್ನು ಒಂದೆಡೆ ಕೊಟ್ಟಿದ್ದಾನೆ.

ಮಿಶನರಿಗಳು ತಮ್ಮ ಕೋಶಗಳಲ್ಲಿ ಸ್ಥಳನಾಮ, ವ್ಯಕ್ತಿನಾಮ, ಕುಲನಾಮ, ಘಟಕಗಳನ್ನು ಹಾಗೂ ವೃತ್ತಿ ಪದಗಳನ್ನು ಸಂಗ್ರಹಿಸಿದ್ದಾರೆ. ಒಂದೊಂದು ಸಮೂಹಗಳಿಗೆ ಸಂಬಂಧಿಸಿದಂತೆ ಶಬ್ದಭೇದಗಳನ್ನು, ಸಮಾನಾರ್ಥಕಗಳನ್ನು ಸಾಧ್ಯವಿದ್ದಲ್ಲಿ ಗಾದೆಗಳನ್ನು ಕೊಟ್ಟಿದ್ದಾರೆ. ಆಯಾ ನಾಮಘಟಕಗಳಿಗೆ ಅವರು ಸಾಮಾನ್ಯಾರ್ಥವನ್ನು ಕೊಟ್ಟಿದ್ದಾರೆ ವಿನಃ ಅವುಗಳ ರಚನಾ ಸ್ವರೂಪ, ಸಾಮಾಜಿಕ ಆಯಾಮ ಮುಂತಾದ ವಿಷಯಗಳನ್ನು ಗಮನಿಸಿದಂತೆ ಕಾಣುವುದಿಲ್ಲ. ಅಂತಹ ವಿಷಯಗಳ ವಿವೇಚನೆಗೆ ಭೂಮಿಕೆಯನ್ನು ಸಿದ್ಧಪಡಿಸಿದ್ದಾರೆ.

೫.೦೬ ಸಂಸ್ಕೃತಿ ವಿಶಿಷ್ಟಪದಗಳ ಅರ್ಥ ವಿವರಣೆ ಮತ್ತು ಅರ್ಥ ವ್ಯತ್ಯಾಸ

ಮಿಶನರಿಗಳು ಕೋಶ ಸಿದ್ಧತೆಗಾಗಿ ಕರ್ನಾಟಕದ ಮೂಲೆ ಮೂಲೆಗಳಲ್ಲಿಯೂ ಸಂಚರಿಸಿದ್ದರು. ನಾಡಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ತಿಳಿದುಕೊಳ್ಳುವುದು ಅವರ ಉದ್ದೇಶವಾಗಿತ್ತು. ನಾಡಿನ ಎಲ್ಲಾ ಭಾಗದ ಸಾಂಸ್ಕೃತಿಕ ಪದಗಳು ಅವರ ನಿಘಂಟಿನಲ್ಲಿ ಎಡೆ ಪಡೆದಿವೆ.[೧೭] ಹೀಗಾಗಿ ಈ ಕೋಶಗಳು ಸಾಂಸ್ಕೃತಿಕ ಅಧ್ಯಯನಕ್ಕೂ ತುಂಬ ಉಪಯುಕ್ತವಾಗಿವೆ. ಕೆಲವು ಸಂಸ್ಕೃತಿ ವಿಶಿಷ್ಠ ಪದಗಳಿಗೆ ಮಿಶನರಿಗಳು ಕೊಡುವ ಅರ್ಥ ವಿವರಣೆ ಯಾವ ಬಗೆಯದು ಎಂಬುದನ್ನು ಮಿಶನರಿ ಕೋಶಗಳ ಪ್ರತಿನಿಧಿಯಾದ ಕಿಟೆಲ್ ಕೋಶವನ್ನು ಅನುಲಕ್ಷಿಸಿ ವಿವೇಚಿಸಲಾಗಿದೆ.

ಚೆರಗು: ಹೊಲದೊಳಗೆ ಚೆಲ್ಲುವ ಆಹುತಿ, ಭೂಮಿ ಹುಣ್ಣಿಮೆಯ ದಿವಸ ಎತ್ತು ಅಥವಾ ಹೋರಿಯ ಮಾಂಸವನ್ನು ಚೂರು ಚೂರು ಮಾಡಿ ಭೂಮಿಯಲ್ಲಿ ಚೆಲ್ಲುವುದು ಎಂಬುದು ಕಿಟೆಲ್‌ನ ವಿವರಣೆ

'ಚೆರಗು' ಎಂದರೆ ಹೊಲ ಗದ್ದೆಗಳಲ್ಲಿ ಪೈರು ಬೆಳೆವಾಗ ರೈತರು ಭೂಮಿತಾಯಿಗೆ ನೈವೇದ್ಯವೆಂದು ಭೂಮಿಯ ತುಂಬ ಚೆಲ್ಲುವ ಭಕ್ಷ್ಯ. ಇದರಲ್ಲಿ ಕಡಬು, ಕರಜಿಕಾಯಿ, ಒಡೆ ಇಂತಹ ಸಿಹಿ ಅಡುಗೆ ಇರುತ್ತದೆ. ಐದು ತರಕಾರಿಗಳನ್ನು ಒಂದರಲ್ಲಿ ಮಾಡಿರುತ್ತಾರೆ (ಚರಗದ ಪಲ್ಯ). ಸೀಗೆಹುಣ್ಣಿಮೆ ಹಾಗೂ ಎಳ್ಳ ಮಾಸೆಯ ದಿನ ಒಕ್ಕಲಿಗರು ಭೂಮಿತಾಯಿಗೆ ನೈವೇದ್ಯಕ್ಕೆಂದು ಸಿದ್ಧಪಡಿಸಿದ ಚರುಗನ್ನು ಭೂಮಿಗೆ ಚೆಲ್ಲಲು ಹೋಗುತ್ತಾರೆ. ಚೆರುಗನ್ನು ಎಕ್ಕೆಯ ಎಲೆಯಲ್ಲಿ ನೈವೇದ್ಯ ಹಿಡಿದು ಭೂಮಿ ತುಂಬ 'ನಮ್ಮ ಹೊಲ ಬೆಳೆಯಲಿ' ಎನ್ನುತ್ತ ಚೆಲ್ಲುತ್ತಾರೆ. ಚೆರುಗ ಚೆಲ್ಲುವ ದಿವಸ ರೈತ ಕುಟುಂಬದಲ್ಲಿ ಹಬ್ಬದ ವಾತಾವರಣ ಇರುತ್ತದೆ. (<ಸಂ. ಚರುಕ) 'ಚೆರಗು' ಎಂದರೆ ಕಿಟೆಲ್‌ರು ಹೇಳಿದಂತೆ ಹೊಲದೊಳಗೆ ಚೆಲ್ಲುವ ಆಹುತಿಯಲ್ಲ.

ಜಂಗಮ: ಚಲನೆಯುಳ್ಳದ್ದು; ವೀರಶೈವವಿರಕ್ತ; ಲಿಂಗಾಯತ ಸಮುದಾಯದಲ್ಲಿ ಉಚ್ಚಸ್ಥಾನದಲ್ಲಿರುವವರು; ಲಿಂಗವಂತ ಉಪ ಪಂಗಡದವರು; ಇವರಿಂದ ದೀಕ್ಷೆ ಪಡೆದು ಇವರನ್ನು ಪೂಜಿಸಿ ಇವರನ್ನು 'ಗುರು' ಎಂದು ಕರೆಯುವರು ಎಂಬ ಕಿಟೆಲನ ವಿವರಣೆ ಸೂಕ್ತವಾಗಿದೆ.

'ಜಂಗಮ' ಎಂದರೆ ವಿರಕ್ತ ಎಂಬರ್ಥವೂ ಇದೆ. ಈತ ಮದುವೆ ಆಗಬಹುದು ಅಥವಾ ಆಗದಿರಬಹುದು ಈತ (ವೀರಶೈವ) ಮಠ-ಮಾನ್ಯಗಳಲ್ಲಿ ವಾಸಿಸಬಹುದು ಅಥವಾ ಲೋಕಸಂಚಾರಿಯಾಗಿರಬಹುದು ಈತನಿಗೆ 'ಅಯ್ಯ' ಎಂದು ಕರೆಯುತ್ತಾರೆ. 'ಜಂಗಮಯ್ಯ' ಜಂಗಮನ ಹೆಂಡತಿ 'ಜಂಗಮಗಿತ್ತಿ' ವೀರಶೈವ ಸಮುದಾಯದಲ್ಲಿ ಜಂಗಮರಿಗೆ ಪೂಜ್ಯಸ್ಥಾನವಿದೆ.

ಜೋಕುಮಾರ: ಜೇಡಿಮಣ್ಣಿನಿಂದ ಮಾಡಿದ ಮೂರ್ತಿ. ಇದು ಪುರುಷತ್ವದ ಸಂಕೇತ. ಸುಣಗಾರ ಸ್ತ್ರೀಯರು ಈ ಮೂರ್ತಿಯನ್ನು ಬುಟ್ಟಿಯಲ್ಲಿ ಹೊತ್ತುಕೊಂಡು ಬೀದಿ ಬೀದಿ ಸುತ್ತುತ್ತಾರೆ. ಕಿಟೆಲ್‌ನ ಅರ್ಥವಿವರಣೆ ಸೂಕ್ತವಾಗಿದೆಯಾದರೂ ಇದು ಸಾಲದು.

'ಜೋಕುಮಾರ' ಎಂಬುದು ಕೃಷಿ ದೇವತೆಯ ಹೆಸರು. ಮಳೆ ಬರದೇಯಿದ್ದಾಗ ಜೋಕುಮಾರನ ಪೂಜೆ ಮಾಡುತ್ತಾರೆ ಉತ್ತರ ಕರ್ನಾಟಕದ ಜನಪದರಲ್ಲಿ ಜೋಕುಮಾರನ ಬಗೆಗಿನ ಕತೆ ಮತ್ತು ಹಾಡುಗಳು ಪ್ರಚಲಿತದಲ್ಲಿವೆ. ಜೋಕುಮಾರನ ಮೂರ್ತಿಯನ್ನು ಜೇಡಿಮಣ್ಣಿನಿಂದ ಮಾಡಿರುತ್ತಾರೆ. ಅದನ್ನು ಬುಟ್ಟಿಯಲ್ಲಿರಿಸಿ ಬೇವಿನ ಎಲೆಗಳಿಂದ ಅಲಂಕರಿಸಿ ಸುಣಗಾರ ಹೆಂಗಸರು ಹಾಡುತ್ತಾ ಮನೆಮನೆಗೆ ಸುತ್ತುತ್ತಾರೆ. ಅವರಿಗೆ ಒಕ್ಕಲು ಕುಟುಂಬಗಳು ಧವಸ-ಧಾನ್ಯ, ಅಂಬಲಿ-ಕಿಚಡಿಯನ್ನು ನೈವೇದ್ಯ ಹಿಡಿಯುತ್ತಾರೆ. ಜೋಕುಮಾರನನ್ನು 'ಕಾಮುಕದೈವ' ಎಂದೂ ವಿದ್ವಾಂಸರು ಗುರುತಿಸಿದ್ದಾರೆ.

ತಾಳಿ: ಚಿನ್ನದ ಬಟ್ಟುಗಳಿಂದ ಮಾಡಿದ ಸರ; ಇದನ್ನು ಸ್ತ್ರೀಯರು ಮದುವೆಯ ನಂತರ ಕೊರಳಲ್ಲಿ ಹಾಕಿಕೊಳ್ಳುತ್ತಾರೆ: ಇದು ಮದುವೆಯ ಸಂಕೇತ. ಕಿಟೆಲ್‌ನ ಅರ್ಥವಿವರಣೆ ಸಂಕ್ಷಿಪ್ತವಾದರೂ ಸೂಕ್ತವಾಗಿದೆ.

(ಮದುವೆಯಾದ ಸಂಕೇತವಾಗಿ) ಸ್ತ್ರೀಯರು ಕೊರಳಲ್ಲಿ ಧರಿಸುವ ಅಥವಾ ಕರಿಮಣಿಗಳಿಂದ (ಆಭರಣ), ಚಿನ್ನದ ಬಟ್ಟುಗಳಿಂದ ಮಾಡಿದ ಸರ: ಮಾಂಗಲ್ಯ: ಮಂಗಲ ಸೂತ್ರ: ಮದುವೆಯ ಸಂದರ್ಭದಲ್ಲಿ ವರನ ಕಡೆಯವರು ವಧುವಿಗೆ ತಾಳಿ ಕಟ್ಟುತ್ತಾರೆ. ಆಗ ಅಧಿಕೃತವಾಗಿ ಅವರಿಬ್ಬರು ವಧು-ವರರಾಗುತ್ತಾರೆ. ವಿಧವೆಯರು ತಾಳಿ ಕಟ್ಟುವುದಿಲ್ಲ ತಾಳಿ ಕಳೆದುಕೊಂಡವರು ವಿಧವೆಯೆಂದು ಅರ್ಥವಾಗುತ್ತದೆ. ದ್ರಾವಿಡರಲ್ಲಿ ತಾಳಿಬಂಧನ ವಿವಾಹದ ಅತ್ಯಂತ ಮುಖ್ಯಭಾಗ. (ಉತ್ತರ ಕರ್ನಾಟಕದಲ್ಲಿ 'ತಾಳಿ ಎಂಬುದನ್ನು 'ಗುಳಿದಾಳಿ' ಎಂದೂ ಕರೆಯುತ್ತಾರೆ. (ಸಂ > ತಾಲಿ)

ದೀಪಾವಳಿ: ದೀಪಾವಲಿ/ದಿವಾಳಿ ದೀಪಗಳ ಸಾಲು: ಕಾರ್ತಿಕ ಚತುರ್ದಶಿಯಂದು ಆಚರಿಸುವ ಹಬ್ಬ: ಬಲಿಚಕ್ರವರ್ತಿಯ ಹಬ್ಬ.

ದೀಪಗಳ ಸಾಲು (ಸಮೂಹ) ಕಾರ್ತಿಕ ಶುದ್ಧ ಪಾಡ್ಯದ ದಿನ ಬಲಿಚಕ್ರವರ್ತಿಯ ಹೆಸರಿನಲ್ಲಿ ಆಚರಿಸುವ ಹಬ್ಬ. ಆ ದಿವಸ ಸಾಲು ಸಾಲಾದ ದೀಪಗಳಿಂದ ಮನೆ, ದೇವಾಲಯ ಮೊದಲಾದವುಗಳನ್ನು ಅಲಂಕರಿಸುತ್ತಾರೆ. ಆ ದಿನ ಅಕ್ಕ-ತಂಗಿಯರು ತಮ್ಮ ಸಹೋದರರಿಗೆ ದೀಪಾರತಿ ಬೆಳಗುವರು (ತಮ್ಮ ಕುಟುಂಬ ವೃದ್ಧಿಯಾಗಲೆಂದು) ಹಿಂದೂಗಳ ಪವಿತ್ರ ಹಬ್ಬವಿದು.

ಬಲಿ: ಆಹುತಿ: ಉಪಹಾರ: ಹಬ್ಬಗಳಲ್ಲಿ ನಾನಾ ಬಲಿಗಳನ್ನು ಕೊಡುವರು (ನರಬಲಿ, ಪ್ರೇತಬಲಿ, ಭೂತಬಲಿ).

'ಬಲಿ' ಎಂಬುದು ನಾನಾರ್ಥಗಳನ್ನು ಹೊಂದಿದೆ. ಶಕ್ತಿಶಾಲಿ: ಗಟ್ಟಿ: ಪ್ರೌಢ ಕಾಣಿಕೆ ಕೊಡುಗೆ ಆರಾಧನೆ ದೇವತೆಗಳ ಪ್ರೀತ್ಯರ್ಥವಾಗಿ ಗೃಹಸ್ಥನು ಅನ್ನ, ದ್ರವ್ಯ, ಪ್ರಾಣೀ ಮುಂತಾದವುಗಳನ್ನು ಅರ್ಪಿಸುವುದು ನರಬಲಿ, ಬಲಿಬಿಡು ಬಲಿಕೊಡು ಇತ್ಯಾದಿ. ಬಲಿಯ ಸ್ವರೂಪ ವಿಶಿಷ್ಟವಾದುದು ೧) ಬಲಿ ಎಂದರೆ ವಿಧಿಪೂರ್ವಕವಾಗಿ ನಾಶಮಾಡುವುದು ೨) ಈ ರೀತಿ ನಾಶ ಮಾಡುವುದು ಒಂದು ವಸ್ತುವಾಗಿರಬಹುದು, ಪ್ರಾಣಿಯಾಗಿರಬಹುದು ೩) ದೇವರೊಡನೆ ಸಂಪರ್ಕಕಲ್ಪಿಸಿಕೊಳ್ಳುವುದು, ದೇವರನ್ನು ತೃಪ್ತಿಗೊಳಿಸುವುದು, ದೇವರು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಕೊಡುವುದು ಇವು ಬಲಿಕೊಡುವುದರ ಉದ್ದೇಶವಾಗಿದೆ.

ಬಳೆ; ಸ್ತ್ರೀಯರ ಕೈಗಳಿಗೆ ಹಾಕುವ ಗಾಜಿನಿಂದ ಮಾಡಿದ ದುಂಡನೆಯ ಆಭರಣ. ಇದು ಕಿಟೆಲ್‌ನ ಅರ್ಥ ವಿವರಣೆ.

'ಬಳೆ' 'ವಲಯ'ದ ತದ್ಭವ. ಇದರ ಶಬ್ದಶಃ ಅರ್ಥ ವರ್ತುಲ: ವೃತ್ತ ಮಂಡಲ. ಇದರ ಸಾಂಸ್ಕೃತಿಕ ಅರ್ಥ ಸ್ತ್ರೀಯರ ಸೌಭಾಗ್ಯದ ಲಕ್ಷಣಗಳೆಂದು. ಕೈಗಳಿಗೆ ಹಾಕುವ ವರ್ತುಲಾಕಾರದ ಆಭರಣ. ಬಳೆಗಳಲ್ಲಿ ಗಾಜಿನವಕ್ಕೆ ಹೆಚ್ಚು ಪ್ರಾಶಸ್ತ್ಯ. ಮದುವೆಗೆ ಮುನ್ನ ಸಾಮಾನ್ಯವಾಗಿ ಎಲ್ಲ ಜನಾಂಗಗಳಲ್ಲಿಯೂ 'ಬಳೆ ತೊಡಿಸುವ ಶಾಸ್ತ್ರ' ಮಾಡುತ್ತಾರೆ (ತಮಿ, ವಳೈ, ಮಲ ವಳ, ತುಳು ಬಳೆ) ಮುತ್ತೈದೆಯರ ಬದುಕಿನಲ್ಲಿ ಹಸಿರು ಬಳೆಗೆ ತುಂಬ ಸ್ಥಾನವಿದೆ. ಅದು ಮಂಗಲದ್ಯೋತಕ. ವಿಧವೆಯರು ಹಸಿರು ಬಳೆ ಹಾಕಿಕೊಳ್ಳುವುದಿಲ್ಲ.

ಭೂತ ; ಹುಟ್ಟಿ: ಜನಿತ: ಜೀವಿ: ದೆವ್ವ: ಅಯ್ಯ ಎಂಬುದು ಕಿಟೆಲ್‌ನ ವಿವರಣೆ ಇದು ಏನೇನು ಸಾಲದು 'ಭೂತ'ಕ್ಕೆ ನಾನಾರ್ಥಗಳಿವೆ. ಆದ: ಇರುವ: ಉಂಟಾದ: ನಡೆದಿರುವ ಸಂಭವಿಸಿರುವ: ಸರಿಯಾದ: ಉಚಿತವಾದ: ಯೋಗ್ಯವಾದ: ಸಮಾನವಾದ ಸದೃಶ್ಯವಾದ: ಶಿವಗಣ: ಪ್ರಾಣಿವರ್ಗ, ದೇವತೆಗಳಲ್ಲಿ ಒಂದು (ಯಕ್ಷ: ರಾಕ್ಷಸ: ಭೂತ: ಪೈಶಾಚ:) ಮೊದ್ಲದು (ಭೂತಗಸ್ಥವಿ) ಸಾಮಾನ್ಯವಾಗಿ 'ಭೂತ' ಎಂದರೆ ಕಣ್ಣಿಗೆ

ಗೋಚರವಾಗದೆ ಮನುಷ್ಯರನ್ನು ಕಾಡಿಸುವ ದೆವ್ವ/ಪಿಶಾಚಿ ಎಂಬರ್ಥವಿದೆ. ಮಧ್ಯಮ ವಯಸ್ಸಿನಲ್ಲಿ ಸತ್ತವರು ಅಥವಾ ಆಸೆಯಿಟ್ಟುಕೊಂಡು ಸತ್ತವರು. ತಾವು ಜೀವಂತವಿದ್ದಾಗ ಯಾರನ್ನು ಹೆಚ್ಚು ಪ್ರೀತಿಸುತ್ತಿದ್ದರೋ ಅವರ ಮೈಮೇಲೆ ಬರುತ್ತಾರೆ ಎಂಬ ನಂಬಿಕೆ ಉತ್ತರ ಕರ್ನಾಟಕದಲ್ಲಿ ಜನಜನಿತವಾಗಿದೆ. ಅದಕ್ಕೆ 'ದೆವ್ವ ಬಡಿದಿದೆ' ಎನ್ನುವರು. ಕರಾವಳಿ ಪ್ರದೇಶದ ಕಡೆಗೆ ಭೂತ ಎಂದರೆ ದೇವರು. 'ಭೂತಕೋಲ' ಭೂತದ ವೇಷವನ್ನು ಹಾಕಿಕೊಂಡು ಕುಣಿಯುವ ಹಬ್ಬ. 'ಭೂತಾರಾಧನೆ' ಎಂಬ ವಿಶಿಷ್ಟ ಆಚರಣೆ ಆ ಪ್ರದೇಶದಲ್ಲಿ ನಡೆಯುತ್ತದೆ.

ಮಹಾನವಮಿ; ಅಶ್ವಿನಿ ತಿಂಗಳಿನಲ್ಲಿ ಒಂಭತ್ತು ದಿವಸಗಳವರೆಗೆ ನಡೆಯುವ ಹಬ್ಬ ಎಂದಿಷ್ಟೆ ಕಿಟೆಲ್ ಹೇಳಿದ್ದಾನೆ.

ನವರಾತ್ರಿಯ ಒಂಭತ್ತನೆಯ ದಿನ ಆಚರಿಸುವ ಹಬ್ಬ ಅಶ್ವಿಜ ಶುದ್ಧನವಮಿ. ನವರಾತ್ರಿ ಹಬ್ಬದ ಸಂದರ್ಭದಲ್ಲಿ ಒಂಭತ್ತನೆಯ ದಿನದಂದು ಒಕ್ಕಲಿಗರು ಮತ್ತು ಇತರ ವೃತ್ತಿಯವರು ತಾವು ಉಪಯೋಗಿಸುವ ಸಲಕರಣೆಗಳನ್ನು ಪೂಜೆ ಮಾಡುವ ರೂಢಿಯಿದೆ. ಇದಕ್ಕೆ 'ಆಯುಧಪೂಜೆ' (ಉತ್ತರ ಕರ್ನಾಟಕದಲ್ಲಿ 'ಖಂಡೆಪೂಜೆ') ಎಂದೂ ಕರೆಯುವರು. ಮಹಾನವಮಿಯ ದಿವಸ ಉತ್ತರ ಕರ್ನಾಟಕದಲ್ಲಿ ಗ್ರಾಮ ದೇವತೆಯ ದೇವಸ್ಥಾನಗಳಲ್ಲಿ ಒಂಭತ್ತನೇ ದಿನ ದೀಪ ಹಾಕುತ್ತಾರೆ. ದೀಪ ಆರದಂತೆ ಪೂಜಾರಿಗಳು ಜಾಗರಣೆ ಮಾಡುವರು. ಒಂಭತ್ತನೆಯ ದಿನ ಸೌಹಾರ್ದತೆಯ ಸಂಕೇತವಾಗಿ 'ಬನ್ನಿ-ಬಂಗಾರ' ಕೊಡುವ ಸತ್ ಪರಂಪರೆಯಿದೆ. ಈ ಹಬ್ಬ ೧೪ನೇ ಶತಮಾನದ ವಿಜಯನಗರದ ಕಾಲದಲ್ಲಿ ಪ್ರಾರಂಭವಾಗಿತ್ತು. ಅದಕ್ಕೆ ಕುರುಹುವಾಗಿ ಹಂಪಿಯಲ್ಲಿ 'ಮಹಾನವಮಿ ದಿಬ್ಬ' ಇದೆ.

ಮೈಲಾರ; (ಮಯ್ಲಾರ); ದೈತ್ಯ ; ಮೈಲಾರದೇವರು; ಮೈಳಾರಲಿಂಗ

ಮೈಲಾರ ಒಬ್ಬ (ಕ್ಷುದ್ರ) ದೇವತೆಯ ಹೆಸರು. 'ಶಾಂತಿಯ ಪೆಸರ್ ಮೈಲಾರವೆಂಬಂತೆ ಪೂಲೆಯ ರಾಡಿನ ಪೆಸರ್ ಮಾಣಿಕದೇವಿಯೆಂಬಂತೆ' (ಧರ್ಮಾಮೃತ ೮-೧೭೬) ಬಳ್ಳಾರಿ ಜಿಲ್ಲೆಯಲ್ಲಿ ಮೈಲಾರ ಎಂಬ ಊರಿದೆ. ಅಲ್ಲಿ ಮೈಲಾರಲಿಂಗ ಎಂಬ ದೇವಾಲಯವೂ ಇದೆ. ಮೈಲಾರ ಕನ್ನಡನಾಡಿನ ದೇವತೆ. ಅವನ ಉಗಮಸ್ಥಾನ ಕನ್ನಡನಾಡು ಇಲ್ಲಿಂದ ಮಹಾರಾಷ್ಟ್ರಕ್ಕೆ ಹೋಗಿ 'ಖಂಡೋಬ' ಎಂಬ ಹೆಸರಿನಿಂದ ಜನಪ್ರಿಯದೇವತೆಯಾಗಿ ಪರಿಣಮಿಸಿದ್ದಾನೆ. ಅವನ ಹೆಂಡತಿ ಮಾಳಚಿ. ಮೈಲಾರನ ಉಲ್ಲೇಖಗಳು ಕನ್ನಡ ಕಾವ್ಯ-ಶಾಸನಗಳಲ್ಲಿ ಹೇರಳವಾಗಿವೆ [೧೯]

ಮೈಲಿಗೆ; ಮಯ್ಲಿಗೆ ಎಂದಿಷ್ಟೆ ಕಿಟೆಲ್‌ಕೊಟ್ಟಿರುವ ಅರ್ಥ

'ಮೈಲಿಗೆ' ಮಲಿನತೆ; ಅಪವಿತ್ರತೆ; ಕೊಳೆ; ಹೊಲಸು ಸೂತಕ 'ಸತ್ತವರನ್ನು ಸಂಸ್ಕಾರ ಮಾಡಿದವರು' (ಶವಸಂಸ್ಕಾರ) 'ಹೆರಿಗೆಯಾದ ಮನೆಯಿಂದ ಬಂದವರು' ಹಂದಿ ಇತ್ಯಾದಿ ಕೀಳು ಪ್ರಾಣಿಗಳನ್ನು

ಮುಟ್ಟಿದವರು, ಸಿಡುಬು ರೋಗ ಬಂದವರನ್ನು ನೋಡಿದರೆ ಮೈಲಿಗೆಯಾಗುತ್ತಾರೆ. ತೊಟ್ಟು ಬಿಚ್ಚಿದ ಬಟ್ಟೆ, ಉಟ್ಟು ಹೊಲಸಾದ ಬಟ್ಟೆ, 'ಮೈಲಿಗೆ ಬಟ್ಟೆ' ಎಂದು ಕರೆಯುವರು. ಮೈಲಿಗೆಯನ್ನು ಹೋಗಲಾಡಿಸಲು ನೀರು ಸಿಂಪಡಿಸಿ ಅಥವಾ ಸ್ನಾನ ಮಾಡಿ ಗ್ರಾಮದೇವತೆಗೆ ಹೋಗಿಬರುವರು. ಆಗ ಮೈಲಿಗೆ ಕಳೆದು 'ಮಡಿ' (ಶುದ್ಧ)ಯಾಗುತ್ತಾರೆ. ಎಂಬ ನಂಬಿಕೆ ಜನಪದರಲ್ಲಿದೆ.

ಲಿಂಗ: ಗುರುತು; ಸೂಚನೆ; ಚಿಹ್ನೆ; ಸಂಕೇತ; ಜನನೇಂದ್ರಿಯ. ಕಿಟೆಲ್ ಕೊಟ್ಟಿರುವ ಈ ಶಬ್ದಾರ್ಥಗಳು ಸೂಕ್ತವಾಗಿವೆ.

ಅದರ ಜೊತೆಗೆ ದೇವಸ್ಥಾನಗಳಲ್ಲಿ ಪ್ರತಿಷ್ಠಾಪಿಸುವ ಶಿವನ ಪ್ರತೀಕವಾದ ಮೂರ್ತಿ: ಸ್ಥಾವರ ಲಿಂಗ: ವೀರಶೈವರ ಮೈಮೇಲೆ ಧರಿಸುವ ಶಿವನ ಪ್ರತೀಕ (ಇಷ್ಟಲಿಂಗ). ಕಪ್ಪು ಬಣ್ಣದಿರುತ್ತದೆ: ವ್ಯಾಕರಣದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳ ಸೂಚನೆ ಇದೆ.

ವೀಳೆ: ಮಗ ಅಥವಾ ಮಗಳ ನಿಶ್ಚಯದ ದಿವಸ ತಾಂಬೂಲು ಕೊಡುವುದು. ಕಿಟೆಲ್ ಕೊಟ್ಟಿರುವ ಅರ್ಥ ಒಂದು ಹಂತದಲ್ಲಿ ಸೂಕ್ತವಾಗಿದೆ.

ವೀಳೆಕೊಡುವ ಸಂದರ್ಭಗಳು ಬೇರೆ ಬೇರೆಯಾಗಿರುತ್ತವೆ. ೧) ಸಾಮಾನ್ಯವಾಗಿ ಊಟವಾದ ನಂತರ ಅಡಕೆ, ಸುಣ್ಣದೊಂದಿಗೆ ಎಲೆ ಸೇವಿಸುವುದು ೨) ಶುಭ ಮಹೂರ್ತಗಳಲ್ಲಿ ಕೊಡುವ ಎಲೆ ಅಡಕೆ (ತಾಂಬೂಲ) ೩) ದೇವರಿಗೆ ನೈವೇದ್ಯದ ಸಂದರ್ಭದಲ್ಲಿಯೂ, ಗುರು ಹಿರಿಯರು ಗಣ್ಯರು ಮುಂತಾದವರಿಗೆ ಗೌರವ ಪೂರ್ವಕವಾದ ಮನ್ನಣೆ, ಮರ್ಯಾದೆಗಳನ್ನು ಸೂಚಿಸುವಾಗಲೂ, ಮಂಗಲ ಕಾರ್ಯಗಳಲ್ಲಿ ಜವಾಬ್ದಾರಿಗಳನ್ನು ಒಪ್ಪಿಸುವಾಗ ಸಮ್ಮತಿ ಸೂಚಿಸುವಾಗ ಕೊಡುವ ತಾಂಬೂಲ. ಮದುವೆಯ ನಿಶ್ಚಿತಾರ್ಥದ ಸಂದರ್ಭದಲ್ಲಿ ಎಲ್ಲರಿಗೂ ತಾಂಬೂಲ ಹಂಚುವುದು ಲಗ್ನ ನಿಶ್ಚಯವಾಯಿತು ಎಂಬುದರ ದ್ಯೋತಕ (ವೀಳ್ಯದ ಶಾಸ್ತ್ರ) ಮದುವೆಗೆ ಹೆಣ್ಣನ್ನು ಕೇಳುವ ಸಂದರ್ಭದಲ್ಲಿ ಎರಡು ಕಡೆಯ ಹಿರಿಯರು ಪರಸ್ಪರ ತಾಂಬೂಲವನ್ನು ಕೊಡುವುದು ಬದಲಾಯಿಸಿಕೊಳ್ಳುವ ಪರಂಪರೆ ಇದೆ (< ಸಂ ವೀಟಿಕಾ).

ಸಂಸ್ಕಾರ: ನಾಮಕರಣ ಉಪನಯನ ಮುಂತಾದ ಧಾರ್ಮಿಕ ಕ್ರಿಯೆ. ಇದು ಕಿಟೆಲ್‌ನ ಅರ್ಥ ವಿವರಣೆ.

'ಸಂಸ್ಕಾರ' ಪದ ವಿಶಿಷ್ಟ ಅರ್ಥವನ್ನೊಳಗೊಂಡಿದೆ. ಬೇರೆ-ಬೇರೆ ಸಾಮಾಜಿಕ ಸಂದರ್ಭದಲ್ಲಿ ಅದು ಬೇರೆ ಅರ್ಥವನ್ನು ಪಡೆಯುತ್ತದೆ. ೧. ಲೋಪ-ದೋಷಗಳಿಲ್ಲದಂತೆ ಮಾಡುವಿಕೆ: ತಿದ್ದುಪಾಟು: ಪರಿಷ್ಕರಣ ೨. ಆಲೋಚನೆ, ಭಾವನೆ, ಕಲ್ಪನೆ ೩. ಹಿಂದಿನವನ್ನು ಜ್ಞಾಪಿಸಿಕೊಳ್ಳುವ ಸ್ಮರಣಶಕ್ತಿ: ಸ್ಮರಣೆಗೆ ಕಾರಣವಾದ ಮಾನಸಿಕ ವ್ಯಾಪಾರ ೪. ಒಂದು ದೇಶದ ಅಥವಾ ಒಬ್ಬ ವ್ಯಕ್ತಿಯ ಮಾನಸಿಕ ಸಾಧನೆ ನಾಗರಿಕತೆ ಸಂಸ್ಕೃತಿಗಳ ಒಟ್ಟು ಸಾರ. ೫. ಶುದ್ಧಗೊಳಿಸುವುದು, ಪವಿತ್ರಗೊಳಿಸುವುದು (ಜಪ, ತಪ, ಧ್ಯಾನ ಮುಂತಾದವುಗಳಿಂದ).

೬. ಹುಟ್ಟು-ಸಾವು: ನಾಮಕರಣ-ಶವಸಂಸ್ಕಾರ; ಮದುವೆ-ಮುಂಜಿ ಮುಂತಾದ ಕ್ರಿಯೆಗಳಲ್ಲಿ ನಡೆಯುವ ಧಾರ್ಮಿಕ ಕ್ರಿಯೆಗಳು ೭. ಬುದ್ಧಿ ವಿಕಾಸ; ಮಾನಸಿಕ ಪಕ್ವತೆ.

ಸೀಮತ: (ಸೀಮನ್ತ) ಚೊಚ್ಚಿಲು ಬಸಿರಿಗೆ ಮಾಡುವ ಸಂಸ್ಕಾರಗಳಲ್ಲಿ ಒಂದು. ಇದಿಷ್ಟೆ ಕಿಟೆಲ್‌ನ ವಿವರಣೆ.

ಈ ಸಂಸ್ಕಾರ ಗಂಡನ ಮನೆಯಲ್ಲಿ ನಡೆಯುತ್ತದೆ. ಗರ್ಭಿಣಿಯು ಐದು ಅಥವಾ ಆರು ತಿಂಗಳಿನಲ್ಲಿದ್ದಾಗ ಹೆಣ್ಣಿನ ಕಡೆಯವರು ಹಸಿರು ಸೀರೆ, ಬಳೆ ಮುಂತಾದವುಗಳನ್ನು ಗರ್ಭಿಣಿಯರಿಗೆ ತೊಡಿಸುವರು. ಗಂಡಿನ ಬಳಗದವರಿಗೆ ಸಿಹಿ ಊಟ ಹಾಕಿಸುವರು ಸಂಜೆ ಸೋಬಾನ ಎಂಬ ಮಂಗಲ ಕಾರ್ಯ ನಡೆಯುವುದು. ಮುತ್ತೈದೆಯರು ಸೋಬಾನ ಹಾಡುಗಳನ್ನು ಹಾಡುತ್ತಾರೆ. ಈ ಕಾರ್ಯಕ್ಕೆ 'ಕುಬಸ' ವೆಂದು ಉತ್ತರ ಕರ್ನಾಟಕದಲ್ಲಿ ಕರೆಯುತ್ತಾರೆ. ಪುತ್ರ ಚೊಚ್ಚಿಲಮಗ / ಮಗ (ಹಿರಿಯ ಮಗ).

ಹರಕೆ: ಆಶೀರ್ವಾದ ಇದು ಕಿಟೆಲ್ ಕೊಟ್ಟಿರುವ ಸಾಮಾನ್ಯಾರ್ಥ.

ಇದು ವಿಶಿಷ್ಟ ಅರ್ಥಗಳನ್ನೊಳಗೊಂಡಿದೆ. ೧. ತನ್ನ ಅಭೀಷ್ಟ ಸಿದ್ಧಿಗಾಗಿ ದೇವರಲ್ಲಿ ಮಾಡಿಕೊಳ್ಳುವ ಸೇವೆಯ ನಿರ್ಧಾರ, ಸಂಕಲ್ಪ ಅದು ಈಡೇರಿದ ಮೇಲೆ ದೇವರಿಗೆ ಅರ್ಪಿಸಿಕೊಳ್ಳುವ ವಸ್ತು ಅಥವಾ ಪ್ರಾಣಿ ಮುಂತಾದವುಗಳ ಮೀಸಲು, ಮುಡಿಪು, ಬೇಡಿಕೊಳ್ಳುವುದು ೨. ಹರಕೆಯನ್ನು ನೆರವೇರಿಸಲು ದೇವರಿಗೆ ಮಾಡುವ ಧಾರ್ಮಿಕ ವಿಧಿ 'ಉರುಳುಸೇವೆ', 'ದೇವರಿಗೆ ಒಡವೆ ಮಾಡಿಸುವುದು' ಮುಂತಾದ ಹರಕೆಗಳನ್ನು ಮಾಡುವರು (ಪರಕೆ > ಹರಕೆ)

ಮಿಶನರಿಗಳು ರಮಜಾನ್, ಉರುಸು, ನಮಾಜ್ ಇಂತಹ ಮುಸ್ಲಿಂ ಸಾಂಸ್ಕೃತಿಕ ಪದಗಳಿಗೆ ಅರ್ಥ ಕೊಟ್ಟಿಲ್ಲದಿರುವುದು ಸೋಜಿಗದ ಸಂಗತಿಯಾಗಿದೆ. ಬಹುಶಃ ಅಂತಹ ಸಾಮಾಜಿಕ ಒತ್ತಡ ಅವರಿಗೆ ಬಂದಿರಲಾರದು.

ಮಿಶನರಿಗಳು ತಮ್ಮ ಕೋಶಗಳಲ್ಲಿ ಸಂಸ್ಕೃತಿ ವಿಶಿಷ್ಟ ಪದಗಳಿಗೆ ಅರ್ಥ ಕೊಡಲಿಕ್ಕೆ ಪ್ರಯತ್ನಿಸಿದ್ದಾರೆ. ಅನೇಕ ಸಾಂಸ್ಕೃತಿಕ ಪದಗಳಿಗೆ ಅವರು ಕೊಡುವ ವಿವರಣೆ ಸಾಲದು. ಪದಗಳ ಅರ್ಥ ತುಂಬ ಸಂಕ್ಷಿಪ್ತವಾಗಿದ್ದು, ಸಾಮಾನ್ಯಾರ್ಥವನ್ನು ಕೊಡುತ್ತವೆ. ಪದಗಳ ಬಳಕೆಯ ಸಾಮಾಜಿಕ ಆಯಾಮಗಳನ್ನು ಅವು ಒಳಗೊಂಡಿರುವುದಿಲ್ಲ. ಒಂದು ಪ್ರದೇಶದಲ್ಲಿಯ ಎಲ್ಲ ಪದಗಳನ್ನು ಸಮರ್ಪಕವಾಗಿ ಅರ್ಥ ನಿರೂಪಿಸುವುದು ಅಸಂಭವ. ಮಿಶನರಿಗಳು ಅಪಾರ ಶ್ರಮವಹಿಸಿ ತಮ್ಮ ಮಿತಿಯಲ್ಲಿಯೆ ಈ ಕಾರ್ಯಮಾಡಿದ್ದಾರೆ. ಅವರು ಕೊಡುವ ಅರ್ಥ ವಿವರಣೆಗಳನ್ನು ಕಿಟೆಲ್‌ರು (ಮಿಶನರಿಗಳು) ವ್ಯಾಪಕ ಕ್ಷೇತ್ರಕಾರ್ಯ ಮಾಡದೇ ಇರುವುದರಿಂದ ಸಂಭವಿಸಿದವುಗಳೆಂದು ಭಾವಿಸಬಾರದು. ಅವರಿಗೆ ಸರಿಯಾದ ಮಾಹಿತಿಗಳನ್ನು ಕೊಡುವ ನಿರೂಪಕರು ಸಿಗದಿರುವುದು. ಆದರೂ ಒಂದು ಮಾತು ಸಾಂಸ್ಕೃತಿಕ ಪದಗಳ ಅರ್ಥ ವಿವರಣೆಗೆ ಮಿಶನರಿ ಕೋಶಗಳು ಕೆಲವು ಸೂಚನೆಗಳನ್ನು ಕೊಡುತ್ತವೆ.

ಅಡಿಟಿಪ್ಪಣಿ

೧. ಒಂದು ವಿಷಯಕ್ಕೆ ಸಂಬಂಧಿಸಿದಂತೆ ಇತರರು ಹೇಳಿರುವ ಮಾತುಗಳನ್ನು ಅವು ಇರುವ ರೀತಿಯಲ್ಲಿಯೇ ನೇರವಾಗಿ ಬಳಸಿಕೊಳ್ಳುವುದಕ್ಕೆ 'ಉದ್ಧರಣೆ'ಗಳೆನ್ನುವರು

೨. Encyclopedia of Religion and Ethics ed. James Hosting VoI x pp. 412-15

೩. 'ಗಾದೆ' ಎಂಬ ಪದಕ್ಕೆ ಸಂಸ್ಕೃತದ 'ಗಾಥಾ' ಎಂಬುದು ಮೂಲವಾಗಿದೆ. 'ಗಾದೆ' ಶಬ್ದ 'ಗಾಥಾ' ಶಬ್ದದ ತದ್ಭವವಾಗಿರಬಹುದು. ಇಲ್ಲವೆ ಪ್ರಾಕೃತದ 'ಗಾಹೆ'ಯಾಗಿ ನಂತರ ಕನ್ನಡದಲ್ಲಿ ಗಾದೆಯಾಗಿ ರೂಪಾಂತರಗೊಂಡಿರಬಹುದು.

೪. ಎಂ. ಚಿದಾನಂದಮೂರ್ತಿ ೧೯೭೭ 'ಕನ್ನಡ ಗಾದೆಗಳನ್ನು ಕುರಿತಂತೆ ಕೆಲವು ಟಿಪ್ಪಣಿಗಳು' ಗ್ರಾಮೀಣ ಪುಟ-೧೯೯-

* ರಾಗೌ (ಡಾ. ರಾಮೇಗೌಡ) ಅವರು ಕಿಟೆಲ್ ಕೋಶದಲ್ಲಿ ಚದುರಿ ಹೋಗಿರುವ ಸಮಸ್ತಗಾದೆಗಳನ್ನು (ಸು. ೪೨೬೦) ವರ್ಣಾನುಕ್ರಮವಾಗಿ ಸಂಪಾದಿಸಿದ್ದಾರೆ. (ಕಿಟೆಲ್ ಕೋಶದ ಗಾದೆಗಳು ಪ್ರ. ಮು ೧೯೬೯. ದ್ವಿ. ಮು ೧೯೭೩ ಉಷಾ ಸಾಹಿತ್ಯ ಮಾಲೆ, ಮೈಸೂರು) ಇದರಿಂದ ಗಾದೆಗಳ ಅಧ್ಯಯನಕ್ಕೆ ಹೆಚ್ಚು ಅನುಕೂಲವಾಗಿದೆ.

೫. F. Kittle-A Kannada-English Dictionary preface-X

೬. F. Kittle -Ibid - 468-472

೭. ಎಸ್. ಎಸ್. ಅಂಗಡಿ ೧೯೯೮ 'ಸಂಗ್ಯಾಬಾಳ್ಯಾ ಭಾಷಾ ಪ್ರಯೋಗ' ಶೋಧನ ಪು-೫೨-೧೯೯೮

೮. ರೂಪಭೇದಗಳನ್ನು ಪಡೆಯದೆಯೇ ಏಕರೂಪವಾಗಿ ಬಳಕೆಯಾಗುವ ಶಬ್ದಗಳು ಅವ್ಯಯಗಳು (ಅವುಗಳಲ್ಲಿ ಸಾಮಾನ್ಯಾವ್ಯಯಗಳು, ಅನುಕರಣಾವ್ಯಯಗಳು, ಅನುಸರ್ಗಾವ್ಯಯಗಳು, ಸಂಬಂಧ ಸೂಚಕಾವ್ಯಯಗಳು ಭಾವ ಸೂಚಕಾವ್ಯಯಗಳು, ಕ್ರಿಯಾರ್ಥಕಾವ್ಯಯಗಳೆಂದು ಆರು ವಿಧ). ಅನುಕರಣಾತ್ಮಕ ಶಬ್ದಗಳ ಮುಂದೆ -ಅನೆ (ಧಗ್ಗನೆ, ದೊಪ್ಪನೆ)-ಅಂತ (ಧಗ್ಗಂತ, ತಟ್ಟಂತ)-ಅನ್ (ಧಗ್ಗನ್, ಘಟ್ಟನ್) ಎಂಬ ಕ್ರಿಯಾರ್ಥಕ ಅನುಕೃತಿ ಪದಗಳು ಸೇರಿಕೊಂಡಿರುತ್ತವೆ.

ಭಾಷೆ ಅನುಕರಣವಾಚಿ ಪದಗಳಿಂದ ಹುಟ್ಟಿತೆಂಬುದು ಕೆಲವರವಾದ. ಇದನ್ನು ಇಂಗ್ಲಿಶಿನಲ್ಲಿ 'Bow Bowtheory' ಎನ್ನುತ್ತಾರೆ. ಯೆಸ್ಪರಸನ್ ಮೊದಲಾದವರು ಭಾಷೆಯ ಉತ್ಪತ್ತಿಗೆ ಅನುಕರಣಗಳು ಕಾರಣವಲ್ಲದಿದ್ದರೂ ಮುಖ್ಯ ಕಾರಣಗಳಲ್ಲಿ ಅದು ಒಂದೆಂದು ಹೇಳುತ್ತಾರೆ.

ಅನುಕರಣಗಳು, ದ್ವಿರುಕ್ತಿಗಳು, ಜೋಡುನುಡಿಗಳು ಇವು (ಬಾಹ್ಯ) ರಚನೆಯ ದೃಷ್ಟಿಯಿಂದ ಒಂದೇ ಬಗೆಯಾಗಿ ಕಂಡರೂ ಅರ್ಥ ಸ್ವರೂಪದಲ್ಲಿ ವ್ಯತ್ಯಾಸಗಳಿವೆ. ಒಂದು ವಿಶೇಷ ಅರ್ಥವನ್ನು ಸೂಚಿಸುವುದಕ್ಕಾಗಿ ಪದವನ್ನು ಎರಡು ಬಾರಿ ಪ್ರಯೋಗಿಸುವುದಕ್ಕೆ ದ್ವಿರುಕ್ತಿ ಎಂದು ಹೆಸರು. ಉದಾ-ಬೇಡ ಬೇಡ ನಾನು

ತಿನ್ನುವುದಿಲ್ಲ. ಹಬ್ಬದ ದಿನ ಓಣಿ ಓಣಿಯಲ್ಲಿ ಸಂಭ್ರಮ ಮುಂತಾದವು. ಅನುಕರಣ ವಾಚಕದಲ್ಲಿ ಹೆಚ್ಚಾಗಿ ಪುನರುಕ್ತಿ ಇರುತ್ತದೆ. ಅದು ಧ್ವನಿಯ ಅನುಕರಣೆ ಉದಾ-'ಪಟಪಟ' ಇಲ್ಲಿಯ 'ಪಟ' ಸ್ವತಂತ್ರವಾಗಿ ಬಳಕೆಯಾಗುವುದಿಲ್ಲ ಹಾಗೂ ಇವುಗಳಿಗೆ ಅರ್ಥ ಇರುವುದಿಲ್ಲ. ದ್ವಿರುಕ್ತಿ ಪದಗಳು ಸ್ವತಂತ್ರವಾಗಿ ಬಳಕೆಯಾಗುತ್ತಿದ್ದು ಅವುಗಳಿಗೆ ಅರ್ಥವಿರುತ್ತದೆ. ಬೇಡ, ಓಣಿ ಮುಂತಾದವು ಜೋಡಿ ನುಡಿಗಳೆಂದರೆ ಬಹುಮಟ್ಟಿಗೆ ಅರ್ಥದಲ್ಲಿ ಸಾಮ್ಯವಿರುವ ಎರಡು ಪದಗಳು. ಎರಡುಪದಗಳು ಜೊತೆ ಜೊತೆಯಾಗಿ ಬಂದಾಗ ವಿಶಿಷ್ಟವಾದ ಅರ್ಥವನ್ನು ಕೊಡುತ್ತದೆ. ಮಾತನಾಡುವಾಗ ಭಾವದ ಸ್ಪಷ್ಟತೆಗಾಗಿಯೋ, ಅವಧಾರಣೆಗಾಗಿಯೋ ಇಲ್ಲವೇ ಅಭಿಪ್ರಾಯ ವಿಶೇಷಗಳಿಗಾಗಿಯೋ ಜೋಡಿ ನುಡಿಗಳನ್ನು ಬಳಸುವುದುಂಟು. ಉದಾ- ಗಿಡಗಿಂಟಿ, ನಡುಮಧ್ಯ, ಅಕ್ಕ ತಂಗಿ ಮುಂತಾದವುಗಳು. ಜೋಡುನುಡಿಯಲ್ಲಿಯ ಪದಗಳು ಸ್ವತಂತ್ರವಾಗಿ ಬಳಕೆಯಾಗುವುದುಂಟು. ಗಿಡ, ನಡು ಮುಂತಾದವು.

೯. ವಿವರಣೆಗಳಿಗಾಗಿ ನೋಡಿ ೧೯೮೧ -ಎಂ. ಚಿದಾನಂದಮೂರ್ತಿ 'ಕರ್ನಾಟಕ ಸ್ಥಳನಾಮಗಳು' ವಾಗರ್ಥ

೧೦. ಕೆಮ್ತೂರು ರಘುಪತಿಭಟ್ಟ- 'ತುಳುನಾಡಿನ ಸ್ಥಳನಾಮಗಳು' ಪುಟ-೧೦೧

೧೧. ಶಬ್ದಮಣಿದರ್ಪಣ (ಸಂ ಡಿ. ಎಲ್. ನರಸಿಂಹಾಚಾರ್) ದಾತು ಪ್ರಕರಣ ಪುಟ-೨೬೮

೧೨. R. C. Hiremath-Linguistic Investigation of some place names in Karnataka Journal of the karnataka University Humanities VoI xxxi pp. 81-82 1961

೧೩. ಎಂ. ಎಂ. ಕಲಬುರ್ಗಿ ೧೯೮೯ 'ಕನ್ನಡನಾಮ ವಿಜ್ಞಾನ' ಪುಟ-೧೬

೧೪. ವಿವರಣೆಗಾಗಿ ನೋಡಿ ೧೯೮೧-ಎಂ. ಚಿದಾನಂದಮೂರ್ತಿ 'ಅಮ್ಮ' 'ಅಬ್ಬೆ' 'ಅಲ್ಲಮ' 'ಬಾದುಬ್ಬೆ' ವಾಗರ್ಥ

೧೫. ವಿವರಣೆಗಾಗಿ ನೋಡಿ ೧೯೮೧ ಎಂ. ಚಿದಾನಂದಮೂರ್ತಿ 'ಕರ್ನಾಟಕದ ವ್ಯಕ್ತಿನಾಮಗಳು' ಪೂರ್ವೋಕ್ತ ಗ್ರಂಥ

೧೬. ಎಸ್. ಎಸ್. ಅಂಗಡಿ ೧೯೯೮ 'ಕುಂಬಾರ ವೃತ್ತಿ ಪದಕೋಶ' ಪುಟ-೨

೧೭. ಒಂದು ಪದವು ಬೇರೆ ಬೇರೆ ಸಾಮಾಜಿಕ ಸಂದರ್ಭದಲ್ಲಿ ಬಳಕೆಯಾಗಿ ಅರ್ಥ ಸಂಕೋಚ, ಅರ್ಥವಿಸ್ತಾರ ಈ ರೀತಿ ಅರ್ಥವ್ಯತ್ಯಾಸ ಹೊಂದಿದರೆ ಮತ್ತು ಆ ಪದದ ಅರ್ಥ ವ್ಯತ್ಯಾಸದ ಹರವು ವಿಸ್ತಾರವಾಗುತ್ತ ಹೋದರೆ ಅದು ಸಾಂಸ್ಕೃತಿಕ ಪದವಾಗುತ್ತದೆ.

೧೮. ತಾಳಿ ಬಳೆಯ ಬಗೆಗೆ ಹೆಚ್ಚಿನ ವಿವರಣೆಗಳಿಗಾಗಿ ನೋಡಿ ೧೯೭೭- ಎಂ. ಚಿದಾನಂದಮೂರ್ತಿ 'ಸೌಭಾಗ್ಯದ ಲಕ್ಷಣಗಳು' ಗ್ರಾಮೀಣ ಪುಟ-೧೫೬-೧೬೧

೧೯. ಮೈಲಾರದ ಬಗೆಗೆ ಹೆಚ್ಚಿನ ವಿವರಣೆಗಳಿಗಾಗಿ ನೋಡಿ ೧೯೭೭-ಎಂ. ಚಿದಾನಂದ ಮೂರ್ತಿ 'ಕನ್ನಡ ಕಾವ್ಯ ಶಾಸನಗಳಲ್ಲಿ ಮೈಲಾರ ಮತ್ತು ಮಾಳಚಿ' ಸಂಶೋಧನಾ ತರಂಗ-೨ ಪುಟ-೨೦೭-೩೧

ಅಧ್ಯಾಯ-೬ ಮಿಶನರಿ ನಿಘಂಟುಗಳ ಮೌಲ್ಯಮಾಪನ

ಮಿಶನರಿ ನಿಘಂಟುಗಳ ಮೌಲ್ಯಮಾಪನ

ಮಿಶನರಿ ಕೋಶಗಳ ಮೌಲ್ಯವನ್ನು ನಿಷ್ಕರ್ಷಿಸುವ ಮುನ್ನ ಅವುಗಳ ಸ್ವರೂಪಕ್ಕನುಗುಣವಾಗಿ ಎರಡು ರೀತಿಯಾಗಿ ವರ್ಗೀಕರಿಸಿ ಹೋಲಿಸಿ ನೋಡಬೇಕಾಗುತ್ತದೆ. ರೀವ್, ಗ್ಯಾರೆಟ್, ಸ್ಯಾಂಡರಸನ್, ಜೀಗ್ಲರ್, ಬ್ಯುಚರ್, ಕಾಟ್ಸ್ ಇವರುಗಳ ಕೋಶಗಳನ್ನು ಒಂದು ವರ್ಗವನ್ನಾಗಿ, ಕಿಟೆಲ್ ಮಹಾಕೋಶವನ್ನು ಇನ್ನೊಂದು ವರ್ಗವನ್ನಾಗಿ ಮಾಡಿ ಅವು ಒಂದು ಇನ್ನೊಂದಕ್ಕಿಂತ ಹೇಗೆ ಭಿನ್ನವಾಗಿವೆ ಎಂಬುದನ್ನು ಪರಿಶೀಲಿಸಿದಾಗ ಅವುಗಳ ಮೌಲ್ಯವೆನೆಂಬುದು ತಿಳಿಯುತ್ತದೆ. ಈ ದೃಷ್ಟಿಯಿಂದ ಅವುಗಳ ಮೌಲ್ಯಮಾಪನದ ಸ್ಥೂಲ ವಿವೇಚನೆಯ ಫಲಿತಗಳನ್ನು ಈ ಅಧ್ಯಾಯದಲ್ಲಿ ನಿರೂಪಿಸಲಾಗಿದೆ.

೬.೦೧ ಹೋಲಿಕೆ -ವ್ಯತ್ಯಾಸಗಳು

ಮಿಶನರಿ ಕೋಶಗಳನ್ನು ಹೋಲಿಸಿ ಪರಿಶೀಲಿಸಿದಾಗ ಅವುಗಳ ಸಮಾನಾಂಶಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಅವೆಲ್ಲವೂ ದ್ವಿಭಾಷಿಕ ನಿಘಂಟುಗಳು. ಕನ್ನಡ ಪದಗಳಿಗೆ ಇಂಗ್ಲಿಶ್‌ನಲ್ಲಿ, ಇಂಗ್ಲಿಶ್ ಪದಗಳಿಗೆ ಕನ್ನಡದಲ್ಲಿ ಅರ್ಥ ನೀಡಲಾಗಿದೆ.

೨. ಕನ್ನಡ-ಇಂಗ್ಲಿಶ್ ನಿಘಂಟುಗಳಲ್ಲಿ ಮುಖ್ಯ ಉಲ್ಲೇಖವನ್ನು ಕನ್ನಡ ಲಿಪಿಯಲ್ಲಿಯೂ ಅದರ ಲಿಪ್ಯಂತರವನ್ನು ಪರಿಷ್ಕೃತ ರೋಮನ್ ಲಿಪಿಯಲ್ಲಿಯೂ ಕೊಡಲಾಗಿದೆ. (ಬ್ಯುಚರ್ ಕೋಶದಲ್ಲಿ ಮಾತ್ರ ಈ ಕ್ರಮ ಇಲ್ಲ)

೩. ವರ್ಣಾನುಕ್ರಮ ಎಲ್ಲ ಕೋಶಗಳಲ್ಲಿಯೂ ಏಕತೆಯಿದೆ. ಅನುಸ್ವಾರಗಳನ್ನು ಪರಿಗಣಿಸಿ ಅವುಗಳಿಂದ ಕೂಡಿದ ಶಬ್ದಗಳನ್ನು ಮೊದಲು ಅಕಾರಾದಿಯಾಗಿ ಕೊಟ್ಟು ಅವಿಲ್ಲದವುಗಳನ್ನು ನಂತರ ಕೊಡುವ ಪದ್ಧತಿ ಇದೆ. ಉದಾ : ರೀವ್ ಕನ್ನಡ -ಇಂಗ್ಲಿಶ್ ಕೋಶದಲ್ಲಿ ಅಂಕ, ಅಂಕಣ, ಅಕ ಹೀಗೆ.

೪. ಮಿಶನರಿ ಕೋಶಕಾರರ ಉದ್ದೇಶ ಧರ್ಮ ಪ್ರಚಾರವಾಗಿದ್ದರಿಂದ ಅಪೇಕ್ಷಿತ ಶಬ್ದಗಳ ಅರ್ಥಾನ್ವೇಷಣೆಗಾಗಿ ಅವು ನಿರ್ಮಿತವಾದವು.

(ಎಲ್ಲ ಶಬ್ದಕೋಶಗಳ ಮುದ್ರಣಕ್ಕೆ ಧನ ಸಹಾಯವಿತ್ತುದು ಮದ್ರಾಸ್ ಸರಕಾರವೇ ಎನ್ನುವುದನ್ನು ಈ ಯಾದಿಯಲ್ಲಿ ಸೇರಿಸಬಹುದೇನೋ !)

ಈ ಕೋಶಗಳಲ್ಲಿ ಸಾದೃಶ್ಯಗಳಿಗಿಂತ ವೈದೃಶ್ಯಗಳೇ ಹೆಚ್ಚಾಗಿವೆ. ಈ ಕೆಳಗಿನಂತೆ ಕಲೆಹಾಕಬಹುದು.

೧. ರೀವ್ ಕೋಶದಲ್ಲಿ ಸಂಸ್ಕೃತ ಶಬ್ದಗಳು ಹೇರಳವಾಗಿವೆ. ಅದಕ್ಕೆ ಕಾರಣ ಆತನಿಗೆ ಶಬ್ದ ಸಂಗ್ರಹ ಮಾಡಲು ಸಹಕರಿಸಿದವರು ಹಾಗೂ ಅಗತ್ಯ ಮಾಹಿತಿಗಳನ್ನಿತ್ತವರು ವಿದ್ಯಾವಂತ ಬ್ರಾಹ್ಮಣ ವರ್ಗ.

ಕನ್ನಡ ನುಡಿಯ ಶಬ್ದಗಳ ಸಾಧುತ್ವದ ಬಗೆಗೆ ಆತನಿಗೆ ವಿಶೇಷ ಪರಿಜ್ಞಾನವಿರುವುದು ಅಸಂಭವ. ಆದುದರಿಂದ ಸಂಗ್ರಹಿಸಿದ ಶಬ್ದಗಳೆಲ್ಲ ಕನ್ನಡ ಶಬ್ದಗಳೇ ಎಂದು ಗ್ರಹಿಸಿ ತನ್ನ ಕೋಶದಲ್ಲಿ ಸೇರಿಸಿಕೊಂಡ. ಮುಂದಿನವರು ಸಂಸ್ಕೃತ ಶಬ್ದವನ್ನು ತೆಗೆದುಕೊಂಡರೆ 'sk' ಎಂಬ ಚಿಹ್ನೆಯಿಂದ ತೋರಿಸಿದ್ದಾರೆ. ಅಗತ್ಯವಾದ ಮತ್ತು ಅನಿವಾರ್ಯವಾದ ಸಂಸ್ಕೃತ ಶಬ್ದಗಳಿಗೆ ಯುಕ್ತಸ್ಥಾನ ಕೊಡಲಾಗಿದೆ.

೨. ರೀವ್ ಕೋಶದಲ್ಲಿ ಅರ್ಥ ಛಾಯೆಯನ್ನು ತೋರಿಸಲು ಅಂಕೆಗಳನ್ನು ಉಪಯೋಗಿಸಿದರೂ ಕೆಲವು ಶಬ್ದಗಳಿಗೆ ಕೊಟ್ಟ ಅರ್ಥಗಳಲ್ಲಿ ಆ ಶಬ್ದ ಸೂಚಿಸುವ ವಸ್ತು/ವಿಷಯದ ಸ್ಪಷ್ಟ ಕಲ್ಪನೆಯಾಗಲು ತೊಡಕೆನಿಸುತ್ತದೆ. ಅದು ಆ ಶಬ್ದ ಕೋಶದ ದೋಷವೆಂದು ಹೇಳಲಾಗದಿದ್ದರೂ ಶಬ್ದಕೋಶದ ನಿಜವಾದ ಉದ್ದೇಶ ಪೂರ್ತಿಯಾಗಿ ಈಡೇರಿದಂತಾಗುವುದಿಲ್ಲ. ಆದರೆ ಕಿಟೆಲ್ ಕೋಶದಲ್ಲಿ ಶಬ್ದಗಳ ಅರ್ಥ ನಿರೂಪಣೆಯಲ್ಲಿ ಬಹಳ ಎಚ್ಚರವಹಿಸಲಾಗಿದೆ. ಉದಾ-ರೀವ್ ಕೋಶದಲ್ಲಿ 'ಏಣಿ' ಎಂಬುದಕ್ಕೆ A laddar ಎಂದು ಅರ್ಥ ಕೊಟ್ಟಿದೆ. ಆದರೆ ಅದರ ಸ್ವರೂಪ ಮನದಟ್ಟಾಗುವುದಿಲ್ಲ. ಕಿಟೆಲ್ ಕೋಶದಲ್ಲಿ ಆ ಶಬ್ದಕ್ಕೆ A laddar, A, number of flambe aux fixed on a ladder that is horizontaly carried before person of distinction. ಎಂದು ಸ್ಪಷ್ಟವಾಗಿ ಆ ಶಬ್ದದ ಅರ್ಥವನ್ನು ನಿರೂಪಿಸಲಾಗಿದೆ.

ರೀವ್ ಕೋಶದಲ್ಲಿ ಒಂದು ಶಬ್ದಕ್ಕೆ ಕೊಟ್ಟ ಅರ್ಥ ಸ್ಪಷ್ಟವಿದ್ದರೂ ಇನ್ನಷ್ಟು ಹೆಚ್ಚು ವಿಶದೀಕರಿಸಬೇಕೆಂದು ಭಾವಿಸಿ ಕಿಟೆಲ್ ಅಂತಹ ಶಬ್ದಗಳ ಅರ್ಥವನ್ನು ರೀವ್ ಕೋಶಕ್ಕಿಂತ ಹೆಚ್ಚು ವಿಸ್ತರಿಸಿ ಕೊಟ್ಟಿದ್ದಾನೆ. ಉದಾ- 'ದಸರೆ' ಎನ್ನುವ ಶಬ್ದಕ್ಕೆ ರೀವ್ ಕೋಶದಲ್ಲಿ The tenth lunarday ದಸರೆ ಹಬ್ಬ A feast observed on this day in the seventh or ಅಶ್ವೀಜ month in honour of the shami tree in which Arjun hid his arrows and which Rama circumambulated when going to war with Ravana ಎಂದು ಕೊಟ್ಟಿದ್ದಾರೆ. ಕಿಟೆಲ್ ನಿಘಂಟಿನಲ್ಲಿ 'ದಸರೆ' ಎನ್ನುವುದಕ್ಕೆ The tenth day of the suklapaksha of the seventh month (asvins) the last day of the navaratri, the day on which Rama marched against Ravana the devatas defcated the daityas etc .... the dasre feast of 10 days ಎಂದು ವಿಶದೀಕರಿಸಲಾಗಿದೆ. ಇಂತಹ ನೂರಾರು ಉದಾಹರಣೆಗಳಿವೆ. ಉಳಿದ ಕೋಶಗಳಲ್ಲಿ ಈ ಕ್ರಮ ಅನುಸರಿಸಿಲ್ಲ.

೩. i) ರೀವ್ ಕೋಶದಲ್ಲಿ ವ್ಯಾಕರಣ ವರ್ಗಗಳನ್ನು ಕೊಡುವಾಗ ನಾಮಪದಗಳಿಗೆ 'S' (substantive) ಎಂದು ಸೂಚಿಸಿದ್ದರೆ, ಕಿಟೆಲ್ ಕೋಶದಲ್ಲಿ 'N' (Name; proper name) ಎಂಬ ಸಂಕೇತಾಕ್ಷರವನ್ನು ಬಳಸಲಾಗಿದೆ.

ii) ಕ್ರಿಯಾಪದಗಳನ್ನು ಕೊಡುವಾಗ ರೀವ್ ಕೋಶದಲ್ಲಿ ಅಕರ್ಮಕ, ಸಕರ್ಮಕ, ಪ್ರೇರಣಾರ್ಥಕ, ಆತ್ಮಾರ್ಥಕ ಎಂದು ವಿಭಜಿಸಿ ಕೊಟ್ಟಿದಲ್ಲದೆ ಅವುಗಳಿಗೆ ಕ್ರಮವಾಗಿ Vn. (verb neutter), Va (verb active) V.C (verb causative) V.ref (Verb reflexive) ಎಂದು ಕೊಡಲಾಗಿದೆ. ಪ್ರೇರಣಾರ್ಥಕ ಕ್ರಿಯಾ ರೂಪಗಳನ್ನು ಕೊಡುವಾಗ ಅವು ಯಾವುದರ ಪ್ರೇರಣಾರ್ಥಕ ರೂಪಗಳೆನ್ನುವುದನ್ನೂ ಸೂಚಿಸಿದೆ. ಕಿಟೆಲ್ ಕೋಶದಲ್ಲಿ ಕ್ರಿಯಾಪದಗಳಿಗೆ V.i (verb intranstive) V.t (verb transitive) ಎಂಬ ಸಂಕೇತಾಕ್ಷರಗಳನ್ನು ಉಪಯೋಗಿಸಲಾಗಿದೆ. ಬ್ಯುಚರ್‌ನು ಕಿಟೆಲ್‌ರ ಮಾರ್ಗವನ್ನು ಅನುಸರಿಸಿದ್ದಾನೆ.

iii) ವ್ಯಾಕರಣ ಸಂಜ್ಞೆಗಳನ್ನು ಕೊಡುವುದರೊಂದಿಗೆ ಪ್ರತಿಯೊಂದು ಶಬ್ದದ ಮುಂದೆ ಅದರ ಉಪಭಾಷಾ ಸಂಕೇತಗಳನ್ನು, ಪ್ರಾಚೀನ ಗ್ರಂಥಗಳಿಂದ ತೆಗೆದುಕೊಂಡಿದ್ದರೆ ಆ ಗ್ರಂಥದ ಸಂಕೇತವನ್ನು ಕೊಡಲಾಗಿದೆ. ಕಿಟೆಲ್ ಮತ್ತು ಬ್ಯುಚರ್ ಕೋಶಗಳಲ್ಲಿ ಸಂಕೇತಗಳು ಬೇರೆ ಬೇರೆಯಾಗಿವೆ.

ಬ್ಯುಚರ್ -	S. K.	South Kanara
ಕಿಟೆಲ್ -	S. K.	Samskrita
ಬ್ಯುಚರ್ -	RVS	Reeve's Dictionary
ಕಿಟೆಲ್ -	R	Reeve's Dictionary
ಕಿಟೆಲ್‌ನಲ್ಲಿ -	MY	Mysore, S. Mhr -South maharastra
ಗ್ರಂಥಗಳನ್ನು	RSV	Rajasekharvilasa
	Prll	Prabhulingalila

ಉಪಉಲ್ಲೇಖ, ಉದಾಹರಣೆ ಮೊದಲಾದವುಗಳನ್ನು ಎಲ್ಲ ಕೋಶಗಳಲ್ಲೂ ಇಂಗ್ಲಿಶ್‌ದಲ್ಲಿ ಅರ್ಥ ಹೇಳಲಾಗಿದೆ.

೪. ಜೀಗ್ಲರ್, ಬ್ಯುಚರ್, ಗ್ಯಾರೆಟ್‌ರ ಶಾಲಾ ಕೋಶಗಳಲ್ಲಿ ಉದಾಹರಣೆಗಳಿಗೆ ಹೆಚ್ಚು ಗಮನ ಹರಿಸಿಲ್ಲ. ರೀವ್, ಕಿಟೆಲ್‌ರ ಕೋಶಗಳಲ್ಲಿ ಶಬ್ದಾರ್ಥಗಳೊಂದಿಗೆ ಅವುಗಳ ಪ್ರಯೋಗಗಳಿಗೆ ಒತ್ತು ಕೊಡಲಾಗಿದೆ. ಶಾಲಾ ಕೋಶಗಳಲ್ಲಿ ಶಬ್ದ ವ್ಯುತ್ಪತ್ತಿಯನ್ನಾಗಲಿ, ಜ್ಞಾತಿಪದಗಳನ್ನಾಗಲಿ ಕೊಟ್ಟಿಲ್ಲ. ಅವುಗಳ ಅವಶ್ಯಕತೆಯೂ ಆ ಕೋಶಗಳಿಗಿಲ್ಲ. ರೀವ್, ಕಿಟೆಲ್‌ರ ಕೋಶಗಳಲ್ಲಿ ಸಮಸ್ತ ಪದಗಳನ್ನು ವಿಂಗಡಿಸಿ ಕೊಡಲಾಗಿದೆ. ಕೆಲವೆಡೆ ಅನ್ಯಭಾಷಾರೂಪಗಳ ಮೂಲ ರೂಪಗಳನ್ನು ಕೊಡಲಾಗಿದೆ.

ಕಿಟೆಲ್ ನಿಘಂಟಿನಲ್ಲಿ ಮುಖ್ಯ ಉಲ್ಲೇಖಿದ ಜ್ಞಾತಿರೂಪಗಳು ಇತರ ದ್ರಾವಿಡ ಭಾಷೆಗಳಲ್ಲಿ ಯಾವ ರೂಪದಲ್ಲಿವೆ ಎಂಬುದನ್ನು ಪ್ರತ್ಯೇಕವಾಗಿ ನಿರೂಪಿಸಲಾಗಿದೆ. ಮುಖ್ಯ ನಮೂದು ಪೂರ್ವ ಪದವಾಗಿ ಬಂದ ಸಮಸ್ತ ಪದಗಳನ್ನು ಆ ನಮೂದಿನ ಕೆಳಗೆ ಸ್ಥಾನ ಪಡೆದು ಅಲ್ಲಿಯೇ ಅವುಗಳ ಅರ್ಥಕೊಡಲಾಗಿದೆ. ಆ ಪದ ಉತ್ತರಪದವಾಗಿ ಬಂದಲ್ಲಿ ಅವುಗಳನ್ನು ಅಕಾರಾದಿ ಕ್ರಮದಲ್ಲಿ ಇನ್ನೆಲ್ಲೊ ಬರುತ್ತವೆ. ಆದರೆ ಆ ಪದಗಳನ್ನು ಅಲ್ಲಿಯೇ ಪಟ್ಟಿ ಮಾಡಿ ಕೊಡುವುದರಿಂದ ಆ ಪದದ ಸಹಯೋಗವಿರುವ ನಾನಾ ಪದ ಸಮೂಹಗಳ ಪರಿಚಯ ಒಂದೇ ಕಡೆಯಲ್ಲಿ ಸಿಗುವುದು

ಉದಾ- 'ಒಡ' ಈ ನಮೂದಿನ ಕೆಳಗೆ

ಒಡಕತೆ, ಒಡಗೂಟ

ಒಡಗೂಡು, ಒಡಬಡಿಗೆ

ಒಡವುಟ್ಟು ಇತ್ಯಾದಿ ರೂಪಗಳಿವೆ.

ಕಿಟೆಲ್ ನಿಘಂಟಿನ ವೈಶಾಲ್ಯವನ್ನು ಇಂತಹ ಉದಾಹರಣೆಗಳು ಸ್ಪಷ್ಟಪಡಿಸುತ್ತವೆ.

೫. ಒಂದು ಪದದ ಭಿನ್ನ ರೂಪಗಳು ಬೇರೆ ಬೇರೆ ಬಂದಾಗ ಹೆಚ್ಚು ಬಳಕೆಯಲ್ಲಿರುವ ರೂಪದ ಮುಂದೆ ಅರ್ಥಕೊಟ್ಟು ಉಳಿದೆಡೆಗಳಲ್ಲಿ ಆ ಅರ್ಥಕೊಟ್ಟಿರುವ ನಮೂದನ್ನು ನೋಡುವಂತೆ ನಿರ್ದೇಶಿಸುವುದು ಕೋಶಗಳ ರಚನಾ ವಿಧಾನ. ಕಿಟೆಲ್ ಕೋಶದಲ್ಲಿ ಹಾಗೂ ಸ್ಯಾಂಡರ್‌ಸನ್ ಪರಿಷ್ಕರಿಸಿದ ರೀವ್ ಕೋಶದಲ್ಲಿ ಈ ವಿಧಾನವನ್ನು ಅನುಸರಿಸಲಾಗಿದೆ.

ರೀವ್, ಗ್ಯಾರೆಟ್, ಜೀಗ್ಲರ್ ಕೋಶಗಳಲ್ಲಿ ಬಳಕೆಯಾದದ್ದು ಕರ್ನಾಟಕದ ಉತ್ತರ ಭಾಗದ ಶಬ್ದಗಳು. ವಾಟ್ಸ್ ಕೋಶದಲ್ಲಿ ಕರಾವಳಿ ಪ್ರದೇಶದ ಶಬ್ದಗಳು. ಕಿಟೆಲ್ ಕೋಶ ಕರ್ನಾಟಕದ ಉತ್ತರಭಾಗ, ಕರಾವಳಿ ಪ್ರದೇಶದ ಬಹುಸಂಖ್ಯೆಯ ಶಬ್ದಗಳನ್ನು ಹಾಗು ಹಳೆ ಮೈಸೂರು ಪ್ರದೇಶದ ಕೆಲವು ಶಬ್ದಗಳನ್ನೊಳಗೊಂಡಿದೆ.

ಜೀಗ್ಲರ್ ಕೋಶದಲ್ಲಿ ಗಿಡ ಮರಗಳಿಗೆ ಅವುಗಳ ಸಸ್ಯ ಶಾಸ್ತ್ರೀಯ ಪಾರಿಭಾಷಿಕ ಪದಗಳನ್ನು ಕೊಡಲಾಗಿಧೆ. ಬ್ಯುಚರ್, ಗ್ಯಾರೆಟ್, ವಾಟ್ಸ್‌ರ ಕೋಶಗಳಲ್ಲಿ ಆ ರೀತಿ ಮಾಡಿಲ್ಲ. ಅವರು ಸಸ್ಯಶಾಸ್ತ್ರೀಯ ಹೆಸರುಗಳನ್ನು ಕೊಡದೆ ಅರ್ಥ ಕೊಡುವಲ್ಲಿ ಕೇವಲ a kind of tree/aking of plant ಇತ್ಯಾದಿಯಾಗಿ ಕೊಟ್ಟಿದ್ದಾರೆ. ಕಿಟೆಲ್ ಕೋಶದಲ್ಲಿ ಸಸ್ಯ ರೂಪಗಳ ಅರ್ಥ ವಿವರಣೆ ವಿಸ್ತಾರವಾಗಿದೆ.

ಜೀಗ್ಲರ್, ಗ್ಯಾರೆಟ್‌ರ ಶಾಲಾ ಕೋಶಗಳಲ್ಲಿ ಸ್ಥಳನಾಮ, ವ್ಯಕ್ತಿನಾಮ ಹಾಗೂ ಕುಲನಾಮಗಳ ಅರ್ಥ

ವಿವರಣೆ ಸ್ಪಷ್ಟವಾಗಿಲ್ಲ. ಕಿಟೆಲ್ ಕೋಶದಲ್ಲಿ ಅವೆಲ್ಲವುಗಳ ಅರ್ಥ ವಿವರಣೆ ಸ್ಪಷ್ಟವಾಗಿದೆ. ಒಂದು ಪ್ರದೇಶದ ಭಾಷೆ, ಸಂಸ್ಕೃತಿ, ಜನಾಂಗ ಮೊದಲಾದವುಗಳ ಅಧ್ಯಯನದ ದೃಷ್ಟಿಯಿಂದ ನಾಮಗಳ ಅರ್ಥ ವಿವೇಚನೆ ಮಹತ್ವದ ಪಾತ್ರ ವಹಿಸುತ್ತವೆ.

೬. ನಾಮ ಹಲವಿರುವ ಸಮಾನಾರ್ಥಕ ಶಬ್ದಗಳು ಬಂದಾಗ ಸ್ಯಾಂಡರ್‌ಸನ್ ಪರಿಷ್ಕರಿಸಿದ ರೀವ್ ಕೋಶದಲ್ಲಿ ಬೇರೆ ಬೇರೆ ಉಲ್ಲೇಖಿಗಳಾಗಿ ಕೊಟ್ಟಿದ್ದರೂ ಅಂಕೆಗಳನ್ನು ಕೊಟ್ಟಿಲ್ಲ. ಕಿಟೆಲ್ ಕೋಶದಲ್ಲಿ ಅಂತಹ ರೂಪಗಳನ್ನು ಬೇರೆ ಬೇರೆಯಾಗಿ ಉಲ್ಲೇಖಿಸಿ 1, 2, 3 ... ಇತ್ಯಾದಿಯಾಗಿ ಅಂಕೆಗಳನ್ನು ಕೊಟ್ಟು ಅವುಗಳ ಬಳಕೆಯ ಸಂದರ್ಭ ಹಾಗೂ ಪ್ರದೇಶವನ್ನು ಸೂಚಿಸಲಾಗಿದೆ. ಅನೇಕಾರ್ಥಕ ಶಬ್ದಗಳನ್ನು ಕೊಡುವಾಗ ಕಿಟೆಲ್ ಕೋಶದಲ್ಲಿ ಅರ್ಥ ವ್ಯತ್ಯಾಸವನ್ನು ತೋರಿಸಲು ೧. ೨. ೩..ಇತ್ಯಾದಿ ಅಂಕೆಗಳನ್ನು ಬಳಸಲಾಗಿದೆ (ಕಿಟೆಲ್ ಅನುಸರಿಸಿದ ಈ ಕ್ರಮ ಸೂಕ್ತವಾದುದಲ್ಲದೆ ಪ್ರಕರಣಾಂತರ ಸೂಚನೆ (Cross reference) ಗೆ ತುಂಬ ಸಹಕಾರಿಯಾಗಿದೆ)

ಇವಿಷ್ಟು ಮಿಶನರಿ ಕೋಶಗಳನ್ನು ಪರಿಶೀಲಿಸಿದಾಗ ಕಾಣುವ ಪ್ರಮುಖ ಅಂಶಗಳು.

ಮಿಶನರಿಗಳು ಶಬ್ದಸಂಗ್ರಹ ಮಾಡಿದ ಕಾಲದ ಎಷ್ಟೋ ಶಬ್ದಗಳು ಈಗ ಬಳಕೆಯಿಂದ ತಪ್ಪಿಹೋಗಿರಬಹುದು ಅಥವಾ ಅದಕ್ಕಿಂತ ವಿರೂಪವಾಗಿ (ಅರ್ಥಸಂಕೋಚ/ಅರ್ಥವಿಸ್ತಾರ) ಪ್ರಯೋಗವಾಗುತ್ತಿರಬಹುದು. ಅವರ ಸಂಗ್ರಹದ ಶಬ್ದಗಳು ಈಗ ಪ್ರಯೋಗವಾಗುತ್ತಿಲ್ಲ ಎಂಬ ಮಾತ್ರಕ್ಕೆ ಅವುಗಳನ್ನು ಸಾರಾಸಗಟಾಗಿ ತಳ್ಳಿ ಹಾಕುವಂತಿಲ್ಲ. ಆ ಶಬ್ದಗಳು ಬಳಕೆಗೊಂಡ ಕೃತಿಗಳಲ್ಲಿಯೋ ಅಥವಾ ಕನ್ನಡದ ಯಾವುದಾದರೂ ಆಡುನುಡಿಯಲ್ಲಿಯೋ ಈಗಲೂ ಜೀವಂತವಾಗಿರುವುದು ಅಸಂಭವವೇನೂ ಅಲ್ಲ. ಮಿಶನರಿ ಕೋಶಗಳಲ್ಲಿ ಉಲ್ಲೇಖಿತವಾದ ಶಬ್ದಾರ್ಥಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುಗಳಲ್ಲಿ ಕೊಡಲಾಗಿದೆ. ಅಂತಹ ಶಬ್ದಾರ್ಥಗಳು ತಮ್ಮ ಸಂಗ್ರಹದಲ್ಲ ಮಿಶನರಿ ಕೋಶಗಳಿಂದ ತೆಗೆದುಕೊಂಡಿರುವುದೆಂದು ಅವುಗಳಲ್ಲಿ ಸೂಚಿಸಲಾಗಿದೆ.

೬.೦೨ ಇತಿ-ಮಿತಿಗಳು

ಯಾವುದೇ ಕಾರ್ಯವು ನೂರಕ್ಕೆ ನೂರರಷ್ಟು ಪರಿಪೂರ್ಣವೂ, ನಿರ್ದುಷ್ಟವೂ ಆಗುವುದಿಲ್ಲ. ನಿಘಂಟುಕಾರ ಎಷ್ಟೇ ಸಮರ್ಥನಾಗಿದ್ದರೂ ತನ್ನ ಶಬ್ದಕೋಶವನ್ನು ದೋಷರಹಿತವನ್ನಾಗಿ ಹಾಗೂ ಸಮಗ್ರವಾಗಿ ಮಾಡಲು ಸಾಧ್ಯವಿಲ್ಲ. ಮಿಶನರಿ ಕೋಶಗಳು ಇದಕ್ಕೆ ಹೊರತಲ್ಲ. ಆ ಕೋಶಗಳನ್ನು ಪರಿಶೀಲಿಸಿದಾಗ ಕೆಲವು ಇತಿ ಮಿತಿಗಳು ಕಾಣಸುತ್ತವೆ.

೧. ಮಿಶನರಿಗಳು ಶಬ್ದ ಸಂಗ್ರಹಕ್ಕಾಗಿ ಧಾರವಾಡ ಮತ್ತು ಮಂಗಳೂರು ಪ್ರದೇಶಗಳಿಗೆ ಮಾತ್ರ ಒತ್ತುಕೊಟ್ಟರು. ಅವರಿಗೆ ಲಿಖಿತ ಹಾಗೂ ಮೌಖಿಕ ಮಾಹಿತಿಗಳನ್ನು ಕೊಟ್ಟವರು ಆ ಭೂಭಾಗಕ್ಕೆ

ಸೇರಿದವರಾಗಿದ್ದಾರೆ. ಕನ್ನಡನಾಡಿನ ಗಡಿ ಪ್ರದೇಶಗಳ ಶಬ್ದಗಳಿಗೆ ಇವುಗಳಲ್ಲಿ ಪ್ರಾತಿನಿಧ್ಯ ಕಡಿಮೆ. ಧಾರವಾಡ ಪ್ರದೇಶದ 'ಇ' ಕಾರಾಂತದ ಕೆಲವು ರೂಪಗಳನ್ನು ಕೊಡುವಾಗ 'ಎ' ಕಾರಾಂತವನ್ನಾಗಿ ಮಾಡಿದ್ದಾರೆ. ಉದಾ-ಕೊಡತಿ- ಕೊಡತೆ, ಜಿರತಿ-ಜಿರಲೆ ಮುಂತಾದವು.

೨. ಕೆಲವು ವೇಳೆ ಮೂಲರೂಪಗಳಿಗೆ ಅರ್ಥ ಕೊಡುವಾಗ ಅದರ ಉಪಉಲ್ಲೇಖಗಳನ್ನು ನೋಡುವಂತೆ ಸೂಚಿಸುತ್ತಾರೆ. ಅದು ಸೂಕ್ತವಲ್ಲ. ಉದಾ-ಏರು -see ಮೊನೆಯೆರು. (ಮೊನೆಯೇರು ರೂಪಕ್ಕೆ ಅರ್ಥ ಕೊಡುವಾಗ see ಏರು ಎಂದಿದ್ದರೆ ಸೂಕ್ತವಾಗುತ್ತಿತ್ತು) ಎಂದಿದ್ದಾರೆ. ರೀವ್ ಕೋಶವಲ್ಲಿ ಅಂತಹ ಅನೇಕ ರೂಪಗಳು ಬಂದಿವೆ. ಕೆಲವೊಮ್ಮೆ ಸಂಬಂಧವಿಲ್ಲದ ಅರ್ಥಗಳನ್ನು ಒಂದೇ ಉಲ್ಲೇಖದಡಿಯಲ್ಲಿ ಕೊಡಲಾಗಿದೆ. ಉದಾ-ತುಡು, ಜೊಡರ್, ಸೊಡರ್, ತುಡ-ತೊಡು: ಜೊಡರ್-ಜಾರ, ಸೋಡರ್-ದೀಪ ದೀವಿಗೆ ಇವು ಭಿನ್ನ ಅರ್ಥವನ್ನು ಹೊಂದಿರುವುದರಿಂದ ಒಂದೇ ಉಲ್ಲೇಖದಡಿಯಲ್ಲಿ ಕೊಡುವುದು ಸೂಕ್ತವಲ್ಲ.

೩. ಮುಖ್ಯ ಉಲ್ಲೇಖದ ಕೆಳಗೆ ಕೊಡುವ ಉಪಉಲ್ಲೇಖಗಳು ರೂಪ ಸಾಮ್ಯತೆಯಿಂದ ಕೂಡಿದ್ದರೂ ಅರ್ಥ ಬೇರೆಯಾಗಿದ್ದರೆ ಅವುಗಳನ್ನು ಪ್ರತ್ಯೇಕ ನಮೂದಾಗಿ ಕೊಡುವುದು ವೈಜ್ಞಾನಿಕ ಕ್ರಮ. ಇರದಿದ್ದರೆ ಅದು ದೋಷಪೂರ್ಣವಾಗುತ್ತದೆ. ರೀವ್ ಕೋಶದಲ್ಲಿ ಇದಕ್ಕೆ ನಿದರ್ಶನಗಳು ಸಿಗುತ್ತವೆ. ಎಡೆ - ಪ್ರದೇಶ, ಸ್ಥಳ. ಈ ಉಲ್ಲೇಖದ ಉಪ ಉಲ್ಲೇಖವಾಗಿ ಎಡೆಹೊತ್ತು ಎಂಬುದನ್ನು ಕೊಡಲಾಗಿದೆ. ವಾಸ್ತವವಾಗಿ ಎಡೆಗೂ ಎಡೆ ಹೊತ್ತಿಗೂ ಸಂಬಂಧವಿಲ್ಲ. ಅದನ್ನು ಸಾಧಿತರೂಪವಾಗಿ ಕೊಡಬಹುದು.

೪. ಮಿಶನರಿಗಳ ಮುಖ್ಯ ಉದ್ದೇಶ ಧರ್ಮ ಪ್ರಸಾರವಾದ್ದರಿಂದ ದಿನದ ಎಲ್ಲ ಸಮಯವನ್ನು ಕೋಶಸಿದ್ಧತೆಗೆ ವ್ಯಯಿಸುತ್ತಿರಲಿಲ್ಲ. ತಾವು ನೋಡಿರುವ ಗ್ರಂಥಗಳಲ್ಲಿಯ ಎಲ್ಲ ಶಬ್ದಗಳನ್ನು, ಪ್ರಯೋಗಗಳನ್ನು ಕೋಶಕಾರರು ಪೂರ್ಣವಾಗಿ ಬಳಸಿಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ. ವೇಳೆಯ ಅಭಾವವೂ ಇದಕ್ಕೆ ಕಾರಣವಾಗಿರಬಹುದು.

೫. ಉಚ್ಚಾರಣಾ ವ್ಯತ್ಯಾಸವಿದ್ದು ಅರ್ಥ ಒಂದೇ ಆಗಿದ್ದರೆ ಅವುಗಳನ್ನು ಒಂದು ಪದದ ರೂಪಗಳೆಂದೇ ಪರಿಗಣಿಸಬೇಕು. ಈ ಕೋಶಗಳಲ್ಲಿ ಅಂತಹ ಕೆಲವು ರೂಪಗಳು ಬೇರೆ ಬೇರೆ ಕಡೆಗೆ ಮುಖ್ಯ ಉಲ್ಲೇಖಗಳಾಗಿ ಕಾಣಸಿಗುತ್ತವೆ. ಉದಾ-ರೀವ್ ಕೋಶಗಳಲ್ಲಿ ಮಗು, ಮಗುವು, ಮಗಳ್, ಮಕ್ಕಳ್ ಇವು ಬೇರೆ ಬೇರೆ ಕಡೆಗೂ ಅರ್ಥ ವಿವರಣೆ ಪಡೆದಿವೆ. ಅದರಂತೆ ಕುದುರೆ, ಕುದರೆ, ಕಾದಿರೆ, ಕುದ್ರಿ ಇವು ಬೇರೆ ಬೇರೆ ಕಡೆಗೂ ಅರ್ಥ ವಿವರಣೆ ಪಡೆದಿವೆ.

೬. ಈ ಕೋಶಗಳಲ್ಲಿ ಹೆಚ್ಚಾಗಿ ಲೋಕ ವ್ಯವಹಾರದ ಶಬ್ದಗಳು ಸೇರಿವೆ. ಶಾಸ್ತ್ರವ್ಯಾಸಂಗಕ್ಕೆ ಅವು ಅಷ್ಟೊಂದು ಪ್ರಯೋಜನಕಾರಿಯಾದುವಲ್ಲ. ಗಣಿತ, ಜ್ಯೋತಿಷ್ಯ, ಅಲಂಕಾರ, ವಿಜ್ಞಾನ ವಿಷಯಗಳ

ಶಬ್ದಗಳು ಕಡಿಮೆಯಿವೆ. ಕೆಲವೊಂದು ಕಡೆ ಗ್ರಾಮ್ಯ ಪದಗಳ ಸೇರಿಕೆಯಲ್ಲಿ ಸ್ಪಷ್ಟತೆಯಿಲ್ಲ. ಉದಾ- ಕೊಲ್ಪಟ್ಟೆ -ಕೊರಳಪಟ್ಟಿ, ಕೊಲ್ಲು - ಕೊಲಿಸು, ಮಂಗರೋಳಿ-ಮಂಗರವಳ್ಳಿ ಎಂದು ಅರ್ಥ ಪಡೆದಿವೆ.

೭. ಕೆಲವೆಡೆ ಅಕ್ಷರದೋಷಗಳಾಗಿವೆ. ಉದಾ- ಕಿಟಲ್ ಕೋಶದಲ್ಲಿ ಕೈಕಯೆ-ದಶರಥನ ಹೆಂಡತಿ ಎಂಬ ಅರ್ಥವೇನೋ ಸರಿಯಾಗಿದೆ. ಅದು ಕೈಕಯಿ ಎಂದಾಗಬೇಕಿತ್ತು. ರೀವ್, ಕಿಟೆಲ್‌ರು 'ಗಾಯ' ಶಬ್ದವನ್ನು ಅಚ್ಚಕನ್ನಡವೆಂದು ತಿಳಿದು ಘಟ್ಟಣೆ, ಘಾಯ, ಘಾವ ಎಂದು ಅರ್ಥ ಕೊಟ್ಟಿದ್ದಾರೆ. ಆದರೆ ಅದು ಹಿಂದೂಸ್ತಾನಿ ಶಬ್ದ (ಘಾಯಲ್> ಘಾಯ > ಗಾಯ ಆಗಿದೆ).

ಹೀಗೆ ಮಿಶನರಿ ಕೋಶಗಳಲ್ಲಿ ಕೆಲವು ಮಿತಿಗಳಿವೆಯಾದರೂ ಕೋಶದ ಅಧ್ಯಯನಕ್ಕೆ ಅವು ಬಾಧಕವಾಗುವುದಿಲ್ಲ. ಮಿಶನರಿಗಳು ನಮ್ಮ ನಾಡನ್ನು ಪ್ರವೇಶಿಸುವ ಕಾಲಕ್ಕೆ ಇಲ್ಲಿಯ ಅಪರಿಚಿತ ವಾತಾವರಣ, ದೇಶೀಯ ಜನರು ಮುಕ್ತವಾಗಿ ಬೆರೆಯದೆಯಿರುವುದು, ಮಿಶನರಿಗಳ ಶಬ್ದೋಚ್ಚಾರ ವಿಧಾನವೂ ಬೇರೆಯೇ. ಅವರು ಕನ್ನಡ ನುಡಿಗಳನ್ನು ಎಷ್ಟೇ ಜಾಗರೂಕತೆಯಿಂದ ಆಲಿಸಿದರೂ ಅದರ ಶುದ್ಧಾಶುದ್ಧತೆಯ ಕಲ್ಪನೆ ಅವರಿಗೆ ಕಡಿಮೆ. ಅಂತಹ ಪರಿಸ್ಥಿತಿಯಲ್ಲಿ ಶಬ್ದಗಳನ್ನು ಸಂಗ್ರಹಿಸಿ ಕೋಶರಚನೆ ಮಾಡುವುದು ಸುಲಭದ ಕೆಲಸವಲ್ಲ. ಈ ದಿಸೆಯಲ್ಲಿ ಅವರ ಪ್ರಯತ್ನ ಶ್ಲಾಘನೀಯವಾಗಿದೆ.

ಭಾಷೆ ಕಾಲಕಾಲಕ್ಕೆ ಬದಲಾಗುತ್ತದೆ. ಹಲವು ಅಂಶಗಳನ್ನು ಸ್ವೀಕರಿಸುತ್ತದೆ. ಕೆಲವನ್ನು ತ್ಯಜಿಸುತ್ತದೆ. ಭಾಷೆಯೊಳಗಿನ ಹಲವಾರು ಶಬ್ದಗಳು ವಿರೂಪಗೊಳ್ಳುತ್ತವೆ. ಅಂತಹ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿರುವಾಗ ಆ ಭಾಷೆಗೆ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ರಚಿತವಾದ ಶಬ್ದಕೋಶಗಳು ಕಾಲಕ್ರಮೇಣ ತನ್ನ ಪ್ರಸ್ತುತತೆಯನ್ನು, ಉಪಯುಕ್ತತೆಯನ್ನು ಕಳೆದುಕೊಳ್ಳುತ್ತವೆ. ಅದರಿಂದಾಗಿಯೇ ಕಳೆದ ಶತಮಾನದಲ್ಲಿ ರಚಿತವಾದ ಮಿಶನರಿ ಕೋಶಗಳೂ ಸಹ ಇಂದಿನ ಅಗತ್ಯಕ್ಕೆ ತಕ್ಕಂತೆ ವರ್ತಿಸುವ ಶಕ್ತಿಯನ್ನು ಕಳೆದುಕೊಂಡರೆ ಅದು ಆ ಶಬ್ದ ಕೋಶಗಳ ದೋಷವೆಂದು ಪರಿಗಣಿಸುವಂತಿಲ್ಲ. ಅದು ಭಾಷೆಯ ಚಲನಶೀಲತೆಯ ಪರಿಣಾಮವಷ್ಟೆ. ಜೀವಂತ ಭಾಷೆಯ ಶಬ್ದಕೋಶಗಳು ಹೀಗಿರುವುದು ಸಹಜ. ಮಿಶನರಿಗಳು ತಮ್ಮ ಕೋಶ ರಚನೆಯ ಉದ್ದೇಶವನ್ನು ಸಫಲವಾಗಿಸಿದೆ. ಮಿಶನರಿ ಕೋಶಗಳು ಅದರಲ್ಲಿಯೂ ಕಿಟೆಲ್‌ಕೋಶ ಇಂದಿಗೂ ಅಧ್ಯಯನಕಾರರಿಗೆ ಪ್ರಮಾಣ ಗ್ರಂಥವಾಗಿ ಉಳಿದಿದೆ.

೬.೦೩ ಕನ್ನಡ ನಿಘಂಟು ರಚನೆಗೆ ಮಿಶನರಿ ಕೋಶಕಾರರ ಕೊಡುಗೆ

ಕನ್ನಡಕ್ಕೆ ತನ್ನದೇ ಆದ ನಿಘಂಟುಗಳ ಪರಂಪರೆಯಿದೆ. ರನ್ನಕಂದ, ಅಭಿಧಾನ ವಸ್ತುಕೋಶಗಳನ್ನು ಮೊದಲುಗೊಂಡು ಕವಿಕಂಠಹಾರದವರೆಗೆ ಗಟ್ಟಿ ತಳಹದಿಯಿದೆ. ಆಧುನಿಕ ಕೋಶರಚನೆಯ ದೃಷ್ಟಿಯಿಂದಲೂ ಕನ್ನಡ ಹಿಂದು ಬಿದ್ದಿಲ್ಲ. ಆ ದಿಸೆಯಲ್ಲಿ ಕನ್ನಡವನ್ನು ಮೊದಲು ನಡೆಸಿದ ಶ್ರೇಯಸ್ಸು ಮಿಶನರಿಗಳಿಗೆ ಸಲ್ಲುತ್ತದೆ. ಮಿಶನರಿಗಳು ನಿಘಂಟು ಕ್ಷೇತ್ರದಲ್ಲಿ ಆಸಕ್ತವಹಿಸಿದ್ದರಿಂದ ಈ ಕ್ಷೇತ್ರದಲ್ಲಿ ನೂತನ

ಮನ್ವಂತರವೊಂದು ತೆರೆಯಿತೆನ್ನಬಹುದು. ಅವರಿಂದ ಹೊಸ ಬಗೆಯ ಕೋಶರಚನಾ ವಿಧಾನ ಆರಂಭವಾಯಿತು. ಆಧುನಿಕ ನಿಘಂಟು ರಚನೆಗೆ ಮಿಶನರಿಗಳ ಕೊಡುಗೆಯೇನು, ಅವರ ಕೊಡುಗೆ ಯಾವ ಬಗೆಯದು ಎಂಬುದರ ಬಗೆಗೆ ಈ ಭಾಗದಲ್ಲಿ ವಿವೇಚಿಸಲಾಗಿದೆ.

ಮಿಶನರಿಗಳಿಗೆ ನಿಘಂಟು ರಚನೆಗೆ ಬೇಕಾಗಿರುವ ಇಂಗ್ಲಿಶ್ ಭಾಷೆಯಲ್ಲಿ ಆಳವಾದ ಪಾಂಡಿತ್ಯ, ಸಂಸ್ಕೃತ ಹಾಗೂ ದ್ರಾವಿಡ ಭಾಷೆಗಳ ಪರಿಚಯ, ಭಾಷಾಶಾಸ್ತ್ರದ ಪರಿಜ್ಞಾನ, ಜರ್ಮನ್ ವಿದ್ವತ್ ಪರಂಪರೆಯ ವೈಜ್ಞಾನಿಕ ಸಂಶೋಧನ ದೃಷ್ಟಿ, ನಿಘಂಟುಕಾರನಿಗಿರಬೇಕಾದ ಸಂಯಮ ಶ್ರಮಗಳಿಂದ ಕೂಡಿದ ಮಾನಸಿಕ ಸಿದ್ಧತೆಯಿತ್ತು. ಹೀಗಾಗಿ ಯಾವುದೇ ಉಲ್ಲೇಖವನ್ನು ತೆಗೆದುಕೊಳ್ಳಲಿ ಅದನ್ನು ಸಮಗ್ರವಾಗಿ ವಿವೇಚಿಸುವ ಸಾಧನ ಸಂಪತ್ತು ಅವರಲ್ಲಿತ್ತು.

೧. ಮಿಶನರಿಗಳು ಕ್ಷೇತ್ರಕಾರ್ಯಾಧಾರಿತ ಶಬ್ದಕೋಶ ರಚನಾ ಪದ್ಧತಿಯ ಕಡೆಗೆ ನಮ್ಮ ಕಲ್ಪನೆಯನ್ನು ತಿರುಗಿಸಿದರು. ಮೂಲನೆಲೆಗೆ ಹೋಗಿ ಸಾಮಗ್ರಿಗಳನ್ನು ಸಂಗ್ರಹಿಸುವ ವಿಧಾನ ಇದು. ಶಾಸನ, ಹಸ್ತಪ್ರತಿಗಳು, ಕಡತಗಳು ಇರುವಲ್ಲಿಗೆ ಹೋಗಿ ಗಮನಿಸುತ್ತಿದ್ದರು. ಒಂದು ಪ್ರದೇಶದ ಭಾಷೆ, ವೃತ್ತಿ, ನಂಬಿಕೆ, ಆಚರಣೆಗಳು ಮೊದಲಾದವುಗಳನ್ನು ಲಕ್ಷಿಸಿ ಶಬ್ದಗಳನ್ನು ಸಂಗ್ರಹಿಸುತ್ತಿದ್ದರು. ಆ ವೇಳೆಯಲ್ಲಿ ಸಂದರ್ಶನ, ವೀಕ್ಷಣೆ, ಮಾದರಿ ಮೊದಲಾದ ಸಾಧನ ತಂತ್ರಗಳನ್ನು ಅವರು ಬಳಸಿಕೊಳ್ಳುತ್ತಿದ್ದರು. ಕ್ಷೇತ್ರಕಾರ್ಯದ ಮೂಲಕ ಶಬ್ದಗಳನ್ನು ಸಂಗ್ರಹಿಸಿರುವುದರಿಂದ ವೈವಿಧ್ಯಮಯವಾದ ಪ್ರಾದೇಶಿಕ ರೂಪಗಳು ಅವರ ಕೋಶಗಳಲ್ಲಿ ಬಂದಿವೆ. ಇದರಿಂದಾಗಿ ಭಾಷಾ ಸಂಕೀರ್ಣತೆ ಕಡಿಮೆಯಾಗಿ ಕ್ಲಿಷ್ಟ ಶಬ್ದಗಳು ಸುಲಭವಾಗಿ ಹೇಳಲು, ಗ್ರಹಿಸಲು ಅರ್ಥವಾಗುತ್ತದೆ.

೨. ಭಾಷಾ ಚರಿತ್ರೆಯ ಅಧ್ಯಯನದ ದೃಷ್ಟಿಯಿಂದ ಆಡುನುಡಿಗಳು ಎಷ್ಟು ಮಹತ್ವದ್ದೆನ್ನುವುದನ್ನು ಮೊದಲಿಗೆ ತೋರಿಸಿ ಕೊಟ್ಟವರು ಮಿಶನರಿಗಳು. ಅವರಿಗಿಂತ ಹಿಂದಿನ ಕೋಶಗಳು ಗ್ರಂಥಸ್ಥ ಭಾಷೆಗೆ ಮಾತ್ರ ಒತ್ತುಕೊಟ್ಟಿವೆ. ಕೋಶ ರಚನೆಯಲ್ಲಿ ಗ್ರಂಥಸ್ಥ ಭಾಷೆಯ ಜೊತೆಗೆ ಆಡುನುಡಿಗಳು ಗುರುತರವಾದ ಪಾತ್ರವಹಿಸುತ್ತವೆ. ಒಂದು ಭಾಷೆಯನ್ನಾಡುವ ಜನರ ಸಮಾಜ, ಸಂಸ್ಕೃತಿ ಮುಂತಾದ ಸಂಗತಿಗಳನ್ನು ಅರಿಯಬೇಕಾದರೆ ಅವುಗಳ ಉಪಭಾಷೆಗಳು ನೆರವು ನೀಡುತ್ತವೆ. ಒಂದು ಭಾಷೆಯ ಮೂಲ ಭಾಷೆಯನ್ನು ಪುನರ್ ರಚಿಸಿಕೊಳ್ಳಬೇಕಾದರೆ ಅದರ ಬೇರೆ ಬೇರೆ ಉಪಭಾಷೆಗಳ ಭಾಷಾ ಸಾಮಗ್ರಿಗಳು ಅತ್ಯಗತ್ಯವಾಗಿ ಬೇಕಾಗುತ್ತವೆ. ಇಂತಹ ಸಂಗತಿಗಳನ್ನರಿತ ಮಿಶನರಿಗಳು ಕೋಶ ರಚಿಸುವಾಗ ಆಡುನುಡಿಗಳಿಗೆ ಆದ್ಯತೆ ಕೊಟ್ಟರು. ಅವರು ತಮ್ಮ ಉದ್ದೇಶಸಿದ್ಧಿಗಾಗಿ ಸ್ಥಳೀಯ ಜನತೆಯ ಜೊತೆಗೆ ವ್ಯವಹರಿಸಬೇಕಾಗಿರುವುದರಿಂದ ಆಡುಮಾತಿನ ಪ್ರಭೇದಗಳನ್ನು ಅವುಗಳ

ಪ್ರಯೋಗಗಳನ್ನು ಪರಿಚಯ ಮಾಡಿಕೊಳ್ಳುವುದರಿಂದ ಭಾಷಾ ಕಲಿಕೆ ಅವರಿಗೆ ಸುಲಭವಾಯಿತು. ಉಪಭಾಷಾ ಪದಗಳನ್ನು ಗುರುತಿಸುವಾಗ ಆ ಪದಗಳ ಮುಂದೆ ಆಯಾ ಪ್ರದೇಶಗಳ ಹೆಸರುಗಳನ್ನು ನಮೂದಿಸುತ್ತಾರೆ.

೩. ಅಕ್ಷರಾದಿಕ್ರಮದ ಕೋಶ ರಚನೆ ಮಿಶನರಿಗಳಿಂದ ಆರಂಭವಾಯಿತು ಪ್ರಾಚೀನ ಶಬ್ದಕೋಶಗಳು ವಿಷಯಾನುಕ್ರಮಣಿಕೆಯಲ್ಲಿದ್ದವು. ಅಕ್ಷರಾದಿ ಕ್ರಮದಲ್ಲಿ ಶಬ್ದಗಳನ್ನು ಕಾಣಿಸಿ ಅವುಗಳಿಗೆ ಅರ್ಥವನ್ನು ಕೊಡುವುದರಿಂದ ಸುಲಭವಾಗಿ ತಮಗೆ ಬೇಕಾದ ಶಬ್ದಗಳಿಗೆ ಅರ್ಥ ತಿಳಿದುಕೊಳ್ಳಬಹುದು.

೪. ಪರಿಷ್ಕೃತ ರೋಮನ್ ಲಿಪಿಯಲ್ಲಿ ಕನ್ನಡ ರೂಪಗಳನ್ನು ಲಿಪ್ಯಂತರ ಮಾಡಿದ್ದು ಕೋಶ ರಚನೆಗೆ ಮಿಶನರಿಗಳ ಬಹುಮುಖ್ಯ ಕೊಡುಗೆ. ಮುಖ್ಯ ಉಲ್ಲೇಖದ ಉಚ್ಚಾರಣೆಗಳಿಗನುಗುಣವಾಗಿ ಲಿಪಿಯನ್ನು ನಿರ್ಮಿಸಿ ಉಚ್ಚಾರಕ್ಕೂ ಲಿಪಿಗೂ ಅನುರೂಪತೆಯನ್ನು ತರಲು ಇದು ನೆರವಾಗುತ್ತದೆ. ಉಚ್ಚಾರದ ಪ್ರತಿಯೊಂದು ಸೂಕ್ಷ್ಮ ಅಂಶಕ್ಕೂ ಮಹತ್ವವನ್ನು ಕೊಟ್ಟು ಅದನ್ನು ಉಚ್ಚರಿಸಿದಂತೆ ಆಲೇಖಿಸಲಾಗಿದೆ.

೫. ಪದಭಂಡಾರ ಹೆಚ್ಚಿಸಿಕೊಳ್ಳಲಿಕ್ಕೆ ಪದ ಪ್ರಯೋಗಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದಕ್ಕೆ ಮಿಶನರಿಗಳ ಶಾಲಾ ಕೋಶಗಳು ದೇಶೀಯ ಹಾಗೂ ವಿದೇಶಿಯ ಪಂಡಿತರುಗಳಿಗೆ ತುಂಬ ನೆರವಾದವು. ಅವುಗಳ ರಚನಾ ವಿಧಾನ ಆಧುನಿಕ ಕನ್ನಡ ಕೋಶಗಳಾದ ಕನ್ನಡ ರತ್ನಕೋಶ, ಡಿ. ಕೆ. ಭಾರದ್ವಾಜರ ಇಂಗ್ಲಿಷ್-ಕನ್ನಡ ನಿಘಂಟುಗಳ ಮೇಲೆ ಗಾಢವಾಗಿದೆ.

೬. ಕೋಶಗಳಲ್ಲಿಯ ಶಬ್ದಗಳ ಅರ್ಥವಿವರಣೆ, ಪ್ರಯೋಗಗಳನ್ನು ಸೂಚಿಸುವ ರೀತಿ, ನಿಷ್ಪತ್ತಿ ವಿಧಾನ, ಅಕ್ಷರಗಳ ಗಾತ್ರ, ಕರಡಚ್ಚಿನ ಪರಿಶೀಲನೆ ಮೊದಲಾದ ಅಂಶಗಳನ್ನು ಮಿಶನರಿಗಳು ಕೂಲಂಕುಷವಾಗಿ ಪರಿಶೀಲಿಸಿದ್ದಾರೆ. ವಿವರಣ ಚಿಹ್ನೆಗಳು ನಿಘಂಟುವಿನಲ್ಲಿ ಮಹತ್ವದ ಪಾತ್ರ ನಿರ್ವಹಿಸುವುದರಿಂದ ಅವುಗಳ ನಿರ್ದಿಷ್ಟ ಬಳಕೆಗೆ ನಿಯಮಗಳನ್ನು ನಿರೂಪಿಸಿದ್ದಾರೆ. ಕೋಶಗಳು ಶುಷ್ಕವಾಗದಂತೆ ಶಬ್ದಾರ್ಥ ವಿವೇಚಿಸುವಾಗ ಸಂದರ್ಭಕ್ಕೆ ತಕ್ಕಂತೆ ಗಾದೆ, ನುಡಿಗಟ್ಟುಗಳನ್ನು ಕೊಟ್ಟಿದ್ದಾರೆ. ಇವುಗಳ ಸೇರ್ಪಡೆಯಿಂದ ಮಿಶನರಿ ಕೋಶಗಳು ಸಾಂಸ್ಕೃತಿಕ ಅಧ್ಯಯನಕ್ಕೆ ಆಕರಗಳಾಗಿವೆ.

೭. ಕನ್ನಡ ಪದಗಳ ವಿವಿಧ ಅರ್ಥಗಳನ್ನು ಕನ್ನಡದಲ್ಲಿ ಕೊಡುವುದರ ಜೊತೆಗೆ ಇಂಗ್ಲಿಶಿನಲ್ಲಿ ಕೊಡುವರು. ಪ್ರಧಾನ ಪದದ ವಿವಿಧ ರೂಪಗಳಿಗೆ ಕೆಲವು ಸಾರಿ ಅವು ಬಳಕೆಯಲ್ಲಿರುವ ಮೂಲವನ್ನು ಗುರುತಿಸುವುದುಂಟು. ದೇಶ್ಯ ಪದಗಳ ಕೆಳಗೆ ದ್ರಾವಿಡ ಪದಗಳ ಜ್ಞಾತಿಪದಗಳನ್ನು ಕೊಡುವುದು ತೌಲನಿಕ ಅಧ್ಯಯನದ ದೃಷ್ಟಿಯಿಂದ ಇದು ಬಹಳ ಮುಖ್ಯವಾದುದು. ತದ್ಭವಗಳು ಬಂದ

ಸಮಯದಲ್ಲಿ ಅದಕ್ಕೆ ಸಂಸ್ಕೃತದ ತತ್ಸಮಗಳನ್ನು ಕೊಡಲಾಗಿದೆ. ಹೀಗಾಗಿ ಪ್ರತಿಯೊಂದು ಪದದ ವಿವರಣಾತ್ಮಕ ಸೂಚಿ ದೊರೆತಂತಾಗಿದೆ. ಕೋಶರಚನೆ ಶಿಸ್ತಿನ ವಿಷಯವೆಂದು ಅವರಿಂದ ತಿಳಿಯಿತು.

೮. ಮಿಶನರಿಗಳು ತಮ್ಮ ಕೋಶಗಳಿಗೆ ಬರೆದ ಪ್ರಸ್ತಾವನೆಗಳು ಮೌಲಿಕವಾದವುಗಳು. ಕೋಶರಚನೆಯ ವಿಧಾನ, ಕನ್ನಡ ಭಾಷೆಯ ಸ್ವರೂಪದ ಬಗೆಗೆ ಅವರು ವ್ಯಕ್ತಪಡಿಸಿದ ವಿಚಾರಗಳು ಈಗಲೂ ಪ್ರಸ್ತುತ. ಇಂದಿಗೂ ಕೋಶ ರಚಿಸುವವರು ಅವರ ಪ್ರಸ್ತಾವನೆಗಳಿಂದ ಸ್ಫೂರ್ತಿಯನ್ನು ಸೂಚನೆಗಳನ್ನು ಪಡೆಯುವುದು ಎಂಬ ಮಾತು ಬಹುಮಟ್ಟಿಗೆ ನಿರ್ವಿವಾದ. ರೀವ್ಸ್‌ರ ಇಂಗ್ಲಿಶ್-ಕನ್ನಡ, ಕಿಟೆಲ್‌ರ ಕನ್ನಡ-ಇಂಗ್ಲಿಶ್ ಕೋಶಗಳ ಪ್ರಸ್ತಾವನೆಯ ಅಧ್ಯಯನವೇ ಕೋಶರಚನೆಯ ಶಿಕ್ಷಣವಾಗಬಲ್ಲುದು. ಒಂದು ಪದವು ಬೇರೆ ಬೇರೆ ಕಾವ್ಯ, ಆಡುನುಡಿಗಳಲ್ಲಿ ಹೇಗೆ ಬಳಕೆಯಾಗಿದೆ ಎಂಬುದನ್ನು ಹೋಲಿಸಿ ನೋಡುವ ಸಂಶೋಧನ ಪ್ರವೃತ್ತಿ ರೀವ್ಸ್ ಮತ್ತು ಕಿಟೆಲ್‌ರಿಗೆ ಕರಗತವಾಗಿದೆ. ಇಬ್ಬರು ಕೋಶ ರಚನೆಗೆ ತುಂಬ ಶ್ರಮಪಟ್ಟರು. ಮುಖ್ಯ ಉಲ್ಲೇಖ, ಉಪಉಲ್ಲೇಖಗಳನ್ನು ಕೊಡುವಾಗ ಉದ್ದಕ್ಕೂ ಒಂದು ಎಚ್ಚರದ ಮನಸ್ಸು ಕೆಲಸ ಮಾಡಿದೆ ಎಂಬುದು ಸಾಮಾನ್ಯ ಓದುಗರಿಗೂ ಸ್ಪಷ್ಟವಾಗುತ್ತದೆ.

ಮಿಶನರಿ ಕೋಶಗಳು ಹದಿನೆಂಟನೆಯ ಶತಮಾನದ ಪೂರ್ವಾರ್ಧ ಮತ್ತು ಉತ್ತರಾರ್ಧದಲ್ಲಿ ರಚಿತವಾಗಿರುವುದರಿಂದ ಪ್ರಚಲಿತ ಕನ್ನಡದಲ್ಲಿ ಲುಪ್ತವಾಗಿರಬಹುದಾದ ನೂರಾರು ಶಬ್ದಗಳು ಅವುಗಳಲ್ಲಿ ದೊರೆಯುತ್ತವೆ. ಆ ಕಾಲ ಘಟ್ಟದ ಸಾಮಾಜಿಕ, ಭಾಷಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅರಿಯಲಿಕ್ಕೂ ಅವು ನೆರವಾಗುತ್ತವೆ. ಆ ಕೋಶಗಳನ್ನು ಅಧ್ಯಯನ ಮಾಡಿದಾಗ ಅದೊಂದು ಅಪೂರ್ವ ವಿದ್ವತ್ ಸಾಹಸವೆಂದು ಯಾರಿಗಾದರೂ ಅನಿಸುತ್ತದೆ. ಅವರ ಸಾಧನೆಯ ಬಗೆಗೆ ಗೌರವ ಹುಟ್ಟುವುದಲ್ಲದೆ ಅಂತಹ ಹಿನ್ನೆಲೆಯ ಅರಿವಿಲ್ಲದೆ ಹೋದರೆ ಆಧುನಿಕ ನಿಘಂಟು ರಚನೆಗೆ ಆಗುವ ನಷ್ಟ ಎಷ್ಟೆಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ. ಮಿಶನರಿಗಳು ನಿಘಂಟು ರಚನೆಯಲ್ಲಿ ಮೂಲಭೂತ ಕೆಲಸ ಮಾಡಿ ಅಂತಹ ಕೆಲಸ ಮಾಡುವವರಿಗೆ ಮಾರ್ಗ ತೋರಿಸಿದರು. (ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ರಚನೆಯಲ್ಲಿ ಮಿಶನರಿ ಕೋಶಕಾರರು ಏನು ಹೇಳಿದ್ದಾರೆಂದು ನೋಡಿಕೊಂಡೆ ಮುಂದುವರಿಯುವ ಪರಿಪಾಠವಿದೆ). ಕನ್ನಡ ವಿದ್ವತ್ ಪ್ರಪಂಚದಲ್ಲಿ ಮಿಶನರಿ ಕೋಶಕಾರರ ಪ್ರಯೋಜನ ಪಡೆಯುವುದು ನಿರಂತರವಾಗಿ ನಡೆದಿದೆ. ಹೊಸಗನ್ನಡದ ಉದಯಕಾಲದಲ್ಲಿ ಶಾಸ್ತ್ರೀಯ ಶಬ್ದಕೋಶದ ರಚನೆಯಿಲ್ಲದ ಆ ಕಾಲದಲ್ಲಿ ಮಿಶನರಿಗಳ ಕಾರ್ಯ ಅದೆಷ್ಟೋ ಶ್ಲಾಘ್ಯವೆಂದು ಬೇರೆ ಹೇಳಬೇಕಾಗಿಲ್ಲ. ಕನ್ನಡ ಭಾಷಾಭ್ಯಾಸದಲ್ಲಿ, ಶಬ್ದ ಸಂಯೋಜನೆಯಲ್ಲಿ ಈ ಕೋಶಗಳ ಉಪಯುಕ್ತತೆ ಅಸಾಧಾರಣವಾಗಿದೆ.

ಅಧ್ಯಾಯ-೭ ಅನುಬಂಧಗಳು

೭.೦೧ ಪ್ರಾಚೀನ ಕನ್ನಡ ನಿಘಂಟುಗಳು

ಕನ್ನಡಿಗರಿಗೆ ನಿಘಂಟು ರಚನೆಯ ವಿಧಾನ ಸಂಸ್ಕೃತ ದಿಂದಲೇ ಬಂದದ್ದು ಎನ್ನಬಹುದು. ಸಂಸ್ಕೃತ ನಿಘಂಟುಕಾರರಲ್ಲಿ ವರರುಚಿ, ಬಾಗುರಿ, ಶಾಶ್ವತ, ಅಮರಸಿಂಹ, ಗೋಪಾಲಕ, ಧನಂಜಯ ಹಲಾಯುಧ ಮೊದಲಾದವರ ನಿಘಂಟುಗಳ ಪ್ರಭಾವ ಕನ್ನಡ ನಿಘಂಟುಗಾರರ ಮೇಲೆ ಆಗಿದೆ. ಸಂಸ್ಕೃತ ನಿಘಂಟುಗಳು ನೀಡಿದ ಪ್ರೇರಣೆಯಂತೆ ಅವುಗಳ ರಚನಾ ವಿಧಾನಕ್ಕೆ ತಕ್ಕಂತೆ ಪ್ರಾಚೀನ ಕನ್ನಡ ನಿಘಂಟುಗಳು ರಚಿತವಾದವು. ಸಂಸ್ಕೃತ ನಿಘಂಟುಗಳು ಶ್ಲೋಕ ರೂಪದಲ್ಲಿ ರಚಿತವಾದರೆ ಕನ್ನಡ ನಿಘಂಟು ರಚನೆಗೆ ವೃತ್ತ, ಕಂದ, ಷಟ್ಪದಿಗಳು ಮಾಧ್ಯಮಗಳಾದವು. ಉಪಲಬ್ಧವಿರುವ ಪ್ರಾಚೀನ ನಿಘಂಟುಗಳನ್ನು ಅವಲೋಕಿಸಿದಾಗ ಅವುಗಳನ್ನು **ಕನ್ನಡ-ಕನ್ನಡ ನಿಘಂಟುಗಳು, ಸಂಸ್ಕೃತ-ಕನ್ನಡ ನಿಘಂಟುಗಳು, ಕನ್ನಡ-ಸಂಸ್ಕೃತ ನಿಘಂಟುಗಳು ನಿಘಂಟು ವ್ಯಾಖ್ಯಾನಗಳೆಂದು** ನಾಲ್ಕು ಬಗೆಯಾಗಿ ವಿಂಗಡಿಸಬಹುದು.

ಪ್ರಾಚೀನ ಕನ್ನಡ ನಿಘಂಟುಗಳು ಪಂಡಿತರಿಂದ ಪಂಡಿತರಿಗಾಗಿ ರಚಿತವಾಗಿದ್ದು ವಾಸ್ತವದಲ್ಲಿ ಪದಸಂಗ್ರಹಗಳೋ ಅಪೂರ್ಣ ಅರ್ಥಕೋಶಗಳೋ ಆಗಿದ್ದವು. ಕಾಲ ಕ್ರಮೇಣ ಅವು ಸಾರ್ವಜನಿಕ ಉಪಯೋಗಿಯಾದ ಸಾಮಾನ್ಯ ಕೋಶಗಳಿಗೆ ಮೂಲವಾದವು. ಭಾಷಾಶಾಸ್ತ್ರದ ತಳಹದಿಯ ಮೇಲೆ ರಚಿತವಾಗುತ್ತಿರುವ ಆಧುನಿಕ ಕೋಶಗಳಿಗೂ ಆಕರವಾದವು. ಪ್ರಾಚೀನ ನಿಘಂಟುಗಳು ಹಳಗನ್ನಡ ಸಾಹಿತ್ಯಾಧ್ಯಯನಕ್ಕೆ ಅತ್ಯಗತ್ಯವಾದ ಕೈಪಿಡಿಗಳಾಗಿವೆ. ಪ್ರಾಚೀನ ಕನ್ನಡ ನಿಘಂಟುಗಳ ಸ್ಥೂಲ ಸಮೀಕ್ಷೆಯನ್ನು ಈ ಭಾಗದಲ್ಲಿ ಮಾಡಿಕೊಡಲಾಗಿದೆ.

ರನ್ನಕಂದ (ಸು. ೯೯೦) : ನಮಗೆ ಉಪಲಬ್ಧವಿರುವ ಮೊದಲನೆಯ ಪ್ರಾಚೀನ ನಿಘಂಟಾಗಿದೆ. ಇದರ ಕರ್ತೃ ರನ್ನನಿರ ಬಹುದೆಂದು ಕವಿಚರಿತೆಕಾರರ ಅಭಿಪ್ರಾಯ. ಇದಕ್ಕೆ ಆಧಾರವೆಂದರೆ ಪ್ರತಿಯೊಂದು ಪದ್ಯ 'ಕವಿರತ್ನಾ' ಅಥವಾ 'ಕವಿರನ್ನಾ' ಎಂದು ಮುಗಿಯುವುದು. ಕೃತಿಕಾರ ತನ್ನ ಪಾಂಡಿತ್ಯದಿಂದ ಆ ಕಾಲದಲ್ಲಿ ಪ್ರಚಲಿತವಾಗಿದ್ದ ಹಳಗನ್ನಡ ಶಬ್ದಗಳನ್ನೂ ಅರ್ಥಗಳನ್ನೂ ಕಂದ ಪದ್ಯಗಳಲ್ಲಿ ಬರೆದಿಟ್ಟಿದ್ದಾನೆ. ಆದರೆ ಈ ನಿಘಂಟು ಪೂರ್ಣವಾಗಿ ಉಪಲಬ್ಧವಾಗಿಲ್ಲ. ಪ್ರೊ. ತ. ಸು. ಶಾಮರಾಯರು ಹನ್ನೊಂದು ಪದ್ಯಗಳಿರುವ ತಾಳೆಗರಿಯ ಹಸ್ತಪ್ರತಿಯನ್ನಾಧರಿಸಿ 'ರನ್ನಕಂದ' ಎಂಬ ಹೆಸರಿನಿಂದ ಈಗಾಗಲೇ ಪ್ರಕಟಿಸಿದ್ದಾರೆ (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ-೩೧ ಸಂ-೩೪). ಇದು ತೀರ ಅಶುದ್ಧವೂ, ಸ್ಖಾಲಿತ್ಯಗಳಿಂದ ಕೂಡಿದದೂ ಆಗಿದೆ. ಡಾ. ಎಂ. ಎಂ. ಕಲಬುರ್ಗಿಯವರು ಕೊಲ್ಹಾಪುರದಲ್ಲಿ ತಮಗೆ ಸಿಕ್ಕ ಎರಡು ಹಸ್ತ ಪ್ರತಿಗಳ ಮೂಲಕ 'ರನ್ನನಿಘಂಟು' ಎಂಬ ಹೆಸರಿನಿಂದ ಸಂಪಾದಿಸಿದ್ದಾರೆ (ಮಾರ್ಗ ಸಂ-೧). ಇದರಲ್ಲಿ ೪೫ ಕಂದ ಪದ್ಯಗಳಿವೆ. ಇದು ಸಹಿತ ಅಶುದ್ಧವೂ, ಸ್ಖಾಲಿತ್ಯಯುಕ್ತವೂ ಆಗಿದೆ. ಈ ನಿಘಂಟಿನಲ್ಲಿ ಕೆಲವು ತಮಿಳ್ ಶಬ್ದಗಳು ಕಂಡುಬರುತ್ತವೆ. ಒಟ್ಟಿನಲ್ಲಿ ಇದು ಕನ್ನಡದ ಪ್ರಥಮ ನಿಘಂಟು ಎಂಬ ಕೀರ್ತಿಗೆ ಪಾತ್ರವಾಗಿದೆ.

ಅಭಿಧಾನ ವಸ್ತು ಕೋಶ (ಸು ೧೦೪೨) : ಎರಡನೆಯ ನಾಗವರ್ಮನಿಂದ ರಚಿತವಾದ 'ಅಭಿಧಾನ ವಸ್ತುಕೋಶ' ಕಂದ ಮತ್ತು ವೃತ್ತಗಳಲ್ಲಿ ರಚಿತವಾಗಿದೆ. ಸಂಸ್ಕೃತ ನಿಘಂಟುಗಳೇ ಈ ಕೋಶ ರಚನೆಗೆ ಪ್ರೇರಣೆಯಾಗಿವೆಯೆಂದು ನಾಗವರ್ಮನೆ ಹೇಳಿದ್ದಾನೆ.

ವರರುಚಿ ಹಲಾಯುಧಂ ಬಾ
ಗುರಿಶಾಶ್ವತ ಮಮರ ಕೋಶ ಮೆಂಬಿವು ಮೊದಲಾ
ಗಿರೆ ಪೂರ್ವ ಶಾಸ್ತ್ರ ಮಂಸಂ
ಹರಿಸಿ ಮನಂಗೊಳೆ ನಿಘಂಟಿಮಂ ವಿರಚಿಸುವೆಂ ॥ ೧-೧-೨

ಈ ಕೋಶದಲ್ಲಿ ಸಂಸ್ಕೃತ ಕೋಶಗಳ ಹಾಗೆ ಏಕಾರ್ಥ ಕಾಂಡ, ನಾನಾರ್ಥ ಕಾಂಡ ಮತ್ತು ಸಾಮಾನ್ಯ ಕಾಂಡ ಎಂಬ ಮೂರು ಕಾಂಡಗಳಿವೆ. ಕನ್ನಡ ಕಾವ್ಯಗಳಲ್ಲಿ ಬಳಕೆಯಾಗುವ ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಅರ್ಥ ತಿಳಿಸುವ ಮೊದಲನೆಯ ಸಂಸ್ಕೃತ-ಕನ್ನಡ ನಿಘಂಟು ಇದಾಗಿದೆ. ಅಲ್ಲಲ್ಲಿ ಸಂಸ್ಕೃತ ಪರ್ಯಾಯ ಶಬ್ದಗಳನ್ನು ಹೇಳುವಾಗ ಕನ್ನಡ ದೇಶ್ಯ ಶಬ್ದಗಳನ್ನು ಸೇರಿಸಿರುವುದೂ ಕನ್ನಡ ಶಬ್ದಗಳಲ್ಲಿಯೇ ಅರ್ಥ ಹೇಳಿರುವುದೂ ಉಂಟು. ಕೆಲವೆಡೆ ದೇಶ್ಯ ಶಬ್ದಗಳಲ್ಲಿ ಕಠಿಣವಾದವುಗಳ ಅರ್ಥಗಳನ್ನು ತಿಳಿಯಲು ಇದು ಸಹಾಯಕವಾಗಿದೆ. ಅಭಿನವ ಮಂಗರಾಜ (ಸು ೧೩೯೦) ದೇವೋತ್ತಮ (ಸು ೧೬೦೦) ಈ ನಿಘಂಟನ್ನು ನೋಡಿ ತಮ್ಮ ಕೋಶಗಳನ್ನು ರಚಿಸಿದಂತೆ ಹೇಳಿಕೊಂಡಿದ್ದಾರೆ. ಪ್ರಾಚೀನ ಕನ್ನಡ ನಿಘಂಟುಗಳಲ್ಲಿ ಇದು ತುಂಬ ಮಹತ್ವದ್ದು ಮತ್ತು ವ್ಯಾಪ್ತಿಯುಳ್ಳದ್ದಾಗಿದೆ.

ಶಬ್ದಮಣಿದರ್ಪಣ (ಸು ೧೨೬೦): ಕನ್ನಡದ ಪ್ರಸಿದ್ಧ ವ್ಯಾಕರಣಕಾರನಾದ ಕೇಶಿರಾಜ ತನ್ನ ಶಬ್ದಮಣಿ ದರ್ಪಣದ ಸಂಜ್ಞಾ ಪ್ರಕರಣದಲ್ಲಿ ಬಂದಿರುವ '*ೞಳಕುಳ*' ಗಳ ಪಟ್ಟಿ, ಕನ್ನಡ ಧಾತುಗಳನ್ನು ಹೇಳುವ 'ಧಾತುಪ್ರಕರಣ' ಹಾಗೂ ಹಳಗನ್ನಡ ಶಬ್ದಗಳಿಗೆ ಅರ್ಥ ಹೇಳುವ 'ಪ್ರಯೋಗಸಾರ' ಈ ಪ್ರಕರಣಗಳು ಒಂದು ರೀತಿಯಲ್ಲಿ ನಿಘಂಟಿನಂತೆ ಸಿದ್ಧವಾಗಿವೆ. ಸಹಸ್ರಾರು ಹಳಗನ್ನಡ ಶಬ್ದಗಳನ್ನು ಸಂಗ್ರಹಿಸಿ ಅವುಗಳಿಗೆ ಸರಿಯಾದ ಅರ್ಥವನ್ನು ರೂಪಿಸಿರುವ ಕೇಶಿರಾಜ ಕನ್ನಡ ಭಾಷಾಧ್ಯಯನಕ್ಕೆ ಮಹೋಪಕಾರ ಮಾಡಿದ್ದಾನೆ. ಈತನ ತರುವಾಯ ಬಂದ ನಿಘಂಟುಕಾರರಿಗೆಲ್ಲ ಇದು ಒಂದು ಆಕರ ಗ್ರಂಥವಾಯಿತು. 'ಸಹಜ *ೞಳಿ*ಗಳ್' ಬಗ್ಗೆ ಕೇಶಿರಾಜ ಹೇಳಿರುವಂತೆ

ಏಕದ್ವಿತ್ರಿ ಚತುಃ ಪಂ
ಚಾಕಲಿತಾರ್ಥಂಗಳಾಗಿ *ೞಳಿ*ಸೊಳವುನಿಸ
ಗರ್ಾ ಕೃತಿಯಿಂದ ಮಾದಿಮ
ಹಾಕವಿ ಕೃತಿದೃಷ್ಟಮಂ ನಿರಾಕುಳ ಮಸಿರ್ವೆಂ

ಹಳಗನ್ನಡ ಕಾವ್ಯಗಳಲ್ಲಿ ಬಳಕೆಯಾಗಿರುವ ಒಂದರ್ಥದಿಂದ ಐದರ್ಥವುಳ್ಳ ಅಲ್ಲಿ ಯುಕ್ತವಾದ ಸ್ವತಂತ್ರ ಪದಗಳ ಪಟ್ಟಿಯನ್ನು ಕೊಟ್ಟಿದ್ದಾನೆ. ಆಯಾ ಪದಗಳ ಶುದ್ಧ ರೂಪಗಳನ್ನು ಗೊತ್ತು ಮಾಡಲೆಂದು ಕೇಶಿರಾಜ ಕುಳದ ಪಟ್ಟಿಯನ್ನು ನೀಡಿದ್ದಾನೆ. ಕೇಶಿರಾಜನ ಧಾತು ಪ್ರಕರಣವು ಕನ್ನಡ ಕೋಶದ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾಗಿದೆ. ಅವನು ಕೊಟ್ಟಿರುವ ಧಾತುಗಳ ಸಂಖ್ಯೆ ೯೮೫. ಅವುಗಳ ಪಟ್ಟಿ ಪ್ರಮಾಣ ಪೂರ್ವಕವಾದುದು. ಹಳಗನ್ನಡ ಸಾಹಿತ್ಯದಲ್ಲಿ ಪ್ರಯುಕ್ತವಾದ ನೂರಾರು ದಾತುಗಳ ಅರ್ಥ ನಿರ್ಣಯಕ್ಕೆ ಕೇಶಿರಾಜನ ಧಾತು ಪಾಠವೇ ಏಕೈಕ ಪ್ರಾಚೀನ ಸಾಧನವಾಗಿದೆ. 'ಕ' ಕಾರದಿಂದ ಮೊದಲಾಗಿ 'ಳ' ಕಾರದವರೆಗೆ ಬೇರೆ ಬೇರೆ ವ್ಯಂಜನಾಕ್ಷರಗಳಿಂದ ಕೊನೆಗೊಳ್ಳುವ ಧಾತುಗಳಿಗೆ ಸಂಸ್ಕೃತದಲ್ಲಿ ಕ್ರಿಯಾರ್ಥವನ್ನು ಹೇಳಿದ್ದಾನೆ. ಈ, ಓ ಎಂಬಿವು ಎರಡೇ ಸ್ವರಧಾತುಗಳು, ಉಳಿದವು ವ್ಯಂಜನಾಕ್ಷರಗಳಿಂದ ಕೊನೆಗೊಳ್ಳುವ ಧಾತುಗಳಾಗಿವೆ. ಕೇಶಿರಾಜನ ಧಾತು ಪಾಠದಲ್ಲಿ ಕನ್ನಡ ಕ್ರಿಯಾಪದಗಳ ಸ್ವರೂಪ ತಿಳಿದು ಬರುತ್ತದೆ. ಪ್ರಯೋಗಸಾರವೆಂಬ ಪ್ರಕರಣದಲ್ಲಿ ೨೩೩ ಹಳಗನ್ನಡ ಕ್ಲಿಷ್ಟಪದಗಳಿಗೆ ಪರಿಚಿತ ಕನ್ನಡ ಶಬ್ದಗಳಲ್ಲಿ ಅರ್ಥ ನೀಡಿದ್ದಾನೆ. ಈ ಪ್ರಕರಣ ಕನ್ನಡ-ಕನ್ನಡ ಶಬ್ದಕೋಶವೇ ಆಗಿದೆ.

ಅಭಿನವಾಭಿಧಾನಂ (ಸು ೧೩೯೮) : ಎರಡನೆಯ ಮಂಗರಾಜನ 'ಅಭಿನವಾಭಿಧಾನಂ' ಇದು ಅಭಿಧಾನ ವಸ್ತುಕೋಶದ ಬಳಿಕ ಎರಡನೆಯ ಪ್ರಸಿದ್ಧ ಸಂಸ್ಕೃತ-ಕನ್ನಡ ನಿಘಂಟು. ಈ ಕೋಶದಲ್ಲಿ ಸ್ವರ್ಗ, ಭೂಮಿ, ಪಾತಾಳ, ಸಾಮಾನ್ಯ ಮತ್ತು ನಾನಾರ್ಥ ಎಂಬ ಐದು ಕಾಂಡಗಳಿದ್ದು ಪ್ರತಿ ಕಾಂಡವು ವಿಷಯಕ್ಕೆ ಅನುಗುಣವಾಗಿ ವರ್ಗಗಳನ್ನು ಸಹ ವಿಭಜಿಸಿದೆ. ಸಾಮಾನ್ಯ ಮತ್ತು ನಾನಾರ್ಥ ಕಾಂಡಗಳಲ್ಲಿ ಮಾತ್ರ ವರ್ಗ ವಿಭಜನೆ ಇಲ್ಲ. ಇಲ್ಲಿ ೫೩೯ ವಾರ್ಧಕ ಷಟ್ಪದಿಗಳಿವೆ. ಕನ್ನಡ ಭಾಷೆಯ ಪ್ರಾಚೀನ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಬಳಕೆಯಾಗುವ ಹಾಗೂ ನಿಘಂಟುಗಳಲ್ಲಿ ಕಂಡುಬರುವ ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಅರ್ಥ ಹೇಳುವುದು ಮಂಗರಾಜನ ನಿಘಂಟಿನ ಉದ್ದೇಶವಾಗಿದೆ. ಮಂಗರಾಜನ ನಿಘಂಟುವಿನಲ್ಲಿ ಒಂದು ಶಬ್ದಕ್ಕೆ ಒಂದು ಕನ್ನಡ ಶಬ್ದದ ಅರ್ಥ, ಸಮಾನಾರ್ಥಕವಾದ ಹಲವು ಸಂಸ್ಕೃತ ಶಬ್ದಗಳಿಗೆ ಒಂದು ಸಂಸ್ಕೃತ ಅಥವಾ ಕನ್ನಡ ಶಬ್ದದ ಅರ್ಥ, ವಸ್ತುವಿವರಣೆ, ಸಂಕೇತಾರ್ಥ, ನಾನಾರ್ಥ, ಹೀಗೆ ನಿರೂಪಣೆಯಲ್ಲಿ ವೈವಿಧ್ಯವುಂಟು. ದೇವತೆಗಳು, ಗ್ರಹಗಳು, ದಿಕ್ಕುಗಳು, ಕಾಲ, ಭೂಮಿ, ಬೆಟ್ಟ, ಕುಲ, ವೃತ್ತಿಗಳು ಇತ್ಯಾದಿಯಾದ ಸಂಸ್ಕೃತ ಶಬ್ದಗಳಿಗೆ ಸಮಾನಾರ್ಥಕ ಕನ್ನಡ ಶಬ್ದಗಳನ್ನು ಈ ನಿಘಂಟು ಒದಗಿಸುತ್ತದೆ. ಮುಖ್ಯವಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಜನ ಜೀವನದ ಪುನರ್ ರಚನೆಗೆ ಬೇಕಾದ ಎಷ್ಟೋ ಸಾಮಗ್ರಿ ಇಲ್ಲಿ ದೊರೆಯುತ್ತದೆ. ಮಂಗರಾಜನ ಈ ಕೋಶ ಅಭಿಧಾನ ವಸ್ತುಕೋಶದ ಬಳಿಕ ಗಣ್ಯ ಸ್ಥಾನ ಪಡೆಯುತ್ತದೆ.

ಕರ್ಣಾಟಕ ಶಬ್ದಸಾರಂ (ಸು ೧೪೦೦) : ಕನ್ನಡ ಪದಗಳಿಗೆ ಕನ್ನಡದಲ್ಲಿ ಅರ್ಥ ಹೊಂದಿರುವ ಮೊದಲನೆಯ ಕನ್ನಡ-ಕನ್ನಡ ನಿಘಂಟಾಗಿದೆ. ಈ ಕೋಶದ ಕರ್ತೃ, ಕಾಲ ತಿಳಿದು ಬಂದಿಲ್ಲ. ಕವಿಚರಿತೆಕಾರರು ಇದರ ಕಾಲ

ಸು ೧೪೦೦ ಎಂದಿದ್ದಾರೆ. ಈ ಕೋಶದಲ್ಲಿ ನಡುಗನ್ನಡ ಕಾವ್ಯದಲ್ಲಿ ಪ್ರಚಲಿತವಾಗಿದ್ದ ಶಬ್ದಗಳು ಅಲ್ಲಲ್ಲಿ ಕಂಡು ಬರುತ್ತಿರುವುದರಿಂದ ಈ ಕೃತಿ ಸು ೧೪೦೦ ರಲ್ಲಿ ರಚಿತವಾಗಿರಬಹುದು. ಈ ಕೋಶದಲ್ಲಿ ಹಳಗನ್ನಡ, ನಡುಗನ್ನಡ ದೇಶ್ಯ ಶಬ್ದಗಳ ಹಾಗೂ ತದ್ಭವಗಳ ಅರ್ಥ ಹೇಳಿದೆ. ಶಬ್ದಗಳ ಆಯ್ಕೆ ಪರಿಮಿತವಾಗಿದ್ದು ಅರ್ಥ ಹೇಳಲು ಕೋಶಕಾರನು ತನಗೆ ಸುಲಭವೆಂದು ತೋರಿದ ಕನ್ನಡ ಸಂಸ್ಕೃತ ಶಬ್ದಗಳನ್ನು ಬಳಸಿದ್ದಾನೆ. ೬೬೬ ಗದ್ಯ ವಾಕ್ಯಗಳಲ್ಲಿ ೧೪೧೬ ಪದಗಳಿಗೆ ಇಲ್ಲಿ ಅರ್ಥ ಹೇಳಿದೆ. ಸಮಾನಾರ್ಥಕ ಶಬ್ದಗಳನ್ನೆಲ್ಲ ಒಗ್ಗೂಡಿಸಿಯೂ ತದ್ಭವಗಳಿಗೆ ಅವುಗಳ ಸಂಸ್ಕೃತ ರೂಪಗಳನ್ನೂ ನೀಡಿಯೂ, ವ್ಯಾಕರಣಾಂಶಗಳನ್ನೂ ಅಲ್ಲಲ್ಲಿ ವಿವರಿಸಿಯೂ ಅರ್ಥ ವಿವರಣೆ ಮಾಡಿದೆ.

ಉದಾಹರಣೆ-

ಮಾಕಾಳಿ, ಮಾದೇವಿ, ಸಬ್ಬಾಣಿ, ಐಕಿಲ್ವೆಟ್ಟುಣುಗಿ

ಸಿಂಗದೇರಳ್-ಈ ೫ ಪಾರ್ವತಿಯ ಪೆಸರ್

ಈ ನಿಘಂಟಿಗೆ ಶಬ್ದಮಣಿ ದರ್ಪಣದ ವಿವಿಧ ಪ್ರಕರಣಗಳೇ ಆಧಾರ ಸಾಮಗ್ರಿ ಆದರೆ ಕೆಲವು ಶಬ್ದಗಳೂ ಅವುಗಳ ಅರ್ಥಗಳೂ ಹಿಂದಿನ ಅಕ್ಷರಗಳಲ್ಲಿ ಇರುವಂತಿಲ್ಲ. ನಾಡುಗರ ಆಟಗಳು, ಅರಣ್ಯದ ವನಸ್ಪತಿಗಳು, ಪ್ರಾಣಿ-ಪಕ್ಷಿಗಳು ಮೊದಲಾದ ಶಬ್ದಗಳನ್ನು ಪರಿಚಯಿಸುವ ಈ ನಿಘಂಟು ತನ್ನ ಮಿತಿಯಲ್ಲಿ ಒಂದು ಬೆಲೆಯುಳ್ಳ ನಿಘಂಟಾಗಿದೆ.

ಕರ್ನಾಟಕ ನಿಘಂಟು (ಸು ೧೪೦೦): ೧೪ ನೆಯ ಶತಮಾನದಲ್ಲಿ ರಚಿತವಾದ ಈ ನಿಘಂಟಿನ ಕರ್ತೃ, ಕಾಲ ತಿಳಿದು ಬಂದಿಲ್ಲ. ಅಷ್ಟೇ ಏಕೆ ಈ ನಿಘಂಟಿನ ಸರಿಯಾದ ಹೆಸರು ಎಲ್ಲೂ ಉಲ್ಲೇಖಗೊಂಡಿಲ್ಲ. ಕಾವ್ಯ ಮಂಜರಿಯ ಪರಿಷ್ಕರಣದ ಸಂಪಾದಕರು 'ಕರ್ನಾಟಕ ನಿಘಂಟು' ಎಂದು ಕರೆದಿದ್ದಾರೆ. ಕವಿಚರಿತೆಕಾರರು 'ಕಬ್ಬಿಗರ ಕೈಪಿಡಿ' ಎಂದು ಕರೆದು ಇದರ ಕಾಲವನ್ನು ಸು ೧೪೦೦ ಎಂದು ಊಹಿಸಿದ್ದಾರೆ. ೯೮ ಕಂದ ಮತ್ತು ವೃತ್ತಗಳಲ್ಲಿ ಈ ಕೋಶ ರಚಿತವಾಗಿದೆ. ಹಳಗನ್ನಡ ಶಬ್ದಗಳಿಗೆ, ದೇಶ್ಯ ಮತ್ತು ತದ್ಭವಗಳಿಗೆ ಅರ್ಥ ಹೇಳುವ ಕನ್ನಡ-ಕನ್ನಡ ಲಘು ನಿಘಂಟು ಇದಾಗಿದೆ. ಸಾಮಾನ್ಯವಾಗಿ ಒಂದೊಂದೇ ದೇಶ್ಯ ಅಥವಾ ತದ್ಭವ ಶಬ್ದವನ್ನೆತ್ತಿಕೊಂಡು ಸುಲಭವಾದ ದೇಶ್ಯ ಅಥವಾ ಸಂಸ್ಕೃತ ಪ್ರತಿ ಶಬ್ದದಲ್ಲಿ ಅರ್ಥ ಹೇಳುವುದು ಇಲ್ಲಿಯ ಪದ್ಧತಿ.

ಸರಸತಿ ಸಾರದೆ ನುಡಿವೆಣ್

ಸಿರಿಯ ಱಿಯುಂ ಸೌರಿಯೆಂದು ತಾವರೆ ಗಣ್ಣಿಂ

ಸಿರಿಯಾಣ್ಮಂ ಪೊಡೆಯುಲರಂ

ಸಿರಿಯನೆ ಮಾಲಕುಮಿಯೆನೆ ಮಹಾಲಕ್ಷ್ಮಿಯೊಳಂ ॥೩॥

ಪದ್ಯ ಬಂಧದ ಬಿಗಿ, ನಿರೂಪಣೆಯ ರೀತಿಯಲ್ಲಿ ಏಕಸೂತ್ರತೆ, ಶಬ್ದಗಳ ಆಯ್ಕೆಯಲ್ಲಿ ಉಪಯುಕ್ತತೆಯ ದೃಷ್ಟಿ ಇಲ್ಲಿ ಗಮನಾರ್ಹವಾಗಿದೆ. ಈ ನಿಘಂಟಿಗೆ ಶಬ್ದಮಣಿ ದರ್ಪಣದ ಪ್ರಯೋಗಸಾರ ಮತ್ತು ಧಾತು ಪ್ರಕರಣಗಳು ಆಧಾರವಾಗಿವೆ.

ಚತುರಾಸ್ಯ ನಿಘಂಟು (ಸು ೧೪೫೦): ಪ್ರಾಚೀನ ನಿಘಂಟುಗಳಲ್ಲಿ ಈ ನಿಘಂಟು ಅತ್ಯಂತ ಜಟಿಲ ಪ್ರಾಯವೂ, ಗೊಂದಲಮಯವೂ ಆಗಿದೆ. ಇದರ ಕರ್ತೃ ಮತ್ತು ಕಾಲ ಸಂದಿಗ್ಧವಾಗಿದೆ. ಕವಿಚರಿತೆಕಾರರು ಈ ನಿಘಂಟಿನ ಕರ್ತೃ 'ಚತುರಾಸ್ಯ ಬೊಮ್ಮರಸ' ನೆಂದು ಹೇಳಿ ಈತನ ಕಾಲವನ್ನು ಕ್ರಿ.ಶ. ಸು ೧೪೫೦ ಎಂದಿದ್ದಾರೆ. ಈ ನಿಘಂಟಿನಲ್ಲಿ ೨೧೩ ಕಂದ ಪದ್ಯಗಳಿವೆ. ತನ್ನ ಕೋಶದ ಉದ್ದೇಶದ ಬಗ್ಗೆ ಕೋಶಕಾರನೆ ಹೇಳಿದ್ದಾನೆ.

ಕವಿ ಚತುರಾಸ್ಯನೆಂದೆನಿ
ಸುವನಾಮದೆ ದೇಸಿ ತದ್ಭವಂ ತತ್ಸಮವೆಂ
ಬಿವಱಿಂದ ಮಚ್ಚಗನ್ನಡ
ವಿವರಣೆ ಚೆಲ್ವಾಗೆ ರಚಿಸಿದಂ ಚತುರಾಸ್ಯಂ ॥ ೩ ॥

ದೇಶ್ಯ ಮತ್ತು ತದ್ಭವ ಕೋಶ ಇದಾಗಿದೆ. ತತ್ಸಮಗಳೆಂಬ ವಿಶಿಷ್ಟ ಪದಗಳೂ ಸೇರಿವೆ. ದೇಶ್ಯ ಶಬ್ದಗಳಿಗೆ ಪರ್ಯಾಯವಾದ ಕನ್ನಡ ಶಬ್ದಗಳಲ್ಲಿ, ತದ್ಭಗಳಿಗೆ ಅವುಗಳಿಗೆ ಮೂಲವಾದ ಸಂಸ್ಕೃತ ಶಬ್ದಗಳಲ್ಲಿ ಅರ್ಥ ನೀಡಿದೆ.

ಕಬ್ಬಿಗರ ಕೈಪಿಡಿ (ಸು ೧೫೩೦): ವಾರ್ಧಕ ಷಟ್ಪದಿಯಲ್ಲಿ ರಚನೆಗೊಂಡಿರುವ ಈ ಕೋಶ ೧೦೦ ಪದ್ಯಗಳನ್ನೊಳಗೊಂಡಿದೆ. ಇದರಲ್ಲಿ ಹಳಗನ್ನಡ ಶಬ್ದಗಳ ಅರ್ಥಗಳನ್ನು ಹೇಳಲಾಗಿದೆ. ಈ ನಿಘಂಟಿನ ಲಕ್ಷಣವನ್ನು ಕೋಶಕಾರ ಲಿಂಗಮಂತ್ರಿ ಈ ರೀತಿ ಹೇಳಿದ್ದಾನೆ.

ಮಿಸೂಪ ಗೂಢ ಪದ ಪ್ರಯೋಗ ದೊಳ್ವಂರಸಮ
ನೊಸರ್ವ ಚ್ಚಗನ್ನಡದ ಚೆಲ್ವುಮಂ ತದ್ಭವದ
ಬೆಸುಗೆಯಂ ದೇಶೀಯ ಕಮರ್ದ ಸೊಂಪಂ ತೊಳಪ ತತ್ಸಮದ ಭಿನ್ನಣವನು
ಉಸುರೆಂದು ಕೋವಿದರ್ ಬೆಸಸಲಾನಿದಕೆ ಶೋ
ಭಿಸುವ ಕಬ್ಬಿಗರ ಕೈಪಿಡಿಯೆಂದು ಪೆಸರನಿ
ತ್ತೊಸೆದು ಪೇ ್ದಪೆನು ಲಾಲಿಸುವು ದಾವಾಗಳುಂ ರಸಕ ಜನರ ್ತಯಿಂದ ॥ ೩ ॥

ದೇಶ್ಯ, ಗೂಡಾರ್ಥ, ತತ್ಸಮ, ತದ್ಭವಗಳಿಗೆ ಅರ್ಥ ಹೇಳಿದೆ. ಶಬ್ದಮಣಿದರ್ಪಣ, ಶಬ್ದಸಾರ ಮೊದಲಾದ

ಹಳಗನ್ನಡ ನಿಘಂಟುಗಳು ಇದಕ್ಕೆ ಆಧಾರವಾಗಿವೆ. ಮಧ್ಯಕಾಲೀನ ವೀರಶೈವ ಕವಿಗಳು ಬಳಸುತ್ತಿದ್ದ ವಿಶಿಷ್ಟವಾದ ಶಬ್ದರೂಪಗಳಿಗೂ, ಸಮಾಸ ರೂಪಗಳಿಗೂ ಅರ್ಥಗಳು ಕೆಲಮಟ್ಟಿಗುಂಟು. ಈ ನಿಘಂಟಿಗೆ ಹೆಸರು ಘಟ್ಟದ ಹೊನ್ನಪ್ಪ 'ಚಕೋರ ಚಂದ್ರಿಕೆ' ಎಂಬ ಟೀಕೆಯನ್ನು ಬರೆದಿದ್ದಾನೆ.

ಕರ್ಣಾಟಕ ಶಬ್ದಮಂಜರಿ (ಸು ೧೫೦೦): ಇದರ ಕರ್ತೃ ವಿರಕ್ತ ತೋಂಟದಾರ್ಯ. ಕೋಶಕಾರ ತನ್ನ ನಿಘಂಟಿನ ಸ್ವರೂಪವನ್ನು ಹೇಳಿದ್ದಾನೆ.

ಇಂತು ನೆ ಕರ್ನಾಟಕ ಭಾಷೆಯೊಳ್ ತ ಸಂದ
ನಂತನಾಮಂಗಳೊಳ್ ದೇಶೀಯ ಪಲವು ತೆರಿ
ನಂತವು ಮಹಾಶೇಷಗಂ ತಿಳಿಯಲಳ ವಲ್ಲವ ಳು ಪುಕೆಲ ಶಬ್ದಮಂ
ಸಂತಸದೊಳಚ್ಚಗನ್ನಡ ಗೂಢ ಪದ ತತ್ಸ
ಮಂ ತದ್ಭವಗಳೆಂಬ ಶಬ್ದನಾಮಗಳ ನೋ
ರಂತೆ ವಿರಚಿಸಿದೆನೆಲ್ಲಾ ಕವೀಶ್ವರರು ದಾಹರಣ ಸನ್ಮಾರ್ಗವಿಡಿದು ॥ ೧೨೦ ॥

ಈ ಕೋಶದಲ್ಲಿ ಅಚ್ಚಗನ್ನಡ, ಗೂಢ ಪದ, ತದ್ಭವ, ತತ್ಸಮ ಈ ನಾಲ್ಕು ಶಬ್ದಗಳಿಗೆ ಪೂರ್ವ ಕವಿ ಪ್ರಯೋಗಗಳನ್ನು ಗಮನಿಸಿ ಅರ್ಥ ಹೇಳಿದೆ. ಈ ಕೃತಿ ೧೨೦ ವಾರ್ಧಕ ಷಟ್ಪದಿ ಪದ್ಯಗಳನ್ನೊಳಗೊಂಡಿದೆ. ಇದು ಗಾತ್ರದಲ್ಲಿ ಕಿರಿದಾದರೂ ವಿಷಯ ವೈವಿಧ್ಯತೆಯ ದೃಷ್ಟಿಯಿಂದ ಮಹತ್ವದ್ದಾಗಿದೆ. ಈ ಕೋಶದಲ್ಲಿ ಭೂಮಿ, ಜಲ, ಪಕ್ಷಿ, ಗೃಹ, ಆಭರಣಗಳು ಅದರಂತೆ ನಾನಾರ್ಥ ವರ್ಗ, ಅವ್ಯಯ ವರ್ಗ, ವಿಶೇಷವರ್ಗ ಇಂತಹ ವ್ಯಾಕರಣಾತ್ಮಕ ವರ್ಗಗಳಿವೆ. ಶಬ್ದ ಮತ್ತು ಅರ್ಥ ಜೋಡಣೆಯಲ್ಲಿ ಒಂದು ವ್ಯವಸ್ಥೆಯೂ, ಸ್ಪಷ್ಟತೆಯೂ ಇದ್ದು ನಿಘಂಟುವಿನ ಉಪಯುಕ್ತತೆ ಇದರಿಂದ ಹೆಚ್ಚಿದೆ. ಈ ಕಾರಣಗಳಿಂದ ಈ ಕೋಶಕ್ಕೆ ನಾಲ್ಕು ಟೀಕೆಗಳು ಬಂದಿವೆ. ಹೆಸರುಘಟ್ಟದ ಹೊನ್ನಪ್ಪನ ಟೀಕೆ-ವಿಬುಧಾನಂದನೀ, ಎನ್. ಆರ್. ಕರಿಬಸವಶಾಸ್ತ್ರೀಯವರ-ಸುಜನೋಲ್ಲಾಸಿನೀ ಶ್ರೀನಿವಾಸ (?) ಕರ್ಣಾಟಕ ಶಬ್ದಮಂಜರಿ ಟೀಕೆ, ಮುನೇಗೌಡರ- ಕರ್ಣಾಟಕ ಶಬ್ದ ಮಂಜರಿ ಟೀಕೆ ಕನ್ನಡದಲ್ಲಿ ಇನ್ನಾವ ಕೋಶಕ್ಕೂ ಇಷ್ಟೊಂದು ಟೀಕೆಗಳು ಇಲ್ಲದಿರುವುದು ಈ ನಿಘಂಟಿನ ಜನಪ್ರಿಯತೆಗೆ ಸಾಕ್ಷಿ.

ಕರ್ಣಾಟಕ ಸಂಜೀವನಂ (ಸು. ೧೬೦೦) : ಶೃಂಗಾರ ಕವಿಯ ಈ ಕೋಶದಲ್ಲಿ ೩೫ ವಾರ್ಧಕ ಷಟ್ಪದಿಗಳಿವೆ. ಇದು 'ಳಕುಳ' ನಿಘಂಟು ಎಂದು ಪ್ರಸಿದ್ಧವಾಗಿದೆ. ಕುಳ ಶಬ್ದಗಳ ಸ್ಪಷ್ಟ ವಿವೇಚನೆಗೆ ಈ ನಿಘಂಟು ತುಂಬ ಉಪಯುಕ್ತವಾಗಿದೆ. ಪ್ರಾಸಸ್ಥಾನದಲ್ಲಿ ಕುಳ ಬೆರೆಸಬಾರದೆಂಬುದನ್ನು ತಿಳಿಸಿದ್ದಾನೆ. ಶಬ್ದಮಣಿ ದರ್ಪಣದ ಸಹಜ ಂಗಳ್ ಮತ್ತು ಪ್ರಯೋಗಸಾರ ಪ್ರಕರಣಗಳನ್ನು ಆಧರಿಸಿ ಈ ನಿಘಂಟು ಸಿದ್ಧವಾಗಿರಬಹುದು.

ಕರ್ಣಾಟಕ ಭಾರತ ನಿಘಂಟು (ಸು ೧೬೦೦): ಈ ಕೋಶದ ಕಾಲ, ಕರ್ತೃ ತಿಳಿದು ಬಂದಿಲ್ಲ. ಇದರ ಕರ್ತೃ ಕುಮಾರವ್ಯಾಸ ಭಾರತದಲ್ಲಿನ ಪದ್ಯಗಳಿಗೆ ಅರ್ಥವನ್ನು ನಿರೂಪಿಸಿರುವುದಾಗಿ ಹೇಳಿದ್ದಾನೆ.

ಭಾರತದೊಳ್ ಕವಿರಾಜಕು
ಮಾರವ್ಯಾಸಂ ನೆಗ‍್ಟ ಶಬ್ದಂಗಳನಾ
ನಾರಯಿದು ಸುರ್ವೆಂ ನಿಜದಿಂ
ಧೀರರಿದಂ ಮೆಚ್ಚಿ ಮನದೆಗೊಳ್ವುದು ಮುದದಿಂ ॥ ೨ ॥

ಕುಮಾರವ್ಯಾಸನ ನಂತರ ಈ ಕೃತಿ ರಚನೆಯಾಗಿರುವುದೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಇದರ ಕಾಲ ಬಹುಶಃ ಸು. ೧೬೦೦ ಆಗಿರಬಹುದು. ೬೮ ಕಂದ ಪದ್ಯಗಳು ಇದರಲ್ಲಿವೆ. ಕುಮಾರವ್ಯಾಸ ಭಾರತದಲ್ಲಿನ ಕೆಲವು ದೇಶ್ಯಗಳಿಗೆ, ತದ್ಭವಗಳಿಗೆ ಅರ್ಥ ವಿವರಣೆಯನ್ನು ನಿರೂಪಿಸಲಾಗಿದೆ.

ಕವಿಕಂಠಹಾರ (ಸು ೧೬೪೦): ಪ್ರಾಚೀನ ನಿಘಂಟುಗಳಲ್ಲಿ ಇದು ಕೊನೆಯದು. ಇದರ ಕರ್ತೃ ಸೂರ್ಯ ಕವಿ. ಇದರಲ್ಲಿ ೨೭೧ ಕಂದ ಪದ್ಯಗಳಿವೆ. ಕರ್ಣಾಟಕ ಶಬ್ದಸಾರ, ಶಬ್ದಮಣಿದರ್ಪಣ ಮೊದಲಾದ ಪೂರ್ವ ಗ್ರಂಥಗಳ ಆಧಾರದಿಂದ ಸಿದ್ಧವಾದುದು ದೇಶ್ಯ ಮತ್ತು ತದ್ಭವ ಶಬ್ದಗಳಿಗೆ ಅರ್ಥ ವಿವರಣೆ ಇಲ್ಲಿದೆ.

ಕೆಲವು ನಿಘಂಟುಗಳು ಸೀಮಿತ ಉದ್ದೇಶದಿಂದ ರಚಿತವಾದವು. ಅಜ್ಞಾನಕಾಲ, ಕರ್ತೃಕ 'ಶಬ್ದರತ್ನಾಕರ' (ಸು ೧೬೦೦) 'ಪದ್ಯನಾನಾರ್ಥ' (ಸು ೧೬೦೦) ಚೆನ್ನಕವಿಯ 'ಶಬ್ದಾಗಮ' (ಸು ೧೬೦೦) ನಾನಾರ್ಥ ಕಂದ (ಸು ೧೬೦೦) ದೇವೋತ್ತಮದ ನಾನಾರ್ಥ ರತ್ನಾಕರ (ಸು ೧೬೦೦) ಈ ಬಗೆಯ ನಿಘಂಟುಗಳು ಮುಖ್ಯವಾಗಿ ಕನ್ನಡ ಕಾವ್ಯಭ್ಯಾಸಿಗಳಿಗೆ ಸಹಾಯಕವಾಗಿವೆ. ಅಮೃತಾನಂದಿನಿ 'ಅ' ಕಾರಾದಿ ವೈದ್ಯ ನಿಘಂಟು (ಸು ೧೩೦೦) ಲಕ್ಷ್ಮಣ ಪಂಡಿತನ 'ಅ' ಕಾರಾದಿ ನಿಘಂಟು (೧೭೭೫) ಅಜ್ಞಾತ ಕಾಲ ಕರ್ತೃಗಳಾದ 'ಧ್ವನ್ವಂತರಿ ನಿಘಂಟು' 'ಇಂದ್ರದೀಪಿಕಾ ನಿಘಂಟು' 'ಮದನಾರಿ ವೈದ್ಯ ನಿಘಂಟು' 'ಔಷಧೀಕೋಶ' ಈ ನಿಘಂಟುಗಳು ಸಸ್ಯಗಳಿಗೆ, ಗಿಡಮೂಲಿಕೆಗಳಿಗೆ ಸಂಬಂಧಿಸಿವೆ.

ಪ್ರಾಚೀನ ಕೋಶಕಾರರು ಶಬ್ದಕೋಶಗಳನ್ನು ರಚಿಸಿ ತಮ್ಮ ಕಾಲದ ಶಾಬ್ದಿಕ ಹಾಗೂ ಸಾಹಿತ್ಯಿಕ ಪ್ರಗತಿಗೆ ಕಾರಣರಾಗಿದ್ದಾರೆ. ಪರಂಪರೆಯ ಶಬ್ದ ಸಂಪತ್ತನ್ನು ಉಳಿಸಿ ಬೆಳೆಸಿ ಕನ್ನಡ ವಾಂಗ್ಮಾಡರದ ವಿಪುಲತೆಯನ್ನು ಹೆಚ್ಚಿಸಿದ್ದಾರೆ. ಪ್ರಾಚೀನ ಕೋಶಗಳು ಅಕ್ಷರಾನುಕ್ರಮಣಿಕೆಯಲ್ಲಿ ಇಲ್ಲದಿದ್ದರೂ ವಿಷಯಾನುಕ್ರಮಣಿಕೆ ಯಲ್ಲಿರುವುದು ಅವುಗಳ ವೈಶಿಷ್ಟ್ಯವಾಗಿದೆ. ಪ್ರಾಚೀನರು ಶಬ್ದಕೋಶಗಳನ್ನು ಹೆಚ್ಚಾಗಿ ಕವಿಗಳ ಉಪಯೋಗಕ್ಕೆ ಬರೆದಿರುವುದರಿಂದ ಅಕ್ಷರಾನುಕ್ರಮಣಿಕೆ ಅವರಿಗೆ ಮುಖ್ಯವಾಗಲಿಲ್ಲ. ಕಾವ್ಯಾಧ್ಯಯನಕ್ಕೆ ಅವರು ಪ್ರಾಮುಖ್ಯತೆ ಕೊಟ್ಟಿದ್ದರು. ಆದ್ದರಿಂದ ಅವರಿಗೆ ನಾನಾರ್ಥವುಳ್ಳ ಒಂದು ಶಬ್ದ ಇಲ್ಲವೇ ಶಬ್ದ

ಸಮುಚ್ಚಯವನ್ನು ಒಂದೇ ಕಡೆಯಲ್ಲಿ ಹೇಳುವ ಕ್ರಮ ಮುಖ್ಯವಾಗಿ ತೋರಿತು. ಅಂತಹ ಶಬ್ದಗಳನ್ನು ಮತ್ತು ಅವುಗಳ ಅರ್ಥ ವಿಶೇಷಗಳನ್ನು ಪೂರ್ತಿಯಾಗಿ ಕಂಠಪಾಠ ಮಾಡುವುದು ಅವರ ಗುರಿಯಾಗಿತ್ತು.

ಪ್ರಾಚೀನ ನಿಘಂಟುಗಳು ಸಮ್ಮಿಶ್ರರೂಪವಾಗಿದ್ದು, ಸಂಸ್ಕೃತ ಕನ್ನಡ ಎಂದಾಗಲಿ ತತ್ಸಮ ತದ್ಭವ ಎಂದಾಗಲಿ ಭೇದಮಾಡದೆ ಶಬ್ದಕ್ಕೆ ಪ್ರತಿಶಬ್ದವೆಂಬಂತೆ ಪರ್ಯಾಯ ಪದಸೂಚನೆಯನ್ನು ಲಕ್ಷ್ಯವಾಗಿರಿಸಿಕೊಂಡಿರುವಂತೆ ತೋರುವುದರಿಂದ ಇವುಗಳಲ್ಲಿ ಆಧುನಿಕ ನಿಘಂಟುಗಳ ಹಾಗೆ ಒಂದು ಶಿಸ್ತು, ವ್ಯವಸ್ಥೆ ಇಲ್ಲದಿರಬಹುದು ಆದರೆ ಈಗ ಬಳಕೆಯಲ್ಲಿ ತಪ್ಪಿರುವ ನಷ್ಟ ಶಬ್ದಗಳು, ಅರ್ಥಾಂತರ ಹೊಂದಿರುವ ಶಬ್ದಗಳು, ಕ್ಲಿಷ್ಟ ಪದಗಳು ಇವಕ್ಕೆಲ್ಲ ಒಂದು ಮಿತ ಪ್ರಮಾಣದಲ್ಲಿಯಾದರೂ ಈ ನಿಘಂಟುಗಳಲ್ಲಿ ಅರ್ಥವನ್ನು ಕಂಡುಕೊಳ್ಳಬಹುದಾಗಿದೆ. ಅಲ್ಲದೆ ಒಂದು ಕಾಲಘಟ್ಟದ ಸಾಮಾಜಿಕ, ಸಾಂಸ್ಕೃತಿಕ ಮಹತ್ವದ ಶಬ್ದಗಳ ಒಂದು ನಿಧಿಯಾಗಿಯೂ ಇವು ಸಹಾಯಕ್ಕೆ ಬರುತ್ತವೆಯಲ್ಲದೆ ಆ ಕಾಲದ ಜನಜೀವನವನ್ನು ಪುನರ್ ರಚಿಸುವಾಗ ಪ್ರಾಚೀನ ನಿಘಂಟುಗಳು ಪೂರಕವಾಗುತ್ತವೆ.

೭.೦೨ ಆಧುನಿಕ ಕನ್ನಡ ನಿಘಂಟುಗಳು

ಆಧುನಿಕ ಕಾಲದಲ್ಲಿ (ಹೊಸಗನ್ನಡದ ಅವಧಿಯಲ್ಲಿ) ಕನ್ನಡ ನಿಘಂಟುಗಳು ಅಕ್ಷರಾನುಕ್ರಮಣಿಕೆಯಲ್ಲಿ (Alphabetical order) ರಚಿತವಾಗತೊಡಗಿದವು. ಆಧುನಿಕ ಕೋಶಗಳು ವೈವಿಧ್ಯಪೂರ್ಣವಾಗಿವೆ. ಅವುಗಳ ಸ್ಥೂಲಸಮೀಕ್ಷೆಯನ್ನು ಈ ಭಾಗದಲ್ಲಿ ಮಾಡಿಕೊಡಲಾಗಿದೆ.

ಸಂಸ್ಕೃತ-ಕನ್ನಡ ನಿಘಂಟುಗಳು : ಕನ್ನಡ ಕಾವ್ಯಗಳನ್ನು ಅಭ್ಯಸಿಸುವಾಗ ಸಂಸ್ಕೃತ ಪದಗಳು ಹೇರಳವಾಗಿ ದೊರೆಯುತ್ತವೆ. ಅವುಗಳ ಅರ್ಥವನ್ನು ತಿಳಿದುಕೊಳ್ಳಲಿಕ್ಕೆ ಸಂಸ್ಕೃತ-ಕನ್ನಡ ನಿಘಂಟುಗಳು ತುಂಬ ನೆರವಾಗುತ್ತವೆ. ಎಸ್. ವಿ. ಹಂಜಿಯವರು ಸಿದ್ಧಪಡಿಸಿದ 'ಸಂಸ್ಕೃತ-ಕನ್ನಡ ಕೋಶ' (೧೯೬೭) ಜಿ. ವಿ. ಜೋಶಿಯವರ 'ಸಂಸ್ಕೃತ -ಕನ್ನಡ ಶಬ್ದಕೋಶ' (೧೯೭೫) ಸಂಸ್ಕೃತ ಪದಗಳಿಗೆ ಕನ್ನಡದಲ್ಲಿ ಅರ್ಥ ಹೇಳಿವೆ. ಡಿ. ವಿ. ಹೊಳ್ಳ ಅವರ 'ತದ್ಭವ- ಸಂಸ್ಕೃತ ಶಬ್ದಕೋಶ' (೧೯೫೦) ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯರು ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದ 'ಸಂಸ್ಕೃತ- ಕನ್ನಡ ಶಬ್ದಕೋಶಗಳು' (೧೯೬೧) ಹೆಚ್ಚು ವಿಸ್ತಾರವೂ, ಅಧಿಕೃತವೂ ಆಗಿದ್ದು ಮಾನ್ಯತೆಯನ್ನು ಪಡೆದಿದೆ.

ಪಾರಿಭಾಷಿಕ ಪದಕೋಶಗಳು : ಕನ್ನಡ ಭಾಷಾಭಿವೃದ್ಧಿಯ ದೃಷ್ಟಿಯಿಂದಾಗಿ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ಶಿಕ್ಷಣ, ಧರ್ಮ ಮುಂತಾದ ಬೇರೆ-ಬೇರೆ ಜ್ಞಾನ ಕ್ಷೇತ್ರದ ವಿಷಯಗಳನ್ನು ಕನ್ನಡ ಮಾಧ್ಯಮದಲ್ಲಿ ತರಲು ಅನೇಕ ಪಾರಿಭಾಷಿಕ ಪದಕೋಶಗಳು ರಚಿತವಾಗಿವೆ. ಬೋಧನೆ, ಕಲಿಕೆ ಹಾಗೂ ಕಠಿಣ ಪದಗಳನ್ನು ಅರ್ಥೈಸಲು ವಿವರಣಾತ್ಮಕವಾದ ಪಾರಿಭಾಷಿಕ ಪದಗಳು ಈ ಶತಮಾನದಲ್ಲಿ ನಿರ್ಮಾಣವಾದವು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಅಬಕಾರಿ ಇಲಾಖೆ, ಶಿಕ್ಷಣ, ಅರಣ್ಯ ಮುಂತಾದ ೩೪ ಇಲಾಖೆಗಳ ಪಾರಿಭಾಷಿಕ ಪದಕೋಶಗಳನ್ನು ರಚಿಸಿ ಪ್ರಕಟಿಸಿದೆ. ಆಡಳಿತದಲ್ಲಿ ಕನ್ನಡವು ಸಂಪೂರ್ಣವಾಗಿ ಅನುಷ್ಠಾನಗೊಳ್ಳಬೇಕೆಂಬುದೇ ಇದರ ಉದ್ದೇಶವಾಗಿದೆ.

ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಪಾರಿಭಾಷಿಕ ಪದಕೋಶಗಳು ರಚಿತವಾಗಿವೆ. ಡಿ. ಎಸ್. ಶಿವಪ್ಪನವರು ಸಿದ್ಧಪಡಿಸಿದ 'ವೈದ್ಯಕ ಪದಗಳು ಹುಟ್ಟು ರಚನೆ' (೧೯೮೦) ಎಂಬ ಕೋಶದಲ್ಲಿ ವೈದ್ಯಕ ಪದಗಳ ಹುಟ್ಟು, ನಿಷ್ಪತ್ತಿ ಮತ್ತು ಪದಗಳ ರಚನೆಯ ಸೂತ್ರಗಳು, ಅವುಗಳ ವರ್ಗೀಕರಣ ಮುಂತಾದ ವಿಷಯವನ್ನೊಳಗೊಂಡ ಮೌಲಿಕ ಕೃತಿಯಾಗಿದೆ. ಈ ಕೋಶ ಕನ್ನಡ ಕೋಶಶಾಸ್ತ್ರಕ್ಕೆ ಹೊಸ ಸೇರ್ಪಡೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಿಸಿದ ವಚನಸಾಹಿತ್ಯದ ಜನಪ್ರಿಯ ಆವೃತ್ತಿಯ ೧೫ನೆಯ ಸಂಪುಟವಾದ 'ವಚನ ಪರಿಭಾಷಾ ಕೋಶ' ವನ್ನು ಡಾ. ಎಸ್. ವಿದ್ಯಾಶಂಕರ್ ಅವರು ಸಂಪಾದಿಸಿದ್ದಾರೆ (೧೯೯೩). ವೀರಶೈವ ಧರ್ಮ ಹಾಗೂ ವಚನಸಾಹಿತ್ಯದಲ್ಲಿ ಕಂಡುಬರುವ ವಿಶಿಷ್ಟ ಪಾರಿಭಾಷಿಕ ಪದಗಳಿಗೆ ವಿವರಣೆ ಕೊಡಲಾಗಿದೆ. ವಚನಸಾಹಿತ್ಯದ ಅಧ್ಯಯನಕ್ಕೆ ಈ ಗ್ರಂಥ ಮಹತ್ವದ ಆಕರವಾಗುತ್ತದೆ. ಇದೇ

ಇಲಾಖೆಯು ೧೯೮೦ ರಲ್ಲಿ ಹೊರತಂದಿರುವ 'ಕಾನೂನು ಪದಕೋಶ' (ಇಂಗ್ಲಿಶ್-ಕನ್ನಡ) ಕಾನೂನು ಶಾಸ್ತ್ರಕ್ಕೆ ಸಂಬಂಧಿಸಿದಂತೆ ೪೬೦೦ ಪದಗಳಿಗೆ ಅರ್ಥ ವಿವರಣೆಯಿದೆ. ಕಾನೂನು ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಈ ಕೋಶ ತುಂಬ ನೆರವಾಗುತ್ತದೆ.

ಜೈನಧರ್ಮ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಪಾರಿಭಾಷಿಕ ಪದಗಳಿಗೆ ಅರ್ಥ ವಿವರಣೆಯನ್ನು ಕೊಡಲು ತ. ಸು. ಶಾಮರಾಯ ಮತ್ತು ಪ. ನಾಗರಾಜಯ್ಯ ಜೊತೆ ಸೇರಿ 'ಜೈನ ಪರಿಭಾಷಾ ಕೋಶ' ವನ್ನು ರಚಿಸಿದ್ದಾರೆ. ಮ. ಪ್ರ ಪೂಜಾರರು 'ಜೈನ ಧರ್ಮ ಪರಿಭಾಷೆ' (೧೯೩೦) ಎಂಬ ಕೋಶವನ್ನು ಸಿದ್ಧಪಡಿಸಿದ್ದಾರೆ. ಪಂಡಿತತಜ್ಞನಾರಾಯಣ ಉಡುಪ ಅವರಿಂದ ಸಂಕಲಿತವಾದ 'ಪುರಾಣ ಭಾರತ ಕೋಶ' ಒಂದು ವಿಶಿಷ್ಟವಾದುದು. ೧೯೭೫ ರಲ್ಲಿ ಪ್ರಕಟವಾಗಿರುವ ಈ ಕೋಶದಲ್ಲಿ ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಪುರಾಣಗಳು ಇವುಗಳಲ್ಲಿ ಅಭಿವ್ಯಕ್ತವಾಗಿರುವ ದೇವತೆಗಳು, ವ್ಯಕ್ತಿಗಳು, ನದಿಗಳು, ಪುಣ್ಯಕ್ಷೇತ್ರಗಳು ಇವೇ ಮೊದಲಾದವುಗಳು ಸಂಗ್ರಹ ಮತ್ತು ಅರ್ಥ ವಿವರಣೆಯನ್ನು ಮಾಡಿಕೊಡಲಾಗಿದೆ. ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರ ಶಾಸ್ತ್ರೀಯವರು ಜತೆ ಸೇರಿ ಸಂಪಾದಿಸಿದ 'ಪುರಾಣ ನಾಮ ಚೂಡಾಮಣಿ' (೧೯೪೧ ಮೈ. ವಿ. ವಿ) ಯಲ್ಲಿ ದೇವತೆಗಳು, ಋಷಿಗಳು, ಪುಣ್ಯಕ್ಷೇತ್ರಗಳ ಬಗ್ಗೆ ವಿವರಣೆಯಿದೆ. ೧೯೪೭ ರಲ್ಲಿ ಪ್ರಕಟಿಸಿದ ಫ. ಗು ಹಳಕಟ್ಟಿಯವರ 'ಶಿವಾನುಭವ ಶಬ್ದಕೋಶ' ವಚನಸಾಹಿತ್ಯಕ್ಕೆ ಸಂಬಂಧಪಟ್ಟಂತೆ ವಿಶಿಷ್ಟ ಪದಗಳಿಗೆ ಅರ್ಥ ವಿವರಣೆಯಿದೆ. ಎಸ್.' ಸಿ. ಹಿರೇಮಠರ 'ಕಾನೂನು ರತ್ನಕೋಶ' (೧೯೯೭)ದಲ್ಲಿ ಕಾನೂನು ಪದಗಳ ಅರ್ಥ ವಿವರಣೆಯಿದೆ.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು 'ಇಂಗ್ಲಿಶ್-ಕನ್ನಡ ವಿಜ್ಞಾನಕೋಶ'ವನ್ನು ೧೯೯೦ ರಲ್ಲಿ ಪ್ರಕಟಿಸಿದೆ. ಇದರ ಸಂಪಾದಕರು ಜೆ. ಆರ್. ಲಕ್ಷ್ಮಣರಾವ್ ಮತ್ತು ಅಡ್ಯನಡ್ಕ ಕೃಷ್ಣಭಟ್. ಇದರಲ್ಲಿ ಭೌತ ವಿಜ್ಞಾನ, ರಸಾಯನ ವಿಜ್ಞಾನ, ಜೀವವಿಜ್ಞಾನ, ಗಣಿತ, ಸಂಖ್ಯಾಶಾಸ್ತ್ರ, ಖಗೋಳಶಾಸ್ತ್ರ, ಪವನಶಾಸ್ತ್ರ, ಭೂವಿಜ್ಞಾನ, ಭೂಗೋಳಶಾಸ್ತ್ರ, ಎಂಜಿನಿಯರಿಂಗ್, ವೈದ್ಯಶಾಸ್ತ್ರ, ಕೃಷಿ ಮುಂತಾದ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಪಾರಿಭಾಷಿಕ ಶಬ್ದಗಳಿಗೆ ಕನ್ನಡದಲ್ಲಿ ಸಮಾನ ಶಬ್ದಗಳನ್ನು ಕೊಡಲಾಗಿದೆ. ಆರ್. ಎಲ್. ನರಸಿಂಹಯ್ಯನವರು 'Glossary of Scientific terms' ಕೆ. ಆರ್. ಚಕ್ರವರ್ತಿಯವರು 'Kannada scientific Glossary' (೧೯೨೩) ಎಂಬ ವಿಜ್ಞಾನಕ್ಕೆ ಸಂಬಂಧಿಸಿದ ಕೋಶಗಳನ್ನು ರಚಿಸಿದ್ದಾರೆ. ಡಾ. ಡಿ. ಎಸ್. ಶಿವಪ್ಪನವರು 'ಇಂಗ್ಲಿಶ್- ಕನ್ನಡ' ವೈದ್ಯ ನಿಘಂಟನ್ನೂ ರಚಿಸಿದ್ದಾರೆ (೧೯೭೩) ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಪದಗಳಿಗೆ ವಿವರಣೆ ಈ ಕೋಶದಲ್ಲಿದೆ. 'ಇಂಗ್ಲಿಶ್ ಕನ್ನಡ ವಿಜ್ಞಾನ ಪದಗಳು' ಎಂಬುದನ್ನು ಮೈಸೂರು ಸರಕಾರದ Oriented Research Institute ಪ್ರಕಟಿಸಿದೆ. ಮೈಸೂರು ಸರಕಾರದ ಶಿಕ್ಷಣ ಇಲಾಖೆಯು ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಪಾರಿಭಾಷಿಕ ಪದಕೋಶಗಳನ್ನು ರಚಿಸಿದೆ. ಡಾ. ಬುದರಾವ್ ಮಹಿಷಿ ಅವರು ಸಂಪಾದಿಸಿದ 'ಮರಾಠಿ-ಕನ್ನಡ-ಸಂಸ್ಕೃತ ವನಸ್ಪತಿ ಕೋಶ' ಆಯುರ್ವೇದಿಕ್ ಪದಗಳಿಗೆ ಅರ್ಥ ವಿವರಣೆಯನ್ನು ನೀಡಿದೆ.

ಎನ್. ಎಸ್. ವೀರಪ್ಪನವರ ಪ್ರಯತ್ನದ ಫಲ 'ಶಿಕ್ಷಣ ಶಾಸ್ತ್ರದ ಪಾರಿಭಾಷಿಕ ನಿಘಂಟು' ಇಂಗ್ಲಿಶ್-ಕನ್ನಡದಲ್ಲಿದೆ. ಇಷ್ಟೊಂದು ಸಮಗ್ರವಾದ, ವಿಚಾರ ಪರಿಪ್ಲುತವಾದ ವಿವರಣಾತ್ಮಕ 'ಶಿಕ್ಷಣ ನಿಘಂಟು' ಯಾವುದೇ ಭಾರತೀಯ ಭಾಷೆಯಲ್ಲಿಯೂ ಇನ್ನೂ ಹೊರಬಂದಿಲ್ಲ. ಶಿಕ್ಷಣಶಾಸ್ತ್ರದ ವಿದ್ಯಾರ್ಥಿಗಳು, ಸಂಶೋಧಕರು, ಅಧ್ಯಾಪಕರು ಅತ್ಯವಶ್ಯವಾಗಿ ಗಮನಿಸಬೇಕಾದ ಆಕರಗ್ರಂಥ. ಇದರಲ್ಲಿ ಇಂಗ್ಲಿಶ್ ಪಾರಿಭಾಷಿಕಗಳಿಗೆ ಕನ್ನಡ ಸಮಾನಾರ್ಥಕಗಳಂತೆ ಅವುಗಳ ಅರ್ಥ ವಿವರಣೆ, ಪ್ರಯೋಗ ಮುಂತಾದ ಅಂಶಗಳನ್ನು ಒದಗಿಸಿದೆ. ಶಿಕ್ಷಣಶಾಸ್ತ್ರಕ್ಕೆ ಇದೊಂದು ಅಮೂಲ್ಯ ಕೊಡುಗೆ. ಕೆ. ಕೆಂಪೇಗೌಡರು (೧೯೭೬) ಭಾಷಾವಿಜ್ಞಾನದಲ್ಲಿ ಬರುವ ಪಾರಿಭಾಷಿಕ ಪದಗಳನ್ನು ಕಲೆಹಾಕಿ ಕನ್ನಡದಲ್ಲಿ ಅರ್ಥ ಕೊಟ್ಟಿರುವ 'ಭಾಷಾವಿಜ್ಞಾನಕೋಶ' ಭಾಷಾಭ್ಯಾಸಿಗಳಿಗೆ ನೆರವಾಗುತ್ತದೆ. ವಿ. ಎಸ್. ಧರಣೇಂದ್ರಯ್ಯನವರ 'ಮನೋವಿಜ್ಞಾನ ಪಾರಿಭಾಷಿಕ ಕೋಶ' ಮನಶಾಸ್ತ್ರ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಸಹಕಾರಿಯಾಗಿದೆ.

ಕನ್ನಡ-ಕನ್ನಡ ಕೋಶಗಳು : ಕನ್ನಡದಲ್ಲಿ ಕನ್ನಡ-ಕನ್ನಡ ಏಕಭಾಷಿಕ ಕೋಶಗಳು ಇತರ ಕೋಶಗಳಿಗೆ ಹೋಲಿಸಿದಾಗ ಅಧಿಕವಾಗಿವೆ. ಗಂಗಾಧರ ಮಡಿವಾಳೇಶ್ವರ ತುರಮರಿ ಅವರು ಸಿದ್ಧಪಡಿಸಿದ 'ಶಬ್ದಮಂಜರಿ' (ಕ್ರಿ. ಶ. ೧೮೯೦) ಇದರಲ್ಲಿ ಹಳಗನ್ನಡ ಮತ್ತು ದೇಶ್ಯ ಶಬ್ದಗಳಿಗೆ ಅರ್ಥವನ್ನು ವಿವರಿಸಿದೆ. ಕನ್ನಡ ಶಬ್ದಾರ್ಥ ವಿವೇಚನೆಗೆ ಸಂಬಂಧಿಸಿದಂತೆ 'ಶಬ್ದವ್ಯುತ್ಪತ್ತಿ' (೧೯೦೦) ಎಂಬ ಕೋಶವನ್ನು ಗುರುರಾವ್ ವಿಠಲರಾವ್ ಮೊಹರೆಯವರು ರಚಿಸಿದ್ದಾರೆ.

ಮಚ್ಚಿಮಲೆ ಶಂಕರನಾರಾಯಣರಾವ್, ಆರ್. ಎಸ್. ನಾವೂರ್‌ಕರ್ ಮತ್ತು ಸೇಡಿಯಾಪು ಕೃಷ್ಣಭಟ್ ಇವರಿಂದ ರಚಿತವಾದ 'ಕನ್ನಡ ನಿಘಂಟು' (೧೯೫೧) ಇದರಲ್ಲಿ ಕನ್ನಡ-ಸಂಸ್ಕೃತ ಶಬ್ದಗಳಿಗೆ, ಹಳಗನ್ನಡದ ಕೆಲವು ಶಬ್ದ ರೂಪಗಳಿಗೆ ಅರ್ಥ ಹೇಳಿದೆ. ಹೆಚ್. ವಿ. ರಮಾಕಾಂತರಿಂದ ರಚಿತವಾದ 'ಕನ್ನಡ-ಕನ್ನಡ ಶಬ್ದಕೋಶ' (೧೯೫೨) ದಲ್ಲಿ ಹಳಗನ್ನಡ ಶಬ್ದಗಳಿಗೆ ಅರ್ಥ ಹೇಳಿದೆ. ಗುರುನಾಥ ಜೋಶಿ ಮತ್ತು ಜಿ. ಅಶ್ವತ್ಥನಾರಾಯಣರಾವ್ ಅವರಿಂದ ಸಂಕಲಿತವಾದ 'ಕನ್ನಡ-ಕನ್ನಡ ಶಬ್ದಕೋಶ' (೧೯೫೬) ದಲ್ಲಿ ಕನ್ನಡ-ಸಂಸ್ಕೃತ ಶಬ್ದಗಳಿಗೆ ಅರ್ಥವನ್ನು ವಿವರಿಸಿದೆ.

'ಸಚಿತ್ರ ಕನ್ನಡ-ಕನ್ನಡ ಕಸ್ತೂರಿ ಕೋಶ'ವು ಪಂಡಿತ ಚಿ. ವಿ. ಕವಲಿಯವರಿಂದ ಸಂಕಲಿತವಾಗಿದೆ (೧೯೫೭). ಇದರಲ್ಲಿ ಸಂಸ್ಕೃತ-ಕನ್ನಡ ಅನ್ಯ ದೇಶ್ಯ ಶಬ್ದಗಳಿಗೆ ಅರ್ಥವನ್ನು ಕೊಟ್ಟಿದೆ. ಆಯಾ ಶಬ್ದಗಳನ್ನು ವಿವರಿಸುವಾಗ ಚಿತ್ರಗಳ ಅವಶ್ಯಕತೆಯಿದ್ದರೆ ಚಿತ್ರಗಳನ್ನು ಕೊಟ್ಟಿರುವುದು ಈ ನಿಘಂಟಿನ ವೈಶಿಷ್ಟ್ಯವಾಗಿದೆ. 'ಕನ್ನಡಕಾವ್ಯ ಪದ ಮಂಜರಿ' ವು ಪ್ರೊ. ಸಂ. ಸ. ಮಾಳವಾಡ, ಕ. ವೆಂ. ರಾಜಗೋಪಾಲ ಮತ್ತು ಟಿ. ಕೇಶವಭಟ್ ಇವರಿಂದ ಸಂಕಲಿತವಾದುದು (೧೯೭೦). ಇದರಲ್ಲಿ ಪ್ರಾಚೀನ ಕಾವ್ಯಗಳಿಂದ ಶಬ್ದಗಳನ್ನು ಸಂಗ್ರಹಿಸಿ ಅವುಗಳಿಗೆ ಅರ್ಥವನ್ನು ವಿವರಿಸದೆ. ಶಿವರಾಮ ಕಾರಂತರ 'ಸಿರಿಗನ್ನಡ ಅರ್ಥಕೋಶ'ದಲ್ಲಿ ಕನ್ನಡ, ಸಂಸ್ಕೃತ ಹಾಗೂ ಅನ್ಯದೇಶ್ಯಗಳಿಗೆ ಕನ್ನಡದಲ್ಲಿ ಅರ್ಥವನ್ನು ಕೊಟ್ಟಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ-ಕನ್ನಡ ನಿಘಂಟು' ನಾಡಿನ ಹಲವಾರು ಪರಿಣಿತ ವಿದ್ವಾಂಸರ ನೆರವಿನಿಂದ ಸಿದ್ಧಪಡಿಸಿದ ನಿಘಂಟು. ಭಾಷಾಶಾಸ್ತ್ರ ತತ್ವಗಳಿಗನುಸಾರವಾಗಿ ಚಾರಿತ್ರಿಕ ವಿವರಣೆಗಳಿಂದ ಕೂಡಿರುವ ಪ್ರಮಾಣ ಭೂತವಾದ ನಿಘಂಟು. ಈಗಾಗಲೇ ೮ ಸಂಪುಟಗಳು ಪ್ರಕಟವಾಗಿವೆ. ಈ ನಿಘಂಟುಗಳಲ್ಲಿ ಹಲ್ಮಿಡಿಶಾಸನದಿಂದ ಹಿಡಿದು ಇಂದಿನವರೆಗೆ ಉಪಲಬ್ಧವಾದ ಎಲ್ಲ ತರಹದ ಪ್ರಕಟಿತ, ಅಪ್ರಕಟಿತ ಕಾವ್ಯ, ಶಾಸ್ತ್ರ ಹಾಗೂ ಶಾಸನಗಳನ್ನು ಅವಲೋಕಿಸಿ ಶಬ್ದ ಪ್ರಯೋಗಗಳನ್ನು ಸಂಗ್ರಹಿಸಲಾಗಿದೆ. ಕನ್ನಡ ಸಾಹಿತ್ಯದ ಜೈನ, ವೀರಶೈವ, ಬ್ರಾಹ್ಮಣ ಮೊದಲಾದ ಧರ್ಮಗಳಿಗೆ ಸಂಬಂಧಿಸಿದ ಶಬ್ದಗಳು ಇಲ್ಲಿವೆ. ಈ ನಿಘಂಟುಗಳು ಪ್ರಾಚೀನ ಮತ್ತು ನವೀನ ದೃಷ್ಟಿಗಳೆರಡನ್ನೂ ಸಮನ್ವಯ ಮಾಡಿಕೊಂಡು ರಚಿತವಾಗಿವೆ. ಪ್ರಾಚೀನ ಕನ್ನಡ ನಿಘಂಟುಗಳಲ್ಲಿ ಕಂಡು ಬಂದಿರುವ ಅರೆಕೊರೆಗಳನ್ನು, ಲೋಪದೋಷಗಳನ್ನು ನಿವಾರಿಸಿಕೊಂಡು ಸಿದ್ಧವಾಗಿರುವ ಈ ನಿಘಂಟುಗಳು ಕನ್ನಡಿಗರ ಬಹುದಿನದ ಆಶೋತ್ತರಗಳನ್ನು ಪೂರೈಸಿದೆ. ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸಿದ ಬೃಹತ್ ನಿಘಂಟುಗಳ ಮರಿ ನಿಘಂಟು 'ಸಂಕ್ಷಿಪ್ತ ಕನ್ನಡ ನಿಘಂಟು' (೧೯೭೫) ಇದು ಜನಸಾಮಾನ್ಯರಿಗೆ ವಿದ್ಯಾರ್ಥಿಗಳಿಗೆ ವಿಶೇಷ ಪ್ರಯೋಜನಕಾರಿಯಾಗಿದೆ. ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟು ರಚಿತವಾದ 'ಕನ್ನಡ ರತ್ನಕೋಶ' (೧೯೭೭) ತುಂಬ ಜನಪ್ರಿಯವಾಗಿದೆ. ಇದು ಈಚೆಗೆ ಎರಡನೆಯ ಆವೃತ್ತಿಯನ್ನು (೧೯೯೪) ಕಂಡಿದೆ.

ಇಂಗ್ಲಿಶ್-ಕನ್ನಡ ನಿಘಂಟುಗಳು : ಕನ್ನಡದಲ್ಲಿ ಈ ವರ್ಗಕ್ಕೆ ಸೇರಿದ ಕೋಶವು ಹೆಚ್ಚಾಗಿ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾಗಿದೆ. ವಿಲಿಯಂ ರೀವ್‌ನ 'English and carnataka' ನಿಘಂಟು (೧೮೨೪) ಜಾನ್ ಗ್ಯಾರೆಟ್‌ನ 'A Manual of English and kanarese Dictionary' (೧೮೪೪) ಎಫ್. ಜೀಗ್ಲರ್‌ನ 'English-Kannrese school Dictionary' (೧೮೭೬) ಶಾರದಾ 'English-kannada Dictionary' (೧೯೫೫) ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಿಸಿದ 'ಇಂಗ್ಲಿಶ್-ಕನ್ನಡ ನಿಘಂಟು' ಎಲ್. ಗುಂಡಶಾಸ್ತ್ರೀಯವರ 'ಇಂಗ್ಲಿಶ್- ಕನ್ನಡ ನಿಘಂಟು' (೧೯೫೯) ಈ ಕೋಶಗಳು ಶಾಲಾ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾಗಿದೆ. ೧೯೭೭ ರಲ್ಲಿ ಕರ್ನಾಟಕ ಸರಕಾರದವತಿಯಿಂದ ಪ್ರಕಟವಾದ 'ಆಡಳಿತ ಶಬ್ದಕೋಶ ಇಂಗ್ಲಿಶ್- ಕನ್ನಡ' ಈ ಶಬ್ದಕೋಶ ಆಡಳಿತ ಅನೇಕ ಆಂಗ್ಲ ಪದಗಳಿಗೆ ಸಮಾನಾರ್ಥಕ ಕನ್ನಡ ಪದಗಳನ್ನು ಕೊಟ್ಟಿದೆ. ಸಾರ್ವಜನಿಕ ವ್ಯವಹಾರದಲ್ಲಿ ವಿಶೇಷತಃ ಆಡಳಿತ ವ್ಯವಹಾರದಲ್ಲಿ ದೇಶ್ಯಾದ್ಯಂತವಾಗಿ ಬಳಕೆಗೆ ಬರತಕ್ಕಂತಹ ಪಾರಿಭಾಷಿಕ ಪದಗಳು ಆದಷ್ಟು ಮಟ್ಟಿಗೆ ಏಕರೂಪವಾಗಿ ಈ ಕೋಶದಲ್ಲಿ ಬಂದಿದೆ.

ಕನ್ನಡ -ಇಂಗ್ಲಿಶ್ ಕೋಶಗಳು : ಈ ವರ್ಗದ ಕೋಶಗಳು ಮೊದಲು ಮಿಶನರಿ ಕೋಶಕಾರರಿಂದ ರಚಿತವಾದವು. ರೀವ್‌ನ 'A Dictionary of canarese and English' ೧೮೩೨. 'ಅ' ಕಾರಾದಿ ಕ್ರಮದಲ್ಲಿ

ಹೊರಬಂದ ಹಾಗೂ ಪಾಶ್ಚಾತ್ಯ ವಿದ್ವಾಂಸರು ಕನ್ನಡಕ್ಕೆ ಸಿದ್ಧಪಡಿಸಿದ ನಿಘಂಟುಗಳಲ್ಲಿ ಇದು ಮೊದಲನೆಯದು. ಈ ನಿಘಂಟಿನಲ್ಲಿ ಕನ್ನಡ ಸಂಸ್ಕೃತ ಶಬ್ದಗಳಿಗೆ ಇಂಗ್ಲಿಶ್‌ನಲ್ಲಿ ಅರ್ಥವನ್ನು ಹೇಳಿದೆ. ಡೇನಿಯಲ್ ಸ್ಯಾಂಡರ್‌ಸನ್‌ರು ರೀವ್ ನಿಘಂಟನ್ನು ಪರಿಷ್ಕರಿಸಿ ವಿಸ್ತರಿಸಿದನು ಅದುವೇ A Dictionary of cannarese and English' ಇದು ೧೮೫೮ ರಲ್ಲಿ ಪ್ರಕಟವಾಯಿತು. ಜಾನ್ ಗ್ಯಾರೆಟ್‌ನು ರೀವ್‌ನ ನಿಘಂಟನ್ನು ವ್ಯವಸ್ಥಿತವಾಗಿ ಸಂಗ್ರಹಿಸಿದನು ಅದುವೆ ' A manual kanarese and English Dictionary' ಆಗಿದೆ. ಈ ನಿಘಂಟಿನಲ್ಲಿ ದೇಶ್ಯ, ಅನ್ಯದೇಶ್ಯ ಹಾಗೂ ಸಂಸ್ಕೃತ ಶಬ್ದಗಳಿಗೆ ಇಂಗ್ಲಿಶ್‌ನಲ್ಲಿ ಅರ್ಥ ಕೊಡಲಾಗಿದೆ. ಇದು ೧೮೭೧ ರ ವೇಳೆಗೆ ಮೂರು ಮುದ್ರಣಗಳನ್ನು ಕಂಡಿದೆ ಎಂಬುದನ್ನು ಗಮನಿಸಿದರೆ ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ರೆ. ಎಫ್. ಕಿಟೆಲ್‌ರು ಸಿದ್ಧಪಡಿಸಿದ 'A Kammada English Dictionary' ಈ ಕೋಶದ ಸಿದ್ಧತೆಗೆ ಕಿಟೆಲ್‌ರು ತುಂಬ ಶ್ರಮತೆಗೆದುಕೊಂಡಿದ್ದಾರೆ. ಹತ್ತಾರು ವರ್ಷಗಳ ಪರಿಶ್ರಮದಿಂದ ಹೊರಬಂದಿರುವ ಈ ನಿಘಂಟಿನಲ್ಲಿ ಪ್ರಾಚೀನ ಕಾವ್ಯ, ಶಾಸನಗಳಿಂದ ಹಾಗೂ ಆಡುನುಡಿಗಳಿಂದ ಶಬ್ದಗಳನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ದೇಶ್ಯ, ಅನ್ಯದೇಶ್ಯ ಹಾಗೂ ಸಂಸ್ಕೃತ ಶಬ್ದಗಳಿಗೆ ಇಂಗ್ಲಿಶ್‌ನಲ್ಲಿ ಅರ್ಥಗಳನ್ನು ಕೊಟ್ಟಿದೆ. ಈ ಕೋಶವು ಸಮಕಾಲೀನ ಜನಜೀವನವನ್ನು ತಿಳಿದುಕೊಳ್ಳುವ ಸಾಂಸ್ಕೃತಿಕ ಪದಕೋಶವೂ ಆಗಿದೆ. ಪ್ರತಿಶಬ್ದಕ್ಕೂ ಆಧಾರವನ್ನು ಸೂಚಿಸಿರುವ ಈ ನಿಘಂಟು ಪ್ರಮಾಣ ಭೂತವಾಗಿದೆ. ಕನ್ನಡ ನಿಘಂಟು ಚರಿತ್ರೆಯಲ್ಲಿ ಇದು ಒಂದು ಮೈಲಿಗಲ್ಲಿನಂತಿದೆ. ಈ ನಿಘಂಟನ್ನು ಆಧರಿಸಿ ಅನೇಕ ನಿಘಂಟುಗಳು ಹುಟ್ಟಿಕೊಂಡವು. ಈ ಕೋಶವು ೧೮೯೪ ರಲ್ಲಿ ಮೊದಲ ಬಾರಿ ಪ್ರಕಟಗೊಂಡು ಈಗ ನಾಲ್ಕು ಸಾರಿ ಮರು ಮುದ್ರಣವಾಗಿದೆ. ಪ್ರೊ. ಎಂ. ಮರಿಯಪ್ಪ ಭಟ್ಟರು ಈ ಕೋಶವನ್ನು ಪರಿಷ್ಕರಿಸಿ ನಾಲ್ಕು ಸಂಪುಟಗಳಲ್ಲಿ ಹೊರತಂದಿದ್ದಾರೆ. ಬ್ಯುಚರ್‌ನ 'Kannada English Dictionary' (೧೮೯೯) ಕೋಶವನ್ನು ರಚಿಸಿದ್ದಾನೆ. ಇದು ಶಾಲಾ ವಿದ್ಯಾರ್ಥಿಗಳಿಗೆ ತುಂಬ ಸಹಕಾರಿಯಾಗಿದೆ.

ಇಂಗ್ಲಿಶ್-ಇಂಗ್ಲಿಶ್-ಕನ್ನಡ ನಿಘಂಟುಗಳು : ಈ ವರ್ಗದಲ್ಲಿ ಮೂರು ಕೋಶಗಳು ಪ್ರಮುಖವಾಗಿವೆ. ವಿದ್ಯಾರ್ಥಿಗಳ ದೃಷ್ಟಿಯಿಂದ ಅತ್ಯಂತ ಉಪಯುಕ್ತವಾದ ಡಿ. ಕೆ. ಭಾರದ್ವಾಜ ಅವರ 'Standard English-English kannada Dictionary' (೧೯೪೪) ಈಗ ಇದು ಹಲವಾರು ಮುದ್ರಣಗಳನ್ನು ಕಂಡಿದೆ. ಪ್ರತಿಯೊಂದು ಮುದ್ರಣದಲ್ಲಿಯೂ ಪರಿಷ್ಕರಣಗೊಂಡು ಹೊಸ ಶಬ್ದಗಳು ಸೇರ್ಪಡೆಯಾಗುತ್ತ ಬಂದಿರುವ ಈ ನಿಘಂಟು ತುಂಬ ಜನಪ್ರಿಯವಾಗಿದೆ. ಇದರಲ್ಲಿ ಸುಮಾರು ೨.೫೦೦ ಪದಗಳಿಗೆ, ಸಾವಿರಾರು ನುಡಿಗಟ್ಟುಗಳಿಗೆ ಅರ್ಥ ವಿವರಣೆಯನ್ನು ಕೊಡಲಾಗಿದೆ. ವಿಠಲ್‌ಶೆಣೈ ಅವರು 'English-English kannada Dictionary' (೧೯೬೨) ಯನ್ನು ಸಿದ್ಧ ಪಡಿಸಿದ್ದಾರೆ. ಐ. ಬಿ. ಹೆಚ್ ಪ್ರಕಾಶನದಿಂದ ಪ್ರಕಟವಾದ 'Eng-

lish-English-kannada Dictionary' ವಿದ್ಯಾರ್ಥಿಗಳಿಗೆ ಇಂಗ್ಲಿಶ್ ಭಾಷೆಯನ್ನು ಕಲಿಯಲು ತುಂಬ ನೆರವಾಗುತ್ತದೆ. ಈ ನಿಘಂಟನ್ನು ಪ್ರೊ. ಎಲ್. ಎಸ್. ಶೇಷಗಿರಿರಾವ್ ಪ್ರೊ. ಪಿ. ನಾಗರಾಜ ರಾವ್, ಪ್ರೊ. ಹೆಚ್. ಕೆ. ರಾಮಚಂದ್ರಮೂರ್ತಿಯವರು ಜತೆಗೂಡಿ ಸಂಪಾದಿಸಿದ್ದಾರೆ. ಈ ಎಲ್ಲ ಕೋಶಗಳಲ್ಲಿ ಇಂಗ್ಲಿಶ್ ಶಬ್ದಗಳಿಗೆ ಇಂಗ್ಲಿಶ್ ಮತ್ತು ಕನ್ನಡದಲ್ಲಿ ಅರ್ಥ ಕೊಡಲಾಗಿದೆ. ಪಿ. ಮಂಗೇಶ್‌ರಾವ್‌ರ 'The English Kannada pocket Dictionary' (೧೯೮೫) ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗಿದೆ.

ಕನ್ನಡ-ಕನ್ನಡ-ಇಂಗ್ಲಿಶ್ ನಿಘಂಟುಗಳು : ಐ. ಬಿ. ಹೆಚ್ ಪ್ರಕಾಶನದವರು 'ಕನ್ನಡ-ಕನ್ನಡ-ಇಂಗ್ಲಿಶ್ ನಿಘಂಟು' ಎಂಬುದನ್ನು ಪ್ರಕಟಿಸಿದ್ದಾರೆ. ಇದರ ಸಂಪಾದಕರು ಪ್ರೊ. ಜಿ. ವೆಂಕಟಸುಬ್ಬಯ್ಯ, ಪ್ರೊ. ಎಲ್. ಎಸ್. ಶೇಷಗಿರಿರಾವ್ ಪ್ರೊ. ಎಚ್. ಕೆ. ರಾಮಚಂದ್ರಮೂರ್ತಿ ಇದರಲ್ಲಿ ಶಬ್ದಾರ್ಥ ಸೇರಿ ೯೦,೦೦೦ ಗಳಿಗೂ ಮಿಕ್ಕ ಪದಗಳನ್ನು ಒಳಗೊಂಡಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುಗಳು ಹಾಗೂ ಕಿಟೆಲ್ ಕೋಶ ಇವಕ್ಕೆ ಮುಖ್ಯ ಆಧಾರವಾಗಿದೆ. 'ಕನ್ನಡ-ಕನ್ನಡ-ಇಂಗ್ಲಿಶ್ ನಿಘಂಟು' (೧೯೬೫) ಇದು ಚಿಕ್ಕದಾದರೂ ಚೊಕ್ಕಟ್ಟಾಗಿ ಪ್ರಕಟವಾಗಿದೆ. ಇದರ ಸಂಪಾದಕರಾದ ಆರ್. ಎಸ್. ರಾಮರಾಯರು ತಮ್ಮ ಆಡಳಿತಾನುಭವದಿಂದ ದಿನನಿತ್ಯ ಬಳಕೆಯಲ್ಲಿರುವ ಶಬ್ದಗಳನ್ನು ಈ ನಿಘಂಟಿನಲ್ಲಿ ಸೇರಿಸಿದ್ದಾರೆ. ಇದರ ವೈಶಿಷ್ಟ್ಯವೆಂದರೆ ಒಂದು ಪದಕ್ಕೆ ಅರ್ಥವನ್ನು ಒಂದೇ ಪದದಲ್ಲಿ ಕೊಟ್ಟಿರುವುದು. ವಿವರಣೆಯನ್ನು ಕೊಡುವ ಗೋಜಿಗೆ ಹೋಗಿಲ್ಲದಿರುವುದು.

ಗಾದೆಗಳ ಕೋಶಗಳು : ಒಂದು ಪ್ರದೇಶದ ಅಥವಾ ಸಮುದಾಯದ ಜನಜೀವನವನ್ನು ತಿಳಿದುಕೊಳ್ಳುವಲ್ಲಿ ಜನಪದ ಸಾಹಿತ್ಯ ಪ್ರಕಾರಗಳು ತುಂಬ ನೆರವಾಗುತ್ತವೆ. ಅವುಗಳಲ್ಲಿ ಗಾದೆಗಳು ಪ್ರಮುಖವಾದವುಗಳು. ಕನ್ನಡದಲ್ಲಿ ಗಾದೆಗಳಿಗೆ ಸಂಬಂಧಿಸಿದಂತೆ ಕೋಶಗಳು ರಚಿತವಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

ಕನ್ನಡ ಗಾದೆಗಳ ಕೋಶ-ಟಿ. ಪಿ. ವೆಂಕಟರಮಣಯ್ಯ (೧೯೬೩)

ಕರ್ನಾಟಕ ಲೋಕೋಕ್ತಿ ನಿಧಿ-ಪ್ರ ಬಾಸೆಲ್ ಮಿಶನ್ ಬೆಂಗಳೂರು (೧೯೧೨)

ಕಿಟೆಲ್ ಕೋಶದ ಗಾದೆಗಳು- ರಾ. ಗೌ. (ಪ್ರ. ಮು ೧೯೬೯ ದ್ವಿ. ಮು ೧೯೭೩)

ಆಧುನಿಕ ಗಾದೆಗಳು- ಟಿ. ಪಿ. ವೆಂಕಟರಮಣಯ್ಯ (೧೯೯೭)

ಈ ಗಾದೆಗಳ ಕೋಶಗಳು ಆಯಾ ಕಾಲ ಘಟ್ಟದ ಜನಜೀವನವನ್ನು ತಿಳಿದುಕೊಳ್ಳಲು ತುಂಬ ನೆರವಾಗುತ್ತವೆ.

ನುಡಿಗಟ್ಟು, ಸಮಾನಾರ್ಥಕ, ವಿರುದ್ಧಾರ್ಥಕ ಹಾಗೂ ತತ್ಸಮ ತದ್ಭವ ಕೋಶಗಳು : ಕನ್ನಡದಲ್ಲಿ ಪಡೆನುಡಿ ಅಥವಾ ನುಡಿಗಟ್ಟುಗಳಿಗೆ ಸಂಬಂಧಿಸಿದಂತೆ ಎರಡು ಕೋಶಗಳು ಬಂದಿವೆ. ಟಿ. ವಿ. ವೆಂಕಟರಮಣಯ್ಯನವರಿಂದ ರಚಿತವಾದ 'ಕನ್ನಡ ಪಡೆನುಡಿಗಳ ಬೃಹತ್ ಕೋಶ' (೧೯೯೦) ಎಂ. ರಾಜಗೋಪಾಲಾಚಾರ್ಯರ 'ಕನ್ನಡ ವಾಗ್ರೂಢಿಗಳು' ಈ ಎರಡು ತುಂಬ ಉಪಯುಕ್ತವಾಗಿದೆ. ಜೆ. ಎಂ. ಹನಸೋಗೆಯವರ 'ಕನ್ನಡ ಶಬ್ದಸಾಗರ' (೧೯೭೨) ಇದೊಂದು ವಿಶಿಷ್ಟ ರೀತಿಯ ಕೋಶ. ಕನ್ನಡ-ಇಂಗ್ಲಿಶ್ ಮತ್ತು ಇಂಗ್ಲಿಶ್-ಕನ್ನಡದಲ್ಲಿ ಸಮಾನಾರ್ಥಕ ಹಾಗೂ ವಿರುದ್ಧಾರ್ಥಕ ಶಬ್ದಗಳಿಗೆ ಅರ್ಥ ಕೊಡಲಾಗಿದೆ. ಶ್ರೀಮತಿ ಚೈತ್ರರವರು 'ತತ್ಸಮ-ತದ್ಭವ, ತದ್ಭವ-ತತ್ಸಮ ಕೋಶ' (೧೯೮೭-೮೮) ವನ್ನು ರಚಿಸಿದ್ದಾರೆ. ಇದು ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗಿದೆ.

ಹಿಂದಿ-ಕನ್ನಡ ಕೋಶಗಳು : ಹಿಂದಿ ರಾಷ್ಟ್ರೀಯ ಭಾಷೆಯೆಂದೂ, ಆಡಳಿತ ಭಾಷೆಯೆಂದೂ ಒಪ್ಪಿತವಾಗಿದೆ. ಕನ್ನಡವೂ ಸೇರಿದಂತೆ ಇತರ ದೇಶಿಯ ಭಾಷೆಗಳಲ್ಲಿ ಹಿಂದಿ ಕೋಶಗಳು ರಚಿತವಾಗಿವೆ. ಪ್ರೊ. ಜಂಬುನಾಥನ ಅವರ 'ಹಿಂದಿ-ಕನ್ನಡ ಕೋಶ' (೧೯೪೫), ಪ್ರೊ. ಗುರುನಾಥ ಜೋಶಿಯವರ 'ಹಿಂದಿ-ಕನ್ನಡ ಶಬ್ದಕೋಶ' (೧೯೫೦), ಪಂಡಿತ ಸಿದ್ದನಾಥ ಪಂತ ಅವರ 'ಹಿಂದಿ-ಕನ್ನಡ ಕೋಶ' (೧೯೪೮), ಶ್ರೀ ಮನ್ನೂರವರ 'ಹಿಂದಿ-ಕನ್ನಡ ಕೋಶ'ಗಳು ಪ್ರಕಟವಾಗಿವೆ.ಇವುಗಳಲ್ಲಿ ಗುರುನಾಥ ಜೋಶಿಯವರ ಕೋಶವು ತುಂಬ ಜನಪ್ರಿಯವಾಗಿದೆ.

ಹಿಂದಿ ಹಿಂದಿ-ಕನ್ನಡ ಕೋಶಗಳು : ಈ ವರ್ಗದಲ್ಲಿ ಒಂದೇ ಒಂದು ನಿಘಂಟು ರಚಿತವಾಗಿದೆ. ಅದುವೇ ಜೆ. ಡಿ. ಮೈಕಲೆಯವರ 'ಹಿಂದಿ-ಹಿಂದಿ-ಕನ್ನಡ ರತ್ನಕೋಶ' (೧೯೫೧) ಇದು ಹಿಂದಿ ಹಾಗೂ ಕನ್ನಡ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗಿದೆ.

ಕನ್ನಡ-ಹಿಂದಿ ಕೋಶಗಳು : ಎರಡು ಕೋಶಗಳು ಈ ವರ್ಗದಲ್ಲಿ ರಚನೆಯಾಗಿವೆ. ಜೆ. ಡಿ. ಮೈಶೆಲೆ, ಎಸ್. ವಿ. ಭಟ್, ಚಾಂದುಲಾಲ ದುಬೆ ಅವರು ಜೊತೆ ಸೇರಿ ಸಂಪಾದಿಸಿದ 'ಸಚಿತ್ರ ಕನ್ನಡ-ಹಿಂದಿ ಆದರ್ಶಕೋಶ' (೧೯೫೭) ಹಾಗೂ ಗುರುನಾಥ ಜೋಶಿಯವರ 'ಕನ್ನಡ-ಕನ್ನಡ-ಹಿಂದಿ ಶಬ್ದಕೋಶ' (೧೯೫೭) ಈ ಕೋಶಗಳು ಹಿಂದಿ ಹಾಗೂ ಕನ್ನಡ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗಿವೆ.

ಹಿಂದಿ-ಇಂಗ್ಲಿಶ್-ಕನ್ನಡ ನಿಘಂಟುಗಳು : ಈ ವರ್ಗದಲ್ಲಿ ಒಂದು ಕೋಶ ಮಾತ್ರ ರಚಿತವಾಗಿದೆ. ಅದುವೇ ಎಲ್. ಎಸ್. ಚಿಟಗುಪ್ಪಿಯವರ 'ಆಧುನಿಕ ಹಿಂದಿ-ಕನ್ನಡ-ಇಂಗ್ಲಿಶ್ ಶಬ್ದಕೋಶ' ಇದು ಹಿಂದಿ ವಿದ್ಯಾರ್ಥಿಗಳಿಗೆ ಕನ್ನಡ ಮತ್ತು ಇಂಗ್ಲಿಶ್‌ನ್ನು ತಿಳಿದುಕೊಳ್ಳಲು ತುಂಬ ಸಹಕಾರಿಯಾಗುತ್ತದೆ.

ಅಚ್ಚಗನ್ನಡ ನುಡಿಕೋಶ : ಕೊಳಂಬೆ ಪುಟ್ಟಣ್ಣ ಗೌಡರ 'ಅಚ್ಚಗನ್ನಡ ನುಡಿಕೋಶವು' ಕನ್ನಡದ ಐತಿಹಾಸಿಕ ಬೆಳವಣಿಗೆಯನ್ನು ದಾಖಲಿಸುತ್ತದೆ. ಭಾಷಾ ಬಳಕೆಯಲ್ಲಿ ಕೈಜಾರಿ ಹೋದ ಅನೇಕ ಪದರಚನೆಗಳು ಮತ್ತೆ

ಚಲಾವಣೆಗೆ ತರುವ ಸಾಧ್ಯತೆಗಳತ್ತ ನಮ್ಮನ್ನು ಆಲೋಚನೆಗೆ ಹಚ್ಚುತ್ತದೆ. ಆಧುನಿಕ ಕಾಲದಲ್ಲಿ ಎಲ್ಲೆಡೆಯಿಂದ ಆಕ್ರಮಿಸಿಕೊಳ್ಳುತ್ತಿರುವ ವಿಜ್ಞಾನ-ತಂತ್ರಜ್ಞಾನ-ಮಾನವಿಕಗಳನ್ನು ನಮ್ಮ ಭಾಷೆಯಲ್ಲಿ ಹೇಳಲು ಅನೇಕ ಮೂಲಪದಗಳ, ಸಮಾಸ ಪದಗಳ ಅವಶ್ಯಕತೆಯಿದೆ. ಅಂತಹ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಇಂತಹ ನುಡಿಕೋಶಗಳನ್ನು ಮೂಲ ಆಕರಗಳನ್ನಾಗಿ ಬಳಸಿಕೊಳ್ಳಬಹುದಾಗಿದೆ. ಕೊಳಂಬೆಯವರು ಆಂಡಯ್ಯನ ಪರಂಪರೆಗೆ ಸೇರಿದ ವಿದ್ವಾಂಸ ಕವಿ. ಪ್ರಯೋಗಶೀಲ ಮನೋಧರ್ಮದ ಇವರು ಆಂಡಯ್ಯನಿಗಿಂತಲೂ ಒಂದು ಹೆಜ್ಜೆ ಮುಂದೆ ಹೋದವರು. ದೇಶ್ಯ ಶಬ್ದಗಳಿಂದಷ್ಟೆ ಕಾವ್ಯ ಕಟ್ಟಿದವರು. ದೇಶ್ಯ ಪದಗಳ ಬಗೆಗಿನ ಅಪಾರವಾದ ಒಲವು ಅವರನ್ನು ಇಂತಹ ನಿಘಂಟಿನ ರಚನೆಗೆ ಕೈಹಾಕಿರಬೇಕು. ಈ ನಿಘಂಟನ್ನು ಪರಿಶೀಲಿಸಿದಾಗ ಇಲ್ಲಿಯ ಬಹುಪಾಲು ಪದಗಳು ಕಿಟೆಲ್‌ಕೋಶ ಹಾಗೂ ಕನ್ನಡ-ಕನ್ನಡ ನಿಘಂಟಿನ ಸಂಪುಟಗಳಲ್ಲಿ ದಾಖಲಿತವಾದವುಗಳಾದರೂ ಅನೇಕ ಹೊಸ ಪದಗಳು ಕಂಡುಬರುತ್ತವೆ. ವಿಶೇಷವಾಗಿ ಮುದ್ದಣ್ಣನ ಶಬ್ದ ನಿಷ್ಪತ್ತಿಯ ಮಾದರಿಯನ್ನನುಸರಿಸಿ ಅನೇಕ ಪದಗಳನ್ನು ಸೃಷ್ಟಿಸಿದ್ದಾರೆ. ವಿವಿಧ ವೃತ್ತಿಯ ಪದಗಳಿಗೆ ಈ ನಿಘಂಟಿನಲ್ಲಿ ಸ್ಥಾನ ಕಲ್ಪಿಸಿದುದು ಈ ಕೋಶದ ಉಪಯುಕ್ತತೆಯನ್ನು ಹೆಚ್ಚಿಸಿದೆ. ಸ್ಥಳೀಯ ಗಾದೆಗಳನ್ನು ಅರ್ಥ ಸ್ಪಷ್ಟತೆಗಾಗಿ ನೀಡುತ್ತಾರೆ. ಕನ್ನಡ ಶಬ್ದ ಭಂಡಾರಕ್ಕೆ ಅನೇಕ ಪದಗಳು ಈ ನಿಘಂಟಿನ ಮೂಲಕ ಬಂದುದು ಸ್ವಾಗತಾರ್ಹ ಸಂಗತಿ. ಕನ್ನಡ ಕೋಶ ಚರಿತೆಯಲ್ಲಿ ಇದೊಂದು ಬೆಲೆಯುಳ್ಳ ಕೋಶವಾಗಿದೆ.

ಸಮಕಾಲೀನ ಕನ್ನಡದ ಕೋಶಗಳು : ಭಾಷೆ ಬೆಳವಣಿಗೆಯಾದಂತೆ ಪದ ರಚನೆಯಲ್ಲಿ ವ್ಯತ್ಯಾಸಗಳುಂಟಾಗುತ್ತವೆ. ಬಳಕೆಯ ಸಂದರ್ಭ ಹಾಗೂ ಅರ್ಥದಲ್ಲಿಯೂ ವ್ಯತ್ಯಾಸಗಳಾಗುತ್ತವೆ. ಹೊಸ ಪದಗಳು ಭಾಷೆಗೆ ಬಂದು ಸೇರುತ್ತವೆ. ಹಳೆಯ ರೂಪಗಳು ಹೊಸ ಅರ್ಥದಲ್ಲಿ ಬಳಕೆಯಾಗುತ್ತವೆ. ಪ್ರಚಲಿತ ಕನ್ನಡದ ಪದ ರೂಪಗಳಿಗೆ ಅರ್ಥವನ್ನು ನೀಡುವ ಎರಡು ಕೋಶಗಳು ಕನ್ನಡದಲ್ಲಿ ರಚಿತವಾಗಿವೆ.

ಪ್ರೊ. ಜಿ. ವೆಂಕಟಸುಬ್ಬಯ್ಯನವರ 'ಇಗೋ ಕನ್ನಡ' (೧೯೯೬) ೧೯೯೧ ರಿಂದ ಪ್ರಜಾವಾಣಿ ದಿನಪತ್ರಿಕೆಯ ರವಿವಾರದ ಸಂಚಿಕೆಯಲ್ಲಿ 'ಇಗೋ ಕನ್ನಡ' ಎಂಬ ಅಂಕಣದಲ್ಲಿ ಜಿ. ವೆಂ. ರವರು ಪ್ರೌಢಶಾಲೆಯ ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಾಮಾನ್ಯ ಜನರಿಗೆ ತಲೆದೋರುವ ಸಂದೇಹಗಳನ್ನು ಪರಿಹರಿಸಿ ಉಪಕರಿಸುತ್ತಿದ್ದಾರೆ. 'ಇಗೋ ಕನ್ನಡ' ಅಂಕಣದ ವಿಷಯಗಳನ್ನು ಪರಿಷ್ಕರಣಗೊಂಡು ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಈ ನಿಘಂಟಿನಲ್ಲಿಯ ವಿಷಯಗಳು ವೈವಿಧ್ಯಮಯವಾಗಿವೆ. ಆಡಳಿತ, ಕೃಷಿ, ನ್ಯಾಯ ತೀರ್ಮಾನದಲ್ಲಿ ಕನ್ನಡದ ಬಳಕೆ, ಭಾಷಾಸ್ವೀಕರಣ, ಗಾದೆ, ನುಡಿಗಟ್ಟು, ಶಬ್ದನಿಷ್ಪತ್ತಿ, ವ್ಯಾಕರಣ ಪ್ರಕ್ರಿಯೆಗಳು, ಪದ್ಯಗಳು ಭಾವಾನುವಾದ, ಸಮಾನಾರ್ಥಕ ಪದಗಳ ಅರ್ಥ ವಿವರಣೆ ಮುಂತಾದವು. ಈ ಎಲ್ಲ ವಿಷಯಗಳು ಸಾಮಾಜಿಕ ಭಾಷಾಶಾಸ್ತ್ರ ವ್ಯಾಸಂಗಕ್ಕೆ ಒಳಪಡುವುದರಿಂದ ಇದನ್ನು 'ಸಾಮಾಜಿಕ

ನಿಘಂಟು' ಎಂದು ಕರೆದಿರುವುದು ಸೂಕ್ತವಾಗಿದೆ. ಭಾಷಾ ಬೆಳವಣಿಗೆಯಲ್ಲಿ ಆಧುನೀಕರಣ ಮತ್ತು ಪ್ರಮಾಣೀಕರಣಗಳು ಮಹತ್ವದ ಪಾತ್ರವಹಿಸುತ್ತವೆ. ಕನ್ನಡದಲ್ಲಿ ಇಂತಹ ಪ್ರಕ್ರಿಯೆಗಳಿಂದ ಹೊಸ ಶಬ್ದಗಳು ನಿರ್ಮಾಣವಾಗಿ ಹೊಸ ಅರ್ಥದಲ್ಲಿ ಬಳಕೆಯಾಗುತ್ತಿವೆ. ಜಿ. ವೆಂ. ರವರ ಈ ಕೋಶವನ್ನು ಗಮನಿಸಿದಾಗ ಅದು ತಿಳಿದು ಬರುತ್ತದೆ.

ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗುತ್ತಿರುವ 'ನಮ್ಮ ಕನ್ನಡ' ಎಂಬ ಮಾಸ ಪತ್ರಿಕೆಯಲ್ಲಿ ಕನ್ನಡದ ಬೇರೆ ಬೇರೆ ವರ್ತಮಾನ ಪತ್ರಿಕೆಗಳಲ್ಲಿ ಹಾಗೂ ಸೃಜನಶೀಲ ಬರೆಹಗಳಲ್ಲಿ ಕಾಣಿಸಿಕೊಳ್ಳುವ ಹೊಸ ಹೊಸ ಪದಗಳಿಗೆ ಅರ್ಥವನ್ನು ಕೊಡಲಾಗುತ್ತಿದೆ. ಕನ್ನಡದಲ್ಲಿ ಪ್ರತಿ ದಿನವೂ ಹೊಸ ಪದರಚನೆಗಳು ನಿರ್ಮಾಣವಾಗುತ್ತಿವೆ ಎಂಬುದಕ್ಕೆ 'ನಮ್ಮ ಕನ್ನಡ' ಪತ್ರಿಕೆಯನ್ನು ನೋಡಿದಾಗ ವೇದ್ಯವಾಗುತ್ತದೆ. ಪ್ರಧಾನಪದ, ಅದರ ಅರ್ಥ, ಬಳಕೆಯಾದ ಸಂದರ್ಭ, ಅದರ ಪರ್ಯಾಯ ರೂಪಗಳು, ಸಾಧಿತ ರೂಪಗಳು ಮುಂತಾದವುಗಳ ವಿವರಣೆ ಇದರಲ್ಲಿದೆ. ಕನ್ನಡ ಕಾವ್ಯ, ವಾಕ್ಯ ರಚನೆಗಳು, ಅವುಗಳ ಬಳಕೆಯಲ್ಲಾಗುವ ಸಮಸ್ಯೆಗಳು ಇತ್ಯಾದಿ ಅಂಶಗಳನ್ನು ಚರ್ಚಿಸುವ 'ಗಂಟು' ಎಂಬ ಭಾಗವಿದೆ. ಕನ್ನಡದಲ್ಲಿ ಬಳಕೆಯಾಗುವ ವಾಕ್ಯ ರಚನೆಗಳನ್ನು ತಿಳಿದುಕೊಳ್ಳಲು ಈ ಭಾಗ ತುಂಬ ನೆರವಾಗುತ್ತದೆ. ಕನ್ನಡದ ಬೇರೆ ಬೇರೆ ಪ್ರಾದೇಶಿಕ ರೂಪಗಳ ಅರ್ಥವನ್ನು ತಿಳಿಸುವ 'ನಿಧಾನ' ವೆಂಬ ಭಾಗವಿದೆ. ಹೀಗೆ ದಿನದಿನ, ಗಂಟು ನಿಧಾನ ಹಾಗೂ ಸಂಪಾದಕರಲ್ಲೊಬ್ಬರಾದ ಡಾ. ಕೆ. ವಿ. ನಾರಾಯಣರು ಬರೆಯುತ್ತಿರುವ ಮೌಲಿಕ ಟಿಪ್ಪಣಿಗಳು ಇವನ್ನೆಲ್ಲ ಒಳಗೊಂಡ ಈ ಮಾಸಪತ್ರಿಕೆ ಸಮಕಾಲೀನ ಕನ್ನಡ ಭಾಷೆಯ ಜಾಯಮಾನವನ್ನು ತಿಳಿದುಕೊಳ್ಳಲಿಕ್ಕೆ ಮಹತ್ವದ ಆಕರವಾಗಿದೆ.

ಪದ ಪ್ರಯೋಗ ಕೋಶಗಳು : ಒಬ್ಬ ಕವಿ ತನ್ನ ಕಾವ್ಯದಲ್ಲಿ ಬಳಸಿದ ಎಲ್ಲ ಶಬ್ದ ಪ್ರಯೋಗಗಳನ್ನು ಕ್ರೋಢೀಕರಿಸಿ ಅವು ಎಷ್ಟು ಅರ್ಥದಲ್ಲಿ ಬಳಕೆಗೊಂಡಿವೆ ಎಂಬುದನ್ನು ತಿಳಿಸಿಕೊಡುವ ಕೋಶಗಳಿವು. ಇಂಗ್ಲಿಶ್‌ನಲ್ಲಿ ಇವುಗಳಿಗೆ 'Concordance' ಎಂದು ಕರೆಯುವರು. ಇದರಲ್ಲಿ ವಿಶಿಷ್ಟ ಪದಗಳು, ಅವುಗಳ ಸಂದರ್ಭ, ಅವು ಬರುವ ಪ್ರಯೋಗಗಳ ಉಲ್ಲೇಖಗಳು ಈ ಎಲ್ಲ ಅಂಶಗಳು ಸಮಾವೇಶಗೊಳ್ಳುತ್ತವೆ.

ಈಚೆಗೆ ಕನ್ನಡದಲ್ಲಿ ಕೆಲವು ಕವಿಗಳ ಪದ ಪ್ರಯೋಗ ಕೋಶಗಳು ಸಿದ್ಧವಾಗಿವೆ. ಡಾ. ಬಿ. ರಾಮಚಂದ್ರರಾವ್ ಅವರು ಪ್ರಕಟಿಸಿದ A, Descriptive Grammar of pampa Bharata' ಎಂಬ ಗ್ರಂಥದ ಎರಡನೆಯ ಭಾಗದಲ್ಲಿ ಪಂಪಭಾರತದಲ್ಲಿ ಪ್ರಯೋಗವಾದ ಎಲ್ಲ ಕನ್ನಡ ಶಬ್ದಗಳನ್ನು ಪಟ್ಟಿ ಮಾಡಿ ಅರ್ಥಕೊಡಲಾಗಿದೆ. ಎಸ್. ಆರ್. ಗುಂಜಾಳರು 'ಬಸವಣ್ಣನವರ ವಚನಗಳ ಪದ ಪ್ರಯೋಗ ಕೋಶ'ವನ್ನು ಸಿದ್ಧಪಡಿಸಿದ್ದಾರೆ (೧೯೭೩). ಶ್ರೀಯುತರು ತುಂಬ ಶ್ರದ್ಧೆ ತೆಗೆದುಕೊಂಡು ವ್ಯವಸ್ಥಿತವಾಗಿ ಕೋಶವನ್ನು ರಚಿಸಿದ್ದಾರೆ. ಇದೇ ಮಾದರಿಯಲ್ಲಿ ಎಸ್. ಆರ್. ಗುಂಜಾಳ ಮತ್ತು ಬಿ. ಎಲ್. ಬ್ಯಾಡಗಿ ಜೊತೆ ಸೇರಿ

ಸಂಪಾದಿಸಿದ 'ತೋಂಟದ ಸಿದ್ಧಲಿಂಗಯತಿಗಳ ಪದಪ್ರಯೋಗ ಕೋಶ' (೧೯೮೩) ವು ತುಂಬ ಮೌಲಿಕವಾಗಿದೆ. ಸಿ. ಓಂಕಾರಪ್ಪನವರ 'Verbal Bases of Kumaravyasa' (೧೯೮೩), ಎಂ. ಎಸ್. ಪಾಟೀಲರು ಸಿದ್ಧಪಡಿಸಿದ 'ಶ್ರೀ ಸಿದ್ಧರಾಮೇಶ್ವರ ವಚನ ಪದ ಪ್ರಯೋಗ ಕೋಶ' (೧೯೮೩) ವಿ. ಬಿ. ನಾವಡ ಮತ್ತು ಸಿ. ಉಪೇಂದ್ರ ಸೋಮಯಾಜಿ ಜೊತೆ ಸೇರಿ ಸಿದ್ಧಪಡಿಸಿದ 'ಗೋವಿಂದ ಪೈ ಪದಪ್ರಯೋಗ ಕೋಶ' (೧೯೬೭). ಎಸ್. ಕೆ. ಕುಲಕರ್ಣಿಯವರ 'ಕುಮಾರವ್ಯಾಸ ನಿಘಂಟು' (೧೯೭೧). ಜಿ. ವೆಂಕಟಸುಬ್ಬಯ್ಯನವರ 'ಮುದ್ದಣ್ಣ ಪದ ಪ್ರಯೋಗ ಕೋಶ' (೧೯೯೬), ಇವು ಗಮನಾರ್ಹವಾದವುಗಳಾಗಿವೆ. ಕಾವ್ಯದ ಜಟಿಲ ಸಮಸ್ಯೆಗಳನ್ನು ಕುರಿತು ವಿವರಣೆಯನ್ನು ನೀಡುವ ಎರಡು ಗ್ರಂಥಗಳು ಕನ್ನಡದಲ್ಲಿ ಬಂದಿವೆ. ಡಿ. ಎಲ್. ನರಸಿಂಹಾಚಾರ್‌ರ 'ಪಂಪಭಾರತ ದೀಪಿಕೆ' (೧೯೭೧) ಹಾಗೂ ವಿದ್ಯಾರಾಧನೆಗೆ ಸಂಬಂಧಿಸಿದ ಗ್ರಂಥಗಳು (೧೯೭೦) ಕಾವ್ಯಗಳ ರಸ ಸ್ಥಾನಗಳ ಆಸ್ವಾದನೆಗೆ ತುಂಬ ಅಗತ್ಯವಾಗಿದೆ. ಆಯಾ ಕವಿಗಳ ಕಾವ್ಯಗಳನ್ನು ಅಧ್ಯಯನ ಮಾಡುವಾಗ ಇಂತಹ ಕೋಶಗಳು ಕೈಪಿಡಿಯಂತೆ ಸಹಾಯ ನೀಡುತ್ತವೆ.

ವೃತ್ತಿ ಪದಕೋಶಗಳು : ವಿವಿಧ ವೃತ್ತಿಗೆ ಸಂಬಂಧಿಸಿದ (ಕೃಷಿ, ಕುಂಬಾರಿಕೆ, ಕಂಬಾರಿಕೆ, ನೇಕಾರಿಕೆ ಮುಂತಾದವು) ಪದಗಳು ಈಗ ಕಣ್ಮರೆಯಾಗುತ್ತಿವೆ. ಆಯಾ ವೃತ್ತಿ ಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ತಿಳಿದುಕೊಳ್ಳಲು ವೃತ್ತಿ ಪದಗಳು ಮಹತ್ವದ ಪಾತ್ರವಹಿಸುತ್ತವೆ. ವೃತ್ತಿ ಪದಗಳು ಹೆಚ್ಚಾಗಿ ಅಚ್ಚಗನ್ನಡ ಪದಗಳಾಗಿರುವುದರಿಂದ ಅಂತಹುಗಳನ್ನು ಸಂಗ್ರಹಿಸಿ ಅವುಗಳಿಗೆ ಅರ್ಥ ಕೊಡುವುದು ಅಗತ್ಯವಿದೆ. ಕನ್ನಡದಲ್ಲಿ ವೃತ್ತಿ ಪದಗಳ ಸಂಗ್ರಹ ಮತ್ತು ವಿಶ್ಲೇಷಣಾಕಾರ್ಯ ಈಚೆಗೆ ನಡೆದಿದೆ. ಕೆಲವು ವೃತ್ತಿ ಪದಕೋಶಗಳು ಲೇಖನ ರೂಪದಲ್ಲಿ ಬಂದಿವೆ. ನಾಲ್ಕು ಕೋಶಗಳು ಗ್ರಂಥ ರೂಪದಲ್ಲಿ ಬಂದಿವೆ. ಉಲ್ಲಾಳನರಸಿಂಗರಾವರ ' A, Kisamwar Glossary of Kannada words' (೧೯೯೧) ವಿ. ಶಿವಾನಂದರ 'ಕಲಬುರ್ಗಿ ಜಿಲ್ಲೆಯ ಒಕ್ಕಲುತನದ ವೃತ್ತಿ ಪದಗಳ ಅಧ್ಯಯನ' (೧೯೮೧) ಆರ್. ವೈ. ಕುಲಕರ್ಣಿಯವರ 'ವಿಜಾಪೂರ ಜಿಲ್ಲೆಯ ನೇಕಾರರ ವೃತ್ತಿ ಪದಗಳ ಅಧ್ಯಯನ' (೧೯೮೪) ಎಸ್. ಎಸ್. ಅಂಗಡಿಯವರ 'ಕುಂಬಾರ ವೃತ್ತಿ ಪದಕೋಶ' (೧೯೯೮).

ಉಲ್ಲಾಳ ನರಸಿಂಗ್ ರಾವರ ಕೋಶವು ಒಂದು ನಿರ್ದಿಷ್ಟ ವೃತ್ತಿಗೆ ಸೇರಿದ ಪದಕೋಶವಲ್ಲ. ಬೇರೆ ಬೇರೆ ವೃತ್ತಿಗೆ ಸೇರಿದ ಪದಗಳು ಇಲ್ಲಿವೆ. ವಿರಕ್ತಮಠ, ಕುಲಕರ್ಣಿ, ಅಂಗಡಿಯವರು ಸಿದ್ಧಪಡಿಸಿದ ಕೋಶಗಳು ಕ್ರಮವಾಗಿ ಪಿಹೆಚ್. ಡಿ, ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ನಿಬಂಧಗಳಾಗಿವೆ. ಇವು ಭಾಷಾಶಾಸ್ತ್ರದ ತತ್ವಗಳನ್ನು ಅಳವಡಿಸಿಕೊಂಡು ರಚಿತವಾದರೂ ಇನ್ನೂ ಪ್ರಕಟವಾಗದಿರುವುದು ಖೇದದ ಸಂಗತಿ.(ಅಂಗಡಿಯವರ ನಿಬಂಧ ಪ್ರಕಟವಾಗಿದೆ) ಅವರ ಅಧ್ಯಯನಗಳ ಕೆಲವು ಅಧ್ಯಾಯಗಳಾದರೂ ಬೇರೆ ಬೇರೆ ಸಂಪತ್ರಿಕೆಗಳಲ್ಲಿ ಅಚ್ಚಾಗಬೇಕಾಗಿದೆ. ಕುಲಕರ್ಣಿಯವರು ಸಿದ್ಧಪಡಿಸಿದ ಕೋಶವು ಇಂಗ್ಲಿಶ್‌ನಲ್ಲಿದೆ

ಅದರ ಕನ್ನಡ ರೂಪದ ಅಗತ್ಯತೆಯಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗವು ಪ್ರಕಟಿಸಿರುವ 'ಕೃಷಿ ಉಪಕರಣಗಳು' ಎಂಬ ಗ್ರಂಥದಲ್ಲಿ ಕೃಷಿ ಉಪಕರಣಗಳ ಅರ್ಥ, ವಿವರಣೆ ಮತ್ತು ಅವುಗಳ ಚಿತ್ರವನ್ನೊಳಗೊಂಡ ಮಹತ್ವದ ಕೃತಿ. ಎಂ. ಎಂ. ಹೊಸಮನಿ, ಎಸ್. ಸಿ. ಚಂದ್ರಯ್ಯ ಇದನ್ನು ಸಿದ್ಧಪಡಿಸಿದ್ದಾರೆ.

ಕೆಲವು ವೃತ್ತಿಪದಗಳು ಲೇಖನ ರೂಪದಲ್ಲಿ ಬಂದಿವೆ. ದೇವಾನಂದ ಮಾಲಗತ್ತಿಯವರು 'ಚಮ್ಮಾರರು ಮತ್ತು ಅವರ ಉಪಕರಣಗಳ ವಿಚಕ್ಷಣ ನೋಟ' ಎಂಬ ಲೇಖನವನ್ನು (೧೯೯೦), ಹೆಚ್. ಹೆಚ್. ಗಂಗಾಧರಾಚಾರ್ಯರು 'ವಿಶ್ವಕರ್ಮರ ಶಬ್ದಕೋಶ' ವನ್ನು (೧೯೮೬), ವಿ. ಶಿವಾನಂದರು 'ಒಕ್ಕಲುತನ ವೃತ್ತಿ ಪದಕೋಶ' ೧ (೧೯೭೮) ಹಾಗೂ 'ಕನ್ನಡ ವೃತ್ತಿಪದಕೋಶ ೪ (೧೯೭೯) ಎಂಬ ಲೇಖನಗಳನ್ನು ಪ್ರಕಟಿಸಿದ್ದಾರೆ. ಹೆಚ್. ಎಂ. ಮಹೇಶ್ವರಯ್ಯನವರು 'ಮಲೆನಾಡಿನ ಕೃಷಿಕರ ವೃತ್ತಿಪದಕೋಶ' (೧೯೮೫) ವನ್ನು, ಎಸ್. ಎಸ್. ಅಂಗಡಿಯವರು 'ಕ್ಷೌರಿಕರು ಮತ್ತು ಅವರ ವೃತ್ತಿ ಪದಗಳು' (೧೯೯೬) ಎಂಬ ಲೇಖನಗಳನ್ನು ಸಿದ್ಧಪಡಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯವು 'ಕರ್ನಾಟಕದ ಕೃಷಿ ಪದಕೋಶ' ಎಂಬ ಯೋಜನೆಯನ್ನು ಪೂರ್ಣಗೊಳಿಸಿದೆ (೧೯೯೪). ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಬಳಕೆಯಲ್ಲಿರುವ ಕೃಷಿ ಪದಗಳನ್ನು ಸಂಗ್ರಹಿಸಿ ಅವುಗಳನ್ನು ಹದಿಮೂರು ರೀತಿಯಾಗಿ ವರ್ಗೀಕರಿಸಿ ವಿಶ್ಲೇಷಿಸಿದ್ದಾರೆ. ಕನ್ನಡ ನಿಘಂಟುಗಳಲ್ಲಿ ಬಳಕೆಯಾಗದ ವೈವಿಧ್ಯಮಯ ರೂಪಗಳು ಇಲ್ಲಿ ಕಾಣಿಸಿಕೊಂಡಿವೆ. ಈ ಪದಕೋಶ ಬೇಗನೆ ಪ್ರಕಟವಾದರೆ ಕನ್ನಡ ವೃತ್ತಿ ಪದಕೋಶಕ್ಕೆ ಗಣ್ಯ ಕೊಡುಗೆಯಾಗುತ್ತದೆ. ವೃತ್ತಿ ಪದಕೋಶ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಅಪಾರವಾಗಿದೆ. ನಾಡಿನ ಬೇರೆ ಬೇರೆ ವೃತ್ತಿ ಸಮುದಾಯಗಳ ವೃತ್ತಿ ಪದಗಳ ಸಂಗ್ರಹದ ಕಾರ್ಯ ನಡೆಯಬೇಕಾಗಿದೆ ಅದು ಸಾಮಾಜಿಕ ಭಾಷಾಧ್ಯಯನದ ದೃಷ್ಟಿಯಿಂದ ತುಂಬ ಉಪಯುಕ್ತವಾದುದು.

ವಿಶಿಷ್ಟ ಬಗೆಯ ಪದಕೋಶಗಳು : ಮೈಸೂರಿನ ಶಾರದಾ ಮಂದಿರದವರು ಪ್ರಕಟಿಸಿದ ಟಿ. ವಿ. ವೆಂಕಟಾಚಲಶಾಸ್ತ್ರಿಯವರ 'ಶ್ರೀವತ್ಸ ನಿಘಂಟು' (೧೯೭೧) ಒಂದು ವಿಶಿಷ್ಟ ಪ್ರಕಾರಕ್ಕೆ ಸೇರಿದ ಕೋಶವಾಗಿದೆ. ಇದು ಸೀಮಿತ ಉದ್ದೇಶವುಳ್ಳದ್ದಾದರೂ ಇದರ ಸಂಕಲನ ತುಂಬ ಪರಿಶ್ರಮದಿಂದ ಕೂಡಿದೆ. ಇದರಲ್ಲಿ ಸು ೪೦೦೦ ಸಂಖ್ಯಾ ವಿಶಿಷ್ಟ ಪದಗಳಿಗೆ ವಿವರಣೆಯಿದೆ.

ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಅಧ್ಯಯನ ವಿಭಾಗದಿಂದ ೧೯೭೯ ರಲ್ಲಿ ಪ್ರಕಟವಾಗಿರುವ 'ಕೆಲವು ಸಸ್ಯಗಳ ವೈಜ್ಞಾನಿಕ ಕುಟುಂಬ ಇಂಗ್ಲಿಶ್ ಹಾಗೂ ಕನ್ನಡ ಹೆಸರುಗಳು' ಎಂಬ ನಿಘಂಟು ತುಂಬ ಉಪಯುಕ್ತವಾದುದು. ಇದರ ಕರ್ತೃ ಎಸ್. ಟಿ. ನರಸಿಂಹಾಚಾರ್ಯರು. ಕನ್ನಡ ನಾಡಿನಲ್ಲಿ ಕಂಡುಬರುವ ಸುಮಾರು ಎರಡು ಸಾವಿರ ಸಸ್ಯಗಳ ಹೆಸರುಗಳನ್ನು ಕೊಟ್ಟಿದ್ದಾರೆ. ಪ್ರತಿಯೊಂದು ಸಸ್ಯಕ್ಕೆ ಅದರ ಗುಣವನ್ನು

ಅವಲಂಬಿಸಿ ಸಸ್ಯಗಳನ್ನು ವಿಂಗಡಿಸಿ ವೈಜ್ಞಾನಿಕ ಹೆಸರುಗಳನ್ನು ಕೊಡಲಾಗಿದೆ.

ಹುಬ್ಬಳ್ಳಿಯ ಲೋಕ ಶಿಕ್ಷಣ ಟ್ರಸ್ಟ್‌ದವರು ೧೯೬೫ ರಲ್ಲಿ ಪ್ರಕಟಿಸಿರುವ 'ಪತ್ರಿಕಾ ನಿಘಂಟು' ಚಿಕ್ಕದಾದರೂ ಉಪಯುಕ್ತವಾಗಿದೆ. ಪತ್ರಿಕಾ ಪ್ರಪಂಚದಲ್ಲಿ ಚಾಲ್ತಿಯಲ್ಲಿರುವ ಶಬ್ದಗಳ ಅರ್ಥ ವಿವರಣೆ ಇಲ್ಲಿದೆ. ಪ್ರೊ. ಜಿ. ವೆಂಕಟಸುಬ್ಬಯ್ಯನವರು ವೃತ್ತ ಪತ್ರಿಕೆಗಳಲ್ಲಿ ಬಳಕೆಯಾದ ಹೊಸ ಪದಗಳಿಗೆ ಅರ್ಥಕೊಡುವ 'ಪತ್ರಿಕಾ ನಿಘಂಟ'ನ್ನು ರಚಿಸಿದ್ದಾರೆ (೧೯೯೮). ಇದನ್ನು ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಕಟಿಸಿದೆ. ಎಚ್. ಎಸ್. ಕೆಯವರು ಸಂಕಲಿಸಿದ 'ಬ್ಯಾಂಕಿಂಗ್ ಕೈಪಿಡಿ' ವ್ಯವಹಾರದ ದೃಷ್ಟಿಯಿಂದ ತುಂಬ ಉಪಯುಕ್ತವಾಗಿದೆ. ಇದು ಬ್ಯಾಂಕಿಂಗ್ ವ್ಯವಹಾರ ಮಾಡುವವರಿಗೆ ನೆರವು ನೀಡುವುದರಲ್ಲಿ ಸಂದೇಹವಿಲ್ಲ. ಬೆಂಗಳೂರಿನ ಐ. ಬಿ. ಹೆಚ್. ಪ್ರಕಾಶದವರು ಪ್ರಕಟಿಸಿರುವ 'ವರ್ಣ ರಂಜಿತ ಸಚಿತ್ರ ಶಾಲಾ ನಿಘಂಟು' ವಿದ್ಯಾರ್ಥಿಗಳಿಗೂ, ಜನಸಾಮಾನ್ಯರಿಗೂ ತುಂಬ ಪ್ರಯೋಜನಕಾರಿಯಾಗಿದೆ. ಈ ನಿಘಂಟು ಇಸಬೇಲ್ ಮೇರಿ ಮ್ಯಾಕಲೀನ್ ಅವರ 'Illustrated School Dictionary' ಯ ಕನ್ನಡ ಅನುವಾದವನ್ನು ಮಾಡಿದ್ದಾರೆ. ಎಸ್. ಬಸವಾರಾಧ್ಯ ಮತ್ತು ಟಿ. ಆರ್. ಮಹಾದೇವಯ್ಯನವರು. ಸುಂದರ ವರ್ಣ ಚಿತ್ರಗಳಿಂದ ಕೂಡಿರುವ ಈ ನಿಘಂಟು ತುಂಬ ಆಕರ್ಷಣೆಯವೂ ಉಪಯುಕ್ತವೂ ಆಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಿಸಿದ 'ಸಂಕ್ಷಿಪ್ತ ಆಡಳಿತ ಪದಕೋಶ' (೧೯೬೭; ೧೯೯೪) ಆಡಳಿತಾತ್ಮಕ ಕ್ಲಿಷ್ಟ ಪದಗಳಿಗೆ ಅರ್ಥಗಳನ್ನು ಸುಲಭಗೊಳಿಸಲಾಗಿದೆ. ಅರ್ಥ ಸಂದಿಗ್ಧತೆಗಳನ್ನು ದೂರ ಮಾಡಲಾಗಿದೆ. ಸು ೭,೫೦೦ ಪದ ಹಾಗೂ ಪದಪುಂಜವನ್ನೊಳಗೊಂಡ ಈ ಕೋಶ ಆಡಳಿತದಲ್ಲಿ ಕನ್ನಡದ ಬಳಕೆಯನ್ನು ಚುರುಕುಗೊಳಿಸುವಲ್ಲಿ ನೆರವಾಗುತ್ತದೆ. ಪಾ. ವೆಂ. ಆಚಾರ್ಯರು ಪದ, ಅರ್ಥ ಸಂಲಗ್ನತೆಗಳನ್ನು ಕುರಿತು ವಿವರಣಾತ್ಮಕ ಚಿಂತನೆಗಳನ್ನೊಳಗೊಂಡ 'ಪದಾರ್ಥ ಚಿಂತಾಮಣಿ' (ಭಾಗ-೧-೨) (೧೯೯೧) ಎಂಬ ಕೋಶಗಳನ್ನು ರಚಿಸಿದ್ದಾರೆ. ಇವು ತುಂಬ ಉಪಯುಕ್ತವಾಗಿವೆ. ಇಲ್ಲಿನ ಒಂದೊಂದು ಪದವನ್ನೂ ಬಹಳ ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ. ಎಲ್ಲದಕ್ಕೂ ಆಧಾರವಿರುತ್ತದೆ. ಪ್ರತಿಯೊಂದು ಪದದ ಬಗೆಗೆ ನಮಗೆ ತಿಳಿದಿರದ ಎಷ್ಟೋ ಸಂಗತಿಗಳು ಈ ಬರೆಹದಲ್ಲಿರುತ್ತವೆ. ಈ ಸಂಗತಿಗಳು ರೂಪಕ್ಕೆ ಸಂಬಂಧಿಸಿರಬಹುದು ಅರ್ಥಕ್ಕೆ ಸಂಬಂಧಿಸಿರಬಹುದು ಅಥವಾ ಭಾಷೆಗಳ ಪರಸ್ಪರ ಸಂಬಂಧಗಳನ್ನೇ ಕುರಿತಿರಬಹುದು. ಇದು ಕನ್ನಡ ಪದ ಪರಂಪರೆಗೆ ಸಂಬಂಧಿಸಿದ ಮೊದಲ ಪುಸ್ತಕ. ಪ್ರೊ. ಜಿ. ವೆಂಕಟಸುಬ್ಬಯ್ಯನವರು ಎರವಲು ಪದಕೋಶವನ್ನು ರಚಿಸಿದ್ದಾರೆ (೧೯೯೮). ಇಲ್ಲಿ ಲೇಖಕರು ಎತ್ತಿಕೊಂಡ ಶಬ್ದಗಳು ಕನ್ನಡಕ್ಕೆ ಅನ್ಯಭಾಷೆಯ ಮೂಲದಿಂದ ಆಮದಾದ ಶಬ್ದಗಳು. ಅವು ರೂಪಾಂತರಕೊಂಡು ಕನ್ನಡ ಶಬ್ದಗಳಾಗಿ ಸೇರಿಕೊಂಡವುಗಳನ್ನು ಮಾತ್ರ ಗಮನಿಸಿದ್ದಾರೆ. ಹಾಗೆ ಬಂದು ಸೇರಿಕೊಂಡವುಗಳಲ್ಲಿ ಸಂಸ್ಕೃತ ಮೂಲದಿಂದ ಬಂದವನ್ನು ಬಿಟ್ಟು ಸಂಸ್ಕೃತೇತರ ಅನ್ಯಭಾಷೆ (ಇಂಗ್ಲಿಶ್, ಹಿಂದಿ, ಮರಾಠಿ, ಉರ್ದು ಇತ್ಯಾದಿ) ಗಳಿಂದ ಬಂದವನ್ನಷ್ಟೆ ದಾಖಲಿಸಿ ಅವುಗಳ ಬಳಕೆಯ ಸಂದರ್ಭವನ್ನನುಸರಿಸಿ ಅರ್ಥಕೊಟ್ಟಿದ್ದಾರೆ.

ಸಾಹಿತ್ಯ ವಿಮರ್ಶೆ, ಸಂಗೀತ, ನೃತ್ಯ ಮುಂತಾದ ಕ್ಷೇತ್ರಗಳಲ್ಲಿ ಬಳಕೆಯಾಗುವ ಪಾರಿಭಾಷಿಕ ಪದಗಳಿಗೆ ಅರ್ಥ ವಿವರಣೆಯನ್ನು ಕೊಡುವ **ವಿವರಣಾತ್ಮಕ ಪದಕೋಶಗಳೂ** ರಚಿತವಾಗಿವೆ. ಓ. ಎಲ್. ನಾಗಭೂಷಣಸ್ವಾಮಿಯವರ 'ವಿಮರ್ಶೆಯ ಪರಿಭಾಷೆ', ಜಿ. ಎಸ್. ಶಿವರುದ್ರಪ್ಪ ಮತ್ತು ಕೆ. ವಿ. ನಾರಾಯಣರು ಜತೆ ಸೇರಿ ಸಂಪಾದಿಸಿದ 'ಕಾವ್ಯಾರ್ಥ ಪದಕೋಶ' (೧೯೮೮), ಜಿ. ಎಸ್. ಶಿವರುದ್ರಪ್ಪ ಹಾಗೂ ಎಸ್.ವಿದ್ಯಾಶಂಕರ ಜತೆಗೂಡಿ ಸಂಪಾದಿಸಿದ 'ವಾಕ್ಯಮಾಣಿಕ್ಯ ಕೋಶ' ಎನ್.ಮರಿಶಾಮಾಚಾರ್‌ರ 'ಲಲಿತ ಕಲಾ ಪದಕೋಶ' ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿದ 'ಸಂಗೀತಕ್ಕೆ ಸಂಬಂಧಿಸಿದ ಪದಕೋಶ', ಕೆ. ವಿ. ಸುಬ್ಬಣ್ಣನವರ 'ಸಿನೆಮಾರಂಗದ ಪದಕೋಶ', ಟಿ. ಕೇಶವಭಟ್ಟರು ಸಿದ್ಧಪಡಿಸಿದ 'ಹವ್ಯಕ ಶಬ್ದ ಮಂಜರಿ' ಹವ್ಯಕರ ಆಡುನುಡಿಯಲ್ಲಿ ಉಳಿದಿರುವ ಹಳಗನ್ನಡ ಶಬ್ದಗಳ ಸ್ವರೂಪವನ್ನು ತಿಳಿಸಿದ್ದಾರೆ. ಮುದೇನೂರು ಸಂಗಣ್ಣನವರ 'ಚಿಗಟೇರಿ ಪದಕೋಶ'ವು (೧೯೯೭) ಬಳ್ಳಾರಿ ಪ್ರದೇಶದ ಪ್ರಾದೇಶಿಕ ರೂಪಗಳನ್ನು ತಿಳಿಸಿಕೊಡುವ ಮೌಲಿಕವಾದ ಉಪಭಾಷಾಕೋಶವಾಗಿದೆ.

ತುಳು-ಕನ್ನಡ-ಇಂಗ್ಲಿಶ್ ಶಬ್ದಕೋಶಗಳು : ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರವು ಡಾ. ಯು. ಪಿ. ಉಪಾಧ್ಯಾಯವರ ಪ್ರಧಾನ ಸಂಪಾದಕತ್ವದಲ್ಲಿ ತುಳು ನಿಘಂಟು ಯೋಜನೆಯನ್ನು ಕೈಗೆತ್ತಿಕೊಂಡು ಇದೀಗ ಮುಗಿಸಿದೆ (೧೯೯೭). ತುಳು ನಿಘಂಟು ಆರು ಸಂಪುಟಗಳಲ್ಲಿ ಬಂದಿವೆ. ತುಳು ಪ್ರಮುಖ ದ್ರಾವಿಡ ಭಾಷೆಯಾದರೂ ಅದಕ್ಕೆ ಲಿಪಿಯಿಲ್ಲ ಕನ್ನಡ ಲಿಪಿಯನ್ನೇ ತುಳು ಭಾಷೆಯನ್ನು ಆಡುವವರು ಬರೆಹಕ್ಕೆ ಉಪಯೋಗಿಸುತ್ತಾರೆ. ಭಾರತ ಯಾವ ಲಿಪಿ ರಹಿತ ಭಾಷೆಗಳಲ್ಲಿಯೂ ಇಂತಹ ನಿಘಂಟುಗಳು ಈವರೆಗೂ ಸಿದ್ಧವಾಗಿಲ್ಲ. ನಿಘಂಟು ಕ್ಷೇತ್ರದಲ್ಲಿ ತುಳು ನಿಘಂಟಿಗೆ ವಿಶಿಷ್ಟ ಸ್ಥಾನವಿದೆ. ನಿಘಂಟು ರಚನೆಯ ಆಧುನಿಕ ವಿಧಿ ವಿಧಾನಗಳನ್ನನುಸರಿಸಿ ಇವು ಸಿದ್ಧವಾಗಿವೆ. ಸಾಮಗ್ರಿ ಸಂಗ್ರಹಿಸುವುದಕ್ಕಿಂತ ಪೂರ್ವದಲ್ಲಿ ನಿರೂಪಕರಿಗೆ ಕಮ್ಮಟ, ಮಾದರಿ ಸರ್ವೇಕ್ಷಣೆ ಮಾಡಲಾಗಿದೆ. ಸಾಮಗ್ರಿ ಸಂಗ್ರಹಿಸುವಾಗ ವಿಸ್ತೃತವಾದ ಕ್ಷೇತ್ರಕಾರ್ಯವನ್ನೊಳಗೊಂಡಿದೆ. ಸಾಮಗ್ರಿ ಸಂಗ್ರಹಿಸುವಾಗ ಶಿಷ್ಟ ಸಾಹಿತ್ಯ, ಜಾನಪದ ಹಾಗೂ ಉಪಭಾಷೆಗಳ ಬಳಕೆ, ಗಾದೆ, ಒಗಟು, ನುಡಿಗಟ್ಟುಗಳ ಉಲ್ಲೇಖ, ವೃತ್ತಿ, ಸ್ಥಳನಾಮಗಳು, ಕಲೆ, ವಿನೋದ, ನಂಬಿಕೆ, ಆಚರಣೆಗಳ ಬಗ್ಗೆ ವಿವರಣೆಗಳು ವ್ಯಾಕರಣ ಸಂಬಂಧಿ ವಿವರಣೆಗಳು ಬಂದಿವೆ. ಈ ನಿಘಂಟಿನ ಎಲ್ಲ ಶಬ್ದಗಳಿಗೂ ರೋಮನ್ ಲಿಪಿಯಲ್ಲಿ ಲಿಪ್ಯಂತರವನ್ನು ಹಾಗೆಯೇ ಇಂಗ್ಲಿಶ್ ಹಾಗೂ ಕನ್ನಡದಲ್ಲಿ ಅರ್ಥ ವಿವರಗಳನ್ನು ನೀಡಲಾಗಿದೆ. ಈ ನಿಘಂಟುಗಳು ತುಳು ಭಾಷಿಕ ಸಮುದಾಯದವರ ಬಹುದಿನಸ ಆಶೋತ್ತರಗಳನ್ನು ಈಡೇರಿಸಿದೆ. ಇದು ತುಳು ಭಾಷಿಕರ ಸಾಂಸ್ಕೃತಿಕ ಪದಕೋಶ ಆಗಿವೆ.

ಆಧುನಿಕ ಕಾಲದಲ್ಲಿ ಬಂದಿರುವ ನಿಘಂಟುಗಳನ್ನು ಪರಿಶೀಲಿಸಿದಾಗ ಅವು ವೈವಿಧ್ಯ ಪೂರ್ಣವಾಗಿವೆ. ಕನ್ನಡಿಗರ ತಿಳುವಳಿಕೆಯ ಮಟ್ಟವನ್ನು ವಿಸ್ತರಿಸುತ್ತಿವೆ. ಭಾಷಾ ಬಳಕೆಯ ಬೇರೆ ಬೇರೆ ವಲಯಗಳಲ್ಲಿ ವಿಶಿಷ್ಟ ಉದ್ದೇಶವುಳ್ಳ ಬಗೆ ಬಗೆಯ ನಿಘಂಟುಗಳು ರಚಿತವಾಗುತ್ತಿರುವುದು ಕನ್ನಡದ ಪುರೋಭಿವೃದ್ಧಿಗೆ ತೋರುಗಂಬವಾಗಿದೆ.

೭.೦೩ ಕನ್ನಡದಲ್ಲಿ ನಿಘಂಟು ಸಾಹಿತ್ಯದ ಅಧ್ಯಯನ

ಕನ್ನಡದಲ್ಲಿ ನಿಘಂಟುಗಳ ಬಗೆಗೆ ಈವರೆಗೆ ನಡೆದಿರುವ ಅಧ್ಯಯನ ಸಮೀಕ್ಷೆಯನ್ನು ಕೈಕೊಳ್ಳಬಹುದಾಗಿದೆ. ಪ್ರಾಚೀನ ನಿಘಂಟುಗಳು ಸಂಸ್ಕೃತದ ಮಾದರಿಯನ್ನನುಸರಿಸಿ ರಚನೆಯಾದವು. ಪಾಶ್ಚಿಮಾತ್ಯರ ಪ್ರಭಾವದಿಂದಾಗಿ ನಿಘಂಟುಗಳ ರಚನೆ ವ್ಯವಸ್ಥಿತವಾಗಿ ನಡೆಯಲ್ಪಟ್ಟವು. ಹೀಗೆ ಪರಂಪರೆಯಿಂದ, ಪಾಶ್ಚಾತ್ಯರಿಂದ ಪ್ರಭಾವಿತರಾಗಿ ವೈವಿಧ್ಯಮಯವಾದ ನಿಘಂಟುಗಳು ಕನ್ನಡದಲ್ಲಿ ರಚನೆಗೊಂಡವು. ಆದರೆ ನಿಘಂಟುಗಳ ಕುರಿತಾದ ಅಧ್ಯಯನ ತುಂಬ ಕಡಿಮೆಯೆಂದೇ ಹೇಳಬೇಕು. ಈವರೆಗೆ ನಡೆದಿರುವ ನಿಘಂಟುಗಳ ಕುರಿತಾದ ಅಧ್ಯಯನ ಕಕ್ಷೆಯನ್ನು ಎರಡು ರೀತಿಯಲ್ಲಿ ಗುರುತಿಸಿಕೊಳ್ಳಬಹುದೆನಿಸುತ್ತದೆ.

೧. ಗ್ರಂಥಗಳು

೨. ಲೇಖನಗಳು

೧. ಗ್ರಂಥಗಳು

ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೭೩ ರಲ್ಲಿ ಪ್ರಕಟವಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರ 'ಕನ್ನಡ ನಿಘಂಟುಶಾಸ್ತ್ರ ಪರಿಚಯ' ಕನ್ನಡ ನಿಘಂಟುಗಳ ಸ್ಥೂಲ ಪರಿಚಯ ಮಾಡಿಕೊಡುವ ಮೊದಲ ಗ್ರಂಥ ಇದಾಗಿದೆ. ಅನೇಕ ಬಗೆಯ ಕೋಶಗಳನ್ನು ರಚಿಸಿದ ಜಿ. ವೆಂಕಟಸುಬ್ಬಯ್ಯನವರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ಗ್ರಂಥವನ್ನು ರಚಿಸಿದ್ದಾರೆ. ಎಂಟು ಅಧ್ಯಾಯವನ್ನೊಳಗೊಂಡ ಈ ಗ್ರಂಥದಲ್ಲಿ ಭಾರತೀಯ ಭಾಷೆಗಳಲ್ಲಿ ನಿಘಂಟಿಗೆ ಇರುವ ಹಿನ್ನಲೆ, ನಿಘಂಟುಶಾಸ್ತ್ರ, ನಿರುಕ್ತ, ಭಾಷಾಶಾಸ್ತ್ರದ ಬೆಳವಣಿಗೆಯಿಂದ ನಿಘಂಟುಶಾಸ್ತ್ರದ ಮೇಲಾದ ಪ್ರಭಾವ, ನಿಘಂಟು ರಚನೆಯಶಾಸ್ತ್ರ, ಕನ್ನಡದಲ್ಲಿ ರಚಿತವಾದ ಕೆಲವು ನಿಘಂಟುಗಳ ಪರಿಚಯ, ನಿಘಂಟು ರಚನೆಯ ವಿವಿಧ ಹಂತಗಳು, ಪ್ರಾಚೀನದಿಂದ ಆಧುನಿಕದವರೆಗೆ ಕನ್ನಡ ನಿಘಂಟುಗಳು ಕಿರುಚರಿತೆ ಗ್ರಂಥದ ಅಧ್ಯಯನಕ್ಕೆ ಪೂರಕವಾಗಿರುವ ಆರು ಅನುಬಂಧಗಳಿವೆ. ಶ್ರೇಷ್ಠ ನಿಘಂಟುಕಾರನಾಗಲು ಇರಬೇಕಾದ ಅರ್ಹತೆಗಳು, ನಿಘಂಟನ್ನು ಉಪಯೋಗಿಸುವ ಬಗೆ, ಮೃಗ, ಪಕ್ಷಿ, ಕ್ರಿಮಿ, ಕೀಟ, ಗಿಡ, ಮರ ಇವುಗಳಿಗೆ ವಿವರಣೆಯನ್ನು ಕೊಡುವಲ್ಲಿ ನಿಘಂಟು ವಹಿಸುವ ಪಾತ್ರ ಕನ್ನಡದಲ್ಲಿ ಬಂದಿರುವ ಕೆಲವು ವಿಶಿಷ್ಟ ಕೋಶಗಳು, ತುಳು ನಿಘಂಟುಗಳು, ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿ ಇಂತಹ ಮೌಲಿಕ ವಿಷಯುಗಳನ್ನೊಳಗೊಂಡಿದೆ. ನಿಘಂಟು ಶಾಸ್ತ್ರದ ಸೈದ್ಧಾಂತಿಕ ಅಂಶಗಳು ಮತ್ತು ಪ್ರಾಯೋಗಿಕ ಅಂಶಗಳ ನಿರೂಪಣೆ ಈ ಗ್ರಂಥದಲ್ಲಿದೆ. ಇದು ವಿದ್ವಾಂಸರಿಗೆ, ಸಂಶೋಧಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಪರಾಮರ್ಶನ ಗ್ರಂಥವಾಗಿದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ೧೯೯೮ ರಲ್ಲಿ ಪ್ರಕಟವಾದ ಡಾ. ವಿಲ್ಯಂ ಮಾಡ್ತ ಹಾಗೂ ಆರ್. ವೈ. ಕುಲಕರ್ಣಿ ಅವರು ಜೊತೆ ಸೇರಿ ಬರೆದ 'ನಿಘಂಟು ರಚನಾ ವಿಜ್ಞಾನ' ಆರು

ಅಧ್ಯಾಯವನ್ನೊಳಗೊಂಡ ಈ ಗ್ರಂಥದಲ್ಲಿ ಮೊದಲು ಮೂರು ಅಧ್ಯಾಯಗಳಾದ ನಿಘಂಟು ವಿಜ್ಞಾನ, ನಿಘಂಟು ರಚನೆ, ಕನ್ನಡ ನಿಘಂಟುಗಳ ಬೆಳವಣಿಗೆ ಇವು ಸಾಮಾನ್ಯ ನಿಘಂಟು ಮತ್ತು ವೈವಿಧ್ಯತೆ, ನಿಘಂಟುಮ ಮತ್ತು ಅವುಗಳ ಸಂಯೋಜನೆ, ಭಾಷಾ ವೈವಿಧ್ಯತೆ ಮತ್ತು ನಿಘಂಟು ವಿಜ್ಞಾನ ಹಾಗೂ ನಿಘಂಟು ರಚನೆಯ ಮಾರ್ಗದರ್ಶಿ ಸೂತ್ರಗಳಾದ ಕ್ಷೇತ್ರಕಾರ್ಯ, ನಿಘಂಟುಮಗಳ ಆಯ್ಕೆ, ನಿಘಂಟುಮಗಳ ರಚನೆಯ ವಿಧಾನಗಳನ್ನೊಳಗೊಂಡಿದೆ. ನಿಘಂಟುಮಗಳ ವರ್ಗೀಕರಣವನ್ನು ಮುಖ್ಯವಾಗಿ ಬಹು ಕಾಲಿಕ ಮತ್ತು ಏಕಕಾಲಿಕ ಎಂದು ವಿಂಗಡಿಸಿ ಬಹುಕಾಲಿಕದಲ್ಲಿ ಐತಿಹಾಸಿಕ ಹಾಗೂ ವ್ಯುತ್ಪತ್ತಿಕ ನಿಘಂಟುಗಳು ಸಮಾವೇಶಗೊಳ್ಳುತ್ತವೆ. ಏಕಕಾಲಿಕದಲ್ಲಿ ಸಾಮಾನ್ಯ ಹಾಗೂ ನಿರ್ಬಂಧಿತ ನಿಘಂಟುಗಳು ಸಮಾವೇಶಗೊಳ್ಳುತ್ತವೆ. ಲೇಖಕರು ಉದಾಹರಣೆಗಳ ಮೂಲಕ ಆ ನಿಘಂಟುಗಳ ಅರ್ಥ ವಿವರಣೆಯನ್ನು ನಿರೂಪಿಸಿದ್ದಾರೆ. ನಂತರ ಕನ್ನಡ ನಿಘಂಟುಗಳ ಬೆಳವಣಿಗೆಯ ಬಗೆಗೆ ವಿವರಿಸುತ್ತ ಕನ್ನಡ ನಿಘಂಟುಗಳನ್ನು ಏಕಭಾಷಿಕ, ದ್ವಿಭಾಷಿಕ, ಬಹುಭಾಷಿಕ, ಪಾರಿಭಾಷಿಕ, ಸಂಪ್ರಬಂಧದಲ್ಲಿ ಬರುವ ಶಬ್ದಕೋಶಗಳು ಮತ್ತು ವೃತ್ತಿ ಪದಕೋಶಗಳೆಂದು ಆರು ವರ್ಗಗಳಲ್ಲಿ ವಿಂಗಡಿಸಿದ್ದಾರೆ.

ಇದೇ ಗ್ರಂಥದ ನಂತರ ಮೂರು ಅಧ್ಯಾಯಗಳು ವೃತ್ತಿ ಪದಕೋಶಗಳಿಗೆ ಸಂಬಂಧಪಟ್ಟಿವೆ. ವೃತ್ತಿ ಪದಕೋಶಗಳು ಭಾಷಿಕ ಸಮುದಾಯಗಳ ಸಂಸ್ಕೃತಿಯನ್ನು ತಿಳಿದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇವು ಒಂದು ವೃತ್ತಿಗೆ ಸಂಬಂಧ ಪಟ್ಟ ಸಮಗ್ರ ಪದಗಳನ್ನು ಸಂಗ್ರಹಿಸಿ, ವರ್ಗೀಕರಿಸಿ ಅರ್ಥ ವಿವರಣೆಯನ್ನು ಕೊಡುತ್ತವೆ. ಕನ್ನಡದಲ್ಲಿ ವೃತ್ತಿ ಪದಕೋಶಗಳು ತುಂಬ ಕಡಿಮೆ. (ಈಚೆಗೆ ಈ ಕೆಲಸ ನಡೆಯುತ್ತಿದೆ) ಲೇಖಕರು ಈ ಮೂರು ಅಧ್ಯಾಯಗಳಲ್ಲಿ ವೃತ್ತಿ ಪದಕೋಶಗಳ ಮಹತ್ವ, ಈವರೆಗೆ ಕನ್ನಡದಲ್ಲಿ ರಚಿತವಾದ ಮೂರು ವೃತ್ತಿ ಪದಕೋಶಗಳಾದ 'ಉಲ್ಲಾಳ ನರಸಿಂಗರಾವ್‌ರ 'A Kisamwar Glossary of Kanarese Words (೧೮೯೧) ಎಸ್. ಜಿ. ವಿರಕ್ತಮಠರ 'ಕಲಬುರ್ಗಿ ಜಿಲ್ಲೆಯ ಒಕ್ಕಲುತನ ವೃತ್ತಿ ಪದಗಳ ಅಧ್ಯಯನ' (೧೯೮೧) ಆರ್. ವೈ ಕುಲಕರ್ಣಿಯವರ 'A, Linguistics Analysis of Weavers Occupational Vocubulary in Kannada' (೧೯೮೪) ಇವುಗಳ ರಚನಾ ವಿಧಾನದ ಬಗೆಗೆ ತಿಳಿಸಿದ್ದಾರೆ. ವೃತ್ತಿ ಪದಕೋಶಗಳನ್ನು ರಚಿಸುವಾಗ ಸಂಶೋಧಕ ಕ್ಷೇತ್ರಕಾರ್ಯಕ್ಕೆ ಹೋಗಬೇಕಾಗುತ್ತದೆ. ಆ ವೇಳೆಯಲ್ಲಿ ಪ್ರಶ್ನಾವಳಿಗಳು ಪ್ರಮುಖ ಪಾತ್ರವಹಿಸುತ್ತವೆ. ನಿರೂಪಕರಿಂದ ಮಾಹಿತಿಗಳನ್ನು ಪಡೆಯಲು ಪ್ರಶ್ನಾವಳಿಯಲ್ಲಿ ಯಾವ ಯಾವ ಅಂಶಗಳಿರಬೇಕು ಎಂಬುದರ ಬಗ್ಗೆ ಉದಾಹರಣೆ ಸಮೇತವಾಗಿ ವಿವರಿಸಿದ್ದಾರೆ. ಕೃಷಿ ಪದಕೋಶ ಹಾಗೂ ನೇಕಾರರ ಪದಕೋಶದ ಪ್ರಶ್ನಾವಳಿಯ ಮಾದರಿಗಳನ್ನು ಕೊಟ್ಟಿದ್ದಾರೆ. ಈ ಗ್ರಂಥದಲ್ಲಿಯ 'ವೃತ್ತಿಪದ ಕೋಶ ಸ್ವರೂಪ ಮತ್ತು ರಚನೆ' ಎಂಬ ಲೇಖನ ತುಂಬ ಮೌಲಿಕವಾಗಿದೆ. ಬಹುಶಃ ಕರ್ನಾಟಕದಲ್ಲಿ ವೃತ್ತಿ ಪದಕೋಶದ ರಚನಾ ಸ್ವರೂಪವನ್ನು ತಿಳಿಸುವ ಮೊದಲ ಪ್ರಯತ್ನ ಇದಾಗಿದೆ. ವೃತ್ತಿಪದಕೋಶದಲ್ಲಿಯ ಪಾರಿಭಾಷಿಕ ಪದಗಳಾದ ವೃತ್ತಿಪದ, ನಿಘಂಟುಮ, ನಿಘಂಟು,

ಪದಕೋಶ, ವೃತ್ತಿಪದಕೋಶ ಇವುಗಳ ಅರ್ಥ ವಿವರಣೆಯನ್ನು ತಿಳಿಸಿ ವೃತ್ತಿ ಪದಕೋಶದಲ್ಲಿ ಪ್ರಧಾನಪದಗಳನ್ನು ದಾಖಲಿಸುವಿಕೆ, ಪರ್ಯಾಯ ರೂಪಗಳನ್ನು ಕೊಡುವ ರೀತಿ, ಅವುಗಳ ಸಂಯೋಜನೆ, ವರ್ಗೀಕರಣ ಮುಂತಾದ ವಿಷಯಗಳನ್ನು ಉದಾಹರಣೆ ಸಹಿತವಾಗಿ ಚರ್ಚಿಸಿದ್ದಾರೆ. ಕರ್ನಾಟಕದಲ್ಲಿ ವೃತ್ತಿಪದಕೋಶ ಯೋಜನೆಯನ್ನು ಯಾವ ರೀತಿಯಾಗಿ ಹಮ್ಮಿಕೊಂಡು ಕಾರ್ಯ ರೂಪಕ್ಕೆ ತರಬೇಕೆಂದು ಕಳಕಳಿಯಿಂದ ಹೇಳಿದ್ದಾರೆ. ವೃತ್ತಿ ಪದಕೋಶಗಳನ್ನು ರಚಿಸುವಾಗ ಈ ಗ್ರಂಥ ಕೈಪಿಡಿಯಂತೆ ತುಂಬ ಸಹಾಯಕವಾಗುತ್ತದೆ

ಭಾರತೀಯ ಭಾಷೆಗಳ ಕೇಂದ್ರ ಸಂಸ್ಥಾನವು (C. I. I. L) ೧೯೮೦ ರಲ್ಲಿ ಪ್ರಕಟಿಸಿದ 'Lexicography in India' ಭಾರತೀಯ ಭಾಷೆಗಳಲ್ಲಿ ನಿಘಂಟು ರಚನೆಯ ಬಗೆಗೆ ನಡೆಸಿದ ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಲೇಖನಗಳ ಸಂಕಲನವಾಗಿದೆ. ಈ ಸಂಕಲನ ಗ್ರಂಥದಲ್ಲಿ ಎರಡು ಭಾಗಗಳಿವೆ.

ಭಾಗ ಒಂದರಲ್ಲಿ ಭಾರತದ ಭಾಷೆಗಳಾದ 'ಅಸಾಮಿ', 'ಬೆಂಗಾಲಿ' (ಬಂಗಾಲಿ), 'ಗುಜರಾತಿ' 'ಹಿಂದಿ' 'ಕನ್ನಡ'. 'ಕಾಶ್ಮಿರಿ', ಮರಾಠಿ, ಓರಿಸ್ಸಾ, ಸಿಂಧಿ, ತಮಿಳ್ ಮತ್ತು ತೆಲುಗು ಈ ಭಾಷೆಗಳಲ್ಲಿ ರಚಿತವಾದ ಏಕಭಾಷಿಕ ಮತ್ತು ದ್ವಿಭಾಷಿಕ ಕೋಶಗಳ ಸಮೀಕ್ಷೆ ಮತ್ತು ರಚನಾ ವಿಧಾನಗಳ ಬಗೆಗೆ ನುರಿತ ವಿದ್ವಾಂಸರಿಂದ ಬರೆದ ಲೇಖನಗಳು ತುಂಬ ಉಪಯುಕ್ತವಾಗಿದೆ. ಇದರಲ್ಲಿ ಮೂರು ಲೇಖನಗಳು ಕನ್ನಡ ಕೋಶಗಳಿಗೆ ಸಂಬಂಧಪಟ್ಟಿವೆ. ಗುರುನಾಥ ಜೋಶಿಯವರ A, Brief Survey of Dictionary in Karnataka' ಎಂಬ ಲೇಖನದಲ್ಲಿ ಕನ್ನಡ ಕೋಶಗಳ ಸ್ಥೂಲ ಸಮೀಕ್ಷೆಯಿದೆ, ಎ. ಎಸ್. ಕೇದಿಲಾಯವರ 'History of Dictionaries in Kannada with special reference to Bilingual Dictionaries' ಇದರಲ್ಲಿ ಪ್ರಾಚೀನ ಮತ್ತು ಆಧುನಿಕ ದ್ವಿಭಾಷಿಕ ಕೋಶಗಳ ಸಂಕ್ಷಿಪ್ತ ಸಮೀಕ್ಷೆಯನ್ನೊಳಗೊಂಡಿದೆ. ಎಸ್. ಬಸವಾರಾಧ್ಯರ 'Preparation of Kannada-Kannada Dictionary on Historical Principles' ಈ ಬರೆಹದ ಐತಿಹಾಸಿಕ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸಿದ ನಿಘಂಟುಗಳ ರಚನಾ ವಿಧಾನದ ಬಗ್ಗೆ ತಿಳಿಸುತ್ತದೆ.

ಭಾಗ ಎರಡರಲ್ಲಿ ನಿಘಂಟು ರಚನೆಯ ಸಿದ್ಧಾಂತ ಮತ್ತು ತಂತ್ರಗಳ ಬಗ್ಗೆ ಸಂಬಂಧ ಪಟ್ಟಿರುವ ಎಂಟು ಲೇಖನಗಳಿವೆ. ನಿಘಂಟು ರಚನೆಯಲ್ಲಿ ಕಂಪ್ಯೂಟರದ ಪಾತ್ರ, ಹಿಂದಿ-ಇಂಗ್ಲಿಶ್ ಸಂಯೋಜಿತ ಕೋಶ, ದ್ವಿಭಾಷಿಕ ನಿಘಂಟು ರಚನೆಯ ಸಮಸ್ಯೆಗಳು, ಉಪಭಾಷಿಕ ಕೋಶಗಳ ರಚನೆ, ನಿಘಂಟು ರಚನೆಯ ಕೆಲವು ಸಮಸ್ಯೆಗಳು, ಸೋವಿಯತ್ ಯೂನಿಯನ್‌ದಲ್ಲಿ ನಿಘಂಟುಶಾಸ್ತ್ರದ ಬೆಳವಣಿಗೆಯ ತತ್ವಗಳು. ಆಧುನಿಕ ಭಾರತೀಯ ಭಾಷೆಗಳಲ್ಲಿ ನಿಘಂಟು ರಚನೆಯನ್ನು ಕುರಿತು ಕೆಲವು ಸಲಹೆಗಳು ಮುಂತಾದ ಅಂಶಗಳನ್ನೊಳಗೊಂಡ ಮೌಲಿಕ ಬರೆಹಗಳಿವೆ. ನಿಘಂಟುಶಾಸ್ತ್ರದ ಬಗೆಗೆ ಅಧ್ಯಯನ ಮಾಡುವ ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಮಹತ್ವದ ಒಳನೋಟಗಳನ್ನು ಕೊಡುತ್ತದೆ.

೨. ಲೇಖನಗಳು

ಕನ್ನಡ ನಿಘಂಟುಗಳನ್ನು ಕುರಿತಂತೆ ಗ್ರಂಥಗಳು ವಿರಳವಾದಂತೆ, ಲೇಖನಗಳೂ ವಿರಳವಾಗಿವೆ. ನಾಡಿನ ಬೇರೆ- ಬೇರೆ ಸಂ ಪತ್ರಿಕೆಗಳಲ್ಲಿ, ಅಭಿನಂದನ, ಸಂಸ್ಮರಣ ಗ್ರಂಥಗಳಲ್ಲಿ ಪ್ರಕಟವಾದ ಲೇಖನಗಳ ಅಧ್ಯಯನ ಸಮೀಕ್ಷೆಯನ್ನು ಈ ಭಾಗದಲ್ಲಿ ಮಾಡಬಹುದು.

ಡಿ. ಎಲ್. ನರಸಿಂಹಾಚಾರ್ಯರ 'ಕನ್ನಡದಲ್ಲಿ ಶಬ್ದರಚನೆ' ತುಂಬ ಮೌಲಿಕ ಲೇಖನವಾಗಿದೆ. (೧೯೭೧ ಪೀಠಿಕೆಗಳು- ಲೇಖನಗಳು) ಕನ್ನಡ ಶಬ್ದ ರಚನೆಯ ಸ್ವರೂಪವನ್ನು ಅದು ತಿಳಿಸಿಕೊಡುತ್ತದೆ. ಕೇಶಿರಾಜನ ಧಾತು ಪಾಠ ಕನ್ನಡಕೋಶ ರಚನೆಗೆ ತುಂಬ ನೆರವಾಗುತ್ತದೆ. ಡಿ. ಎಲ್. ಎನ್.ರವರು ಧಾತುಪಾಠದ ಬಗೆಗ ವಿವರವಾಗಿ ಚರ್ಚಿಸಿದ್ದಾರೆ. ಮೂಲ ರೂಪಗಳಿಗೆ ಬೇರೆ ಬೇರೆ ಪ್ರತ್ಯಯಗಳು ಸೇರಿ ಬೇರೆ ಬೇರೆ ಪದರಚನೆಗಳಿಗೆ ಕಾರಣವಾಗುತ್ತದೆ, ನಂತರ ಡಿ. ಎಲ್. ಎನ್.ರು ಕೃಲ್ಲಿಂಗಗಳು, ಕೃದಂತ ಭಾವನಾಮಗಳು, ನಾಮಧಾತುಗಳ ಬಗ್ಗೆ ಸಂಸ್ಕೃತ ಮತ್ತು ಕನ್ನಡ ವ್ಯಾಕರಣ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ವಿವೇಚನೆ ಮಾಡಿದ್ದಾರೆ. ಸಮಾಸಗಳು, ಯಮಳ ಶಬ್ದಗಳು, ಸಾದೃಶ್ಯ ಮೂಲ ರಚನೆಯ ಬಗ್ಗೆ ವಿವೇಚಿಸಿದ್ದಾರೆ. ಕನ್ನಡದಲ್ಲಿ ಅಂತ್ಯಪ್ರತ್ಯಯಗಳ ಪ್ರಯೋಗದಿಂದ ಹೊಸ ಶಬ್ದಗಳು ನಿರ್ಮಾಣವಾಗುತ್ತವೆ ಎಂಬುದನ್ನು ಡಿ. ಎಲ್. ಎನ್‌ರು ಹೇಳಿರುವುದನ್ನು ಗಮನಿಸಿದರೆ ಭಾಷಾ ಆಧುನೀಕರಣದ ದೃಷ್ಟಿಯಿಂದಲೂ ಈ ವಿಚಾರಗಳು ಪ್ರಸ್ತುತವೆನಿಸುತ್ತವೆ. ಈ ಬರಹದಲ್ಲಿ ಕನ್ನಡ ಶಬ್ದರಚನೆಯ (ಶಬ್ದ ಕಲ್ಪದ) ಒಂದು ಸ್ಪಷ್ಟ ಚಿತ್ರಣ ಭಾಷಾಭ್ಯಾಸಿಗಳಿಗೆ ದೊರೆಯುತ್ತದೆ.

ಡಿ. ಎಲ್. ಎನ್.ರು 'ಕನ್ನಡಕ್ಕೆ ಹೊಸ ನಿಘಂಟು' ಎಂಬ ಇನ್ನೊಂದು ಲೇಖನವನ್ನು ಬರೆದಿದ್ದಾರೆ. (೧೯೭೧ ಪೀಠಿಕೆಗಳು-ಲೇಖನಗಳು) ಪ್ರಾಚೀನದಿಂದ ಅರ್ವಾಚೀನದವರೆಗಿನ ಕನ್ನಡ ಕಾವ್ಯಗಳನ್ನು ಓದಿ ಅಲ್ಲಿ ಬಳಕೆಯಾದ ಒಂದೊಂದು ಪದಕ್ಕೂ ಒಂದೊಂದು ವಿಶೇಷ ಅರ್ಥವಿದೆ. ಎಷ್ಟೋ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಪದಗಳಿವೆ. ಅವುಗಳ ಬಳಕೆಯ ಪ್ರಯೋಗಗಳನ್ನು ಹುಡುಕಿ ಅರ್ಥ ಕೊಡಬೇಕಾದ ಹೊಸ ನಿಘಂಟು ಕನ್ನಡಕ್ಕೆ ತುಂಬ ಅಗತ್ಯವಿದೆ ಎಂದು ಹೇಳಿದ್ದಾರೆ. ಪ್ರಾಚೀನ ಕಾವ್ಯಗಳಲ್ಲಿ ಬಳಕೆಯಾದ ಕೆಲವು ಕ್ಲಿಷ್ಟ ಹಾಗೂ ಸಾಂಸ್ಕೃತಿಕ ಮಹತ್ವವಿರುವ ಪದಗಳಿಗೆ ಅರ್ಥವನ್ನು ಕಿಟೆಲ್ ಕೊಟ್ಟಿದ್ದಾನೆ. ಅದೇ ಕ್ರಮವನ್ನು ಹಿಡಿದು ಡಿ. ಎಲ್. ಎನ್.ರು ಮೇಗಾಳಿ, ಕಿಗ್ಗಾಳಿ, ಹುಡುಕುನೀರು, ಬಡಪ, ಓಹರಿ, ಸಾಹರಿ, ಒಲ್ಲಣಿಗ, ಮಾವಿಟ್ಟ ಇಂತಹ ರೂಪಗಳ ಅರ್ಥ ನಿರ್ಣಯವನ್ನು ಮಾಡಿದ್ದಾರೆ. ಕನ್ನಡ ಕಾವ್ಯ ಶಾಸನಗಳಲ್ಲಿ ಇಂತಹ ಸಾವಿರಾರು ಪದಗಳಿವೆ. ಅವುಗಳನ್ನು ಕೂಡಿ ಹಾಕಿ ಅವುಗಳಿಗೆ ಅರ್ಥ ನಿರೂಪಣೆ ಮಾಡುವ ಕೆಲಸ ಆಗಬೇಕಾಗಿದೆ. ಅದುವೇ ಡಿ. ಎಲ್. ಎನ್.ರು ಹೇಳಿದ ಹೊಸ ನಿಘಂಟು. ಅದಕ್ಕೆ ಬೇಕಾದ ಮಾರ್ಗದರ್ಶಕ ಸೂತ್ರಗಳನ್ನು ಆಚಾರ್ಯರು ರೂಪಿಸಿದ್ದಾರೆ. ಡಿ. ಎಲ್. ಎನ್‌ರು 'ನಿಘಂಟು ರಚನೆ' ಎಂಬ ಇನ್ನೊಂದು ಬರಹದಲ್ಲಿ (೧೯೭೧ ಪೀಠಿಕೆಗಳು-ಲೇಖನಗಳು) ಶಬ್ದ ಸ್ವರೂಪ, ಶಬ್ದ ವ್ಯಾಪಾರ, ನಿಘಂಟುಕಾರನ ಕರ್ತವ್ಯಗಳು ಮುಂತಾದ ನಿಘಂಟು ರಚನೆಯ ಸೈದ್ಧಾಂತಿಕ ಅಂಶಗಳ ಬಗ್ಗೆ ಈ ಬರಹದಲ್ಲಿ ಚರ್ಚಿಸಿದ್ದಾರೆ.

ಎಸ್. ಬಸವಾರಾಧ್ಯರ 'ನಿಘಂಟುಶಾಸ್ತ್ರ ಮತ್ತು ಕನ್ನಡ ನಿಘಂಟುಗಳು' ಎಂಬ ಲೇಖನ (ಸಂಶೋಧನ ೧೯೯೧) ನಿಘಂಟುಶಾಸ್ತ್ರದ ಅರ್ಥ, ಭಾರತದಲ್ಲಿ ನಿಘಂಟು ರಚನೆಯ ಕಾರ್ಯ ಪ್ರಾರಂಭವಾದ ಬಗೆ, ಸಂಸ್ಕೃತ ಕೋಶಕಾರರು ಕನ್ನಡ ಕೋಶಕಾರರ ಮೇಲೆ ಬೀರಿದ ಪ್ರಭಾವವನ್ನು ಸಂಕ್ಷಿಪ್ತವಾಗಿ ವಿವರಿಸಿ ಪ್ರಮುಖ ಇಂಗ್ಲಿಶ್ ಕೋಶಗಳಾದ ವೆಬ್ಸ್ಟರ್ ಕೋಶ, ಹಾಗೂ ಆಕ್ಸ್‌ಫರ್ಡ್ ಇಂಗ್ಲಿಶ್ ನಿಘಂಟುಗಳ ಸ್ವರೂಪವನ್ನು ವಿವರಿಸಿದ್ದಾರೆ. ನಂತರ ರನ್ನಕಂದ ಮೊದಲುಗೊಂಡು ಸೂರ್ಯ ಕವಿಯ ಕವಿಕಂಠಹಾರ ದವರೆಗಿನ ಎಲ್ಲ ಪ್ರಾಚೀನ ನಿಘಂಟುಗಳ ಬಗೆಗೆ ಸಂಕ್ಷಿಪ್ತವಾಗಿಯಾದರೂ ಚೊಕ್ಕಟ್ಟಾಗಿ ವಿವರಿಸಿದ್ದಾರೆ. ಎಸ್. ಬಸವರಾಧ್ಯರು 'ನಿಘಂಟುಗಳು' ಎಂಬ ಇನ್ನೊಂದು ಬರೆಹದಲ್ಲಿ (೧೯೯೩) ಸ್ವಾತಂತ್ರ್ಯೋತ್ತರದ ಕಾಲದಲ್ಲಿ ಬಂದಿರುವ ಕನ್ನಡ-ಕನ್ನಡ ನಿಘಂಟುಗಳು, ಕನ್ನಡ-ಇಂಗ್ಲಿಶ್ ನಿಘಂಟುಗಳು ಬೇರೆ ಬೇರೆ ಜ್ಞಾನಕ್ಷೇತ್ರದಲ್ಲಿ ಬಂದಿರುವ ಪಾರಿಭಾಷಿಕ ಕೋಶಗಳು ಆಡಳಿತಾತ್ಮಕ ಪದಕೋಶಗಳು ಇನ್ನು ಬೇರೆ ಬೇರೆ ಕ್ಷೇತ್ರದಲ್ಲಿ ಬಂದಿರುವ ನಿಘಂಟುಗಳ ಸ್ವರೂಪವನ್ನು ವಿವರಿಸಿದ್ದಾರೆ. ಸ್ವಾತಂತ್ರ್ಯೋತ್ತರದ ಕಾಲದಲ್ಲಿ ಬಂದಿರುವ ನಿಘಂಟುಗಳ ಸ್ಥೂಲ ನೋಟ ಈ ಬರೆಹದಲ್ಲಿದೆ.

ಹಿ. ಚಿ. ಶಾಂತವೀರಯ್ಯನವರು 'ಕನ್ನಡ ನಿಘಂಟುಗಳು' (ಹಕ್ಕಿನೋಟ) ಎಂಬ ಲೇಖನವನ್ನು ಬರೆದಿದ್ದಾರೆ (೧೯೮೫ ಕನ್ನಡದ ಅಳಿವು-ಉಳಿವು). ಇಲ್ಲಿ ಕನ್ನಡದಲ್ಲಿ ಪ್ರಕಟವಾದ ಪ್ರಾಚೀನ ಕೋಶಗಳು ಹಾಗೂ ಆಧುನಿಕ ಕೋಶಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಪ್ರಮುಖ ೫೧ ಕೋಶಗಳ ಬಗೆಗೆ ವಿವರಣೆ ಇಲ್ಲಿದೆ. ಪ್ರೊ. ಜಿ. ವೆಂಕಟಸುಬ್ಬಯ್ಯನವರು 'ಕನ್ನಡ ಮುನ್ನಡೆಯಲ್ಲಿ ನಿಘಂಟುಗಳು' (೧೯೮೫ ಕನ್ನಡದ ಅಳಿವು-ಉಳಿವು) ಎಂಬ ಲೇಖನದಲ್ಲಿ ಕನ್ನಡ ನಿಘಂಟು ಇನ್ನೂ ಕನ್ನೆನೆಲ. ಈ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ತುಂಬ ಇದೆ. ವಿವಿಧ ಕ್ಷೇತ್ರದಲ್ಲಿ ಪಾರಿಭಾಷಿಕ ಕೋಶಗಳು, ಸ್ಥಳನಾಮ ಕೋಶಗಳು, ಉಪಭಾಷಿಕ ಕೋಶಗಳು ತುರ್ತಾಗಿ ಸಿದ್ಧವಾಗಬೇಕಾಗಿವೆಯೆಂದು ಜಿ. ವೆಂ. ಅವರು ತುಂಬ ಕಳಕಳಿಯಿಂದ ತಮ್ಮ ಲೇಖನದಲ್ಲಿ ಹೇಳಿದ್ದಾರೆ. ಭವಿಷ್ಯದಲ್ಲಿ ಯಾವ ಯಾವ ನಿಘಂಟುಗಳು ಸಿದ್ಧವಾಗಬೇಕಾಗಿವೆ ಎಂಬುದರ ಬಗೆಗೆ ಸೂಚನೆಗಳು ಇಲ್ಲಿವೆ. ಕೆ. ನಾರಾಯಣರು 'ಕನ್ನಡ ಭಾಷೆಯಲ್ಲಿ ನಿಘಂಟು' ಎಂಬ ಲೇಖನದಲ್ಲಿ ನಿಘಂಟಿನ ಅರ್ಥ, ಬಗೆಗಳು ಹಾಗೂ ರಚನಾ ವಿಧಾನವನ್ನು ಹೇಳಿ ಕನ್ನಡದಲ್ಲಿ ಬಂದಿರುವ ನಿಘಂಟುಗಳ ಪರಿಚಯ ಮಾಡಿದ್ದಾರೆ. (೧೯೭೬). ನಂತರ ನಾರಾಯಣರು ಕನ್ನಡ ಭಾಷಾ ಬೆಳವಣಿಗೆಗೆ ಅಗತ್ಯವಾಗಿ ಬೇಕಾದ ಶಾಸನ ನಿಘಂಟು, ವ್ಯುತ್ಪತ್ತಿ ನಿಘಂಟು, ಪ್ರಾದೇಶಿಕ ಮತ್ತು ಉಪಭಾಷಾ ನಿಘಂಟು, ದ್ವಿಭಾಷಿಕ ನಿಘಂಟುಗಳು, ಸ್ಥಳ ಮತ್ತು ವ್ಯಕ್ತಿಸೂಚಿ ನಿಘಂಟುಗಳು, ವೃತ್ತಿ ಪದ ನಿಘಂಟುಗಳು, ಕನ್ನಡ ವ್ಯಾಕರಣ ಪದಕೋಶಗಳು ರಚಿತವಾಗಬೇಕಾಗಿವೆಯೆಂದು ಸಕಾರಣವಾಗಿಯೇ ಹೇಳಿದ್ದಾರೆ. ಲೇಖನದ ಕೊನೆಯಲ್ಲಿ ನಿಘಂಟುಶಾಸ್ತ್ರ ಮತ್ತು ಭಾಷಾಶಾಸ್ತ್ರಗಳ ಸಂಬಂಧವನ್ನು ಹೇಳಿದುದು ತುಂಬ ಸೂಕ್ತವಾಗಿದೆ.

ಡಾ. ವಿಲ್ಯಂ ಮಾಡ್ತ ಅವರು 'ಏಕಭಾಷಿಕ ನಿಘಂಟು ರಚನೆ' ಎಂಬ ಲೇಖನವನ್ನು ಬರೆದಿದ್ದಾರೆ (ಸಾರ್ಥಕ ೧೯೯೫). ವೈಜ್ಞಾನಿಕವಾಗಿ ನಿಘಂಟು ರಚನೆ ಮಾಡುವಲ್ಲಿ ಕ್ಷೇತ್ರಕಾರ್ಯ, ನಿಘಂಟಿಮಗಳ ಆಯ್ಕೆ ಮತ್ತು ನಿಘಂಟಿಮಗಳ ರಚನೆ ಈ ಮೂರು ವಿಧಾನಗಳು ಬಹುಮುಖ್ಯ ಪಾತ್ರವಹಿಸುತ್ತವೆ. ನಿಘಂಟುಗಳ ರಚನೆಯಲ್ಲಿ ಇವುಗಳನ್ನು ಯಾವ ರೀತಿಯಾಗಿ ಬಳಸಬೇಕು ಎಂಬುದರ ಬಗ್ಗೆ ಡಾ. ಮಾಡ್ತರವರು ಉದಾಹರಣೆಗಳ ಮೂಲಕ ನಿರೂಪಿಸಿದ್ದಾರೆ. ನಿಘಂಟಿಮಗಳು, ನಿಘಂಟಿಮದ ಸಮಾನಾರ್ಥಕ ರೂಪಗಳು ಮತ್ತು ನಿಘಂಟಿಮದ ವಿವರಣೆ ಈ ನಾಲ್ಕು ಅಂಶಗಳು ಪ್ರಮುಖ ಪಾತ್ರವಹಿಸುತ್ತವೆ. ಏಕಭಾಷಿಕ ಕೋಶಗಳನ್ನು ರಚಿಸುವಾಗ ನಿಘಂಟುಕಾರ ಗಮನಿಸಬೇಕಾದ ಅಂಶಗಳನ್ನು ಚರ್ಚಿಸಿದ್ದಾರೆ. ಡಾ. ಜಿ. ವಿ. ಮಹಿದಾಸರು 'ಕನ್ನಡದಲ್ಲಿ ನಿಘಂಟುಗಳು' ಎಂಬ ವಿಸ್ತಾರವಾದ ಲೇಖನವನ್ನು ಬರೆದಿರುವರು (ಸಾರ್ಥಕ ೧೯೯೫). ಇದರಲ್ಲಿ ರನ್ನಕಂದ ಮೊದಲುಕೊಂಡ ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸಿದ ಕನ್ನಡ-ಕನ್ನಡ ನಿಘಂಟು ಸಂಪುಟಗಳವರೆಗಿನ ಸಮೀಕ್ಷೆಯಿದೆ. ಈ ಲೇಖನದಲ್ಲಿ ಮೂರು ಭಾಗಗಳಿವೆ. ಅತಿ ಸಂಕ್ಷಿಪ್ತ ಏಕಭಾಷಿಕ ನಿಘಂಟುಗಳು (ಹಳಗನ್ನಡ ಮತ್ತು ನಡುಗನ್ನಡ ಕಾಲದ) ದ್ವಿಭಾಷಾ ನಿಘಂಟುಗಳು (ಮಿಶನರಿಗಳ ನಿಘಂಟು ಕಾರ್ಯ ಹಾಗೂ ಪ್ರಮುಖ ಮಿಶನರಿ ಕೋಶಗಳು) ಹಾಗೂ ವಿಸ್ತೃತ ಕನ್ನಡ- ಕನ್ನಡ ಕೋಶಗಳು ಮತ್ತು ಇತರ ಬೆಳವಣಿಗೆಗಳು ಇದರಲ್ಲಿ ಆಧುನಿಕ ಕೋಶಗಳ ಪಕ್ಷಿ ನೋಟವಿದೆ. ಕನ್ನಡ ಕೋಶಗಳ ಸ್ಥೂಲ ನೋಟವನ್ನು ತಿಳಿದುಕೊಳ್ಳಲು ಈ ಲೇಖನ ತುಂಬ ನೆರವಾಗುತ್ತದೆ.

ಪ್ರಾಚೀನ ನಿಘಂಟುಗಳಿಗೆ ನೇರವಾಗಿ ಸಂಬಂಧಿಸಿದಂತೆ ಕೆಲವು ಲೇಖನಗಳು ಬಂದಿವೆ. ಎನ್. ಬಸವಾರಾಧ್ಯರು ಪ್ರಾಚೀನ ಕನ್ನಡದ ಹತ್ತು ನಿಘಂಟುಗಳಾದ ರನ್ನಕಂದ ಶಬ್ದಮಣಿದರ್ಪಣಂ (ಸಹಜಂಗಳ್, ಧಾತು ಪ್ರಕರಣ, ಪ್ರಯೋಗಸಾರ) ಕರ್ಣಾಟಕ ಶಬ್ದಸಾರಂ, ಕರ್ಣಾಟಕ ನಿಘಂಟು, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ, ಕರ್ಣಾಟಕ ಶಬ್ದಮಂಜರಿ, ಕರ್ಣಾಟಕ ಸಂಜೀವನಂ, ಕರ್ಣಾಟಕ ಭಾರತ ನಿಘಂಟು, ಕವಿಕಂಠಹಾರ ಇವುಗಳನ್ನು ಶಾಸ್ತ್ರಶುದ್ಧವಾಗಿ 'ಹಳಗನ್ನಡದ ನಿಘಂಟು' ಎಂಬ ಹೆಸರಿನಲ್ಲಿ ಸಂಪಾದಿಸಿದ್ದಾರೆ (೧೯೭೬ ಡಿ. ವಿ. ಕೆ. ಮೂರ್ತಿ). ೪೫ ಪುಟಗಳ ಅಭ್ಯಾಸ ಪೂರ್ಣ ಪ್ರಸ್ತಾವನೆಯಲ್ಲಿ ಆಯಾ ನಿಘಂಟುಗಳ ಕಾಲ, ಕರ್ತೃ ಸಂಪಾದನೆಯ ವಿಧಾನ ಇತ್ಯಾದಿ ಅಂಶಗಳನ್ನು ಚರ್ಚಿಸಿದ್ದಾರೆ. ಗ್ರಂಥದ ಅಧ್ಯಯನಕ್ಕೆ ಪೂರಕವಾಗಿ ಪದ್ಯಗಳ ಅಕಾರಾದಿ, ಶಬ್ದಾರ್ಥ ಕೋಶ ತುಂಬ ನೆರವಾಗುತ್ತದೆ. ಶ್ರೀ ಎಸ್. ಶಿವಣ್ಣನವರು ಕ್ರಿ. ಶ. ೧೬೦೦ ರಿಂದ ೧೮೫೦ ರ ಕಾಲದವರೆಗೆ ಶಾಸ್ತ್ರ ಸಾಹಿತ್ಯ ಕೃತಿಗಳನ್ನು ಸಮೀಕ್ಷೆ ಮಾಡುವಾಗ ಆ ಕಾಲಧಲ್ಲಿ ಬಂದಿರುವ ಪ್ರಾಚೀನ ಏಳು ನಿಘಂಟುಶಾಸ್ತ್ರ ಕೃತಿಗಳಾದ ಭಾರತ ನಿಘಂಟು, ಚೆನ್ನ ಕವಿಯ ನಾನಾರ್ಥಕಂದ, ವಿರಕ್ತ ತೋಂಟದಾರ್ಯರ ಕರ್ಣಾಟಕ ಶಬ್ದಮಂಜರಿ, ಸೂರ್ಯ ಕವಿಯ ಕವಿಕಂಠಹಾರ, ಶೃಂಗಾರ ಕವಿಯ ಕರ್ಣಾಟಕ ಸಂಜೀವನ, ಲಕ್ಷ್ಮಣಶಾಸ್ತ್ರಿಗಳ ನಾಮಲಿಂಗಾನುಶಾಸನ ಟೀಕೆ, ಮುಮ್ಮಡಿ ಕೃಷ್ಣರಾಜರ ಚಾಮುಂಡಾಲಘು ನಿಘಂಟು ಈ ಕೋಶಗಳ ಬಗೆಗೆ ಸಮೀಕ್ಷೆ ಮಾಡಿದ್ದಾರೆ (ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ- ೫. ೧೯೮೨).

ಟಿ. ವಿ. ವೆಂಕಟಾಚಲಶಾಸ್ತ್ರಿಯವರು ಎರಡನೇಯ ಮಂಗರಾಜನ 'ಅಭಿನವಾಭಿಧಾನಂ' (ಮಂಗರಾಜ ನಿಘಂಟು) ದ ಬಗೆಗೆ ವಿವೇಚನೆ ಮಾಡಿದ್ದಾರೆ (ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ೫ ನೇ ಸಂಪುಟ ೧೯೮೧). ಮಂಗರಾಜನ ಕಾಲ (೧೩೯೮), ಕೃತಿಗಳು, ಕವಿಯ ವೈಯಕ್ತಿಕ ಚರಿತ್ರೆ, ಕೃತಿಯ ಸ್ವರೂಪದ ಬಗ್ಗೆ ಮೌಲಿಕ ವಿಚಾರಗಳನ್ನು ಹೇಳಿದ್ದಾರೆ. ವೆಂಕಟಾಚಲಶಾಸ್ತ್ರಿಯವರು ಅದೇ ಸಂಪುಟದಲ್ಲಿ 'ಕರ್ಣಾಟಕ ನಿಘಂಟು' ಹಾಗೂ 'ಕರ್ಣಾಟಕ ಶಬ್ದಸಾರ'ಗಳ ಕರ್ತೃತ್ವ, ಕಾಲ, ವಿಚಾರ, ಕೃತಿಗಳ ಪರಿಶೀಲನೆಯನ್ನೊಳಗೊಂಡ ಲೇಖನಗಳನ್ನು ಬರೆದಿದ್ದಾರೆ.

ಪ್ರೊ. ಎಂ. ಮರಿಯಪ್ಪಭಟ್ಟರು ಪರಿಷ್ಕರಿಸಿ ಪ್ರಕಟಿಸಿದ ಕಿಟೆಲ್ ನಿಘಂಟಿನ ನಾಲ್ಕು ಸಂಪುಟಗಳ ಬಗೆಗೆ ಎನ್. ಬಸವಾರಾಧ್ಯರು ಲೇಖನವೊಂದನ್ನು ಬರೆದಿದ್ದಾರೆ (ಸಾರ್ಥಕ ೧೯೯೫). 'ಕಿಟೆಲ್‌ರ ಕನ್ನಡ-ಇಂಗ್ಲಿಶ್ ನಿಘಂಟು ಒಂದು ಅವಲೋಕನ, ಕನ್ನಡ ನಿಘಂಟು ಕ್ಷೇತ್ರಕ್ಕೆ ಪ್ರೊ. ಭಟ್ಟರ ಕೊಡುಗೆಯನ್ನು ವಿವರಿಸಿ ಅವರ ಪರಿಷ್ಕರಣದ ಸಂಪುಟಗಳ ಸ್ವರೂಪದ ಬಗ್ಗೆ ಹೇಳಿದ್ದಾರೆ. ನಂತರ ಭಟ್ಟರ ಪರಿಷ್ಕರಣದ ಆವೃತ್ತಿಗಳಲ್ಲಿ ಉಳಿದಿರಬಹುದಾದ ಕೆಲವೊಂದು ದೋಷಗಳ ಬಗೆಗೆ ಉದಾಹರಣೆ ಸಹಿತವಾಗಿ ತಿಳಿಸಿದ್ದಾರೆ. ಕಿಟೆಲ್ ನಿಘಂಟನ್ನು ಅಭ್ಯಸಿಸುವವರಿಗೆ ಈ ಲೇಖನ ತುಂಬ ನೆರವಾಗುತ್ತದೆ.

ಟಿ. ವಿ. ವೆಂಕಟಾಚಲಶಾಸ್ತ್ರಿಯವರು 'ಸಂಸ್ಕೃತ ಮತ್ತು ಕನ್ನಡ ನಿಘಂಟುಶಾಸ್ತ್ರ' ಎಂಬ ಲೇಖನದಲ್ಲಿ (೧೯೮೮) ಸಂಸ್ಕೃತ ಮತ್ತು ಕನ್ನಡ ನಿಘಂಟುಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಸಂಸ್ಕೃತ ನಿಘಂಟುಕಾರರು ಕನ್ನಡ ಕೋಶಕಾರರ ಮೇಲೆ ಪ್ರಭಾವ ಬೀರಿದ ಬಗೆಯನ್ನು ತಿಳಿಸಿ ಕನ್ನಡದ ಪ್ರಾಚೀನ ಮತ್ತು ಆಧುನಿಕ ನಿಘಂಟುಗಳ ಸಾಮ್ಯ ವೈಷಮ್ಯಗಳ ಬಗ್ಗೆ ಮೌಲಿಕವಾದ ವಿಚಾರಗಳನ್ನು ಹೇಳಿದ್ದಾರೆ. ವಿಲ್ಯಂಮಾಡ್ತರವರು 'ನಿಘಂಟು ವಿಜ್ಞಾನ' (೧೯೮೯) ಎಂಬ ಲೇಖನದಲ್ಲಿ ನಿಘಂಟಿನ ಅರ್ಥ ಮತ್ತು ಸ್ವರೂಪದ ಬಗ್ಗೆ ತಾತ್ವಿಕವಾದ ಕೆಲವು ಅಂಶಗಳನ್ನು ಹೇಳಿದ್ದಾರೆ.

ಕನ್ನಡ ಕೋಶಗಳ ಬೆಳವಣಿಗೆ ಹಾಗೂ ಕನ್ನಡದಲ್ಲಿ ಬಂದಿರುವ ನಿಘಂಟುಗಳನ್ನು ಕುರಿತಾದ ಕೆಲವು ಬರೆಹಗಳು ಬಂದಿವೆ. ಎಂ. ರಾಜಗೋಪಾಲಾಚಾರ್ಯರು 'ಸಂಸ್ಕೃತ ಕೋಶಗಳ ಬೆಳವಣಿಗೆ' ಎಂಬ ಲೇಖನದಲ್ಲಿ (ಅಭಿಜ್ಞಾನ೧೯೯೫) ಸಂಸ್ಕೃತದಲ್ಲಿ ಬಂದಿರುವ ದಶ ನಿಘಂಟುಗಳ ಪರಿಚಯ ಮಾಡಿದ್ದಾರೆ. ಸಂಸ್ಕೃತ ಕೋಶಗಳಲ್ಲಿ ಪದಗಳು ಲಿಂಗಭೇದ, ಪ್ರತ್ಯಯಭೇದ, ಸಮಾಸ ಭೇದಗಳಿಂದ ನಿಷ್ಪನ್ನವಾಗಿ ಬೇರೆ ಬೇರೆ ಅರ್ಥ ಛಾಯೆಗಳನ್ನು ತಳೆದಿವೆ ಎಂಬುದರ ಬಗ್ಗೆ ಸ್ಪಷ್ಟಪಡಿಸಿದ್ದಾರೆ. 'ಸಂಸ್ಕೃತ ಕೋಶಶಾಸ್ತ್ರಕ್ಕೆ ಕರ್ನಾಟಕದ ಕೊಡುಗೆ' ಎಂಬ ಲೇಖನದಲ್ಲಿ ಪಾಂಡುರಂಗ ಭಟ್ಟರು (೧೯೯೫ ಸಾರ್ಥಕ) ಕನ್ನಡದ ಕವಿ, ಶಾಸ್ತ್ರಕಾರರು ಸಂಸ್ಕೃತದಿಂದ ಪ್ರೇರಣೆ ಪಡೆದು ಕೃತಿರಚನೆ ಮಾಡಿದರು. ಇದಕ್ಕೆ ನಿಘಂಟುಗಳೂ ಹೊರತಲ್ಲ. ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಸಂಪರ್ಕ ಬಹಳ ದಿವಸಗಳಿಂದ ಒಂದು ಇನ್ನೊಂದರ ಮೇಲೆ ಪ್ರಭಾವ

ಬೀರಿವೆ. ಸಂಸ್ಕೃತ ಕೋಶಕಾರರು ಕನ್ನಡ ಕೋಶಕಾರರ ಮೇಲೆ ಪ್ರಭಾವ ಬೀರಿದಂತೆ ಕನ್ನಡ ಕೋಶಕಾರರು ಸಂಸ್ಕೃತದ ಮೇಲೆ ಪ್ರಭಾವ ಬೀರಿದ್ದಾರೆ. ಸಂಸ್ಕೃತ ಕೋಶಶಾಸ್ತ್ರಕ್ಕೆ ಕರ್ನಾಟಕದ ಕೊಡುಗೆ ಯಾವ ಬಗೆಯದು ಎಂಬುದನ್ನು ಈ ಲೇಖನ ಸೋದಾಹರಣವಾಗಿ ತಿಳಿಸಿಕೊಡುತ್ತದೆ.

ತಾಳ್ತಜೆ ವಸಂತಕುಮಾರರು 'ನಾನಾರ್ಥ ಪದಕೋಶ' ಎಂಬ ಲೇಖನವು (ಅಭಿಜ್ಞಾನ-೧೯೯೫) ನಾನಾರ್ಥ ಕೋಶದ ರಚನೆಗೆ ಸಂಬಂಧಿಸಿದಂತೆ ತಾತ್ತ್ವಿಕ ಚರ್ಚೆಯನ್ನು ಒಳಗೊಂಡಿದೆ ಹಾಗೂ ಆನುಷಂಗಿಕವಾಗಿ ಕನ್ನಡ ಕಾವ್ಯ ಮೀಮಾಂಸೆಯ ಐದು ಪದಗಳನ್ನು ಒಳಗೊಂಡ ಪ್ರಾಯೋಗಿಕ ನಾನಾರ್ಥ ಪದಕೋಶವನ್ನು ಅಳವಡಿಸಿದೆ. ನಾನಾರ್ಥ ಪದಕೋಶದ ರಚನಾ ವಿಧಾನ ಹಾಗೂ ಪ್ರಯೋಜನಗಳ ಬಗೆಗೂ ಲಕ್ಷ್ಯವಿರಿಸುತ್ತ ಚಿಂತನೆಯನ್ನು ಬೆಳೆಸಲಾಗಿದೆ.

ತೀನಂ ಶ್ರೀಕಂಠಯ್ಯನವರು 'ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿ' ಯ ಬಗ್ಗೆ ಲೇಖನವನ್ನು ಬರೆದಿದ್ದಾರೆ (೧೯೫೮). ಎಸ್. ಎಸ್. ಅಂಗಡಿಯವರು 'ಕನ್ನಡದಲ್ಲಿ ವೃತ್ತಿ ಪದಕೋಶಗಳು' ಎಂಬ ಲೇಖನದಲ್ಲಿ (೧೯೯೫) ಕನ್ನಡದಲ್ಲಿ ಈವರೆಗೆ ಬಂದಿರುವ ವೃತ್ತಿಪದಕೋಶಗಳ ಸಮೀಕ್ಷೆಯನ್ನು ಮಾಡಿದ್ದಾರೆ. ಎಸ್. ಬಸವಾರಾಧ್ಯರು ಮಿಶನರಿ ಕಾಲದ ಪ್ರಮುಖ ಕೋಶಕಾರರಾದ ರೀವ್, ಕಿಟೆಲ್, ಜೀಗ್ಲರ್ ಇವರುಗಳ ನಿಘಂಟು ರಚನಾ ಕಾರ್ಯ, ಆ ಕಾರ್ಯಕ್ಕೆ ಕೈಹಾಕುವ ಮೊದಲು ಅವರಿಗಿರುವ ಸಾಮಾಜಿಕ ಒತ್ತಡ ಇತ್ಯಾದಿಗಳನ್ನು ಕುರಿತು ಲೇಖನವನ್ನು ಬರೆದಿದ್ದಾರೆ (೧೯೯೧ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ). ಎಸ್. ಬಸವಾರಾಧ್ಯರು 'ಕನ್ನಡ ನಿಘಂಟು ಕ್ಷೇತ್ರಕ್ಕೆ ತೀನಂ. ಶ್ರೀಯವರ ಕೊಡುಗೆ' ಎಂಬ ಲೇಖನದಲ್ಲಿ (ಶ್ರೀಕಂಠ ತೀರ್ಥ ೧೯೭೬). ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನೆಯ ಪ್ರಥಮ ಸಂಪಾದಕ ಸಮಿತಿಯ ಅಧ್ಯಕ್ಷರಾಗಿ ತೀನಂಶ್ರೀಯವರು ಪಟ್ಟ ಶ್ರಮ, ಶ್ರದ್ಧೆಯನ್ನು ವಿವರಿಸಿ ತೀನಂ ಶ್ರೀಯವರ ಶಬ್ದಾರ್ಥ ವಿವೇಚನೆ, ಪ್ರಯೋಗಗಳನ್ನು ಸೂಚಿಸುವ ರೀತಿ, ವಿರಾಮ ಚಿಹ್ನೆಗಳ ಬಗೆಗೆ ಅವರಿಗಿರುವ ಶ್ರದ್ಧೆ ಮುಂತಾದ ಅಂಶಗಳ ಬಗೆಗೆ ನಿರೂಪಿಸಿದ್ದಾರೆ. ಆದರ್ಶ ನಿಘಂಟುಕಾರ ಯಾವ ರೀತಿಯಾಗಿರಬೇಕು ಎಂಬುದನ್ನು ಈ ಲೇಖನ ತಿಳಿಸುತ್ತದೆ.

ಪಾದೇಕಲ್ಲು ವಿಷ್ಣು ಭಟ್ಟರು 'ತುಳುವಿನಲ್ಲಿ ನಿಘಂಟು ಕಾರ್ಯ' ಎಂಬ ಲೇಖನದಲ್ಲಿ (ಸಾರ್ಥಕ ೧೯೯೫) ತುಳುಭಾಷೆಗೆ ಸೇರಿದ ಮೂರು ಕೋಶಗಳಾದ ಮ್ಯಾನರ್‌ರ ತುಳು-ಇಂಗ್ಲಿಷ್ ಕೋಶ, ಎಂ. ಮರಿಯಪ್ಪ ಭಟ್ಟ ಮತ್ತು ಎ. ಶಂಕರ ಕೇದಿಲಾಯರು ಜೊತೆ ಸೇರಿ ಸಂಪಾದಿಸಿದ ತುಳು-ಇಂಗ್ಲಿಷ್ ಕೋಶ ಹಾಗೂ ಯು. ಪಿ. ಉಪಾಧ್ಯಾಯರ ಪ್ರಧಾನ ಸಂಪಾದಕತ್ವದಲ್ಲಿ ಹೊರಬರುತ್ತಿರುವ ತುಳು ನಿಘಂಟುಗಳು ಈ ಮೂರು ಕೋಶಗಳ ರಚನಾ ವಿಧಾನವನ್ನು ಸವಿಸ್ತಾರವಾಗಿ ವಿವರಿಸಿದ್ದಾರೆ. ಪ್ರೊ. ಎಂ. ಮರಿಯಪ್ಪ ಭಟ್ಟರು ಮತ್ತು ಡಾ. ಕೆ. ಎ. ಶಂಕರ ಕೇದಿಲಾಯರ ಜೊತೆ ಸೇರಿ ಸಂಪಾದಿಸಿದ 'ತುಳು-ಇಂಗ್ಲಿಷ್ ಶಬ್ದಕೋಶ'ದ ಬಗ್ಗೆ

ಪದ್ಮನಾಭ ಕೇಕುಣ್ಣಾ ಅವರು ಲೇಖನವನ್ನು ಬರೆದಿದ್ದಾರೆ. (ಸಾರ್ಥಕ ೧೯೯೫) ಈ ಕೋಶಕ್ಕೂ ಪೂರ್ವದಲ್ಲಿ ರಚಿತವಾದ ಮ್ಯಾನರ್ ಕೋಶಕ್ಕೂ ಇದಕ್ಕೂ ಇರುವ ಸಾಮ್ಯ ವೈಷಮ್ಯಗಳು ಈ ಕೋಶದ ರಚನಾವಿಧಾನ, ಲಿಪ್ಯಂತರ, ವರ್ಣಾನುಕ್ರಮ ಇತ್ಯಾದಿಗಳ ಬಗ್ಗೆ ವಿವೇಚನೆ ಮಾಡಿದ್ದಾರೆ. ದ್ವಿಭಾಷಿಕ ಕೋಶವೊಂದನ್ನು ವಿಮರ್ಶಾತ್ಮಕವಾಗಿ, ತೌಲನಿಕವಾಗಿ ಪರಿಶೀಲನೆ ಮಾಡಲು ಈ ಲೇಖನ ಮಾದರಿಯಾಗಿದೆ. ಪ್ರೊ. ಮರಿಯಪ್ಪಭಟ್ಟರು ಸಂಪಾದಿಸಿದ 'ಹವ್ಯಕ ಇಂಗ್ಲಿಷ್ ನಿಘಂಟಿನ' ಬಗ್ಗೆ ಪ್ರೊ. ಟಿ. ಕೇಶವಭಟ್ಟರು ಲೇಖನವನ್ನು ಬರೆದಿದ್ದಾರೆ (೧೯೯೫ ಸಾರ್ಥಕ). ಇದರಲ್ಲಿ ೪.೭೦೦ ಹವ್ಯಕ ಶಬ್ದಗಳು ಎಡೆ ಪಡೆದಿವೆ. ಕನ್ನಡ ಭಾಷಾಭ್ಯಾಸದಲ್ಲಿ ಈ ಕೋಶ ತುಂಬ ನೆರವಾಗುತ್ತದೆ.

ಎಂ. ವಿ. ಸೀತಾರಾಮಯ್ಯರವರ ೧೯೭೫ 'ಶಾಸ್ತ್ರ ಸಾಹಿತ್ಯ' ಎಂಬ ಗ್ರಂಥದಲ್ಲಿ ವ್ಯಾಕರಣ, ಛಂದಸ್ಸು, ಅಲಂಕಾರ ಶಾಸ್ತ್ರಗಳ ಬಗೆಗೆ ವಿವರಿಸಿ ಪ್ರಾಚೀನ ನಿಘಂಟುಗಳ ಬಗೆಗೆ ವಿವರಿಸಿದ್ದಾರೆ. ವಿಲ್ಯಂ ಮಾಡ್ತರವರ ಉಪನ್ಯಾಸ ಗ್ರಂಥವಾದ 'ಫರ್ಡಿನಾಂಡ್ ಕಿಟೆಲ್ ಜೀವನ ಸಾಧನೆ ಕೋಶರಚನೆ (೧೯೯೪) ಯಲ್ಲಿ ಎರಡು ಭಾಗಗಳಿವೆ. ಭಾಗ ಒಂದರಲ್ಲಿ ಕಿಟೆಲ್‌ರ ಜೀವನ ಸಾಧನೆಯ ಬಗೆಗೆ ವಿವರಣೆಯಿದ್ದರೆ ಭಾಗ ಎರಡರಲ್ಲಿ ಕಿಟೆಲ್ ಕೋಶದ ರಚನಾ ವಿಧಾನದ ಬಗೆಗೆ ಉದಾಹರಣೆ ಸಹಿತವಾಗಿ ನಿರೂಪಿಸಿದ್ದಾರೆ. ಕಿಟೆಲ್ ಕೋಶವನ್ನು ಅಭ್ಯಸಿಸುವಾಗ ಇದು ತುಂಬ ನೆರವಾಗುತ್ತದೆ. ಎಸ್. ಬಸವಾರಾಧ್ಯರು (೧೯೭೧) 'ನಿಘಂಟು ಕ್ಷೇತ್ರಕ್ಕೆ ಕಿಟೆಲರ ಕೊಡುಗೆ' ಎಂಬ ಲೇಖನದಲ್ಲಿ (ಕನ್ನಡಕ್ಕೆ ಕಿಟೆಲರ ಕೊಡುಗೆ) ಕಿಟೆಲ್ ಕೋಶದ ಸ್ವರೂಪ, ಅವರ ಸಾಧನೆ ಇತ್ಯಾದಿ ವಿಷಯದ ಬಗೆಗೆ ಚರ್ಚಿಸಿದ್ದಾರೆ. ಕೆ. ಕೆಂಪೇಗೌಡರು (೧೯೮೮) 'ಕೋಶವಿಜ್ಞಾನ ಎಂಬ ಲೇಖನದಲ್ಲಿ ಕೋಶದ ಅರ್ಥ, ಬಗೆಗಳು, ಕೋಶಗಳನ್ನು ರಚಿಸಿಕೊಳ್ಳುವ ವಿಧಾನದ ಬಗೆಗೆ ಲೇಖನವನ್ನು ಬರೆದಿದ್ದಾರೆ.

ಕನ್ನಡದಲ್ಲಿ ಈವರೆಗೆ ರಚಿತವಾದ ಎಲ್ಲ ಬಗೆಯ ನಿಘಂಟುಗಳಲ್ಲಿ ಅಭ್ಯಾಸಪೂರ್ಣವೂ, ವಿಸ್ತಾರವೂ ಆದ ಪ್ರಸ್ತಾವನೆಗಳಿವೆ. ಅವು ನಿಘಂಟುಗಳ ಅಧ್ಯಯನಕ್ಕೆ ತುಂಬ ಸಹಾಯಕಾರಿಯಾಗುತ್ತವೆ.

ಕನ್ನಡದಲ್ಲಿ ಈವರೆಗೆ ಬಂದಿರುವ ನಿಘಂಟುಗಳನ್ನು ಸಿದ್ಧವಾಗಬೇಕಾದ ನಿಘಂಟುಗಳೊಡನೆ ಹೋಲಿಸಿ ನೋಡಿದಾಗ ಆಗಿರುವ ಕೆಲಸ ಕಡಿಮೆಯೆಂದೇ ಹೇಳಬೇಕು. ಬೇರೆ ಬೇರೆ ನಿಘಂಟುಗಳ ರಚನೆಯ ಕಡೆಗೆ ಇನ್ನೂ ಕೋಶಕಾರರ ಪ್ರವೇಶವೇ ಆಗಿಲ್ಲ. ಬೇರೆ ಬೇರೆ ಜ್ಞಾನಕ್ಷೇತ್ರಗಳ ಸ್ಥೂಲ ಪರಿಚಯವಾಗಬೇಕಾದರೆ ವಿವರಣಾತ್ಮಕ ನಿಘಂಟುಗಳು ಅವಶ್ಯಕವಾಗಿವೆ. ಸಂಸ್ಕೃತಿ ಅಧ್ಯಯನಕ್ಕೆ ಸ್ಥಳನಾಮ, ವ್ಯಕ್ತಿನಾಮ, ಗ್ರಾಮೀಣ ಪದಕೋಶ, ಉಪಭಾಷಿಕ ಕೋಶಗಳು ನೆರವು ನೀಡುತ್ತವೆ. ಶಾಸ್ತ್ರಾಧ್ಯಯನಕ್ಕೆ ವ್ಯಾಕರಣ ಪರಿಭಾಷಾ ಕೋಶ, ಛಂದಶ್ಶಾಸ್ತ್ರ ಶಬ್ದಕೋಶ ತುಂಬ ಅಗತ್ಯ. ಕೊನೆಯದಾಗಿ ಒಂದು ಮಾತನ್ನು ಹೇಳಲೇಬೇಕು. ನಿಘಂಟು ರಚನೆ ಕೂಡಿ ಮಾಡುವ ಸಾಂಸ್ಥಿಕ ಕೆಲಸವಾದ್ದರಿಂದ ಸರಕಾರದ ಅನುದಾನ ಪಡೆಯುವ ಸಂಸ್ಥೆಗಳಲ್ಲಿ ಉದಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅಕಾಡೆಮಿಗಳಲ್ಲಿ ಖಾಯಂ ಆಗಿ ನಿಘಂಟು ನಿರ್ದೇಶನಾಲಯಗಳಿರಬೇಕು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನಿಘಂಟು ಇಲಾಖೆಯೆಂಬ ಪ್ರತ್ಯೇಕವಾದ ಅಸ್ತಿತ್ವಕ್ಕೆ ಬರಬೇಕು. ಅನುದಾನ ರಹಿತ ಸಂಸ್ಥೆಗಳು ನಿಘಂಟುರಚಿಸಲು ಮುಂದೆ ಬಂದಾಗ ಸರಕಾರ ವಿಪುಲ ಪ್ರಮಾಣದಲ್ಲಿ ಅನುದಾನ ನೀಡಬೇಕು. ಭಾಷೆ ಸಾಹಿತ್ಯ ಅಧ್ಯಯನಕ್ಕೆ ನಿಘಂಟುಗಳು ತಳಹದಿಯಿದ್ದಂತೆ ಹಾಗೂ ಅವು ಪ್ರಮುಖ ಆಕರ ಸಾಮಗ್ರಿಗಳಾಗುತ್ತವೆ. ನಿಘಂಟು ರಚನೆಯಲ್ಲಿ ಹೊಸ ದೃಷ್ಟಿಕೋನಗಳು ಮೂಡಿ ಬಗೆ ಬಗೆಯ ಕೋಶಗಳು ಸಿದ್ಧವಾಗಬೇಕಾಗಿವೆ.

೭.೦೪ ಕೋಶಾಧ್ಯಯನ ಸೂಚಿ

Akhmanova. O (Ed) 1972 Lexicography ; Theory and Method Moscow, State University

Alkasimi Ali. M 1977 Linguistic and Bilingual Dictionaries Leiden, E. J. Brill

Baker, Sheridan 1972 'The sociology of Dictionaries and the sociol ogy of words' in new aspects of Lexicography (Ed); by Howard D. Weinbrot Carbondale, southern Illinois University press, 138-151

Barnhart, clarence 1967 'Problems in editing commercial Monolingual dictionaries' Householders and saportaed prob lems in Lexicography, Bloomington 161-181

Basavaradhya. N. 1980 'Preparation of Kannada-Kannada Dictionary on Historical Principles' Lexicography in India (Ed); by : B. G Misra C I I L Mysore, 79-88

Bendix, E. H. 1966 'Componential Analysis of general Vocabulary' the semantic structure of a set of verbs in Eng lish, Hindi and Japanese I J A L 32 (No. 2, pt. 2)

Conklin, Harold C. 1967 'Lexicographical Treatment of Folk Taxonomies' in Householder and saporta. 119-141

Doroszewski, witold, 1973 'Elements of Lexicology and Semiotics' the Hague Mouton

Gleason, H. A. 1967 'The Relation of Lexicon and Grammar' in House holder and saporta 85-102

Gurunath Joshi 1980 'A Brief survey of Dictionary in Karnataka' Lexicography in India (Ed) by; B. G. Misra C. I. I. L Mysore, 60-69

Harkirat singh and Harject singh Gill 1980 A Note on Compiling Dialect Dictionaries, Lexicography in India (ed) by; B. G. Misra C. I. I. L Mysore, 168-69

Harrell, Richard S. 1967 'Some notes on Bilingual Lexicography' in House holder and saporta, 51-61

Henry, Frank W. 1968 'Lexical classes and semantics Universales' Pre sented at the LSA meeting

Hill, Archibald. A 1970 'Layman, Lexicographers and linguist's' Lan guage 46, 245-59

Hiroth Finngeir 1955 'Arrangement of meanings in Lexicography' Lingua 4, 413-424

Hoenigs wald, H. M 1969 'Lexicography and Grammar in House holder and saporta. 103-110

Householder Fred W. and Saporta, sol (Eds)- 1967 ' Problems in Lexicography' Bloomington, Indiana University press

Iannucci, James E. 1957 1958 'Meaning discrimination in bilingual dictionaries a new lexicographical technique' Modern Language Journal XLI (272-281) and XLII -1958 (232-234)

\- 1967 Meaning descrimination in bilingual dictionar- ies in Householder and saporta, 201-216

Karte S. M.	1965	lexicography, Annamalainagar Annamalai University
Kelkar, A. R.	1968	'The Anatomy of a Dictionary Entry' Indian Linguistic 29 142-149
-	1969	'The Anatomy of a Dictionary' Entry-II Linguistic 30, 50-64
-	1973	'Schope of Histrical Dictionary in Ghatageetal (Ed) Studies in Historical Sanskrit Lexicography 57-69
-	1980	Dictionaries of Modern Indian Languages; Assessment and recommendations Lexicography in India (Ed) by; B. G. Mirsa 199-227 C. I. I. L, Mysore
Kedilay, A. S.	1971	'Kittel's Dictionary and Tamil Dictionary' Kittle's Contribution to Kannada (Ed) by; V. D. Bendre and B. T. Desai Kittel college Dharwar
-	1980	'History of Dictionaries in kannada with special Reference to Bilingual Dictionaries' Lexicography in India (Ed) by; M. G, Misra C. I. I.L. Mysore 70-78
Krishnamurthy G. V. SR	1995	'Telugu Lexicography Anout line' Sarthaka prof. M. Mariappa Bhat (Commemorative Volume) (Ed) by : D. Shrikrishna Bhat Artikaje and others.

Kulkarni. R. Y.	1984	A Linguistic Analysis of weavers occupational vocabulary in Kannada (unpublished M.phil dessertation submitted to osmonia university Hydrabad)
Lehred, Adrienne,	1974	Semantic Fields and Lexical structure (North-Holland Lingustic series) Newyork ; America, Elsvier publishing coine
Malkiely,	1967	'A TypologicalClassification of Dictionaries on the basis of distinctive features' in house holder and saporta 24-33
Malone, kemp	1967	'Structural Linguistics and bilingual dictionaries' In house holder and saporta 111-118
Mathiot, Madeleine	1967	'The place of the Dictionary in linguistic Description' Language vol-43, 703-724
-	1973	'Grammatical problems in Lexicography, Grammatical versus Lexical status' in R. T. M. David and A. R. Duckert 39-44
Misra. B. G. (Ed)	1980	Lexicography in India C. I. I. L. Mysore
Rajagopalan N. V.	1980	'Research plan for the production of Dictionaries' by central Institute of Hindi, Agra
-	1980	'some Aspects and problems of Lexicography' Lexicography in India (Ed) B. G. Misra C. I. I. L, Mysore

Reddy. G. N.	1980	'Some problems in compiling Bilingual Dictionaries, Lexicography in India' (Ed) by B. G. Misra C. I. I. L Mysore
Robinson, Dow F	1969	'Manual for Bilingual Dictionaries 3 Volumes,' california summar Institute of linguistic
Sebeok, T. A.	1962	'Materials for a typology of Dictionarie's Lingua 11 363-374
Siddalingaih, T. B.	1995	' A surevey of Dictionaries in Tamil' 'Sarthaka Prof. M. Mariappa Bhat commemorative volume (Ed) by Dr. Shikrishna Bhat Artikaje and others prof Mariappa Bhat samsmarana samithi' Madras
Singh R. A.	1991	'An Introduction to Lexicography' C. I. I. L Mysore
Somashekarnair, P.	1995	'Malayalam Lexicography' A Brief Survey Sarthaka- Prof. M. Mariappa Bhat Commemorative Volume
Srinivasacharyulu B.	1980	'Dictionary Making Telugu' Lexicography in India (Ed) B. G. Misra C. I. I. L Mysore
Srivastava R. N and	1980	'Principles and problems in Lexicography Developed Gupta R. S in the Soviet Union Lexicography in India' (Ed) B. G. Misra C. I. I. L Mysore
Subramanium V. I	1971	Kittle's Influence on malayalam Lexicon Kittle's contribution to Kannada (Ed) V. D. Bendri and B. T Desai Kittle college Dharwar

Susie Andres	1980	'the Computer, A Tool for Dictionary making in India' Lexicography in India (Ed) M. G. Misra C. I. I. L Mysore
Swan son Donald	1967	'The selection of entries for a bilingual Dictionary' in Householder and saporta 63-77
Urdang L.	1933	'Review of problems in Lexicography' language 39 586-94
Weinbrot Howard D.	1972	'New Aspects of Lexicography,' Literary criticism Intellectual History and Social change carbondale southern Illinois university press.
Weinreich uriel	1963	'Lexicology in thomas A sebeok' Current Trends in Linguistics Vol I the Hague, Mounton 60-93
-	1967	'Lexicography Definition in Descriptive semantic's in Householder and saporta 25-44
Whittaker, Kenneth	1966	' Dictionaries' Bombay Asia publishing House
Zgusta, Ladislav	1967	' Multiword Lexical units' word 23 (Martinet-Vol) p 578
-	1971	'Manual of Lexicography' the Hague, Mouten and company
-	1973	'Lexicography' Generating words in Mc David R. I and Duckert A. R. 14-28

ಕನ್ನಡ ಗ್ರಂಥಗಳು

ಅಂಗಡಿ ಎಸ್. ಎಸ್. ೧೯೯೮ 'ಕುಂಬಾರ ವೃತ್ತಿ ಪದಕೋಶ' ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ವಿರಕ್ತಮಠ, ದೇಶನೂರು, ಬೆಳಗಾವಿ ಜಿಲ್ಲೆ

ವಿದ್ಯಾಂಮಾಧ್ವ, ಆರ್. ವೈ ಕುಲಕರ್ಣಿ ೧೯೯೪ 'ನಿಘಂಟು ರಚನಾ ವಿಜ್ಞಾನ' ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾಂ ಮಾಧ್ವ ೧೯೯೪ 'ಕಿಟೆಲ್ ಜೀವನ ಸಾಧನೆ ಕೋಶರಚನೆ' ಕ. ವಿ.ವಿ. ಹಂಪಿ

ವೆಂಕಟಸುಬ್ಬಯ್ಯ ಜಿ. ೧೯೯೩ 'ಕನ್ನಡ ನಿಘಂಟುಶಾಸ್ತ್ರ ಪರಿಚಯ', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖನಗಳು

ಅಂಗಡಿ ಎಸ್. ಎಸ್. ೧೯೯೮ 'ಕರ್ನಾಟಕದಲ್ಲಿ ಕ್ಷೌರಿಕರು ಮತ್ತು ಅವರ ವೃತ್ತಿಪದಗಳು' ಶೋಧನ ಪಾರ್ವತಮ್ಮ ಪ್ರಕಾಶನ, ಯರಝರವಿ

- ೧೯೯೮ ಕರ್ನಾಟಕದಲ್ಲಿ ಮೇದಾರರ ವೃತ್ತಿ ಪದಗಳು (ಅಪ್ರಕಟಿತ)

- ೧೯೯೮ ತುಳು ನಿಘಂಟು ಸಂಪುಟಗಳು (ಅಪ್ರಕಟಿತ)

ಕೆಂಪೇಗೌಡ ಕೆ. ೧೯೮೮ 'ಕೋಶವಿಜ್ಞಾನ' ಪ್ರಬುದ್ಧ ಕರ್ನಾಟಕ ಸಂ-೭೦ ಸಂಚಿಕೆ-೧ ಮೈಸೂರು ವಿಶ್ವವಿದ್ಯಾಲಯ

ಕುಲಕರ್ಣಿ ಬಿ. ಎಸ್. ೧೯೭೧ ಕಿಟೆಲ್ ಕೋಶ ಮತ್ತು ಪಂಪರಾಮಾಯಣ 'ಕನ್ನಡಕ್ಕೆ ಕಿಟೆಲ್‌ರ ಕೊಡುಗೆ' (ಸಂ) ವಾಮನಬೇಂದ್ರೆ, ಜಿ. ಟಿ. ದೇಸಾಯಿ ಕಿಟೆಲ್ ಕಾಲೇಜು, ಧಾರವಾಡ ಪು-೧೦೧-೪

ಕುಲಕರ್ಣಿ ಆರ್. ವೈ. ೧೯೮೮ 'ಕನ್ನಡದಲ್ಲಿ ವೃತ್ತಿಪದಕೋಶಗಳು' ಕರ್ನಾಟಕ ಭಾರತಿ ೨೦.೩-೪೫- ೫೦ ಕ. ವಿ. ಧಾರವಾಡ

- ೧೯೯೨ 'ವೃತ್ತಿಪದಕೋಶಗಳ ರಚನಾಕ್ರಮ' ಕರ್ನಾಟಕ ಭಾರತಿ ೨೪.೪-೩೫-೪೩ ಕ. ವಿ. ಧಾರವಾಡ

ಕೊಟ್ರಶೆಟ್ಟಿ ಎಂ. ಬಿ. ೧೯೭೧ 'ಕಿಟೆಲ್‌ಕೋಶದ ಮಾತೃಕೆಗಳು' ಕನ್ನಡಕ್ಕೆ ಕಿಟೆಲ್‌ರ ಕೊಡುಗೆ (ಸಂ) ವಾಮನಬೇಂದ್ರೆ, ಜಿ. ಟಿ. ದೇಸಾಯಿ ಕಿಟೆಲ್ ಕಾಲೇಜು, ಧಾರವಾಡ, ಪು-೯೫-೧೦೦

ಕೃಷ್ಣಭಟ್ಟ ಎಸ್. ೧೯೭೩ 'ಸಮಾನಪಾರಿಭಾಷಿಕ ಶಬ್ದಕೋಶದ ಅವಶ್ಯಕತೆ' ಸುಧಾ ೧೨- ೮-೧೯೭೩

ಕೃಷ್ಣಮೂರ್ತಿ ಕೆ. ೧೯೭೧ ಕಿಟೆಲ್‌ಕೋಶ ಮತ್ತು ಅಪ್ಟೆ ಕೋಶ ಕನ್ನಡಕ್ಕೆ ಕಿಟೆಲ್‌ರ ಕೊಡುಗೆ ಪುಟ-೧೨೦-೨

- ೧೯೭೪ 'ಕೋಶರಚನೆ' ಭಾರತೀಯ ಸಾಹಿತ್ಯ ಚರಿತ್ರೆ ಸಂ-೩ ಭಾಗ-೨ ಶಾಸ್ತ್ರಸಾಹಿತ್ಯ ಮೂಲ ಮಾರಿಸ್ ವಿಂಟರ್‌ನಿಟ್ಸ್ ಕ. ವಿ. ವಿ. ಧಾರವಾಡ

ಗಂಗಾಧರಾಚಾರ್ ಹೆಚ್. ಹೆಚ್. 'ವಿಶ್ವಕರ್ಮರ ಶಬ್ದಕೋಶ' ಸಾಧನೆ ಸಂಪುಟ-೧೫. ಸಂಚಿಕೆ-೨, ಬೆಂ. ವಿ. ವಿ.

ಗುಂಡಪ್ಪ ಎಲ್. 'ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು' ಕನ್ನಡ ನುಡಿ ೨೧-೨ ಪುಟ-೫೧-೫೨

ಚಿದಾನಂದಮೂರ್ತಿ ಎಂ. ೧೯೭೨ 'ಕನ್ನಡ ಶಬ್ದಸಾಗರ' (ಜೆ. ಎಂ. ಹನಸೋಗೆಯವರ ಕೃತಿ) ಹವ್ಯಕ ಪದ ಸಂಚಯ (ಟಿ. ಕೇಶವ ಭಟ್ಟರ ಕೃತಿಯ ವಿಮರ್ಶೆ) ಸಾಹಿತ್ಯ ವಾರ್ಷಿಕ

ಚೈತ್ರ ೧೯೭೪ 'ಕನ್ನಡ ಸಮಾನಾರ್ಥಕೋಶ' (ಜೆ. ಎಂ. ಹನಸೋಗೆಯವರ ಕೃತಿಯ ವಿಮರ್ಶೆ) ಸುಧಾ ೧೦-೧೧-೭೪

ಜವಳಿ ಬಿ. ಸಿ. ೧೯೭೧ 'ಕಿಟೆಲ್ ಕೋಶ ಹಾಗೂ ಬಸವಪುರಾಣ' ಕನ್ನಡಕ್ಕೆ ಕಿಟೆಲ್‌ರ ಕೊಡುಗೆ ಪು-೧೦೫-೧೩

ಜಾಗೀರದಾರ್ (ಸೀತಾರಾಮ್) ೧೯೬೬ 'ಅಮರಕೋಶದ ಒಬ್ಬ ಪ್ರಾಚೀನ ಕನ್ನಡ ವ್ಯಾಖ್ಯಾತ' ಕನ್ನಡ ಸಾಹಿತ್ಯ ಪರಿಷ್ಪತ್ರಿಕೆ ೬೧-೨ ಪು ೫೫-೬೦

ತಾತಾಚಾರ್ಯ ಆರ್. ೧೯೬೧ 'ಕಿತ್ತೇಳಿವೂ ಕನ್ನಡವೂ' ಕನ್ನಡ ಸಾಹಿತ್ಯ ಪರಿಷ್ಪತ್ರಿಕೆ ಪು-೨೩೩-೪೫

ನರಸಿಂಹಾಚಾರ್ ಡಿ. ಎಲ್. 'ಕನ್ನಡದಲ್ಲಿ ಶಬ್ದ ರಚನೆ'

- 'ಕನ್ನಡಕ್ಕೆ ಹೊಸ ನಿಘಂಟು'

-		'ನಿಘಂಟು ರಚನೆ' (ಪೀಠಿಕೆಗಳು ಲೇಖನಗಳು ಡಿ. ವಿ. ಕೆ. ಮೂರ್ತಿ ೧೯೭೧)
ನಾಗರಾಜಯ್ಯ ಹಂಪ	೧೯೭೬	'ಕನ್ನಡ ನಿಘಂಟು' ಸಾಹಿತ್ಯ ವಾರ್ಷಿಕ ೧೯೭೬
-	೧೯೭೧	'ಕುಮಾರವ್ಯಾಸ ನಿಘಂಟು' (ಎಸ್. ಕೆ. ಕುಲಕರ್ಣಿಯವರ ಕೃತಿ) ಶ್ರೀವತ್ಸ ನಿಘಂಟು (ಟಿ. ವಿ. ವೆಂಕಟಾಚಲಶಾಸ್ತ್ರೀ ವಿಮರ್ಶೆ) ಸಾಹಿತ್ಯ ವಾರ್ಷಿಕ
ನಾಗೇಗೌಡ ಎಚ್. ಎಲ್.	೧೯೭೦	'ಗ್ರಾಮೀಣ ಶಬ್ದಕೋಶದ ಅಗತ್ಯ' ಕನ್ನಡ ನುಡಿ ೩೩-೨೩ ಪುಟ- ೨
ನಾಯಕ ಹಾ. ಮಾ.	೧೯೭೯	'ತುಳುವಿಗೊಂದು ನಿಘಂಟು' ಪ್ರಜಾಮತ ೧೮-೧೧-೧೯೭೯
-	೧೯೯೭	ವೆಂಕಟಾಚಲಶಾಸ್ತ್ರೀಯವರ 'ಶ್ರೀವತ್ಸ ನಿಘಂಟು' ಶ್ರೀಮುಖ (ಟಿ. ವಿ. ವೆಂಕಟಾಚಲಶಾಸ್ತ್ರೀಯವರ ಅಭಿನಂದನ ಗ್ರಂಥ) (ಸಂ) ಡಾ ಪ್ರಧಾನ ಗುರುದತ್ತ ಮತ್ತು ಇತರರು
ನಾರಾಯಣ ಕೆ.	೧೯೭೬	'ಕನ್ನಡ ಭಾಷೆಯಲ್ಲಿ ನಿಘಂಟು' ಸಾಹಿತ್ಯಜೀವಿ (ಪ್ರೊ. ಜಿ. ವೆಂಕಟಸುಬ್ಬಯ್ಯ ಅಭಿನಂದನ ಗ್ರಂಥ) (ಸಂ) ಎಲ್. ಎಸ್. ಶೇಷಗಿರಿರಾವ್
ನಾರಾಯಣ ಕೆ. ವಿ.		'ಕನ್ನಡ ಕನ್ನಡ ನಿಘಂಟಿನ ಕಂಪ್ಯೂಟರೀಕರಣ ಕನ್ನಡ ಪದಕೋಶ'
-		'ಪದಕೋಶ' (ಪದಕೋಶದ ಬೆಳವಣಿಗೆ, ವ್ಯುತ್ಪತ್ತಿ ಪದಕೋಶ)
-		'ಪದಕೋಶ ಎರಡು ಬಗೆಗಳು'
-		'ಪದಕೋಶದಲ್ಲಿ ಒಳಚಲನೆ'
-		'ಪಾರಿಭಾಷಿಕ ಪದಗಳು'
-		'ಹೊಸಗನ್ನಡಕ್ಕೆ ಒಂದು ಹೊಸ ನಿಘಂಟು' ಭಾಷೆಯ ಸುತ್ತಮುತ್ತ (೧೯೯೮) ಪ್ರ ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು

ನಾರಾಯಣ ಪಿ. ವಿ.		'ರನ್ನ ನಿಘಂಟು' (ರನ್ನ ಕವಿಕಾವ್ಯ ವಿಮರ್ಶೆ ಪು- ೧೪೫-೧೫೨)
ನಾರಾಯಣರಾವ್ ಜಿ. ಟಿ	೧೯೮೫	'ಕನ್ನಡ ಅಭಿವರ್ಧನೆಯಲ್ಲಿ ವಿಶ್ವಕೋಶಗಳ ಕೊಡುಗೆ' ಕನ್ನಡದ ಅಳಿವು-ಉಳಿವು (ಸಂ) ಎಲ್. ಎಸ್. ಶೇಷಗಿರಿರಾವ್
ನಾವಡ ಎ. ವಿ.	೧೯೮೪	'ಗೋವಿಂದ ಪೈ ಅವರ ಭಾಷಾಪ್ರಯೋಗಗಳು' ವಿವೇಕ್ಷೆ ಕರ್ನಾಟಕ ಸಂಘ, ಪುತ್ತೂರು
ಪದ್ಮನಾಭ ಕೇ ಕುಣ್ಣಾಯ ಕೆ.	೧೯೯೫	ತುಳು ಇಂಗ್ಲಿಷ್ ಶಬ್ದಕೋಶ 'ಸಾರ್ಥಕ' (ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ) ಸಂ. ಡಾ. ಶ್ರೀ ಕೃಷ್ಣಭಟ್ ಅರ್ತಿಕಜೆ)
ಪಾಂಡುರಂಗ ಭಟ್ಟ	೧೯೯೫	'ಸಂಸ್ಕೃತಕೋಶ ಶಾಸ್ತ್ರಕ್ಕೆ ಕರ್ನಾಟಕದ ಕೊಡುಗೆ' 'ಸಾರ್ಥಕ' (ಪ್ರೊ. ಎಂ. ಮರಿಯಪ್ಪಭಟ್ ಸಂಸ್ಮರಣ ಗ್ರಂಥ)
ಪಾದೇಕಲ್ಲು ವಿಷ್ಣುಭಟ್ಟ	೧೯೯೫	'ತುಳುವಿನಲ್ಲಿ ನಿಘಂಟು ಕಾರ್ಯ' 'ಸಾರ್ಥಕ' (ಪ್ರೊ. ಎಂ. ಮರಿಯಪ್ಪಭಟ್ ಸಂಸ್ಮರಣ ಗ್ರಂಥ)
ಬಸವಾರಾಧ್ಯ ಎನ್.	೧೯೭೦	'ಕನ್ನಡ ನಿಘಂಟು ಕನ್ನಡ ಸಾಹಿತ್ಯ ಪರಿಷತ್ತಿನ ಅಪೂರ್ವ ಸಾಧನೆ' ಸುಧಾ ೨೭-೧೨-೭೦
-	೧೯೭೧	'ನಿಘಂಟು ಕ್ಷೇತ್ರಕ್ಕೆ ಕಿಟೆಲ್‌ರ ಕಾಣಿಕೆ' ಕನ್ನಡಕ್ಕೆ ಕಿಟೆಲ್‌ರ ಕಾಣಿಕೆ ಪ್ರ-ಕಿಟೆಲ್ ಕಾಲೇಜು ಧಾರವಾಡ
-	೧೯೭೬	'ಕನ್ನಡ ನಿಘಂಟು ಕ್ಷೇತ್ರಕ್ಕೆ ತೀನಂ ಶ್ರೀ ಅವರ ಕೊಡುಗೆ' ಶ್ರೀಕಂಠ ತೀರ್ಥ (ಪ್ರೊ. ತೀನಶ್ರೀ ಸ್ಮಾರಕಗ್ರಂಥ) (ಸಂ) ಎಂ. ಚಿದಾನಂದಮೂರ್ತಿ ಮತ್ತು ಇತರರು
-	೧೯೭೬	'ಜೀಗ್ಲರ್ ಫ್ರೆಡರಿಕ್' ಕನ್ನಡ ವಿಶ್ವಕೋಶ
-	೧೯೮೧	'ಸಿರಿಗನ್ನಡ ಅರ್ಥಕೋಶ (ಶಿವರಾಮ ಕಾರಂತ) ಕೃತಿ ವಿಮರ್ಶೆ)' ಪ್ರಜಾವಾಣಿ ೧-೧೧-೧೯೮೧
-	೧೯೯೧	'ರೀವ್, ಕಿಟೆಲ್, ಜಿಗ್ಲರ್ ಮುಂತಾದವರಿಂದ ಕನ್ನಡ ನಿಘಂಟು ಕಾರ್ಯ' ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ-6, ಬೆ. ವಿ. ವಿ.

- ೧೯೯೧ 'ನಿಘಂಟುಶಾಸ್ತ್ರ ಮತ್ತು ಕನ್ನಡ ನಿಘಂಟುಗಳು' 'ಸಂಶೋಧನ'
(ಎಂ. ಚಿದಾನಂದಮೂರ್ತಿ ಗೌರವ ಸಂಪುಟ)
ಸಂ- ಲಕ್ಷ್ಮಣ ತೆಲಗಾವಿ

- ೧೯೯೫ 'ಕಿಟೆಲ್‌ರ ಕನ್ನಡ ಇಂಗ್ಲಿಶ್ ನಿಘಂಟು ಒಂದು ಅವಲೋಕನ'
'ಸಾರ್ಥಕ' (ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ
ಸಂಪುಟ) (ಸಂ) ಶ್ರೀ ಕೃಷ್ಣಭಟ್ ಅರ್ತಿಕಜೆ

- 'ಕನ್ನಡ ನಿಘಂಟುಗಳು' ಕನ್ನಡ ನುಡಿ ೨೦-೧೯ ಪು-೨೭೦-೭೪

- 'ಕನ್ನಡ ನಿಘಂಟುಶಾಸ್ತ್ರ ಚಿನ್ನದ ಬೆಳಸು ಭಾಗ-೨'
ಹೊಂದನೆ-೩ ಪು-೪೭

- 'ಕನ್ನಡ ನಿಘಂಟು ಕೃಷ್ಣಶಾಸ್ತ್ರಿಗಳೂ' ಪ್ರಬುದ್ಧ ಕರ್ನಾಟಕ
೫೦-೧ ಪುಟ-೩೪೧-೪೩

ಬೇಂದ್ರೆ ಪಿ. ಡಿ. ೧೯೭೧ 'ಅಂಬಿಕಾತನಯದತ್ತ ಕಿಟೆಲ್ ಕೋಶಾಭ್ಯಾಸ ಕನ್ನಡಕ್ಕೆ
ಕಿಟೆಲ್‌ರ ಕೊಡುಗೆ' (ಸಂ) ಪಿ. ಡಿ. ಬೇಂದ್ರೆ ಬಿ.ಟಿ. ದೇಸಾಯಿ
ಕಿಟೆಲ್ ಕಾಲೇಜು, ಧಾರವಾಡ

ಮರಿಯಪ್ಪಭಟ್ ಎಂ. ೧೯೭೧ 'ಕಿಟೆಲ್‌ಕೋಶ ಮರು ಸಂಪಾದನೆ ಕನ್ನಡಕ್ಕೆ ಕಿಟೆಲ್‌ರ
ಕೊಡುಗೆ', ಕಿಟೆಲ್ ಕಾಲೇಜ್, ಧಾರವಾಡ

ಮಲ್ಲೇದೇವರು ಹೆಚ್. ಪಿ. ೧೯೭೧ 'ಕಿಟೆಲ್‌ಕೋಶದ ಅಚ್ಚಗನ್ನಡ ಶಬ್ದಗಳು' ಕನ್ನಡಕ್ಕೆ ಕಿಟೆಲ್‌ರ
ಕೊಡುಗೆ, ಕಿಟೆಲ್ ಕಾಲೇಜ್, ಧಾರವಾಡ

ಮಹೀದಾಸ ಬಿ. ಪಿ. ೧೯೯೫ 'ಕನ್ನಡದಲ್ಲಿ ನಿಘಂಟುಗಳು' ಸಾರ್ಥಕ
(ಪ್ರೊ. ಎಂ. ಮರಿಯಪ್ಪಭಟ್ ಸಂಸ್ಮರಣ ಗ್ರಂಥ)
(ಸಂ) ಶ್ರೀ ಕೃಷ್ಣಭಟ್ ಅರ್ತಿಕಜೆ

ಮಹೇಶ್ವರಯ್ಯ ಹೆಚ್. ಎಂ. 'ಮಲೆನಾಡಿನ ಕೃಷಿಕರ ವೃತ್ತಿ ಪದಕೋಶ' ಕರ್ನಾಟಕ ಭಾರತಿ
ಸಂಪುಟ-೧೮ ಸಂಚಿಕೆ-೧

ಮಾಡ್ತ ವಿಲ್ಯಂ - ೧೯೯೫ 'ವೃತ್ತಿಪದಕೋಶ ಸ್ವರೂಪ ಮತ್ತು ರಚನೆ' ಅಭಿಜ್ಞಾನ
(ಡಾ. ಕೆ. ಕೃಷ್ಣಮೂರ್ತಿ ಅಭಿನಂದನ ಗ್ರಂಥ)
ಸಂ ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ ಮತ್ತು ಇತರರು

- ೧೯೯೫ 'ಏಕಭಾಷಿಕ ನಿಗಂಟು ರಚನೆ' ಸಾರ್ಥಕ (ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ) (ಸಂ) ಶ್ರೀ ಕೃಷ್ಣ ಭಟ್ ಅರ್ತಿಕಜೆ

ಮಹಾದೇವಯ್ಯ ಟಿ. ಆರ್. ೧೯೯೧ 'ವಚನಕಾರರ ಶಬ್ದಕೋಶ' ಸಂಶೋಧನ (ಎಂ. ಚಿದಾನಂದಮೂರ್ತಿ ಗೌರವ ಸಂಪುಟ) ಸಂ: ಲಕ್ಷ್ಮಣ ತೆಲಗಾವಿ

- ಕನ್ನಡದಲ್ಲಿ ನಿಘಂಟುಶಾಸ್ತ್ರ ಸಾಧನೆ ಏಪ್ರಿಲ್, ಜೂನ್ ೧೬-೩೧)

ಮಾಲಗತ್ತಿ ದೇವಾನಂದ 'ಚಮ್ಮಾರರು ಮತ್ತು ಅವರ ಉಪಕರಣಗಳು ವಿಚಕ್ಷಣ ನೋಟ' ಸಾಧನೆ ಸಂ ೧. ೨ ಸಂಚಿಕೆ-೧೯

ರಘುನಾಥರಾವ್. ಆರ್. 'ಕರ್ನಾಟಕ ನಿಘಂಟುಗಳ ಸಂಸ್ಕರಣ' ೧- ೨ ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆ ಪು -೧೪೫- ೫೬

ರಾಜಗೋಪಾಲಾಚಾರ್ಯ ಎಂ. ೧೯೯೫ 'ಸಂಸ್ಕೃತ ಕೋಶಗಳ ಬೆಳವಣಿಗೆ' ಅಭಿಜ್ಞಾನ ೫೪ (ಡಾ. ಕೆ. ಕೃಷ್ಣಮೂರ್ತಿ ಅಭಿನಂದನ ಗ್ರಂಥ) ಸಂ. ಟಿ. ವಿ. ವೆಂಕಟಾಚಲಶಾಸ್ತ್ರಿ ಮತ್ತು ಇತರರು

ವಸಂತಕುಮಾರ ತಾಳ್ತಜೆ ೧೯೯೫ 'ನಾನಾರ್ಥ ಪದಕೋಶ' 'ಅಭಿಜ್ಞಾನ' (ಡಾ. ಕೆ. ಕೃಷ್ಣಮೂರ್ತಿ ಅಭಿನಂದನ ಗ್ರಂಥ) ಸಂ ಟಿ. ವಿ. ವೆಂಕಟಾಚಲಶಾಸ್ತ್ರಿ ಮತ್ತು ಇತರರು

ವೆಂಕಟಾಚಲಶಾಸ್ತ್ರಿ ಟಿ. ವಿ. ೧೯೮೧ 'ಕರ್ನಾಟಕ ನಿಘಂಟು' ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತೆ ಐದನೆಯ ಸಂಪುಟ ಮೈ. ವಿ. ವಿ.

- ೧೯೮೧ 'ಕರ್ನಾಟಕ ಶಬ್ದಸಾರ'

- ೧೯೮೮ 'ಸಂಸ್ಕೃತ ಮತ್ತು ಕನ್ನಡ ನಿಘಂಟು' ಸಾಹಿತ್ಯ ಪ್ರಬುದ್ಧ ಕರ್ನಾಟಕ, ಸಂಪುಟ-೭೦ ಸಂಚಿಕೆ-೧ ಮೈ. ವಿ. ವಿ.

- ೧೯೯೧ 'ಕನ್ನಡ ನಿಘಂಟು ರಚನೆಯಲ್ಲಿ ಶಬ್ದಾರ್ಥ ವಿಚಾರದ ಕೆಲವಂಶಗಳು' ಹಳೆಹೆಸ್ಸು ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ವೆಂಕಟಸುಬ್ಬಯ್ಯ ಜಿ.	೧೯೮೫	'ಕನ್ನಡದ ಮುನ್ನಡೆಯಲ್ಲಿ ನಿಘಂಟುಗಳು' ಕನ್ನಡದ ಅಳಿವು ಉಳಿವು (ಸಂ) ಎಲ್. ಎಸ್. ಶೇಷಗಿರಿರಾವ್ ಕನ್ನಡ ಭಾಷಾಭಿವೃದ್ಧಿ ಸಮೀಕ್ಷೆ, ಬೆಂಗಳೂರು
ಶರ್ಮಾ ತಿ. ತಾ	೧೯೪೩	'ಜಾನ್‌ಸನ್ ಅವರ ನಿಘಂಟು' 'ಕನ್ನಡನುಡಿ' ಕ. ಸಾ. ಪ. ಸಂಪುಟ-೫. ಸಂಚಿಕೆ-೧೫
ಶಾಂತವೀರಯ್ಯ ಹೀಚಿ	೧೯೭೦	'ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು' ಸಂಯುಕ್ತ ಕರ್ನಾಟಕ ೨೪-೧೨-೭೦
-	೧೯೮೫	'ಕನ್ನಡ ನಿಘಂಟುಗಳು (ಹಕ್ಕಿನೋಟ)' ಕನ್ನಡದ ಅಳಿವು-ಉಳಿವು (ಸಂ) ಎಲ್. ಎಸ್. ಶೇಷಗಿರಿ ರಾವ್ ಕನ್ನಡ ಭಾಷಾಭಿವೃದ್ಧಿ ಸಮೀಕ್ಷೆ, ಬೆಂಗಳೂರು
-	೧೯೯೫	'ಪ್ರೊ. ಎಂ. ಮರಿಯಪ್ಪಭಟ್ಟರ ಅರ್ಥಕೋಶ' ಸಾರ್ಥಕ (ಎಂ. ಮರಿಯಪ್ಪಭಟ್ಟ ಸಂಸ್ಮರಣ ಗ್ರಂಥ) ಸಂ ಶ್ರೀ ಕೃಷ್ಣಭಟ್ ಅರ್ತಿಕಜೆ
ಶಾನಭಾಗ ಡಿ. ಎಸ್.	೧೯೭೧	'ಕಿಟೆಲ್ ಕೋಶದ ಸಂಸ್ಕೃತ ಶಬ್ದಗಳು ಕನ್ನಡಕ್ಕೆ ಕಿಟೆಲ್‌ರ ಕೊಡುಗೆ', ಪ್ರ: ಕಿಟೆಲ್ ಕಾಲೇಜ್, ಧಾರವಾಡ
ಶಾಲಿನ ರಘುನಾಥ	೧೯೯೫	'ಅಭಿದಾನರತ್ನಮಾಲಾ ಕರ್ನಾಟಕ ಟೀಕೆ' ಸಾರ್ಥಕ (ಪ್ರೊ. ಎಂ. ಮರಿಯಪ್ಪಭಟ್ ಸಂಸ್ಮರಣ ಗ್ರಂಥ) ಸಂ ಶ್ರೀ ಕೃಷ್ಣಭಟ್ ಅರ್ತಿಕಜೆ
ಶಾಸ್ತ್ರೀ ಕೆ. ಜಿ.	೧೯೭೧	'ಕಿಟೆಲ್‌ಕೋಶ ಮತ್ತು ದಾಸ ಸಾಹಿತ್ಯ ಕನ್ನಡಕ್ಕೆ ಕಿಟೆಲ್‌ರ ಕೊಡುಗೆ', ಪ್ರ ಕಿಟೆಲ್ ಕಾಲೇಜ್, ಧಾರವಾಡ
ಶಿವಾನಂದ ಪಿ.		'ಒಕ್ಕಲುತನದ ವೃತ್ತಿಪದಕೋಶ' ೧ ಕರ್ನಾಟಕ ಭಾರತಿ ಸಂಪುಟ- ೧೦ ಸಂಚಿಕೆ-೪
		'ಕನ್ನಡ ವೃತ್ತಿಪದಕೋಶ ೩ ಎಲೆಬಳ್ಳಿ ತೋಟದ ವೃತ್ತಿಪದಗಳು ' ಕರ್ನಾಟಕ ಭಾರತಿ ಸಂಪುಟ-೧೦ ಸಂಚಿಕೆ- ೭
-		'ಕನ್ನಡವೃತ್ತಿ ಪದಕೋಶ' ೪ ಕರ್ನಾಟಕ ಭಾರತಿ ಸಂಪುಟ-೧೧ ಸಂಚಿಕೆ- ೪

-	1978	'ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿ ಈ ಕಾಲದ ಶಾಸ್ತ್ರಗ್ರಂಥಗಳು' ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ-4 ಬೆ. ವಿ. ವಿ.
ಶ್ರೀಕಂಠಯ್ಯ ತೀನಂ.	1958	'ಆಕ್ಸ್‌ಫರ್ಡ್ ಇಂಗ್ಲಿಶ್ ಡಿಕ್ಸ್‌ನರಿ' ಸಮಾಲೋಕ
ಶ್ರೀನಿವಾಸ ಹಾ. ಶ	1970	'ರೆ. ಎಫ್. ಕಿಟೆಲ್‌ರ ಕನ್ನಡ ಇಂಗ್ಲಿಶ್ ಅರ್ಥಕೋಶ' ಕನ್ನಡಪ್ರಭ 23-3-1970
ಶೆಟ್ಟಿ ಮ. ಗ	1969	'ಕನ್ನಡ ಕನ್ನಡ ನಿಘಂಟು ಒಂದು ಸಮೀಕ್ಷೆ' ಕನ್ನಡ ನುಡಿ ಕಸಾಪ ಬೆಂಗಳೂರು 32-2
ಶೇಷಾದ್ರಿ ಪಿ. ಆರ್.	1995	'ಔಷಧಿಕೋಶಂ' ಸಾರ್ಥಕ (ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ) ಸಂ.ಡಾ. ಶ್ರೀ ಕೃಷ್ಣಭಟ್ ಅರ್ತಿಕಜೆ
ಸರಸ್ವತಿ ವಿಜಯಕುಮಾರ್	1995	'ಅಭಿಧಾನ ವಸ್ತುಕೋಶ' 'ಸಾರ್ಥಕ' (ಪ್ರೊ. ಎಂ. ಮರಿಯಪ್ಪಭಟ್ ಸಂಸ್ಮರಣ ಗ್ರಂಥ) ಸಂ ಶ್ರೀ ಕೃಷ್ಣಭಟ್ ಅರ್ತಿಕಜೆ
ಸೇಡಿಯಾಪು ಕೃಷ್ಣಭಟ್		'ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಮಾದರಿ ಪುಟಗಳು'
-		'ಅತ್ತಿಗೆ'
-		'ತುಳುವಿನ ವಿಶಿಷ್ಟ ಎಕಾರದ ಬಗೆಗೆ ತುಳು ನಿಘಂಟುವಿಗೆ ಪತ್ರಗಳು' ವಿಚಾರ ಪ್ರಪಂಚ (ಸಂ) ಪಾದೇಕಲ್ಲು ವಿಷ್ಣುಭಟ್ ಕರ್ನಾಟಕ ಸಂಘ ಪುತ್ತೂರು, ದ. ಕ. 1992
ಸೋಮಶೇಖರ್	1971	'ಕಿಟೆಲ್‌ರ ಶಬ್ದಕೋಶದಲ್ಲಿಯ ಕೆಲವು ಹಿಂದಿ ಶಬ್ದಗಳ ಅರ್ಥಪರಿವರ್ತನೆ' 'ಕನ್ನಡಕ್ಕೆ ಕಿಟೆಲ್‌ರ ಕೊಡುಗೆ ಪ್ರ- ಕಿಟೆಲ್ ಕಾಲೇಜ್, ಧಾರವಾಡ
ಹನಸೋಗೆ ಜೆ. ಎಂ.	1972	'ಕನ್ನಡ ಸಾಹಿತ್ಯದಲ್ಲಿ ನಿಘಂಟುಗಳು ವರ್ಗೀಕರಣ' ಕನ್ನಡ ನುಡಿ- 3 ಕನ್ನಡ ಸಾಹಿತ್ಯ ಪರಿಷತ್ತು

೭.೦೫ ಕನ್ನಡೇತರ ಭಾರತೀಯ ಭಾಷೆಗಳಲ್ಲಿ ಮಿಶನರಿ ಕೋಶಗಳು

1. Dr. Miles Bronson's **Assamese-English Dictionary** (1801)
2. **Dictionaire Tamoul - Francais** by : C. J. Beschi. The first lithographic editing of the Tamil-French dictionary printed in paris it was compiled by Father beschi in 1774, second ed 1845 paris
3. **English-Telugu dictionary** by : C. P. Brown (1852)
4. **A Vacabulary of English and Tamil words** by : Innocent Nicholas. The first English-Tamil dictionary (1807)
5. **A Vocabulary of Bangalee and English** by : Mohan prasad Thankur (1811)
6. **Dictionary of Marthi** by : William Carey (1811)
7. **Bāngla- Iṅgrāji Abhidhān** (vol. I) a, Bengali-English dictionary by : William Carey Vol. II, (1825)
8. * **Abhidhān,** a Bengali dictionary by : Ramchandra V. Vidyavag (1818)
9. **Bidyā hā ra bāli,** a Bengali encyclopaedia by : Felix Carey, don of William Carey
10. **Telugu Nighaṇṭuvu** by : A. D. Campbell, a Telugu-English dictionary (1821)
11. * **A Grammar and a dictionary of the Maratha language** CMS prepared by : the Pandits of the Bombay Native School Book Society. (1825)
12. * Bahujanap Alli sitarama Charyulu prepared the Telugu- Telugu dictionary **Śabdaratanākaramu**
13. **Maharasṭra Bha śe ca Kośa,** popularly known as pandtaca kosa (Marathi-Marathi dictionary) The project began in 1825. Assisted by : many pandits. Editor : Jagannathahastri Kramavant

* ಈ ಸಂಕೇತ ಹಾಕಿದ ಕೋಶಗಳು ಮಿಶನರಿಗಳಲ್ಲ ಆದೇ ಕಾಲಘಟ್ಟದಲ್ಲಿ (೧೮೦೦-೧೯೦೦) ರಚಿತವಾದವು

14. Males worth's **Marathi-English Dictionary** prepared along with pandit Kosa published by : Bombay Education Society (1868)

15. * Suppliment of **Paṇḍiti Kośa** the Marathi lexicon, edited by : jagannath Shastri kramavant

16. **English-Teloogoo Dictionary,** pt. I prepared by : j. C. Morris pt. II (1899)

17. **Oḍiya Bhāsārthobhidhāna** (part-I), Oriya dictionary prepared by : A. Sutton and Bhubanananda Nyayalamkar, oriss Mission press, part-II, V (1843)

18. **The Manual Dictionary of the Tamil language** in 4 Vols by : Chandrashekhar pantitar : ed by : Rev Levi spoulding, AISo known as " Jaffna Dictionary" the first and comprechensive Tamil dictionary with 58,500 entries

19. **Latin-Greek-Tamil Cum latin-French-Tamil Dictionary** by : L. Dupuis and L. Mousset. The best known Multilingual dictionary with Tamil as the target language. Designed primarily for the use of European evangelists.

20. **English Punjabi Dictionary,** probably the first English Punjabi dictionary. Prepared by : Captain Starky (1853)

21. **Tamil-English Dictionary** by : Rev. Miron Winslowv (1862)

22. Dr. Elmasly of scotland arrived in Kashmir forwork on the Kashmiri language. He compiled a **Kashmiri Dictionary.**

23. * Hattiyangandi NayanRao complied on **etymological dictionary of Konkani** (1863)

24. G. Padmanabha Pillai complied of **Śabdatarāvaḻi,** the most popular dictionary of Malayalam

25. **Inrāji Asamiya śabda kóśa** an English-Assamese dictionary, by : Mrs. S. R. Ward

26. **Miftah-ut-tarikh** a biographical dictionary in Persian by : T. W. Beale.

27. * Gopinath Nanda compiler of the **Sabda Tattvabodh** an etymological dictionary of oriya (1868)

28. **Malayalam English Dictionary** by : Herman Gunderty (1872)

29. * **Narma-Kosa** or **Gujarati-sabdartha samgraha** a monumental dictionary of the Gujarati language prepared by : Narmada. (1873)

30. **Hindi-Tamil Dictionary** by : Thomas Anthony Pillai the best known, perhaps the earliest, dictionary of Hindi and Tamil

31. **Dictionary of Kashmiri proverbs and sayings** by the rev J. Hintan Knowles published by the education society press, Bombay (1885)

32. * **Sabda Ratnakaramu** by : Bahajanapalli sitaramacaryulu. A Telugu. Telugu dictionary in alphabetical order

33. **Diccinario konkani portugues philologico-etymologico** (Konkani-Portuguese philogical and Etymological dictionary) by : Monsignor sebastiao Radolfo Dalgado (1893)

34. Father sylvester Menezes compiled an **English-Konkani Dictionary** (1894)

35. **A Dictionary of Tamil proverbs** compiled by : John Lazarus, A collection of Tamil proverbs chiefly from literary sources (1894)

36. **Punjabi-English Dictionary** this is the first Punjabi English Dictionary prepared by : Mayya singh (1895)

37. **Hem Kośa** an etymologicl dictionary of Assamese by : Hemchandra Barua (1900)

38. * **A Dictionary : English and Nepali** by : Gangadhar Shastri Benaras. (1903)

೭.೦೬ ಪಾರಿಭಾಷಿಕ ಪದಕೋಶ

(ಕನ್ನಡ -ಇಂಗ್ಲಿಶ್)

ಅರ್ಥ	Meaning
ಅರ್ಥಘಟಕ	Lexical Meaning
ಅರ್ಥಮಗ್ಗಲು	Dimension
ಅರ್ಥವ್ಯಾಪ್ತಿ	Semantic range
ಅರ್ಥವಿಜ್ಞಾನ	Semantics
ಅರ್ಥ ವಿವರಣೆ	Semantic Content
ಅರ್ಥವಿಶೇಷಣೆ	Nuance
ಅಧಿಕೃತ ಭಾಷೆ	Standard language
ಅನಿಯಮಿತ	Irregular
ಅನಿಯಮಿತ ರೂಪ	Irregular form
ಅನುಕ್ರಮಿತ	Concordance
ಅನೇಕಾರ್ಥತೆ	Polysemy
ಅನೇಕಾರ್ಥ ರೂಪ	Polysemos form
ಅಪ್ರಚಲಿತ	Obsolete
ಅಪೂರ್ಣ	Partial
ಅಮೂರ್ತ ರೂಪ	Abstraction
ಆಕೃತಿಮಾ	Morpheme
ಆಕೃತಿಮಾ ವಿಜ್ಞಾನ	Morphology
ಆಡುನುಡಿ	Colloguial language

ಆವೃತ್ತಿ	Frequency
ಉದ್ದಿಷ್ಟಭಾಷೆ	Target Language
ಉದ್ಧರಣೆ	Quotation
ಉಪನಮೂದು	Sub-entrie
ಉಪಭಾಷೆ	Dialect
ಉಪಭಾಷಾ ಕೋಶ	Dialect dictionary
ಏಕಭಾಷಿಕ ಕೋಶ	Monolingual dictionary
ಐತಿಹಾಸಿಕ ಪದಕೋಶ	Historical Dictionary
ಕಾಗುಣಿತ	Spelling
ಕಾಲಿಕ ಉಪಭಾಷೆ	Temporal dialect
ಕ್ರಮಾತ್ಮಕ	Syntagmatically
ಕ್ಷೇತ್ರಕಾರ್ಯ	Field work
ಗಾತ್ರ	Size
ಗ್ರಾಂಥಿಕ	Cotextual
ಗ್ರಾಮ್ಯ	Jargon / Slang
ಜ್ಞಾತಿ ಪದ	Cognate word
ತಂತ್ರ	Technique
ತೌಲನಿಕ ಪದಕೋಶ	Comparative dictionary
ದತ್ತ	Data
ದ್ವಿಭಾಷಿಕ ಪದಕೋಶ	Bilingual dictionary
ಧ್ವನಿಮಾ	Phoneme
ಧ್ವನಿಮಾವಿಜ್ಞಾನ	Phonology

ಧ್ವನ್ಯಾತ್ಮಕ ಲಿಪಿ	Phonetic Script
ಧ್ವನಿ ವಿಜ್ಞಾನ	Phonetics
ನಮೂದು	Entrie
ನಮೂದುಗಳ ಆಯ್ಕೆ	Selection of entries
ನಮೂದುಗಳ ಜೋಡನೆ	Arrangement of entries
ನಿಘಂಟು ಕೋಶ	Lexicon
ನಿಘಂಟುಕಾರ	Lexicographer
ನಿಘಂಟು ರಚನಾ ವಿಜ್ಞಾನ	Lexicography
ನಿಘಂಟುಶಾಸ್ತ್ರ	Lexicology
ನಿಘಂಟಿಮ	Lexeme
ನಿಘಂಟಿಮ ಅರ್ಥ	Sememe
ನಿಘಂಟಿಮ ರೂಪ	Lemma
ನಿಯಮಸಿದ್ಧ ರೂಪ	Canonical form
ನಿರೂಪಕ	Informant
ನಿಷೇಧಾರ್ಥಕ	Nagative
ನಿರ್ದೇಶಕಗಳು	Directions
ನಿರ್ದೇಶಕಾರ್ಥ	Denotation meaning
ನಿರ್ಬಂಧಿತ ಪದಕೋಶ	Restricted dictionary
ನುಡಿಗಟ್ಟು	Idiom
ನುಡಿಘಟಕಗಳು	Figures of speech
ಪಠ್ಯ	Text
ಪದ	Word

ಪದಕೋಶ	Dictionary / Vocabulary
ಪದಪುಂಜ	Phrase
ಪದ ರಚನೆ	Word formation
ಪದ ಸಮುಚ್ಚಯ	Set Combination
ಪರಿಕಲ್ಪನೆ	Concept
ಪಾರಿಭಾಷಿಕ ಪದಕೋಶ	Dictionary of Technical terms
ಪ್ರಧಾನಪದ/ ಮುಖ್ಯ ನಮೂದು	Head word
ಪ್ರಭೇದ	Type
ಪ್ರಶ್ನಾವಳಿ	qestionnaire
ಪ್ರಾಚೀನ ರೂಪ	Orchaic form
ಪೂರಕ ಅರ್ಥ	Satellite meaning
ಬಹುಭಾಷಾ ಪದಕೋಶ	Multilingual dictionary
ಬಹುಕಾಲಿಕ ಪದಕೋಶ	Diachronic dictionary
ಬದ್ಧ ಆಕೃತಿಮಾ	Bound morpheme
ಭಾಷಾ ಸಮುದಾಯ	Speech Community
ಭಾಷಿಕ ಸಂಧರ್ಭ	Linguistic Context
ಭಿನ್ನಾರ್ಥಕ ಲಕ್ಷಣ	Criterial feature
ಬೃಹತ್‌ಕೋಶ	Thesaurus
ಮೂಲರೂಪ	Basic form
ಮೃತಭಾಷೆ	Dead Language
ರೂಪವರ್ಗ	Form class
ರೂಪಾವಳಿ	Paradigm

ರೂಪಾವಳಿಯಾತ್ಮಕ	paradigmatically
ಲಿಪಿಮಾ	Grapheme
ವರ್ಣಾವೃತ್ತಿ	Alphabetical arrangement
ವಾಕ್ಯವಿಜ್ಞಾನ	Syntax
ವಿಭಕ್ತಿ	Inflection
ವಿವರಣೆ	Gloss
ವಿವರಣಾತ್ಮಕ ಪದಕೋಶ	Descriptive dictionary
ವಿರುದ್ಧಾರ್ಥ	Antonymy
ವಿಶ್ವಕೋಶ	Encylopaedic
ವೃತ್ತಿಪದ	Professional term
ವೃತ್ತಿಪದ ಕೋಶ	Dictionary of Professional terms/ Occupational Vocabulary
ವೃತ್ತಿಪದ ಸಂಯೋಜನೆ	Collation of professional terms
ವೃತ್ತಿ ಪರಿಭಾಷೆ	Register of Profession
ವೈದೃಶ್ಯಾತ್ಮಕ ಪದಕೋಶ	Contrastive Dictionary
ವ್ಯಕ್ತಿಭಾಷೆ	Idiolect
ವ್ಯಾಕರಣಾರ್ಥ	Grammatical Meaning
ವ್ಯುತ್ಪತ್ತಿ	Etymology
ವ್ಯುತ್ಪತ್ತಿ ಪದಕೋಶ	Etymological Dictionary
ಶಬ್ದಕೋಶ	Dictionary
ಶಬ್ದಾರ್ಥ	Word meaning
ಶಬ್ದಾರ್ಥ ಕೋಶ	Glossary

ಶಬ್ದ ರೂಪ	Parts of Speech
ಶಬ್ದೋಚ್ಚಾರಣೆ	Word Pronunction
ಶೈಕ್ಷಣಿಕ ಶಬ್ದಕೋಶ	Academic/Pedagogical dictionary
ಶೈಲಿಯಾರ್ಥಕ	Stylistic meaning
ಶ್ರೇಣಿ	Series
ಶ್ರೇಣಿಬದ್ಧವಾಗಿ	Hierarchically
ಸಂಕ್ಷೇಪ	Abbreviation
ಸಂಗ್ರಹ	Corpus/stock
ಸಂಗ್ರಹಕಾರ	Collector
ಸಂದರ್ಭ	Context
ಸಮಾನರೂಪತೆ	Homonymy
ಸಮಾನಾರ್ಥಕ	Equivalent
ಸಮಾನಾರ್ಥಕತೆ	Synonymy
ಸಮಾಸ	Compound
ಸಂಯೋಜಕ	Connector
ಸಾಧಿತ	Derivation
ಸಾಧಿತ ರೂಪ	Derived Form
ಸಾಮಾಜಿಕ ಸಂದರ್ಭ	Social Context
ಸಾಮಾನ್ಯ ಪದಕೋಶ	General Dictionary
ಸಾಂದರ್ಭಿಕ	Contextual
ಸಾಂದರ್ಭಿಕಾರ್ಥ	Contextual meaning
ಸಾಹಿತ್ಯಿಕ ಭಾಷೆ	Literary language

ಸೀಮಿತ ಭಾಷೆ	Meta language
ಸೂಚಿ	Indice
ಸೂಚ್ಯಾರ್ಥ	Connotation

(ಇಂಗ್ಲಿಶ್ - ಕನ್ನಡ)

Abbreviation	ಸಂಕ್ಷೇಪ
Abstraction	ಅಮೂರ್ತರೂಪ
Academic dictionary	ಶೈಕ್ಷಣಿಕ ಪದಕೋಶ
Antonymy	ವಿರುದ್ಧಾರ್ಥಕ
Archaic Form	ಪ್ರಾಚೀನರೂಪ
Basic form	ಮೂಲರೂಪ
Bilingual dictionary	ದ್ವಿಭಾಷಿಕ ಪದಕೋಶ
Bound morpheme	ಬದ್ಧ ಆಕೃತಿಮಾ
Canonical form	ನಿಯಮ ಸಿದ್ಧರೂಪ
Cognate	ಜ್ಞಾತಿಪದ
Collation of lemma	ವೃತ್ತಿಪದಗಳ ಸಂಯೋಜನೆ
Collector	ಸಂಗ್ರಹಕಾರ
Colloquial language	ಆಡುನುಡಿ
Comparative dictionary	ತೌಲನಿಕ ಪದಕೋಶ
Compound	ಸಮಾಸ
Concept	ಪರಿಕಲ್ಪನೆ

Concordance	ಅನುಕ್ರಮಿತ
Connector	ಸಂಯೋಜನೆ
Connotation	ಸೂಚ್ಯಾರ್ಥ
Context	ಸಂದರ್ಭ
Contextual meaning	ಸಾಂದರ್ಭಿಕ ಅರ್ಥ
Contrastive dictionary	ವೈದೃಶ್ಯಾತ್ಮಕ ಪದಕೋಶ
Corpus	ಸಾಮಗ್ರಿ
Co-textual	ಗ್ರಾಂಥಿಕ
Criterial feature	ಭಿನ್ನಾರ್ಥಕ ಲಕ್ಷಣ
Date	ದತ್ತ
Dead language	ಮೃತ ಭಾಷೆ
Denotation	ನಿರ್ದೇಶಕಾರ್ಥ
Designation	ನಿರ್ದೇಶಕಾರ್ಥ
Derivation	ಸಾಧಿತ
Derived form	ಸಾಧಿತರೂಪ
Descriptive dictionary	ವಿವರಣಾತ್ಮಕ ಪದಕೋಶ
Diachronic dictionary	ಬಹುಕಾಲಿಕ ಪದಕೋಶ
Dialect	ಉಪಭಾಷೆ
Dialect dictionary	ಉಪಭಾಷಾ ಕೋಶ
Dictionary	ಪದಕೋಶ / ಶಬ್ದಕೋಶ
Dictionary of Professional terms	ವೃತ್ತಿಪದಕೋಶ
Dictionary of technical terms	ಪಾರಿಭಾಷಿಕ ಪದಕೋಶ

Dictum	ಸೂಕ್ತಿ
Dimension	ಅರ್ಥಮಗ್ಗಲು
Directics	ನಿರ್ದೇಶಕಗಳು
Encylopaedia	ವಿಶ್ವಕೋಶ
Entrie	ನಮೂದು
Equivalent	ಸಮಾನಾರ್ಥಕ
Etymology	ವ್ಯುತ್ಪತ್ತಿ
Etymological dictionary	ವ್ಯುತ್ಪತ್ತಿ ಪದಕೋಶ
Field work	ಕ್ಷೇತ್ರಕಾರ್ಯ
Figures of speech	ಮಾತಿನ ಘಟಕಗಳು
Form Class	ರೂಪವರ್ಗ
Frequency	ಆವೃತ್ತಿ
General Dictionary	ಸಾಮಾನ್ಯ ಪದಕೋಶ
Gloss	ವಿವರಣೆ
Glossary	ಶಬ್ದಾರ್ಥಕೋಶ
Grammatical meaning	ವ್ಯಾಕರಣಾರ್ಥ
Grapheme	ಲಿಪಿಮಾ
Head Word	ಪ್ರಧಾನಪದ
Hierarchically	ಶ್ರೇಣಿಬದ್ಧ
Historical-dictionary	ಐತಿಹಾಸಿಕ ಪದಕೋಶ
Homonymous form	ಸಮರೂಪ
Homonymy	ಸಮಾನರೂಪಕತೆ

Hyponymy	ನಾನಾರ್ಥಕತೆ
Idiolect	ವ್ಯಕ್ತಿಭಾಷೆ
Idiom	ನುಡಿಗಟ್ಟು
Idixical meaning	ನಿರ್ದೇಶಕಾರ್ಥ
Index	ಸೂಚಿ
Inflection	ವಿಭಕ್ತಿ
Informant	ನಿರೂಪಕ
Irregular	ಅನಿಯಮಿತ
Irregular form	ಅನಿಯಮಿತ ರೂಪ
jargon	ಗ್ರಾಮ್ಯ
Lemma	ನಿಘಂಟಿಮರೂಪ
Lexeme	ನಿಘಂಟಿಮ
Lexical Sememe	ಅರ್ಥಘಟಕ
Lexicographer	ನಿಘಂಟುಕಾರ
Lexicography	ನಿಘಂಟುರಚನಾ ವಿಜ್ಞಾನ
Lexicology	ನಿಘಂಟುಶಾಸ್ತ್ರ
Lexicon	ನಿಘಂಟು
Linguistic context	ಭಾಷಿಕ ಸಂದರ್ಭ
Literary language	ಸಾಹಿತ್ಯಿಕ ಭಾಷೆ
Meaning	ಅರ್ಥ
Meta language	ಸೀಮಿತಭಾಷೆ
Morpheme	ಆಕೃತಿಮಾ

Morphology	ಆಕೃತಿಮಾ ವಿಜ್ಞಾನ
Nuance	ಅರ್ಥವಿಶೇಷತೆ
Obsolete	ಅಪ್ರಚಲಿತ
Occupational Vocabulary	ವೃತ್ತಿಪದಕೋಶ
paradigm	ರೂಪಾವಳಿ
paradigmatically	ರೂಪಾವಳಿಯಾತ್ಮಕ
Partial	ಅಪೂರ್ಣ
Parts of Speech	ಶಬ್ದ ವರ್ಗ
Pedagogical dictionary	ಶೈಕ್ಷಣಿ ನಿಘಂಟು
Phoneme	ಧ್ವನಿಮಾ
Phonology	ಧ್ವನಿಮಾವಿಜ್ಞಾನ
Phonetic script	ಧ್ವನ್ಯಾತ್ಮಕ ಲಿಪಿ
Phonetics	ಧ್ವನಿವಿಜ್ಞಾನ
Phrase	ಪದಪುಂಜ
Polysymous form	ಅನೇಕಾರ್ಥಕ ರೂಪ
Polysemy	ಅನೇಕಾರ್ಥತೆ
Professional term	ವೃತ್ತಿಪದ
Questionnaire	ಪ್ರಶ್ನಾವಳಿ
Quotation	ಉದ್ಧರಣೆ
Referential meaning	ನಿರ್ದೇಶಕಾರ್ಥ
Register	ವೃತ್ತಿಪರಿಭಾಷೆ
Restricted dictionary	ನಿರ್ಬಂಧಿತ ಪದಕೋಶ

Satellite meaning	ಪೂರಕಾರ್ಥ
Selection of entrics	ನಮೂದುಗಳ ಆಯ್ಕೆ
Semantic Content	ಅರ್ಥವಿವರಣೆ
Semantic Dimension	ಅರ್ಥಮಗ್ಗಲು
Semantic range	ಅರ್ಥವ್ಯಾಪ್ತಿ
Semantics	ಅರ್ಥವಿಜ್ಞಾನ
Sememe	ನಿಘಂಟಿಮದ ಅರ್ಥ
Series	ಶ್ರೇಣಿ
Set combination	ಪದಸಮುಚ್ಚಯ
Sitzen leben	ಸಹಜಸ್ಥಾನ
Size	ಗಾತ್ರ
Slang	ಗ್ರಾಮ್ಯ
Social Context	ಸಾಮಾಜಿಕ ಸಂದರ್ಭ
Speech Community	ಭಾಷಾ ಸಮುದಾಯ
Spelling	ಕಾಗುಣಿತ
Standard language	ಅಧಿಕೃತ ಭಾಷೆ
Stock	ಸಂಗ್ರಹ
Stylistic meaning	ಶೈಲಿಯಾರ್ಥ
Sub entries	ಉಪ ನಮೂದು
Synchronic dictionary	ಏಕಕಾಲಿಕ ಪದಕೋಶ
Synchronic lexicon	ಏಕಕಾಲಿಕ ನಿಘಂಟು
Synonymy	ಸಮಾನಾರ್ಥಕತೆ

Syntag matically	ಕ್ರಮಾತ್ಮಕ
Syntax	ವಾಕ್ಯವಿಜ್ಞಾನ
Target language	ಉದ್ದಿಷ್ಟ ಭಾಷೆ
Technique	ತಂತ್ರ
Temporal dialect	ಕಾಲಿಕ ಉಪಭಾಷೆ
Text	ಪಠ್ಯ
Thesaurus	ಬೃಹತ್‌ಕೋಶ
Type	ಪ್ರಭೇದ
Typical	ಮಾದರಿಯಾತ್ಮಕ
Vocabulary	ಪದಕೋಶ
Word	ಪದ /ಶಬ್ದ
Word formation	ಪದರಚನೆ
Word pronunction	ಶಬ್ದೋಚ್ಚಾರಣೆ